
ಹಿರಿಯರ ಮಾತುಗಳನ್ನು ಆಲಿಸುವುದೆಂದರೆ ಪುರಾತನ ಮರದಡಿಯ ನೆರಳಲ್ಲಿ ಕುಳಿತು ಕೆಲ ಸಮಯ ಉಸಿರಾಡಿದಂತೆ. ಒಂದು ಮರ ತನ್ನ ಜೊತೆಗೆ ಹಲವು ತಲೆಮಾರುಗಳನ್ನು ಬಚ್ಚಿಟ್ಟುಕೊಂಡಿರುತ್ತದೆ. ನಾವು ಆ ಮರದಡಿಯಲ್ಲಿರುವಷ್ಟು ಕಾಲ, ಆ ತಲೆಮಾರಿನ ಜೊತೆಗೆ ಉಸಿರಾಡುತ್ತೇವೆ. ಕೆಲ ಹೊತ್ತಾದರೂ ಅವರ ಜೊತೆಗೆ ಬದುಕುತ್ತೇವೆ. ನಾನೂರು ವರ್ಷ ಬದುಕಿದ ಒಂದು ಮರದ ನೆರಳಲ್ಲಿ ತಂಗುವುದೆಂದರೆ ನಾನೂರು ವರ್ಷದ ಹಿಂದಿನ ಜನರ ಜೊತೆಗೆ ಕೆಲ ಹೊತ್ತಾದರೂ ನಾವು ಸಂವಾದಿಸಿದಂತೆ.

ಬಿ.ಎ. ಮೊಹಿದೀನ್ ಅವರ 'ನನ್ನೊಳಗಿನ ನಾನು' ಓದಿದಾಗ ಒಂದು ತಲೆಮಾರು ಹಿಂದೆ ಹೋಗಿ ಬಂದ ಅನುಭವ. ಈ ಕೃತಿಯ ಮೂಲಕ ಸುಮಾರು ಅರುವತ್ತು ವರ್ಷಗಳ ಹಿಂದಿನ ಪರಿಸರದಲ್ಲಿ ಓಡಾಡಿದೆ. ಅಂದಿನ ಬ್ಯಾರಿಗಳ ಮದುವೆಯ ಸಮಾರಂಭದಲ್ಲಿ ಭಾಗವಹಿಸಿದೆ. ಸುರಿವ ಮಳೆಯಲ್ಲಿ ಮದುಮಗನ ಜೊತೆಗೆ ನಾನೂ ಬೀಗರ ಮನೆಯ ಸಂಭ್ರಮದಲ್ಲಿ ಭಾಗಿಯಾದೆ. 70ರ ದಶಕದ ರಾಜಕೀಯ ಏಳುಬೀಳುಗಳನ್ನು ಕಂಡೆ. ದೇವರಾಜ ಅರಸು–ಇಂದಿರಾ ಗಾಂಧಿಯ ನಡುವಿನ ಸಂಘರ್ಷಗಳಿಗೆ ಸಾಕ್ಷಿಯಾದೆ. ತನ್ನ ಬದುಕನ್ನು ತೆರೆದಿಡುವ ನೆಪದಲ್ಲಿ ಈ ಕೃತಿ, ತನ್ನ ಕಾಲದ ಸಾಮಾಜಿಕ, ರಾಜಕೀಯ ಸ್ಥಿತಿಗತಿಗಳನ್ನು ಯಶಸ್ವಿಯಾಗಿ ತೆರೆದಿಡುತ್ತದೆ. ಆದುದರಿಂದ ಇದು ಕೇವಲ ಮಾಜಿ ಸಚಿವ ಮೊಹಿದೀನ್ ಅವರ ಬದುಕಿನ ಕಥನವಷ್ಟೇ ಅಲ್ಲ, ಒಂದು ತಲೆಮಾರಿನ ಕಥನ.

ಯಾವುದೇ ನಾಟಕೀಯತೆ ಅಥವಾ ಆತ್ಮರತಿಯಿಲ್ಲದ ಸರಳ ನಿರೂಪಣೆ ಈ ಆತ್ಮಕಥನದ ಹೆಗ್ಗಳಿಕೆ.


ಬಿ.ಎಂ. ಬಶೀರ್



ಬೆಲೆ : ರೂ. 250

ಬಿ.ಎ. ಮೊಹಿದೀನ್ ಆತ್ಮಕಥನ

ನನ್ನೊಳಗಿನ ನಾನು



ಬಿ.ಎ. ಮೊಹಿದೀನ್ ಆತ್ಮಕಥನ

# ನನ್ನೊಳಗಿನ ನಾನು

ನಿರೂಪಣೆ

ಮುಹಮ್ಮದ್ ಕುಳಾಯಿ

ಬಿ.ಎ. ಮುಹಮ್ಮದ್ ಅಲಿ

ಬಿ.ಎ. ಮೊಹಿದೀನ್ ಆತ್ಮಕಥನ

# ನನ್ನೊಳಗಿನ ನಾನು

ನಿರೂಪಣೆ

**ಮುಹಮ್ಮದ್ ಕುಳಾಯಿ**

**ಬಿ.ಎ. ಮುಹಮ್ಮದ್ ಅಲಿ**

**ಭಾರತ ಪ್ರಕಾಶನ**

ಜಪ್ಪು, ಮಂಗಳೂರು – 575 001

**NANNOLAGINA NAANU**
An autobiography of B.A. Mohideen
Former Minister of Karnataka
No. 102, Light House Condominium
Light House Hill Road, Mangaluru - 575 001
Mobile : 9448027252

Narrated by
**Mohammed Kulai**
Mobile : 9980771298
**B.A. Mohammed Ali**
Mobile : 9880723929

Published by
**Bharatha Prakashana**
103, 'A' Block, Diamond City
Marnamikatte, Mangaluru - 575 001

© : Publisher

First Edition : July 2018
(Released on 20th July 2018 at Townhall, Mangaluru)
Second Edition : August 2018

Size : Demy 1/8
Paper used : 80 gsm ns maplitho
Pages : 232
Price : Rs. 250
Copies : 2000

Cover photo : **Sathish Ira**

Cover design : **Kallur Nagesh**

Page Designed & Printed at
**Aakrithi Prints**
Light House Hill Road, Mangaluru - 575 001
Tel: 0824 2443002

# ಮುನ್ನುಡಿ

"Luck is nothing but the meeting point of alertness and the opportunities passing by" - Dale Carnegie.

"ಅದೃಷ್ಟ ಎನ್ನುವುದು ನಮ್ಮ ಜಾಗೃತಿ ಮತ್ತು ಸದಾ ಹಾದು ಹೋಗುತ್ತಿರುವಂತಹ ಅವಕಾಶಗಳ ಕೂಡುವಿಕೆ ಮಾತ್ರ ವಲ್ಲದೆ ಮತ್ತಿನ್ನೇನೂ ಅಲ್ಲ". ಅಮೆರಿಕದ ಸುಪ್ರಸಿದ್ಧ ಲೇಖಕ ಹಾಗೂ ವ್ಯಕ್ತಿವಿಕಸನದ ಗುರು ಡೇಲ್ ಕಾರ್ನೆಗಿಯವರು 1936ರಲ್ಲಿ ಅದೃಷ್ಟಕ್ಕೆ ಕೊಟ್ಟಂತಹ ಈ ವ್ಯಾಖ್ಯಾನ, ಇಂದು ಪ್ರಪಂಚದಾದ್ಯಂತ ಬುದ್ಧಿಜೀವಿಗಳೆಲ್ಲಾ ಒಪ್ಪುವಂತಹ ಒಂದು ಮಾತು.

ಅದೃಷ್ಟಕ್ಕೆ ಇಂತಹುದೇ ಇನ್ನೊಂದು ವಿವರಣೆಯನ್ನು ಕ್ರಿ.ಶ. 6ನೇ ಶತಮಾನದಲ್ಲೇ ರೋಮನ್ ಚಿಂತಕ ಸೆನೆಕಾ ಕೊಟ್ಟಿದ್ದರು – "Luck is a matter of preparation meeting opportunity" - "ಪೂರ್ವಸಿದ್ಧತೆ ಅವಕಾಶವನ್ನು ಸಂಧಿಸುವಂತಹ ಒಂದು ಪ್ರಕ್ರಿಯೆಯೇ ಅದೃಷ್ಟ."

ಈ ಎರಡೂ ವ್ಯಾಖ್ಯಾನಗಳನ್ನು ಪರಿಶೀಲಿಸಿದರೆ ಮನದಟ್ಟಾಗುವ ಅಂಶವೆಂದರೆ, ಅದೃಷ್ಟದ ಮೂಲ ಮನಸ್ಸಿನ ತಯಾರಿ ಮತ್ತು ಜಾಗೃತಿ. ಯಾಕೆಂದರೆ ಅವಕಾಶಗಳು ಪ್ರತಿಯೊಬ್ಬರ ಜೀವನದಲ್ಲೂ ಒಂದಲ್ಲಾ ಒಂದು ರೂಪದಲ್ಲಿ ಸದಾ ಹಾದುಹೋಗುವಂತಹ ಒಂದು ವಾಸ್ತವ. ಮನಸ್ಸಿನ ತಯಾರಿ ಮತ್ತು ಜಾಗೃತಿಯ ಹಿಂದಿರುವಂತಹ ಇನ್ನೊಂದು ಆವಶ್ಯಕ ಅಂಶ – ತುಡಿತ.

ಎಲ್ಲಿ ತುಡಿತವಿರುತ್ತದೋ ಅಲ್ಲಿ ಮನಸ್ಸು ಜಾಗೃತ ವಾಗಿರುತ್ತದೆ; ಮತ್ತು ಎಲ್ಲಿ ಮನಸ್ಸು ಜಾಗೃತವಾಗಿರುತ್ತದೋ ಅಲ್ಲಿ ಅವಕಾಶಗಳ ಜೊತೆ ಸಮ್ಮಿಳನವೇರ್ಪಟ್ಟು 'ಅದೃಷ್ಟ' ಮೂಡುತ್ತದೆ.

ಬಿ.ಎ. ಮೊಹಿದೀನ್‌ರವರ ಆತ್ಮಕಥನದ ಉದ್ದಕ್ಕೂ ಈ ಅಂಶಗಳು ಅಲ್ಲಲ್ಲಿ ಎದ್ದು ಕಾಣಿಸುತ್ತವೆ. ಇವುಗಳನ್ನು ಮನಸ್ಸಿನ ಹಿನ್ನೆಲೆಯಲ್ಲಿಟ್ಟುಕೊಂಡು ಓದಿದರೆ, ಈ ಒಬ್ಬ ಸಾಮಾನ್ಯ ವ್ಯಕ್ತಿ ಅದು ಹೇಗೆ ಅಸಾಮಾನ್ಯವಾಗಿ ಬೆಳೆದು ಬಾಳಿದರು ಅಂತ ಗೊತ್ತಾಗಿಬಿಡುತ್ತದೆ. "ಏನಿದು? ಇದೆಲ್ಲಾ ಏನು? ಉತ್ತರ ಸಿಗುತ್ತಿಲ್ಲ. ಎಷ್ಟು ಯೋಚಿಸಿದರೂ ಅರ್ಥವೇ ಆಗುತ್ತಿಲ್ಲ" ಅನ್ನುವ ಮಾತಿನೊಂದಿಗೆ ಈ ಆತ್ಮಕಥನ ಮುಕ್ತಾಯವಾಗುವಾಗ ಓದುಗನಿಗೆ ಎಲ್ಲವೂ ಅರ್ಥವಾಗಿಬಿಟ್ಟಿರುತ್ತದೆ – ನನ್ನೊಳಗಿನ 'ನಾನು' ಸಂಪೂರ್ಣವಾಗಿ ಅನಾವರಣಗೊಂಡಿರುತ್ತಾನೆ.

"ನನ್ನ ರಾಜಕೀಯ ಬದುಕು ತೆರೆದಿಟ್ಟ ಒಂದು ಪುಸ್ತಕದಂತೆ... ನಾನು ಅಧಿಕಾರಕ್ಕಾಗಿ ರಾಜಕಾರಣ ಮಾಡಿದವನೇ ಅಲ್ಲ. ಆಕಸ್ಮಿಕವಾಗಿ ಅವಕಾಶಗಳು ಸಿಕ್ಕಿದಾಗಲೆಲ್ಲಾ ಅದನ್ನು ಬಳಸಿಕೊಂಡವನು" ಎಂದು ಮೊಹಿದೀನ್‌ರವರು ಈ ಆತ್ಮಕಥನದ ಮಧ್ಯದಲ್ಲೆಲ್ಲೋ ಹೇಳುತ್ತಾರೆ. ಆದರೆ ಅದಾಗಲೇ ಇವರ ಬಾಲ್ಯ, ತಾರುಣ್ಯ, ಮದುವೆ, ಕಾಲೇಜಿನ ದಿನಗಳು, ಹೊಸ ಬದುಕಿನ ಹುಡುಕಾಟ – ಇವೆಲ್ಲವುಗಳ ಬಗ್ಗೆ ಓದಿರುವಂತಹ ಓದುಗನಿಗೆ, ಈ 'ಅವಕಾಶಗಳ ಬಳಕೆ'ಯ ಹಿಂದಿದ್ದಂತಹ ತುಡಿತ ಮತ್ತು ಮನಸ್ಸಿನ ಜಾಗೃತಿಯ ಬಗ್ಗೆ ಆವಾಗಲೇ ಅರಿವಾಗಿಬಿಟ್ಟಿರುತ್ತದೆ.

ತೀರಾ ಹಿಂದುಳಿದ ಹಾಗೂ ಅಕ್ಷರದ ಗಂಧಗಾಳಿ ಇಲ್ಲದಂತಹ ವಾತಾವರಣದಲ್ಲಿ ಬೆಳೆದ ಹುಡುಗನಲ್ಲಿ ಇಂಜಿನಿಯರ್ ಆಗಬೇಕೆನ್ನುವ ಆಸೆ ಇರುವುದು; ಇವತ್ತಿಗೂ ಬೆರಳೆಣಿಕೆಯನ್ನು ಮೀರದಷ್ಟೇ ಸರಕಾರಿ ಆಫೀಸರ್‌ಗಳು ಇರುವ ಸಮುದಾಯವೊಂದರ ಅವಿದ್ಯಾವಂತ ತಂದೆಯೊಬ್ಬರಿಗೆ ತನ್ನ ಮಗನಲ್ಲಿ ಒಬ್ಬ ಆಫೀಸರ್ ಆಗುವ ಲಕ್ಷಣಗಳು ಕಂಡುಬರುವುದು; ಸಾಂಪ್ರದಾಯಿಕ ಮುಸ್ಲಿಂ ಪರಿಸರದಲ್ಲಿ ಬೆಳೆಯುವ ಹುಡುಗನಿಗೆ ಯಕ್ಷಗಾನ, ಕೋಲ ಮುಂತಾದ ನೆಲದ ಕಲೆಗಳ ಜೊತೆಗೆ ಅವಿನಾಭಾವ ಸಂಬಂಧ ಹುಟ್ಟಿಕೊಳ್ಳುವುದು; ಓದು, ಕ್ರೀಡೆ, ಸಾಮಾಜಿಕ ಕಾರ್ಯ – ಹೀಗೆ ಸರ್ವ ಆಯಾಮಗಳ ಮೇಲಿನ ಹಿಡಿತ ಹಾಗೂ ಎಲ್ಲದರಲ್ಲೂ ಉತ್ಕೃಷ್ಟತೆಗೇರುವ ತುಡಿತವಿದ್ದಿದ್ದು – ಹೀಗೆ ಸಾರ್ವಜನಿಕ ಜೀವನಕ್ಕೆ ಇವರು ಕಾಲಿಡುವ ಹೊತ್ತಿಗೆ, ಇವರ ಜೀವನದಲ್ಲಿ ಘಟಿಸಿದ ಪ್ರತಿಯೊಂದು ಘಟನೆಗಳು ಇವರಲ್ಲಿ ಸುಪ್ತವಾಗಿದ್ದಂತಹ ಆದರೆ ಅಷ್ಟೇ ಅದಮ್ಯವಾಗಿದ್ದಂತಹ ಕನಸುಗಳ ಪ್ರತೀಕ. ಹಾಗೆಯೇ ಇವರ ಬಾಲ್ಯದ, ತಾರುಣ್ಯದ, ಕಾಲೇಜು ದಿನಗಳ, ಬೆಳೆದ ಪರಿಸರದ, ಮಿತ್ರರ ಒಡನಾಟದ ಕೂಲಂಕಷ ನೆನಪು ಹಾಗೂ ಸವಿಸ್ತಾರ ವರ್ಣನೆ ಇವರ ಜಾಗೃತ ಮನಸ್ಸಿನ ದ್ಯೋತಕ.

ಗೋವಿಂದೇ ಗೌಡರಿಂದ ಪ್ರೇರಿತರಾಗಿ ಇವರು ಸಮಾಜಮುಖೀ ಕಾರ್ಯಗಳನ್ನು ಪ್ರಾರಂಭಿಸಿದ್ದು, 1971ರ ಲೋಕಸಭೆಯ ಟಿಕೇಟನ್ನು ಚಿಕ್ಕಮಗಳೂರಿನ ಸ್ಥಳೀಯ ನಾಯಕರೊಬ್ಬರಿಗೆ ಕೊಡಿಸುವ ಸಲುವಾಗಿ ದೇವರಾಜ ಅರಸು ಅವರ ಬಳಿ ಹೋದ, ಡಿ.ಬಿ. ಚಂದ್ರೇಗೌಡರ ನೇತೃತ್ವದ ತರುಣರ ನಿಯೋಗದಲ್ಲಿದ್ದು ಅರಸು ಅವರ ಭೇಟಿಯಾದದ್ದು, ಆಮೇಲೆ ಇವರದೇ ಮಾತಿನಂತೆ "ಧೀಮಂತ ನಾಯಕ ದೇವರಾಜ

ಅರಸು ಅವರ ನೆರಳಲ್ಲಿ ಬೆಳೆಯುವ ಒಂದು ಸುಂದರ ಅವಕಾಶ ಸಿಕ್ಕಿದ್ದು", ತನ್ನ ರಾಜಕೀಯ ಜೀವನದ ಒಂದನೇ ಅಧ್ಯಾಯ ಮುಗಿದು, ಸಂಪೂರ್ಣ ಮೂಲೆಗುಂಪಾಗಿದ್ದಂತಹ ಸಂದರ್ಭದಲ್ಲಿ, ಬಜಪೆಗೆ ಪೋಪ್ ಜಾನ್‌ಪಾಲ್ II ಇವರ ಪ್ರವಾಸದ ಪೂರ್ವಸಿದ್ಧತೆಯ ವೇಳೆ, ಅಂದಿನ ಗೃಹಸಚಿವ ರಾಚಯ್ಯನವರ ಜೊತೆಗಿನ ಒಂದು ಭೇಟಿ, ಮುಂದೆ ಇವರನ್ನು ರಾಮಕೃಷ್ಣ ಹೆಗಡೆಯವರ ಸಾಮೀಪ್ಯಕ್ಕೆ ತಂದು ಇವರು ರಾಜಕೀಯ ಪುನರ್ಜನ್ಮ ಪಡೆದದ್ದು – ಹೀಗೆ ಇವರ ಸಾರ್ವಜನಿಕ ಜೀವನದ ಹತ್ತು ಹಲವಾರು ತಿರುವುಗಳು, ಮೇಲ್ನೋಟಕ್ಕೆ ಅನಿರೀಕ್ಷಿತ ಘಟನೆಗಳಾಗಿ ಕಂಡುಬರಬಹುದು. ಆದರೆ ಇವುಗಳು ಇವರ ಸುಪ್ತ ಮನಸ್ಸಿನ ತುಡಿತ ಹಾಗೂ ಜಾಗೃತ ಮನಸ್ಸಿನ ಅವಕಾಶಗಳೆಡೆಗಿನ ಸೆಳೆತ – ಇವುಗಳ ಪರಿಣಾಮಗಳೇ ಹೊರತು, ಕೇವಲ ಆಕಸ್ಮಿಕಗಳಲ್ಲ ಅಂತ ನಾವು ತಿಳಿಯಬೇಕಾದ್ದು ಮುಖ್ಯವಾಗುತ್ತದೆ. ಯಾಕೆಂದರೆ, ಇಲ್ಲೇ ಇರುವುದು ಈ ಆತ್ಮಕಥನದ ಸಾರ; ನಮ್ಮ ಬದುಕಿಗೊಂದು ಪಾಠ; ಮುಂದಿನ ಪೀಳಿಗೆಗೆ ಪ್ರೇರಣೆ.

ತೀರಾ ಹಿಂದುಳಿದ ಕುಟುಂಬದಲ್ಲಿ ಹುಟ್ಟಿ, ಅತೀ ಸಾಮಾನ್ಯ ಪರಿಸರದಲ್ಲಿ ಬೆಳೆದು, ಎಲ್ಲರಂತೆ ತಾನೊಬ್ಬ ಅನ್ನೋ ರೀತಿಯಲ್ಲಿ ತಾರುಣ್ಯ ಸವೆಸಿ, ವ್ಯಾಪಾರದಲ್ಲಿ ಸಿಹಿಗಳಿಗಿಂತ ಜಾಸ್ತಿ ಕಹಿಗಳನ್ನೇ ಉಂಡು, ಎಂತಹ ಕಠಿಣ ಸಂದರ್ಭಗಳಲ್ಲೂ ಯಾರ ಮುಂದೆಯೂ ಕೈಚಾಚದೆ, ತಲೆ ಬಗ್ಗಿಸದೆ ಬದುಕಿ ಬಾಳಿದ ಒಬ್ಬ ಸಾಧಾರಣ ಮನುಷ್ಯನ ಅಸಾಧಾರಣ ಸಾಧನೆಗಳ ಹಿಂದಿದ್ದಂತಹ ಬದ್ಧತೆ; ದಿಟ್ಟ, ನೇರ ನಡೆನುಡಿ; ತತ್ವ, ಧೋರಣೆ, ಸಿದ್ಧಾಂತ, ಆದರ್ಶ, ಸತ್ಯಸಂಧತೆಗಳ ವಿಚಾರದಲ್ಲಿ ರಾಜಿಯೇ ಇಲ್ಲದ ಅಚಲ ನಿಲುವು – ಇವುಗಳು ಈ ಆತ್ಮಕಥನದ ಉದ್ದಕ್ಕೂ ಹರಡಿ, ನಮ್ಮನ್ನು ಮತ್ತೆ ಮತ್ತೆ ಪ್ರೇರೇಪಿಸುತ್ತಾ, ಸ್ಫೂರ್ತಿ ತುಂಬಿಸುತ್ತಾ, ಓದಿಸುತ್ತಾ ಹೋಗುತ್ತದೆ.

1936ರಲ್ಲಿ ಡೇಲ್ ಕಾರ್ನೆಗಿಯವರು "How to win friends and influence people" ಅನ್ನೋ ಸ್ವಸಹಾಯ ಅಥವಾ ವ್ಯಕ್ತಿತ್ವ ವಿಕಸನದ ಪ್ರಪ್ರಥಮ ಪುಸ್ತಕವನ್ನು ಬರೆಯುವವರೆಗೂ ಜನರು ಜೀವನದಲ್ಲಿ ಸ್ಫೂರ್ತಿಗೆ, ಬದುಕಲು ಬೇಕಾದ ಪಾಠಗಳಿಗೆ, ಯಶಸ್ಸಿಗೆ ಬೇಕಾದ ಪ್ರೇರಣೆಗಳಿಗೆ ಓದುತ್ತಿದ್ದುದು ಮಹಾಮಹಿಮರ ಆತ್ಮಕಥನಗಳನ್ನೇ! ಆದರೆ ಒಮ್ಮೊಮ್ಮೆ ಇಂತಹ ಕಥನಗಳನ್ನು ಓದಿದಾಗ ಪ್ರೇರಣೆಗಿಂತ ಜಾಸ್ತಿ ಭ್ರಮನಿರಸನಗೊಳ್ಳುವ ಸಾಧ್ಯತೆಗಳನ್ನು ಅಲ್ಲಗಳೆಯುವಂತಿಲ್ಲ. ಯಾಕೆಂದರೆ ಬಹುತೇಕ ಆತ್ಮಕಥನಗಳಿರುವುದು ಘಟಾನುಘಟಿಗಳ ಕುರಿತು. ಈ ಮಹಾಸಾಧಕರ ಸಾಧನೆಗಳು ಸಾಮಾನ್ಯರ ಕೈಗೆಟಕದಂತಹುಗಳು; ಊಹೆಗೆ ನಿಲುಕದಂತಹುಗಳು. ಆದರೆ ಮೊಹಿದೀನ್‌ರವರ ಈ ಆತ್ಮಕಥನ ಈ ಸಾಲಲ್ಲಿ ನಿಲ್ಲುವುದಿಲ್ಲ. ಇವರು ಜೀವನದಲ್ಲಿ ಸಾಧಿಸಿದ ಸಾಧನೆಗಳು ಒಬ್ಬ ಸಾಮಾನ್ಯ ವ್ಯಕ್ತಿಯ ಕೈಗೆ ಎಟಕುವಂತಹುಗಳು; ಒಬ್ಬ ಸಾಧಾರಣ ವ್ಯಕ್ತಿಯ ಊಹೆಗೆ ನಿಲುಕುವಂತಹುಗಳು. 'ಸ್ವಲ್ಪ ಪ್ರಯತ್ನಪಟ್ಟರೆ ನಾವೂ ಈ ಎತ್ತರಕ್ಕೆ ಏರಬಹುದು; ಜೀವನದ ಚಲನೆಯನ್ನು ಸ್ವಲ್ಪ ತಿರುಚಿದರೆ ನಾವೂ ಈ ಗುರಿಗಳನ್ನು ಮುಟ್ಟಬಹುದು; ನಮ್ಮ ನಿಲುವನ್ನು ಸ್ವಲ್ಪ ತೀಡಿದರೆ, ತಿದ್ದಿದರೆ ನಾವೂ

ಜನಮನದಲ್ಲಿ ಮಾಸದೆ ಉಳಿಯಬಹುದು' ಅಂತ ಪ್ರೇರೇಪಿಸಿದಲ್ಲಿ, ಉತ್ತೇಜಿಸುವಲ್ಲಿ, ಸ್ಫೂರ್ತಿ ತುಂಬುವಲ್ಲಿ ಈ ಆತ್ಮಕಥನ ಯಶಸ್ವಿಯಾಗುತ್ತದೆ ಅಂತ ನನ್ನ ನಂಬಿಕೆ.

ಲೇಖಕರೂ ಗೆಳೆಯರೂ ಆದ ಮುಹಮ್ಮದ್ ಕುಳಾಯಿ ಮತ್ತು ಬಿ.ಎ. ಮುಹಮ್ಮದ್ ಅಲಿಯವರು ಈ ಕಥನವನ್ನು ಸುಂದರ, ಸುಲಲಿತ ಆಡುಮಾತಲ್ಲಿ ನಿರೂಪಿಸಿರುವುದು ಮೇಲೆ ಹೇಳಿದ ನಂಬಿಕೆಗೆ ಪೂರಕವಾದಂತಹ ಇನ್ನೊಂದು ಅಂಶ. ನಮಗೆಲ್ಲಾ ಚಿರಪರಿಚಿತವಾದಂತಹ ಸಾಮಾಜಿಕ, ಸಾಂಸ್ಕೃತಿಕ, ಶೈಕ್ಷಣಿಕ ಹಾಗೂ ರಾಜಕೀಯದ ಸಮಕಾಲೀನ ವಿದ್ಯಮಾನಗಳ, ಆಗುಹೋಗುಗಳ ಸೂಕ್ಷ್ಮದರ್ಶನ ಮಾಡಿಸುತ್ತಾ, ಸಮಾಜದಲ್ಲಿ ಹಂತ ಹಂತವಾಗಿ ಮತ್ತೆ ಕೆಲವೊಮ್ಮೆ ತೀರಾ ಕ್ಷಿಪ್ರ ಎನ್ನುವ ರೀತಿಯಲ್ಲಿ ಆದ ಬದಲಾವಣೆಗಳ ಮೌಲ್ಯಮಾಪನ ಮಾಡುತ್ತಾ, ಅಲ್ಲೊಮ್ಮೆ ಇಲ್ಲೊಮ್ಮೆ ಸಮಾಜದ ಅನಿಷ್ಟಗಳ ಬಗ್ಗೆ ಎಚ್ಚರಿಕೆಯ ಗಂಟೆಯನ್ನು ಬಾರಿಸುತ್ತಾ, ಹಾಗೇ ಅವುಗಳೊಂದಿಗೆ ಮೊಹಿದೀನ್‌ರವರ ಜೀವನದ ಮೈಲಿಗಲ್ಲುಗಳನ್ನು, ತಿರುವುಗಳನ್ನು, ಏಳುಬೀಳುಗಳನ್ನು ಬೆಸೆಯುತ್ತಾ, ಹೊಂದಿಸಿಕೊಳ್ಳುತ್ತಾ ಹೋಗುವಂತಹ ನಿರೂಪಕರ ಶೈಲಿಯಿಂದಾಗಿ, ಈ ಪುಸ್ತಕವನ್ನು ಒಂದೇ ಏಟಿಗೆ ಓದಿ ಮುಗಿಸಲು ಸಾಧ್ಯವಾಗುತ್ತದೆ. ಇವರ ಕುಟುಂಬದ ಜೊತೆ ಇವರಿಗಿರುವ ಒಲುಮೆ, ತಂದೆ–ತಾಯಿಯವರ ಜೊತೆಗಿದ್ದ ಆದರಪೂರ್ವಕ ಬಾಂಧವ್ಯ, ಓರಗೆಯವರ, ಗೆಳೆಯರ ಜೊತೆಗಿದ್ದ ಸ್ನೇಹಸೇತು, ಸಾರ್ವಜನಿಕ ರಂಗದ ಕಾರ್ಯಕರ್ತರ ಜೊತೆಗಿದ್ದ ಆತ್ಮೀಯತೆ, ಇಂದಿರಾ ಗಾಂಧಿ, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಜೆ.ಎಚ್. ಪಟೇಲ್, ಸಿದ್ದರಾಮಯ್ಯ ಮುಂತಾದ ಘಟಾನುಘಟಿ ನಾಯಕರುಗಳೊಂದಿಗೆ ಇವರಿಗಿದ್ದ ಸಾಮೀಪ್ಯ, ಎಲ್ಲರಿಗಿಂತ ಮಿಗಿಲಾಗಿ, ತನ್ನ ಜೀವನದಲ್ಲಿ ಹೆಜ್ಜೆಯೊಂದಿಗೆ ಹೆಜ್ಜೆ ಸೇರಿಸಿ ನಡೆದ ಪ್ರಾಂಜಲ ಮನಸ್ಸಿನ, ನಿಷ್ಕಳಂಕ ವಿಚಾರಧಾರೆಯ ತನ್ನ ಬಾಳಸಂಗಾತಿಯ ಜೊತೆಗಿದ್ದ ಅಭಿಮಾನಪೂರ್ವಕ ಪ್ರೀತಿ–ಇವೆಲ್ಲವನ್ನೂ ಎಲ್ಲೂ ಅತಿಯಾಗದಂತೆ ಮೊಹಿದೀನ್‌ರವರ ಮಾತಿನಲ್ಲೇ ಚಿತ್ರಿಸುತ್ತಾ ಹೋಗುವ ನಿರೂಪಕರ ಸಾಮರ್ಥ್ಯದಿಂದಾಗಿ, ಪುಟದಿಂದ ಪುಟಕ್ಕೆ ಈ ಕಥನ ಇನ್ನಷ್ಟು ಇಷ್ಟವಾಗುತ್ತಾ ಹೋಗುತ್ತದೆ.

ಮೊಹಿದೀನ್‌ರವರು ಅತಿಯಾಗಿ ಗುರುತಿಸಲ್ಪಡುವ ದಕ್ಷಿಣ ಕನ್ನಡದ ಬ್ಯಾರಿ ಸಮುದಾಯದ ಶೈಕ್ಷಣಿಕ ಕ್ರಾಂತಿ ಇಂದು ಜಿಲ್ಲೆಯಲ್ಲೆಲ್ಲಾ ಜನಜನಿತ. ತೀರಾ ಹಿಂದುಳಿದ ಒಂದು ಸಮುದಾಯವನ್ನು ಶಿಕ್ಷಣದ ಮೂಲಕ ಸಾಮೂಹಿಕ ಅಭಿವೃದ್ಧಿಯೆಡೆಗೆ ಕೊಂಡೊಯ್ಯುವುದರ ಜೊತೆ ಜೊತೆಗೆ ಸಾಮಾಜಿಕ ಸಾಮರಸ್ಯಕ್ಕಾಗಿ, ಸೌಹಾರ್ದದ ಬೀಜವನ್ನು ಸಾರ್ವತ್ರಿಕ, ಜಾತ್ಯತೀತ ಶಿಕ್ಷಣ ವ್ಯವಸ್ಥೆಯ ಮೂಲಕ ಸಮಾಜದಲ್ಲಿ ಬಿತ್ತುವ ಇವರ ಪ್ರಯತ್ನ ಅನುಕರಣೀಯ. ಆದರೂ ಇವರು ಒಂದು ಕಡೆ, "ಇದೆಲ್ಲವನ್ನೂ ನಾನೊಬ್ಬನೇ ಮಾಡಿದ್ದು ಎಂದು ನಾನು ಹೇಳುವುದಿಲ್ಲ. ಇಂತಹ ಒಂದು ವಾತಾವರಣ ಸೃಷ್ಟಿಸುವಲ್ಲಿ, ಭೂಮಿಕೆಯನ್ನು ನಿರ್ಮಿಸುವಲ್ಲಿ ನನ್ನದೂ ಒಂದು ಅಳಿಲು ಸೇವೆ ಇದೆ ಎಂದು ಮಾತ್ರ ಹೇಳಬಲ್ಲೆ" ಅನ್ನುವ ಮಾತು ಇವರ ಪ್ರಾಮಾಣಿಕತೆಗೆ, ನಿಸ್ವಾರ್ಥ ಮನೋಭಾವಕ್ಕೆ ಹಿಡಿದ ಕನ್ನಡಿ.

ಸಮಾಜಸೇವಕರಾಗಿ, ಶಾಸಕರಾಗಿ, ಮಂತ್ರಿಯಾಗಿ, ಉಸ್ತುವಾರಿ ಸಚಿವರಾಗಿ ಇವರು ಮಾಡಿದ ಸಾಧನೆಗಳ ಬಗ್ಗೆ ಬರೆಯುತ್ತಾ "ನಾನು ಮಾಡಿದ ಅನೇಕ ಕೆಲಸಗಳನ್ನು ನಾನೇ ಮರೆತುಬಿಟ್ಟಿದ್ದೇನೆ" ಅಂತ ಇವರು ಹೇಳುವುದು, ಈ ಸಾಧನೆಗಳ ಪಟ್ಟಿಯನ್ನು ನೋಡಿದಾಗ ಅಕ್ಷರಶಃ ನಿಜ ಅಂತ ಅನಿಸುತ್ತದೆ. ಯಾಕೆಂದರೆ, ಸಾಮಾನ್ಯವಾಗಿ ನಮ್ಮ, ನಿಮ್ಮ ಗಮನದಲ್ಲಿರುವ ಅನೇಕ ಘನ ಕಾರ್ಯಗಳು ಇಲ್ಲಿ ಉಲ್ಲೇಖಿಸಲ್ಪಡುವುದೇ ಇಲ್ಲ. ಹಾಗೆಯೇ ಇವರ ಈ ಸಾಧನೆಗಳಿಗೆ ಪ್ರತಿಫಲವಾಗಿ ದೊರೆತ ಪುರಸ್ಕಾರ, ಸನ್ಮಾನಗಳ ಬಗ್ಗೆಯೂ ಇವರು ಉಲ್ಲೇಖಿಸಲು ಸಂಪೂರ್ಣ ಮರೆತಿದ್ದಾರೆ. ಇವುಗಳಲ್ಲಿ ಅತೀ ಮಹತ್ವದ್ದಾದ ದಿ। ದೇವರಾಜ ಅರಸು ಅವರ ಜನ್ಮ ಶತಮಾನೋತ್ಸವದ ಅಂಗವಾಗಿ ಇವರಿಗೆ ದೊರೆತ ಅತ್ಯಂತ ಪ್ರತಿಷ್ಠಿತ 'ದೇವರಾಜ ಅರಸು ಪ್ರಶಸ್ತಿ' ಹಾಗೂ ಅದರ ಹಿಂದಿನಿಂದಲೇ ನಡೆದ ಸರಣಿ–ಸರಣಿ ಸನ್ಮಾನಗಳ ಬಗ್ಗೆಯೂ ಇವರು ಆತ್ಮಕಥನದಲ್ಲೆಲ್ಲೂ ಚಕಾರವನ್ನೂ ಎತ್ತಿಲ್ಲ. "ಯಾರನ್ನೋ ಖುಷಿಪಡಿಸಲು ಅಥವಾ ಬೆಂಬಲಿಗರನ್ನು ಹೆಚ್ಚಿಸಿಕೊಳ್ಳಲು ರಾಜಕೀಯ ಮಾಡಿದವನೇ ಅಲ್ಲ... ಎಲ್ಲಿಯೂ ಪ್ರಚಾರವನ್ನು ಬಯಸಲೇ ಇಲ್ಲ" ಅಂತ ಆತ್ಮಕಥನದೊಂದೆಡೆ ಇವರು ಹೇಳುವ ಮಾತನ್ನು ಇದು ಸಂಪೂರ್ಣ ಪುಷ್ಟೀಕರಿಸುವಂತಿದೆ.

ಮೊಹಿದೀನ್‌ರವರದು ಯಾವಾಗಲೂ ದಿಟ್ಟ, ನೇರ ನಡೆ–ನುಡಿ. "ನನ್ನ ರಾಜಕೀಯ ದುರಂತಗಳಿಗೆ ಕಾರಣೀಭೂತರು ಇವರುಗಳು" ಎಂದು ನಂಬಿರುವ ನಾಯಕರುಗಳ ಬಗ್ಗೆ ಹೇಳುವಾಗ ಇವರ ಮಾತಲ್ಲಿ ದ್ವೇಷದ ಸುಳಿವಿಲ್ಲ; ಅದೊಂದು ನೇರ, ವಸ್ತುನಿಷ್ಠ ವಿವರಣೆ. ಹಾಗೆಯೇ ಸುರತ್ಕಲ್ ಗಲಭೆಯ ಕಹಿನೆನಪಿನ ಬಗ್ಗೆ ಹೇಳುವಾಗ, ಅನ್ಯ ಸಮುದಾಯದ ಕೆಲವು ವ್ಯಕ್ತಿಗಳ ಕೋಮುವಾದದ ಬಗ್ಗೆ ತಾನು ಪರಿಶೀಲಿಸಿ ತಿಳಿದಿದ್ದನ್ನು, ನಂಬಿದ್ದನ್ನು ನೇರವಾಗಿ ಹೇಳಿದರೆ, ಜೀವನಪರ್ಯಂತ ತಾನು ಸಾಧಿಸಿ, ಗಳಿಸಿದಂತಹ 'ಜಾತ್ಯತೀತ' ಎಂಬ ಹಣೆಪಟ್ಟಿಗೆ ಏನಾದರೂ ಕಳಂಕ ಬರಬಹುದೇ ಎನ್ನುವ ಅಂಜಿಕೆ ಇಲ್ಲ; ಏನಿದ್ದರೂ ಮುಚ್ಚುಮರೆ ಇಲ್ಲದ, ಓಲೈಕೆ ಇಲ್ಲದ ದಿಟ್ಟ ವಿಶ್ಲೇಷಣೆ. ಅದೇ ರೀತಿ ಮುಸ್ಲಿಂ ಸಮುದಾಯದಲ್ಲಿ ನಡೆಯುತ್ತಿರುವಂತಹ ಅನಿಷ್ಟ ಪದ್ಧತಿಗಳ ಬಗ್ಗೆ, ಇಂದಿನ ಮುಸ್ಲಿಂ ರಾಷ್ಟ್ರಗಳ ದೊರೆಗಳ ಆಷಾಢಭೂತಿತನಗಳ ಬಗ್ಗೆ ಹೇಳುವಾಗಲೂ ಅದೇ ವಿಮರ್ಶಾತ್ಮಕ, ನಿಷ್ಪಕ್ಷಪಾತ ನಿಲುವು. ಕಥನದ ಕಟ್ಟಕಡೆಗೆ, ಇದುವರೆಗೆ ತನ್ನ ಪ್ರಾಣಸ್ನೇಹಿತರಲ್ಲೂ ಹಂಚಿಕೊಳ್ಳದ, ತನ್ನ ಜೀವನದಲ್ಲಿ ನಡೆದ ಒಂದು ಕಹಿಸತ್ಯದ 'ರಹಸ್ಯ'ವನ್ನು ಓದುಗರೊಂದಿಗೆ ಹಂಚುವಾಗಲೂ ಅದೇ ನಿಸ್ಸಂಕೋಚ ಪ್ರಾಮಾಣಿಕತೆ.

ಇಂದು ಮೊಹಿದೀನ್‌ರವರಿಗೆ ಎಂಬತ್ತರ ಇಳಿವಯಸ್ಸು. ಇತ್ತೀಚಿಗಿನ ಅನಾರೋಗ್ಯ ದಿಂದಾಗಿ ಶರೀರ ಕುಗ್ಗಿದೆ; ಕಾರ್ಯಕ್ಷಮತೆ ತಗ್ಗಿದೆ; ಆದರೆ ಚೈತನ್ಯ ಕುಂದಿಲ್ಲ. ಅದೇ ಸಮಾಜಮುಖಿ ಚಿಂತನೆ; ಅದೇ ಜನಪರ ಕಾಳಜಿ; ಅದೇ ಸಮುದಾಯದ ಬಗೆಗಿನ ಜವಾಬ್ದಾರಿ. ಒಂದೆರಡು ತಿಂಗಳ ಹಿಂದೆ ತನ್ನನ್ನು ಆಸ್ಪತ್ರೆಯ ತುರ್ತುನಿಗಾ ಘಟಕದಲ್ಲಿ ಕಾಣಬಂದ ಅಂದಿನ ಮುಖ್ಯಮಂತ್ರಿ ಸಿದ್ದರಾಮಯ್ಯರವರಲ್ಲಿ, ತನ್ನ ಆಕ್ಸಿಜನ್ ಮಾಸ್ಕ್

ಸರಿಸಿ, ತೊದಲು ಮಾತಲ್ಲಿ ಕೇಳಿದ ಬೇಡಿಕೆ ತನಗಾಗಲೀ ತನ್ನ ಕುಟುಂಬಕ್ಕಾಗಲೀ ಆಗಿರಲಿಲ್ಲ. ಬದಲಾಗಿ ಇವರು ಆ ಸ್ಥಿತಿಯಲ್ಲೂ ನೆನಪಿಟ್ಟುಕೊಂಡು ಕೇಳಿದ್ದು ತನ್ನ ಕನಸಿನ ಕೂಸಾದ ಬೆಂಗಳೂರಿನ ಬ್ಯಾರಿ ಸೌಹಾರ್ದ ಭವನಕ್ಕೆ ಹೆಚ್ಚಿನ ಅನುದಾನ!

ಆತ್ಮಕಥನದ ಪ್ರಾರಂಭದ ಪುಟದಲ್ಲಿ ಮೊಹಿದೀನ್‌ರವರು ಹೇಳುವ ಮಾತು – "ನಾನು ಇನ್ನಷ್ಟು ಮಾಡಬಹುದಿತ್ತು. ಮಾಡಿದ್ದು ತುಂಬಾ ಕಡಿಮೆಯಾಯಿತು ಎಂಬ ಕೊರಗು ಒಳಗೊಳಗೇ ಇರಿಯುತ್ತಿದೆ." ಆದರೆ ಕಟ್ಟಕಡೆಯ ಪುಟದಲ್ಲಿ ಹೇಳುತ್ತಾರೆ – "ಈ ಜಗತ್ತಿನಲ್ಲಿ ಒಂದು ಸುಂದರವಾದ ತುಂಬು ಬದುಕನ್ನು ಬಾಳಿದೆ ಎಂಬ ತೃಪ್ತಿ ನನಗಿದೆ" ಎಂದು. ಇದೊಂದು ರೀತಿಯಲ್ಲಿ ದ್ವಂದ್ವದಂತೆ ಕಂಡರೂ, ಇದರ ಹಿಂದಿರುವಂತಹ ವೈಚಾರಿಕತೆ ಮೊಹಿದೀನ್‌ರವರ ಸಂಪೂರ್ಣ ಬದುಕಿನ, ಅವರ ವಿಚಾರಧಾರೆಯ ಸಾರಾಂಶ ಅಂತ ಹೇಳಬಹುದು. ಇಂಗ್ಲಿಷ್‌ನಲ್ಲಿ ಬಹಳ ಅರ್ಥಗರ್ಭಿತವಾದಂತಹ ಒಂದು ಪದಗುಚ್ಛವಿದೆ – "Contended Dissatisfaction" - ಇದರ ಅರ್ಥ "ತೃಪ್ತಿದಾಯಕ ಅಸಮಾಧಾನ" ಅಂತ. ತೃಪ್ತಿ ಮತ್ತು ಅಸಮಾಧಾನ ಪರಸ್ಪರ ವಿರೋಧಾಭಾಸಗಳಿಂದ ಕೂಡಿದ ಪದಗಳಾದರೂ ಈ ಮಾತಿನ ಅರ್ಥವೇನೆಂದರೆ – "ಮಾಡಿದ ಪ್ರಯತ್ನಗಳ ಬಗ್ಗೆ ಅಸಮಾಧಾನವಿದೆ. ಇನ್ನೂ ಮಾಡಬಹುದಾಗಿತ್ತು, ಇನ್ನೂ ಮಾಡಬೇಕಾದ್ದು ಬಹಳ ಇದೆ ಎನ್ನುವ ತುಡಿತ ಒಂದೆಡೆಯಾದರೆ, ಫಲಿಸಿದ ಫಲಿತಾಂಶಗಳ ಬಗ್ಗೆ ಕಿಂಚಿತ್ತೂ ಬೇಸರವಿಲ್ಲ, ಕೊರಗಿಲ್ಲ ಎನ್ನುವ ಆತ್ಮಸಂತೃಪ್ತಿ ಇನ್ನೊಂದೆಡೆ." ಇದುವೇ ಮೊಹಿದೀನ್‌ರವರ ಜೀವನದ ಸಾರಾಂಶ. ಇದುವೇ ಇವರ ಜೀವನದ ಸಂದೇಶ.

ಹಿರಿಯರೂ, ಆದರಣೀಯರೂ ಆದ ಬಿ.ಎ. ಮೊಹಿದೀನ್‌ರವರ ಆತ್ಮಕಥನಕ್ಕೆ ಮುನ್ನುಡಿಯನ್ನು ಬರೆಯುವ ಅರ್ಹತೆಯಾಗಲೀ, ಪ್ರಬುದ್ಧತೆಯಾಗಲೀ ನನಗಿದೆ ಅಂತ ನಾನು ಭಾವಿಸಿಲ್ಲ. ಇದು ಮೊಹಿದೀನ್‌ರವರಿಗೆ ನಾನು ಬರೆದು ಅರ್ಪಿಸುವಂತಹ ಅಭಿಮಾನದ ನುಡಿ ಅಷ್ಟೆ.

"ಮುಂದಿನ ಪೀಳಿಗೆಗೆ ಮೊಹಿದೀನ್‌ರವರ ಬದುಕು, ಅನುಭವದ ಸ್ಫೂರ್ತಿ ಖಂಡಿತ ಬೇಕು" ಅನ್ನುವ ಆಶಯದೊಂದಿಗೆ, ಮೊಹಿದೀನ್‌ರವರ 'ನನ್ನೊಳಗಿನ ನಾನು' ಅನ್ನು ಇಷ್ಟೊಂದು ಸುಂದರವಾಗಿ ಅನಾವರಣಗೊಳಿಸಿದ್ದಕ್ಕಾಗಿ ಈ ಕಥನದ ನಿರೂಪಕರೂ, ಗೆಳೆಯರೂ ಆದ ಮುಹಮ್ಮದ್ ಕುಳಾಯಿ ಮತ್ತು ಬಿ.ಎ. ಮುಹಮ್ಮದ್ ಅಲಿಯವರಿಗೆ ಹೃತ್ಪೂರ್ವಕ ಕೃತಜ್ಞತೆಗಳು.

ಬೆಂಗಳೂರು **ಉಮರ್ ಟೀಕೆ**

21 ಜೂನ್ 2018

# ಆತ್ಮಕಥನದ ಅನುಭವ ಕಥನ

ಬಿ.ಎ. ಮೊಹಿದೀನ್ ಕರ್ನಾಟಕ ರಾಜ್ಯ ಕಂಡ ಅತ್ಯಂತ ಪ್ರಾಮಾಣಿಕ, ಜಾತ್ಯತೀತ ಹಾಗೂ ದಕ್ಷ ರಾಜಕಾರಣಿ. ದಕ್ಷಿಣ ಕನ್ನಡ ಜಿಲ್ಲೆಯ ಮಂಗಳೂರು ತಾಲೂಕಿನ ಬಜಪೆ ಸಮೀಪದ ಪೇಜಾವರ ಎಂಬ ಕುಗ್ರಾಮದಲ್ಲಿ ಅನಕ್ಷರಸ್ಥ ಬ್ಯಾರಿ ಮುಸ್ಲಿಮ್ ಕುಟುಂಬದಲ್ಲಿ ಹುಟ್ಟಿದವರು. ತನ್ನದೇ ಶಕ್ತಿ ಸಾಮರ್ಥ್ಯದಿಂದ ಹಂತ ಹಂತವಾಗಿ ಬೆಳೆದು ಕರ್ನಾಟಕದ ರಾಜಕೀಯ ಇತಿಹಾಸ ದಲ್ಲಿ ತನ್ನದೇ ಆದ ಛಾಪನ್ನು ಮೂಡಿಸಿದವರು. ಶಾಸಕರಾಗಿ, ವಿಧಾನ ಪರಿಷತ್ ಸದಸ್ಯರಾಗಿ, ಮುಖ್ಯ ಸಚೇತಕ ರಾಗಿ, ಸಣ್ಣ ಕೈಗಾರಿಕೆ ಹಾಗೂ ಉನ್ನತ ಶಿಕ್ಷಣ ಸಚಿವರಾಗಿ, ದಕ್ಷಿಣ ಕನ್ನಡ ಜಿಲ್ಲಾ ಉಸ್ತುವಾರಿ ಸಚಿವರಾಗಿ ಅವರು ಸಲ್ಲಿಸಿದ ಸೇವೆ ಅಪೂರ್ವ. ಅಧಿಕಾರಕ್ಕಾಗಿ, ಪ್ರಚಾರಕ್ಕಾಗಿ ರಾಜಕೀಯ ಮಾಡದೆ ರಾಜಕೀಯ ಬದುಕಿನಲ್ಲಿ ನಿಜಾರ್ಥದ 'ರಾಜಧರ್ಮ' ವನ್ನು ಪಾಲಿಸಿದವರು.

ಬಿ.ಎ. ಮೊಹಿದೀನ್ ರಾಜಕಾರಣಿಗಿಂತ ಮಿಗಿಲಾಗಿ ಓರ್ವ ಮುತ್ಸದ್ದಿಯಾಗಿ ಕೈಗೊಳ್ಳುತ್ತಿದ್ದ ತೀರ್ಮಾನಗಳು, ಜನಪರ ಕಾರ್ಯಕ್ರಮಗಳ ಪರಿಣಾಮಗಳು ಇಂದಿಗೂ ನಮ್ಮ ಕಣ್ಣ ಮುಂದಿವೆ. ಶೈಕ್ಷಣಿಕ, ಸಾಮಾಜಿಕ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಅಪಾರ ಜ್ಞಾನ ಹೊಂದಿರುವ ಇವರು 'ನಡೆದಾಡುವ ಜ್ಞಾನ ಭಂಡಾರ'ವಿದ್ದಂತೆ.

ನಾಡು, ಸಮಾಜ, ಸಮುದಾಯಕ್ಕೆ ಸಲ್ಲಿಸಿದ ಸೇವೆಯನ್ನು ಪರಿಗಣಿಸಿ ಬಿ.ಎ. ಮೊಹಿದೀನ್‌ರನ್ನು 'ಶತಮಾನದ ಬ್ಯಾರಿ' ಎಂದು ಗುರುತಿಸಲಾಗಿದೆ. ಕರ್ನಾಟಕ ರಾಜ್ಯ ಸರಕಾರ ಇವರಿಗೆ 'ದೇವರಾಜ ಅರಸು ಪ್ರಶಸ್ತಿ'ಯನ್ನು ನೀಡಿ ಗೌರವಿಸಿದೆ.

ಎಲ್ಲ ಜಾತಿ, ಧರ್ಮಗಳ ಜನರ ಗೌರವ, ಪ್ರೀತಿಗೆ ಪಾತ್ರ ರಾಗಿರುವ ಬಿ.ಎ. ಮೊಹಿದೀನ್ ಅಪರೂಪದಲ್ಲಿ ಅಪರೂಪ

ವಾಗಿರುವ ವ್ಯಕ್ತಿ. ಸಮಾಜವನ್ನು, ಸಮುದಾಯವನ್ನು ಪ್ರೀತಿಸುವ; ಎಲ್ಲರಿಗೂ ಒಳಿತಾಗಬೇಕು, ಎಲ್ಲರೂ ಅಭಿವೃದ್ಧಿ ಹೊಂದಬೇಕು, ಶಿಕ್ಷಿತರಾಗಬೇಕು ಎಂದು ಹಂಬಲಿಸುವ; ಅದಕ್ಕಾಗಿ ಹಗಲಿರುಳೂ ತನ್ನಿಂದಾದಷ್ಟು ಪ್ರಯತ್ನ ಮಾಡುವ 'ವಿಶೇಷತೆ'ಯುಳ್ಳ ಒಬ್ಬ ರಾಜಕಾರಣಿ.

ಎತ್ತರದ ದೇಹ, ಗೌರವವರ್ಣ, ಬೋಳುತಲೆ, ನೀಳ ಬಾಹುಗಳ ಈ ಬಿ.ಎ. ಮೊಹಿದೀನ್ ಅಭ್ಯಾಸಬಲದಂತೆ ತನ್ನ ಎರಡೂ ಕೈಗಳನ್ನು ಬೆನ್ನ ಹಿಂದಕ್ಕೆ ಕಟ್ಟಿ ನಡೆದುಕೊಂಡು ಹೋಗುತ್ತಿದ್ದರೆ ಎಂತಹವರೂ ಒಮ್ಮೆ ತಲೆ ಎತ್ತಿ ನೋಡಬೇಕು. ಆ ಗತ್ತು, ಆ ಗಾಂಭೀರ್ಯ, ರಾಜಠೀವಿ, ಯಾರು ನೋಡಿದರೂ ಒಮ್ಮೆ ನಿಂತು ಸಲಾಂ ಹೊಡೆಯಲೇ ಬೇಕು. ಅಂತಹ 'ವ್ಯಕ್ತಿತ್ವ' ಅವರದ್ದು. ಮದುವೆ ಸಮಾರಂಭ, ಇತರ ಕಾರ್ಯಕ್ರಮಗಳಿಗೆ ಬಂದರೆಂದರೆ ಅವರ ಸುತ್ತ ಜನರ ಗುಂಪೇ ನೆರೆಯುತ್ತಿತ್ತು. ಎಲ್ಲರ ಮಾತುಗಳನ್ನೂ ಗಮನವಿಟ್ಟು ಆಲಿಸುವ ಅವರು ಸ್ವತಃ ಮಾತನಾಡುವುದು ಬಹಳ ಕಡಿಮೆ. ಯಾರು ಪರಿಚಿತರು ಸಿಕ್ಕರೂ ಹಿರಿಯ–ಕಿರಿಯ, ಬಡವ–ಬಲ್ಲಿದ ಎಂದು ನೋಡದೆ ತನ್ನ ಕನ್ನಡಕದ ಎಡೆಯಿಂದ ಕಾಲಿನಿಂದ ತಲೆಯವರೆಗೂ ಒಮ್ಮೆ ದೃಷ್ಟಿ ಹಾಯಿಸಿ "ಎಂದೊಮೇ, ಎಜನೆ ಉಲ್ಲಾರ್?" (ಏನ್ರೀ, ಹೇಗಿದ್ದೀರಿ?) ಎಂದು ವಿಚಾರಿಸಿ ಒಮ್ಮೆ ಬಾಯಿ ತುಂಬಾ ನಕ್ಕುಬಿಟ್ಟರು ಎಂದರೆ ಆ ಮುಖದಿಂದ ಕಣ್ಣು ಕೀಳಲು ಯಾರಿಗೂ ಸಾಧ್ಯವೇ ಇಲ್ಲ. ಆ ಮುಖದಲ್ಲಿ ಅಷ್ಟೊಂದು ಮುಗ್ಧತೆ. ಅಷ್ಟೊಂದು ಸುಂದರ ಆ ಮುಖ. ಬೆಳದಿಂಗಳು ಸುರಿದಂತೆ ಆ ನಗು. ಅಷ್ಟೊಂದು ಗಾಂಭೀರ್ಯತೆ ಇದ್ದರೂ ಪುಟ್ಟ ಮಗುವೊಂದು ನಮ್ಮ ಮುಂದೆ ನಿಂತು ನಕ್ಕಂತೆ ಭಾಸವಾಗುತ್ತದೆ.

ಬ್ಯಾರಿ ಸಮುದಾಯ ಶಿಕ್ಷಿತರಾಗಬೇಕು, ಅಭಿವೃದ್ಧಿ ಹೊಂದಬೇಕು, ಪ್ರಗತಿಯತ್ತ ಸಾಗಬೇಕು ಎಂದು ಬಯಸುವ ಬಿ.ಎ. ಮೊಹಿದೀನ್ ಇದಕ್ಕಾಗಿ ತನ್ನಿಂದಾದ ಎಲ್ಲ ಪ್ರಯತ್ನಗಳನ್ನೂ ಮಾಡಿದವರು. ಇಂದು ಬ್ಯಾರಿ ಸಮುದಾಯ ಶೈಕ್ಷಣಿಕವಾಗಿ ಮುಂದುವರಿದಿದ್ದರೆ ಹಾಗೂ ನಾಡಿನಾದ್ಯಂತ ಮುಸ್ಲಿಮರ ಒಡೆತನದ ಶಿಕ್ಷಣ ಸಂಸ್ಥೆಗಳು ತಲೆಯೆತ್ತಿ ನಿಂತಿದ್ದರೆ ಅದರಲ್ಲಿ ಇವರ ಪಾಲು ಬಹಳ ದೊಡ್ಡದಿದೆ.

ಪ್ರತಿಯೊಂದು ವಿಷಯವನ್ನೂ ಭಿನ್ನವಾಗಿ ನೋಡುವ, ಭಿನ್ನವಾಗಿ ಚಿಂತಿಸುವ ಬಿ.ಎ. ಮೊಹಿದೀನ್ ತೋರಿದ ದಾರಿಯಲ್ಲಿ ನಡೆದ ಯಾರಿಗೂ ಕೆಟ್ಟದಾಗಿಲ್ಲ. ಇವರ ಮಾರ್ಗದರ್ಶನ ಪಡೆದ ಅದೆಷ್ಟೋ ಮಂದಿ ಇಂದು ಇಂಜಿನಿಯರ್‌ಗಳಾಗಿ, ಡಾಕ್ಟರ್‌ಗಳಾಗಿ, ಬೃಹತ್ ಉದ್ಯಮಿಗಳಾಗಿ, ಸ್ವಂತ ಉನ್ನತ ಶಿಕ್ಷಣ ಸಂಸ್ಥೆಗಳನ್ನು ನಡೆಸುವವರಾಗಿ, ದೇಶ ವಿದೇಶಗಳಲ್ಲಿ ಉನ್ನತ ಹುದ್ದೆಗಳನ್ನು ಹೊಂದಿ ದುಡಿಯುತ್ತಿದ್ದಾರೆ. ಸಲಹೆ, ಸಹಾಯ ಯಾಚಿಸಿ ಬಂದ ಯಾರನ್ನೂ ಇವರು ನಿರಾಶೆಗೊಳಿಸಿದವರಲ್ಲ. ಬ್ಯಾರಿಗಳು ಶಿಕ್ಷಣ, ಉದ್ಯೋಗ, ಉದ್ಯಮ, ಭಾಷೆ, ಸಾಹಿತ್ಯ, ಕಲೆ, ಸಂಸ್ಕೃತಿ ಹೀಗೆ ಎಲ್ಲದರಲ್ಲೂ ಮುಂದೆ ಬರಬೇಕು ಎಂಬುದು ಇವರ ಗುರಿ.

ಒಂದು ಘಟನೆ ನನಗಿಲ್ಲಿ ನೆನಪಾಗುತ್ತಿದೆ. ಬೆಂಗಳೂರಿನ ಬ್ಯಾರೀಸ್ ವೆಲ್ಫೇರ್

ಅಸೋಸಿಯೇಶನ್‌ನವರು 1997ರ ಡಿಸೆಂಬರ್ ತಿಂಗಳ 13–14ರಂದು ಬೆಂಗಳೂರಿನ ಅರಮನೆ ಮೈದಾನದಲ್ಲಿ ಎರಡು ದಿನಗಳ 'ಬ್ಯಾರಿ ಸಮ್ಮೇಳನ'ವನ್ನು ಆಯೋಜಿಸಿದ್ದರು. ಈ ಸಮ್ಮೇಳನದ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಸಂಘಟಕರು ಮಂಗಳೂರಿನ ಕಲಾವಿದರ ತಂಡಕ್ಕೆ ವಹಿಸಿದ್ದರು. ಈ ತಂಡದಲ್ಲಿ ನಾವೂ ಇದ್ದೆವು. ಈ ಕಾರ್ಯಕ್ರಮದಲ್ಲಿ ಒಂದು ಗಂಟೆಯ ಒಂದು ಬ್ಯಾರಿ ನಾಟಕವನ್ನು ಪ್ರದರ್ಶನ ಮಾಡುವುದೆಂದು ನಾವು ತೀರ್ಮಾನ ಮಾಡಿದೆವು. ಅಂದಿನ ತನಕ ಬ್ಯಾರಿ ಕಾರ್ಯಕ್ರಮವೊಂದರಲ್ಲಿ ಬ್ಯಾರಿ ಕಲಾವಿದರಿಂದಲೇ ಬ್ಯಾರಿ ನಾಟಕವೊಂದು ಪ್ರದರ್ಶನವಾದದ್ದು ನಮ್ಮ ನೆನಪಿನಲ್ಲಿಲ್ಲ. ಈ ರೀತಿ ತೀರ್ಮಾನ ಕೈಗೊಳ್ಳುವಾಗ ಏನಾದರೂ ಗಲಾಟೆಯಾದರೆ ಎಂಬ ಒಂದು ಅಳುಕು ನಮ್ಮ ತಂಡದ ಎಲ್ಲರಲ್ಲೂ ಇತ್ತು. ಯಾಕೆಂದರೆ ನಾಟಕ ಅಥವಾ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಕೆಲವು ಧಾರ್ಮಿಕ ವ್ಯಕ್ತಿಗಳು ನಮಗೆ 'ಹರಾಂ' ಮಾಡಿಬಿಟ್ಟಿದ್ದರು. ಆದರೂ ನಾವು ಇದನ್ನು ನಾಟಕ ಎಂದು ಕರೆಯದೆ 'ಪ್ರಹಸನ' ಎಂದು ಹೇಳಿಕೊಂಡು ಪ್ರದರ್ಶನ ಮಾಡಿದೆವು. ನಾಟಕ ಮುಗಿದು ರಂಗದಿಂದ ಕೆಳಗಿಳಿದು ಬರುವಾಗ ಹೆಚ್ಚಿನವರ ಮುಖ ಗಂಟುಕಟ್ಟಿತ್ತು. ನಾವು ಯಾರ ಎದುರೂ ಹೋಗದಂತಹ, ಅವಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಸಮುದಾಯದ ಒಂದೆರಡು ನಾಯಕರು ಬಂದು ನಮ್ಮನ್ನು ಜರೆದದ್ದೂ ಆಯಿತು. ಇದೆಲ್ಲವನ್ನು ಗಮನಿಸುತ್ತಿದ್ದ ಬಿ.ಎ. ಮೊಹಿದೀನ್ ಅವರು, ನಮ್ಮನ್ನು ಹುಡುಕಿಕೊಂಡು ಬಂದು, ಎಲ್ಲರೆದುರು ನಿಲ್ಲಿಸಿ ಏರಿದ ಧ್ವನಿಯಲ್ಲಿ ನಾಟಕವನ್ನೂ ನಮ್ಮ ಪಾತ್ರಗಳನ್ನೂ ಹೊಗಳತೊಡಗಿದ್ದರು. "ಈ ನಾಟಕವನ್ನು ನೀವು ಮಂಗಳೂರಿನ ಪುರಭವನದಲ್ಲಿ ಪ್ರದರ್ಶನ ಮಾಡಬೇಕು. ನೀವು ಯಾವಾಗ ಮಾಡುತ್ತೀರಿ ಹೇಳಿ, ನಾನೇ ಮುಂದೆ ನಿಂತು ಮಾಡಿಸುತ್ತೇನೆ" ಎಂದು ನಮ್ಮೆಲ್ಲರ ಬೆನ್ನು ತಟ್ಟುತ್ತ ಎಲ್ಲರಿಗೂ ಕೇಳಿಸುವಂತೆ ಹೇಳಿದ್ದರು. ಮರುವರ್ಷವೇ ಈ ನಾಟಕವನ್ನು ನಮ್ಮ ತಂಡ ಮಂಗಳೂರು ಪುರಭವನದಲ್ಲಿ ಬಿ.ಎ. ಮೊಹಿದೀನ್‌ರ ಗೌರವಾಧ್ಯಕ್ಷತೆಯಲ್ಲಿ ನಡೆದ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನದಲ್ಲಿ ಪ್ರದರ್ಶನ ಮಾಡಿ ಎಲ್ಲರಿಂದಲೂ ಪ್ರಶಂಸೆಗೆ ಪಾತ್ರವಾಗಿತ್ತು. ಅನಂತರ ಈ ನಾಟಕವನ್ನು ನಾವು ಬ್ಯಾರಿಗಳು ಹೆಚ್ಚು ಇರುವ ರಾಜ್ಯದ ಹಲವು ಕಡೆಗಳಲ್ಲಿ ಯಾವ ಅಳುಕೂ ಇಲ್ಲದೆ ಪ್ರದರ್ಶನ ಮಾಡಿದ್ದೆವು. ಇದು ಬ್ಯಾರಿ ಭಾಷೆ, ಸಾಹಿತ್ಯ, ಸಂಸ್ಕೃತಿ ಹಾಗೂ ಕಲೆಯ ಬಗ್ಗೆ ಬಿ.ಎ. ಮೊಹಿದೀನ್ ಅವರಿಗಿದ್ದ ಪ್ರಗತಿಪರ ಧೋರಣೆಯ ಒಂದು ಪುಟ್ಟ ಉದಾಹರಣೆ ಮಾತ್ರ.

ಇದು ಬಿ.ಎ. ಮೊಹಿದೀನ್‌ರ ಬಗ್ಗೆ ಒಂದು ಪುಟ್ಟ ಪರಿಚಯವಾದರೆ ಇವರ ಈ ಆತ್ಮಕಥನವನ್ನು ಅಕ್ಷರರೂಪಕ್ಕಿಳಿಸುವಾಗ ಆಗಿದ್ದ ಅನುಭವವನ್ನು ನಿಮ್ಮ ಮುಂದಿಡಲು ಬಯಸುತ್ತೇವೆ.

ಸುಮಾರು ಮೂರು ವರ್ಷಗಳ ಹಿಂದೆ ಅದೊಂದು ದಿನ ನಾವಿಬ್ಬರೂ ಕೂಡಿ ಬಿ.ಎ. ಮೊಹಿದೀನ್‌ರ ವ್ಯಕ್ತಿತ್ವದ ಬಗ್ಗೆ, ಅವರ ಆದರ್ಶ, ರಾಜಕೀಯ ಬದುಕಿನ ಬಗ್ಗೆ

ಸುಮಾರು ಒಂದು ಗಂಟೆ ಕಾಲ ಚರ್ಚಿಸಿದ್ದೆವು. ಅಂದು ಚರ್ಚಿಸಿದ ವಿಷಯವೇ ಇಂದು ನಿಮ್ಮ ಕೈಯಲ್ಲಿರುವ ಬಿ.ಎ. ಮೊಹಿದೀನ್‌ರ ಈ ಆತ್ಮಕಥನ.

"ನಾವಿಬ್ಬರೂ ಕೂಡಿ ಬಿ.ಎ. ಮೊಹಿದೀನ್‌ರ ಆತ್ಮಕಥನ ಬರೆಯಬೇಕು. ಇವರ ಬದುಕನ್ನು ದಾಖಲಿಸಬೇಕು. ಇದು ಮುಂದಿನ ತಲೆಮಾರಿಗೆ ದೀವಿಗೆಯಾಗಬೇಕು" ಎಂದು ತೀರ್ಮಾನಿಸಿದ್ದೆವು. ಮರುದಿನವೇ ನಾವು ಬಿ.ಎ. ಮೊಹಿದೀನ್‌ರ ಮಂಗಳೂರಿನಲ್ಲಿರುವ ಮನೆಗೆ ಹೋಗಿ ವಿಷಯವನ್ನು ಪ್ರಸ್ತಾಪಿಸಿದಾಗ ಅವರು "ನನ್ನದೆಂತದು ಬರೆಯುವುದು ಮಾರಾಯ. ಬರೆಯಲು ಏನಾದರೂ ಬೇಕಲ್ಲ. ಏನೂ ಬೇಡ" ಎಂದು ಹೇಳಿಬಿಟ್ಟರು. ನಾವು ಮತ್ತೆ ಒತ್ತಾಯ ಮಾಡಿದಾಗ "ನೋಡುವ, ಮುಂದಕ್ಕೆ ನೋಡುವ, ಈಗ ಬೇಡ" ಎಂದು ನಮ್ಮನ್ನು ನಿರಾಶೆಗೊಳಿಸಿಬಿಟ್ಟರು.

ಅನಂತರ ಅವರು ಮಂಗಳೂರಿಗೆ ಬಂದಾಗಲೆಲ್ಲ ನಾವು ಅವರನ್ನು ಭೇಟಿಯಾಗಿ ಒತ್ತಾಯಿಸುತ್ತಲೇ ಇದ್ದೆವು. ಆದರೆ ಅವರದ್ದು ಒಂದೇ ಮಾತು "ಈಗ ಬೇಡ, ಮುಂದಕ್ಕೆ ನೋಡುವ" ಎಂದು. ಹೀಗೆ ವರ್ಷ ಕಳೆಯಿತು. ಅದೊಂದು ದಿನ ನಾವು ಬಿ.ಎ. ಮೊಹಿದೀನ್‌ರನ್ನು ಭೇಟಿಯಾಗಿ ಮತ್ತೆ ಒತ್ತಾಯಪಡಿಸಿದಾಗ ಅವರು "ಅದು ನಮ್ಮ ಪತ್ರಕರ್ತ ಬಿ.ಎಂ. ಹನೀಫ್ ಬರೆಯುತ್ತೇನೆ ಎಂದು ಹೇಳಿದ್ದಾನೆ ಮಾರಾಯ. ಅವನು ಬರೆಯುತ್ತಾನೆ" ಎಂದರು. ಈ ವಿಷಯ ಕೇಳಿ ನಮಗಿಬ್ಬರಿಗೂ ಖುಷಿಯಾಗಿತ್ತು. ಯಾಕೆಂದರೆ ನಮಗಿಂತಲೂ ಉತ್ತಮವಾಗಿ ಹನೀಫ್ ಬರೆಯುತ್ತಾರೆ ಎಂಬ ವಿಶ್ವಾಸ ನಮಗಿತ್ತು. ಮಾತ್ರವಲ್ಲ, ನಮಗೆ ನಾವೇ ಬರೆಯಬೇಕೆಂದೇನೂ ಇರಲಿಲ್ಲ. ಯಾರಾದರೂ ಆಗಬಹುದು ಅವರ ಆತ್ಮಕಥನ ದಾಖಲಾಗಬೇಕು ಎಂಬ ಹಂಬಲ ಮಾತ್ರ ಇತ್ತು. ಅಷ್ಟೇ ಅಲ್ಲ, ಹನೀಫ್ ಬೆಂಗಳೂರಿನಲ್ಲೇ ವಾಸವಾಗಿರುವುದರಿಂದ ಅವರಿಗೆ ಬಹಳ ವರ್ಷಗಳಿಂದ ಬಿ.ಎ. ಮೊಹಿದೀನ್‌ರ ಜೊತೆ ಒಡನಾಟವಿತ್ತು. ಅವರ ರಾಜಕೀಯ ಏಳುಬೀಳುಗಳ ಪರಿಚಯವೂ ಇತ್ತು. ಹೀಗೆ ನಾವು ಅವರ ಆತ್ಮಕಥನವನ್ನು ಬರೆಯುವ ಪ್ರಯತ್ನವನ್ನು ಸಂಪೂರ್ಣ ಕೈಬಿಟ್ಟೆವು.

ಇದಾಗಿ ಸುಮಾರು ಒಂದು ವರ್ಷ ಕಳೆದಿರಬಹುದು. ಒಂದು ದಿನ ಬೆಂಗಳೂರಿನಿಂದ ಬಿ.ಎಂ. ಹನೀಫ್ ಮತ್ತು ಪಿ. ಮುಹಮ್ಮದ್ (ಕಾರ್ಟೂನಿಸ್ಟ್) (ಕುಳಾಯಿಗೆ) ಫೋನ್ ಮಾಡಿ "ಹಲವು ತಿಂಗಳುಗಳಿಂದ ನಾನು ಬಿ.ಎ. ಮೊಹಿದೀನ್‌ರ ಆತ್ಮಕಥನ ಬರೆಯಲು ಪ್ರಯತ್ನಿಸುತ್ತಿದ್ದೇನೆ. ಆದರೆ ಮೊಹಿದೀನ್‌ರವರು ಸರಿಯಾಗಿ ಸ್ಪಂದಿಸುತ್ತಿಲ್ಲ. ಅವರು ಯಾವುದೂ ಸರಿಯಾಗಿ ಬಾಯಿಬಿಡುತ್ತಿಲ್ಲ. ಸ್ವಲ್ಪ ಹೊತ್ತು ಹೇಳುತ್ತಾರೆ, ಆಮೇಲೆ ಏನಾದರೂ ಕಾರಣ ಹೇಳಿ 'ಈಗ ಇಷ್ಟು ಸಾಕು, ಇನ್ನೊಮ್ಮೆ ನೋಡುವಾ' ಎಂದು ಹೇಳಿ ಎದ್ದುಬಿಡುತ್ತಾರೆ. ಹೀಗೆ ಹಲವು ಬಾರಿ ಆಯಿತು. ಯಾಕೋ ಇದು ನನ್ನಿಂದ ಸಾಧ್ಯವಿಲ್ಲ ಎಂದು ಕಾಣುತ್ತದೆ. ಬಹಳ ನಿರಾಶೆಯಾಗಿದೆ. ನೀವು ಪ್ರಯತ್ನಿಸಿ. ನಿಮ್ಮಿಂದ ಇದು ಸಾಧ್ಯ. ಇದಕ್ಕೆ ನೀವೇ ಸೂಕ್ತ ವ್ಯಕ್ತಿ. ಹೇಗಾದರೂ ಮಾಡಿ ನೀವು ಅವರ ಆತ್ಮಕಥನವನ್ನು ದಾಖಲಿಸಲೇಬೇಕು. ಬೆಂಗಳೂರಿಗೆ ಬಂದು ಅವರ ಮನೆ

ಯಲ್ಲಿಯೇ ಕೆಲವು ದಿನಗಳು ಇದ್ದು ಬರೆಯಬೇಕು. ನನ್ನಿಂದ ಬೇಕಾದ ಎಲ್ಲ ಸಹಕಾರವನ್ನೂ ನೀಡುತ್ತೇನೆ" ಎಂದು ಹೇಳಿದರು. ಹಾಗೆಯೇ ಪಿ. ಮುಹಮ್ಮದ್ ಕೂಡಾ ಮಾತನಾಡಿ, ಏನಾದರೂ ಮಾಡಿ ಅವರ ಪುಸ್ತಕವನ್ನು ಹೊರತರಲೇಬೇಕು ಎಂದು ಒತ್ತಾಯಿಸಿದರು.

ಮರುದಿನವೇ ನಾವು ಬಿ.ಎ. ಮೊಹಿದೀನ್‌ರಿಗೆ ಫೋನ್ ಮಾಡಿದೆವು. ಬಿ.ಎಂ. ಹನೀಫ್ ಮತ್ತು ಪಿ. ಮುಹಮ್ಮದ್ ತಿಳಿಸಿದ ವಿಷಯಗಳನ್ನೆಲ್ಲ ಅವರಿಗೆ ಹೇಳಿದೆವು. ನಾವಿಬ್ಬರೂ ಬೆಂಗಳೂರಿಗೆ ಬರುವುದಾಗಿಯೂ, ಕೆಲವು ದಿನ ಅವರ ಮನೆಯಲ್ಲಿಯೇ ತಂಗಿ ಅವರ ಆತ್ಮಕಥನ ಬರೆಯುವುದಾಗಿಯೂ ತಿಳಿಸಿದೆವು. ಆಗ ಅವರು "ನೀವು ಬೆಂಗಳೂರಿಗೆ ಬರುವುದು ಬೇಡ. ಬರುವ ವಾರ ನಾನೇ ಮಂಗಳೂರಿಗೆ ಬರುತ್ತೇನೆ. ಅಲ್ಲಿ ಭೇಟಿಯಾಗೋಣ" ಎಂದರು.

ಅಂದು ಮಂಗಳೂರಿನ ಅವರ ಫ್ಲ್ಯಾಟ್‌ಗೆ ನಾವಿಬ್ಬರೂ ಹೋಗಿದ್ದೆವು. ಅವರು ನಮ್ಮ ಜೊತೆ ಬಹಳಷ್ಟು ಮಾತನಾಡಿದರಾದರೂ 'ಆತ್ಮಕಥನ'ದ ಬಗ್ಗೆ ಪ್ರಸ್ತಾಪವೇ ಮಾಡಲಿಲ್ಲ. ಮತ್ತೆ ನಾವೇ ವಿಷಯ ಎತ್ತಿದಾಗ "ಎಂಥ ಆತ್ಮಕಥನ ಮಾರಾಯ? ಪುಸ್ತಕ ಬರೆಯುವಂಥದ್ದು ಎಂತದು ಮಾಡಿದ್ದೇನೆ ನಾನು? ಅದೆಲ್ಲ ಬೇಡ" ಎಂದುಬಿಟ್ಟರು. ಪುಸ್ತಕ, ಪೆನ್ನು, ರೆಕಾರ್ಡರ್ ಹಿಡಿದುಕೊಂಡು ಎಲ್ಲ ಸಿದ್ಧತೆಯೊಂದಿಗೆ ಬಹಳ ಉತ್ಸಾಹದಿಂದ ಹೋಗಿದ್ದ ನಮಗೆ ತುಂಬಾ ನಿರಾಶೆಯಾಗಿತ್ತು.

ಅನಂತರ ನಾವು, "ಈ ಪುಸ್ತಕವನ್ನು ನಿಮಗಾಗಿಯೋ, ನಮಗಾಗಿಯೋ ಬರೆಯುತ್ತಿಲ್ಲ. ಸಮಾಜಕ್ಕಾಗಿ ಬರೆಯುತ್ತಿದ್ದೇವೆ. ನಿಮ್ಮ ಬದುಕು, ಆದರ್ಶ, ರಾಜಕೀಯಗಳು ಮುಂದಿನ ತಲೆಮಾರಿಗೆ ತಿಳಿಯಬೇಕು. ಅದು ಅವರಿಗೆ ದಾರಿದೀಪವಾಗಬೇಕು..." ಹೀಗೆ ಈ ಪುಸ್ತಕವನ್ನು ಯಾಕಾಗಿ, ಯಾರಿಗಾಗಿ, ಯಾವ ಉದ್ದೇಶದಿಂದ ಬರೆಯುತ್ತಿದ್ದೇವೆ ಎಂಬುದನ್ನೆಲ್ಲ ನಮಗೆ ಸಾಧ್ಯವಿದ್ದಷ್ಟು ವಿಸ್ತಾರವಾಗಿ ಅವರ ಮುಂದೆ ಬಿಡಿಸಿಟ್ಟೆವು. ಮನವೊಲಿಸಲು ಪ್ರಯತ್ನಿಸಿದೆವು. ನಾವು ಹೇಳಿದ್ದೆಲ್ಲವನ್ನೂ ಒಂದು ಮಾತೂ ಆಡದೆ ಮೌನವಾಗಿ ಕುಳಿತು ಕೇಳಿಸಿಕೊಂಡ ಬಿ.ಎ. ಮೊಹಿದೀನ್ ನಮ್ಮ ಮಾತು ಮುಗಿದ ಬಳಿಕ ತಲೆ ಕೆಳಗೆ ಹಾಕಿ ಏನೋ ಯೋಚಿಸುತ್ತಾ ಬೊಂಬೆಯಂತೆ ಕುಳಿತುಬಿಟ್ಟರು. ನ್ಯಾಯಾಧೀಶರ ಬಾಯಿಯಿಂದ ಹೊರಬೀಳುವ ತೀರ್ಪಿಗೆ ಕಾಯುತ್ತಿರುವಂತೆ ನಾವಿಬ್ಬರೂ ಅವರ ಮುಖವನ್ನೇ ನೋಡುತ್ತಾ ಚಾತಕಪಕ್ಷಿಯಂತೆ ಅವರೆದುರು ಕುಳಿತಿದ್ದೆವು. ಹೀಗೆ ಸುಮಾರು 10–15 ನಿಮಿಷ ಕಳೆಯಿತು. ಏನೋ ತೀರ್ಮಾನಿಸಿದವರಂತೆ ಒಮ್ಮೆಲೆ ತಲೆಯೆತ್ತಿ ನೇರವಾಗಿ ಕುಳಿತ ಬಿ.ಎ. ಮೊಹಿದೀನ್ "ಸರಿ, ನಾಳೆ ಬೆಳಿಗ್ಗೆ ಬನ್ನಿ. ಇಲ್ಲಿ ಬೇಡ. ಇಲ್ಲಿ ಜನ ಬರ್ತಾ ಇರ್ತಾರೆ. ನಮ್ಮ ಬಜಪೆ ಮನೆಗೆ ಹೋಗೋಣ. ಅಲ್ಲಿಯಾದರೆ ಯಾರೂ ಇಲ್ಲ" ಎಂದರು. ನಮಗಂತೂ ಬಹಳ ಖುಷಿಯಾಗಿತ್ತು.

ಮರುದಿನ ಬೆಳಿಗ್ಗೆ ಅವರದೇ ಕಾರಲ್ಲಿ ಅವರ ಜೊತೆ ಅವರ ಬಜಪೆ ಮನೆಗೆ ತಲುಪಿದ್ದೆವು. ಮುಚ್ಚಿದ ಕೋಣೆಯಲ್ಲಿ ಪೆನ್ನು, ಪುಸ್ತಕ, ರೆಕಾರ್ಡರ್ ಹಿಡಿದು ಕುಳಿತ

ನಮಗೆ ಅವರ ಬಾಯಿಯಿಂದ ಹೊರಡುತ್ತಿದ್ದ ಒಂದೊಂದು ಮಾತೂ, ಒಂದೊಂದು ಘಟನೆಯೂ ಒಂದು ಹೊಸ ಲೋಕವನ್ನೇ ತೆರೆದಿಡುತ್ತಿತ್ತು. ಅವರ ಮಾತು, ಆ ಮಾತಿನಲ್ಲಿರುವ ಏರಿಳಿತ, ಅವರು ವಿವರಿಸುತ್ತಿದ್ದ ರೀತಿ, ಅವರ ಸುಂದರ ಅಚ್ಚಕನ್ನಡ, ನೆನಪಿನ ಆಳಕ್ಕೆ ಇಳಿದಾಗ ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ಹಾವಭಾವ... ಇದನ್ನೆಲ್ಲ ಅನುಭವಿಸಿದಾಗ ನಮಗೆ ಅನ್ನಿಸಿದ್ದು, ಇದನ್ನು ನಾವು ವೀಡಿಯೊ ಚಿತ್ರೀಕರಣ ಮಾಡಬೇಕಿತ್ತು ಎಂದು. ಒಂದೊಂದು ಘಟನೆಯನ್ನು ಹೇಳಿ ಮುಗಿಸಿದಾಗಲೂ ಅವರು ಕೆಲವು ಹೊತ್ತು ಮೌನವಾಗಿಬಿಡುತ್ತಿದ್ದರು. ಕೆಲವು ವಿಷಯವನ್ನು ನಮ್ಮೊಂದಿಗೆ ಹಂಚಿಕೊಂಡು ಚರ್ಚಿಸುತ್ತಿದ್ದರು. ತಮಾಷೆಯ ವಿಷಯಗಳನ್ನು ಹೇಳಿ ಬಾಯಿತುಂಬ ನಗುತ್ತಿದ್ದರು. ಮತ್ತೆ ಮತ್ತೆ ಅದನ್ನು ವಿವರಿಸಿ ನಮ್ಮನ್ನೂ ನಗಿಸುತ್ತಿದ್ದರು. ಬಾಲ್ಯದ ನೆನಪುಗಳನ್ನು ಕೆದಕಿದಾಗಲಂತೂ ಅವರು ಭಾವುಕರಾಗಿಬಿಡುತ್ತಿದ್ದರು. ಪುಟ್ಟ ಮಗುವಿನಂತೆ ಅವರು ಹೇಳುತ್ತಿದ್ದ ಒಂದೊಂದು ಮಾತು, ಘಟನೆ, ಹಾಡು ಎಲ್ಲವನ್ನೂ ನಾವು ಅವರ ಮುಂದೆ ಕುಳಿತು ದಾಖಲಿಸುತ್ತಿದ್ದೆವು. ನಾವು ಅವರ ಮುಂದೆ ಕುಳಿತಿದ್ದೇವೆ ಎಂಬುದನ್ನು ಮರೆತು ಅವರು ಅದೆಲ್ಲೋ ನೆನಪಿನ ಲೋಕದಲ್ಲಿ ವಿಹರಿಸುತ್ತಿದ್ದರು. ನಾವು ಕೆದಕಿದಷ್ಟೂ ಅವರ ಆಳದಿಂದ ನೆನಪಿನ ಅಲೆಗಳು ಉಕ್ಕಿ ಉಕ್ಕಿ ಬರುತ್ತಿದ್ದವು. ನಮಗೆ ಸಾಧ್ಯವಿರುವಷ್ಟು ನಾವು ಆ ಆಳವನ್ನು ಕೆದಕಿ ಜಾಲಾಡಿದೆವು. ಎಲ್ಲವನ್ನೂ ದಾಖಲಿಸಿಕೊಂಡೆವು. ಆದರೆ ಹೆಚ್ಚಿನ ವಿಷಯ, ಘಟನೆಗಳು ಅವರ ನೆನಪಿನ ಪುಟದಿಂದ ಮಾಸಿಹೋಗಿದೆ ಎಂಬುದಂತೂ ಸತ್ಯ. ಒಂದೆರಡು ವರ್ಷಗಳ ಹಿಂದೆಯೇ ನಾವು ಬರೆದಿದ್ದರೆ ಇದರ ಎರಡರಷ್ಟು ವಿಷಯಗಳು ನಮಗೆ ಖಂಡಿತ ಸಿಗುತ್ತಿತ್ತು ಎಂದು ನಮಗೆ ಅನ್ನಿಸಿತ್ತು.

ಹೀಗೆ ನಮ್ಮ ಮುಂದೆ ಎಡೆಬಿಡದೆ 2–3 ಗಂಟೆ ಕುಳಿತು ಮಾತನಾಡುವಾಗ ಅವರು ಸುಸ್ತಾಗಿಬಿಡುತ್ತಿದ್ದರು. ನಮಗೂ ಸ್ವಲ್ಪ ಬಿಡುವು ಬೇಕಾಗಿತ್ತು. "ನೀವು ಸ್ವಲ್ಪ ಸುಧಾರಿಸಿಕೊಳ್ಳಿ. ನಾವು ಒಂದ್ಹೈದು ನಿಮಿಷ ಹೊರಗಿರುತ್ತೇವೆ" ಎಂದು ಹೇಳಿ ನಾವು ಅಂಗಳಕ್ಕೆ ಇಳಿದು ಸಿಗರೇಟು ಹಚ್ಚಿ ಮುಂದಿನ ಬರವಣಿಗೆಯ ಬಗ್ಗೆ ಚರ್ಚಿಸುತ್ತಿರುವಾಗ ಅವರು ಜಗಲಿಗೆ ಬಂದು "ಆಗಲಿಲ್ಲವಾ ನಿಮ್ಮ ಸಿಗರೇಟು ಸೇದಿ, ಬನ್ನಿ ಬೇಗ" ಎಂದು ಕರೆಯುವಾಗ ನಮ್ಮ ಆಯಾಸವೆಲ್ಲ ಕರಗಿಹೋಗುತ್ತಿತ್ತು. ಅವರ ಉತ್ಸಾಹ ಕಂಡು ನಾವು ಮತ್ತೆ ಹೋಗಿ ಅವರ ಮುಂದೆ ಕುಳಿತುಬಿಡುತ್ತಿದ್ದೆವು. ಹೀಗೆ ಹಲವು ದಿನ ಎಡೆಬಿಡದೆ ಬೆಳಗ್ಗಿನಿಂದ ರಾತ್ರಿ ತನಕ ಅವರ ಒಡಲಾಳದ ಮಾತುಗಳನ್ನು ನಾವು ದಾಖಲಿಸಿಕೊಂಡೆವು.

ಆ ಎಲ್ಲಾ ದಿನಗಳಲ್ಲೂ ಆ ಮನೆಯಲ್ಲಿ ನಮಗೆ ಭರ್ಜರಿ ಔತಣವಿತ್ತು. ತುಪ್ಪದನ್ನ, ಕೋಳಿಸಾರು, ಕೋಳಿ ಹುರಿದದ್ದು, ಕುಚ್ಚಲಕ್ಕಿ ಅನ್ನ, ಮೀನು ಸಾರು, ಮೀನು ಹುರಿದದ್ದು, ಹಪ್ಪಳ, ಮೊಸರು, ಹಣ್ಣುಹಂಪಲು, ಸಿಹಿತಿಂಡಿಗಳು, ಬರೆಯುತ್ತಿರುವಾಗ ಆಗಾಗ ಚಹಾ, ಕುರುಕಲು ತಿಂಡಿ – ಬಿ.ಎ. ಮೊಹಿದೀನ್‌ರ ಪತ್ನಿ, ಹಿರಿಯ ಮಗಳು ಹಲೀಮಾ

ಶಾಹಿನ್ ಮತ್ತು ಅಳಿಯ ಅಹಮದ್ ಶರೀಫ್ ಅವರ ಆತಿಥ್ಯ, ಸಹಕಾರ ನಾವು ಎಂದೂ ಮರೆಯಲು ಸಾಧ್ಯವೇ ಇಲ್ಲ. ಅಂತೂ ಈ ದಿನಗಳು ನಮಗೆ ಒಂದು ಅದ್ಭುತವಾದ ಅನುಭವ. ಇಂತಹ ಒಂದು ಅನುಭವ ನಮಗೆ ನಮ್ಮ ಜೀವನದಲ್ಲಿ ಹಿಂದೆಂದೂ ಆಗಿರಲಿಲ್ಲ.

ಬಿ.ಎ. ಮೊಹಿದೀನ್ ಹೇಳಿದ್ದೆಲ್ಲವನ್ನೂ ಅಕ್ಷರರೂಪಕ್ಕಿಳಿಸುವಾಗ ಆದ ಗೊಂದಲಗಳು, ಅನುಮಾನಗಳನ್ನು ಪರಿಹರಿಸಿಕೊಳ್ಳಲು ಅನಂತರ ನಾವು ಆಗಾಗ ಅವರನ್ನು ಅವರ ಮನೆಯಲ್ಲಿ ಭೇಟಿಯಾಗುತ್ತಿದ್ದೆವು. ಹಾಗೆಯೇ ಅವರಿಗೆ ಆಮೇಲೆ ಏನಾದರೂ ಘಟನೆಗಳು ನೆನಪಾದಾಗಲೆಲ್ಲ ನಮ್ಮನ್ನು ಕರೆಸಿ ಹೇಳುತ್ತಿದ್ದರು. ಹೀಗೆ ಸುಮಾರು ಐದು ತಿಂಗಳಲ್ಲಿ ಅವರ ಆತ್ಮಕಥನ ಸಿದ್ಧವಾಯಿತು.

ವೃದ್ಧಾಪ್ಯ ಮತ್ತು ಅನಾರೋಗ್ಯದ ಕಾರಣದಿಂದಾಗಿ ಇತ್ತೀಚೆಗೆ ಅವರಿಗೆ ಓದಲು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ನಾವು ಬರೆದಿದ್ದನ್ನು ಅವರಿಗೆ ಓದಿ ಹೇಳಬೇಕಾಗಿತ್ತು. ಅದರಲ್ಲಿ ತಪ್ಪುಗಳೇನಾದರೂ ನುಸುಳಿಕೊಂಡಿದ್ದಲ್ಲಿ ಸರಿಪಡಿಸಬೇಕಾಗಿತ್ತು. ಅದಕ್ಕಾಗಿ ನಾವು ಅವರಲ್ಲಿ ಕೇಳಿ ಒಂದು ದಿನವನ್ನು ನಿಗದಿಪಡಿಸಿಕೊಂಡೆವು. ಆದರೆ ನಿಗದಿಪಡಿಸಿದ ದಿನ ನಾವು ಅವರ ಮನೆಗೆ ಹೋದಾಗ ಅನಾರೋಗ್ಯ ಉಲ್ಬಣಿಸಿ ಅವರು ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ ದಾಖಲಾಗಿದ್ದರು. ಅವರು ಗುಣಮುಖರಾಗಿ ಆಸ್ಪತ್ರೆಯಿಂದ ಮರಳುವವರೆಗೂ ನಾವು ಕಾಯಲೇಬೇಕಾಗಿತ್ತು. ಹೀಗೆ ಸುಮಾರು 15 ದಿನ ಕಳೆಯಿತು. ಕೆಲವು ದಿನಗಳ ಬಳಿಕ ಅವರನ್ನು ತೀವ್ರ ನಿಗಾಘಟಕದಿಂದ ವಾರ್ಡ್‌ಗೆ ಸ್ಥಳಾಂತರಿಸ ಲಾಗಿತ್ತು. ನಾವು ಆಗಾಗ ಆಸ್ಪತ್ರೆಯಲ್ಲಿ ಭೇಟಿಯಾಗುತ್ತಿದ್ದೆವು. ಒಂದು ದಿನ ಅವರು "ನೀವು ಬರೆದದ್ದನ್ನೆಲ್ಲ ಇಲ್ಲಿಗೇ ತನ್ನಿ, ಇಲ್ಲಿಯೇ ಓದಿ" ಎಂದರು. ನಾವು "ಆಸ್ಪತ್ರೆಯಲ್ಲಿ ಓದುವುದು ಸರಿಯಾಗುತ್ತದಾ?" ಕೇಳಿದೆವು. "ಏನೂ ಆಗುವುದಿಲ್ಲ. ನಾನು ಮಲಗಿಯೇ ಇರುತ್ತೇನೆ. ಮಾತನಾಡುವುದಿಲ್ಲ ನೀವು ಓದುತ್ತಾ ಹೋಗಿ, ನಾನು ಕೇಳಿಸಿಕೊಳ್ಳುತ್ತೇನೆ. ಇನ್ನು ಕಾದರೆ ಆಗಲಿಕ್ಕಿಲ್ಲ" ಎಂದರು. ಮರುದಿನ ನಾವು ಆಸ್ಪತ್ರೆಗೆ ಹೋಗಿ ಮಲಗಿದ್ದ ಅವರ ಮುಂದೆ ಕುಳಿತು ನಾವು ಬರೆದದ್ದೆಲ್ಲವನ್ನೂ ಓದಿ ಕೇಳಿಸಿದೆವು. ಮಧ್ಯೆ ಮಧ್ಯೆ ತಡೆದು ತಪ್ಪುಗಳನ್ನು, ಗೊಂದಲಗಳನ್ನೆಲ್ಲ ಅವರು ಸರಿಪಡಿಸಿದರು. ಇಡೀ ಪುಸ್ತಕ ಓದಿ ಮುಗಿಸಿದಾಗ ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ತೃಪ್ತಿ ಕಂಡು ನಮಗೂ ಸಮಾಧಾನವಾಗಿತ್ತು. ಅನಂತರ ನಾವು ಮುದ್ರಣದ ಕೆಲಸದಲ್ಲಿ ತೊಡಗಿದೆವು.

ಈ ಕೃತಿಯ ಮುಖಪುಟಕ್ಕೆ ನಮಗೆ ಬಿ.ಎ. ಮೊಹಿದೀನ್ ಅವರ ಇತ್ತೀಚಿನ ಒಂದು ಫೋಟೋ ಬೇಕಾಗಿತ್ತು. ನಾವು ಫೋಟೋಗ್ರಾಫರ್ ಸತೀಶ್ ಇರಾ ಮತ್ತು ಮುದ್ರಕ, ವಿನ್ಯಾಸಗಾರ ಕಲ್ಲೂರು ನಾಗೇಶ ಅವರನ್ನು ಕರೆದುಕೊಂಡು ಅವರ ಫ್ಲ್ಯಾಟ್‌ಗೆ ಹೋದೆವು. ಬಿಳಿ ಕುರ್ತಾ, ಬಿಳಿ ಪೈಜಾಮ ಮತ್ತು ಕಪ್ಪು ವಾಸ್‌ಕೋಟ್ ಧರಿಸಿ ಬಂದ ಅವರು ಫೋಟೋಗೆ ವಿವಿಧ ಭಂಗಿಗಳನ್ನು ನೀಡಿದರು. ಫೋಟೋಗ್ರಾಫರ್ ನಗಲು ಹೇಳಿದಾಗ ಪುಟ್ಟ ಮಗುವಿನಂತೆ ಬಾಯಿತುಂಬಾ ನಗುತ್ತಾ, ನಡೆಯಲು ಹೇಳಿದಾಗ

ಅಂಬೆಗಾಲಿಡುವ ಕಂದನಂತೆ ಹೆಜ್ಜೆ ಹಾಕುತ್ತಿದ್ದ ಅಂದಿನ ಅವರ ಖುಷಿ, ಸಂತೋಷ, ಮುಗ್ಧತೆ, ಸಂಭ್ರಮ ನೋಡಿ ನಮ್ಮ ಕಣ್ಣು ಮಂಜಾಗಿತ್ತು. ನಾವು ಅವರ ಜೊತೆ ವಯಸ್ಸಿನ ಅಂತರವನ್ನು ಮರೆತು ಮಕ್ಕಳಂತಾಗಿಬಿಟ್ಟಿದ್ದೆವು.

ನಾವು ಹೆಮ್ಮೆಯಿಂದ, ಅಭಿಮಾನದಿಂದ ನಿರೂಪಿಸಿದ ಬಿ.ಎ. ಮೊಹಿದೀನ್‌ರ 'ಆತ್ಮಕಥನ'ವನ್ನು ಈಗ ನಿಮ್ಮ ಕೈಯಲ್ಲಿಟ್ಟಿದ್ದೇವೆ. ಇದನ್ನು ನೀವು ಓದಬೇಕು. ನಿಮ್ಮ ಹೆಂಡತಿ, ಮಕ್ಕಳು, ಮನೆಯವರು, ಕುಟುಂಬ, ನೆರೆಹೊರೆ – ಹೀಗೆ ಎಲ್ಲರನ್ನೂ ಓದಿಸಬೇಕು. ನಾವು, ನಮ್ಮ ಮುಂದಿನ ತಲೆಮಾರು ಇವರ ಬದುಕಿನ ಆದರ್ಶವನ್ನು ಪಾಲಿಸುವಂತಾಗಬೇಕು. ಈ ಕೃತಿ ನಮ್ಮೆಲ್ಲರ ಕುಟುಂಬಕ್ಕೊಂದು ದಾರಿದೀಪವಾಗಬೇಕು. ಆಗ ಮಾತ್ರ ನಾವು ಮಾಡಿದ ಈ ಕೆಲಸ ಸಾರ್ಥಕವಾದೀತು.

ಈ ಕೃತಿಯನ್ನು ಹೊರತರಲು ನಮಗೆ ಬಿ.ಎ. ಮೊಹಿದೀನ್‌ರವರ ಹಾಗೂ ನಮ್ಮ ಹಲವಾರು ಗೆಳೆಯರು ಸಹಕಾರ ನೀಡಿದ್ದಾರೆ. ಅವರೆಲ್ಲರ ಹೆಸರುಗಳನ್ನು ಇಲ್ಲಿ ಉಲ್ಲೇಖಿಸಲು ಸಾಧ್ಯವಿಲ್ಲ. ಈ ಕೃತಿಯ ಹಸ್ತಪ್ರತಿಯನ್ನು ಓದಿ ಅದರಲ್ಲಿರುವ ತಪ್ಪುಗಳನ್ನು ಹೆಕ್ಕಿ ತಿದ್ದಿಕೊಟ್ಟ ಆತ್ಮೀಯ ಗೆಳೆಯರಾದ ಅಬ್ದುಲ್ ರಹೀಂ ಟೀಕೆ, ಮುನ್ನುಡಿ ಬರೆದುಕೊಟ್ಟ ಉಮರ್ ಟೀಕೆ, ಬೆನ್ನುಡಿ ಬರೆದುಕೊಟ್ಟ ಬಿ.ಎಂ. ಬಶೀರ್, ಸುಂದರವಾಗಿ ಮುದ್ರಿಸಿಕೊಟ್ಟ ಆಕೃತಿ ಪ್ರಿಂಟ್ಸ್‌ನ ಕಲ್ಲೂರು ನಾಗೇಶ, ಸಿಬ್ಬಂದಿ ಶ್ರೀಮತಿ ಭಾರತಿ ಮತ್ತು ಶ್ರೀಮತಿ ಗಾಯತ್ರಿ, ಫೋಟೋಗ್ರಾಫರ್ ಸತೀಶ್ ಇರಾ, ಎಲ್ಲಕ್ಕಿಂತ ಮುಖ್ಯವಾಗಿ ನಮ್ಮ ಮೇಲೆ ವಿಶ್ವಾಸವಿಟ್ಟು ತನ್ನ ಬದುಕಿನ ಹೆಜ್ಜೆ ಹೆಜ್ಜೆಗಳನ್ನು ನಮ್ಮ ಮುಂದೆ ತೆರೆದಿಟ್ಟು ಸಹಕರಿಸಿದ, ಈ ಕೃತಿಯನ್ನು ರಚಿಸಲು ನಮಗೆ ಅವಕಾಶ ಮಾಡಿಕೊಟ್ಟ ಗೌರವಾನ್ವಿತ ಬಿ.ಎ. ಮೊಹಿದೀನ್‌ರಿಗೆ ಮತ್ತು ಸಹಕರಿಸಿದ ಎಲ್ಲರಿಗೂ ಹೃದಯಾಂತರಾಳದ ಕೃತಜ್ಞತೆಗಳು.

ಮಂಗಳೂರು
29 ಜೂನ್ 2018

**ಬಿ.ಎ. ಮುಹಮ್ಮದ್ ಅಲಿ**
**ಮುಹಮ್ಮದ್ ಕುಳಾಯಿ**

# ಪರಿವಿಡಿ


| | | |
|---|---|---|
| 1. | ಬಾಲ್ಯ | 21 |
| 2. | ಕಾಲೇಜಿನ ದಿನಗಳು | 47 |
| 3. | ಹಿಂದಿನ ಕಾಲದ ಮದುವೆ | 59 |
| 4. | ನನ್ನ ಮದುವೆ | 79 |
| 5. | ಹೊಸ ಬದುಕನ್ನು ಅರಸುತ್ತಾ... | 87 |
| 6. | ರಾಜಕೀಯ | 97 |
| | ● ದೇವರಾಜ ಅರಸು ಯುಗ ಆರಂಭ | 100 |
| | ● ದೇವರಾಜ ಅರಸು ಆಡಳಿತದ ಮೊದಲ ಐದು ವರ್ಷ | 107 |
| | ● ಭೂಸುಧಾರಣೆ | 110 |
| | ● ಹಾವನೂರು ವರದಿ | 111 |
| | ● ಋಣ ಪರಿಹಾರ ಕಾಯ್ದೆ | 112 |
| | ● ಜೀತಪದ್ಧತಿಯ ನಿರ್ಮೂಲನೆ | 112 |
| | ● ತಲೆಯ ಮೇಲೆ ಮಲ ಹೊರುವ ಪದ್ಧತಿ ನಿಷೇಧ | 113 |
| | ● ಬರಗಾಲದ ಪರಿಹಾರ | 113 |
| | ● ಅರಸು ಭ್ರಷ್ಟ! | 114 |
| | ● ನಝೀರ್ ಸಾಬ್ | 116 |
| | ● ತುರ್ತು ಪರಿಸ್ಥಿತಿ | 117 |
| | ● ನಾನು ಚುನಾವಣೆಗೆ ಸ್ಪರ್ಧಿಸಿದ್ದು | 119 |
| | ● ನನ್ನ ಶಾಸಕತ್ವದ ಅವಧಿ | 128 |
| | ● ಸೇಮಿತ ಕೊಲೆ ಪ್ರಕರಣ | 130 |
| | ● ಕಲ್ಲಡ್ಕ ಇಸ್ಮಾಈಲ್ ಕೊಲೆ ಪ್ರಕರಣ | 131 |
| | ● ಚಿಕ್ಕಮಗಳೂರು ಚುನಾವಣೆ | 133 |
| | ● ದುರಂತಗಳು ಪ್ರಾರಂಭ | 139 |
| | ● ಅರಸು ರಾಜೀನಾಮೆ | 143 |
| | ● ನನ್ನ ರಾಜಕೀಯದ ದುರಂತದ ದಿನಗಳು | 145 |
| | ● ಹೀಗೇಕೆ ಮಾಡಿದರು ಈ ಮೂವರು? | 147 |
| | ● ನನ್ನ ರಾಜಕೀಯದ ಪುನರ್ಜನ್ಮ | 153 |

- ಮಂಗಳೂರು ಮಹಾನಗರಪಾಲಿಕೆಯ ವಿಸ್ತರಣೆ 156
- ಉಳ್ಳಾಲಕ್ಕೂ ವಿಸ್ತರಿಸಿದ ಎಡಿಬಿ ಯೋಜನೆ 157
- ಹಕ್ಕುಪತ್ರ ವಿತರಣೆ 158
- ಪಟ್ರಮೆ ಸೇತುವೆ 159
- ತುಂಬೆ ಡ್ಯಾಂ 159
- ಸುಳ್ಯ-ಬೆಳ್ತಂಗಡಿ ತಾಲೂಕು ಅಭಿವೃದ್ಧಿ 159
- ಸಣ್ಣ ಕೈಗಾರಿಕಾ ಸಬ್ಸಿಡಿ ಪಾವತಿ 159
- GTTCಗಳ ಸ್ಥಾಪನೆ 161
- ಕೌಶಲ್ಯ ನೈಪುಣ್ಯತೆಯ ತರಬೇತಿ 161
- ಬಿಧ್ರಿ ವರ್ಕ್‌ಗೆ ಪ್ರೋತ್ಸಾಹ 162
- ಪ್ರಾಧ್ಯಾಪಕರಿಗೆ ವೇತನಶ್ರೇಣಿ 162
- ಮೆಡಿಕಲ್ ಕಾಲೇಜುಗಳಿಗೆ ಅನುಮತಿ 163
- ವಿದ್ಯುತ್ ಉತ್ಪಾದನೆಗೆ ಅಡ್ಡಗಾಲು 164
- ಇದಿನಬ್ಬನೆಂಬ ನಿಸ್ವಾರ್ಥ ಜನಸೇವಕ 165
- ಮಂಗಳೂರಿನ ಪಿಲಿಕುಳ ನಿಸರ್ಗಧಾಮ 165
- ಜಂಬೋ ಕ್ಯಾಬಿನೆಟ್ 166
- ತೃಪ್ತಿ 166
- ವಕ್ಫ್ : ನಾನು ಮಾಡಿದ ತಪ್ಪು 166
- ಜನತಾ ದಳ ಇಬ್ಭಾಗ ಮತ್ತು ನನ್ನ ನಿರ್ಗಮನ 167
- ಸಿದ್ದರಾಮಯ್ಯರ ಸೋಲು ಮತ್ತು ಕೋಮುವಾದದ ಅಪಾಯ 168

7. ಸುರತ್ಕಲ್ ಗಲಭೆ 171

8. ಮುಸ್ಲಿಂ ಶೈಕ್ಷಣಿಕ ಕ್ರಾಂತಿ 178

9. ಬ್ಯಾರಿ ಆಂದೋಲನ 186
   - ಬ್ಯಾರಿ ಸಾಹಿತ್ಯ ಆಂದೋಲನ 191

10. ನನ್ನ ಕುಟುಂಬ 194

11. ನನ್ನೊಳಗಿನ ನಾನು 196

12. ಫೋಟೊಗಳು 205

13. ಸಂತತಿ ನಕ್ಷೆ 229

# ಬಾಲ್ಯ

ನನಗೀಗ 80 ವರ್ಷ ಪ್ರಾಯ. ಬದುಕಿನ ಮುಸ್ಸಂಜೆಯ ಹೊತ್ತು. ಇನ್ನೇನಿದ್ದರೂ ಒಂದೆರಡು ಗಳಿಗೆ. ಇನ್ನೂ ಏನೇನೋ ಆಸೆಗಳಿವೆ. ಮಾಡಬೇಕಾದ್ದು ಬಹಳಷ್ಟಿವೆ ಅನಿಸುತ್ತದೆ. ಈ ಸಮಾಜಕ್ಕೆ ಇನ್ನೂ ಸೇವೆ ಮಾಡಬೇಕು, ಸಮಾಜದ ಋಣ ತೀರಿಸಬೇಕು ಎಂಬ ತುಡಿತವಿದೆ. ಮನಸ್ಸು ಅದಕ್ಕಾಗಿ ಹಾತೊರೆಯುತ್ತಿದೆ. ಆದರೆ ದೇಹ ಸಹಕರಿಸುತ್ತಿಲ್ಲ. ಕಳೆದುಹೋದ ಬದುಕಿನ ಬಗ್ಗೆ ಹಿಂದಿರುಗಿ ನೋಡಿದಾಗ ಎಲ್ಲ ನೆನಪಾಗುತ್ತಾ ಇದೆ. ಬಾಲ್ಯ, ಯವ್ವನ, ಕಾಲೇಜು ದಿನಗಳು, ಕುಟುಂಬ, ಮಕ್ಕಳು, ಗೆಳೆಯರು, ರಾಜಕೀಯ, ಅಧಿಕಾರ, ಸ್ಥಾನಮಾನ... ಎಲ್ಲ ನಿನ್ನೆ ಮೊನ್ನೆ ನಡೆದಂತೆ, ಕನಸಿನಂತೆ ಎಷ್ಟೊಂದು ಬೇಗ ಮುಗಿದುಹೋಯಿತು. ಅಧಿಕಾರದಲ್ಲಿದ್ದಾಗ, ಸ್ಥಾನಮಾನ ವಿದ್ದಾಗ ಹಿಂದೆ–ಮುಂದೆ ಎಷ್ಟೊಂದು ಜನ. ಕಾರ್ಯಕರ್ತರು, ಅಭಿಮಾನಿಗಳು, ಹಿತೈಷಿಗಳು, ಬೆಂಬಲಿಗರು, ಸಲಹೆ ಕೇಳುವವರು–ನೀಡುವವರು, ಮನವಿ ಸಲ್ಲಿಸುವವರು, ಕಷ್ಟ–ನಷ್ಟ ಹೇಳಿಕೊಂಡು ಬರುವವರು, ಸಹಾಯ ಕೇಳುವವರು – ನೀಡುವವರು; ಗಿಜಿಗುಡುತ್ತಿದ್ದ ಮನೆ–ಕಚೇರಿ, ಮಂತ್ರಿಗಳು, ಮುಖ್ಯಮಂತ್ರಿ, ಪ್ರಧಾನ ಮಂತ್ರಿಗಳಿಂದ, ಅತ್ಯುನ್ನತ ಸ್ಥಾನದಲ್ಲಿರುವ ಅಗ್ರಮಾನ್ಯರಿಂದ ದೂರವಾಣಿ ಕರೆಗಳು, ಭೇಟಿಗಳು, ದೇಶ–ವಿದೇಶಗಳ ಪ್ರಯಾಣ, ಕಾರ್ಯಕ್ರಮಗಳು... ದಿನದ 24 ಗಂಟೆಯೂ ಕೆಲಸ–ಕೆಲಸ. ಒಂದು ನಿಮಿಷದ ಬಿಡುವಿಲ್ಲ. ಜನರಿಗೆ ಏನಾದರೂ ಮಾಡಬೇಕು; ಸಮಾಜಕ್ಕೆ, ಸಮುದಾಯಕ್ಕೆ ಏನಾದರೂ ನೀಡಬೇಕು ಎಂಬ ತುಡಿತದಿಂದ ಆಯಾಸವೇ ಆಗುತ್ತಿರಲಿಲ್ಲ. ಮನೆ, ಮಡದಿ, ಮಕ್ಕಳು, ಊಟ–ತಿಂಡಿ ಯಾವುದರ ನೆನಪೂ ಆಗುತ್ತಿರಲಿಲ್ಲ. ಎಷ್ಟು ಮಾಡಿದರೂ ಕಡಿಮೆಯೇ ಎಂಬ ಭಾವನೆ. ಇನ್ನಷ್ಟು ಮಾಡಬೇಕು ಎಂಬ ತುಡಿತ. ಹೆಸರು, ಹಣ ಯಾವುದರ ಹಿಂದೆಯೂ ಬೀಳದೆ

ನಿಸ್ವಾರ್ಥವಾಗಿ, ಜಾತ್ಯತೀತವಾಗಿ ಬಹಳಷ್ಟು ದುಡಿದೆ. ಆದರೂ ನಾನು ಇನ್ನಷ್ಟು ಮಾಡಬಹುದಿತ್ತು. ಮಾಡಿದ್ದು ತುಂಬಾ ಕಡಿಮೆಯಾಯಿತು ಎಂಬ ಕೊರಗು ಒಳಗೊಳಗೆ ಇರಿಯುತ್ತಿದೆ. ಈ ಎಲ್ಲ ಗಡಿಬಿಡಿಯಲ್ಲಿ ಆಯುಷ್ಯ ಸವೆದದ್ದೇ ತಿಳಿಯಲಿಲ್ಲ.

ಜೊತೆಗಿದ್ದವರೆಲ್ಲ ಈಗ ಇಲ್ಲ. ಯಾವ ಅಧಿಕಾರವೂ ಇಲ್ಲ. ಕಾರ್ಯಕ್ರಮಗಳೂ ಇಲ್ಲ. ಒಮ್ಮೊಮ್ಮೆ ಒಂಟಿಯಾಗಿ ಕುಳಿತು ಯೋಚಿಸುತ್ತೇನೆ. ಜೊತೆಗಿದ್ದವರು, ಒಟ್ಟಿಗೆ ಓದಿದವರು, ಗೆಳೆಯರು, ಸಹೋದ್ಯೋಗಿಗಳು, ಒಡಹುಟ್ಟಿದವರು ಎಲ್ಲ ಒಬ್ಬೊಬ್ಬರೇ ಕಳೆದುಹೋಗುತ್ತಿದ್ದಾರೆ. ಬದುಕಿ ಉಳಿದಿರುವ ಕೆಲವರು ನಡೆದಾಡಲೂ ಸಾಧ್ಯವಾಗದೆ ಮನೆಯಿಂದಲೇ ಫೋನ್ ಮಾಡುತ್ತಾರೆ. “ಏನೋ ಮೊಹಿದೀನ್ ಹೇಗಿದ್ದಿ?” ಎಂದು ಕೇಳುವಾಗ ಕೆಲವು ಕ್ಷಣ ಮಾತು ಮೌನವಾಗುತ್ತದೆ. ಅನಂತರ ಬಹಳ ಹೊತ್ತು ಫೋನ್‌ನಲ್ಲೇ ಮಾತನಾಡುತ್ತೇವೆ. ಕಳೆದ ದಿನಗಳನ್ನು ಮೆಲುಕು ಹಾಕುತ್ತೇವೆ. ಗತಿಸಿಹೋದ ಗೆಳೆಯರನ್ನು ನೆನಪಿಸಿಕೊಳ್ಳುತ್ತೇವೆ. ಘಟಿಸಿದ ಕೆಲವು ಹಾಸ್ಯಘಟನೆಗಳನ್ನು ಹಂಚಿಕೊಂಡು ಎಳೆಮಕ್ಕಳಂತೆ ಮನತುಂಬಿ ನಗುತ್ತೇವೆ. ಒಂಟಿತನವನ್ನೂ ಮರೆಯುತ್ತೇವೆ. ಇದೆಲ್ಲ ಕೆಲವು ಕ್ಷಣಗಳು ಮಾತ್ರ. ಮತ್ತೆ ನೆನಪುಗಳು ಮುತ್ತತೊಡಗುತ್ತವೆ. ಆ ನೆನಪುಗಳಲ್ಲಿ ನನ್ನನ್ನು ಹೆಚ್ಚು ಹೆಚ್ಚು ಕಾಡುವುದು ನನ್ನ ಬಾಲ್ಯ.

ನಾನು ಹುಟ್ಟಿದ ದಿನಾಂಕ ನನಗೆ ಗೊತ್ತಿಲ್ಲ. ಅನಕ್ಷರಸ್ಥರಾಗಿದ್ದ ನನ್ನ ತಂದೆಯವರಿಗೂ ತಿಳಿದಿಲ್ಲ. ತಾಯಿಗೂ ನೆನಪಿಲ್ಲ. ನಾನು ಹುಟ್ಟಿದ್ದು ದಕ್ಷಿಣಕನ್ನಡ ಜಿಲ್ಲೆಯ ಬಜಪೆ ಬಳಿಯ ಒಂದು ಕುಗ್ರಾಮದಲ್ಲಿ. ಈ ಬಜಪೆ ಈಗ ಅಂತರ್‌ರಾಷ್ಟ್ರೀಯ ವಿಮಾನ ನಿಲ್ದಾಣ ದಿಂದಾಗಿ ಬಹಳ ಪ್ರಸಿದ್ಧಿ ಪಡೆದಿದೆ. ನಾನು ಹುಟ್ಟಿದ ಆ ಕುಗ್ರಾಮದ ಹೆಸರು ಪೇಜಾವರ. ಬ್ಯಾರಿ ಭಾಷೆಯಲ್ಲಿ ಆ ಗ್ರಾಮಕ್ಕೆ ‘ಪ್ಯಾರ’ ಎಂದು ಹೇಳುತ್ತಾರೆ. ಇಲ್ಲೊಂದು ಪೇಜಾವರ ಮಠ ಇದೆ. ಇದಕ್ಕೂ ಉಡುಪಿಯ ಪೇಜಾವರ ಮಠಕ್ಕೂ ಸಂಬಂಧವಿದೆಯಂತೆ. ಅಲ್ಲಿ ನಮ್ಮ ತಾಯಿಯ ಅಜ್ಜಿಯ ಮನೆಯಿತ್ತು. ನಮ್ಮ ತಾಯಿಯ ತಾಯಿ–ಅಜ್ಜಿ ಹುಟ್ಟಿದ್ದು ಅದೇ ಮನೆಯಲ್ಲಿ. ಆ ಮನೆಯಲ್ಲಿಯೇ ನನ್ನ ಅಜ್ಜಿಗೆ ಮದುವೆಯಾಯಿತಂತೆ. ಅಲ್ಲೇ ಪಕ್ಕದ ಅಡ್ಡೂರು ಬಳಿಯ ಸಂಗಬೆಟ್ಟು ಎಂಬ ಗ್ರಾಮಕ್ಕೆ ಅವರನ್ನು ಮದುವೆ ಮಾಡಿಕೊಟ್ಟದ್ದು.

ಅಜ್ಜ ಅಡ್ಡೂರಿನ ಒಬ್ಬ ದೊಡ್ಡ ಅಕ್ಕಿ ವ್ಯಾಪಾರಿ. ಆಗ ಮಂಗಳೂರಿಗೆ ದೋಣಿಗಳಲ್ಲಿ ಅಕ್ಕಿ ಸಾಗಿಸುತ್ತಾ ಇದ್ದರಂತೆ. ಒಂದು ಊರಿಂದ ಮತ್ತೊಂದು ಊರಿಗೆ ಸಂಪರ್ಕ ಎಂದರೆ ನದಿಗಳ ಮೂಲಕ. ಆಗ ಹೆಚ್ಚಿನ ದೊಡ್ಡ ದೊಡ್ಡ ಮನೆಗಳೆಲ್ಲ ನದಿಕಿನಾರೆಯಲ್ಲೇ ಇರುತ್ತಿತ್ತು.

ನನ್ನ ತಾಯಿಯ ಅಜ್ಜ ಒಬ್ಬ ಬೇಸಾಯಗಾರ. ಹುಸೈನ್ ಬ್ಯಾರಿ ಅಂತ ಅವರ ಹೆಸರು. ಅವರ ಮಗಳು ನನ್ನ ಅಜ್ಜಿ. ತಾಯಿ ಹುಟ್ಟುವುದಕ್ಕಿಂತ ಮುಂಚೆ ನನ್ನ ಈ ಅಜ್ಜಿ ಅಜ್ಜನ ಮನೆಯಲ್ಲಿ ಅಂದರೆ ಹುಸೈನ್ ಬ್ಯಾರಿಯವರ ಮನೆಯಲ್ಲಿ ವಾಸವಾಗಿದ್ದರು. ಅನಂತರ ಅಜ್ಜ ತೀರಿಕೊಂಡರು. ನನ್ನ ತಾಯಿ, ತಾಯಿಯ ತಂಗಿ, ಇಬ್ಬರು ಅಣ್ಣಂದಿರು ಆ ಮನೆಯಲ್ಲಿಯೇ ಉಳಿದರು.

ಗಂಡ ಸತ್ತರೆ ಸಾಮಾನ್ಯವಾಗಿ ಹೆಣ್ಣುಮಕ್ಕಳು ಅವರ ತವರುಮನೆಗೆ ಹೋಗುವುದು ಆಗಿನ ಸಂಪ್ರದಾಯ. ಹಾಗೆ ನನ್ನ ಅಜ್ಜಿ ಪೇಜಾವರಕ್ಕೆ ಬಂದು ಅಲ್ಲಿಯೇ ಉಳಿದುಬಿಟ್ಟರು. ನನ್ನ ತಾಯಿಯೂ ಅದೇ ಮನೆಯಲ್ಲಿ ಬೆಳೆದರು. ನನ್ನ ತಾಯಿಯ ಹೆಸರು ಹಲೀಮಮ್ಮ. ಅವರು ಬಹಳ ಸುಂದರಿಯಾಗಿದ್ದರು. ಆದರೂ ಅವರಲ್ಲಿ ಒಂದು ಊನವಿತ್ತು. ಅವರ ಒಂದು ಕೈ ಚಿಕ್ಕದಾಗಿತ್ತು. ಈಗಿನ ಆಧುನಿಕ ಲೆಕ್ಕದಲ್ಲಿ ಹೇಳುವುದಾದರೆ ಅವರು ಶೇಕಡಾ 25 ಅಂಗವಿಕಲೆ. ಆದರೆ ಅವರು ಅದನ್ನೆಂದೂ ತೋರಿಸಿಕೊಂಡವರಲ್ಲ. ಹಾಗೆ ನನ್ನ ತಾಯಿ ಬೆಳೆದರು. ಆಗ ಅವರ ಪೋಷಣೆ ಮಾಡುತ್ತಿದ್ದುದು ಅವರ ಮಾವಂದಿರು ಅಂದರೆ ನನ್ನ ಅಜ್ಜಿಯ ತಮ್ಮಂದಿರು. ಅವರು ಕಂಟ್ರಾಕ್ಟ್ ಕೆಲಸ ಮಾಡಿಕೊಂಡಿದ್ದರು. ಅವರು ತಾಯಿಯನ್ನು ನನ್ನ ತಂದೆಗೆ ಮದುವೆ ಮಾಡಿಕೊಟ್ಟರು.

ನನ್ನ ತಂದೆ ಒಬ್ಬ ಸಾಮಾನ್ಯ ವ್ಯಕ್ತಿ. ಪಾಲದಕಟ್ಟೆ ಎಂಬ ಪ್ರದೇಶದಲ್ಲಿ ಅವರು ಒಂದು ಪುಟ್ಟ ಗೂಡಂಗಡಿ ಇಟ್ಟುಕೊಂಡಿದ್ದರು. 'ಪಾಲದಕಟ್ಟೆ' ಎಂದರೆ ಈಗಿನ ಬಜಪೆ. ಆ ಕಾಲದಲ್ಲಿ ಅಲ್ಲಿಗೆ ಪಾಲದಕಟ್ಟೆ ಎಂದು ಕರೆಯುತ್ತಿದ್ದರು. ಯಾಕೆಂದರೆ ಅಲ್ಲಿ ಆಗ ದೊಡ್ಡ ಗಾತ್ರದ ಒಂದು ಪಾಲದ ಮರವಿತ್ತು. ಆ ಮರದ ಅಡಿಯಲ್ಲಿ ಬಹಳಷ್ಟು ವ್ಯಾಪಾರ ಚಟುವಟಿಕೆಗಳು ನಡೆಯುತ್ತಿತ್ತು. ಅಲ್ಲಿಗೆ ಬರುವವರಲ್ಲಿ ಯಾರಾದರೂ 'ಯಾವ ಕಡೆ ಹೋಗ್ತಾ ಇದ್ದೀರಿ' ಎಂದು ಕೇಳಿದರೆ 'ಪಾಲದಕಟ್ಟೆವರೆಗೆ ಹೋಗಿಬರುತ್ತೇನೆ' ಎನ್ನುತ್ತಿದ್ದರು. ಬಜಪೆ ಎಂಬ ಹೆಸರೇ ಆಗ ನಾನು ಕೇಳಿರಲಿಲ್ಲ. ಆ ಪಾಲದ ಕಟ್ಟೆಯಲ್ಲಿ ನರಸಿಂಹ ಶಾನುಭೋಗ ಎಂಬವರ ದೊಡ್ಡ ದಿನಸಿ ಅಂಗಡಿಯಿತ್ತು. ಆ ಅಂಗಡಿಯ ಬದಿಯಲ್ಲಿಯೇ ಒಂದು ಚಿಕ್ಕ ಗೂಡಂಗಡಿ ನನ್ನ ತಂದೆಯದ್ದು.

ನನ್ನ ತಂದೆಯವರು ಅಂಗಡಿ ವ್ಯಾಪಾರದ ಜೊತೆಗೆ ಬೀಡಿ ಕಟ್ಟುತ್ತಿದ್ದರು. ಅದು ಅವರ ಸ್ವಂತ ಬೀಡಿ. ಜನರು ಆಗ ಬಯಸುತ್ತಿದ್ದುದು ಅವರು ಕಟ್ಟಿದ ಬೀಡಿಯನ್ನೇ. 'ಅಬ್ದುಲ್ ಖಾದರ್ ಬ್ಯಾರಿ ಕಟ್ಟಿದ ಬೀಡಿ ಇದ್ದರೆ ಕೊಡಿ' ಎಂದು ಆಗಿನ ಕಾಲದ ಜನ ಕೇಳುತ್ತಾ ಇದ್ದರು. ಅಬ್ದುಲ್ ಖಾದರ್ ಬ್ಯಾರಿ ನನ್ನ ತಂದೆಯ ಹೆಸರು. ಅವರು ಸ್ವಂತ ಕಟ್ಟಿದ ಬೀಡಿಗೆ ಆಗ ಬಹಳ ಬೇಡಿಕೆ. ಜಾತ್ರೆ, ಯಕ್ಷಗಾನ, ಕೋಲ, ಉರೂಸ್ ಮುಂತಾದ ಕಾರ್ಯಕ್ರಮಗಳು ನಡೆಯುವಾಗ ತಂದೆ ಅವರ ತಮ್ಮಂದಿರನ್ನು ಸೇರಿಸಿಕೊಂಡು ಅಲ್ಲಿ ವ್ಯಾಪಾರ ಮಾಡುತ್ತಿದ್ದರು. ವ್ಯಾಪಾರ ಅಂದರೆ ಒಂದು ಮೇಜು, ಬೆಂಚು ಹಾಕಿ ಸಂತೆ ವ್ಯಾಪಾರ.

ನಾನು ಹುಟ್ಟಿದ್ದು ರಬೀವುಲ್ ಅವ್ವಲ್ ತಿಂಗಳಲ್ಲಿ ಎಂದು ನನ್ನ ತಾಯಿ ಹೇಳುತ್ತಾ ಇದ್ದರು. ಈ ರಬೀವುಲ್ ಅವ್ವಲ್ ತಿಂಗಳು ಎಂದರೆ ಪ್ರವಾದಿ ಮುಹಮ್ಮದ್ (ಸ) ಅವರು ಹುಟ್ಟಿದ ತಿಂಗಳು. ನಮ್ಮಲ್ಲಿ ಆಗ ಹೇಗಿತ್ತು ಎಂದರೆ ಈ ರಮಝಾನ್, ಬಕ್ರೀದ್, ಮೀಲಾದುನ್ನಬಿ ಹಬ್ಬಗಳೆಲ್ಲ ಬರುತ್ತವಲ್ಲ, ಆ ತಿಂಗಳಲ್ಲಿ ಹುಟ್ಟಿದರೆ ಹಿಜರಿ ಇಂತಹ ತಿಂಗಳಲ್ಲಿ ಹುಟ್ಟಿದ್ದು ಎಂದು ಮಾತ್ರ ಅವರಿಗೆ ನೆನಪಿರುತ್ತಾ ಇತ್ತು. ನನ್ನ ತಂದೆಯವರಿಗೂ ನಾನು ಹುಟ್ಟಿದ್ದು 1937 ಅಥವಾ 1938 ಎಂಬ ನೆನಪಿನ ಬಗ್ಗೆ

ಗೊಂದಲವಿತ್ತು. ಶಾಲೆಯಲ್ಲಿ ತಂದೆಯವರು ದಿನಾಂಕ 5–6–1938 ಎಂದು ಬರೆಸಿದ್ದಾರೆ.

ಪ್ಯಾರಾದಲ್ಲಿ ನನ್ನ ಅಜ್ಜ ಹುಸೈನ್ ಬ್ಯಾರಿಯದ್ದು ದೊಡ್ಡ ಹಂಚಿನ ಮನೆ. ಆ ಮನೆಯಿಂದ ನನ್ನ ತಾಯಿ ಮದುವೆಯಾಗಿ ಬಜಪೆಗೆ ಬಂದರು. ನನ್ನ ತಂದೆಯದ್ದು ಒಂದು ಪುಟ್ಟ ಮುಳಿಹುಲ್ಲಿನ ಮನೆ. ಅವರಿಗೆ ತಮ್ಮದೇ ಆದ ಸ್ವಂತ ಭೂಮಿ ಇರಲಿಲ್ಲ. ಆ ಮುಳಿಹುಲ್ಲಿನ ಮನೆಯಲ್ಲಿ ನಾವು ಬೆಳೆದೆವು. ನಾನು ಹುಟ್ಟಿದಾಗ ಬಹಳ ಸುಂದರ ವಾಗಿದ್ದೆ, ಎಲ್ಲರೂ ನನ್ನ ಸೌಂದರ್ಯವನ್ನು ಹೊಗಳುತ್ತಿದ್ದರು, ಎತ್ತಿಕೊಂಡು ಮುದ್ದಾಡುತ್ತಿದ್ದರು, ಎತ್ತಿಕೊಂಡರೆ ಕೆಳಗಿಡುತ್ತಿರಲಿಲ್ಲ ಎಂದು ತಾಯಿ ಹೇಳುತ್ತಿದ್ದರು. ನಮ್ಮ ಮನೆಯಲ್ಲಿ ಆಗ ಹೆಚ್ಚು ಮಕ್ಕಳಿರಲಿಲ್ಲ. ಹಾಗಾಗಿ ಎಲ್ಲರೂ ನನ್ನನ್ನು ಪ್ರೀತಿಸುತ್ತಿದ್ದರು. ಮುದ್ದು ಮಾಡುತ್ತಿದ್ದರಂತೆ.

ಕಳ್ಳು ತೆಗೆಯುವ ಕೆಲವರು ನಮ್ಮ ಮನೆಯ ಬಳಿಯೇ ವಾಸವಾಗಿದ್ದರು. ಅವರು ಬೆಳಗ್ಗಿನ ಜಾವ ಎದ್ದು ಕಳ್ಳು ಇಳಿಸಿ ತಂದು ನಮ್ಮ ಮನೆಯ ಬಳಿಯ ಹಟ್ಟಿಯಲ್ಲಿಡುತ್ತಿದ್ದರು. ಪುಟ್ಟ ಮಗುವಿರುವಾಗ ನಾನೊಮ್ಮೆ ಯಾರಿಗೂ ತಿಳಿಯದಂತೆ ಹಟ್ಟಿಗೆ ಹೋದವನು ಆ ಮಡಕೆಯಿಂದ ಕಳ್ಳು ತೆಗೆದು ಕುಡಿದಿದ್ದೆ ಎಂದು ಅಮ್ಮ ಹೇಳುತ್ತಿದ್ದರು. ಅಮ್ಮ ಬಂದು ನೋಡಿದಾಗ ನಾನು ನಶೆ ಏರಿದವನಂತೆ ಅಮ್ಮನನ್ನು ನೋಡಿ ಕಟಕಟಾಂತ ನಗುತ್ತಿದ್ದೆನಂತೆ. ಅಮ್ಮನಿಗೆ ಆಶ್ಚರ್ಯದ ಜೊತೆ ಗಾಬರಿಯೂ ಆಗಿತ್ತಂತೆ. ಅಂದಿನ ಕಾಲದಲ್ಲಿ ಆರೋಗ್ಯದ ದೃಷ್ಟಿಯಿಂದ ಮಕ್ಕಳಿಗೆ 'ನೀರಾ' ಕುಡಿಸುತ್ತಿದ್ದರಂತೆ.

ಆಗ ನಮ್ಮ ಮಸೀದಿ ಇದ್ದದ್ದು ಪ್ಯಾರಾದಲ್ಲಿ. ಆ ಮಸೀದಿಯಲ್ಲಿ ಹಾಜಾರ್ ಬೋಬಾರ ದರ್ಗಾ ಇತ್ತು. ಪ್ರತೀ ವರ್ಷ ಅಲ್ಲಿ ಉರೂಸು ನಡೆಯುತ್ತಾ ಇತ್ತು. ನನ್ನ ತಾಯಿಗೆ ಈ ದರ್ಗಾದ ಮೇಲೆ ಬಹಳ ನಂಬಿಕೆ. ಜಾತಿ–ಭೇದವಿಲ್ಲದೆ ಊರು–ಪರವೂರ ಜನರು ಆ ದರ್ಗಾಕ್ಕೆ ಬರುತ್ತಿದ್ದರು. ಗಂಡಸರಿಗಿಂತ ಹೆಂಗಸರೇ ಹೆಚ್ಚಾಗಿ ಬರುತ್ತಿದ್ದುದು. ಏಕೆಂದರೆ ತಾಯಂದಿರು ಮಗುವನ್ನು ಹುಟ್ಟಿದ ಕೆಲವೇ ದಿನಗಳಲ್ಲಿ ತಂದು ಆ ದರ್ಗಾದ ಬುಡದಲ್ಲಿ ಮಲಗಿಸುತ್ತಿದ್ದರು. ಇದರಿಂದ ಮಕ್ಕಳಿಗೆ ಒಳ್ಳೆಯದಾಗುತ್ತದೆ ಎಂಬ ನಂಬಿಕೆ. ಅದೇ ರೀತಿ ಮಕ್ಕಳಿಗೆ ಕಾಯಿಲೆಗಳು ಬಂದರೆ ತಂದು ದರ್ಗಾದ ಬುಡದಲ್ಲಿ ಮಲಗಿಸುತ್ತಿದ್ದುದು ಸಾಮಾನ್ಯವಾಗಿತ್ತು. ಮಹಿಳೆಯರಿಗೆ ಆ ದರ್ಗಾದ ಮೇಲೆ ಅಷ್ಟೊಂದು ನಂಬಿಕೆ ಎಂದು ತಾಯಿ ಆಗಾಗ ಹೇಳುತ್ತಿದ್ದರು. ಈ ಹಾಜಾರ್ ಬೋಬ ಆಗಿನ ಕಾಲದಲ್ಲಿ ನಡೆದುಕೊಂಡೇ ಹೋಗಿ ಏಳು ಬಾರಿ ಹಜ್‌ಯಾತ್ರೆ ಮಾಡಿದ್ದರು ಎಂಬ ಪ್ರತೀತಿ ಇತ್ತು. ನಾನು ಹುಟ್ಟಿದಾಗ ನನ್ನನ್ನೂ ಕೊಂಡುಹೋಗಿ ತಾಯಿ ಆ ದರ್ಗಾದ ಬುಡದಲ್ಲಿ ಮಲಗಿಸಿದ್ದರಂತೆ. ಆಗ ತಾಯಿ ಬಜಪೆಯಿಂದ ಪ್ಯಾರಾಕ್ಕೆ ನಡೆದುಕೊಂಡೇ ಹೋಗುತ್ತಿದ್ದರು. ಬೇರೆ ಸಂಚಾರ ವ್ಯವಸ್ಥೆ ಇರಲಿಲ್ಲ.

ಅನಂತರ ತಂದೆಯವರು ಭವಿಷ್ಯದ ದೃಷ್ಟಿಯಿಂದ ಇಲ್ಲಿಂದ ಗಟ್ಟಕ್ಕೆ ಅಂದರೆ ಚಿಕ್ಕಮಗಳೂರಿಗೆ ಹೋದರು. ಮಕ್ಕಳು ದೊಡ್ಡವರಾಗುತ್ತಿದ್ದಂತೆಯೇ ಇಲ್ಲಿಯ ಗೂಡಂಗಡಿಯ ಆದಾಯ ಸಾಕಾಗುತ್ತಿರಲಿಲ್ಲ. ಗಟ್ಟಕ್ಕೆ ಹೋದ ಮೇಲೆ ಜೀವಿಸುವುದಕ್ಕಾಗಿ

ಅವರು ಒಂದು ದೊಡ್ಡ ಹೋರಾಟವನ್ನೇ ನಡೆಸಿದರು. ಅಲ್ಲಿ ಒಂದು ಹೊಟೇಲ್ ಮಾಡಿದರು. ಆ ಜಾಗದಲ್ಲಿ ಯಾರೂ ಹೊಟೇಲ್ ಮಾಡುತ್ತಿರಲಿಲ್ಲ. ಯಾಕೆಂದರೆ ಅಲ್ಲಿ ಭೂತದ ಕಾಟ ಇದೆ ಎಂದು ಎಲ್ಲರೂ ಹೆದರುತ್ತಿದ್ದರು. ಅಲ್ಲಿ ಹಿಂದೆ ಹೊಟೇಲ್ ಮಾಡಿದವರಿಗೆ ಭೂತ ಕಾಟ ಕೊಡುತ್ತಿತ್ತಂತೆ. ಅಡುಗೆ ಮಾಡಿಟ್ಟರೆ ಅದಕ್ಕೆ ಏನೇನೋ ವಸ್ತುಗಳನ್ನು ತಂದು ಹಾಕಿ ಅಡುಗೆಯನ್ನು ಹಾಳು ಮಾಡುತ್ತಿತ್ತಂತೆ. ಇದರಿಂದ ಹೊಟೇಲಿನವರು ತುಂಬಾ ನಷ್ಟ ಅನುಭವಿಸುತ್ತಿದ್ದರು ಎಂದು ಅಲ್ಲಿ ಆಗ ಪ್ರಚಾರದಲ್ಲಿತ್ತು. ಇದೆಲ್ಲ ಗೊತ್ತಿದ್ದೂ ತಂದೆಯವರು ಅಲ್ಲಿ ಹೊಟೇಲ್ ತೆರೆದರು.

ಚಿಕ್ಕಮಗಳೂರಿನಲ್ಲಿ ಆಗ ಪ್ಲೇಗ್‌ನ ಹಾವಳಿ ತುಂಬಾ ಜೋರಾಗಿತ್ತು. ಈ ಮಾರಕ ರೋಗದಿಂದ ಅದೆಷ್ಟೋ ಮಕ್ಕಳು, ಮಹಿಳೆಯರು ಸಾಯುತ್ತಿದ್ದರು. ನಮ್ಮ ಈ ಹೊಟೇಲ್‌ನಲ್ಲೂ ಆಗ ಇಲಿಗಳು ಸತ್ತುಬಿದ್ದದ್ದೂ ಇದೆ. ಇಂತಹ ಸ್ಥಿತಿಯಲ್ಲಿ ತಂದೆಯವರು ಬಹಳ ಕಷ್ಟದಿಂದ ಹೊಟೇಲನ್ನು ಹೇಗೋ ನಡೆಸಿಕೊಂಡು ಹೋದರು. ಆ ಹೊಟೇಲಲ್ಲಿ ತಂದೆಯವರಿಗೆ ಯಾವ ಭೂತದ ಕಾಟವೂ ಕಾಡಲಿಲ್ಲ. 'ಇಸ್ಲಾಮಿಯಾ ಹೊಟೇಲ್' ಎಂದು ಅದರ ಹೆಸರು. ಮುಂದೆ ಆ ಹೊಟೇಲ್ ಬಹಳ ಪ್ರಸಿದ್ಧಿ ಪಡೆಯಿತು. ಮಾತ್ರವಲ್ಲ ವ್ಯಾಪಾರದ ಒಂದು ಕೇಂದ್ರವಾಯಿತು.

ಚಿಕ್ಕಮಗಳೂರಿನಲ್ಲಿ ಆಗ ಹಿಂದಿ ಸಿನೆಮಾಗಳ ಚಿತ್ರೀಕರಣಗಳು ಬಹಳಷ್ಟು ನಡೆಯುತ್ತಿತ್ತು. ಆಗ ಆ ಇಡೀ ಜಿಲ್ಲೆ ಅಷ್ಟೊಂದು ಪ್ರಕೃತಿ ಸೌಂದರ್ಯದಿಂದ ಕೂಡಿತ್ತು. ಹೀಗೆ ಚಿತ್ರೀಕರಣಕ್ಕೆ ಬಂದವರು ಹೆಚ್ಚಾಗಿ ಊಟ-ತಿಂಡಿಗೆ ನಮ್ಮ ಹೊಟೇಲ್‌ಗೆ ಬರುತ್ತಿದ್ದರು. ದಿಲೀಪ್‌ಕುಮಾರ್, ರಾಜ್‌ಕಪೂರ್, ನರ್ಗೀಸ್ ಮುಂತಾದ ಪ್ರಖ್ಯಾತ ಸಿನೆಮಾ ನಟರು ನಮ್ಮ ಹೊಟೇಲ್‌ಗೆ ಬಂದು ಬಿರಿಯಾನಿ ತಿಂದು ಹೋಗಿದ್ದಾರೆ. ನಮ್ಮ ಹೊಟೇಲ್‌ನ ಬಿರಿಯಾನಿ ಬಹಳ ಜನಪ್ರಿಯ. ಈ ಬಿರಿಯಾನಿ ತಿನ್ನಲು ಎಲ್ಲೆಲ್ಲಿಂದಲೋ ಜನ ಬರುತ್ತಿದ್ದರು. ಈ ರೀತಿ ಸಿನೆಮಾ ನಟರು ಬಂದಾಗ ಹೊಟೇಲ್‌ನ ಮುಂದೆ ಬಹಳ ಜನ ಸೇರುತ್ತಿದ್ದರು.

ತಂದೆಯವರು ವರ್ಷದಲ್ಲಿ ಎರಡು ಮೂರು ಸಲ ಊರಿಗೆ ಬಂದು ಹೋಗುತ್ತಾ ಇದ್ದರು. ಆಗ ಗಟ್ಟದಿಂದ ಊರಿಗೆ ಬರುವುದೆಂದರೆ ಈಗ ಗಲ್ಫ್‌ನಿಂದ ಬರುತ್ತಾರಲ್ಲ ಹಾಗೆ. ಒಳ್ಳೆಯ ಬಟ್ಟೆ, ಕೋಟು ಎಲ್ಲ ಹಾಕಿಕೊಂಡು ಟೋಪಿ ಧರಿಸಿಕೊಂಡು ಕಿಸೆ ತುಂಬಾ ದುಡ್ಡು ಇಟ್ಟುಕೊಂಡು ಬರುತ್ತಿದ್ದರು. ಆ ಟೋಪಿಗೆ 'ಪೇಸ್‌ಟೋಪಿ' ಎಂದು ಹೆಸರು.

ಬಜಪೆಯಲ್ಲಿ ಗುತ್ತು ಜಕ್ರಿಬ್ಯಾರಿ ಅಂತ ಒಬ್ಬರು ಇದ್ದರು. ಅವರು ಬಹಳ ದೊಡ್ಡ ಜಮೀನ್ದಾರರು. ಜನಪ್ರಿಯ ವ್ಯಕ್ತಿ. ಕೊಂಚಾರ್‌ನ ಮ್ಯೊದಿನ್ ಬ್ಯಾರಿ ಜಕ್ರಿ ಬ್ಯಾರಿಯ ದಾಯಾದಿ. ಮ್ಯೊದಿನ್ ಬ್ಯಾರಿ ದೊಡ್ಡ ಕಂಟ್ರಾಕ್ಟರ್. ಒಮ್ಮೆ ಈ ಜಕ್ರಿ ಬ್ಯಾರಿಗೂ ಮ್ಯೊದಿನ್ ಬ್ಯಾರಿಗೂ ಮನಸ್ತಾಪವಾಯಿತು. ಕೊಂಚಾರ್ ಬಜಪೆ ಹತ್ತಿರ ಒಂದು ಮಸೀದಿ ಇತ್ತು. ಆ ಮಸೀದಿಗೆ ಪಾಲದಕಟ್ಟೆಯ ಮುಸ್ಲಿಮರು ಪ್ರಾರ್ಥನೆಗೆ ಹೋಗುತ್ತಿದ್ದರು.

ಒಂದು ದಿನ ಜಕ್ರಿ ಬ್ಯಾರಿ ಕೊಂಚಾರ್‌ನ ಮಸೀದಿ ನನ್ನದು, ಅದರಲ್ಲಿ ಯಾರಿಗೂ ಹಕ್ಕಿಲ್ಲ ಎಂದು ಘೋಷಿಸಿದರು. ಈ ವಿಷಯ ತಿಳಿದ ಒಬ್ಬರು ಈಗಿನ ಬಜ್ಪೆ ಮಸೀದಿ ಇದೆಯಲ್ಲ ಅಲ್ಲಿಯೇ 50 ಸೆಂಟ್ಸ್ ಜಾಗ ದಾನ ಕೊಟ್ಟರು. ಅವರನ್ನು ಗರ್ನಲ್ ಸಾಹೇಬ್ ಎಂದು ಕರೆಯುತ್ತಿದ್ದರು. ಅವರು ಸಿಡಿಮದ್ದುಗಳನ್ನು ತಯಾರಿಸುತ್ತಿದ್ದರು. ಹನಫಿ ಮುಸ್ಲಿಂ ಆಗಿರುವ ಅವರ ನಿಜವಾದ ಹೆಸರು ಫಕೀರ್ ಸಾಬ್. ಬಜಪೆಯಲ್ಲಿ ಹೆಚ್ಚಿನ ಜಾಗ ಎಲ್ಲ ಆಗ ಅವರದ್ದೇ ಆಗಿತ್ತು. ಆಗ ಮ್ಯೊದಿನ್ ಬ್ಯಾರಿ ಅವರ ಅಳಿಯ, ನನ್ನ ತಾಯಿಯ ಮಾವ, ಮತ್ತಿತರರೆಲ್ಲ ಸೇರಿ ಆ ಜಾಗದಲ್ಲಿ ಒಂದು ಮಸೀದಿ ಕಟ್ಟಿಸಿದರು. ಅದರ ಉದ್ಘಾಟನೆಯೂ ಆಯಿತು.

ಆಗ ನಾನು ಚಿಕ್ಕ ಹುಡುಗ. ಆ ಮಸೀದಿಯಲ್ಲಿ ಒಂದು ಮದ್ರಸವೂ ನಿರ್ಮಾಣ ವಾಯಿತು. ಆ ಮದ್ರಸದಲ್ಲಿ ನನಗೆ ಗುರುಗಳಾಗಿದ್ದವರು ಅಬ್ದುಲ್ ರಹ್‌ಮಾನ್ ಮುಸ್ಲಿಯಾರ್ ಅಂತ. ಅವರು ಬಿಡುವಿನ ವೇಳೆಯಲ್ಲಿ ಸೆಂಟ್ (ಅತ್ತರ್)ನ ವ್ಯಾಪಾರವನ್ನೂ ಮಾಡುತ್ತಿದ್ದರು. ಅವರು ಗಿಳಿಯ ಗೂಡಿನಂತಹ ಗಾಜಿನ ಚೌಕಟ್ಟು ಇರುವ ಪುಟ್ಟ ಮರದ ಪೆಟ್ಟಿಗೆಯಲ್ಲಿ ವಿವಿಧ ಸುವಾಸನೆಯ ಸೆಂಟು, ಸುರ್ಮಾ ಇಟ್ಟುಕೊಂಡು ಮನೆ, ಅಂಗಡಿ, ಮಸೀದಿಗಳಿಗೆ ಹೋಗಿ ಮಾರಾಟ ಮಾಡುತ್ತಿದ್ದರು. ಪುಟ್ಟ ಪುಟ್ಟ ಅತ್ತರ್ ಬಾಟಲಿಗಳು ತುಂಬಿದ ಆ ಪೆಟ್ಟಿಗೆ ನೋಡಲು ಬಹಳ ಆಕರ್ಷಕವಾಗಿ ಕಾಣುತ್ತಿತ್ತು. ಸುರ್ಮಾ ಎಂದರೆ ಗಂಡಸರು ಕಣ್ಣಿಗೆ ಹಾಕುವ ಕಾಡಿಗೆ. ಬೆರಳಿನಷ್ಟು ಉದ್ದ ಇರುವ ಸಪೂರದ ಸೀಸದ ಕಡ್ಡಿಯನ್ನು ಸುರ್ಮಾದ ಪುಟ್ಟ ಬಾಟಲಿಯೊಳಗೆ ಹಾಕಿ ತೆಗೆದು ಕಣ್ಣಿನ ರೆಪ್ಪೆಗಳ ನಡುವೆ ಇಟ್ಟು ಮೆಲ್ಲನೆ ಎಳೆಯುವುದು. ಆಗ ಆ ಕಡ್ಡಿಯಲ್ಲಿರುವ ಸುರ್ಮಾ ರೆಪ್ಪೆಗಳಿಗೆ ಅಂಟಿಕೊಳ್ಳುತ್ತವೆ. ಸುರ್ಮಾ ಹಾಕಿದರೆ ಕಣ್ಣುಗಳು ಬಹಳ ಆಕರ್ಷಕವಾಗಿ ಕಾಣುತ್ತವೆ ಮತ್ತು ಅದು ಕಣ್ಣಿಗೆ ಬಹಳ ತಂಪು ಎಂದು ಹೇಳುತ್ತಿದ್ದರು. ಆದರೆ ಕೆಲವು ಕ್ಷಣ ಕಣ್ಣುಗಳು ಬಹಳ ಉರಿಯುತ್ತಿತ್ತು. ಹಾಗೆಯೇ ಅತ್ತರನ್ನು ಹತ್ತಿಗೆ ತಾಗಿಸಿ ಅದನ್ನು ಚಿಕ್ಕ ಉಂಡೆ ಮಾಡಿ ಕಿವಿಗೆ ಇಡುತ್ತಿದ್ದರು ಮತ್ತು ಬಟ್ಟೆಗೆ ಸವರುತ್ತಿದ್ದರು. ಹೀಗೆ ಅತ್ತರು, ಸುರ್ಮಾ ಹಾಕಿದರೆ ಅವರು ದುಡ್ಡು ತೆಗೆದುಕೊಳ್ಳುತ್ತಿರಲಿಲ್ಲ. ಇದು ಸ್ಯಾಂಪಲ್. ಪುಟ್ಟ ಬಾಟಲ್ ತೆಗೆದುಕೊಂಡರೆ ಮಾತ್ರ ದುಡ್ಡು ತೆಗೆದುಕೊಳ್ಳುತ್ತಿದ್ದರು. ಕೆಲವರು ಖರೀದಿಸದಿದ್ದರೂ ಸೆಂಟ್, ಸುರ್ಮಾ ಹಾಕಿಸಿಕೊಂಡು ಗುರುಗಳಿಗೆ ದುಡ್ಡು ಕೊಡುತ್ತಿದ್ದರು. ಈ ಅಬ್ದುಲ್ ರಹ್‌ಮಾನ್ ಮುಸ್ಲಿಯಾರ್ ಈ ಹೊಸ ಮಸೀದಿಯ ಮೊದಲ ಇಮಾಮ್. ನನಗೆ 'ಅಲಿಫ್–ಬ–ತ' ಹೇಳಿಕೊಟ್ಟ ಮೊದಲ ಧಾರ್ಮಿಕ ಗುರುಗಳು ಇವರೇ.

ಈ ಮಸೀದಿಗೆ ಅನಂತರ ಲಕ್ಷದ್ವೀಪದಿಂದ ಒಬ್ಬ ಕೋಯಾ ಗುರುಗಳಾಗಿ ಬಂದರು. ಅವರು ಮಸೀದಿಯಲ್ಲಿ ದೀಪ ಉರಿಸಲು ಎಣ್ಣೆಗಾಗಿ ಮನೆ ಮನೆಗೆ ಕುತ್ತಿ (ತಾಮ್ರದ ಪಾತ್ರೆ) ಹಿಡಿದುಕೊಂಡು ಬರುತ್ತಿದ್ದರು. ಆಗ ಕರೆಂಟು ಇರಲಿಲ್ಲ. ಮಸೀದಿಗಳಲ್ಲಿ ತೂಗುದೀಪ, ಕಾಲುದೀಪಗಳಂತಹ ದೀಪಗಳಿರುತ್ತಿತ್ತು. ಅದಕ್ಕೆ ಎಣ್ಣೆ ಹಾಕಿ ಬತ್ತಿ ಇಟ್ಟು

ದೀಪ ಉರಿಸುತ್ತಿದ್ದರು. ಮಸೀದಿಯಲ್ಲಿ ಸೀಮೆಎಣ್ಣೆ ದೀಪಗಳು ಇರುತ್ತಿರಲಿಲ್ಲ. ಮನೆಗೆ ಎಣ್ಣೆಗೆ ಬಂದಾಗ ಆ ಕುತ್ತಿಗೆ ಕೆಲವರು ಮುಕ್ಕಾಲು (ನಾಣ್ಯ) ಹಾಕುತ್ತಿದ್ದರು. ಕಷ್ಟಕಾಲದಲ್ಲಿ ಮಸೀದಿಗೆ ಎಣ್ಣೆ ಕೊಡುತ್ತೇನೆ ಎಂದು ಹರಕೆ ಹೇಳಿಕೊಳ್ಳುವವರೂ ಇದ್ದರು. ಹಾಗೆ ಎಣ್ಣೆ ಪಡೆಯಲು ಬಂದ ಕೋಯಾ ಮನೆಯಲ್ಲಿ ತೌಬಾ (ಪ್ರಾರ್ಥನೆ) ಹೇಳಿಕೊಡುತ್ತಿದ್ದರು. ತೌಬಾ ಹೇಳಿಕೊಡುತ್ತಿರುವಾಗ ಕೆಲವು ಮಹಿಳೆಯರು ಅಳುತ್ತಿದ್ದುದನ್ನು ನಾನು ಕಂಡಿದ್ದೇನೆ.

ಮಳೆಗಾಲ ಬಂತು ಎಂದರೆ ಆಗ ಒಂದು ರೀತಿಯ ಭಯ. ಯಾಕೆಂದರೆ ಆಗ ಹೆಚ್ಚಿನ ಮನೆಗಳ ಛಾವಣಿಗಳು ಮುಳಿಹುಲ್ಲಿನದ್ದಾಗಿತ್ತು. ಅಂದಿನ ಮಳೆ ಎಂದರೆ ಈಗಿನಂತಲ್ಲ. ಸೂರ್ಯನನ್ನು ಕಾಣದೆ ತಿಂಗಳು ಕಳೆದದ್ದೂ ಇದೆ. ನಡೆಯುವ ದಾರಿಯಲ್ಲೇ ನೀರಿನ ಬುಗ್ಗೆಗಳು ಚಿಮ್ಮುವುದನ್ನು ನಾನು ನೋಡಿದ್ದೇನೆ. ಹೀಗೆ 'ಧೋ' ಎಂದು ಒಂದೇ ಸವನೆ ಸುರಿಯುವ ಮಳೆ, ಗಾಳಿಗೆ ಛಾವಣಿಗೆ ಹೊದಿಸಿದ ಮುಳಿಹುಲ್ಲು ಒಂದೇ ವರ್ಷಕ್ಕೆ ಜೀರ್ಣಾವಸ್ಥೆಗೆ ತಲುಪುತ್ತಿತ್ತು. ಮಳೆಗಾಲ ಬಂತೆಂದರೆ ಸಾಮಾನ್ಯವಾಗಿ ಎಲ್ಲರೂ ಛಾವಣಿಯ ಹಳೆ ಹುಲ್ಲು ಕಳಚಿ ಹೊಸ ಮುಳಿಹುಲ್ಲು ಹೊದಿಸುತ್ತಿದ್ದರು.

ಈ ಮುಳಿ ಹೊದಿಸುವ ಕೆಲಸವನ್ನು ನನ್ನ ತಂದೆ, ಚಿಕ್ಕಪ್ಪಂದಿರು ಕೂಡಿ ಮಾಡುತ್ತಿದ್ದರು. ಊರಿನವರೆಲ್ಲ ಕೂಡಿ ಸಹಾಯ ಮಾಡುತ್ತಿದ್ದರು. ಇದು ನಮ್ಮ ಒಂದೇ ಮನೆಯಲ್ಲ, ನಮ್ಮ ಸಂಬಂಧಿಕರು, ನೆರೆಹೊರೆಯವರು ಹೀಗೆ ಅಗತ್ಯವಿರುವ ಎಲ್ಲ ಮನೆಗಳಿಗೆ ಹೋಗಿ ಹಳೆ ಮುಳಿ ತೆಗೆದು ಹೊಸ ಮುಳಿ ಹೊದಿಸಿ ಕೊಡುತ್ತಾ ಇದ್ದರು. ಈ ಮುಳಿ ಖರೀದಿಸಲು ಕೆಲವರಲ್ಲಿ ದುಡ್ಡು ಇರುತ್ತಿರಲಿಲ್ಲ. ಆಗ ಸಾಲ ಮಾಡಿ ಮುಳಿಹುಲ್ಲು ಖರೀದಿಸಿ ಹೊದಿಸಿ ಕೊಟ್ಟದ್ದೂ ನನಗೆ ನೆನಪಿದೆ. ಆಗ ಇದನ್ನು ಲಾಭದ ದೃಷ್ಟಿಯಿಂದ ಯಾರೂ ಮಾಡುತ್ತಿರಲಿಲ್ಲ. ಅವರ ಮನೆ – ಇವರ ಮನೆ, ಆ ಜಾತಿ – ಈ ಜಾತಿ ಎಂಬ ಭೇದ ಇರಲಿಲ್ಲ. ಊರಿನವರೆಲ್ಲ ಸೇರಿ ಪರಸ್ಪರ ಸಹಕಾರ ನೀಡುತ್ತಿದ್ದರು. ಮಳೆಗಾಲದಲ್ಲಿ ಮನೆಯೊಳಗೆ ಯಾರೂ ಒದ್ದೆಯಾಗದಂತೆ ಸಹಾಯಹಸ್ತ ನೀಡುತ್ತಿದ್ದರು.

ಈ ರೀತಿ ಹೊಸ ಹುಲ್ಲು ಹೊದಿಸಿಯಾದ ಮೇಲೆ ನಾವೆಲ್ಲ ಆ ಮನೆಯಲ್ಲಿ ಬಹಳ ಖುಷಿಯಿಂದ ಇರುತ್ತಿದ್ದೆವು. ಮಳೆಗಾಲವಂತೂ ಮನೆಯೊಳಗೆ ಬಹಳ ಬೆಚ್ಚಗೆ ಇರುತ್ತಿತ್ತು. ನನಗೆ ಈಗಲೂ ಸರೀ ನೆನಪಿದೆ, ಜೋರು ಮಳೆ ಬಂದಾಗ ಆ ಛಾವಣಿಯ ಮುಳಿಯಿಂದ ಒಂದೇ ಸವನೆ ನೀರು ಇಳಿಯುತ್ತಿದ್ದಾಗ ಉಂಟಾಗುತ್ತಿದ್ದ ಶಬ್ದ ಬಹಳ ಖುಷಿ ಕೊಡುತ್ತಿತ್ತು. ರಾತ್ರಿ ಹೊತ್ತಲ್ಲಂತೂ ಆ ಶಬ್ದ ಸಂಗೀತದಂತೆ ಬಹಳ ಇಂಪಾಗಿ ಕೇಳುತ್ತಿತ್ತು. ಆ ಮಳೆಗಾಲದಲ್ಲಿ ಹೆಚ್ಚಾಗಿ ಬಿಸಿಬಿಸಿ ಗಂಜಿ, ಚಟ್ನಿ, ಕೆಂಡದಲ್ಲಿ ಸುಟ್ಟು ಒಣಮೀನು ತಿನ್ನಲು ಕೊಡುತ್ತಾ ಇದ್ದರು. ಹೀಗೆ ನನ್ನ ಬಾಲ್ಯ ಕಳೆಯುತ್ತಾ ಇತ್ತು.

ಆಗ ನಾನು ಶಾಲೆಗೆ ಹೋಗುತ್ತಾ ಇರಲಿಲ್ಲ. ಮದ್ರಸಾಕ್ಕೆ ಹೋಗುತ್ತಿದ್ದೆ. ಮದ್ರಸಾದಲ್ಲಿ ಜಾಗ ಸಾಕಾಗುವುದಿಲ್ಲ ಎಂದು ಅಲ್ಲಿಯೇ ತೆಂಗಿನ ಸೋಗೆಯಿಂದ ಒಂದು ಕೋಣೆಯನ್ನು ಕಟ್ಟಿದ್ದರು. ಮದ್ರಸಾದಲ್ಲಿ ನೆಲಕ್ಕೆ ಸಿಮೆಂಟ್ ಇರಲಿಲ್ಲ. ಮಣ್ಣನ್ನು ಹದಗೊಳಿಸಿ ನೆಲಕ್ಕೆ

ಹಾಕಿ ಮಣೆಯಿಂದ ಹೊಡೆದು ಗಟ್ಟಿಗೊಳಿಸುತ್ತಿದ್ದರು. ಮಳೆಗಾಲದಲ್ಲಿ ಆ ನೆಲಕ್ಕೆ ಕಾಲಿಡುವಾಗ 'ಜುಂ' ಎನ್ನುತ್ತಿತ್ತು. ಅಷ್ಟೊಂದು ತಂಪು. ಮದ್ರಸಾ ಗುರುಗಳು ಬಹಳ ದೊಡ್ಡ ವಿದ್ವಾಂಸರು. ನಮಗೆ ಬಹಳ ಕಟ್ಟುನಿಟ್ಟಾಗಿ ಪಾಠ ಹೇಳಿಕೊಡುತ್ತಾ ಇದ್ದರು. ಹಾಗೆ ಕೆಲವು ವರ್ಷ ಆ ಮದ್ರಸಾದಲ್ಲಿ ನನ್ನ ಧಾರ್ಮಿಕ ವಿದ್ಯಾಭ್ಯಾಸ ನಡೆಯಿತು.

ಆಗ ನನಗೆ ಯಕ್ಷಗಾನ ನೋಡುವ ಹುಚ್ಚು. ನಮ್ಮೂರು, ಪಕ್ಕದೂರಿನಲ್ಲಿ ಆಗಾಗ ಯಕ್ಷಗಾನ ನಡೆಯುತ್ತಿತ್ತು. ಹೆಚ್ಚಾಗಿ ಹರಕೆಯ ಯಕ್ಷಗಾನಗಳು. ಆಗ ಈಗಿನಂತೆ ವಿದ್ಯುದ್ದೀಪಗಳಿರಲಿಲ್ಲ. ರಂಗಸ್ಥಳ ಹಾಕಿ ಅದರ ಸುತ್ತಲೂ ಗ್ಯಾಸ್‌ಲೈಟ್‌ಗಳನ್ನು ಹಚ್ಚಿ ತೂಗುಹಾಕುತ್ತಿದ್ದರು. ಅದನ್ನು ನೋಡಿಕೊಳ್ಳಲಿಕ್ಕೆಂದೇ ಒಬ್ಬ ಆಳು ಇರುತ್ತಿದ್ದ. ಆಗಾಗ ಅದಕ್ಕೆ ಎಣ್ಣೆ ಹಾಕಿಕೊಂಡು, ಗಾಳಿ ತುಂಬಿಕೊಂಡು ಅದು ಆರದಂತೆ ನೋಡಿಕೊಳ್ಳುತ್ತಿದ್ದ. ಆಗ ಯಕ್ಷಗಾನ ಸಾಧಾರಣವಾಗಿ ಬಯಲು ಗದ್ದೆಗಳಲ್ಲಿ ನಡೆಯುತ್ತಾ ಇತ್ತು. ನೆಲದಲ್ಲೇ ಕುಳಿತು ಯಕ್ಷಗಾನ ಆಟ ನೋಡಬೇಕಿತ್ತು. ಊರಿನ ಗಣ್ಯರಿಗೆ ಮಾತ್ರ ಎದುರು ಸಾಲಿನಲ್ಲಿ ಕೆಲವು ಮರದ ಕುರ್ಚಿ, ಆರಾಮಕುರ್ಚಿಗಳನ್ನು ಹಾಕುತ್ತಿದ್ದರು. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಆಟ ನೋಡಲು ಬರುತ್ತಿದ್ದರು. ಬ್ಯಾರಿಗಳ ಗಂಡಸರು ಕೆಲವರು ಬರುತ್ತಿದ್ದರಾದರೂ ಹೆಂಗಸರು ಬರುತ್ತಿರಲಿಲ್ಲ. ಆದರೆ ಹತ್ತಿರದಲ್ಲಿ ಮನೆಯಿದ್ದರೆ ನೆರೆಹೊರೆಯ ಹೆಂಗಸರೆಲ್ಲ ಆ ಮನೆಯ ಜಗಲಿಯಲ್ಲಿ ಕುಳಿತು ದೂರದಿಂದಲೇ ನೋಡಿ ಸಂತೋಷಪಡುತ್ತಿದ್ದರು.

ಯಕ್ಷಗಾನ ಚೆಂಡೆ ಕೇಳುವಾಗ ನನ್ನ ದೇಹದಲ್ಲಿ ಒಂಥರಾ ಪುಳಕ, ಆವೇಶ ಬಂದಂತಾಗಿ ಮನಸ್ಸಿಗೆ ಖುಷಿ ಕೊಡುತ್ತಾ ಇತ್ತು. ಊರಿನಲ್ಲಿ ಯಕ್ಷಗಾನ ಇದೆ ಎಂದಾದರೆ ಸೂರ್ಯಾಸ್ತಮಾನವಾಗುತ್ತಲೇ ಒಂದು ಸುತ್ತಿನ ಚೆಂಡೆ ಬಾರಿಸುತ್ತಿದ್ದರು. ಕೆಲವೇ ಹೊತ್ತಿನಲ್ಲಿ ಯಕ್ಷಗಾನ ಆರಂಭವಾಗುತ್ತದೆ, ಎಲ್ಲರೂ ಬನ್ನಿ ಎಂಬ ಆಹ್ವಾನದ ಚೆಂಡೆ ಅದು. ಈ ರೀತಿ ಚೆಂಡೆಯ ಶಬ್ದ ಬಂದು ನನ್ನ ಕಿವಿಗಪ್ಪಳಿಸುತ್ತಿದ್ದಂತೆಯೇ ನಾನು ಯಕ್ಷಗಾನಕ್ಕೆ ಹೋಗಲು ಸಂಚು ರೂಪಿಸುತ್ತಾ ಇದ್ದೆ. ಸಂಚು ಯಾಕೆಂದರೆ ಆಗ ನಮ್ಮಲ್ಲಿ ಮಕ್ಕಳನ್ನು ಯಕ್ಷಗಾನಕ್ಕೆ ಹೋಗಲು ಬಿಡುತ್ತಿರಲಿಲ್ಲ. ಮುಸ್ಲಿಮರು ಅದನ್ನು ನೋಡುವುದು 'ಹರಾಂ' ಎಂದು ಕೆಲವರು ಹೇಳುತ್ತಿದ್ದರು. ಆದರೂ ನಾನು ರಾತ್ರಿಯಾಗುತ್ತಿದ್ದಂತೆಯೇ ಹೇಗಾದರೂ ಮಾಡಿ ಕದ್ದುಮುಚ್ಚಿ ಕಣ್ಣು ತಪ್ಪಿಸಿಕೊಂಡು ಹೋಗುತ್ತಿದ್ದೆ. ಬೆಳಗಿನವರೆಗೂ ಕುಳಿತು ಆಟ ನೋಡಿ ಅಜ್ಜಿಯ ಕೈಯಲ್ಲಿ ಬೈಗುಳ ತಿನ್ನುತ್ತಿದ್ದೆ.

ಒಂದು ದಿನ ನಮ್ಮ ಮನೆಯ ಹತ್ತಿರ ಒಂದು ಯಕ್ಷಗಾನ ಬಯಲಾಟ ನಡೆಯಿತು. ಸೂರ್ಯಾಸ್ತದ ಚೆಂಡೆ ಕೇಳುತ್ತಿದ್ದಂತೆಯೇ ನಾನು ನಿಂತಲ್ಲಿ ನಿಲ್ಲಲಾಗದೆ ಚಡಪಡಿಸತೊಡಗಿದೆ. ಇದು ನನ್ನಜ್ಜಿಯ ಗಮನಕ್ಕೆ ಬಂತು. ನಾನು ಹೊರಡುತ್ತಿದ್ದಂತೆಯೇ ಅವರು ನನ್ನನ್ನು ಹಿಡಿದರು. ಪಕ್ಕದಲ್ಲೇ ಇದ್ದ ಮದ್ರಸಾದ ಗುರುಗಳನ್ನು ಕರೆದು "ಉಸ್ತಾದ್, ನೋಡಿ ಇವನು ಆಟಕ್ಕೆ ಹೋಗುತ್ತಾನಂತೆ. ಆ ಹರಾಮನ್ನು ನೋಡಲು.

ಅದು ನೋಡುವುದು ಹರಾಂ ಎಂದರೆ ಕೇಳುವುದಿಲ್ಲ. ನೀವೇ ಇವನಿಗೆ ಬುದ್ಧಿ ಹೇಳಿ" ಎಂದು ಕೂಗಿ ಹೇಳಿದರು. ನಾನು ಆಟಕ್ಕೆ ಹೋಗಲೇಬೇಕು ಎಂದು ಹಠ ಹಿಡಿದೆ. ಅಳತೊಡಗಿದೆ. ಅಷ್ಟರಲ್ಲಿ ಮದ್ರಸಾದಿಂದ ಗುರುಗಳು ಬಂದವರು "ಮೊಹಿದೀನ್" ಎಂದು ಕರೆದರು. ನನ್ನ ಎದೆ ಬಡಿದುಕೊಳ್ಳತೊಡಗಿತು.

ಅಜ್ಜಿ ಮತ್ತೊಮ್ಮೆ "ಇವನಿಗೆ ಆಟಕ್ಕೆ ಹೋಗಬೇಕಂತೆ. ಹೋಗಬೇಡ ಅಂದಿದ್ದಕ್ಕೆ ಅಳುತ್ತಿದ್ದಾನೆ. ಇವನನ್ನು ಕರೆದುಕೊಂಡು ಹೋಗಿ ಮದ್ರಸಾದಲ್ಲಿ ಮಲಗಿಸಿ. ಇಲ್ಲಿದ್ದರೆ ತಪ್ಪಿಸಿಕೊಂಡು ಹೋಗುತ್ತಾನೆ" ಎಂದರು. ಅವರು ಹತ್ತಿರ ಬಂದವರು ನನ್ನ ಹೆಗಲಿಗೆ ಕೈಹಾಕಿ "ಯಾಕೆ ಮೊಹಿದೀನ್ ಅಳುತ್ತಿದ್ದಿ? ಒಳ್ಳೆಯ ಮಕ್ಕಳು ಹೀಗೆ ಅಳುವುದಿಲ್ಲ. ಅಳಬಾರದು. ಬಾ, ಮದ್ರಸಾಕ್ಕೆ ಹೋಗೋಣ" ಎಂದು ನನ್ನನ್ನು ತಬ್ಬಿಕೊಂಡೇ ಹೋದರು. ನಾನು ಆಗ ಯಕ್ಷಗಾನಕ್ಕೆ ಹೋಗುವ ಆಶೆಯನ್ನೇ ಬಿಟ್ಟುಬಿಟ್ಟೆ. ಅಂದು ರಾತ್ರಿಯಿಡೀ ನನ್ನನ್ನು ಗುರುಗಳು ಮದ್ರಸಾದಲ್ಲೇ ಮಲಗಿಸುತ್ತಾರೆ, ನನ್ನ ಕಾವಲು ಕಾಯುತ್ತಾರೆ ಎಂಬುದು ಖಾತ್ರಿಯಾಗತೊಡಗಿತು. ಆದರೆ ನಡೆದದ್ದೇ ಬೇರೆ. ಇಂದಿಗೂ ನನಗೆ ಆ ಘಟನೆಯನ್ನು ನೆನೆದರೆ ಆಶ್ಚರ್ಯವಾಗುತ್ತದೆ.

ಹೀಗೆ ನನ್ನನ್ನು ಕರೆದುಕೊಂಡು ಹೋದ ಗುರುಗಳು ಮದ್ರಸಾದ ಅಂಗಳದಲ್ಲಿ ನಿಲ್ಲಿಸಿ "ಮೊಹಿದೀನ್, ನಿನಗೆ ಆಟಕ್ಕೆ ಹೋಗಲೇಬೇಕಾ?" ಎಂದು ಕೇಳಿದರು. ನಾನು ಆಶ್ಚರ್ಯದಿಂದ ತಲೆಯೆತ್ತಿ ಅವರ ಮುಖ ನೋಡಿದೆ. ತಲೆಯ ಮೇಲೆ ಹಾಲಿನಂತೆ ಬೆಳದಿಂಗಳು ಸುರಿಯುತ್ತಿತ್ತು. ಪೂರ್ಣಚಂದ್ರನಿಗೂ ಹೊಳೆಯುತ್ತಿದ್ದ ಅವರ ಮುಖಕ್ಕೂ ನನಗೆ ಯಾವ ವ್ಯತ್ಯಾಸವೂ ಕಾಣಲಿಲ್ಲ. "ಮೊಹಿದೀನ್ ಯಾಕೆ ಮಾತನಾಡುತ್ತಿಲ್ಲ ನೀನು? ನಿನಗೆ ಆಟಕ್ಕೆ ಹೋಗಲೇಬೇಕಾ?" ಗುರುಗಳು ಮತ್ತೆ ಕೇಳಿದಾಗ ಮರಗಟ್ಟಿದವನಂತೆ ನಿಂತಿದ್ದ ನಾನು ಎಚ್ಚರಗೊಂಡೆ. ಅವರ ಮುಖವನ್ನೇ ನೋಡುತ್ತಿದ್ದ ನನ್ನ ತಲೆ ಬಾಗಿತು. ಆಗ ಗುರುಗಳು ಜೇಬಿನಿಂದ ಒಂದು ನಾಣ್ಯ ತೆಗೆದು ನನ್ನ ಕೈಯಲ್ಲಿಟ್ಟರು. ಆವತ್ತು ಒಂದಾಣೆ ಕೊಟ್ಟರಾ ಮುಕ್ಕಾಲು ಕೊಟ್ಟರಾ ನೆನಪಿಲ್ಲ, ಹಾಗೆ ಕೊಟ್ಟವರು "ಹೋಗು ಆಟಕ್ಕೆ ಹೋಗಿ ಬಾ. ಈ ಹಣದಿಂದ ಅಲ್ಲಿ ಸಂತೆಯಲ್ಲಿ ಏನು ಬೇಕು ಖರೀದಿಸಿ ತಿನ್ನು. ಬೇಗ ಬಾ. ಬೆಳಗಿನ ತನಕ ನೋಡುತ್ತಾ ಕುಳಿತುಕೊಳ್ಳಬೇಡ. ನಿದ್ದೆ ಬಿಟ್ಟರೆ ಆರೋಗ್ಯ ಹಾಳಾಗುತ್ತೆ" ಎಂದು ನನ್ನ ತಲೆ ಸವರಿದರು. ನನಗೆ ಆಗ ಅಳುವೇ ಬಂದುಬಿಟ್ಟಿತ್ತು.

ಹಾಗೆ ನಾನು ಅಂದು ಆಟಕ್ಕೆ ಹೋಗಿದ್ದೆ. ಅವರು ಕೊಟ್ಟ ಹಣದಿಂದ ಕಡಲೆ ಖರೀದಿಸಿ ತಿಂದಿದ್ದೆ. ಆ ಘಟನೆ ಇಂದಿಗೂ ನನ್ನ ಕಣ್ಣಿಗೆ ಕಟ್ಟಿದಂತಿದೆ. ಇದು ನನ್ನ ಜೀವನದಲ್ಲಿ ಮರೆಯಲಾಗದ ಒಂದು ಘಟನೆ. ಇಲ್ಲಿ ಒಂದು ಮಾತು ನಾನು ಹೇಳಬಯಸುತ್ತೇನೆ. ಇಂದು ನಾನು ಒಳ್ಳೆಯ ಕನ್ನಡ ಮಾತನಾಡುತ್ತಿದ್ದರೆ ಅದಕ್ಕೆ ಕಾರಣ ನಾನು ಬಾಲ್ಯದಲ್ಲಿ ಯಕ್ಷಗಾನ ನೋಡುತ್ತಿದ್ದುದು. ಈಗ ನನಗೆ ಅನಿಸುತ್ತಿರುವುದು ಏನೆಂದರೆ, ಅವರೊಬ್ಬ ಸಾಮಾನ್ಯ ಧಾರ್ಮಿಕ ಗುರುಗಳು ಮಾತ್ರ ಆಗಿರಲಿಲ್ಲ. ಒಬ್ಬ

ಮನೋವಿಜ್ಞಾನಿಯೂ ಆಗಿದ್ದರು ಎಂದು. ಮಕ್ಕಳ ಕುತೂಹಲವನ್ನು ಯಾವತ್ತೂ ತಡೆಯಬಾರದು ಎನ್ನುವುದು ಇಂದಿನ ಸೈಕಾಲಜಿಯಲ್ಲಿ, ಆಧುನಿಕ ಚಿಂತನೆಯಲ್ಲಿ ಅಡಕವಾಗಿರುವಂತಹದ್ದು. ಇಂದು ಆ ಘಟನೆಯನ್ನು ನೆನೆಯುವಾಗ ಅಂದಿನ ಕಾಲದಲ್ಲೇ ಆ ಗುರುಗಳಲ್ಲಿ ಆ ಮನೋಭಾವ ಇತ್ತು ಎಂದು ನನಗನಿಸುತ್ತೆ. ಅವರು ಅಂದು ನನ್ನನ್ನು ಯಕ್ಷಗಾನಕ್ಕೆ ಕಳುಹಿಸುದುದರ ಉದ್ದೇಶ ನಾನು ಬೆಳೆದಂತೆ ನನಗೆ ಮನವರಿಕೆ ಯಾಗತೊಡಗಿತ್ತು. ಆ ಗುರುಗಳ ಹೆಸರು ಮೈೂದಿನ್ ಮುಸ್ಲಿಯಾರ್. ಇವರು ಕಾಸರಗೋಡಿನವರು. ಅನಂತರ ಇಲ್ಲಿಯ ಹುಡುಗಿಯನ್ನೇ ಮದುವೆಯಾಗಿ ಇಲ್ಲಿಯೇ ನೆಲೆಸಿದ್ದರು. ಆಗ ಆ ಮದ್ರಸಾದಲ್ಲಿ ಗಂಡುಮಕ್ಕಳೇ ಹೆಚ್ಚಾಗಿ ಓದುತ್ತಾ ಇದ್ದುದು. ಹೆಣ್ಣುಮಕ್ಕಳು ಬಹಳ ಎಂದರೆ ಬಹಳ ಕಡಿಮೆ. ಆ ಮದ್ರಸಾದಲ್ಲಿ ಓದಿದ ಬಾಲಕಿಯರಲ್ಲಿ ಫಾತಿಮಾ ಎಂಬ ಒಬ್ಬಳು ಇದ್ದಳು. ಬಹಳ ಮುಗ್ಧೆ. ತುಂಬಾ ಸುಂದರಿ. ಅವಳು ಈಗಲೂ ಇದ್ದಾಳೆ. ಇನ್ನೊಬ್ಬಳು ಸಾರಮ್ಮ ಅಂತ. ಅವಳಿಗೆ ನಾನೆಂದರೆ ಬಹಳ ಪ್ರೀತಿ. ಅವಳಿಗೆ ತಿಳಿಯದ ಪಾಠಗಳನ್ನು ನಾನು ಹೇಳಿಕೊಡುತ್ತಿದ್ದೆ. ಅವಳಿಗೆ ಮೂಡುಬಿದಿರೆಗೆ ಮದುವೆಯಾಯಿತು. ಮಕ್ಕಳಿರಲಿಲ್ಲ. ಇತ್ತೀಚೆಗೆ ತೀರಿಕೊಂಡಳು. ಇವರಿಬ್ಬರು ಮಾತ್ರ ನನ್ನ ನೆನಪಿನಲ್ಲಿ ಉಳಿದಿದ್ದಾರೆ.

ನಾನು ಸಣ್ಣವನಿದ್ದಾಗ ಬಜಪೆಯಲ್ಲಿ ಕೋಳಿಅಂಕ ಬಹಳ ಜೋರಾಗಿ ನಡೆಯುತ್ತಿತ್ತು. ಹೆಚ್ಚಾಗಿ ಬಂಟರು ಕೋಳಿ ಅಂಕದಲ್ಲಿ ಭಾಗವಹಿಸುವುದು ಮತ್ತು ಜೂಜು ಕಟ್ಟುವುದು. ಈ ಬಂಟರು ಗಾಯಗೊಂಡ ಕೋಳಿಗಳನ್ನು ಹಲಾಲ್ ಮಾಡಿಸಿ ಬ್ಯಾರಿ ಗೆಳೆಯರ ಮನೆಗೆ ಕಳುಹಿಸಿಕೊಡುತ್ತಿದ್ದುದನ್ನು ನಾನು ಕಂಡಿದ್ದೇನೆ. ಈ ಕೋಳಿಅಂಕ ಮೂರು ದಿನ ಹಗಲೂ ರಾತ್ರಿ ನಡೆಯುತ್ತಿತ್ತು. ರಾತ್ರಿ ಹೊತ್ತು ಗ್ಯಾಸ್‌ಲೈಟ್ ಉಪಯೋಗಿಸುತ್ತಿದ್ದರು. ದೂರ ದೂರದ ಊರುಗಳಿಂದ ಇದಕ್ಕೆ ಜನ ಬರುತ್ತಿದ್ದರು. ಆಗ ಮೈದಾನ ತುಂಬಾ ದೊಡ್ಡ ದೊಡ್ಡ ಹುಂಜಗಳನ್ನು ಕಟ್ಟಿ ಹಾಕುವುದನ್ನು ಕಾಣಬಹುದಾಗಿತ್ತು. ಗೆಳೆಯ ಬಿ.ಪಿ. ಇಸ್ಮಾಯೀಲ್ ಕೋಳಿ ಅಂಕದ ದೊಡ್ಡ ಅಭಿಮಾನಿ. ಅವನ ಜೊತೆ ನಾನೂ ಹೋಗುತ್ತಿದ್ದೆ. ಇದರಲ್ಲಿ ಬ್ಯಾರಿಗಳು ಭಾಗವಹಿಸುತ್ತಿರಲಿಲ್ಲ.

ಕಂಬಳದಲ್ಲಿ ಬ್ಯಾರಿಗಳು ಭಾಗವಹಿಸುತ್ತಿದ್ದರು. ಬ್ಯಾರಿಗಳು, ಕ್ರಿಶ್ಚಿಯನ್ನರು ಕಂಬಳದ ಕೋಣಗಳನ್ನು ಸಾಕುತ್ತಿದ್ದರು. ಬೋಳಾರ ಉಂಞಾಕ ಕಂಬಳದ ಕೋಣ ಸಾಕುತ್ತಿದ್ದುದು, ಅವರು ಮತ್ತು ಇಲ್ಲಿನ ತ್ಯಾಂಪಣ್ಣ ಶೆಟ್ಟರ ಮಕ್ಕಳಿಗೆ ಕೋಣಗಳು ನೀರು ಹಾಯಿಸುವ ವಿಷಯಕ್ಕೆ ದೊಡ್ಡ ಜಗಳವಾಗಿದ್ದು ನನಗೆ ನೆನಪಿದೆ.

ಶಾಲೆಗೆ ಸೇರುವಾಗ ನನಗೆ 10 ವರ್ಷ ಪ್ರಾಯ. ಆಗ ಬರ್ತ್ ಸರ್ಟಿಫಿಕೇಟ್ ಅಂತ ಇರಲಿಲ್ಲ. ನಾವು ಹೇಳಿದ್ದೇ ಹುಟ್ಟಿದ ತಾರೀಕು. ಬಜಪೆಯ ಆ ಶಾಲೆಯ ಹೆಸರು ಪರೋಕಿಯಲ್ ಎಲಿಮೆಂಟರಿ ಶಾಲೆ. ಅದು ಕ್ರಿಶ್ಚಿಯನ್ ಶಾಲೆ. ಅಂದಿನ ಕಾಲದಲ್ಲಿ ಒಂದು ಚರ್ಚ್ ಬಳಿ ಒಂದು ಶಾಲೆ ಇರುತ್ತಿತ್ತು. ನನ್ನನ್ನು ಶಾಲೆಗೆ ಕರೆದುಕೊಂಡು ಹೋಗಿ ಸೇರಿಸಿದವರು ಜಕ್ರಿ ಬ್ಯಾರಿ. ಮೈೂದಿನ್ ಬ್ಯಾರಿಯವರ ಹಿರಿಯ ಮಗ

ಇವರು. ಅವರು ದೊಡ್ಡ ವ್ಯಾಪಾರಿ. ಅವರಿಗೆ ದೊಡ್ಡ ದಿನಸಿ ಅಂಗಡಿ ಇತ್ತು. ನನ್ನ ತಂದೆಯವರನ್ನು ಅವರು ಕಾಕಾ ಎಂದು ಕರೆಯುತ್ತಿದ್ದರು.

ನನಗೆ ಕರ್ಮಿನ್ ಟೀಚರ್ ಎಂಬ ಒಬ್ಬರು ಟೀಚರ್ ಇದ್ದರು. ಈ ಕರ್ಮಿನ್ ಟೀಚರ್‌ಗೆ ರೇಗೊ ಎಂಬ ಒಬ್ಬ ತಮ್ಮ ಇದ್ದರು. ಅವರೂ ಅಲ್ಲಿ ಮೇಸ್ತ್ರು ಆಗಿದ್ದರು. ಇನ್ನೊಬ್ಬರು ಗಿಬ್ಬ ಮೇಸ್ಟರು ಅಂತ. ಅವರು ಬಹಳ ಜೋರು. ಬಹಳ ಕೋಪ ಅವರಿಗೆ. ಹೊಡೆಯುವುದು ಜಾಸ್ತಿ. ಕರ್ಮಿನ್ ಟೀಚರ್ ತುಂಬಾ ಸುಂದರಿಯಾಗಿದ್ದರು. ಫ್ರಾಕ್ ಹಾಕಿ ಅವರು ನಮಗೆ ಪಾಠ ಮಾಡುತ್ತಾ ಇದ್ದದ್ದು. ಅವರಿಗೆ ಮದುವೆಯಾಗಿರಲಿಲ್ಲ. ಕ್ರಿಶ್ಚಿಯನ್ನರಲ್ಲಿ ಅನೇಕ ಹೆಣ್ಣುಮಕ್ಕಳು ಆಗಲೂ ಮದುವೆಯಾಗದೆ 'ಸಿಸ್ಟರ್' ಆಗುತ್ತಿದ್ದರು. ಕರ್ಮಿನ್ ಟೀಚರ್‌ಗೆ ನನ್ನ ಮೇಲೆ ಬಹಳ ಪ್ರೀತಿ. ನನಗೂ ಅಷ್ಟೇ ಅವರೆಂದರೆ ಬಹಳ ಇಷ್ಟ. ತಾಯಿ ಹೃದಯ ಅವರದ್ದು. ಎಲ್ಲ ವಿದ್ಯಾರ್ಥಿಗಳನ್ನೂ ತನ್ನ ಸ್ವಂತ ಮಕ್ಕಳಂತೆ ನೋಡಿಕೊಳ್ಳುತ್ತಿದ್ದರು. ಜೋರು ಮಾಡುವುದು, ಹೊಡೆಯುವುದು ಯಾವುದೂ ಮಾಡುತ್ತಿರಲಿಲ್ಲ. ಹಿತವಾದ ಮಾತು. ಆ ಮಾತಿನ ತುಂಬಾ ಪ್ರೀತಿ.

ಪಕ್ಕದ ಹೊಟೇಲ್‌ನಿಂದ ಈ ಕರ್ಮಿನ್ ಟೀಚರ್ ನನ್ನಲ್ಲಿ ಚಹಾ ತರಿಸುತ್ತಿದ್ದರು. ಆ ಚಹಾದ ಜೊತೆ ತರುತ್ತಿದ್ದ ತಿಂಡಿ ನೀರುಳ್ಳಿ ಬಜೆ, ಗೋಳಿಬಜೆಯಲ್ಲಿ ಸ್ವಲ್ಪ ನನಗೂ ಕೊಡುತ್ತಿದ್ದರು. ನನಗೆ ಆಗ ಬಹಳ ಸಂತೋಷವಾಗುತ್ತಿತ್ತು. ನನ್ನಲ್ಲಿ ಕೊಂಡು ತಿನ್ನಲು ದುಡ್ಡು ಇರುತ್ತಿರಲಿಲ್ಲ. ಬಡತನದಲ್ಲಿದ್ದ ನಮಗೆ ಇಂತಹ ತಿಂಡಿಗಳೆಲ್ಲ ತಿನ್ನಲು ಸಿಗುತ್ತಿರಲಿಲ್ಲ. ಹೊಟೇಲ್ ತಿಂಡಿಗಳಂತೂ ಕನಸಿನ ಮಾತೇ ಆಗಿತ್ತು. ಆ ಟೀಚರ್ ನನ್ನಲ್ಲಿ ಬಹಳಷ್ಟು ಸ್ಫೂರ್ತಿಯನ್ನು ತುಂಬುತ್ತಿದ್ದರು. ಆ ಟೀಚರ್‌ರ ಪ್ರೀತಿಗಾಗಿ ಅದೆಷ್ಟೋ ಮಕ್ಕಳು ತಪ್ಪದೆ ಶಾಲೆಗೆ ಬರುತ್ತಿದ್ದರು. ನನ್ನ ಬಿಳಿ ಬಣ್ಣ, ರೂಪ, ಚಂದ ನೋಡಿ ಅವರು ಮೊದಮೊದಲು ನನ್ನನ್ನು ಕ್ರಿಶ್ಚಿಯನ್ ಎಂದೇ ಭಾವಿಸಿದ್ದರು. ನನ್ನಲ್ಲಿ ಕೊಂಕಣಿಯಲ್ಲೇ ಮಾತನಾಡುತ್ತಿದ್ದರು. ಆಮೇಲೆ ಒಂದು ದಿನ ನಾನು ಮುಸ್ಲಿಂ ಎಂದು ಹೇಳಿದೆ. ಆಮೇಲೆ ಅವರಿಗೆ ನನ್ನ ಮೇಲೆ ಪ್ರೀತಿ ಹೆಚ್ಚಾಯಿತೇ ಹೊರತು ಕಡಿಮೆಯಾಗಲಿಲ್ಲ.

ನಾವು ಈಗ ಹೇಳುತ್ತಾ ಇದ್ದೇವಲ್ಲ, ನಮ್ಮ ಶಾಲೆಗಳಲ್ಲಿ ಧಾರ್ಮಿಕ ಶಿಕ್ಷಣ ಕೂಡಾ ಇರಬೇಕೂಂತ. ಚರ್ಚ್ ಶಾಲೆಗಳಲ್ಲಿ ಆಗಿನ ಕಾಲದಲ್ಲೇ ಅದು ಇತ್ತು. ಧಾರ್ಮಿಕ ಮತ್ತು ಲೌಕಿಕ ಶಿಕ್ಷಣ ಒಟ್ಟಿಗೆ ಇದ್ದರೂ ಧಾರ್ಮಿಕ ತರಗತಿಗಳು ಬೇರೆಯಾಗಿಯೇ ನಡೆಯುತ್ತಿತ್ತು. ಕ್ರಿಶ್ಚಿಯನ್ ವಿದ್ಯಾರ್ಥಿಗಳಿಗೆ ಒಂದು ಗಂಟೆ ಧಾರ್ಮಿಕ ಪಾಠವಿರುವ ಸಮಯದಲ್ಲಿ ನಮಗೆ ತೋಟಗಾರಿಕೆ ತರಬೇತಿ, ನೀತಿಪಾಠಗಳು ನಡೆಯುತ್ತಿತ್ತು. ಶಾಲೆಯ ಬಳಿ ಅವರದ್ದೇ ಆದ ಒಂದು ತೋಟವಿತ್ತು. ಕ್ರಿಶ್ಚಿಯನ್ ಶಾಲೆಗಳಲ್ಲಿ ಈಗಲೂ ಈ ರೀತಿಯ ಜಾತ್ಯತೀತ ವ್ಯವಸ್ಥೆಯನ್ನು ಕಾಣಬಹುದು. ನಾನು ಓದಿದ ಬಜಪೆ ಶಾಲೆಯಲ್ಲಿ ಈಗಲೂ ಇದೇ ರೀತಿಯ ವ್ಯವಸ್ಥೆ ಇದೆ. ಈ ರೀತಿ ಪ್ರಾರ್ಥನೆಯ ಸಮಯದಲ್ಲಿ ನಾವು ಶಾಲೆಯಿಂದ ಹೊರಗುಳಿಯುವಾಗ ಕ್ರಿಶ್ಚಿಯನ್ ಸಹಪಾಠಿಗಳಿಗೆ ಅಸೂಯೆಯಾಗುತ್ತಿತ್ತು.

ಕ್ರಿಶ್ಚಿಯನ್ನರು ಯಾವುದೇ ಭೇದಭಾವ ಇಲ್ಲದೆ ಶಾಲೆ ನಡೆಸುತ್ತಾರೆ. ಕ್ರಿಶ್ಚಿಯನ್ ಮಕ್ಕಳಿಗಾಗಿಯೇ ಶಾಲೆ ಅಂತ ಇಲ್ಲ. ಕ್ರಿಶ್ಚಿಯನ್ ಶಾಲೆಗಳು ಎಲ್ಲರಿಗಾಗಿ ಎನ್ನುವುದು ಅವರ ಧೋರಣೆ. ಆಗ ಇದ್ದುದು ಕ್ರಿಶ್ಚಿಯನ್ ಶಾಲೆಗಳು ಮಾತ್ರ. ಸರಕಾರಿ ಶಾಲೆಗಳು ಇರಲಿಲ್ಲ. ಸರಕಾರಿ ಶಾಲೆ ಎಂದರೆ ಉರ್ದು ಶಾಲೆ. ಅಲ್ಲಿಗೆ ಹೋಗುತ್ತಿದ್ದುದು ಉರ್ದು (ಹನಫಿ) ಮಾತನಾಡುವ ಮುಸ್ಲಿಮರು ಮಾತ್ರ. ಇದರಿಂದಾಗಿ ಅವರ ಶಿಕ್ಷಣ ಒಂದು ರೀತಿ ಸೀಮಿತವಾಗಿಯೇ ಇರುತ್ತಿತ್ತು. ಬ್ಯಾರಿಗಳ ಮಕ್ಕಳು ಶಾಲೆಗೆ ಹೋಗುತ್ತಿದ್ದುದು ಬಹಳ ಅಪರೂಪ. ಅದಕ್ಕೆ ಬಡತನವೂ ಒಂದು ಕಾರಣವಾಗಿತ್ತು. ಕ್ರಿಶ್ಚಿಯನ್ನರದು ಶಿಕ್ಷಣದ ವಿಷಯದಲ್ಲಿ ಬಹಳ ವಿಶಾಲ ಮನೋಭಾವ. ಎಲ್ಲರೂ ಕಲಿಯಬೇಕು, ಶಿಕ್ಷಿತರಾಗಬೇಕು ಎಂಬ ಒಳ್ಳೆಯ ಉದ್ದೇಶದಿಂದಲೇ ಅವರು ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸುತ್ತಿದ್ದರು. ಈಗಲೂ ಅವರ ಉದ್ದೇಶ ಅದೇ ಆಗಿದೆ. ಇಂದು ನಮ್ಮ ದೇಶದಲ್ಲಿ ಏನಾದರೂ ಶೈಕ್ಷಣಿಕ ಕ್ರಾಂತಿಯಾಗಿದ್ದರೆ ಅದರ ಹಿಂದೆ ಕ್ರಿಶ್ಚಿಯನ್ನರ ಸೇವೆ, ತ್ಯಾಗ, ಶ್ರಮ ಬಹಳಷ್ಟಿದೆ.

ನಮ್ಮ ಶಾಲೆಯಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳು, ಸ್ಪರ್ಧೆಗಳು ಆಗಾಗ ನಡೆಯುತ್ತಾ ಇತ್ತು. ನಾನೂ ಅದರಲ್ಲಿ ಭಾಗವಹಿಸುತ್ತಿದ್ದೆ. ನಾಟಕಗಳಲ್ಲೂ ಪಾತ್ರ ವಹಿಸುತ್ತಿದ್ದೆ. ನಮ್ಮ ಶಾಲೆಯ ಹೆಣ್ಣುಮಕ್ಕಳು ತುಂಬಾ ಚೆನ್ನಾಗಿ ಡಾನ್ಸ್ ಮಾಡುತ್ತಿದ್ದರು. ಈಗಿನ ಹಾಗೆ ಸಿನೆಮಾದ ಹಾಡು ಹೇಳಿ, ಧ್ವನಿಸುರುಳಿ ಇಟ್ಟು ಡ್ಯಾನ್ಸ್ ಮಾಡುವುದಲ್ಲ. ಅವರೇ ಹಿನ್ನೆಲೆಯಲ್ಲಿ ಹಾಡಿ ನೃತ್ಯ ಮಾಡುತ್ತಿದ್ದರು. ಆಗ ಸಂಗೀತಕ್ಕೆ, ನೃತ್ಯಕ್ಕೆ ಬಹಳ ಪ್ರಾಧಾನ್ಯತೆ ಕೊಡುತ್ತಿದ್ದರು. ಮುಸ್ಲಿಮರು ಯಾರೂ ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿರಲಿಲ್ಲ. ತಮ್ಮ ಮಕ್ಕಳು ಆ ಶಾಲೆಯಲ್ಲಿ ಓದುತ್ತಿದ್ದರೂ ಸ್ಕೂಲ್‌ಡೇಗೆ ಕೂಡಾ ಹೆತ್ತವರು ಬರುತ್ತಿರಲಿಲ್ಲ. ಶಾಲೆಯ ಬಗ್ಗೆ, ಶಿಕ್ಷಣದ ಬಗ್ಗೆ ಯಾರಿಗೂ ಅಷ್ಟೊಂದು ಕಾಳಜಿ ಇರಲಿಲ್ಲ.

ಶಾಲೆಯ ಬಳಿಯೇ ಚರ್ಚ್ ಇದ್ದರೂ ಅಧ್ಯಾಪಕರಾಗಲೀ ಸಂಸ್ಥೆಗೆ ಸಂಬಂಧಪಟ್ಟವರಾಗಲೀ ಯಾವತ್ತೂ ಇತರ ಧರ್ಮೀಯರನ್ನು 'ನೀವೂ ಪ್ರಾರ್ಥನೆಗೆ ಚರ್ಚ್‌ಗೆ ಬನ್ನಿ' ಎಂದು ಕರೆದವರಲ್ಲ. ಒತ್ತಾಯ ಮಾಡಿದವರಲ್ಲ. ಅವರು ಕೊಟ್ಟಂತಹ ಶಿಕ್ಷಣದ ಬಗ್ಗೆ, ಅವರ ಶಿಕ್ಷಣ ಸಂಸ್ಥೆಗಳ ಬಗ್ಗೆ ಈಗಲೂ ನನಗೆ ಗೌರವವಿದೆ. ಕಾನ್ವೆಂಟ್ ಶಿಕ್ಷಣದಿಂದಾಗಿಯೇ ನಾನು ಇಂದು ಇಷ್ಟು ಎತ್ತರಕ್ಕೆ ಬೆಳೆದಿದ್ದೇನೆ ಮಾತ್ರವಲ್ಲ ಅದನ್ನು ನಾನು ಯಾವಾಗಲೂ ನೆನಪಿಸಿಕೊಳ್ಳುತ್ತೇನೆ. ಅನೇಕ ಸಂದರ್ಭಗಳಲ್ಲಿ ಸಭೆ-ಸಮಾರಂಭಗಳಲ್ಲಿ ಇದನ್ನು ಬಹಿರಂಗವಾಗಿಯೂ ಹೇಳಿದ್ದೇನೆ. ನನ್ನ ಬದುಕಿನಲ್ಲಿ ಶಿಸ್ತು, ಪ್ರಾಮಾಣಿಕತೆ, ಸಮಯಪ್ರಜ್ಞೆ, ಸಮಾಜದ ಬಗ್ಗೆ ಕಾಳಜಿ ಮೂಡಿರುವುದರ ಹಿಂದೆ ನನಗೆ ಶಿಕ್ಷಣ ನೀಡಿದ ಕ್ರಿಶ್ಚಿಯನ್ ಅಧ್ಯಾಪಕರ ಪ್ರಭಾವ ಬಹಳಷ್ಟಿದೆ. ಕರಾವಳಿಯಲ್ಲಿ ಕ್ರಿಶ್ಚಿಯನ್ ಶಿಕ್ಷಣ ಸಂಸ್ಥೆಗಳ ಪಾತ್ರ ಬಹಳ ದೊಡ್ಡದಿದೆ. ಇಂದು ನಮ್ಮ ಜಿಲ್ಲೆಯಲ್ಲಿ ಹೆಜ್ಜೆಗೊಂದರಂತೆ ಶಾಲಾ-ಕಾಲೇಜುಗಳು ಕಾಣುತ್ತಿದ್ದರೆ ಅದರ ಮೂಲಬೀಜ, ಅದಕ್ಕೆ ಕಾರಣ, ಪ್ರೇರಣೆ ಈ ಕ್ರಿಶ್ಚಿಯನ್ ಶಿಕ್ಷಣ

ಸಂಸ್ಥೆಗಳು. ಅವರಿಂದಾಗಿಯೇ ಮುಸ್ಲಿಮರು, ಹಿಂದುಳಿದವರು, ದಲಿತರು ಶಾಲೆ ಕಾಣುವಂತಾಯಿತು, ಅಕ್ಷರ ಕಲಿಯುವಂತಾಯಿತು.

ಬಜಪೆ ಶಾಲೆಯಲ್ಲಿ ಓದುತ್ತಿದ್ದಾಗ ನನಗೆ ತುಂಬಾ ಆತ್ಮೀಯನಾಗಿದ್ದ ಗೆಳೆಯ ಎಂದರೆ ಲಾರ್ಫಿ ಪಿಂಟೊ. ಈಗ ಆತ ಎಲ್ಲಿದ್ದಾನೆಂದು ನನಗೆ ಗೊತ್ತಿಲ್ಲ. ಈಗಲೂ ಆತ ನನ್ನನ್ನು ಬಹಳ ಕಾಡುತ್ತಿದ್ದಾನೆ. ನಮ್ಮಿಬ್ಬರಲ್ಲಿ ಬಹಳ ಆತ್ಮೀಯತೆಯಿತ್ತು. ಶಾಲೆಯಲ್ಲಿ ಪಾಠದಲ್ಲಾಗಲೀ ಆಟದಲ್ಲಾಗಲೀ ನಾವು ಒಬ್ಬರನ್ನು ಬಿಟ್ಟು ಒಬ್ಬರು ಇರುತ್ತಿರಲಿಲ್ಲ. ಬಿಡುವಿನ ಸಮಯದಲ್ಲಿ ಇಬ್ಬರೇ ಎಲ್ಲಿಯಾದರೂ ಕುಳಿತು ಹರಟುತ್ತಿದ್ದೆವು. ಆ ಹರಟೆಯಲ್ಲಿ ಸಿಗುತ್ತಿದ್ದ ಸುಖ, ಸಂತೋಷ ನೆನೆದಾಗ ಈಗಲೂ ನನಗೆ ಪುಳಕವಾಗುತ್ತದೆ. ಈ ಹರಟೆಯಲ್ಲಿ ನಮ್ಮ ಟೀಚರ್, ನಮ್ಮ ಶಾಲೆ, ಪಾಠ, ಶಾಲೆಯ ಹೆಣ್ಣುಮಕ್ಕಳು, ಯಕ್ಷಗಾನ, ನಮ್ಮ ಮನೆ... ಹೀಗೆ ಎಲ್ಲವೂ ಚರ್ಚೆಗೆ ಬರುತ್ತಿತ್ತು. ಇಂತಹ ಚರ್ಚೆಯಿಂದ ಬಹಳಷ್ಟು ವಿಚಾರಗಳು, ಪ್ರಶ್ನೆಗಳು ನಮ್ಮೊಳಗೆ ಸೃಷ್ಟಿಯಾಗಿ ನಮ್ಮನ್ನು ಚಿಂತನೆಗೆ ಹಚ್ಚುವಂತೆ ಮಾಡುತ್ತಿತ್ತು. ಆತನ ತಂದೆ ಬಸ್ರಾದಲ್ಲಿ ದೊಡ್ಡ ಆಫೀಸರ್ ಆಗಿದ್ದರು. ಅವರು ಅವನನ್ನು ಶಾಲೆ ಬಿಡಿಸಿ ಬಸ್ರಾಕ್ಕೆ ಕರೆದುಕೊಂಡು ಹೋದರು. ಆತ ಹೊರಡುವ ದಿನ ನಾವಿಬ್ಬರೂ ಬಹಳಷ್ಟು ಅತ್ತಿದ್ದೆವು. ಆ ಅಗಲಿಕೆಯ ಕ್ಷಣಗಳು, ಆ ನಂತರ ನಾನು ಒಂಟಿಯಾಗಿ ಕುಳಿತು ಅವನನ್ನು ನೆನಪಿಸಿಕೊಳ್ಳುತ್ತಿದ್ದುದು ಈಗಲೂ ನೆನಪಿದೆ. ಅವನ ಮನೆ ಈಗಲೂ ಇಲ್ಲಿ ಇದೆ. ಆದರೆ ಆತ ಎಲ್ಲಿದ್ದಾನೋ ಗೊತ್ತಿಲ್ಲ. ಅವನನ್ನು ನಾನಿಲ್ಲಿ ನೆನಪಿಸಿಕೊಳ್ಳಬೇಕು, ಅಷ್ಟೊಂದು ಆತ್ಮೀಯ ಆತ.

ಅಂದು 'ಬ್ಯಾರಿ' ಎಂದು ನಮ್ಮನ್ನು ಯಾರಾದರೂ ಕರೆದರೆ ನಮಗೆ ಕೆಂಡದಂತಹ ಸಿಟ್ಟು ಬರುತ್ತಿತ್ತು. ಬ್ಯಾರಿ ಎಂಬ ಶಬ್ದ ಬಹಳ ಕೀಳು ಮಟ್ಟದ್ದು, ನಮ್ಮನ್ನು ಗೇಲಿ, ವ್ಯಂಗ್ಯ ಮಾಡುವಂತಹದ್ದು ಎಂಬ ಅಭಿಪ್ರಾಯ ನಮ್ಮಲ್ಲಿ ಸಾರ್ವತ್ರಿಕವಾಗಿತ್ತು. ಶಾಲೆಯಲ್ಲಿ ನಮ್ಮೊಳಗೆ ಏನಾದರೂ ಜಗಳವಾದಾಗ 'ಬ್ಯಾರಿ' ಎಂದು ನಮ್ಮನ್ನು ಕರೆಯುತ್ತಿದ್ದರು. ಅಂದಿನ ದಿನಗಳಲ್ಲಿ ಇದು ನಮ್ಮನ್ನು ಬಯ್ಯುವುದು. ಇದು ವಿದ್ಯಾರ್ಥಿಗಳಲ್ಲಿ ಹೆಚ್ಚಾಗಿತ್ತು. ದೊಡ್ಡವರಲ್ಲಿ ಅಷ್ಟೊಂದು ಇರಲಿಲ್ಲ. ಹಿರಿಯರು ತಮ್ಮ ಹೆಸರಿನ ಹಿಂದೆ ಬ್ಯಾರಿ ಶಬ್ದ ಬಳಸುತ್ತಿದ್ದರು. ಅದಕ್ಕೆ ಕಾರಣ ಒಂದು ಕಾಲದಲ್ಲಿ ವ್ಯಾಪಾರಿಗಳಾದ ಬ್ಯಾರಿಗಳಿಗೆ ಇದ್ದ ಗೌರವ, ಪ್ರತಿಷ್ಠೆಯಾಗಿತ್ತು.

ನಮ್ಮ ತರಗತಿಯಲ್ಲಿ ನಮಗೆ ಕುಳಿತುಕೊಳ್ಳಲು ಬೆಂಚ್ ಇತ್ತು. ಕೆಲವು ತರಗತಿಗಳಲ್ಲಿ ಅದು ಇರಲಿಲ್ಲ. ನೆಲದಲ್ಲೇ ಕುಳ್ಳಿರಿಸಿ, ಪಾಠ ಹೇಳಿಕೊಡುತ್ತಿದ್ದರು. ಕೆಲವು ಸಂದರ್ಭಗಳಲ್ಲಿ ಶಾಲೆಯ ಬಳಿ ಮರದಡಿಯಲ್ಲಿ ನಮಗೆ ಪಾಠ ಮಾಡಿದ್ದೂ ಇದೆ. ಈಗಿನಂತೆ ಪುಸ್ತಕಗಳ ಹೊರೆ ಆಗ ಇರಲಿಲ್ಲ. ಒಂದು ಸ್ಲೇಟ್, ಒಂದು ತುಂಡು ಕಡ್ಡಿ, ಒಂದು ಪಾಠಪುಸ್ತಕ, ಒಂದು ಮಗ್ಗಿಪುಸ್ತಕ. ನಾನು ಐದನೇ ತರಗತಿಗೆ ಹೋಗುವವರೆಗೂ ನನಗೆ 4–5 ಪುಸ್ತಕ ಇದ್ದ ನೆನಪು. ಆಗ ಈಗಿನಂತೆ ಮನೆಕೆಲಸ ಕೂಡಾ ಕೊಡುತ್ತಿರಲಿಲ್ಲ. ಕೊಟ್ಟರೂ ವಾರಕ್ಕೊಮ್ಮೆ. ಅದೂ ಬಾಯಿಪಾಠ ಮಾಡಿಕೊಂಡು, ಕಾಪಿ ಬರೆದುಕೊಂಡು ಬರಲಿಕ್ಕೆ.

ನಮ್ಮ ಶಾಲೆಯ ಪಕ್ಕದ ಚರ್ಚ್‌ನಲ್ಲಿ ಕ್ರಿಶ್ಚಿಯನ್ನರ ಸಾಂತ್‌ಮಾರಿ ಹಬ್ಬ ಆಚರಿಸುತ್ತಿದ್ದರು. ಈ ಸಂದರ್ಭದಲ್ಲಿ ಶಾಲಾ ಮೈದಾನದಲ್ಲಿ ಸಂತೆಗಳು ತೆರೆದುಕೊಳ್ಳುತ್ತಿದ್ದವು. ಈ ಸಂತೆಯಲ್ಲಿ ಹೆಚ್ಚಾಗಿ ಸಿಹಿತಿಂಡಿಗಳ ಮಳಿಗೆಗಳು, ತೊಟ್ಟಿಲು, ಗೊಂಬೆಗಳು, ಆಟದ ಸಾಮಾನುಗಳೂ ಸಿಗುತ್ತಿದ್ದವು. ನಾವು ಕೂಡಿಟ್ಟ ಹಣ ಅಥವಾ ಮನೆಯಿಂದ ಕೇಳಿ ತಂದ ಹಣವನ್ನು ಅಲ್ಲಿ ಖರ್ಚು ಮಾಡುತ್ತಿದ್ದೆವು.

ಯಕ್ಷಗಾನ, ನಾಟಕ, ಜಾತ್ರೆಗಳಿಗೆ ಹೋಗುತ್ತಿದ್ದ ನಾನು ಕೋಲಕ್ಕೆ ಹೋಗಲು ಬಹಳ ಹೆದರುತ್ತಿದ್ದೆ. ಅದಕ್ಕೆ ಒಂದು ದೊಡ್ಡ ಕಾರಣ ಇದೆ. ಒಮ್ಮೆ ಒಂದು ಘಟನೆ ನಡೆಯಿತು. ಒಂದು ದಿನ ರಾತ್ರಿ ಪೇಜಾವರ ಮಠದ ಪಕ್ಕದ ಪಡ್ಪು ಎಂಬಲ್ಲಿ ಒಂದು ಕೋಲ (ನೇಮ) ಆಗುತ್ತಾ ಇತ್ತು. ನಾನು ಆ ಕೋಲಕ್ಕೆ ಹೋಗಿದ್ದೆ. ಅದಕ್ಕೆ ಹಿಂದೆಯೂ ಕೋಲ ನೋಡಿದ್ದೆ. ಅಂದು ಏನಾಯಿತು ಎಂದರೆ, ತಡರಾತ್ರಿ ಆ ಕೋಲ ನೋಡಿ ಹಿಂದಿರುಗುವಾಗ ಹಿಂದಿನಿಂದ ದೊಡ್ಡ ಆರ್ಭಟವೊಂದು ಕೇಳಿಸಿತು. ನಾನು ತಿರುಗಿ ನೋಡಿದರೆ ಭೂತದ ವೇಷಧಾರಿ ಒಂದು ಕೈಯಲ್ಲಿ ಕತ್ತಿ, ಮತ್ತೊಂದು ಕೈಯಲ್ಲಿ ಉರಿಯುವ ಕಂದೀಲು ಹಿಡಿದುಕೊಂಡು ಬೊಬ್ಬಿರಿಯುತ್ತಾ ನನ್ನ ಹಿಂದೆಯೇ ಓಡುತ್ತಾ ಬರುವುದು ಕಾಣಿಸಿತು. ಆತನ ಭಯಂಕರ ವೇಷ, ಆವೇಶ, ಆರ್ಭಟ ಕೇಳಿ ನಾನು ನಡುಗತೊಡಗಿದೆ. ಎದ್ದು ಬಿದ್ದು ಓಡುತ್ತಾ ಬಂದು ಹೇಗಾದರೂ ಮನೆ ಸೇರಿದೆ. ನನ್ನ ಹಿಂದೆ ಓಡಿಬಂದ ಭೂತದ ಪಾತ್ರಧಾರಿ ನಮ್ಮ ಮನೆಯ ಪಕ್ಕದ ಕೊಳಕ್ಕೆ ಬಿದ್ದುಬಿಟ್ಟ. ನಾನಂತೂ ಹೆದರಿ ಹೈರಾಣಾಗಿಬಿಟ್ಟಿದ್ದೆ. ಆ ಭಯ ನನ್ನ ಆರೋಗ್ಯದ ಮೇಲೆ ಬಹಳ ಪರಿಣಾಮ ಬೀರಿತು. ನನ್ನ ಅವತಾರ ನೋಡಿ ತಾಯಿಯೂ ಗಾಬರಿಯಾಗಿದ್ದರು. ಅವರು ಹೇಳಿದರು, “ನೀನು ಹೆದರಿಬಿಟ್ಟಿದ್ದಿಯಾ ಮಗ, ನಿನ್ನ ಹೆದರಿಕೆ ತೆಗೆಯಬೇಕು” ಎಂದು. ಈಗಲೂ ಆ ಘಟನೆ ನೆನೆದರೆ ನನಗೆ ಒಂಥರಾ ಭಯ ಆಗುತ್ತೆ. ನನ್ನ ಎಳೆ ಮನಸ್ಸಿನಲ್ಲಿ ಅದು ನಾಟಿಬಿಟ್ಟಿತ್ತು. ಕೊಳಕ್ಕೆ ಬಿದ್ದಿದ್ದ ಪಾತ್ರಿಯನ್ನು ಅವನ ಹಿಂದೆಯೇ ಓಡಿಬಂದಿದ್ದ ಭಕ್ತರು ಎತ್ತಿಕೊಂಡು ಹೋದರು. ಅವನು ಪ್ರಜ್ಞೆ ತಪ್ಪಿದ್ದ. ಜನ ಎಲ್ಲ ಗಾಬರಿಯಾಗಿ ಮಾತು–ಬೊಬ್ಬೆ ಕೇಳುತ್ತಿತ್ತು. ಆಮೇಲೆ ಕೆಲವು ದಿನ ನನಗೆ ಭೀಕರ ಜ್ವರ ಬಂತು. ನನ್ನ ಭಯ ತೆಗೆಯಲು ತಾಯಿ ಏನೆಲ್ಲ ಅಂದಿನ ಸಂಪ್ರದಾಯಗಳನ್ನು ಮಾಡಿದರು. ನಾಟಿಮದ್ದು ಕುಡಿಸಿದರು. ಹೀಗೆ ತಿಂಗಳುಗಳ ಕಾಲ ನಾನು ಮನೆಯ ಒಳಗೆಯೇ ಇದ್ದುಬಿಟ್ಟೆ. ಹೊರಗೆ ಬರಲು ಭಯವಾಗುತ್ತಿತ್ತು. ರಾತ್ರಿಯಾದೊಡನೆ ತಾಯಿಯ ಹಿಂದೆಯೇ ಬೀಳುತ್ತಿದ್ದೆ. ಅವರನ್ನು ಅಪ್ಪಿ ಹಿಡಿದು ಮಲಗುತ್ತಿದ್ದೆ. ಆದರೂ ನಿದ್ದೆ ಬರುತ್ತಿರಲಿಲ್ಲ. ಆ ಸಂದರ್ಭದಲ್ಲಿ ನಮ್ಮ ಹತ್ತಿರದ ಬಂಧುಗಳು ನನ್ನನ್ನು ನೋಡಲು ಬರುತ್ತಿದ್ದರು. ‘ಅವನು ಹೆದರಿದ್ದಂತೆ’ ಎಂದು ಮನೆಯವರೆಲ್ಲ ಮಾತನಾಡುತ್ತಿದ್ದುದು, ನನಗೆ ಧೈರ್ಯ ಹೇಳುತ್ತಿದ್ದುದು ಈಗಲೂ ನನಗೆ ನೆನಪಿದೆ. ಆಮೇಲೆ ನಾನು ಕೋಲಕ್ಕೆ ಹೋಗುವುದನ್ನು ಬಿಟ್ಟುಬಿಟ್ಟೆ. ಆ ಕೋಲದಲ್ಲಿ ಭೂತ ಆರ್ಭಟಿಸುತ್ತಾ ಹೇಳುತ್ತಿದ್ದ ಮಾತುಗಳು ಈಗಲೂ ನನಗೆ ನೆನಪಿದೆ – ಆ ಶೇಕರನ್ನು ಕರೆಯುವುದು, ಈ

ಶೇಕರನ್ನು ಕರೆಯುವುದು, ಪಲ್ಲಿ ಶೇಕರನ್ನು ಕರೆಯುವುದು – ಶೇಕರೆಂದರೆ ಊರಿನ ಮುಸ್ಲಿಂ ಮುಖಂಡರು. ಪಲ್ಲಿ ಶೇಕರೆಂದರೆ ಮಸೀದಿಯ ಗುರುಗಳು. ಇವರನ್ನೆಲ್ಲ ಭೂತ, ದರ್ಶನ ಬರುವಾಗ ಕರೆಯುತ್ತಿತ್ತು. ಬ್ಯಾರಿಗಳು ಕೋಲಕ್ಕೆ ಹೋಗುತ್ತಿದ್ದುದು ಆಗ ಒಂದು ಸಹಜವಾದ ವಿಷಯವಾಗಿತ್ತು. ಅಲ್ಲಿ ಅವರಿಗೆ ಬಹಳ ಗೌರವ ಕೊಡುತ್ತಾ ಇದ್ದರು. ಅಲ್ಲೇ ಪಕ್ಕದಲ್ಲಿ ಒಂದು ಅಶ್ವತ್ಥಕಟ್ಟೆ ಇತ್ತು. ಅದರಲ್ಲಿ ನಮ್ಮವರನ್ನು ಕುಳ್ಳಿರಿಸಿ ಆದರದಿಂದ ವಿಚಾರಿಸುತ್ತಿದ್ದರು. ಆಗ ಬ್ಯಾರಿಗಳೂ ಕೋಲಕ್ಕೆ ಎಣ್ಣೆ, ದುಡ್ಡು ಕಾಣಿಕೆ ನೀಡುತ್ತಿದ್ದರು. ಆ ಸಂದರ್ಭ ಅಲ್ಲಿ ಸಂತೆ, ಅಂಗಡಿಗಳು ಕೂಡಾ ಬ್ಯಾರಿಗಳದ್ದೇ ಜಾಸ್ತಿ ಇರುತ್ತಿತ್ತು.

ನಾನು ಮತ್ತೊಮ್ಮೆ ಬಾಲ್ಯದಲ್ಲಿ ಭಯಪಟ್ಟಿದ್ದು ಯಾವಾಗ ಎಂದರೆ, ನಮ್ಮೂರಿನಲ್ಲಿ 'ಮಾರಿ' ಓಡಿಸುವಾಗ. ನಾನು ಬಜಪೆಯಲ್ಲಿದ್ದಾಗ ಒಮ್ಮೆ ಆ ಊರಿನಲ್ಲಿ ಮಾರಿ ಓಡಿಸುತ್ತಾರೆ ಎಂದು ಪ್ರಚಾರವಾಯಿತು. ಹೀಗೆ ಮಾರಿ ಓಡಿಸುವಾಗ ಮನೆ ಮನೆಗೆ ತಿಳಿಯುವಂತೆ ಪ್ರಚಾರ ಮಾಡಲಾಗುತ್ತಿತ್ತು. ಒಮ್ಮೆ ಊರಿನಲ್ಲಿ ಅಲ್ಲಲ್ಲಿ ಸಿಡುಬು ಕಾಣಿಸಿಕೊಂಡಿತು. ಆಗ ಅದಕ್ಕೆ ಔಷಧಿ ಇರಲಿಲ್ಲ. ಆಗಿನ ನಂಬಿಕೆ ಎಂದರೆ ಈ ಸಿಡುಬು ಎಂಬ ಮಾರಿಯನ್ನು ಊರಿನ ಗಡಿಭಾಗಕ್ಕೆ ಓಡಿಸಿಕೊಂಡು ಹೋಗಿ ಅಲ್ಲಿ ಅದಕ್ಕೆ ಕೋಳಿಗಳನ್ನು ಬಲಿಯರ್ಪಿಸಿ ಮತ್ತೆ ಅದನ್ನು ಅಟ್ಟಿಸಿಕೊಂಡು ಹೋಗಿ ಕಾಡಿಗೆ ಬಿಟ್ಟು ಬರುವುದು. ಆ ಸಿಡುಬು ಮಾರಿ ಅಲ್ಲಿ ಸಾಯುತ್ತಿತ್ತು ಎಂಬುದು. ಈ ಮಾರಿಯನ್ನು ಓಡಿಸಲಿಕ್ಕಾಗಿ ಊರಿನ ದೈವಸ್ಥಾನದಲ್ಲಿ ಒಂದು ಧಾರ್ಮಿಕ ಕಾರ್ಯಕ್ರಮ ನಡೆಯುತ್ತಿತ್ತು. ಅಲ್ಲಿ ಪೂಜೆ ಎಲ್ಲ ಆದಮೇಲೆ ಮಧ್ಯರಾತ್ರಿ ಹೊತ್ತು ಊರಿನ ಜನರೆಲ್ಲ ಸೇರಿಕೊಂಡು ಮಾರಿಯನ್ನು ಓಡಿಸುತ್ತಿದ್ದರು. ಆಗ ಜನರೆಲ್ಲ ಕೈಯಲ್ಲಿ ತೆಂಗಿನ ಸೋಗೆಯಿಂದ ಕಟ್ಟಿದ ತೂಟೆ (ಪಂಜ)ಗೆ ಬೆಂಕಿ ಹಚ್ಚಿ ಅದನ್ನು ಹಿಡಿದುಕೊಂಡು ಬೀಸುತ್ತಾ ಬೊಬ್ಬಿರಿಯುತ್ತಾ ಓಡುತ್ತಿದ್ದರು. ಹಾಗೆ ಒಮ್ಮೆ ನಮ್ಮ ಮನೆಯ ಎದುರಿನ ದಾರಿಯಲ್ಲಿಯೇ ಮಾರಿಯನ್ನು ಓಡಿಸಿದ್ದರು. ಅಂದು ಆ ಜನರ ಆರ್ಭಟ, ಬೊಬ್ಬೆ, ಗಲಾಟೆ ಕೇಳಿ ಮಲಗಿದ್ದ ನಾನು ಭಯದಿಂದ ಕಂಪಿಸುತ್ತಾ ತಾಯಿಯನ್ನು ಅಪ್ಪಿ ಹಿಡಿದಿದ್ದೆ. ನನ್ನ ತಾಯಿ ನನ್ನ ಬೆನ್ನು ತಟ್ಟುತ್ತಾ "ಹೋಯಿತು ಮಗಾ, ಹೋಯಿತು, ಹೆದರಬೇಡ. ಅದು ಹೋಗಿ ಆಯಿತು" ಎಂದು ಸಮಾಧಾನಪಡಿಸುತ್ತಿದ್ದುದು ಈಗಲೂ ನನಗೆ ನೆನಪಿದೆ. ಅದು ಹಾಗೆ ರಸ್ತೆಯಲ್ಲಿ ಹಾದುಹೋಗುವಾಗ ಮನೆಯ ಕಿಟಕಿ ಬಾಗಿಲುಗಳನ್ನೆಲ್ಲಾ ಮುಚ್ಚುತ್ತಿದ್ದರು. ದೀಪಗಳನ್ನೆಲ್ಲ ಆರಿಸುತ್ತಿದ್ದರು. ಮನೆಯ ಹೊರಗೆ ಯಾರೂ ಬರುತ್ತಿರಲಿಲ್ಲ. ಇಣುಕಿ ಕೂಡಾ ನೋಡುತ್ತಿರಲಿಲ್ಲ. ಮಾರಿ ಓಡಿಸುವಾಗ ಓಡಿಸುವವರು ಯಾರೂ ನಿಲ್ಲಬಾರದು, ಹಿಂದಿರುಗಿ ನೋಡಬಾರದು, ಮುಂದೆಯೇ ನೋಡಬೇಕು, ಮನೆಯಿಂದ ಯಾರೂ ಹೊರಗೆ ಬರಬಾರದು ಎಂದು ಕಟ್ಟಪ್ಪಣೆ ಮಾಡಲಾಗುತ್ತಿತ್ತು. ಯಾರಾದರೂ ಎದುರು ಸಿಕ್ಕರೆ ಮಾರಿ ಅವರನ್ನು ಹೊಡೆದುರುಳಿಸುತ್ತದೆ. ಅವರು ರಕ್ತ ಕಾರಿ ಸಾಯುತ್ತಾರೆ ಎಂದು ಹೇಳುತ್ತಿದ್ದರು. ಹಾಗೆ ರಕ್ತ ಕಾರಿ ಸತ್ತ ಘಟನೆಗಳನ್ನು ಕತೆ ಕಟ್ಟಿ ವರ್ಣಿಸುತ್ತಿದ್ದರು.

ಮಾರಿ ಓಡಿಸಿದ ಮರುದಿನ ಬೆಳಿಗ್ಗೆ ಊರಿನ ಗಡಿಭಾಗಕ್ಕೆ ಹೋದರೆ ಅಲ್ಲಿ ಕೋಳಿಯ ಗರಿಗಳು, ಕುಂಕುಮ, ರಕ್ತದ ಕಲೆಗಳು ಕಾಣಸಿಗುತ್ತಿದ್ದವು. ರಸ್ತೆಗಳಲ್ಲೇ ಕೋಳಿಯ ಗರಿಗಳು ಚದುರಿ ಗಾಳಿಗೆ ಹಾರಾಡುತ್ತಿದ್ದವು. ಈ ಮಾರಿ ಓಡಿಸುವ ನಂಬಿಕೆ, ಭಯ ಆಗ ಬ್ಯಾರಿಗಳಲ್ಲೂ ಇತ್ತು.

ಮಯ್ಯದ್ದಿ ಬ್ಯಾರಿ ಅಂತ ಒಬ್ಬರು ಇಲ್ಲಿ ಇದ್ದರು. ಅವರು ಒಮ್ಮೆ ನನ್ನಲ್ಲಿ ಹೇಳಿದ್ದು. ಒಮ್ಮೆ ನಾನು ರಾತ್ರಿ ನಿಮ್ಮ ಮನೆ ಕಡೆ ಬರುತ್ತಾ ಇದ್ದೆ. ದಾರಿಯಲ್ಲಿ ಒಬ್ಬ ಅಪರಿಚಿತ ಎದುರಾದ. ಅವನು ನನ್ನನ್ನು ತಡೆದು 'ಬೀಡಿ ಇದೆಯಾ, ನನಗೆ ಒಂದು ಬೀಡಿ ಇದ್ದರೆ ಕೊಡು' ಎಂದು ಕೇಳಿದ. ನನಗೆ ಆಗಲೇ ಗೊತ್ತಾಯಿತು. ಇವ ಮನುಷ್ಯ ಅಲ್ಲ, ಮನುಷ್ಯನ ರೂಪದಲ್ಲಿರುವ ಪ್ರೇತ ಎಂದು. 'ಹೋಗುತ್ತೀಯಾ ಇಲ್ಲವಾ ಇಲ್ಲಿಂದ' ಎಂದು ನಾನು ಅದಕ್ಕೆ ಗದರಿಸಿ ಬಹಳ ಕಷ್ಟದಿಂದ ಅಲ್ಲಿಂದ ತಪ್ಪಿಸಿಕೊಂಡು ಬಂದಿದ್ದೆ ಎಂದು. ಇಂತಹ ಕಟ್ಟುಕತೆಗಳು, ನಂಬಿಕೆಗಳೆಲ್ಲ ಆಗ ಸರ್ವೇಸಾಮಾನ್ಯವಾಗಿತ್ತು. ಅಶಿಕ್ಷಿತ, ಮುಗ್ಧ ಜನ ಆಗ ಇದನ್ನೆಲ್ಲಾ ಸತ್ಯ ಎಂದೇ ನಂಬುತ್ತಿದ್ದರು. ಈಗ ಅದು ಯಾವುದೂ ಇಲ್ಲ. ಈಗ ದೊಡ್ಡ ಪ್ರೇತ, ಭೂತ ಎಂದರೆ ಅದು ಮನುಷ್ಯನೇ. ಈಗ ಮನುಷ್ಯನಿಗೆ ಮನುಷ್ಯನ ಭಯವೇ ಹೊರತು ಭೂತ, ಪ್ರೇತಗಳ ಹೆದರಿಕೆ ಇಲ್ಲ. ಇಂತಹ ಭೂತ, ಪ್ರೇತ, ಯಕ್ಷಿಗಳ ಹಲವಾರು ಕತೆಗಳನ್ನು ಕಣ್ಣಿಗೆ ಕಟ್ಟುವಂತೆ ತಾಯಿ ನಮಗೆ ಹೇಳುತ್ತಿದ್ದರು. ನನ್ನ ಅತ್ತೆ ಒಬ್ಬರು ಇದ್ದರು. ಅವರಿಗೆ ಮದುವೆಯಾಗಿರಲಿಲ್ಲ. ಒಮ್ಮೆ ಅವರು ಕೊಳದ ಬಳಿ ಬಟ್ಟೆ ಒಗೆಯಲು ಹೋದವರು ರಕ್ತ ಕಾರಿ ತೀರಿಕೊಂಡರು. ಜನರೆಲ್ಲ ಅವರು ಭೂತ ಹೊಡೆದು ತೀರಿಕೊಂಡದ್ದು, ಮಧ್ಯಾಹ್ನದ ಹೊತ್ತು ಆ ಕೊಳದ ಬಳಿ ಭೂತದ ಸವಾರಿ ಇದೆ. ಅದು ಭೂತ ಸವಾರಿ ಹೋಗುವ ದಾರಿ. ಆ ಹೊತ್ತು ಕೊಳದ ಬಳಿ ಯಾರೂ ಹೋಗಬಾರದೂಂತ ಆಡಿಕೊಳ್ಳುತ್ತಿದ್ದುದು ನನಗೆ ಈಗಲೂ ನೆನಪಿದೆ. ನಾನು ಬೆಳೆಯುತ್ತಿದ್ದಂತೆ, ವಿದ್ಯಾವಂತನಾಗುತ್ತಿದ್ದಂತೆ ಈ ಭೂತ ಹೊಡೆದು ರಕ್ತ ಕಾರಿ ಸಾಯುವುದೆಂದರೆ ಹೃದಯಾಘಾತವಾಗುವುದು ಎಂಬ ಸತ್ಯ ನನಗೆ ಅರಿವಾಗತೊಡಗಿತ್ತು. ನಮ್ಮ ಅತ್ತೆ, ಅಜ್ಜಿಯಂದಿರೆಲ್ಲ ಇಂತಹ ಕತೆಗಳು, ಸಂತರ, ಪ್ರವಾದಿಗಳ ಕಾರಣಿಕದ ಕತೆಗಳನ್ನೆಲ್ಲ ಬಹಳ ರಸವತ್ತಾಗಿ ಬಿಡುವಾದಾಗಲೆಲ್ಲ ನಮಗೆ ಹೇಳುತ್ತಾ ಇದ್ದರು. ಸಾಮಾನ್ಯವಾಗಿ ಕತ್ತಲಾದ ಮೇಲೆಯೇ ಕತೆ ಹೇಳುವುದು. ಯಾಕೆಂದರೆ ಆಗ ಅವರಿಗೆ ಬಿಡುವಿರುತ್ತಿತ್ತು. ನಾವೆಲ್ಲ ಕತ್ತಲಾಗುವ ಮೊದಲೇ ಮನೆ ಸೇರುತ್ತಿದ್ದೆವು. ಇಂತಹ ಸಮಯದಲ್ಲಿ ಅಜ್ಜಿ, ಅತ್ತೆಯಂದಿರನ್ನು ನಾವು ಕತೆ ಹೇಳಲು ಪೀಡಿಸುತ್ತಿದ್ದೆವು. ಈಗಿನ ಕಾಲದಲ್ಲಿ ಟಿವಿ ಇದ್ದ ಹಾಗೆ ಆಗ ನಮಗೆ ಅಜ್ಜಿ, ಅತ್ತೆಯಂದಿರು. ನಮ್ಮ ತಾಯಿ ಬ್ಯಾರಿ ಭಾಷೆಯಲ್ಲಿ ಬಹಳ ಇಂಪಾಗಿ ಹಾಡು ಹೇಳುತ್ತಾ ಇದ್ದರು. ನಾವು ಆಗ ಈ ಕತೆ, ಹಾಡುಗಳನ್ನೆಲ್ಲ ನಿದ್ದೆ ಬಿಟ್ಟು, ಸುತ್ತ ಕುಳಿತು ಬಹಳ ಕುತೂಹಲದಿಂದ ಆಲಿಸುತ್ತಿದ್ದೆವು.

ಪಕ್ಕದ ಊರು ಬೈಕಂಪಾಡಿಯವರಿಗಿಂತ ನಮ್ಮೂರಿನವರು ಹಾಡುವುದರಲ್ಲಿ ಯಾವತ್ತೂ ಮೇಲುಗೈ. ಆಗ ಊರಲ್ಲಿ ಹಾಡುವ ತಂಡಗಳಿರುತ್ತಿದ್ದವು. ಹಾಡುವುದೆಂದರೆ

ಒಬ್ಬೊಬ್ಬ ಹಾಡುವುದಲ್ಲ. ಗುಂಪು ಹಾಡುಗಳು. ಶ್ರೀಮಂತರ ಮದುವೆಗಳಲ್ಲಿ ಎರಡು ತಂಡಗಳ ನಡುವೆ ಸ್ಪರ್ಧೆ ಏರ್ಪಡುತ್ತಿತ್ತು. ಈ ಸ್ಪರ್ಧೆಗಳು ಬೆಳಗಿನ ತನಕ ನಡೆದದ್ದೂ ಇದೆ. ಮದುವೆ ಸಂದರ್ಭ ಮದುಮಗಳನ್ನು ಮಹಿಳೆಯರು, ಮದುಮಗನನ್ನು ಪುರುಷರು ಉಯ್ಯಾಲೆಯಲ್ಲಿ ಕುಳ್ಳಿರಿಸಿ ತೂಗುತ್ತಾ ಹಾಡುವುದು ಸಾಮಾನ್ಯವಾಗಿತ್ತು. ಅಂತಹ ಒಂದು ವಾಡಿಕೆಯೂ ಇತ್ತು. ನನ್ನ ತಾಯಿ ಹೇಳುತ್ತಾ ಇದ್ದರು – ಅವರ ಮದುವೆ ಸಂದರ್ಭ, ಅಂದು ಮದುಮಗ ಬಂದ ದಿನ. ನಿನ್ನ ತಂದೆಯನ್ನು ಉಯ್ಯಾಲೆಯಲ್ಲಿ ಕುಳ್ಳಿರಿಸಿ ತೂಗುತ್ತಾ ಎಲ್ಲರೂ ಕೂಡಿ ಹಾಡಿದ್ದೇ ಹಾಡಿದ್ದು. ಆ ಹಾಡನ್ನು ಕೇಳಲು, ನೋಡಲು ಊರಿನ ಬಹಳಷ್ಟು ಜನ ನೆರೆದಿದ್ದರು. ಏನು ನಗು, ಏನು ಖುಷಿ, ಏನು ಗಲಾಟೆ. ಒಳಗಿದ್ದ ನಾನು ಎಲ್ಲವನ್ನೂ ಕೇಳಿಸಿಕೊಂಡು ಸಂತಸಪಡುತ್ತಿದ್ದೆ. ನಾಚಿ ನೀರಾಗಿದ್ದೆ. ಎಲ್ಲ ಮಹಿಳೆಯರೂ ನನ್ನನ್ನು ಗೇಲಿ ಮಾಡಿ ನಗುತ್ತಿದ್ದರು ಎಂದು.

ನನ್ನ ಮಾವಂದಿರೆಲ್ಲ ಆಗ ಬಹಳ ಪ್ರತಿಭಾವಂತರಾಗಿದ್ದರು. ಊರಿನ ಯಾವುದೇ ಸಭೆ, ಸಮಾರಂಭಗಳಿಗೂ ಇವರಿಗೆ ವಿಶೇಷ ಹೇಳಿಕೆಗಳು ಬರುತ್ತಿದ್ದವು. ಅಲ್ಲಿಗೆ ಹೋಗಿ ಇವರು ಕಾರ್ಯಕ್ರಮವನ್ನು ಒಂದು ಸೇವೆಯ ರೀತಿಯಲ್ಲಿ ಅಚ್ಚುಕಟ್ಟಾಗಿ ಮಾಡಿ ಮುಗಿಸುತ್ತಿದ್ದರು. ಇಷ್ಟು ಮಾತ್ರವಲ್ಲ, ಗಾಳ ಹಾಕಿ ಮೀನು ಹಿಡಿಯುವುದು, ಎಳನೀರು, ಮಾವಿನಹಣ್ಣು ಕದಿಯುವುದು ಇಂತಹ ತರಲೆ ಕೆಲಸಗಳಲ್ಲೂ ಇವರು ನಿಪುಣರು. ಅವರೊಮ್ಮೆ ಏನು ಮಾಡಿದರು ಎಂದರೆ – ಮದುವೆ ಮನೆಯೊಂದರಲ್ಲಿ ರಾತ್ರಿ ಹಾಡಲು ಬಂದ ತಂಡಕ್ಕೆ ಚಹಾದಲ್ಲಿ ಅಫೀಮು ಬೆರೆಸಿಕೊಟ್ಟರು. ಆ ಚಹಾ ಕುಡಿದ ತಂಡ ಹಾಡಿದ್ದೇ ಹಾಡಿದ್ದು. ಸುಮಾರು ಬೆಳಿಗ್ಗೆ ಐದು ಗಂಟೆಯವರೆಗೆ ಲೀಲಾಜಾಲವಾಗಿ ಯಾವ ಆಯಾಸವೂ ಇಲ್ಲದೆ ಹಾಡಿದ್ದು ಅವರಿಗೆ ಗೊತ್ತೇ ಆಗಲಿಲ್ಲ. ಬೆಳಿಗ್ಗೆ ಅಫೀಮಿನ ಅಮಲು ಇಳಿದ ಬಳಿಕ ಗೊತ್ತಾಯಿತು ಅವರಿಗೆ ಈ ರೀತಿ ಮೋಸ ಮಾಡಿದ್ದಾರೆ ಎಂದು. ಆ ಕೋಪದಲ್ಲಿ ಅವರು ಮನೆಯ ಕುರ್ಚಿ, ಮೇಜುಗಳನ್ನೆಲ್ಲ ಎತ್ತಿಕೊಂಡು ಹೋಗಿ ಪಕ್ಕದ ನದಿಗೆ ಎಸೆದುಬಿಟ್ಟಿದ್ದರು. ಅನಂತರ ಹಿರಿಯರೆಲ್ಲ ಸೇರಿ ಇದು ಆ ಪೋಕರಿಗಳ ಕೆಲಸ, ನಮಗಿದೆಲ್ಲ ಗೊತ್ತೇ ಇಲ್ಲ ಎಂದು ಅವರನ್ನು ಸಮಾಧಾನಪಡಿಸಿ ಕಳುಹಿಸಿದ್ದರಂತೆ. ಇಂತಹ ಘಟನೆಗಳನ್ನು ಸಂದರ್ಭ ಬಂದಾಗಲೆಲ್ಲ ತಾಯಿ ಹೇಳುತ್ತಿದ್ದರು.

ನನ್ನ ಚಿಕ್ಕಮ್ಮನ ಮದುವೆಗೆ ಅವರ ಮದುಮಗ ಬಂದದ್ದು ಕುದುರೆಯಲ್ಲಿಯಂತೆ. ಅವರು ಪೇಟ ಕಟ್ಟಿಕೊಂಡು ಮೆರವಣಿಗೆಯಲ್ಲಿ ಬ್ಯಾಂಡು, ಚೀನಕೋಲು, ತಾಲೀಮು, ಸಿಡಿಮದ್ದುಗಳಲ್ಲಿ ಬಂದಿದ್ದಂತೆ. ಬಹಳ ಅದ್ದೂರಿಯ ಮದುವೆಯಂತೆ. ಆ ಮದುವೆ 15 ದಿನಗಳು ನಡೆದಿತ್ತಂತೆ. ಅಂತಹ ಮದುವೆ ಆ ತನಕ ಆ ಊರಲ್ಲಿ ನಡೆದೇ ಇಲ್ಲವಂತೆ ಎಂದು ಅಮ್ಮ ಬಹಳ ಹೆಮ್ಮೆಯಿಂದ ಹೇಳುತ್ತಿದ್ದರು.

ಬಾಲ್ಯದಲ್ಲಿ ನನಗೆ ಚಿನ್ನಿದಾಂಡು (ಕುಟ್ಟಿದೊಣ್ಣೆ) ಆಟದಲ್ಲಿ ಬಹಳ ಆಸಕ್ತಿ. ನನಗೆ ಉಂಞಿ ಅಂತ ಒಬ್ಬ ಗೆಳೆಯನಿದ್ದ. ಅವನೂ ನಾನು ಒಟ್ಟಿಗೆ ಆಡಲು ಹೋಗುತ್ತಿದ್ದುದು.

ಇನ್ನೊಬ್ಬ ಗೆಳೆಯ ಹಾತಿಮ್ ಅಂತ. ಅವನು ಇತ್ತೀಚೆಗೆ ತೀರಿಕೊಂಡ. ಆಗ ನಮಗಿಂತ ದೊಡ್ಡವರು ನಮ್ಮ ಜೊತೆ ಆಡುತ್ತಿದ್ದರು. ಆಟಕ್ಕೆ ಇಂತಹ ಸಮಯ ಅಂತ ಇರಲಿಲ್ಲ. ಒಮ್ಮೊಮ್ಮೆ ಬೆಳಿಗ್ಗೆಯೇ ಎದ್ದು ಆಟಕ್ಕೆ ಹೋಗುತ್ತಿದ್ದೆವು. ಯಾರಾದರೂ ಆಡುವುದನ್ನು ಕಂಡರೆ ನಾವೂ ಹೋಗಿ ಸೇರಿಕೊಳ್ಳುತ್ತಿದ್ದೆವು. ಆಟಕ್ಕೆ ಹೋದರೆ ಸಮಯ ಸರಿದದ್ದೇ ಗೊತ್ತಾಗುತ್ತಿರಲಿಲ್ಲ. ಗೆಳೆಯರ ಜೊತೆ ಸೇರಿದರೆ ಹಸಿವು, ದಾಹ ಯಾವುದೂ ನೆನಪಿರುತ್ತಿರಲಿಲ್ಲ. ಒಮ್ಮೊಮ್ಮೆ ಬೆಳಗ್ಗಿಂದ ಸಂಜೆಯವರೆಗೂ ಆಡಿ ಮನೆಯ ಹಿರಿಯರಿಂದ ಬೈಗುಳ ತಿಂದದ್ದೂ ಇದೆ.

ನನ್ನನ್ನು ಶಾಲೆಗೆ ಸೇರಿಸಿದ ಈ ಜಕ್ರಿಬ್ಯಾರಿ ಇದ್ದಾರಲ್ಲ ಅವರು ನಾನು ಆಡುವುದನ್ನು ಕಂಡರೆ ನನ್ನನ್ನು ಎಳೆದುಕೊಂಡು ಹೋಗಿ ಸರೀ ಹೊಡೆಯುತ್ತಿದ್ದರು. "ಎಂತ ಹಲಾಕ್‌ನ ಆಟ ನಿನ್ನದು, ಹೋಗಿ ಚೆನ್ನಾಗಿ ಓದು" ಎಂದು ಗದರಿಸುತ್ತಿದ್ದರು. ಒಮ್ಮೆ ಈ ಜಕ್ರಿಬ್ಯಾರಿ ನಾನು ಆಟ ಆಡಿದ್ದಕ್ಕೆ ಬಾಸುಂಡೆ ಬರುವಂತೆ ಚೆನ್ನಾಗಿ ಹೊಡೆದಿದ್ದರು. ಉಂಞಿ ಮನೆಯ ಇಬ್ಬರು ಹೆಣ್ಣುಮಕ್ಕಳ ಮುಂದೆಯೇ ಈ ರೀತಿ ಹೊಡೆದದ್ದು ನನಗೆ ಬಹಳ ಅವಮಾನವಾಗಿತ್ತು. ಈ ಬೇಸರ ನನ್ನ ಮನಸ್ಸಿನಲ್ಲಿ ಬಹಳ ದಿನ ಉಳಿದಿತ್ತು. ನನ್ನ ತಂದೆ ಊರಲ್ಲಿಲ್ಲದ ಕಾರಣ ಈ ಜಕ್ರಿ ಬ್ಯಾರಿ ನನ್ನ ಮೇಲೆ ಒಂದು ಕಣ್ಣಿಟ್ಟಿದ್ದರು. ಅವರಿಗೆ ನಾನೆಂದರೆ ವಿಶೇಷ ಪ್ರೀತಿ, ಕಾಳಜಿ ಇತ್ತು. ನಾವು ಆಟ ಆಡುತ್ತಾ ಇದ್ದರೆ ನಮಗೆ ಪೆಟ್ಟು ಸಿಗಲಿಕ್ಕಾಗಿ ನಮಗೆ ಆಗದವರು ಅವರ ಬಳಿ ಹೋಗಿ ಚಾಡಿ ಹೇಳುತ್ತಿದ್ದರು. ಈ ಉಂಞಿ ಇದ್ದಾನಲ್ಲ ಇವನು ಒಮ್ಮೆ ಚಿನ್ನಿದಾಂಡು ಆಡುವಾಗ ಚಿನ್ನಿಯನ್ನು ಕ್ಯಾಚ್ ಹಿಡಿದೆ ಎಂದು ಸುಳ್ಳು ಹೇಳಿದ್ದ. ಎಲ್ಲ ಸೇರಿ ಹೇಳಿದರೂ ಇಲ್ಲ, ನಾನು ಕ್ಯಾಚ್ ಹಿಡಿದಿದ್ದೆ ಎಂದು ವಾದಿಸತೊಡಗಿದ. ಆಗ ಎಲ್ಲರೂ ಸೇರಿ ಅವನ ಮುಖ ಮೂತಿ ನೋಡದೆ ಸರಿಯಾಗಿ ಬಾರಿಸಿದ್ದರು. ಕೊಟ್ಟ ಪೆಟ್ಟಿಗೆ ಅವನ ಮುಖದಲ್ಲಿ ರಕ್ತ ಸೋರುತ್ತಿತ್ತು. ನಾನು ಅವನನ್ನು ಸಮಾಧಾನಪಡಿಸಿ ಕರೆತಂದಿದ್ದೆ. ಮನೆಯಲ್ಲಿ ಬಿದ್ದದ್ದು ಎಂದು ಸುಳ್ಳು ಹೇಳಿದ್ದೆವು.

ಆಗ ಗಂಡುಮಕ್ಕಳು ಹೆಚ್ಚಾಗಿ ಚಿನ್ನಿದಾಂಡು ಆಡುತ್ತಿದ್ದದ್ದು. ಮತ್ತೆ ಕೆಲವರು ಗಿಡಿ, ಕಬಡ್ಡಿ, ಪಲ್ಲೆ, ಬಚ್ಚ, ಗೋಲಿ, ಲಗೋರಿ, ಬಿಲ್ಲೀಸ್ (ಗೇರುಬೀಜ ಇಟ್ಟು ಆಡುವುದು), ಕುಕ್ಕಾಟ ಆಡುತ್ತಿದ್ದರು. ಹೆಣ್ಣುಮಕ್ಕಳು ಕೋಲಾಟ, ಸ್ಕಿಪ್ಪಿಂಗ್, ಕಲ್ಲಾಟ, ಕಣ್ಣಾಮುಚ್ಚಾಲೆ, ಡೊಂಕ, ಚೆನ್ನೆಮನೆ, ಪಾಪಚ್ಚಿ ಆಟ ಆಡುತ್ತಿದ್ದರು. ಗಂಡುಮಕ್ಕಳು ಆಡುವ ಆಟದಲ್ಲಿ ಹೆಣ್ಣುಮಕ್ಕಳು ಪಾಲ್ಗೊಳ್ಳುತ್ತಿರಲಿಲ್ಲ. ಆದರೆ ಹೆಣ್ಣುಮಕ್ಕಳು ಆಡುವ ಆಟದಲ್ಲಿ ಗಂಡುಮಕ್ಕಳು ಪಾಲ್ಗೊಳ್ಳುತ್ತಿದ್ದರು. ಒಮ್ಮೊಮ್ಮೆ ಹೆಣ್ಣುಮಕ್ಕಳು ಗುಂಪಾಗಿ ಆಡುತ್ತಿದ್ದರೆ ನಾವು ನಿಂತು ನೋಡುತ್ತಿದ್ದೆವು. 'ಅರ್ಪೆಂತಿರ್ಪೆಂ' ಎಂಬ ಒಂದು ಆಟ ಇತ್ತು. ನನಗೆ ಈಗಲೂ ನೆನಪಿದೆ – ನನಗೆ ಈ ಆಟ ತುಂಬಾ ಇಷ್ಟ. ಅದನ್ನು 3–4 ಜನ ಹೆಣ್ಣು, ಗಂಡು ಒಟ್ಟಿಗೆ ಮನೆಯ ಜಗಲಿಯಲ್ಲಿಯೇ ಕುಳಿತು ಆಡುತ್ತಿದ್ದೆವು. ಎಲ್ಲರೂ ತಮ್ಮ ಎರಡು ಅಂಗೈಯನ್ನು ನೆಲಕ್ಕೆ ಒತ್ತಿ ಇಟ್ಟು, ಒಬ್ಬ ತನ್ನ ಒಂದು ಕೈಯಿಂದ 'ಅರ್ಪೆಂ – ತಿರ್ಪೆಂ – ಕೋರಗ್

ಮಂಜೆಲ – ಬಲಿಪಂ – ಪಲ್ಲಿಲ್ – ಬಾಂಗ್ – ಕೊಡುಕೊಂಬೊ – ಎಂದ್ ಪೂ' ಹೇಳುವಾಗ ಎಲ್ಲರೂ 'ಮುರ್ಕಿ ಪೂ' – ಎನ್ನುವರು. 'ಮುರ್ಕಿ – ಚರ್ಕಿ – ಎಣ್ಣೆ – ಕುಡಿಚಿ – ಕಾಲಾ – ಕೈಯಾ – ಒನ್ನಾ – ಜಂಡಾ – ಕೊತ್ತಿ – ಕೊತ್ತಿ – ಮಡಕಟ್ಟೆ' – ಹೀಗೆ ಒಂದೊಂದೇ ಶಬ್ದ ಹೇಳುತ್ತಾ ಒಂದೊಂದೇ ಕೈಯನ್ನು ಒಬ್ಬ ತನ್ನ ತೋರು ಬೆರಳಿನಿಂದ ಎಣಿಸುವಂತೆ ಮುಟ್ಟುತ್ತಾ ಬಂದು ಕೊನೆಗೆ 'ಮಡಕಟ್ಟೆ' ಎಂದು ಹೇಳುವಾಗ ನಿಲ್ಲಿಸುತ್ತಾಳೆ/ನೆ. ಆಗ ಬೆರಳು ಯಾರ ಕೈ ಮೇಲಿತ್ತೋ ಆ ಕೈ ಹೊರಗೆ (ಔಟ್). ಮತ್ತೆ ಆಟ ಶುರು. ಕೊನೆಗೆ ಯಾರ ಕೈ ನೆಲದ ಮೇಲೆ ಉಳಿಯುತ್ತದೋ ಆ ಕೈ ರಾಜ. ಮತ್ತೆ ಶುರುವಿನಿಂದಲೇ ಆಟ ಪ್ರಾರಂಭ. ಇದೊಂಥರ ಮ್ಯೂಸಿಕಲ್ ಚೆಯರ್ ಆಟ ಇದ್ದಂತೆ. ಬಹುಶಃ ಮ್ಯೂಸಿಕಲ್ ಚೆಯರ್ ಆಟ ಈ ಜಾನಪದ ಆಟವನ್ನು ಆಧಾರವಾಗಿಟ್ಟು ಕೊಂಡು ಸೃಷ್ಟಿ ಮಾಡಿದ್ದೋ ಏನೋ. ಅಂತೂ ಅಂದು ಇದು ಬಹಳ ಆಸಕ್ತಿದಾಯಕ ಆಟ. ಈ ಆಟ ಆಡುವಾಗ ಬಹಳಷ್ಟು ಜನ ಗುಂಪು ಸೇರಿ ಆಟ ವೀಕ್ಷಿಸುತ್ತಿದ್ದರು. ಆಗಿನ ಕಾಲದಲ್ಲಿ ಗಂಡು–ಹೆಣ್ಣುಮಕ್ಕಳು ಎಂಬ ಭೇದ ಇರಲಿಲ್ಲ. ಒಟ್ಟಿಗೆ ಉಣ್ಣುವುದು, ಒಟ್ಟಿಗೆ ಆಡುವುದು, ಮನೆಯಲ್ಲಿ ಒಂದೇ ಕೋಣೆಯಲ್ಲಿ ಒಟ್ಟಿಗೆ ನೆಲದಲ್ಲಿ ಮಲಗುವುದು ಇತ್ತು. ಒಮ್ಮೊಮ್ಮೆ ಮಕ್ಕಳ ಮಧ್ಯೆಯೇ ಅಜ್ಜ–ಅಜ್ಜಿಯಂದಿರೂ, ಹಿರಿಯರೂ ಮಲಗುತ್ತಿದ್ದರು.

ನನ್ನ ಬಾಲ್ಯ ಕಾಲದಲ್ಲಿ ಎಲ್ಲೆಲ್ಲೂ ಬಡತನವಿತ್ತು. ಸರಕಾರದಿಂದ ಗೋಧಿ ಸಿಗುತ್ತಿತ್ತು. ಅದನ್ನು ತಂದು ನಾವು ದೋಸೆ ಮಾಡಿ ತಿನ್ನುತ್ತಿದ್ದೆವು. 'ದೊಡ್ಡ ಜೋಳ'ದ ದೋಸೆಯೂ ಮಾಡುತ್ತಿದ್ದೆವು. ಹಲಸಿನ ಬೀಜ, ಗೆಣಸು, ಹುರುಳಿ ಮುಂತಾದವುಗಳನ್ನು ಬಡವರು ಬೇಯಿಸಿ ತಿನ್ನುತ್ತಿದ್ದರು. ಒಳ್ಳೆಯ ಊಟ ಸಿಗಬೇಕೆಂದರೆ ಹಬ್ಬಗಳು ಬರಬೇಕು. ಇಲ್ಲದಿದ್ದರೆ ಮದುವೆ, ಮೌಲೂದು (ಧಾರ್ಮಿಕ ಕಾರ್ಯಕ್ರಮ)ಗಳಂತಹ ಕಾರ್ಯಕ್ರಮ ಗಳು ಊರಲ್ಲಿ ಯಾವುದಾದರೂ ಶ್ರೀಮಂತರ ಮನೆಗಳಲ್ಲಿ ಇರಬೇಕಷ್ಟೆ.

ತಾಯಿ ಹೇಳುತ್ತಾ ಇದ್ದರು. 1944ರಲ್ಲಿ ಎರಡನೇ ಮಹಾಯುದ್ಧದ ಸಂದರ್ಭದಲ್ಲಿ ಒಮ್ಮೆ ಏನಾಯಿತು ಎಂದರೆ, ಆಹಾರದ ಬಹಳ ಕೊರತೆ ಉಂಟಾಯಿತು. ಎಲ್ಲಿಯವರೆಗೆಂದರೆ ತಿನ್ನಲು ಏನೂ ಇಲ್ಲದಂತಹ ಪರಿಸ್ಥಿತಿ ಬಂತು. ಎಲ್ಲೆಲ್ಲೂ ಹಾಹಾಕಾರ. ಆಗ ನಮ್ಮ ಊರಿನ ಬಡತನದ ಸ್ಥಿತಿಗತಿಯ ಸಮೀಕ್ಷೆ ನಡೆಸಲು ಸರಕಾರ ಒಂದು ತಂಡವನ್ನು ಕಳುಹಿಸಿತ್ತು. ಆ ತಂಡದಲ್ಲಿ ಯುರೋಪಿಯನ್ಸ್ ಕೂಡಾ ಇದ್ದರು. ಆಗಿನ ಕಾಲದಲ್ಲಿ ಮಿಲಿಟರಿಯವರ ಬಗ್ಗೆ ಮಹಿಳೆಯರಿಗೆ ಬಹಳ ಭಯವಿತ್ತು. ಈ ಸಮೀಕ್ಷಾ ತಂಡ ಮಿಲಿಟರಿಯವರ ತರಹದ್ದೇ ಒಂದೆರಡು ವಾಹನಗಳಲ್ಲಿ ಬಂದಿದ್ದುದರಿಂದ ಇವರು ಮಿಲಿಟರಿಯವರೇ ಇರಬೇಕು ಎಂಬ ಬಗ್ಗೆ ಮಹಿಳೆಯರಲ್ಲಿ ಗುಮಾನಿ ಇತ್ತು. ಮಿಲಿಟರಿಯವರು ಮಹಿಳೆಯರನ್ನು ಎಳೆದುಕೊಂಡು ಹೋಗುತ್ತಾರೆ, ಅತ್ಯಾಚಾರ ಮಾಡುತ್ತಾರೆ ಎಂಬ ಮಾತು ಆಗ ಅಲ್ಲಲ್ಲಿ ಕೇಳಿಬರುತ್ತಾ ಇತ್ತು. ಈ ಮಿಲಿಟರಿಯವರ ವಾಹನಗಳು ಊರಿನಲ್ಲಿ ಹಾದು ಹೋಗುವಾಗಲೆಲ್ಲ ಮಹಿಳೆಯರು ಹೊರಗೆ ಬರುತ್ತಿರಲಿಲ್ಲ. ಈ ಸಮೀಕ್ಷಾ ತಂಡದ ವಾಹನ ಬಂದಾಗಲೂ ನಮ್ಮೂರಿನ ಮಹಿಳೆಯರು

ಅಡಗಿಕೊಳ್ಳತೊಡಗಿದರು. ಮಕ್ಕಳನ್ನು ಅವರವರ ಮನೆಯ ಹೆಂಗಸರು ಹೊರಗೆ ಬರಲು ಬಿಡುತ್ತಿರಲಿಲ್ಲ. ಎಲ್ಲೆಲ್ಲೂ ಒಂಥರಾ ಭಯದ ವಾತಾವರಣ. ಮಹಿಳೆಯರೆಲ್ಲ ಸೇರಿದಲ್ಲಿ ಈ ಮಿಲಿಟರಿಯವರ ಬಗ್ಗೆನೇ ಗುಸುಗುಸು. ಕೊನೆಗೆ ಆ ತಂಡ ಊರಿನ ಗ್ರಾಮಸಭೆಯಲ್ಲಿ ಸೇರಿ ಊರಿನ ಬಡತನದ ಸ್ಥಿತಿಯ ಸಮೀಕ್ಷೆ ನಡೆಸಿದ್ದು ಗೊತ್ತಾದ ಮೇಲೂ ಮಹಿಳೆಯರು ಮನೆಯಿಂದ ಹೊರಬರುವ ಧೈರ್ಯ ಮಾಡಲಿಲ್ಲ. ತಂಡ ಹೋದ ಮೇಲೆಯೇ ಅವರು ತಲೆ ಹೊರಗೆ ಹಾಕಿದ್ದು.

ಇನ್ನೊಂದು ಸ್ವಾರಸ್ಯರಕ ಘಟನೆ ಹೇಳುತ್ತೇನೆ. ನಮ್ಮ ಕಾಂಪೌಂಡು ಇದೆಯಲ್ಲ – ಅಲ್ಲಿಯೇ ಬಂಟ್ಕಲ್ ಬಾವು ಬ್ಯಾರಿ ಅಂತ ಒಬ್ಬರಿದ್ದರು. ದೊಡ್ಡ ವ್ಯಾಪಾರಿ. ನನ್ನ ತಾಯಿಯ ಮಾವನಿಗೆ ಅವರ ಪೈಕಿ ಮದುವೆಯಾಗಿತ್ತು. ಆಗಿನ ಕಾಲದಲ್ಲಿ ಮದುಮಗ ಮದುಮಗಳ ಮನೆಗೆ ಮೊದಲ ಸಲ ಹೋಗುವಾಗ ಮದುಮಗನ ಗೆಳೆಯರು ಬಹಳ ಜನ ಜೊತೆಗೆ ಹೋಗುತ್ತಿದ್ದರು. ಮತ್ತು ಯಾರನ್ನಾದರೂ ಇಬ್ಬರು ಮಕ್ಕಳನ್ನು ಅಲ್ಲಿ ಮದುಮಗನ ಜೊತೆ ಉಳಿಯಲು ಕರೆದುಕೊಂಡು ಹೋಗುತ್ತಿದ್ದರು. ಅಂದು ರಾತ್ರಿ ಅಲ್ಲಿ ಕೋಳಿ ಸಾರು, ನೈಚೋರು, ಸಿಹಿತಿಂಡಿ ಎಲ್ಲಾ ಇತ್ತು. ನಾವೆಲ್ಲ ಗಡದ್ದಾಗಿ ಊಟ ಮಾಡಿದೆವು. ಎಲ್ಲರೂ ಅಲ್ಲಿಂದ ಹಿಂದಿರುಗಿದ ಮೇಲೆ ನಾನು ಮತ್ತು ಮದುಮಗ ಅಲ್ಲಿ ಉಳಿದೆವು.

ಮುಂಜಾನೆ ನಮಗೆ ತುಪ್ಪ ಸವರಿದ ಪತ್ತರ್, ಕೋಳಿಸಾರು, ತುಪ್ಪದ ಗಂಜಿ ಕೊಟ್ಟರು. ಅದನ್ನು ತಿಂದು ಚಹಾ ಕುಡಿಯುತ್ತಿದ್ದಾಗ ಅಲ್ಲೇ ಗೋಡೆಯಲ್ಲಿ ತೂಗು ಹಾಕಿದ್ದ ಕ್ಯಾಲೆಂಡರ್ ನೋಡಿದೆವು. ಅದರಲ್ಲಿ ಎರಡು ಫೋಟೋಗಳಿದ್ದವು. ಒಂದು ಅಬುಲ್ ಕಲಾಂ ಆಝಾದ್‌ರದ್ದು, ಮತ್ತೊಂದು ಜಿನ್ನಾರದ್ದು. ನಾವು ಅದನ್ನು ಗಮನಿಸುತ್ತಿರುವುದನ್ನು ನೋಡಿದ ಹಿರಿಯರೊಬ್ಬರು 'ಫೋಟೋದಲ್ಲಿರುವ ಈ ಇಬ್ಬರು ಯಾರು ಎಂದು ನಿಮಗೆ ಗೊತ್ತಾ?' ಎಂದು ಕೇಳಿದರು. ನಾವು ಮಾತನಾಡಲಿಲ್ಲ. ಮತ್ತೆ ಅವರೇ ಹೇಳಿದರು – ಎಡಬದಿದ್ದು ಅಬುಲ್ ಕಲಾಂ ಆಝಾದ್. ಇವ ದೊಡ್ಡ ಹರಾಮಿ. ನಮ್ಮ ಈ ಇಡೀ ದೇಶವನ್ನೇ ಹಾಳು ಮಾಡಿದ ಕೆಟ್ಟ ಮನುಷ್ಯ ಇವ. ಹಾಗೆ ಹೇಳುವಾಗ ಅವರ ಮಾತು, ಮುಖದಲ್ಲಿ ದ್ವೇಷವಿತ್ತು. ಮತ್ತೆ ಬಲಬದಿಯ ಫೋಟೋ ಯಾರದು ಗೊತ್ತಾ? ಇನ್ನೊಂದು ಫೋಟೋಗೆ ಬೆರಳು ತೋರಿಸಿ ಹೇಳಿದರು. ಇವರು ಜಿನ್ನಾ. ಇವರು ನಮ್ಮ ನಾಯಕ. ನಮ್ಮನ್ನು ರಕ್ಷಿಸಿದವರು. ಬಹಳ ಒಳ್ಳೆಯ ವ್ಯಕ್ತಿ.

ಅಬುಲ್ ಕಲಾಂ ಆಝಾದ್‌ರಂತಹ ಮಹಾನ್ ವ್ಯಕ್ತಿಯ ಬಗ್ಗೆ ಅವರಿಗಿದ್ದ ಅಸಹನೆ, ದ್ವೇಷ; ಜಿನ್ನಾರ ಬಗ್ಗೆ ಅವರಿಗಿದ್ದ ಪ್ರೀತಿ, ಹೆಮ್ಮೆ ನೋಡಿ ನನಗೆ ಆ ಎಳೆಯ ಪ್ರಾಯದಲ್ಲೂ ಕಸಿವಿಸಿಯಾಗಿತ್ತು. ಅವರು ಪತ್ರಿಕೆಗಳನ್ನು ಓದುತ್ತಿರಲಿಲ್ಲ. ಆ ಊರಿಗೆ ಪತ್ರಿಕೆಗಳು ಬರುತ್ತಲೂ ಇರಲಿಲ್ಲ. ಆ ಊರಿಗೇ ಅಂತಲ್ಲ, ಸಾಧಾರಣವಾಗಿ ಪತ್ರಿಕೆಗಳು ಹಳ್ಳಿಗಳಲ್ಲಿ ನೋಡಲೂ ಸಿಗುತ್ತಿರಲಿಲ್ಲ. ಓದುವ ಹವ್ಯಾಸವೂ ಬಹಳ ವಿರಳ. ಹೆಚ್ಚಾಗಿ

ಅಧ್ಯಾಪಕರು, ವಿದ್ಯಾವಂತರು, ನಗರವಾಸಿಗಳು ಮಾತ್ರ ಪತ್ರಿಕೆಗಳನ್ನು ಓದುತ್ತಿದ್ದರು. ಆ ಮನೆಯಲ್ಲಿ ರೇಡಿಯೋ ಕೂಡಾ ಇರಲಿಲ್ಲ. ಆದರೂ ಆ ಮನೆಗೆ ಅದು ಹೇಗೆ ತಪ್ಪು ಸಂದೇಶ ರವಾನೆಯಾಗಿದೆ. ಜಿನ್ನಾರ ಕೋಮುವಾದ ಹೇಗೆ ಹಳ್ಳಿಗಳ ಮನೆ ಮನೆಗೂ ತಲುಪಿದೆ ನೋಡಿ. ಇಂತಹ ಕೋಮುವಾದವನ್ನು ಅಂದಿನ ಕಾಲದಲ್ಲೂ ವ್ಯವಸ್ಥಿತವಾಗಿ ಮನೆ ಮನೆಗೆ ತಲುಪಿಸಲಾಗುತ್ತಿತ್ತು. ಓದು ಬರಹ ಬಾರದ ಮುಗ್ಧ ಜನ ಇದನ್ನು ಬಹಳ ಸುಲಭವಾಗಿ ನಂಬಿಬಿಡುತ್ತಿದ್ದರು.

ಬಾಲ್ಯದಲ್ಲಿ ನಮ್ಮದು ತುಂಬಾ ಬಡ ಕುಟುಂಬ. ಅಂದಂದಿನ ಅಕ್ಕಿ, ಸಂಬಾರಗಳನ್ನು ಅಂದಂದೇ ಅಂಗಡಿಯಿಂದ ತಂದು ಅಡಿಗೆ ಮಾಡುತ್ತಿದ್ದುದು. ತಂದೆ ಗಟ್ಟಕ್ಕೆ ಹೋದ ಮೇಲೆ ನಮ್ಮ ಸ್ಥಿತಿ ಸುಧಾರಿಸಿತು. ಆ ನಂತರ ನಮ್ಮದು ಪ್ರತಿಷ್ಠಿತ ಕುಟುಂಬವಾಯಿತು. ಆಗ ಬಡವರು ನಮ್ಮ ಮನೆಗೆ ಬಂದು ಅಕ್ಕಿ ಕೇಳುವುದು, ಊಟ ಕೇಳುವುದು ಸಾಮಾನ್ಯವಾಗಿತ್ತು. ಯಾರು ಬಂದು ಏನು ಕೇಳಿದರೂ ಅಮ್ಮ ಇಲ್ಲ ಎನ್ನುತ್ತಿರಲಿಲ್ಲ. ಧಾರಾಳವಾಗಿ ಕೊಡುತ್ತಿದ್ದರು. ಹಸಿದು ಬಂದು ಅನ್ನ ಕೇಳಿದವರಿಗೆ ಸ್ವತಃ ಬಡಿಸುವುದೆಂದರೆ ಅಮ್ಮನಿಗೆ ಬಹಳ ಇಷ್ಟ. ಹಸಿದ ಹೊಟ್ಟೆಯ ಬೆಂಕಿ ಅವರಿಗೆ ಚೆನ್ನಾಗಿ ತಿಳಿದಿತ್ತು. ಆ ಹೊಟ್ಟೆಯನ್ನು ತಣಿಸುವುದರಲ್ಲಿ ಅವರು ಸ್ವರ್ಗವನ್ನು ಕಾಣುತ್ತಿದ್ದರು. ತೃಪ್ತಿಪಟ್ಟುಕೊಳ್ಳುತ್ತಿದ್ದರು. ನಾವು ಮನೆಯಲ್ಲಿ ಬೆಳಿಗ್ಗೆ ಗಂಜಿ, ಮಧ್ಯಾಹ್ನ–ರಾತ್ರಿ ಊಟ ಮಾಡುತ್ತಿದ್ದೆವು. ನೈಚೋರ್, ತಿಂಡಿ ಮಾಡಬೇಕಾದರೆ ಹಬ್ಬಗಳು ಬರಬೇಕು.

ಇಲ್ಲಿ ಬಂಟರ ಒಂದು ಗುತ್ತಿನ ಮನೆಯಿತ್ತು. ಪದ್ದಣ್ಣ ಶೆಟ್ಟಿ ಅಂತ ಆ ಮನೆಯ ಯಜಮಾನ. ಆ ಮನೆಯಲ್ಲಿ ಬೆಳೆದ ಕೆಲವು ಹೆಣ್ಣುಮಕ್ಕಳಿದ್ದರು. ಆ ಹೆಣ್ಣುಮಕ್ಕಳೆಲ್ಲ ಸೇರಿ 'ದೂರ್ ಹಟೋ ಯೇ ದುನಿಯಾವಾಲೊ, ಹಿಂದೂಸ್ತಾನ್ ಹಮಾರಾ ಹೈ' ಎಂದು ಹಾಡುತ್ತಾ ಇದ್ದುದು ಈಗಲೂ ನನಗೆ ನೆನಪಿದೆ. ಸ್ವಾತಂತ್ರ್ಯ ಸಿಕ್ಕಿದ ಸಂದರ್ಭದಲ್ಲಿ ಒಂದು ಕಾರ್ಯಕ್ರಮದಲ್ಲಿ ಆ ಹೆಣ್ಣುಮಕ್ಕಳು ಸಾಲಾಗಿ ನಿಂತು ಹಾಡಿದ್ದು, ತ್ರಿವರ್ಣ ಧ್ವಜ ಏರಿಸಿದ್ದು, ಸ್ವಾತಂತ್ರ್ಯ ದಿನದ ಲಡ್ಡು ಹಂಚಿದ್ದು, ನಾನು ಲಡ್ಡು ತಿಂದದ್ದು.. ಎಲ್ಲ ನಿನ್ನೆ ಮೊನ್ನೆ ನಡೆದಂತಿದೆ. ಗಾಂಧೀಜಿ ಹತ್ಯೆಯಾದ ಸುದ್ದಿ ಇಲ್ಲಿಗೆ ತಲುಪಿದಾಗ ಇಡೀ ಊರಲ್ಲಿ ದುಃಖ ಮಡುಗಟ್ಟಿಹೋಗಿತ್ತು. ಮನೆಗಳಲ್ಲೆಲ್ಲ ಸೂತಕ ತುಂಬಿದಂತಿತ್ತು. ಎಲ್ಲರ ಬಾಯಲ್ಲೂ 'ಗಾಂಧೀಜಿಯನ್ನು ಕೊಂದರಂತೆ... ಗಾಂಧೀಜಿಯನ್ನು ಕೊಂದರಂತೆ...' ಎಂಬ ಶೋಕಭರಿತ ಮಾತು. ಒಬ್ಬರ ಮುಖವನ್ನು ಒಬ್ಬರು ನೋಡಲಾರದಂತಹ ಸ್ಥಿತಿ. ಮಹಿಳೆಯರ ಕಣ್ಣಲ್ಲೂ ನೀರು.

ನಾವು ಮನೆಯಲ್ಲಿ ದನಗಳನ್ನು ಸಾಕುತ್ತಿದ್ದೆವು. ತಾಯಿಗೆ ದನಗಳೆಂದರೆ ಬಹಳ ಪ್ರೀತಿ. ಅವರು ಮನೆಗೆ ಬಳಕೆಯಾಗಿ ಉಳಿದ ಹಾಲನ್ನು ಮಾರಾಟ ಮಾಡುತ್ತಿದ್ದರು. ಆ ಹಣವನ್ನು ಬೇರೆ ಯಾವುದಕ್ಕೂ ಬಳಸದೆ ಅವುಗಳಿಗೆ ಹಿಂಡಿ, ಹುಲ್ಲುಗಳಿಗೆ ಖರ್ಚು ಮಾಡುತ್ತಿದ್ದರು. ಒಂದು ಕೈ ಊನವಿದ್ದರೂ ದನಗಳ ಎಲ್ಲ ಕೆಲಸಗಳನ್ನು ಅವರೇ ಮಾಡುತ್ತಿದ್ದರು. ಅವರಿಗೆ ಅವುಗಳ ಸೇವೆ ಮಾಡುವುದೆಂದರೆ ಬಹಳ ಇಷ್ಟ.

ಅದೇನೋ ತೃಪ್ತಿ. ಅವುಗಳ ಬೆನ್ನು ಸವರುವುದು, ಗಂಜಿ ನೀರು, ಅಕ್ಕಚ್ಚಿ ಕುಡಿಸುವುದು, ಹಿಂಡಿ ತಿನ್ನಿಸುವುದು ಹೀಗೆ ಮಕ್ಕಳಂತೆ ಅದರ ಆರೈಕೆ ಮಾಡುತ್ತಿದ್ದರು. ಇಷ್ಟು ಮಾತ್ರವಲ್ಲ ಅಮ್ಮ ನೀರು ಸೇದುವುದು, ಬಟ್ಟೆ ಒಗೆಯುವುದು, ರುಬ್ಬುವುದು, ಗುಡಿಸುವುದು, ಅಡಿಗೆ ಮಾಡುವುದು – ಹೀಗೆ ಎಲ್ಲ ಕೆಲಸಗಳನ್ನೂ ಮಾಡುತ್ತಿದ್ದರು. ಅಂಗವಿಕಲೆ ಯಾದರೂ ಯಾವ ಕೊರತೆಯೂ ಅವರಲ್ಲಿ ಕಾಣಲು ಸಾಧ್ಯವಿರಲಿಲ್ಲ. ಕೆಲಸದ ವೇಗ, ನಿಷ್ಠೆ, ಶುಚಿತ್ವ, ಅಡುಗೆಯ ರುಚಿ ಅವರಲ್ಲಿ ಕಲಿಯಬೇಕು.

ನನ್ನ ಅತ್ತೆ ಅಂದರೆ ತಂದೆಯ ತಂಗಿಯವರೂ ದನಗಳನ್ನು ಸಾಕುತ್ತಿದ್ದರು. ಅವರೂ ತಾಯಿಯಂತೆ ದನಗಳನ್ನು ಬಹಳ ಪ್ರೀತಿಸುತ್ತಿದ್ದರು. ಹಾಲು ಮಾರುತ್ತಿದ್ದರು. ದೀಪಾವಳಿ ಸಂದರ್ಭದಲ್ಲಿ ನಾವು ಬೇಲಿಹೂವಿನ ಮಾಲೆ ಮಾಡಿ ದನಗಳ ಕೊರಳಿಗೆ ಹಾಕುತ್ತಿದ್ದೆವು. ತಾಯಿಗೆ ಇದು ಬಹಳ ಇಷ್ಟ. ಅವರು ದನಗಳ ಜೊತೆ ಮಾತನಾಡುತ್ತಿದ್ದರು. ಹಬ್ಬದ ದಿನಗಳಲ್ಲಿ ಅದಕ್ಕೆ ಬೆಲ್ಲ, ಮನೆಯಲ್ಲಿ ಮಾಡಿದ ಸಿಹಿತಿಂಡಿಗಳನ್ನು ತಿನ್ನಿಸಿ, "ಏನು ಮಗಳೇ, ನಿನಗೆ ಖುಷಿಯಾಯಿತಾ? ಬೇಜಾರು ಮಾಡಿಕೊಳ್ಳಬಾರದು" ಎಂದೆಲ್ಲ ಹೇಳಿ ಅದರ ಬೆನ್ನು, ತಲೆ, ಕೊರಳು ಸವರುತ್ತಿದ್ದರು. ದನಗಳಿಗೆ ಅಮ್ಮನ ಮಾತು, ಪ್ರೀತಿ ಅರ್ಥವಾಗುತ್ತಿತ್ತು. ಅವುಗಳು ಅಮ್ಮನ ಮಾತಿಗೆ ತಲೆಯಲ್ಲಾಡಿಸುತ್ತಾ ಕಣ್ಣು ಪಿಳಿಪಿಳಿ ಮಾಡಿ ನೋಡುತ್ತಾ, ಮೂಗಿನ ಮೂಲಕ ಶಬ್ದ ಮಾಡುತ್ತಿದ್ದವು. ಆಗೆಲ್ಲ ಅಮ್ಮ ಅವುಗಳ ಕೊರಳನ್ನು ತಬ್ಬಿ ಹಿಡಿದು ಪ್ರೀತಿಯ ಮಳೆ ಸುರಿಸುತ್ತಿದ್ದರು. ಯಾವುದಾದರೂ ಒಂದು ದನವನ್ನು ಮಾರಾಟ ಮಾಡಬೇಕಾಗಿ ಬಂದಾಗಲೂ ನಾವೆಲ್ಲ ಮರುಗುತ್ತಿದ್ದೆವು. ಎಲ್ಲರೂ ನೋವನುಭವಿಸುತ್ತಿದ್ದೆವು. ದನಗಳೊಡನೆ ಅಷ್ಟೊಂದು ಸಂಬಂಧವನ್ನು ಹೊಂದಿದ್ದೆವು.

ಆಗ ರಮಝಾನ್ ಮತ್ತು ಬಕ್ರೀದ್ ಈ ಎರಡು ಹಬ್ಬಗಳಿಗೆ ಮಾತ್ರ ಹೊಸ ಬಟ್ಟೆಗಳನ್ನು ಹೊಲಿಸುತ್ತಿದ್ದರು. ಅದು ಬಿಟ್ಟರೆ ಮದುವೆಯಂತಹ ಶುಭಕಾರ್ಯಗಳಿರಬೇಕು. ಆಗ ರೆಡಿಮೇಡ್ ಅಂಗಿಗಳೇ ಇಲ್ಲ. ಪ್ಯಾಂಟ್ ಇಲ್ಲವೇ ಇಲ್ಲ. ನಾವು ಬಾಲ್ಯದಲ್ಲಿ ಚಡ್ಡಿ ಮತ್ತು ಅಂಗಿ ಧರಿಸುತ್ತಿದ್ದೆವು. ಮಸೀದಿ, ಮದ್ರಸಾಗಳಿಗೆ ಹೋಗುವಾಗ ಮುಂಡು (ಲುಂಗಿ) ಧರಿಸುತ್ತಿದ್ದೆವು. ಅಂಗಿ, ಚಡ್ಡಿಯ ಬಟ್ಟೆ ತಂದು ಟೈಲರ್ ಹತ್ತಿರ ಹೊಲಿಸುವುದು. ಹಬ್ಬಗಳ ದಿನಗಳಂದು ಬೆಳಿಗ್ಗೆ ಟೈಲರ್ ಅಂಗಡಿ ಮುಂದೆ ಹೊಲಿದ ಬಟ್ಟೆಗಳಿಗಾಗಿ ಸರತಿ ಸಾಲುಗಳಿರುತ್ತಿದ್ದವು. ಮಹಿಳೆಯರು ನೂಲಿನ ಸೀರೆ, ಕುಪ್ಪಸ ಧರಿಸುತ್ತಿದ್ದರು. ತಲೆಗೆ ರೇಶ್ಮೆಯ ಬಣ್ಣ ಬಣ್ಣದ ರುಮಾಲು. ತಾಯಿಯೂ ರವಕೆ ಹಾಕುತ್ತಿರಲಿಲ್ಲ. ಕುಪ್ಪಸ ಧರಿಸುತ್ತಿದ್ದರು. ಬ್ಯಾರಿ ಹೆಂಗಸರು ಆಗ ಕುಪ್ಪಸವೇ ಧರಿಸುತ್ತಿದ್ದುದು. ಕುಪ್ಪಸ ಧರಿಸದವರು ಬ್ಯಾರಿಗಳೇ ಅಲ್ಲ.

ಜಾತ್ರೆ, ಕೋಲ, ನೇಮ, ಉತ್ಸವಗಳಿಗೆ ಬ್ಯಾರಿಗಳೂ ಹೋಗುತ್ತಿದ್ದರು. ಬಯಲು, ಉಳ್ಳಾಲ ಉರೂಸಿಗೆ ಹಿಂದೂಗಳೂ, ಇತರ ಜಾತಿಯವರೂ ನಡೆದುಕೊಳ್ಳುತ್ತಿದ್ದರು. ತೋಕೂರು ಉರೂಸಿಗೆ ನಾವೆಲ್ಲ ಗುಂಪಾಗಿ ನಡೆದುಕೊಂಡೇ ಹೋಗುತ್ತಿದ್ದುದು

ನನಗೆ ನೆನಪಿದೆ. ಬಯಲು ಉರೂಸನ್ನು ಹೆಚ್ಚಿನ ಸಂದರ್ಭಗಳಲ್ಲಿ ಬಂಟರೇ (ಹಿಂದೂಗಳೇ) ಮಾಡಿಸುತ್ತಿದ್ದುದು. ಬ್ಯಾರಿಗಳು ಆರ್ಥಿಕವಾಗಿ ಕಷ್ಟದಲ್ಲಿದ್ದು, ಉರೂಸು ಮಾಡಲು ಸಾಧ್ಯವಾಗದಿದ್ದಾಗ 'ನಾವು ಅಕ್ಕಿ, ತುಪ್ಪ ಕೊಡುತ್ತೇವೆ, ಉರೂಸು ನಿಲ್ಲಿಸಬೇಡಿ' ಎಂದು ಬಂಟರು ಹೇಳಿ ಮಾಡಿಸುತ್ತಿದ್ದರು. ಆಗ ಹಿಂದೂ–ಮುಸ್ಲಿಂ, ದೇವಸ್ಥಾನ, ದೈವಸ್ಥಾನ, ದರ್ಗಾ ಎಂಬ ಭೇದಗಳೇ ಇರಲಿಲ್ಲ. ಬಾಳೆಗೊನೆ, ತರಕಾರಿ, ಕಬ್ಬು, ತೆಂಗಿನಕಾಯಿ, ಎಳನೀರು ಹೀಗೆ ತಾವು ಬೆಳೆದ ಬೆಳೆಯ ಮೊದಲ ಬೆಳೆಯನ್ನು ಮಸೀದಿಗೆ, ದರ್ಗಾಗಳಿಗೆ ಹರಕೆಯಾಗಿ ಕೊಡುತ್ತಿದ್ದರು. ಇದರಲ್ಲಿ ಮುಸ್ಲಿಮರಿಗಿಂತಲೂ ಹಿಂದೂಗಳೇ ಹೆಚ್ಚಾಗಿ ಕೊಡುತ್ತಿದ್ದುದು. ಇದನ್ನು ನಂತರ ಹರಾಜು ಹಾಕಿ ಆ ದುಡ್ಡನ್ನು ಮಸೀದಿ–ದರ್ಗಾಕ್ಕೆ ಉಪಯೋಗಿಸಲಾಗುತ್ತಿತ್ತು.

ಬಯಲು ದರ್ಗಾದ ಕಾರಣಿಕ ಪುರುಷರು ಜಮಾಲುದ್ದೀನ್ ಔಲಿಯಾ. ಇವರು ಎಲ್ಲ ಧರ್ಮಗಳ ಬಗ್ಗೆ ಅಧ್ಯಯನ ಮಾಡಿದವರು. ಸರ್ವ ಧರ್ಮಗಳ ಸಹಿಷ್ಣುತೆಯನ್ನು ನಾಡಿನಾದ್ಯಂತ ಸಾರಿದವರು. ಇವರು ವಿಷಜಂತುಗಳು ಕಡಿದಾಗ ಚಿಕಿತ್ಸೆ ನೀಡುವುದರಲ್ಲಿ ನಿಪುಣರು. ಯಾರಿಗಾದರೂ ವಿಷಜಂತು ಕಡಿದ ಸುದ್ದಿ ತಿಳಿದ ತಕ್ಷಣ ಹೋಗಿ ಜಾತಿ, ಧರ್ಮಗಳ ಭೇದವಿಲ್ಲದೆ ಚಿಕಿತ್ಸೆ ನೀಡುತ್ತಿದ್ದರು. ಇದರಿಂದಾಗಿ ಇವರು ಮನೆಮಾತಾಗಿದ್ದರು. ಎಲ್ಲ ಮತ, ಧರ್ಮಗಳವರೂ ಇವರನ್ನು ಗೌರವಿಸುತ್ತಿದ್ದರು. ಇವರ ದರ್ಗಾ ಉರೂಸ್ ಸಂದರ್ಭದಲ್ಲಿ ಸರ್ವ ಧರ್ಮಗಳವರು ಸ್ವಯಂಸೇವಕರಾಗಿ ದುಡಿಯುತ್ತಿದ್ದರು. ಈಗಲೂ ಅಲ್ಲಿಯ ಉರೂಸ್‌ಗೆ ಹಿಂದೂಗಳು ಬರುತ್ತಾರೆ.

ನಾನು ಪೇಜಾವರ ಹೊಳೆಗೆ ಮೀನು ಹಿಡಿಯಲು ಹೋಗುತ್ತಿದ್ದೆ. ಅಲ್ಲಿ ಸ್ವಲ್ಪ ಈಜಲು ಕಲಿತೆ. ಗೆಳೆಯರೆಲ್ಲ ಹೊಳೆ ಬದಿಗೆ ಹೋಗುವಾಗ 'ಕಾಯಿ ಹಾಕಲು ಮೊಗವೀರರು ಬಂದಿದ್ದಾರೆ, ಮೀನು ಹಿಡಿಯಲು ಬಾ' ಎಂದು ನನ್ನನ್ನು ಕರೆದುಕೊಂಡು ಹೋಗುತ್ತಿದ್ದರು. ಕಾಯಿ ಹಾಕುವುದು ಎಂದರೆ ಮೀನಿಗೆ ಮದ್ದು ಹಾಕುವುದು. ಮೊಗವೀರರು ಬೆಳಿಗ್ಗೆ ಬೇಗ ಬಂದು ಹೊಳೆಗೆ ಕಾಯಿ ಹಾಕಿ ಸಿಕ್ಕಿದ ಮೀನುಗಳನ್ನು ಹಿಡಿದುಕೊಂಡು ಪಲಾಯನ ಮಾಡುತ್ತಿದ್ದರು. ಯಾಕೆಂದರೆ ಆಗ ಮೀನಿಗೆ ಕಾಯಿ ಹಾಕಬಾರದು ಎಂಬ ಕಾನೂನಿತ್ತು. ಆ ಕಾಯಿಯಲ್ಲಿ ವಿಷ ಇರುತ್ತಿತ್ತು. ಪೊಲೀಸರಿಗೆ ಗೊತ್ತಾದರೆ ಹಿಡಿದು ಒಳಗೆ ಹಾಕುತ್ತಿದ್ದರು. ಮೊಗವೀರರು ಹೋದ ಮೇಲೆ ಕೆಲವು ಸತ್ತ ಮೀನುಗಳೆಲ್ಲ ನೀರಿನ ಮೇಲೆ ತೇಲಾಡುತ್ತಿತ್ತು. ನಾವೆಲ್ಲ ಸೇರಿ ಈಜಿ ಆ ಮೀನುಗಳನ್ನು ಹಿಡಿದು ಮನೆಗೆ ತರುತ್ತಿದ್ದೆವು. ಆ ಸಂದರ್ಭದಲ್ಲಿ ಅಲ್ಲಿಗೆ ಹೆಣ್ಣುಮಕ್ಕಳೂ ಬರುತ್ತಿದ್ದರು. ಅವರೂ ನೀರಿಗೆ ಹಾರಿ ಮೀನುಗಳನ್ನು ಹಿಡಿದು ತರುತ್ತಿದ್ದರು. ನಮ್ಮೂರಿನ ಹೆಣ್ಣುಮಕ್ಕಳು ಈಜುವುದರಲ್ಲಿ ಬಹಳ ನಿಪುಣರಾಗಿದ್ದರು.

ಮೊದಲ ಮಳೆಗೆ ಹೊಳೆ, ಕೆರೆ, ಗದ್ದೆಗಳೆಲ್ಲ ನೀರು ತುಂಬಿ ಹರಿಯತೊಡಗಿದಾಗ ಬಹಳಷ್ಟು ಮೀನುಗಳು ಸಿಗುತ್ತಿದ್ದವು. ನಾವೊಂದು ನಾಲ್ಕು ಜನರ ತಂಡ ಗ್ಯಾಸ್‌ಲೈಟ್, ಖಡ್ಗದಂತಹ ದೊಡ್ಡ ಕತ್ತಿಗಳನ್ನು ಹಿಡಿದುಕೊಂಡು ಪುಟ್ಟ ದೋಣಿಯಲ್ಲಿ ಮೀನು

ಹಿಡಿಯಲು ಹೋಗುತ್ತಿದ್ದೆವು. ಗ್ಯಾಸ್‌ಲೈಟಿನ ಬೆಳಕಿಗೆ ಮೀನುಗಳು ನೀರಿನ ಮೇಲೆ ಬರುತ್ತಿದ್ದವು. ಆಗ ದೋಣಿಯಲ್ಲಿದ್ದುಕೊಂಡು ಮೀನುಗಳನ್ನು ಕಡಿದು ದೋಣಿಯಲ್ಲಿ ಹಾಕುತ್ತಿದ್ದೆವು. ಆಗ ದೊಡ್ಡ ದೊಡ್ಡ ಮೀನುಗಳು, ಏಡಿಗಳು ಸಿಗುತ್ತಿದ್ದುವು. ದೋಣಿ ಇಲ್ಲದವರು ಹೊಳೆ ಬದಿಯಲ್ಲಿ ಸೊಂಟದವರೆಗಿನ ನೀರಿನಲ್ಲಿ ಬುಟ್ಟಿಯಲ್ಲಿ ಮೀನು ಹಿಡಿಯುತ್ತಿದ್ದರು. ಹೊಳೆಮೀನು ಬಹಳ ರುಚಿ. ಇಂತಹ ಮೀನು ವರ್ಷಕ್ಕೊಮ್ಮೆ ಮೊದಲ ಮಳೆಗೆ ಮಾತ್ರ ಸಿಗುತ್ತಿದ್ದುದು. ಆ ಸಂದರ್ಭದಲ್ಲಿ ಜನ ಜಾತ್ರೆಯಂತೆ ಹೊಳೆಬದಿಯಲ್ಲಿ ಮೀನು ಹಿಡಿಯಲು ಸೇರುತ್ತಿದ್ದರು. ಸಿಕ್ಕಿದ ಮೀನುಗಳನ್ನು ಜಾತಿ, ಧರ್ಮಗಳ ಭೇದವಿಲ್ಲದೆ ನೆರೆಯವರು, ಬಂಧುಗಳಿಗೆ ಹಂಚುತ್ತಿದ್ದೆವು.

ಪುದ್ದರ್ (ಹೊಸ ಅಕ್ಕಿ ಉಣ್ಣುವ ಹಬ್ಬ) ತುಳುನಾಡಿನ ರೈತರ ವಿಶೇಷವಾದ ಹಬ್ಬ. ತುಳುವರ ಮನೆಗಳಲ್ಲಿ ಈ ಹಬ್ಬವನ್ನು ಸಾಂಪ್ರದಾಯಿಕವಾಗಿ ಬಹಳ ವಿಜೃಂಭಣೆಯಿಂದ ಮಾಡುತ್ತಿದ್ದರು. ಬಂಧುಗಳೆಲ್ಲ ಅಂದು ಹಿರಿಯರ ಮನೆಯಲ್ಲಿ ಒಟ್ಟು ಸೇರುತ್ತಿದ್ದರು. ಹೊಸ ಅಕ್ಕಿಯ ಅನ್ನ, ಬೇರೆ ಬೇರೆ ತರಕಾರಿಗಳ ವಿವಿಧ ಪಲ್ಯಗಳು, ಪಾಯಸ, ಇನ್ನೂ ಹಲವು ತರಹದ ಅಡಿಗೆಗಳನ್ನು ಮಾಡಿ ಎಲ್ಲರೂ ಒಟ್ಟಿಗೆ ಕುಳಿತು ಉಣ್ಣುವುದು. ಈ ಹಬ್ಬಕ್ಕೆ ಬ್ಯಾರಿಗಳಿಗೂ ತುಳುವರ ಮನೆಗಳಿಂದ ಕರೆ ಬರುತ್ತಿತ್ತು. ಬ್ಯಾರಿಗಳು ಹೋಗುತ್ತಿದ್ದರು. ಒಟ್ಟಿಗೆ ಕುಳಿತು ಉಣ್ಣುತ್ತಿದ್ದರು. ಬ್ಯಾರಿ ಹೆಂಗಸರೂ ಹೋಗುವುದಿತ್ತು. ಭೂಮಾಲಕ ಬಂಟರ ಮನೆಗಳಲ್ಲಿ ಈ ಹಬ್ಬ ಬಹಳ ವಿಜೃಂಭಣೆಯಿಂದ ನಡೆಯುತ್ತಿತ್ತು. ಈ ಸಂದರ್ಭ ತನ್ನ ಕುಟುಂಬ, ಎಲ್ಲಾ ಒಕ್ಕಲಿನವರಿಗೆ, ಬೇಸಾಯ ಮಾಡಲು ಬರುವ ಇತರ ಕೂಲಿಕಾರರಿಗೆಲ್ಲ ಹಬ್ಬದ ಊಟ, ಜೊತೆಗೆ ದಕ್ಷಿಣೆ, ಬಟ್ಟೆ ದಾನ ಮಾಡಲಾಗುತ್ತಿತ್ತು. ನಮ್ಮ ಮನೆಯಲ್ಲಿ ಅಮ್ಮ ಈ ಹಬ್ಬವನ್ನು ಸರಳವಾಗಿ ಮಾಡುತ್ತಿದ್ದರು. ಅಂದು ನಮ್ಮ ಮನೆಯಲ್ಲೂ ಸಸ್ಯಾಹಾರಿ ಊಟ.

ಕೆಲವು ಹಿಂದೂಗಳಲ್ಲಿ ಆಗ ಒಂದು ವಿಚಿತ್ರ ನಂಬಿಕೆಯಿತ್ತು. ಹುಟ್ಟಿದ ತಕ್ಷಣ ಅಥವಾ ಅನಂತರ ಪುಟ್ಟ ಮಗುವಿಗೆ ಏನಾದರೂ ದೊಡ್ಡ ಕಾಯಿಲೆ ಬಂದರೆ, ಆ ಕಾಯಿಲೆಯಿಂದ ಆ ಮಗು ಬದುಕುವುದಿಲ್ಲ ಎಂಬ ಸಂಶಯ ಉಂಟಾದರೆ ಆ ಮಗುವನ್ನು ಕೊರಗರಿಗೆ ಸಾಕಲು ಕೊಡುತ್ತಿದ್ದರು. ಹಾಗೆ ಕೊಟ್ಟರೆ ಮಗುವಿನ ಕಾಯಿಲೆ ಗುಣವಾಗುತ್ತದೆ, ಅದು ಬದುಕುತ್ತದೆ ಎಂಬ ನಂಬಿಕೆ. ಸಾಕಲಿಕ್ಕೆ ಕೊಡುವುದು ಎಂದರೆ ಅವರು ಮಗುವನ್ನು ತಮ್ಮ ಮನೆಗಳಿಗೆ ಕೊಂಡು ಹೋಗುತ್ತಿರಲಿಲ್ಲ. ಮಗುವಿನ ಪಾಲಕರ ಮನೆಯ ಬಳಿಯೇ ಹಟ್ಟಿಯಲ್ಲಿದ್ದುಕೊಂಡು ಆ ಮಗುವನ್ನು ಅವರೇ ನೋಡಿಕೊಳ್ಳುತ್ತಿದ್ದರು. ಅದಕ್ಕಾಗಿ ಅವರಿಗೆ ಕೂಲಿ, ಊಟ ಎಲ್ಲ ಕೊಡಲಾಗುತ್ತಿತ್ತು.

ಮಕ್ಕಳಾಟಿಕೆಯ ಪ್ರಾಯದಲ್ಲಿ ನಾವು ಗೆಳೆಯರೆಲ್ಲ ಸೇರಿ ಮಾವಿನಹಣ್ಣು, ಕಬ್ಬು, ಎಳನೀರು ಕದಿಯಲು ಹೋಗುತ್ತಿದ್ದೆವು. ಅದನ್ನು ತಂದು ಹಂಚಿ ತಿನ್ನುತ್ತಿದ್ದೆವು. ಒಮ್ಮೆ ಹೀಗೆ ಕಬ್ಬು ಕದ್ದದ್ದು, ಅದರ ಮಾಲಕರಿಗೆ ಗೊತ್ತಾಗಿ ಅವರು ನಮ್ಮನ್ನು ಅಟ್ಟಿಸಿಕೊಂಡು ಬಂದು ಹಿಡಿದು ಸರೀ ಬಾರಿಸಿದ್ದರು. ಈ ವಿಷಯ ನಮ್ಮ ತಂದೆಗೆ ಗೊತ್ತಾಗಿಬಿಟ್ಟಿತು.

ತಂದೆಯವರು ಎಲ್ಲಿ ಬಯ್ಯುತ್ತಾರೋ ಎಂದು ನಮಗೆಲ್ಲ ಭಯ. ನಾವೆಲ್ಲ ಅಡಗಿ ಕುಳಿತುಕೊಳ್ಳತೊಡಗಿದೆವು. ಆದರೆ ತಂದೆಯವರು ನಮಗೆ ಏನೂ ಮಾಡಲಿಲ್ಲ. ಈ ಬಗ್ಗೆ ಪ್ರಸ್ತಾಪಿಸಲೂ ಇಲ್ಲ. ಬದಲಿಗೆ ಅವರು ಆ ಕಬ್ಬಿನ ಮಾಲಕರ ಮನೆಗೆ ಹೋಗಿ "ಮಕ್ಕಳಿಗೆ ಯಾಕೆ ಹೊಡೆದೆ? ಅವರು ಕದ್ದ ಕಬ್ಬಿನ ದುಡ್ಡು ಎಷ್ಟು ಎಂದು ಹೇಳಿದ್ದರೆ ನಾನು ಕೊಡುತ್ತಿರಲಿಲ್ಲವಾ? ಮಕ್ಕಳಿಗೆ ಹಾಗೆಲ್ಲ ಹೊಡೆಯಬಾರದು. ಈ ಪ್ರಾಯದಲ್ಲಿ ಎಲ್ಲರೂ ಹಾಗೆ ಮಾಡುತ್ತಾರೆ. ನಾವೂ ಮಾಡಿದ್ದೆವು. ಅದಕ್ಕೆ ಹೊಡೆಯುವುದಲ್ಲ, ಬುದ್ಧಿ ಹೇಳಬೇಕು" ಎಂದು ಕಬ್ಬಿನ ಮಾಲಕರಿಗೆ ಬುದ್ಧಿ ಹೇಳಿ ಬಂದಿದ್ದರು. ನನ್ನ ತಾಯಿಯ ಅಜ್ಜ ಯಾವಾಗಲೂ ಮನೆಗೆ ಬರುವಾಗ 2–3 ಕೋಲು ಕಬ್ಬು ತರುತ್ತಿದ್ದರು. ಅದನ್ನು ನಾವೆಲ್ಲ ಹಂಚಿ ತಿನ್ನುತ್ತಿದ್ದೆವು. ನನ್ನ ತಮ್ಮನ ಮೇಲೆ ಅವರಿಗೆ ತುಂಬಾ ಪ್ರೀತಿ. ಯಾಕೆಂದರೆ ಅವನಿಗೆ ಅವರದೇ ಹೆಸರು ಹುಸೈನ್ ಎಂದು ಇಟ್ಟಿದ್ದರು.

ಶಾಲೆಗೆ ರಜೆ ಇದ್ದ ಸಂದರ್ಭಗಳಲ್ಲಿ ನಾನು ಚಿಕ್ಕಮಗಳೂರಿಗೆ ಹೋಗುತ್ತಾ ಇದ್ದೆ. ಅಲ್ಲಿ ಹೊಟೇಲಿನಲ್ಲಿ ನನಗೆ ಊಟಕ್ಕೆ ಟೊಮೇಟೋ ಹಾಕಿದ ಸಾರು ಕೊಡುತ್ತಿದ್ದರು. ನನಗೆ ಈ ಟೊಮೇಟೋ ಹಾಕಿದ ಸಾರು ಕಂಡರೆ ಆಗುತ್ತಿರಲಿಲ್ಲ. ಬಹಳ ಕಷ್ಟದಲ್ಲಿ ಊಟ ಮಾಡುತ್ತಿದ್ದೆ. ಮನೆಯಲ್ಲಿ ಆಗ ಸಾರಿಗೆ ಯಾರೂ ಟೊಮೇಟೋ ಹಾಕುತ್ತಿರಲಿಲ್ಲ. ಜಾರಿಗೆ, ಹುಣಸೆಹಣ್ಣು, ಪುನರ್ಪುಳಿ ಮುಂತಾದ ಪ್ರಾದೇಶಿಕ ಹಣ್ಣುಗಳನ್ನೇ ಒಣಗಿಸಿ ಸಾರಿಗೆ ಬಳಸುತ್ತಿದ್ದರು. ಈ ಸಾರು ಬಹಳ ರುಚಿಯಾಗಿರುತ್ತಿತ್ತು. ಆಗ ನಾನು ಬಿರಿಯಾನಿ ತಿನ್ನುತ್ತಿರಲಿಲ್ಲ. ನನಗದು ಇಷ್ಟವಿರಲಿಲ್ಲ.

ತಾಯಿ ಹಲವು ಸಂದರ್ಭಗಳಲ್ಲಿ ಚಿಕ್ಕಮಗಳೂರಿಗೆ ಹೋಗಿ ಬಂದಿದ್ದರು. ಆದರೆ ಅಲ್ಲಿ ಉಳಿದಿರಲಿಲ್ಲ. ಆಗಿನ ಕಾಲದಲ್ಲಿ ಗಟ್ಟಕ್ಕೆ ಹೋಗಿ ವ್ಯಾಪಾರ ಮಾಡುತ್ತಿದ್ದವರಿಗೆ ಗೌರವ ಇರುತ್ತಿರಲಿಲ್ಲ. ಹೆಂಗಸರನ್ನು ಯಾರೂ ಗಟ್ಟಕ್ಕೆ ಕರೆದುಕೊಂಡು ಹೋಗುತ್ತಿರಲಿಲ್ಲ. ಎಲ್ಲಿಯವರೆಗೆಂದರೆ ನಾನು ಈ ಮೊಯ್ದಿನ್ ಬ್ಯಾರಿಯಂತ ಹೇಳಿದೆನಲ್ಲ; ಅವರ ಒಬ್ಬರು ಮಗಳು – ಅವಳ ಹೆಸರು ಬೀಪಮ್ಮ ಅಂತ – ಅವಳನ್ನು ಅವಳ ಗಂಡ ಒತ್ತಾಯವಾಗಿ ಗಟ್ಟಕ್ಕೆ ಕರೆದುಕೊಂಡು ಹೋದ. ಅವನು ಅಲ್ಲಿಯೇ ವ್ಯಾಪಾರ ಮಾಡುತ್ತಿದ್ದವ. ಆಗ ಅವಳ ತಾಯಿ ಅವಮಾನದಿಂದ ಕುಗ್ಗಿ ಹೋಗಿದ್ದರು. ಆವತ್ತು ಅವರು ಹೇಳಿದ ಮಾತು ನನಗೆ ಈಗಲೂ ನೆನಪಿದೆ "ಬೀಪಮ್ಮ ನನ್ನ ಪಾಲಿಗೆ ಸತ್ತುಹೋದಳು" ಅಂತ. ಅದು ಬಹಳ ದುಃಖದಲ್ಲಿ, ಸಹಿಸಲಾರದೆ ಹೇಳಿದ ಮಾತು. ಆಗಿನ ಕಾಲದಲ್ಲಿ ಸಾಮಾನ್ಯವಾಗಿ ಕೆಳಮಟ್ಟದವರು ಮಾತ್ರ ಗಟ್ಟಕ್ಕೆ ವ್ಯಾಪಾರ, ಕೆಲಸಕ್ಕೆ ಹೋಗುತ್ತಿದ್ದುದು. ಆದುದರಿಂದ ಈ ಭಾವನೆ. ಗಟ್ಟಕ್ಕೆ ಹೆಂಡತಿಯರನ್ನು ಕರೆದುಕೊಂಡು ಹೋಗುವುದು ತಮ್ಮ ಘನತೆ, ಗೌರವಕ್ಕೆ ಕುಂದು ಎಂಬುದು ಆಗಿನ ಜನರ ಮನಸ್ಥಿತಿ.

ನಾನು ಪ್ರಥಮ ಬಾರಿಗೆ ಬಸ್ಸು ನೋಡಿದ್ದು, ಇಲ್ಲಿನ ಕಟೀಲಿಗೆ ಬಸ್ಸು ಬರತೊಡಗಿದ ಮೇಲೆ. ಆ ಬಸ್ಸಿಗೆ ಮೇಲ್ಛಾವಣಿ ಇರಲಿಲ್ಲ. ತೆರೆದ ಬಸ್ಸು. ಅದರಲ್ಲಿ ಪ್ರಯಾಣಿಸುವಾಗ ಹೊರಗಿನ ಪರಿಸರವೆಲ್ಲ ಚೆನ್ನಾಗಿ ಕಾಣಿಸುತ್ತಿತ್ತು. ಅದು ಸ್ಟೀಂ ಬಸ್ಸು. ಡೀಸೆಲ್ ಅಲ್ಲ.

ಅದನ್ನು ಎದುರು ಬದಿಗೆ ಒಂದು ರಾಡ್ ಹಾಕಿ ತಿರುಗಿಸಿ ಸ್ಟಾರ್ಟ್ ಮಾಡುವುದು.

ಮಂಗಳೂರಿನ ಬಂದರಿನ ಬಾಂಬೆ ಹೋಟೇಲಿನಲ್ಲಿ ಊಟ ಮಾಡಿದ್ದು ನನಗೆ ನೆನಪಿದೆ. ಆಗ ನನ್ನ ತಾಯಿಯ ತಮ್ಮ ಮಾವ ಆ ಹೋಟೇಲ್‌ನಲ್ಲಿ ರೈಟರ್ ಆಗಿದ್ದರು. ಈ ಹೋಟೇಲ್ ಈಗಲೂ ಇದೆ.

# ಕಾಲೇಜಿನ ದಿನಗಳು

ನಮ್ಮೂರು ಬಜಪೆಯಲ್ಲಿ ಆಗಿನ ಕಾಲದಲ್ಲಿ 7ನೇ ತರಗತಿವರೆಗೆ ಮಾತ್ರ ಶಾಲೆ ಇತ್ತು. ಈ ಶಾಲೆಯಲ್ಲಿ 5ನೇ ತರಗತಿ ಮುಗಿಯುವಾಗ ನನಗೆ 15 ವರ್ಷ ಕಳೆದಿತ್ತು. ಆ ನಂತರ ತಂದೆ ನನ್ನನ್ನು ಚಿಕ್ಕಮಗಳೂರಿಗೆ ಕರೆದುಕೊಂಡು ಹೋದರು. ಅಲ್ಲಿ ಒಂದು ಕಾನ್ವೆಂಟ್‌ನಲ್ಲಿ ಹೈಸ್ಕೂಲ್‌ಗೆ ಅಂದರೆ ಎಂಟನೇ ತರಗತಿಗೆ ಸೇರಿಸಿದರು. ಅಲ್ಲಿಯ ಟೀಚರ್‌ನವರು ಬಹಳ ಆತ್ಮೀಯತೆಯಿಂದ ವರ್ತಿಸುತ್ತಿದ್ದರು. ನನಗೆ ಅಲ್ಲಿ ಫಿಲೋಮಿನಾ ಸಿಸ್ಟರ್ ಅಂತ ಒಬ್ಬರು ಕ್ಲಾಸ್ ಟೀಚರ್ ಇದ್ದರು. ಚಿಕ್ಕ ಪ್ರಾಯ. ನನ್ನ ಮೇಲೆ ಅವರಿಗೆ ಬಹಳ ಪ್ರೀತಿ. ಅವರು ನನ್ನೊಳಗಿರುವ ಪ್ರತಿಭೆಯನ್ನು ಗುರುತಿಸಿ ನನ್ನನ್ನು ಪ್ರೋತ್ಸಾಹಿಸಿದರು. ಅವರಿಂದಲೇ ನಾನು ಎಂಟನೇ ತರಗತಿಯಿಂದ ಸೀದಾ ಪಬ್ಲಿಕ್ ಎಕ್ಸಾಮಿನೇಶನ್‌ಗೆ ಕುಳಿತುಕೊಳ್ಳುವಂತಾಯಿತು.

ಈ ಕಾನ್ವೆಂಟ್ ಒಂದು ಅರೆ ಸರಕಾರಿ ಶಾಲೆಯಾಗಿತ್ತು. ಇಲ್ಲಿ 8, 9, 10ನೇ ತರಗತಿಯಲ್ಲಿ ಇಂಗ್ಲಿಷ್ ಮೀಡಿಯಂ ಇತ್ತು. ಸರಕಾರಿ ಶಾಲೆಯಲ್ಲಿ ಆಗ ಇಂಗ್ಲಿಷ್ ಮಿಡಿಯಂ ಯಾಕಿತ್ತು ಎಂದರೆ, ಆಗಿನ ಕಾಲದಲ್ಲಿ ಉರ್ದು ಶಾಲೆಯಿಂದ ಬರುವ ವಿದ್ಯಾರ್ಥಿಗಳಿಗೆ ಇಂಗ್ಲಿಷ್ ಬರುತ್ತಿರಲಿಲ್ಲ. ಕನ್ನಡವೂ ಸರಿಯಾಗಿ ಬರುತ್ತಿರಲಿಲ್ಲ. ಅಂತಹ ಮಕ್ಕಳಿಗಾಗಿ ಕನ್ನಡ ಮತ್ತು ಇಂಗ್ಲಿಷ್ ಎರಡನ್ನೂ ಸರಿಯಾಗಿ ಕಲಿತುಕೊಳ್ಳಲು ಈ ಶಾಲೆಯನ್ನು ಇಂಗ್ಲಿಷ್ ಮೀಡಿಯಂನ್ನಾಗಿ ಮಾಡಲಾಗಿತ್ತು. ನಾನೂ ಇಂಗ್ಲಿಷನ್ನು ಸರಿಯಾಗಿ ಕಲಿತದ್ದು ಇದೇ ಶಾಲೆಯಲ್ಲಿ.

ಎಂಟನೇ ತರಗತಿಯಲ್ಲಿ ನಾನು ಫಸ್ಟ್ ಕ್ಲಾಸಲ್ಲಿ ಪಾಸಾದೆ. ಅಲ್ಲಿಂದ ಸೀದಾ ಇಂಟರ್‌ಮೀಡಿಯೇಟ್‌ಗೆ ಸೇರಿದೆ. ಇಂಟರ್ ಮೀಡಿಯೇಟ್ ಎಂದರೆ ಈಗಿನ ಪಿಯುಸಿ. ಅಲ್ಲಿ ಗೌಡರು, ವೈಶ್ಯರು

ಹೀಗೆ ಹಿಂದೂ ವಿದ್ಯಾರ್ಥಿಗಳೇ ಜಾಸ್ತಿ ಇದ್ದರು. ಹೀಗೆ ನನಗೆ ಅನ್ಯ ಸಮುದಾಯದ ಗೆಳೆಯರು ಹೆಚ್ಚಾದರು. ಆ ಶಾಲೆಯಲ್ಲಿ ಮುಸ್ಲಿಮ್ ವಿದ್ಯಾರ್ಥಿಗಳು ಕೆಲವರು ಇದ್ದರಾದರೂ ಈ ಹಿಂದೂ ವಿದ್ಯಾರ್ಥಿಗಳೇ ನನಗೆ ಹೆಚ್ಚು ಆತ್ಮೀಯರಾದರು. ಇದಕ್ಕೆ ಕಾರಣ ಅಲ್ಲಿದ್ದ ಮುಸ್ಲಿಮ್ ವಿದ್ಯಾರ್ಥಿಗಳೆಲ್ಲ ಉರ್ದು ಮೀಡಿಯಂನಲ್ಲಿ ಕಲಿತು ಬಂದವರು. ಅವರಿಗೆ ಸರಿಯಾಗಿ ಕನ್ನಡ ಬರುತ್ತಿರಲಿಲ್ಲ. ನಾನು ಕನ್ನಡ ಮೀಡಿಯಂನಲ್ಲಿ ಕಲಿತವನು. ಹಾಗಾಗಿ ಕನ್ನಡ ಮಾತನಾಡುವವರೊಡನೆ ನನ್ನ ಒಡನಾಟ ಹೆಚ್ಚಾಯಿತು ಮತ್ತು ಆಗ ಜಾತಿ–ಧರ್ಮಗಳೆಂಬ ಅಂತರ ಇರಲೇ ಇಲ್ಲ. ನನ್ನ ತರಗತಿಯಲ್ಲಿ ನೂರುಲ್ಲಾಖಾನ್ ಅಂತ ಒಬ್ಬ ಇದ್ದ. ಅವನು ಉರ್ದು ಮಾತೃಭಾಷೆಯವನು. ಅವನಿಗೆ ಸರಿಯಾಗಿ ಕನ್ನಡ ಬರುತ್ತಿರಲಿಲ್ಲ. 'ನಮ್ದೂಕೆ–ನಿಮ್ದೂಕೆ' ಎಂದು ಅವನು ಉರ್ದು–ಕನ್ನಡ ಮಿಶ್ರ ಮಾಡಿ ಮಾತನಾಡುವುದು. ಅವನನ್ನು ನಾವು ಗೆಳೆಯರೆಲ್ಲ ಯಾವಾಗಲೂ ಅವನ ಬೆರಕೆ ಕನ್ನಡಕ್ಕಾಗಿ ಗೇಲಿ ಮಾಡುತ್ತಿದ್ದೆವು. ನಮ್ಮ ಹೊಟೇಲ್ ಪಕ್ಕದಲ್ಲೇ ಅವನ ಮನೆಯಿತ್ತು. ಹಾಗಾಗಿ ನಾನೂ ಅವನು ಬಹಳ ಆತ್ಮೀಯರಾದೆವು. ಬಳಿಕ ನಾನು ಅವನ ಫ್ಯಾಮಿಲಿ ಫ್ರೆಂಡ್ ಆದೆ. ಅವನ ಮನೆಯ ಪ್ರತಿಯೊಂದು ಕಾರ್ಯಕ್ರಮದಲ್ಲೂ ಸಕ್ರಿಯವಾಗಿ ಭಾಗವಹಿಸುತ್ತಿದ್ದೆ. ಆತ ಈಗಲೂ ಇದ್ದಾನೆ. ನಡೆಯಲಿಕ್ಕಾಗುವುದಿಲ್ಲ. ಆತನಿಗೆ ಒಬ್ಬಳು ಅಕ್ಕ ಇದ್ದಳು. ಮೊಹಿರ್ಯು ಅಂತ ಅವಳ ಹೆಸರು. ಅವಳು ಬಹಳ ಸುಂದರಿ. ಅವಳಿಗೆ ನನ್ನನ್ನು ಕಂಡರೆ ಬಹಳ ಪ್ರೀತಿ. ಆಗ ಈಗಿನ ಹಾಗೆ ರಸ್ತೆಯಲ್ಲಿ ವಾಹನದಟ್ಟಣೆಯಾಗಲಿ, ಜನಸಂದಣಿಯಾಗಲಿ ಇರಲಿಲ್ಲ. ನಾವು ರಸ್ತೆಯಲ್ಲಿ ಸಹಪಾಠಿಗಳೆಲ್ಲ ಚಿನ್ನಿದಾಂಡು ಆಡಿಕೊಂಡೇ ಶಾಲೆಗೆ ಹೋಗುತ್ತಿದ್ದುದು.

ನಮ್ಮ ಹೊಟೇಲ್‌ಗೆ ತಾಗಿ ಎರಡು ಕೋಣೆಗಳಿದ್ದವು. ಒಂದರಲ್ಲಿ ನಾನು ಮಲಗುತ್ತಿದ್ದೆ. ಅದನ್ನು ತಂದೆಯವರು ನನಗಾಗಿ ಓದಲು ಮತ್ತು ಮಲಗಲು ಕೊಟ್ಟಿದ್ದರು. ಇನ್ನೊಂದು ಕೋಣೆಯಲ್ಲಿ ಇಬ್ಬರು ಮೇಸ್ಟ್ರುಗಳಿದ್ದರು. ನನ್ನ ಸಹಪಾಠಿಗಳೂ ನನ್ನ ಕೋಣೆಗೆ ಓದಲು ಬರುತ್ತಿದ್ದರು. ಒಮ್ಮೆ ಪರೀಕ್ಷೆಯ ಸಮಯ. ನಾನು, ಸಹಪಾಠಿಗಳು ಮತ್ತು ಈ ಮೇಸ್ಟ್ರುಗಳೆಲ್ಲ ಸೇರಿ ಬೆಳಗಿನ ಜಾವದ ತನಕ ಇಸ್ಪೀಟ್ ಆಡುತ್ತಾ ಕುಳಿತಿದ್ದೆವು. ತುಂಬಾ ಹಸಿವಾಗತೊಡಗಿತು. ಮುಖವೂ ತೊಳೆಯದೆ ನಮ್ಮ ಹೊಟೇಲ್‌ಗೆ ಹೋದೆವು. ತಂದೆಯವರು ಬಿಸಿ ಬಿಸಿಯಾದ ದೋಸೆಗೆ ಬೆಣ್ಣೆ ಹಾಕಿ ಎಲ್ಲರಿಗೂ ಕೊಟ್ಟರು. ಸಾಕು ಎಂದರೂ ಮತ್ತೆ ಮತ್ತೆ ಹಾಕಿದರು. "ಓದಿ, ಓದಿ ನಿಮ್ಮ ಕಣ್ಣುಗಳೆಲ್ಲ ಕೆಂಪಾಗಿದೆ ಮಕ್ಕಳೇ, ಇನ್ನು ಹೋಗಿ ಸ್ವಲ್ಪ ಹೊತ್ತು ಮಲಗಿ, ಮತ್ತೆ ಓದಿ" ಎಂದರು. ನಿದ್ದೆಗೆಟ್ಟು ಇಸ್ಪೀಟ್ ಆಡಿದ್ದರಿಂದ ಕಣ್ಣು ಕೆಂಪಗಾಗಿದ್ದು ಎಂದು ಅವರಿಗೆ ಹೇಗೆ ಗೊತ್ತಾಗಬೇಕು? ನಾವು ಅದನ್ನೇ ಹೇಳಿ ನಗುತ್ತಾ ಹೋಗಿ ಮತ್ತೆ ಆಟಕ್ಕೆ ಕುಳಿತೆವು. ತಂದೆಯವರು ತೋರುತ್ತಿದ್ದ ಪ್ರೀತಿ, ಕರುಣೆಗಳನ್ನೆಲ್ಲ ನೆನೆಯುವಾಗ ಈಗಲೂ ಕಣ್ಣು ಒದ್ದೆಯಾಗುತ್ತದೆ.

ಪ್ರತಿಯೊಂದು ಪರೀಕ್ಷೆಯಲ್ಲೂ ಪಾಸಾಗುತ್ತಿದ್ದ ನಾನು ಇಂಟರ್‌ಮೀಡಿಯೇಟ್‌ನಲ್ಲಿ ಒಮ್ಮೆ ಒಂದು ವಿಷಯದಲ್ಲಿ ಫೇಲ್ ಆದೆ. ಇದಕ್ಕೆ ಕಾರಣ ನಾನು ಗೆಳೆಯರ ಜೊತೆ

ಕ್ರೀಡೆಯಲ್ಲಿ ಪಾಲ್ಗೊಳ್ಳತೊಡಗಿದ್ದು. ನನಗೆ ಬಾಸ್ಕೆಟ್‌ಬಾಲ್ ಎಂದರೆ ಬಹಳ ಇಷ್ಟ. ಹೀಗೆ ಆಡುತ್ತಾ ಆಡುತ್ತಾ ಒಂದು ತಂಡ ಕಟ್ಟಿಕೊಂಡು ನಾನು ಅದರ ಕ್ಯಾಪ್ಟನ್ ಆದೆ. ಅನಂತರ ನನ್ನ ತಂಡವನ್ನು ದಸರಾ ಸಂದರ್ಭದಲ್ಲಿ ಮೈಸೂರಿಗೆ ಎಂಜಿಎಸ್ ಟೂರ್ನಮೆಂಟಿಗೆ ಮತ್ತು ಶಿವಮೊಗ್ಗಕ್ಕೆ ಕರೆದುಕೊಂಡು ಹೋದೆ. ಎರಡು ಕಡೆಗಳಲ್ಲೂ ಗೆದ್ದು ಬಂದೆ. ಆದರೆ ಇದರಿಂದ ನನ್ನ ಓದು ಕುಂಠಿತವಾಯಿತು. ಆಮೇಲೆ ಮತ್ತೆ ಪರೀಕ್ಷೆ ಬರೆದು ಫೇಲ್ ಆದ ವಿಷಯವನ್ನು ಸಂಪೂರ್ಣ ಮಾಡಿದೆ. ಆ ಶಾಲೆಯಲ್ಲಿ ನಾನು ಒಂದು ನಾಟಕದಲ್ಲಿ ಪಾತ್ರ ಮಾಡಿದ್ದೆ. ಆ ನಾಟಕದ ಹೆಸರು 'ಸುಂದೋಪ ಸುಂದರ' ಎಂದು. ನಾನು ಅದರಲ್ಲಿ ಸುಂದೋಪ ಸುಂದರನ ಪಾತ್ರ ನಿರ್ವಹಿಸಿದ್ದೆ. ನಾನು ಬಹಳ ಸುಂದರವಾಗಿದ್ದುದರಿಂದ ಆ ಪಾತ್ರವನ್ನು ನನಗೆ ನೀಡಿದ್ದರು. ಅದೊಂದು ಹಾಸ್ಯನಾಟಕ. ಆ ನಂತರ ನನ್ನನ್ನು ನನ್ನ ಶಾಲೆಯಲ್ಲಿ ಒಳ್ಳೆಯ ರಂಗನಟ ಎಂದು ಎಲ್ಲರೂ ಹೊಗಳುತ್ತಿದ್ದರು.

ಚಿಕ್ಕಮಗಳೂರಿನಲ್ಲಿ ಓದುತ್ತಿದ್ದಾಗ ನನ್ನ ತರಗತಿಯಲ್ಲಿ ನಾಗರತ್ನಾ ಎಂಬ ಒಬ್ಬಳು ವಿದ್ಯಾರ್ಥಿನಿ ಇದ್ದಳು. ತುಂಬಾ ಸುಂದರಿ ಅವಳು. ಬೇರೆ ತುಂಬಾ ಹುಡುಗಿಯರಿದ್ದರೂ ಈ ನಾಗರತ್ನಾಳ ನೆನಪು ಮಾತ್ರ ನನ್ನಲ್ಲಿ ಇನ್ನೂ ಉಳಿದುಕೊಂಡಿದೆ. ಇನ್ನೊಬ್ಬಳು ಮುಮ್ತಾಝ್ ಬೇಗಂ ಅಂತ ಇದ್ದಳು. ಅವಳು ತುಂಬಾ ಸುಂದರಿಯಾಗಿದ್ದಳು ಮಾತ್ರವಲ್ಲ ತುಂಬಾ ರಿಸರ್ವ್ಡ್ ಹೆಣ್ಣು ಅವಳು. ಅವಳು ಓದು ಮುಗಿದು ಮದುವೆಯಾದ ಮೇಲೆ ಒಮ್ಮೆ ಸಿಕ್ಕಿದ್ದಳು. ಕಾಲೇಜು ಜೀವನ ಕಳೆದು ವರ್ಷಗಳ ಮೇಲೆ ಅನಿರೀಕ್ಷಿತ ಭೇಟಿಯಾದಾಗ ಸಹಜವಾಗಿಯೇ ಇಬ್ಬರಿಗೂ ಬಹಳ ಖುಷಿಯಾಗಿತ್ತು. ಅಂದು ಅವಳು ನನ್ನಲ್ಲಿ ತುಂಬಾ ಮಾತನಾಡಿದ್ದಳು. ಅನಂತರ ಅವಳಿಂದ ನನಗೊಂದು ಪತ್ರ ಬಂತು. "ಮೊೖದಿನ್, ಕಾಲೇಜಿನಲ್ಲಿರುವಾಗ ನಾನು ನಿನ್ನನ್ನು ತುಂಬಾ ಇಷ್ಟಪಟ್ಟಿದ್ದೆ. ಎಲ್ಲಿಯವರೆಗೆಂದರೆ ನಿನ್ನನ್ನೇ ಮದುವೆಯಾಗಬೇಕೂಂತ ಆಸೆ ಇತ್ತು. ಆದರೆ ಈ ವಿಷಯ ನಿನ್ನಲ್ಲಿ ಹೇಳಲು ನನಗೆ ಧೈರ್ಯವಿರಲಿಲ್ಲ. ನನಗೆ ಅದೃಷ್ಟ ಇಲ್ಲ. ನೀನು ಚೆನ್ನಾಗಿರು' ಎಂದು ಆ ಪತ್ರದಲ್ಲಿ ಬರೆದಿದ್ದಳು. ಅವಳದ್ದು ಯಾರಲ್ಲೂ ಹೇಳಿಕೊಳ್ಳಲಾಗದ ಮೌನ ಪ್ರೇಮವಾಗಿತ್ತು. ಆಗ ನನಗೆ ಮದುವೆಯಾಗಿ ಒಂದು ಮಗುವಿತ್ತು.

ಮುಮ್ತಾಝ್ ಬೇಗಂ ತಂದೆ ಚಿಕ್ಕಮಗಳೂರಿನಲ್ಲಿ ರಿಜಿಸ್ಟ್ರಾರ್ ಆಗಿದ್ದವರು. ಆಮೇಲೆ ಅವರಿಗೆ ಮೈಸೂರಿಗೆ ಟ್ರಾನ್ಸ್‌ಫರ್ ಆಯಿತು. ಮುಮ್ತಾಝ್ ಎಂ.ಎ. ಮಾಡಿ ಟೀಚರ್ ಆದಳು. ಈಗ ನಿವೃತ್ತಿಯಾಗಿದ್ದಾಳೆ. ಈಗಲೂ ಫೋನ್ ಮಾಡ್ತಾ ಇರ್ತಾಳೆ. ವಿಶೇಷ ಎಂದರೆ ಇವಳು ಕಾಲೇಜಿನಲ್ಲಿ ಓದುತ್ತಿರುವಾಗ ನನ್ನಲ್ಲಿ ಮಾತನಾಡುತ್ತಿರಲಿಲ್ಲ. ನನ್ನಲ್ಲಿ ಮಾತ್ರವಲ್ಲ ಯಾರಲ್ಲೂ ಅಷ್ಟೊಂದು ಬೆರೆಯುತ್ತಿರಲಿಲ್ಲ. ಅವಳಷ್ಟಕ್ಕೆ ಅವಳು ಇರುತ್ತಿದ್ದಳು. ಆದರೆ ಯಾರಲ್ಲೂ ಹೇಳಲಾಗದೆ ಮನಸ್ಸಿನೊಳಗೆ ಈ ಪ್ರೇಮವನ್ನು ಅದುಮಿಟ್ಟುಕೊಂಡಿದ್ದಳು.

ಹೀಗೆಯೇ ನನಗೂ ನನ್ನ ಶಾಲೆಯ ಒಬ್ಬಳು ವಿದ್ಯಾರ್ಥಿನಿಯ ಮೇಲೆ ತುಂಬಾ

ಪ್ರೇಮವಿತ್ತು. ಅವಳು ತುಂಬಾ ಸುಂದರಿ, ಪ್ರತಿಭಾವಂತೆ. ಆದರೆ ನನ್ನದೂ ಮುಮ್ತಾಝ್ ತರದ ಮೌನ ಪ್ರೇಮವಾಗಿತ್ತು. ಇದನ್ನು ಅವಳಲ್ಲಿ ಹೇಳಬೇಕೂಂತ ನಾನು ಬಹಳ ಒದ್ದಾಡುತ್ತಿದ್ದೆ. ಅನಂತರ ಅವಳಿಗೆ ಬೇರೆ ಮದುವೆಯಾಯಿತು. ಹೀಗೆ ಆಗಿನ ಕಾಲದಲ್ಲೂ ವಿದ್ಯಾರ್ಥಿಗಳ ನಡುವೆ ಈ ಪ್ರೇಮ, ಪ್ರೀತಿ, ಸಂಬಂಧಗಳೆಲ್ಲ ಇದ್ದವು. ಆದರೆ ಈಗಿನ ಹಾಗೆ ಸುತ್ತಾಡುವುದು, ಮಜಾ ಮಾಡುವುದು, ಮನೆ ಬಿಟ್ಟು ಓಡುವುದು ಮುಂತಾದವುಗಳೆಲ್ಲ ಇರಲಿಲ್ಲ. ಆ ಬಗ್ಗೆ ಪರಸ್ಪರ ಮಾತನಾಡಲೂ ಹೆದರುತ್ತಿದ್ದೆವು.

ಒಮ್ಮೆ ನನ್ನ ಒಂದು ಜೊತೆ ಬೂಟು ಕಳೆದುಹೋಯಿತು. ಇದನ್ನು ಹೆಚ್ಚಾಗಿ ಕಾಲೇಜಿಗೆ ಹೋಗುವಾಗ, ಮದುವೆ ಸಮಾರಂಭಗಳಿಗೆ ಹೋಗುವಾಗ ಹಾಕಿಕೊಳ್ಳುತ್ತಿದ್ದೆ. ಇದು ನನಗೆ ಅಪ್ಪ ತಂದುಕೊಟ್ಟ ಬೂಟು. ಇದರಿಂದ ನನಗೆ ಬಹಳ ಬೇಸರವಾಗಿತ್ತು. ಪ್ಯಾರಾದಲ್ಲಿ ಒಂದು ಮದುವೆ ಕಾರ್ಯಕ್ರಮದಲ್ಲಿ ನಡೆಯುತ್ತಿದ್ದ 'ಕಬಿ'ಗೆ ನಾನು ಆ ಹೊಸ ಬೂಟು ಹಾಕಿಕೊಂಡು ಹೋಗಿದ್ದೆ. ಬೂಟು ಕಳಚಿಟ್ಟು ಮನೆಯೊಳಗೆ ಹೋಗಿ ಹೊರಗೆ ಬರುವಷ್ಟರಲ್ಲಿ ಕಾಣೆಯಾಗಿತ್ತು. ಎಷ್ಟು ಹುಡುಕಾಡಿದರೂ ಬೂಟು ಪತ್ತೆಯಾಗಲಿಲ್ಲ. 'ಇಂದಲ್ಲ ನಾಳೆ ಸಿಗಬಹುದು, ಬೇಜಾರು ಮಾಡಬೇಡ' ಎಂದು ಎಲ್ಲರೂ ನನ್ನನ್ನು ಸಮಾಧಾನಪಡಿಸಿದರು. ನಾನು ಬರಿಗಾಲಲ್ಲೇ ಹಿಂದಿರುಗಿದೆ. ಅನಂತರ ಕೆಲವು ದಿನ ಬಿಟ್ಟು ಕೊಂಚಾರ್ ಬಳಿಯ ಮನೆಯವನೊಬ್ಬ ಆ ಬೂಟು ಹಾಕಿಕೊಂಡು ತಿರುಗಾಡುತ್ತಾ ಇದ್ದಾನೆ ಎಂಬ ವಿಷಯ ತಿಳಿಯಿತು. ನಾನು ಹೋಗಿ ದೂರದಿಂದ ನೋಡಿದೆ. ಅದು ನನ್ನದೇ ಬೂಟು. ಆತ ನನಗೆ ತೀರಾ ಪರಿಚಿತ. ಆತನದ್ದು ದೊಡ್ಡ ಕುಳ. ದೊಡ್ಡ ಮನೆತನ. ನನಗೆ ಅವನಲ್ಲಿ ಆ ಬಗ್ಗೆ ವಿಚಾರಿಸಲು ಧೈರ್ಯ ಬರಲಿಲ್ಲ. ಅಲ್ಲೇ ನನ್ನ ಚಿಕ್ಕಮ್ಮನ ಮನೆ ಇತ್ತು. ಅವರನ್ನು ಅದೇ ಊರಿಗೆ ಮದುವೆ ಮಾಡಿಕೊಟ್ಟದ್ದು. ನಾನು ಹೋಗಿ ಅವರಲ್ಲಿ ವಿಷಯ ತಿಳಿಸಿದೆ. ಅವರು ಹೇಳಿದರು – ಅದನ್ನು ಕೇಳುವುದು ಬೇಡ. ಈ ವಿಷಯ ಅಲ್ಲಿಗೇ ಬಿಟ್ಟುಬಿಡು – ಎಂದು. ನಾವು ಎಲ್ಲಿಯಾದರೂ ಕೇಳಲಿಕ್ಕೆ ಹೋದರೆ ಮನೆಯವರಿಗೆ ಅವಮಾನವಾಗಿ ಜಗಳವಾಗಬಹುದು ಎಂದು ಚಿಕ್ಕಮ್ಮನಿಗೆ ಭಯ. ಚಿಕ್ಕಮ್ಮನ ಮಾತಿನಿಂದ ಮತ್ತಷ್ಟು ಬೇಸರವಾಗಿ ನಾನು ಹಿಂದಿರುಗಿದೆ.

ಚಿಕ್ಕಮಗಳೂರಿನಿಂದ ಡಿಗ್ರಿ ಮಾಡಲು ನಾನು ಬೆಂಗಳೂರಿಗೆ ಹೋದೆ. ಬೆಂಗಳೂರು ವಿಜಯಾ ಕಾಲೇಜಿನಲ್ಲಿ ಬಿ.ಎಸ್ಸಿ.ಗೆ ಸೀಟು ಸಿಕ್ಕಿತು. ನನ್ನದೇ ತರಗತಿಯವರಾದ ನೂರುಲ್ಲಾಖಾನ್ ಮತ್ತು ಚಿನ್ನೇಗೌಡ ಬಿ.ಎ. ಮಾಡಲು ಮೈಸೂರಿಗೆ ಹೋದರು. ನಾನು ಬಿ.ಎ. ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂದು ಒಮ್ಮೊಮ್ಮೆ ಅನಿಸುತ್ತಾ ಇತ್ತು. ಬಿ.ಎ. ಮಾಡಿದ್ದರೆ ಈಗ ವಕೀಲನಾಗಿರುತ್ತಿದ್ದೆ. ಇಂಜಿನಿಯರ್ ಮಾಡಬೇಕೂಂತ ತುಂಬಾ ಆಸೆಯಿತ್ತು. ಆದರೆ ಮಾರ್ಕ್ ಕಡಿಮೆ ಇದ್ದುದರಿಂದ ಸೀಟು ಸಿಗಲಿಲ್ಲ. ಕೊನೆಗೆ ಅನಿವಾರ್ಯವಾಗಿ ಬಿ.ಎಸ್ಸಿ. ಮಾಡಿದೆ.

ಚಿಕ್ಕಮಗಳೂರಿನಲ್ಲಿ ನಮಗೆ ಶಾಮರಾವ್ ಎಂಬ ಪ್ರಾಂಶುಪಾಲರಿದ್ದರು. ಇವರ

ಬಗ್ಗೆ ಒಂದು ಮಾತು ನಾನು ಇಲ್ಲಿ ಹೇಳಲೇಬೇಕು. ಇವರು ಬಹಳ ಒಳ್ಳೆಯ, ಶುದ್ಧ ಮನಸ್ಸಿನ ವ್ಯಕ್ತಿ. ವಿದ್ಯಾರ್ಥಿಗಳೆಂದರೆ ಇವರಿಗೆ ತುಂಬಾ ಪ್ರೀತಿ. ತುಂಬಾ ಚೆನ್ನಾಗಿ ಪಾಠ ಮಾಡುತ್ತಾ ಇದ್ದರು. ಪಾಠದ ಜೊತೆಗೆ ಅವರ ವೈಯಕ್ತಿಕ ಅನುಭವಗಳನ್ನೂ ಅಲ್ಲಲ್ಲಿ ಸೇರಿಸಿ ಹೇಳುತ್ತಾ ಇದ್ದರು. ಹಾಸ್ಯಚಟಾಕಿ ಯಾವಾಗಲೂ ಇದ್ದೇ ಇರುತ್ತಿತ್ತು. ಅವರ ಕ್ಲಾಸ್ ಎಂದರೆ ಎಲ್ಲರಿಗೂ ಇಷ್ಟ. ಅವರು ಪಾಠ ಮಾಡುವಾಗ ಎಂಜಲು ಹಾರುತ್ತಿತ್ತು. ಒಮ್ಮೆ ಅವರ ಜೊತೆ ಮಾತನಾಡುವಾಗ ಪದ್ಮಾ ಎಂಬ ವಿದ್ಯಾರ್ಥಿನಿ ಎಂಜಲು ಹಾರುತ್ತದೆಂದು ಕೈ ಅಡ್ಡ ಹಿಡಿದಳು. ಆಗ ಈ ಪ್ರಾಂಶುಪಾಲರು – 'ಏನಮ್ಮಾ ಕೈ ಅಡ್ಡ ಹಿಡಿಯುತ್ತಿ? ನಾನೇನು ನಿನಗೆ ಮುತ್ತು ಕೊಡೊಲ್ಲ. ಹೆದರಬೇಡ" ಎಂದು ತಮಾಷೆಯಾಗಿ ಹೇಳಿದಾಗ ಇಡೀ ತರಗತಿ ನಗೆಗಡಲಲ್ಲಿ ಮುಳುಗಿತ್ತು.

ಈ ಪ್ರಾಂಶುಪಾಲರಿಗೆ ಲೆಕ್ಚರರ್ ಪೋಸ್ಟ್ ಸಿಕ್ಕಿದಾಗ ಸೂಟು ಹೊಲಿಸಲೆಂದು ಮೈಸೂರಿನಲ್ಲಿ ಒಂದು ಅಂಗಡಿಗೆ ಹೋಗಿದ್ದರಂತೆ. ಅದು ಸೂಟು ಹೊಲಿದು ಕೊಡುವ ಟೈಲರ್ ಅಂಗಡಿ. ಅಲ್ಲಿ ರೆಡಿಮೇಡ್ ಸೂಟುಗಳೂ ಇದ್ದುವಂತೆ. ಆ ಅಂಗಡಿಯ ಹೆಸರು 'ಪಟ್ಟೊ ಬ್ರದರ್ಸ್' ಅಂತ. ಮೈಸೂರಿನಲ್ಲಿ ಆ ಅಂಗಡಿ ಈಗಲೂ ಇದೆ. ಬಹಳ ಪ್ರಸಿದ್ಧ ಮಳಿಗೆ ಅದು. ಒಂದು ದಿನ ಈ ಪ್ರಾಂಶುಪಾಲರು ಪಂಚೆ ಉಟ್ಟುಕೊಂಡು ಆ ಮಳಿಗೆಗೆ ಹೋಗಿ ಶೋಕೇಸ್‌ನಲ್ಲಿ ತೂಗು ಹಾಕಿದ್ದ ಸೂಟುಗಳನ್ನೆಲ್ಲ ನೋಡುತ್ತಾ ಇದ್ದರಂತೆ. ಆಗ ಅಂಗಡಿಯವ ಬಂದು "ಏನು ನೋಡ್ತಾ ಇದ್ದಿ. ಇದೆಲ್ಲ ನೀನು ಹಾಕುವಂತಹದ್ದಲ್ಲ, ಜಂಟಲ್‌ಮೆನ್‌ಗಳು ಹಾಕುವಂತಹದ್ದು" ಎಂದು ಗದರಿಸಿದನಂತೆ. "ಸೂಟು ಹಾಕಿದವನು ಮಾತ್ರ ಜಂಟಲ್ ಮೆನ್, ನಾವು ಜಂಟಲ್‌ಮೆನ್ ಅಲ್ಲವಾ?" ಎಂದು ಆ ಅಂಗಡಿಯವನಲ್ಲಿ ಕೇಳಬೇಕೆಂದರೂ ಸಾಧ್ಯವಾಗದೆ ಹಿಂದಿರುಗಿ ಬಂದರಂತೆ. ಇಂತಹ ವಿಷಯಗಳನ್ನೆಲ್ಲ ಅವರು ಪಾಠದ ಮಧ್ಯೆ ಬಹಳ ಆಪ್ತವಾಗಿ, ರಸವತ್ತಾಗಿ ನಮಗೆ ವಿವರಿಸುತ್ತಿದ್ದರು. ಎಲ್ಲರ ಜೊತೆಯೂ ಬೆರೆಯುತ್ತಿದ್ದರು. ತಮಾಷೆಯಾಗಿ ಮಾತನಾಡುತ್ತಿದ್ದರು. ಶೇಕ್ಸ್‌ಪಿಯರ್ ಬಗ್ಗೆ ಅವರು ತುಂಬಾ ಹೇಳುತ್ತಿದ್ದರು. ಆಗೆಲ್ಲ ಅವರು ಒಮ್ಮೊಮ್ಮೆ ನಮ್ಮನ್ನು 'ಏ ಶೇಕ್ಸ್‌ಪಿಯರ್', 'ಏ ಜಂಟಲ್‌ಮೆನ್' ಎಂದು ಕರೆಯುತ್ತಿದ್ದರು. ಇವರನ್ನು, ಇವರ ವ್ಯಕ್ತಿತ್ವವನ್ನು ಮರೆಯಲು ಸಾಧ್ಯವೇ ಇಲ್ಲ.

ಈ ಶಾಮರಾವ್ ಅವರಿಗೆ ಒಬ್ಬಳು ಮಗಳಿದ್ದಳು. ಅವಳು ಅಮೆರಿಕದಲ್ಲಿ ಕಲಿತದ್ದು. ಬಳಿಕ ಮದುವೆಯಾದಳು. ಗಂಡ ತೀರಿಹೋದ ನಂತರ ಈಗ ಬೆಂಗಳೂರಿನಲ್ಲಿ ಜೀವನ ಸಾಗಿಸುತ್ತಿದ್ದಾಳೆ. ಅವಳನ್ನು ಒಮ್ಮೆ ಕಾಣಬೇಕೂಂತ ನನಗೆ ಬಹಳ ಆಸೆ ಇತ್ತು. ಆದರೆ ಸಾಧ್ಯವಾಗಲೇ ಇಲ್ಲ.

ನಾನು ರಜೆಯಲ್ಲಿ ಊರಿಗೆ ಬಂದಾಗ ಗೆಳೆಯರೆಲ್ಲ ಒಟ್ಟಾಗುತ್ತಿದ್ದೆವು. ನಾನು ಮತ್ತು ಗೆಳೆಯ ಡಾ. ಟಿ.ಕೆ. ಮುಹಮ್ಮದ್ ಒಮ್ಮೆ ತೋಟೆ ಹಾಕಿ ಮೀನು ಹಿಡಿಯಲು ನದಿಗೆ ಹೋಗಿದ್ದೆವು. ಇದಕ್ಕಾಗಿ ಒಂದು ದೋಣಿಯನ್ನು ಗೊತ್ತು ಮಾಡಿದ್ದೆವು. ಈ ದೋಣಿಯವನಿಗೆ ಎಲ್ಲಿ ಮೀನು ಗುಂಪಾಗಿ ಇರುತ್ತದೆ, ತೋಟೆ ಹೇಗೆ ಹಾಕಬೇಕು

ಎಲ್ಲ ತಿಳಿದಿತ್ತು. ಈ ತೋಟೆ ಎಲ್ಲರಿಗೂ ಸಿಗುತ್ತಿರಲಿಲ್ಲ. ಇದನ್ನು ಸಿಡಿಮದ್ದು ತಯಾರಿಸುವವರು ಗುಟ್ಟಿನಲ್ಲಿ ತಯಾರಿಸಿ ಪರಿಚಿತರಿಗೆ ಮಾತ್ರ ಮಾರುತ್ತಿದ್ದರು. ಈ ದೋಣಿಯವನಿಂದ ತೋಟೆ ತರಿಸಿ ನಾವು ದೋಣಿಯಲ್ಲಿ ಹೊರಟೆವು. ನಮ್ಮಲ್ಲಿ ಆರು ತೋಟೆಗಳಿದ್ದವು. ನಮ್ಮೂರಿನಿಂದ ಹೊರಟ ನಾವು ಕೂಳೂರು 'ರುಯಿಕಡವು'ವರೆಗೆ ಐದು ತೋಟೆಗಳನ್ನು ಹಾಕಿದ್ದೆವು. ಆದರೆ ಒಂದೇ ಒಂದು ಮೀನು ಸಿಗಲಿಲ್ಲ. ಈ 'ರುಯಿಕಡವು' ಎಂದರೆ ಅದು ಹಿಂದಿನ ಕಾಲದಲ್ಲಿ ದೋಣಿಯಲ್ಲಿ ಪ್ರಯಾಣಿಸುತ್ತಿದ್ದಾಗ ಸುಂಕ ಪಾವತಿಸುವ ಸ್ಥಳ. ನೀರಿನಲ್ಲಿ ಆ ಕಡೆಯಿಂದ ಈ ಕಡೆಗೆ ದಾಟಬೇಕಾದರೆ ಆ ಕಾಲದಲ್ಲಿ ಅಲ್ಲಿ ಒಂದು ರುಯಿ (ನಾಣ್ಯ) ಸುಂಕದವನಿಗೆ ಕೊಡಬೇಕಾಗಿತ್ತಂತೆ.

ಮೀನು ಸಿಗದೆ ನಿರಾಶರಾಗಿದ್ದ ನಮ್ಮ ಕೈಯಲ್ಲಿ ಇನ್ನು ಒಂದು ತೋಟೆ ಮಾತ್ರ ಉಳಿದಿತ್ತು. ಮೀನು ಸಿಗುವ ಯಾವ ಲಕ್ಷಣವೂ ಕಾಣಲಿಲ್ಲ. ಆಗ ದೋಣಿಯವನಲ್ಲಿ ಟಿ.ಕೆ. ಹೇಳಿದ "ಆ ಒಂದು ತೋಟೆಯನ್ನು ಯಾಕೆ ಇಟ್ಟುಕೊಂಡಿದ್ದಿ ಮಾರಾಯ? ಅದನ್ನೂ ಹಾಕಿಬಿಡು" ಎಂದು. ದೋಣಿಯವ ಆ ಕೊನೆಯ ತೋಟೆಯನ್ನು ನೀರಿಗೆ ಹಾಕಿದ. ಮತ್ತೆ ಕೆಲವು ನಿಮಿಷಗಳಲ್ಲಿ ಮೀನಿನ ರಾಶಿಯೇ ದೋಣಿಯ ಸುತ್ತ ತೇಲತೊಡಗಿತು. ದೋಣಿಯವ ನದಿಗೆ ಹಾರಿ ಮೀನುಗಳನ್ನೆತ್ತಿ ದೋಣಿಗೆ ಹಾಕತೊಡಗಿದ. ನಾವು ಗೋಣಿಚೀಲಗಳನ್ನು ಕೊಂಡುಹೋಗಿದ್ದೆವು. 4–5 ಚೀಲ ತುಂಬಿಸಿದ್ದರೂ ಮತ್ತೂ ಮೀನುಗಳಿದ್ದವು. ನಮಗೆ ಸಾಕು ಎನಿಸಿ ಬಿಟ್ಟುಬಂದೆವು. ಉಳಿದದ್ದನ್ನೆಲ್ಲ ನದಿ ಬದಿಯ ಮನೆಯವರು ಕೊಂಡೊಯ್ದರು.

ಈ ತೋಟೆ ಎಂದರೆ ಅದೊಂದು ಸ್ಫೋಟಕ. ಉರುಟು ಪೈಪ್‌ನಂತೆ ಸುಮಾರು 4–5 ಇಂಚು ಉದ್ದ ಇರುತ್ತಿತ್ತು. ಅದರ ತುದಿಯಲ್ಲಿ ಒಂದು ಬತ್ತಿ. ಆ ಬತ್ತಿಯನ್ನು ಕಚ್ಚಿದರೆ ಅಥವಾ ಎಳೆದರೆ ಅದು ಸ್ಫೋಟಗೊಳ್ಳುತ್ತಿತ್ತು. ಅದನ್ನು ಮೀನು ಇರುವ ಸ್ಥಳ ನೋಡಿ ಹಾಕುವುದು. ಅದು ನೀರಿನ ಆಳಕ್ಕೆ ಹೋಗುತ್ತಿದ್ದಂತೆ ಇದೇನೋ ಆಹಾರವಿರ ಬೇಕೆಂದು ಭಾವಿಸಿ ಮೀನುಗಳ ಗುಂಪುಗಳು ಬಂದು ಅದನ್ನು ಎಳೆದಾಡಿ ಕಚ್ಚುತ್ತವೆ. ಆಗ ಅದು ಸ್ಫೋಟಗೊಂಡು ಮೀನುಗಳು ಸತ್ತು ನೀರಿನ ಮೇಲೆ ತೇಲುತ್ತವೆ. ಅವುಗಳನ್ನೆತ್ತಿ ದೋಣಿಗೆ ಹಾಕುವುದು. ಹೀಗೆ ನಾವು ಗೆಳೆಯರೆಲ್ಲ ಸೇರಿ ಅದೆಷ್ಟೋ ಸಲ ಮೀನು ಹಿಡಿಯಲು ಹೋಗಿದ್ದೆವು. ಹೆಚ್ಚು ಮೀನು ಸಿಕ್ಕಾಗ ಅದನ್ನು ನೆರೆಯವರಿಗೆ, ಬಂಧುಗಳಿಗೆ ಹಂಚುತ್ತಿದ್ದೆವು.

ಇನ್ನೊಂದು ಸ್ವಾರಸ್ಯಕರ ವಿಷಯ ಹೇಳುತ್ತೇನೆ : ನಾವು ಊರಿನಿಂದ ಹೊರಗಿದ್ದವರು ಊರಿಗೆ ಮರಳುವಾಗ ಗೆಳೆಯರಿಗೇಂತ ಏನಾದರೂ ಉಡುಗೊರೆ ತರುತ್ತಿದ್ದೆವು. ಉಡುಗೊರೆ ಎಂದರೆ ಪೆನ್ನ್, ಶರ್ಟ್‌ಪೀಸ್‌ನಂತಹ ಸಣ್ಣ ಸಣ್ಣ ವಸ್ತುಗಳು. ಈ ಡಾ. ಟಿ.ಕೆ. ಮುಹಮ್ಮದ್‌ರ ಮಾವ 1967ರಲ್ಲಿ ಹಜ್‌ಗೆ ಹೋಗಿ ಹಿಂದಿರುಗುವಾಗ ಅಳಿಯನಿಗೇಂತ ಒಂದು ಟೇಪ್ ರೆಕಾರ್ಡರ್ ತಂದಿದ್ದರು. ಅದು ಆಗ ನಮ್ಮೂರಿಗೆ ಬಂದ ಮೊದಲ ಟೇಪ್‌ರೆಕಾರ್ಡರ್. ಅದು ಪೂಲ್ ಸಿಸ್ಟಮ್. ಅದನ್ನು ನೋಡಿದಾಗ

ನನ್ನಲ್ಲಿ ಒಂದು ಯೋಚನೆ ಹೊಳೆಯಿತು. ನಾವು ಇದರಲ್ಲಿ ಒಂದು ನಾಟಕ ರೆಕಾರ್ಡ್ ಮಾಡಿದರೆ ಹೇಗೆ ಎಂದು. ಇದನ್ನು ಗೆಳೆಯರಿಗೆಲ್ಲ ಹೇಳಿದಾಗ ಎಲ್ಲರೂ ಒಪ್ಪಿದರು.

ಬಿ.ಎಂ. ಝಕರಿಯಾ, ಕೆ.ಪಿ. ಅಬ್ದುಲ್ ರಹ್ಮಾನ್, ಮಹಮೂದ್, ಬಿ.ಪಿ. ಇಸ್ಮಾಈಲ್, ಡಾ. ಟಿ.ಕೆ. ಮುಹಮ್ಮದ್ ಮತ್ತು ನಾನು ಎಲ್ಲ ಒಂದು ಕಡೆ ಸೇರಿದೆವು. ನಾಟಕ ಎಂದರೆ ಅದಕ್ಕೆ ಸ್ಕ್ರಿಪ್ಟ್, ಪ್ರಾಕ್ಟೀಸ್ ಯಾವುದೂ ಇಲ್ಲ. ನಮ್ಮೂರಲ್ಲಿ ಕೆಲವು ಹಿರಿಯರಿದ್ದರು. ಅವರು ಪ್ರಭಾವಿಗಳಾಗಿದ್ದರು. ಅವರದ್ದು ಒಬ್ಬೊಬ್ಬರದ್ದು ಒಂದೊಂದು ವ್ಯಕ್ತಿತ್ವ. ಅವರನ್ನೇ ಕೇಂದ್ರವಾಗಿಟ್ಟುಕೊಂಡು ಅವರ ಧ್ವನಿ, ಮಾತನಾಡುವ ರೀತಿಯನ್ನು ಹಾಸ್ಯಮಯವಾಗಿ ಅನುಕರಣೆ ಮಾಡುವುದು. ಇದು ಒಂಥರ ಮಿಮಿಕ್ರಿ ಅಂತಲೂ ಹೇಳಬಹುದು. ಸಿರುಗೂರು ಸೇಕಬಾಕ, ಕಪ್ಪೆ ಹಾಮದಾಕ, ಹೊಟೇಲ್‌ನ ಶಾಂತಿ ಭಟ್ಟ, ಟಿ.ಕೆ.ಯ ತಂದೆ ಬಾವ ಹಾಜಿ, ಝಕರಿಯಾ ತಂದೆ ಮೈದಿಯಾಕ, ಇನ್ನೊಬ್ಬ ವೇಳಾಯುಧನ್ ಅಂತ. ಆತ ಮಲಯಾಳಿ. ನಮ್ಮೂರಲ್ಲಿ ಟೆಲಿಫೋನ್ ಆಪರೇಟರ್ ಆಗಿದ್ದವ. ತುಳು, ಕನ್ನಡ, ಮಲಯಾಳ ಮಿಶ್ರಿತ ಅವನ ಮಾತು ತುಂಬಾ ತಮಾಷೆಯಾಗಿರುತ್ತಿತ್ತು. ಇವರ ಪಾತ್ರಗಳನ್ನೆಲ್ಲ ನಾವು ನಾಟಕಕ್ಕೆ ಆಯ್ಕೆ ಮಾಡಿಕೊಂಡೆವು. ಯಾರ್‍ಯಾರ ಪಾತ್ರ ಯಾರಿಗೆಂದು ನಿರ್ಧರಿಸಿಕೊಂಡೆವು. ಒಂದು ಗಂಟೆಯ ನಾಟಕ ಅದು. ಈ ನಾಟಕದಲ್ಲಿ ಕಬಡ್ಡಿ ಮ್ಯಾಚ್, ಹೊಟೇಲಿನಲ್ಲಿ ಗಲಾಟೆ ಆಗುವುದು, ಕಪ್ಪೆ ಹಾಮದಾಕ ಬಾಯಿಗೆ ಬಂದಂತೆ ಬಯ್ಯುವುದು, ಕಪ್ಪೆ ಹಾಮದಾಕ ಮತ್ತು ಮೈದಿಯಾಕರ ಮಧ್ಯೆ ಕುಸ್ತಿ ಸ್ಪರ್ಧೆ, ಇದರ ಕಮೆಂಟರಿ ಹೇಳುವುದು, ಸ್ಪರ್ಧೆಯ ನಿಯಮಗಳನ್ನು ಹೇಳುವುದು, 'ಕುಸ್ತಿ ಸ್ಪರ್ಧೆಗೆ ಬರುವಾಗ ಚಡ್ಡಿ ಹಾಕಿಕೊಂಡು ಬರುವುದು ಕಡ್ಡಾಯ. ಕುಸ್ತಿಯಲ್ಲಿ ಒಬ್ಬರನ್ನೊಬ್ಬರ ಲುಂಗಿ ಎಳೆಯಬಾರದು' ಮುಂತಾದ ನಿಯಮಗಳನ್ನು ಹೇಳುವುದು, ಜಯಿಸಿದವರ ಹೆಸರುಗಳು, ವಿವರ ಹೇಳುವುದು... ಹೀಗೆ ತುಂಬಾ ಹಾಸ್ಯಭರಿತ ನಾಟಕ ಅದು. ಆ ನಾಟಕ ಆಗ ಎಷ್ಟು ಜನಪ್ರಿಯವಾಯಿತು ಎಂದರೆ ಮಂಗಳೂರಿನ ರಾಜಕೀಯ ನಾಯಕ, ಮುಸ್ಲಿಂ ಮುಂದಾಳು ಮುಹಮ್ಮದ್ ಕಮಾಲ್‌ರವರು ವಿಷಯ ತಿಳಿದು ಡಾ. ಟಿ.ಕೆ. ಮನೆಗೆ ಬಂದವರು ಆ ಟೇಪ್‌ರೆಕಾರ್ಡರನ್ನು ಎತ್ತಿಕೊಂಡು ಹೋಗಿ ಆ ನಾಟಕವನ್ನು ಹಲವು ಸಲ ಆಲಿಸಿದರಂತೆ. ತನ್ನ ಮನೆಗೆ ಬಂದವರಿಗೆಲ್ಲ ಕೇಳಿಸಿದರಂತೆ. ಮತ್ತು ತನ್ನ ಗೆಳೆಯರ, ಪರಿಚಯದವರ, ತಾನು ಹೋದ ಕಚೇರಿಗಳಿಗೆಲ್ಲ ಆ ಟೇಪ್‌ರೆಕಾರ್ಡರನ್ನು ಕೊಂಡುಹೋಗಿ ಎಲ್ಲರಿಗೂ ಕೇಳಿಸಿದ ರಂತೆ. ಆ ನಾಟಕ ಅಷ್ಟೊಂದು ಹಾಸ್ಯಭರಿತವಾಗಿತ್ತು. ಕೇಳಿದವರಿಗೆಲ್ಲ ಮನೋರಂಜನೆ ನೀಡಿತ್ತು. ಆ ನಾಟಕದ ಪೂಲ್ ಇತ್ತೀಚಿನವರೆಗೂ ಇತ್ತು. ಆಮೇಲೆ ಎಲ್ಲಿ ಕಳೆದುಹೋಯಿತು ಎಂದು ಗೊತ್ತಾಗುತ್ತಿಲ್ಲ ಎಂದು ಇತ್ತೀಚೆಗೆ ಡಾ. ಟಿ.ಕೆ. ಹೇಳಿದ.

ಆ ಟೇಪ್ ರೆಕಾರ್ಡರ್ ತಂದವರು ಡಾ. ಟಿ.ಕೆ.ಯ ಮಾವ ಬಿ.ಎ. ಮುಹಮ್ಮದ್ ಹಾಜಿ ಅಂತ. ಇವರನ್ನು ಬ್ಯಾಮ್ಸನ್ ಹಾಜಿ ಅಂತ ಗುರುತಿಸುತ್ತಿದ್ದರು. ಇವರಿಗೆ ಮಂಗಳೂರಿನಲ್ಲಿ ಬ್ಯಾಮ್ಸನ್ ಆ್ಯಂಡ್ ಕೋ ಅಂತ ಕಾರು ಬಾಡಿಗೆಗೆ ಕೊಡುವ ಪ್ರಸಿದ್ಧ

ಸಂಸ್ಥೆ ಇತ್ತು. ಪೋರ್ಡ್, ಮರ್ಸಿಡಿಸ್, ಪಿಜೋ ಹೀಗೆ ಪ್ರಸಿದ್ಧ ಕಂಪೆನಿಗಳ ಹಲವಾರು ಕಾರುಗಳು ಇವರಲ್ಲಿತ್ತು. ಪ್ರಭಾವಿ ವ್ಯಕ್ತಿಗಳು, ರಾಜಕಾರಣಿಗಳು, ಮುಖ್ಯಮಂತ್ರಿ, ರಾಷ್ಟ್ರಪತಿ, ರಾಜ್ಯಪಾಲರು ಮಂಗಳೂರಿಗೆ ಬಂದರೆ ಈ ಸಂಸ್ಥೆಯ ಕಾರುಗಳನ್ನೇ ಉಪಯೋಗಿಸುತ್ತಿದ್ದರು. ಇಂದಿರಾ ಗಾಂಧಿ ಬಂದಿದ್ದಾಗಲೂ ಈ ಸಂಸ್ಥೆಯ ಕಾರನ್ನೇ ಬಳಸಿದ್ದರು. ನವಮಂಗಳೂರು ಬಂದರು, ಬೇರೆ ದೊಡ್ಡ ದೊಡ್ಡ ಕಂಪೆನಿ, ಕಚೇರಿಗಳಿಗೆ ರಾಜ್ಯ, ಹೊರರಾಜ್ಯ, ದೇಶ, ವಿದೇಶಗಳಿಂದ ಅಧಿಕಾರಿಗಳು, ಅತಿಥಿಗಳು ಬಂದಾಗಲೂ ಹೆಚ್ಚಿನವರು ಈ ಸಂಸ್ಥೆಯ ಕಾರುಗಳನ್ನು ಕಾಯ್ದಿರಿಸುತ್ತಿದ್ದರು. ಇನ್ನು ಡಾ. ಟಿ.ಕೆ.ಗೆ ಬಳಸಲು ರೆನಾಲ್ಟ್ ಡಾಲ್ಫಿನ್ ಅಂತ ಒಂದು ಕಾರಿತ್ತು. ಅದನ್ನೂ ಅವರ ಮಾವನೇ ತರಿಸಿಕೊಟ್ಟದ್ದು. ಬಹಳ ಸುಂದರವಾದ ಕಾರು. ಆ ಕಾರು ರಸ್ತೆಯಲ್ಲಿ ಹೋಗಬೇಕಾದರೆ, ಎಲ್ಲಿಯಾದರೂ ಪಾರ್ಕ್ ಮಾಡಿದರೆ ಜನ ಗುಂಪುಗೂಡಿ ನೋಡುತ್ತಿದ್ದರು. ಅಂತಹ ಕಾರು ಆ ಕಾಲದಲ್ಲಿ ಯಾರಲ್ಲಿಯೂ ಇರಲಿಲ್ಲ.

ನಾನು ಬೆಂಗಳೂರಿನಲ್ಲಿ ಓದುತ್ತಿದ್ದಾಗ ತಂದೆ ನನಗೆ ತಿಂಗಳಿಗೆ 150 ರೂಪಾಯಿ ಎಂ.ಓ. ಮಾಡುತ್ತಿದ್ದರು.  ಆಗಿನ ಕಾಲದಲ್ಲಿ 150 ರೂಪಾಯಿ ಎಂದರೆ ದೊಡ್ಡ ಮೊತ್ತ. ನಾನು, ಗೆಳೆಯರಾದ ಪಟ್ಟಾಭಿ ರಾಮೇಗೌಡ, ಚಿನ್ನೇಗೌಡ, ಮತ್ತೊಬ್ಬ ರಾಜು ಅಂತ ನಾವು ನಾಲ್ಕು ಜನ 45 ರೂಪಾಯಿ ಬಾಡಿಗೆಗೆ ಮಿನರ್ವ ಸರ್ಕಲ್ ಬಳಿ ಒಂದು ರೂಂ ಮಾಡಿಕೊಂಡಿದ್ದೆವು. ಅಲ್ಲೇ ಪಕ್ಕದಲ್ಲಿ 'ಹೈಕ್ಲಾಸ್ ಬ್ರಾಹ್ಮಿಣ್ ರೆಸ್ಟೋರೆಂಟ್' ಅಂತ ಒಂದು ಹೊಟೇಲ್ ಇತ್ತು. ನಾವೆಲ್ಲ ದುಡ್ಡು ಬಂದ ತಕ್ಷಣ ಆ ಹೊಟೇಲ್‌ನಲ್ಲಿ ತಿಂಗಳ ಕೂಪನ್ ಪಡೆದುಕೊಳ್ಳುತ್ತಿದ್ದೆವು. ಯಾಕೆಂದರೆ ಕೈಯಲ್ಲಿ ದುಡ್ಡು ಇಟ್ಟುಕೊಂಡರೆ ಖರ್ಚಾಗಿ ಮತ್ತೆ ಊಟಕ್ಕೆ ತೊಂದರೆಯಾಗುತ್ತಿತ್ತು. ಅದಕ್ಕಾಗಿ ಊಟದ ಕೂಪನನ್ನು ಮೊದಲೇ ತೆಗೆದಿಡುವುದು.

ಆ ಹೊಟೇಲ್‌ನಲ್ಲಿ ಫುಲ್ ಊಟ. ಬಾಳೆಎಲೆಯಲ್ಲಿ ಬಡಿಸುವುದು. ಅನ್ನ, ಸಾಂಬಾರು, ತಿಳಿಸಾರು, ಪಲ್ಯ, ಮೊಸರು ಇರುತ್ತಿತ್ತು. ತುಂಬಾ ರುಚಿಯಾದ ಒಳ್ಳೆಯ ಊಟ. ನಮ್ಮಂತೆ ಹಲವಾರು ವಿದ್ಯಾರ್ಥಿಗಳು, ಉದ್ಯೋಗಿಗಳು ಅಲ್ಲಿ ತಿಂಗಳ ಕೂಪನ್ ಪಡೆದು ಊಟ ಮಾಡುತ್ತಿದ್ದರು. ಆ ಹೊಟೇಲ್‌ನಲ್ಲಿ ರವಿವಾರದ ಊಟವನ್ನು ನಾವು ಯಾವ ಕಾರಣಕ್ಕೂ ತಪ್ಪಿಸುತ್ತಿರಲಿಲ್ಲ. ಯಾಕೆಂದರೆ ಅಂದು ಏನಾದರೂ ಸ್ಪೆಷಲ್ ಇರುತ್ತಿತ್ತು. ಕೆಲವರು ಹೊಟೇಲ್‌ಗೆ ಊಟಕ್ಕೆ ಬಂದರೆ ಫುಲ್ ಊಟಾಂತ ಯಾವ ಮುಲಾಜು ಇಲ್ಲದೆ ಹೊಟ್ಟೆ ಬಿರಿಯುವಷ್ಟು ತಿನ್ನುತ್ತಿದ್ದರು. ಆಗ ಹೊಟೇಲ್‌ನ ಮಾಲಕ ಹೇಳುತ್ತಿದ್ದ ಮಾತು ನನಗೆ ಈಗಲೂ ನೆನಪಿದೆ. 'ಇಂತಹ ಗಿರಾಕಿಗಳು ಬಂದರೆ ನಾವು ಉದ್ಧಾರ ಆದ ಹಾಗೆಯೇ. ನಿಮ್ಮಂತಹವರು ಇರುವುದರಿಂದ ಈ ಹೊಟೇಲ್ ಇನ್ನೂ ಉಳಿದಿದೆ. ಇಲ್ಲಾಂದ್ರೆ ಯಾವತ್ತೋ ಮುಚ್ಚಬೇಕಾಗಿತ್ತು'. ನಾವು ಲೆಕ್ಕದ್ದೇ ತಿನ್ನುತ್ತಿದ್ದೆವು. ಅದಕ್ಕಾಗಿ ಈ ಮೆಚ್ಚುಗೆಯ ಮಾತು.

ಆಮೇಲೆ ನಾವು ಅಲ್ಲಿಂದ ಸ್ವಲ್ಪ ದೂರ ಒಬ್ಬ ಹಾಲು ಮಾರುವವನ ಮನೆಗೆ

ವಾಸ್ತವ್ಯ ಬದಲಾಯಿಸಿದೆವು. ಅದೂ ಬಾಡಿಗೆ ರೂಂ. ಇದೇ ತಂಡ ಅಲ್ಲಿದ್ದೆವು. ಅಲ್ಲಿ ನಾವು ರಾತ್ರಿ ಹೊತ್ತು, ರಜಾದಿನದಂದು ಇಸ್ಪೀಟ್ ಆಡುತ್ತಿದ್ದೆವು. ಇಸ್ಪೀಟ್ ಎಂದರೆ ಪರೋಲ್ ಆಟ. ಅಲ್ಲಿ ನಮ್ಮ ಜೊತೆ ಆಡಲು ಸಿನೆಮಾ ನಟರಾದ ನರಸಿಂಹರಾಜು, ಬಾಲಕೃಷ್ಣ, ಅದಾನಿ ಲಕ್ಷ್ಮೀದೇವಿ ಬರುತ್ತಿದ್ದರು. ನಾವೆಲ್ಲ ಕೂಡಿ ತಮಾಷೆ, ಹಾಸ್ಯಚಟಾಕಿ ಹಾರಿಸುತ್ತಾ ಆಡುತ್ತಿದ್ದೆವು. ಡಾ. ರಾಜ್‌ಕುಮಾರ್ ಕೂಡ ಆಗಾಗ ನಮ್ಮ ರೂಮಿಗೆ ಬರುತ್ತಿದ್ದರು. ಸುಮ್ಮನೆ ಕುಳಿತು ನಾವು ಆಡುವುದನ್ನು ನೋಡುತ್ತಿದ್ದರು. ಒಂದು ದಿನವೂ ಅವರು ಆಡಿರಲಿಲ್ಲ.

ಈ ಪಟ್ಟಾಭಿ ಇದ್ದಾನಲ್ಲ, ಇವನಿಗೆ ಗೊತ್ತಿಲ್ಲದ ಅಪವಿದ್ಯೆಗಳಿಲ್ಲ. ಇವನು ಬೆಳಿಗ್ಗೆ ತೋಟದಿಂದ ಕೆಲವು ಎಳನೀರು ತಂದು ಅದರ ಕ್ಯಾಪ್ ತೆಗೆದು ಅದಕ್ಕೆ ಎರಡೆರಡು ಆಸ್ಪಿರಿನ್ ಮಾತ್ರೆ ಹಾಕಿ ಮುಚ್ಚಿ ಸಂಜೆಯವರೆಗೆ ಬಿಸಿಲಿನಲ್ಲಿಡುತ್ತಿದ್ದ. ಈ ರೀತಿ ಮಾಡಿದರೆ ಒಳ್ಳೆ ಕಿಕ್ ಕೊಡುತ್ತದೆ ಎಂದು ಹೇಳುತ್ತಿದ್ದ. ಇದನ್ನು ಬೇರೆ ಗೆಳೆಯರಿಗೂ ಕುಡಿಸುತ್ತಿದ್ದ.

ನಾನು ಮಂತ್ರಿಯಾಗಿರುವಾಗ ಒಮ್ಮೆ ಈ ಪಟ್ಟಾಭಿ ಬೆಂಗಳೂರಿಗೆ ನನ್ನ ಮನೆಗೆ ಬಂದಿದ್ದ. ನಾನು ಕರೆದದ್ದಕ್ಕೆ ಆತ ಬಂದದ್ದು. ಸುಮ್ಮನೆ ಹಾಗೆಲ್ಲ ಕರೆಯದೆ ಬರುವ ಅಸಾಮಿಯಲ್ಲ. ಬಹಳ ಸ್ವಾಭಿಮಾನಿ ಆತ. ಬಂದಾಗ ಆತ ಮೊದಲಿಗೆ ಹೇಳಿದ ಮಾತು 'ನಾನು ಮಂತ್ರಿ ಸಾಹೇಬರನ್ನು ನೋಡಲು ಬಂದಿದ್ದಲ್ಲ. ನನಗೆ ಮಂತ್ರಿಯಿಂದ ಏನೂ ಆಗಲಿಕ್ಕಿಲ್ಲ. ನಾನು ನನ್ನ ಗೆಳೆಯ ಹಳೆಯ ಮ್ಯೊದಿನ್‌ನನ್ನು ನೋಡಲು ಬಂದಿದ್ದು' ಎಂದು. ಊಟ, ತಿಂಡಿ ಎಲ್ಲ ಆಗಿ ಅದೂ ಇದೂ ಮಾತನಾಡುತ್ತಾ ಕುಳಿತಿದ್ದೆವು. ನನ್ನ ಮನೆ ಪಕ್ಕದಲ್ಲೇ ಇನ್ನೊಬ್ಬ ಸಚಿವರ ಮನೆಯಿತ್ತು. ಇದ್ದಕ್ಕಿದ್ದಂತೆ ಪಟ್ಟಾಭಿ ಕೇಳಿದ – ಅಲ್ಲಾ ಮಾರಾಯ, ನಾನು ಇಲ್ಲಿಗೆ ಬಂದು 2–3 ಗಂಟೆಯಾಯಿತು. ನೀನೊಬ್ಬ ಮಂತ್ರಿ. ನಿನ್ನ ಬಳಿ ಒಬ್ಬನೇ ಒಬ್ಬ ಬರಲಿಲ್ಲ. ಓ ಅಲ್ಲಿ ನೋಡು, ಆ ಸಚಿವರ ಮನೆ ಮುಂದೆ ಜನ ಕ್ಯೂ ನಿಂತಿದ್ದಾರೆ. ಇದೇನು ಮಾರಾಯ ನೀನು ಹೀಗೆ? – ಎಂದ.

ಅವನ ಮಾತು ನಿಜವಾಗಿತ್ತು. ನಾನು ಹೇಳಿದೆ 'ನೋಡು ಮಾರಾಯ, ಅಲ್ಲಿ ದುಡ್ಡಿದೆ. ವ್ಯವಹಾರ ನಡೆಯುತ್ತಿದೆ. ಲೇವಾದೇವಿ ಇದೆ. ಇಲ್ಲಿ ಏನಿದೆಯೋ? ಏನೂ ಇಲ್ವಲ್ಲೋ? ದುಡ್ಡಿದ್ದರೆ, ವ್ಯವಹಾರ, ಲೇವಾದೇವಿ ಇದ್ದರೆ ತಾನೇ ಜನ ಮುತ್ತಿಗೆ ಬೀಳುವುದು, ಕ್ಯೂ ನಿಲ್ಲುವುದು, ನನ್ನಲ್ಲಿ ಇದಾವುದೂ ಇಲ್ವಲ್ಲೋ. ಮತ್ಯಾಕೆ ಬರ್ತಾರೆ ಜನ ಇಲ್ಲಿಗೆ ಹೇಳು' ಎಂದೆ. ಆತ ಸುಮ್ಮನಾದ.

ಇದೇ ಪಟ್ಟಾಭಿ, ನೂರುಲ್ಲಾಖಾನ್ ಮತ್ತು ಕೆಲವು ಕಾಲೇಜು ಗೆಳೆಯರು ಚಿಕ್ಕಮಗಳೂರಿನಿಂದ ಬಜಪೆಗೆ ನನ್ನ ಮದುವೆಗೆ ಬಂದಿದ್ದರು. ನಾನು ಇಲ್ಲೇ ಒಂದು ಬಂಗಲೆಯಲ್ಲಿ ಅವರಿಗೆ ವಾಸ್ತವ್ಯದ ವ್ಯವಸ್ಥೆ ಮಾಡಿದ್ದೆ. ಅಂದು ರಾತ್ರಿ ಆ ಬಂಗಲೆಯ ಎದುರಿನ ಮೈದಾನದಲ್ಲಿ 'ಭಸ್ಮಾಸುರ ಮೋಹಿನಿ' ಎಂಬ ಯಕ್ಷಗಾನ ನಡೆಯುತ್ತಿತ್ತು. ಅದನ್ನು ನೋಡಲು ಇವರೆಲ್ಲ ಹೋಗಿದ್ದರಂತೆ. ಆ ಯಕ್ಷಗಾನದಲ್ಲಿ ಸ್ತ್ರೀಪಾತ್ರಧಾರಿಯನ್ನು

ಕಂಡ ನೂರುಲ್ಲಾಖಾನ್ ಆ ಪಾತ್ರ ನಿಜವಾಗಿಯೂ ಹೆಣ್ಣೇ ಎಂದು ಭಾವಿಸಿ ಅವಳ ರೂಪ, ಮಾತು, ಕುಣಿತಕ್ಕೆ ಮರುಳಾಗಿಬಿಟ್ಟಿದ್ದನಂತೆ. ಮತ್ತೆ ಆ ಪಾತ್ರ ತೆರೆಯ ಮರೆಗೆ ಸರಿದಾಗ ಈತ ಅವಳನ್ನು ನೋಡಲು ಹಿಂಬದಿಯಿಂದ ಹೋಗಿ ಡೇರೆಯೊಳಗೆ ಇಣುಕಿ ನೋಡಿದನಂತೆ. ಆಗ ಆ ಸ್ತ್ರೀ ವೇಷಧಾರಿ ಬೆಂಚಿನ ಮೇಲೆ ಕುಳಿತು ಬೀಡಿ ಸೇದುತ್ತಿದ್ದುದನ್ನು ಕಂಡು ಆಶ್ಚರ್ಯ ವ್ಯಕ್ತಪಡಿಸಿದನಂತೆ. ಬಳಿಕ ಎಲ್ಲರೂ ಆ ಘಟನೆಯನ್ನು ಹೇಳಿ ಆತನನ್ನು ಗೇಲಿ ಮಾಡಿ ನಗುತ್ತಿದ್ದರು.

ನಾವು ಚಿಕ್ಕಮಗಳೂರಿನಲ್ಲಿ ಓದುತ್ತಿದ್ದಾಗ 7–8 ಜನ ಗೆಳೆಯರೆಲ್ಲ ಸೇರಿ ಹಳೆಬೀಡಿಗೆ ಸೈಕಲ್‌ನಲ್ಲಿ ಒಮ್ಮೆ ಪ್ರವಾಸ ಹೋಗಿದ್ದೆವು. ಆ ತಂಡದಲ್ಲಿ ಈ ನೂರುಲ್ಲಾಖಾನ್ ಕೂಡ ಇದ್ದ. ನಾವು ಹಿಂದಿರುಗುವಾಗ ಒಂದು ಕಡೆ ನಿಂತು ನೋಡಿದರೆ ಈ ನೂರುಲ್ಲಾಖಾನ್ ಕಾಣೆಯಾಗಿದ್ದ. ಸ್ವಲ್ಪ ಹೊತ್ತು ಆತನಿಗಾಗಿ ರಸ್ತೆಯಲ್ಲಿ ಕಾದು ನಿಂತೆವು. ಆಗ ಆತ ದೂರದಲ್ಲಿ ಏದುಸಿರು ಬಿಡುತ್ತಾ ಓಡಿಬರುತ್ತಿರುವುದು ಕಾಣಿಸಿತು. ನಾವು ಒಂದು ಕ್ಷಣ ಗಾಬರಿಯಾದೆವು. ಅವನು ನಮಗಿಂತ ಹಿಂದೆ ಬಿದ್ದದ್ದು ನಾವು ಗಮನಿಸಲೇ ಇಲ್ಲ. ಒಂದು ಕರಡಿ ಆತನನ್ನು ಅಡ್ಡಗಟ್ಟಿ ತುಂಬಾ ತೊಂದರೆ ಕೊಟ್ಟಿತ್ತಂತೆ. ಅದರಿಂದ ತಪ್ಪಿಸಿಕೊಂಡು ಬರಲು ಅವನಿಗೆ ಸಾಕು ಸಾಕಾಯಿತಂತೆ. ಆತ ನಮ್ಮ ಬಳಿ ಬಂದವನೇ ಜಗಳಕ್ಕೆ ನಿಂತುಬಿಟ್ಟ. ‘ನನ್ನನ್ನು ಕರಡಿ ಕೊಂದಿದ್ದರೆ ನೀವೆಲ್ಲ ಏನು ಮಾಡುತ್ತಿದ್ದಿರಿ?’ ಎಂದು ಕೋಪಿಸಿಕೊಂಡ. ಮತ್ತೆ ಅವನನ್ನು ಸಮಾಧಾನಪಡಿಸಿ ಕರೆತರಬೇಕಾದರೆ ನಮಗೆ ಸುಸ್ತಾಗಿತ್ತು.

ಒಮ್ಮೆ ನಾನು ರಜೆಯಲ್ಲಿ ಊರಿಗೆ ಬಂದಿದ್ದಾಗ ನಾವು ಗೆಳೆಯರೆಲ್ಲ ಬಜಪೆಯಿಂದ ಉಜಿರೆಗೆ ಯಕ್ಷಗಾನ ನೋಡಲು ಕಾರಿನಲ್ಲಿ ಹೋಗಿದ್ದೆವು. ಅದರ ವ್ಯವಸ್ಥೆ ಎಲ್ಲ ಮಾಡಿದ್ದು ಗೆಳೆಯ ಝಕರಿಯಾ. ಹೋಗುವಾಗ ರಾತ್ರಿ ತುಂಬಾ ತಡವಾಗಿತ್ತು. ನಾವು ಏನನ್ನೂ ತಿಂದಿರಲಿಲ್ಲ. ಎಲ್ಲರಿಗೂ ಹಸಿವಾಗುತ್ತಿತ್ತು. ಹೋಗುವ ದಾರಿಯಲ್ಲಿ ಈ ಝಕರಿಯಾನ ಅತ್ತಿಗೆಯ ತವರುಮನೆಯಿತ್ತು. ಅಲ್ಲಿಗೆ ಹೋಗುವುದೆಂದು ತೀರ್ಮಾನಿಸಿ ಎಲ್ಲರೂ ಒಟ್ಟಿಗೆ ನುಗ್ಗಿದೆವು. ಅರ್ಧ ರಾತ್ರಿಯಲ್ಲಿ ನಮ್ಮನ್ನೆಲ್ಲ ನೋಡಿ ಆ ಮನೆಯವರಿಗೆಲ್ಲ ಗಾಬರಿ. ಝಕರಿಯಾನ ಅತ್ತಿಗೆಯ ತಂದೆ "ಎಲ್ಲಿಗೆ ಹೊರಟಿದ್ದೀರಿ ಈ ಅರ್ಧರಾತ್ರಿಯಲ್ಲಿ?" ಎಂದು ಕೇಳಿದರು. ಆಗ ಝಕರಿಯಾ, "ಒಂದು ವ್ಯಾಪಾರದ ವಿಷಯವಾಗಿ ಮಾತನಾಡಲು ಪುತ್ತೂರುವರೆಗೆ ಹೋಗಬೇಕಾಗಿತ್ತು. ಹಾಗೆ ದಾರಿಯಲ್ಲಿ ನಿಮ್ಮ ಮನೆಯಿದೆಯಲ್ಲ, ನಿಮ್ಮನ್ನೆಲ್ಲ ಒಮ್ಮೆ ನೋಡಿ ಹೋಗೋಣ ಎಂದು ಬಂದೆವು" ಎಂದು ಹೇಳಿದ. ಆ ರಾತ್ರಿ ಅಷ್ಟು ದೂರ ಯಕ್ಷಗಾನ ನೋಡಲು ಹೋಗುವುದು ಎಂದು ಹೇಳಿದರೆ ಅವರು ನಮ್ಮನ್ನು ಕೀಳಾಗಿ ಕಾಣಬಹುದು ಎಂದು ಸುಳ್ಳು ಹೇಳಿದ್ದ. ಆ ಅರ್ಧರಾತ್ರಿಯಲ್ಲಿ ಅವರು ಗಡಿಬಿಡಿಯಲ್ಲಿ ನೈಚೋರು, ನಾಟಿಕೋಳಿ ಕರಿ ಎಲ್ಲ ಮಾಡಿ ಒಳ್ಳೆಯ ಊಟ ಕೊಟ್ಟರು. ಯಕ್ಷಗಾನ ನೋಡಿ ಬಂದವರು ಮರುದಿನ ಎಲ್ಲರಲ್ಲೂ ಈ ವಿಷಯ ಹೇಳಿ ನಕ್ಕಿದ್ದೆವು. ಅಂದಿನ ಕಾಲದಲ್ಲಿ ನಾವೆಲ್ಲ ಆಟಕ್ಕೆ ಹೋದರೆ ನಮ್ಮನ್ನು ಮುಂದಿನ

ಸಾಲಿನಲ್ಲಿ ಆರಾಮಕುರ್ಚಿ ನೀಡಿ ಕುಳಿತುಕೊಳ್ಳಿಸುತ್ತಿದ್ದರು. ಬಹಳ ಗೌರವದಿಂದ ಕಾಣುತ್ತಿದ್ದರು. ಅಂದು ಯಕ್ಷಗಾನಕ್ಕೆ ಇಂದಿನಂತೆ ಧಾರ್ಮಿಕ ಭಾವನೆ ಇರಲಿಲ್ಲ. ಅದು ಈ ಮಣ್ಣಿನ ಒಂದು ಕಲೆ, ಸಂಸ್ಕೃತಿಯಾಗಿತ್ತು. ಜಾತ್ರೆ ಕೂಡ ಹಾಗೆಯೇ. ಅದು ಹಿಂದೂಗಳದ್ದು ಮಾತ್ರವಲ್ಲ ಇಡೀ ಊರಿನ ಉತ್ಸವವಾಗಿತ್ತು. ಎಲ್ಲ ಧರ್ಮಗಳವರೂ ಅದರಲ್ಲಿ ಭಾಗವಹಿಸುತ್ತಿದ್ದರು.

ಈ ಝುಕರಿಯಾ ಈಗ ಕೊಡ್ಲಿಪೇಟೆಯಲ್ಲಿದ್ದಾನೆ. ಅಲ್ಲಿ ಅವನಿಗೆ ಕಾಫಿತೋಟ ಎಲ್ಲ ಇದೆ. ಇವನು ಒಮ್ಮೆ ಹಳೆಯಂಗಡಿಯ ಕದಿಕೆಯಲ್ಲಿ ಒಂದು ಭೂಮಿ ಖರೀದಿಸಿದ. ಅದೊಂದು ಕೃಷಿಭೂಮಿ. ಮೊದಲು ಅದರಲ್ಲಿ ಭತ್ತ ಬೆಳೆಯುತ್ತಿದ್ದರು. 'ಅಲ್ಲಿಯೇ ಹತ್ತಿರದಲ್ಲಿ ಸದ್ಯದಲ್ಲಿಯೇ ಸಕ್ಕರೆ ಕಾರ್ಖಾನೆಯೊಂದು ತೆರೆಯುತ್ತದೆ, ಕಾರ್ಖಾನೆಯವರಿಗೆ ತುಂಬಾ ಕಬ್ಬು ಬೇಕಾಗುತ್ತದೆ. ನೀನು ಕಬ್ಬು ಬೆಳೆದರೆ ತುಂಬಾ ಲಾಭವಾಗುತ್ತದೆ' ಎಂದು ಆತನಿಗೆ ಯಾರೋ ಹೇಳಿದರಂತೆ. ಆಗ ಅವನು ಏನು ಮಾಡಿದ ಎಂದರೆ, ಅದೆಲ್ಲಿಂದಲೋ ಕಬ್ಬಿನ ಒಳ್ಳೆಯ ಹೊಸ ತಳಿ ತಂದು ಕೃಷಿ ಮಾಡಿದ. ಅದು ಒಳ್ಳೆಯ ಇಳುವರಿ ಕೊಟ್ಟಿತು. ಇಡೀ ಗದ್ದೆ ತುಂಬಾ ಬೆಳೆದುನಿಂತ ಉದ್ದ–ದಪ್ಪದ ರಾಶಿ ರಾಶಿ ಕಬ್ಬುಗಳು ನೋಡಲು ಬಹಳ ಖುಷಿ ಕೊಡುತ್ತಿದ್ದವು. ದುರದೃಷ್ಟವಶಾತ್ ಸಕ್ಕರೆ ಕಾರ್ಖಾನೆ ಅದ್ಯಾವುದೋ ಕಾರಣದಿಂದ ತೆರೆಯಲೇ ಇಲ್ಲ. ಈ ಕಬ್ಬನ್ನು ಏನು ಮಾಡುವುದು, ಯಾರಿಗೆ ಕೊಡುವುದು ಎಂದು ಈ ಝುಕರಿಯಾನಿಗೆ ಚಿಂತೆ ಹತ್ತಿತು. ಆಗ ಸಲಹೆ ಕೇಳಲು ನನ್ನ ಬಳಿ ಬಂದ. ನಾನು ಬೆಲ್ಲ ಮಾಡಿದರೆ ಒಳ್ಳೆಯ ಲಾಭ ಬರಬಹುದು ಎಂದು ಸಲಹೆ ಕೊಟ್ಟೆ. ಬೆಲ್ಲ ಮಾಡಲು ಯಂತ್ರ ಬೇಕಲ್ಲ ಎಂದ. ಆಗ ಚಿಕ್ಕಮಗಳೂರಿನ ನಮ್ಮ ಗೆಳೆಯ ಗೌಡ ಒಬ್ಬ ಬೆಲ್ಲ ಮಾಡುತ್ತಿದ್ದಾನೆ ಎಂಬ ಸುದ್ದಿ ಸಿಕ್ಕಿತು. ಹಾಗೆ ಝುಕರಿಯಾ ಅಲ್ಲಿಗೆ ಹೋದ. ಅಲ್ಲಿ ಯಂತ್ರವೇನೋ ಇತ್ತು. ಆದರೆ ಆತ ಕೊಡಲಿಲ್ಲ. ಅಲ್ಲಿ ಒಂದು ಸ್ವಾರಸ್ಯಕರ ಘಟನೆ ನಡೆಯಿತಂತೆ. ಈ ಝುಕರಿಯಾ ಅಲ್ಲಿಗೆ ಹೋದಾಗ ಗೌಡ ಮನೆಯಲ್ಲಿರಲಿಲ್ಲವಂತೆ. ಹಾಗೇ ಹೊರಗೆ ಕಾಯುತ್ತಿರುವಾಗ ಆ ಮನೆಯ ಹತ್ತಿರದ ಒಂದು ಕೋಣೆಯ ಹೊರಗೆ ಗೋಡೆ ಬದಿಯಲ್ಲಿ ನಾಯಿಗಳ ಒಂದು ದೊಡ್ಡ ಹಿಂಡು ಬಹಳ ಹೊತ್ತಿನಿಂದ ಕಚ್ಚಾಡುತ್ತಿತ್ತಂತೆ. ಗೌಡ ಬಂದ ಮೇಲೆ "ಇಷ್ಟೊಂದು ನಾಯಿಗಳು ಆಗದಿಂದ ಇಲ್ಲಿ ಕಚ್ಚಾಡುತ್ತಿವೆಯಲ್ಲ ಯಾಕೆ?" ಎಂದು ಝುಕರಿಯಾ ಕೇಳಿದನಂತೆ. ಆಗ ಗೌಡ ಅವನನ್ನು ಬೆಲ್ಲ ದಾಸ್ತಾನು ಇರಿಸಿದ್ದ ಕೊಟ್ಟಿಗೆಗೆ ಕರೆದುಕೊಂಡು ಹೋಗಿ ತೋರಿಸಿದನಂತೆ. ಅಲ್ಲಿ ಬೆಲ್ಲ ಎಲ್ಲ ನೀರಾಗಿ ಅದು ಗೋಡೆಯ ಸಂದಿಯಿಂದ ಹೊರಗೆ ಹರಿಯುತ್ತಿತ್ತಂತೆ. ಈ ಬೆಲ್ಲದ ನೀರಿಗಾಗಿ ನಾಯಿಗಳು ಕಚ್ಚಾಡುತ್ತಿದ್ದುವಂತೆ. ಆಮೇಲೆ ಆ ನೀರುಬೆಲ್ಲಕ್ಕೆ ಗಿರಾಕಿಗಳಿಲ್ಲದೆ ಗೌಡ ಸಾರಾಯಿ ಮಾಡುವವರಿಗೆ ಸಿಕ್ಕಿದ ಬೆಲೆಗೆ ಮಾರಿದನಂತೆ. ಇದನ್ನು ಕೇಳಿ ಝುಕರಿಯಾ ನಿರಾಶೆಯಿಂದ ಹಿಂದಿರುಗಿದ. ಬಳಿಕ ಈ ಕಬ್ಬನ್ನೆಲ್ಲ ಏನು ಮಾಡುವುದು ಎಂದು ತೋಚದೆ ಆದದ್ದಾಗಲಿ ಹಾಕಿದ ದುಡ್ಡಾದರೂ ಬರಲಿ ಎಂದು ಅದೆಲ್ಲಿಂದಲೂ ಕಬ್ಬು ಅರೆಯುವ ಯಂತ್ರ

ತಂದು ಬೆಲ್ಲ ಮಾಡಿಸಿದನಂತೆ. ಅದನ್ನು ಗೋದಾಮಿನಲ್ಲಿಟ್ಟು ನೀರಾಗದಂತೆ ವಿದ್ಯುತ್ ಶಾಖ ಕೊಟ್ಟು, ಬಹಳ ಕಷ್ಟದಲ್ಲಿ ಆ ಬೆಲ್ಲವನ್ನು ಮಾರಿ ಹಾಕಿದ ದುಡ್ಡು ಮಾಡಿದನಂತೆ. ಈ ಕಥೆಯನ್ನೆಲ್ಲ ಅವನ ಬಾಯಿಯಿಂದ ಕೇಳಬೇಕು. ಬಹಳ ರಸವತ್ತಾಗಿ, ಹಾಸ್ಯಮಯ ವಾಗಿ ನಗುನಗುತ್ತಾ ಆತ ಹೇಳುವಾಗ ಎಂಥವರಿಗೂ ನಗು ಉಕ್ಕಿ ಬರುತ್ತದೆ.

1961ರಲ್ಲಿ ನನ್ನ ಬಿ.ಎಸ್ಸಿ. ಮುಗಿಯಿತು. ಅನಂತರ ನಾನು ಲಾ ಕಾಲೇಜು ಸೇರಿದೆ. ಆಗಲೇ ನನಗೆ ಗೊತ್ತಿಲ್ಲದೆಯೇ ಮನೆಯಲ್ಲಿ ನನ್ನ ಮದುವೆಯ ಮಾತುಕತೆಗಳು ನಡೆಯತೊಡಗಿದ್ದವು. ಹೆಣ್ಣಿನ ತಂದೆ ಜೋಕಟ್ಟೆಯ ದೊಡ್ಡ ವ್ಯಾಪಾರಿ. ಅವರಿಗೆ ಜೋಕಟ್ಟೆಯ ಕಂಬತ್ತಿ ಬಂಡಸಾಲೆ ಎಂಬಲ್ಲಿ ಬಂಡಸಾಲೆ ಇತ್ತು. ದೊಡ್ಡ ಮನೆತನ, ಸಮಾಜಸೇವಕ, ಹಲವು ವರ್ಷಗಳಿಂದ ಜೋಕಟ್ಟೆ ಹೊಸ ಮಸೀದಿಯ ಅಧ್ಯಕ್ಷರಾಗಿದ್ದವರು, ಗೌರವಾನ್ವಿತ ವ್ಯಕ್ತಿ, ನಮ್ಮ ದೂರದ ಸಂಬಂಧಿಯೂ ಹೌದು. ಫಕೀರಬ್ಯಾರಿ ಅಂತ ಹೆಸರು. ಇವರ ಮಗಳು ಖತೀಜಾಳನ್ನು ನನಗೆ ಮಾತನಾಡುತ್ತಿದ್ದರು.

# ಹಿಂದಿನ ಕಾಲದ ಮದುವೆ

ಆ ಕಾಲದಲ್ಲಿ ಮದುವೆ ಎಂದರೆ ಇಂದಿನಂತೆ ಹಾಲ್‌ನಲ್ಲಿ ನಡೆಯುವ ಎರಡು – ಮೂರು ಗಂಟೆಗಳ ಮದುವೆಯಲ್ಲ. ಮನೆಯಲ್ಲಿಯೇ ಮದುವೆ. ಹಗಲು ಹೊತ್ತಲ್ಲಿ ಮದುವೆ ನಡೆಯುತ್ತಿರಲಿಲ್ಲ. ಏನಿದ್ದರೂ ರಾತ್ರಿಯಲ್ಲಿಯೇ ಮದುವೆ. ಕಡಿಮೆ ಯೆಂದರೆ ಹದಿನೈದು ದಿನಗಳು ಮದುವೆಯ ಕಾರ್ಯಕ್ರಮಗಳು, ಸಂಭ್ರಮಗಳಿರುತ್ತಿತ್ತು. ಈ ಹದಿನೈದು ದಿನಗಳೂ ಮನೆ ತುಂಬಾ ನೆಂಟರಿರುತ್ತಿದ್ದರು. ಬ್ಯಾಂಡು, ಚೀನಕೋಲು, ತಾಲೀಮು, ಹಾಡು, ದಪ್ಪು, ಸಲಾತ್, ಮೆರವಣಿಗೆ, ಮೌಲೂದು, ಔತಣಕೂಟ... ಹೀಗೆ ಪ್ರತಿದಿನವೂ ಮದುವೆ, ಪ್ರತಿದಿನವೂ ಸಂಭ್ರಮ. ಅಂದಿನ ಬ್ಯಾರಿಗಳ ಮದುವೆ ಹೇಗೆ ನಡೆಯುತ್ತಿತ್ತು, ಅಂದಿನ ನಮ್ಮ ಸಂಸ್ಕೃತಿ ಹೇಗಿತ್ತು ಎಂಬುದನ್ನು ನಮ್ಮ ಯುವಪೀಳಿಗೆ ತಿಳಿದುಕೊಳ್ಳಬೇಕು. ಈ ಸಂಸ್ಕೃತಿ ಯನ್ನು ಮುಂದಿನ ಪೀಳಿಗೆಗೆ ತಿಳಿಸುವ ಜವಾಬ್ದಾರಿ ಲೇಖಕರದ್ದು. ನನ್ನ ಅಮ್ಮ ಅವರ ಬಾಲ್ಯಕಾಲದಲ್ಲಿ ಬ್ಯಾರಿಗಳ ಮದುವೆ ಹೇಗೆ ನಡೆಯುತ್ತಾ ಇತ್ತು ಎಂಬುದನ್ನು ಸಂದರ್ಭ ಸಿಕ್ಕಿದಾಗಲೆಲ್ಲಾ ನನಗೆ ವಿವರಿಸುತ್ತಿದ್ದರು. ಅದನ್ನು ಇಲ್ಲಿ ನಾನು ಹೇಳುತ್ತೇನೆ.

ಒಂದು ಮನೆಯಲ್ಲಿ ಒಬ್ಬ ಹೆಣ್ಣುಮಗಳು ಪ್ರಾಯಕ್ಕೆ ಬಂದಳು ಎಂದರೆ ಮರುದಿನವೇ ಅವಳ ತಂದೆ, ಅಜ್ಜಂದಿರು, ಮಾವಂದಿರು ವರಾನ್ವೇಷಣೆಗೆ ತೊಡಗುತ್ತಿದ್ದರು. ಆಗ 12–15 ವರ್ಷದೊಳಗೆ ಹೆಣ್ಣುಮಕ್ಕಳಿಗೆ ಮದುವೆ ಮಾಡುತ್ತಿದ್ದರು. ಎಲ್ಲಿಯಾದರೂ ಒಂದು ಒಳ್ಳೆಯ ವರ ಇದೆ ಎಂದು ಗೊತ್ತಾದರೆ ಅವನಿಗೆ ತಿಳಿಯದೆ ಹೋಗಿ ಅವನನ್ನು ನೋಡಿ ಬರುತ್ತಿದ್ದರು. ಅನಂತರ ಅವನ ಬುದ್ಧಿ, ನಡತೆ ಬಗ್ಗೆ ಅವನಿಗೆ ಗೊತ್ತಿಲ್ಲದಂತೆ ಸಂಬಂಧಪಟ್ಟವರಲ್ಲೆಲ್ಲ ವಿಚಾರಿಸುತ್ತಿದ್ದರು. ವರ ಇಷ್ಟವಾದರೆ, ಅವನ ಮನೆತನ–ಸಂಬಂಧ ಇಷ್ಟವಾದರೆ, ಕೆಲವು ಹಿರಿಯರು ಮಾವಂದಿರು ಸಂಬಂಧ

ಮಾತನಾಡಲು ವರನ ಮನೆಗೆ ಹೋಗುತ್ತಿದ್ದರು. ಹೊರಡುವ ಮೊದಲು ಮಸೀದಿಯ ಧರ್ಮಗುರುಗಳನ್ನು ಮನೆಗೆ ಕರೆಸಿ ದುಆ ಮಾಡಿಸುತ್ತಿದ್ದರು.

ಹಾಗೆ ಹೋದಾಗ ಮೊದಲು ಏನಾದರೂ ಕುಡಿಯಲು ಕೊಡುವರು. ನಂತರ ಚಾವಡಿಯಲ್ಲಿ ಎರಡು ಕಡೆಯವರೂ ಚಾಪೆ ಹಾಸಿ ಕುಳಿತುಕೊಳ್ಳುವರು. ಮೊದಲ ಸಾಲಿನಲ್ಲಿ ಮನೆಯ ಯಜಮಾನ, ಮಾವ, ಅಳಿಯಂದಿರು ಇರುತ್ತಿದ್ದರು. ಬಳಿಕ ಎರಡು ಕಡೆಯವರೂ ಸೇರಿ ಗುರುತು, ಪರಿಚಯ ಹೇಳಿ ಸಂಬಂಧ ಆಗಬಹುದೇ ಎಂದು ಚರ್ಚಿಸುವರು. ಆಗಬಹುದು ಎಂದು ತೀರ್ಮಾನವಾದ ಮೇಲೆ ವರದಕ್ಷಿಣೆ, ಬೆಳ್ಳಿ–ಬಂಗಾರದ ಆಭರಣಗಳ ವಿಷಯ ಬರುತ್ತಿತ್ತು. ಇದರ ಬಗ್ಗೆಯೇ ಬಹಳ ಹೊತ್ತು ಚರ್ಚೆಯಾಗುತ್ತಿತ್ತು. ಈ ಚರ್ಚೆಗೆ ಕುಳಿತಿರುವಾಗ ಎಲೆ–ಅಡಿಕೆ ಹರಿವಾಣ, ಪೀಕದಾನಿ ಹತ್ತಿರ ಇರಲೇಬೇಕು. ತುಂಬಾ ಹೊತ್ತು ಚರ್ಚೆ ನಡೆದರೆ ಎಲೆ–ಅಡಿಕೆ ಜಗಿದು ಜಗಿದು ಉಗುಳಿ ಪೀಕದಾನಿ ತುಂಬಿದ್ದೂ ಉಂಟು. ವರದಕ್ಷಿಣೆ, ಚಿನ್ನ–ಬೆಳ್ಳಿ ಆಭರಣಗಳು ಎಷ್ಟು ಎಂದು ಇಡೀ ದಿನ ಚರ್ಚೆಯಾಗಿ ತೀರ್ಮಾನಕ್ಕೆ ಬರಲು ಸಾಧ್ಯವಾಗದೆ ವಧುವಿನ ಕಡೆಯವರು ಹಿಂದಿರುಗಿದ್ದೂ ಉಂಟು. ಆಗಿನ ಕಾಲದಲ್ಲಿ ಹೆಚ್ಚು ವರದಕ್ಷಿಣೆ ಪಡೆಯುವವನಿಗೆ ಹೆಚ್ಚು ಗೌರವ. ವರದಕ್ಷಿಣೆ ನೀಡುವವರಿಗೂ ಈ ಗೌರವವಿತ್ತು.

ಇಂದು ನಮ್ಮ ಮುಸ್ಲಿಮ್ ಯುವಕರು ಇಸ್ಲಾಮನ್ನು ಸ್ವಲ್ಪ ಮಟ್ಟಿಗೆ ಅಧ್ಯಯನ ಮಾಡುತ್ತಿದ್ದಾರೆ. ಅದರ ತತ್ವ ಸಿದ್ಧಾಂತಗಳತ್ತ ಮುಖ ಮಾಡುತ್ತಿದ್ದಾರೆ. ಇಸ್ಲಾಮಿನ ಸಿದ್ಧಾಂತದಂತೆ ಇಂದು ನಮ್ಮಲ್ಲಿ ವರದಕ್ಷಿಣೆ ಇಲ್ಲವೇ ಇಲ್ಲ ಎಂಬಷ್ಟು ಕಡಿಮೆಯಾಗಿದೆ. ವಧುದಕ್ಷಿಣೆ ಜಾಸ್ತಿಯಾಗಿದೆ. ಹಿಂದೆ ಹೆಚ್ಚು ವರದಕ್ಷಿಣೆ ಪಡೆದವರಿಗೆ ಗೌರವ ಇತ್ತು. ಇಂದು ವರದಕ್ಷಿಣೆ ಪಡೆದರೆ ಅವನನ್ನು ತುಂಬಾ ಕೀಳಾಗಿ ಕಾಣಲಾಗುತ್ತದೆ. ವಧುದಕ್ಷಿಣೆ ಎಷ್ಟು ಜಾಸ್ತಿ ಕೊಟ್ಟನೋ ಅವನಿಗೆ ಹೆಚ್ಚು ಗೌರವ ನೀಡಲಾಗುತ್ತದೆ. ಇದು ಬಹಳ ಒಳ್ಳೆಯ ಬೆಳವಣಿಗೆ. ಇಸ್ಲಾಮಿನ ಇಂತಹ ಉತ್ತಮ ತತ್ವ ಸಿದ್ಧಾಂತಗಳು ದುರುಪಯೋಗ ವಾಗದಂತೆ ನಾವು ನೋಡಿಕೊಳ್ಳಬೇಕಾಗಿದೆ. ಅರಬ್ ದೇಶಗಳಲ್ಲಿ ಇಂದು ವಧುದಕ್ಷಿಣೆ ಕೊಡಲು ಸಾಧ್ಯವಾಗದೆ ಅದೆಷ್ಟೋ ಬಡ ಯುವಕರ ಮದುವೆಗೆ ಕುತ್ತು ಬಂದಿದೆ. ವಧುದಕ್ಷಿಣೆ ಕಡಿಮೆ ನೀಡುವ ಯುವಕರನ್ನು ಅಲ್ಲಿಯ ಯುವತಿಯರು ಮದುವೆಯಾಗಲು ಒಪ್ಪುತ್ತಿಲ್ಲ. ಅದಕ್ಕಾಗಿ ಅಲ್ಲಿನ ಸರಕಾರ ವಧುದಕ್ಷಿಣೆ ಕೊಡಲು ಬಡ್ಡಿರಹಿತ ಸಾಲದಂತಹ ಯೋಜನೆಯನ್ನು ಹಾಕಿಕೊಂಡಿದೆ.

ಅರಬ್ ದೇಶಗಳಲ್ಲಿ ಈಗ ನಡೆಯುತ್ತಿರುವುದನ್ನು ನೀವು ಕೇಳಿರಬಹುದು. ಅಲ್ಲಿ ದುಡ್ಡಿದ್ದರೆ, ಹೆಚ್ಚು ವಧುದಕ್ಷಿಣೆ ಕೊಡಲು ತಯಾರಿದ್ದಾನೆಂದರೆ ಆತ 70 ವರ್ಷದ ವೃದ್ಧನಾದರೂ, ಆತನಿಗೆ ಈಗಾಗಲೇ ಒಂದೆರಡು ಪತ್ನಿಯರಿದ್ದರೂ ಸುಂದರಿಯಾದ ಯುವತಿಯರು ದೊರೆಯುತ್ತಾರೆ. ಸುಂದರನಾಗಿದ್ದರೂ ಬಡ ಯುವಕರನ್ನು ಕೇಳುವವರೇ ಇಲ್ಲದಂತಹ ಪರಿಸ್ಥಿತಿ ನಿರ್ಮಾಣವಾಗುತ್ತಿದೆ. ಯುವತಿಯರೂ ಬಡ ಯುವಕನಿಗಿಂತಲೂ ವಧುದಕ್ಷಿಣೆ ಹೆಚ್ಚು ಕೊಡುವ ಶ್ರೀಮಂತ ವೃದ್ಧನನ್ನು ಮದುವೆಯಾಗಲು ಹೆಚ್ಚು

ಇಷ್ಟಪಡುತ್ತಾರೆ. ಇದು ವಧುದಕ್ಷಿಣೆಯ ದುರುಪಯೋಗವಾಗಿದೆ ಮಾತ್ರವಲ್ಲ ಇದು ಹೆಣ್ಣು ದುಡ್ಡಿಗಾಗಿ ತನ್ನನ್ನು ತಾನು ಮಾರಿಕೊಂಡಂತೆ. ಇದರಿಂದ ಅನೈತಿಕತೆಯೂ ಹುಟ್ಟಿಕೊಳ್ಳಬಹುದು. ಒಂದು ಒಳ್ಳೆಯ ಆದರ್ಶ, ಸಿದ್ಧಾಂತ ದುಡ್ಡಿದ್ದವನ ಕೈಯಲ್ಲಿ ಹೇಗೆ ದುರುಪಯೋಗವಾಗಬಹುದು ಎಂಬುದಕ್ಕೆ ಇದೊಂದು ಉದಾಹರಣೆಯಾಗಿದೆ.

ಈಗ ನಮ್ಮಲ್ಲೂ ಹೆಚ್ಚಿನವರು ಹತ್ತು ಪವನ್ ಚಿನ್ನಾಭರಣಕ್ಕಿಂತ ಕಡಿಮೆ ವಧುದಕ್ಷಿಣೆಯನ್ನು ಕೊಡುವುದಿಲ್ಲ. ಇತ್ತೀಚೆಗೆ ಶ್ರೀಮಂತರೊಬ್ಬರ ಮಗ ನೂರು ಪವನ್ ಚಿನ್ನಾಭರಣ ವಧುದಕ್ಷಿಣೆ ನೀಡಿ ಮದುವೆಯಾಗಿದ್ದು ಎಲ್ಲರಿಂದಲೂ ಪ್ರಶಂಸೆಗೊಳಗಾಗಿತ್ತು. ಹೀಗೆ ವಧುದಕ್ಷಿಣೆ ದಿನದಿಂದ ದಿನಕ್ಕೆ ಏರಿಕೆಯಾಗುತ್ತಾ ಹೋಗುತ್ತಿದೆ. ಇದು ಒಳ್ಳೆಯ ಬೆಳವಣಿಗೆಯಾದರೂ ಇದರ ದುರುಪಯೋಗವಾಗದಂತೆ ನಾವು ಎಚ್ಚರಿಕೆ ವಹಿಸಬೇಕು. ಭವಿಷ್ಯದಲ್ಲಿ ವಿದ್ಯಾವಂತ ಯುವತಿಯರು ಹೆಚ್ಚು ವಧುದಕ್ಷಿಣೆ ಕೊಡುವ ಶ್ರೀಮಂತ ವರನನ್ನೇ ಹುಡುಕ ಹೊರಟರೆ, ಕಡಿಮೆ ವಧುದಕ್ಷಿಣೆ ನೀಡುವ ಬಡ ಯುವಕನಿಗೆ ಹೆಣ್ಣೇ ಸಿಗದಂತಹ ಪರಿಸ್ಥಿತಿ ನಿರ್ಮಾಣವಾಗಲೂಬಹುದು. ಇದರಿಂದ ಮುಸ್ಲಿಮ್ ಸಮುದಾಯದಲ್ಲಿ ಒಂದು ದೊಡ್ಡ ರೀತಿಯ ಅಸಮತೋಲನ ಉಂಟಾಗಿ, ಒಂದು ಒಳ್ಳೆಯ ಸಿದ್ಧಾಂತವೇ ಅಳಿದುಹೋಗುವ ಸಾಧ್ಯತೆ ಇದೆ. ಭವಿಷ್ಯದಲ್ಲಿ ಹೀಗಾಗದಂತೆ ನಾವು ಈಗಲೇ ಈ ಬಗ್ಗೆ ಜಾಗ್ರತೆ ವಹಿಸಬೇಕಾಗಿದೆ.

ಹಿಂದೆ ಗುಣ, ನಡತೆ, ಮನೆತನಕ್ಕೆ ಪ್ರಾಧಾನ್ಯತೆ ಇತ್ತು. ಅನಂತರ ಹಣಕ್ಕೆ ಪ್ರಾಧಾನ್ಯತೆ ಬಂತು. ಹಣಕ್ಕೆ ಪ್ರಾಧಾನ್ಯತೆ ಬಂದಾಗ ಈ ಮೇಲು–ಕೀಳು, ಜಮೀನ್ದಾರ–ಸೇವಕ ಎಲ್ಲ ಅಳಿದು ಹೋಗಿ ಕ್ರಮೇಣ ಆತ ಯಾರೇ ಆಗಿರಲಿ ಹೇಗೇ ಇರಲಿ, ದುಡ್ಡೊಂದಿದ್ದರೆ ಸಾಕು ಅವನೇ ದೊಡ್ಡವನು, ಅವನೇ ನಾಯಕನಾದ. ಸಮಾಜದಲ್ಲಿ ಆತನಿಗೇ ಗೌರವ, ಬೆಲೆ, ಸ್ಥಾನಮಾನ ಸಿಗತೊಡಗಿತು. ಇಂದು ನಮ್ಮ ಮಸೀದಿಗಳ ಅಧ್ಯಕ್ಷನಾಗಲು ಕೂಡಾ ಅದರ ಅರ್ಹತೆ ಎಂದರೆ ದುಡ್ಡು. ಅವನು ಎಂತಹವನಾದರೂ ಆಗುತ್ತೆ ದುಡ್ಡೊಂದಿದ್ದರೆ ಸಾಕು ಅವನೇ ದೊಡ್ಡಪ್ಪ. ಅವನನ್ನು ಸರ್ವಾನುಮತದಿಂದ ಆಯ್ಕೆ ಮಾಡಲಾಗುತ್ತದೆ. ರಾಜಕೀಯ, ಧಾರ್ಮಿಕ ಸಂಘ ಸಂಸ್ಥೆಗಳು, ಎಲ್ಲ ರಂಗಗಳಲ್ಲೂ, ಎಲ್ಲ ಧರ್ಮಗಳಲ್ಲೂ ಇಂದು ನಡೆಯುತ್ತಿರುವುದು ಇದುವೇ. ಇಲ್ಲಿ ಈಗ ಒಳ್ಳೆಯತನಕ್ಕೆ, ಪ್ರಾಮಾಣಿಕತೆಗೆ, ನ್ಯಾಯಕ್ಕೆ, ಸತ್ಯಕ್ಕೆ, ಮಾನವೀಯತೆಗೆ ಬೆಲೆ, ಆದ್ಯತೆ ದಿನದಿಂದ ದಿನಕ್ಕೆ ಕಡಿಮೆಯಾಗುತ್ತಿದೆ. ಇದು ನಮ್ಮ ಬಹಳ ದೊಡ್ಡ ದುರಂತ.

ಅಂದಿನ ದಿನಗಳಲ್ಲಿ ವರನ ಮನೆಯಲ್ಲಿ ಮದುವೆ ಪೂರ್ವ ಚರ್ಚೆ ಮಾತುಕತೆಗಳೆಲ್ಲ ನಡೆಯುವಾಗ ವರ ಮನೆಯೊಳಗೇ ಇದ್ದರೂ ಅವನಲ್ಲಿ ತಂದೆ–ತಾಯಿಯಾಗಲೀ ಬೇರೆ ಯಾರೇ ಆಗಲಿ ಒಂದು ಮಾತೂ ಕೇಳುವುದಿಲ್ಲ. ಅಂತಹ ರಿವಾಜು ಆಗ ಇರಲಿಲ್ಲ. ಇಂತಹ ಊರಿನ ಇಂತಹವರ ಮಗಳನ್ನು ನನಗೆ ಸಂಬಂಧ ಮಾತನಾಡಲು ಬಂದಿದ್ದಾರೆ ಎನ್ನುವುದು ಮಾತ್ರ ಅವನಿಗೆ ಗೊತ್ತಿರುತ್ತಿತ್ತು. ಈಗಿನಂತೆ ಗಂಡು ಹೆಣ್ಣನ್ನು ನೋಡುವುದು, ಹೆಣ್ಣು ಇಷ್ಟ ಆಯಿತಾ ಕೇಳುವುದು, ಬೇಡ ಎಂದು ಬಿಟ್ಟು ಬರುವುದು,

ಇಷ್ಟ ಆದರೆ ಉಂಗುರ ಅಥವಾ ಬೇರೇನಾದರೂ ಆಭರಣ ಹಾಕುವುದು ಆಗ ಇರಲೇ ಇಲ್ಲ. ಹೆಣ್ಣು ಎಷ್ಟು ಓದಿದ್ದಾಳೆ ಎಂದು ಗಂಡಿನ ಕಡೆಯವರು ಕೇಳಿದರೆ 30 ಜೂದು (ಕುರ್‌ಆನ್) ಎಂದು ಹೆಣ್ಣಿನ ಕಡೆಯವರು ಹೇಳುವರು. ಅಷ್ಟು ಸಾಕು ಎಂದು ಎಲ್ಲರೂ ಒಪ್ಪಿಗೆ ಸೂಚಿಸುತ್ತಿದ್ದರು. ಶಾಲೆಗೆ ಹೋದ ಬಗ್ಗೆ ಅಲ್ಲಿ ಪ್ರಸ್ತಾಪವೇ ಬರುತ್ತಿರಲಿಲ್ಲ. ಮಾತುಕತೆಯೆಲ್ಲ ಮುಗಿದು ಬಳಿಕ ನಿಶ್ಚಿತಾರ್ಥ ದಿನ ನಿಗದಿ ಮಾಡುತ್ತಿದ್ದರು. ನಿಶ್ಚಿತಾರ್ಥಕ್ಕೆ ಎಲ್ಲರೂ ಬರಬೇಕೆಂದು ವಧುವಿನ ಕಡೆಯವರನ್ನು ವರನ ಕಡೆಯವರು ಅಧಿಕೃತವಾಗಿ ಆಮಂತ್ರಿಸುತ್ತಿದ್ದರು. ಎಷ್ಟು ಜನ ಬರುತ್ತಾರೆ ಎಂಬುದನ್ನು ಆಗಲೇ ತಿಳಿಸಬೇಕಾಗಿತ್ತು.

ಇನ್ನು ಕೆಲವು ಕಡೆ ನಗರಪ್ರದೇಶಗಳಲ್ಲಿ ಸ್ವಲ್ಪ ಮುಂದುವರಿದ ಕುಟುಂಬದವರು ಹೆಣ್ಣು ನೋಡಲು ಹೋಗುವ ರಿವಾಜು ಇತ್ತು. ನಾಲ್ಕೈದು ಮಂದಿ ಹೆಂಗಸರು ಮಾತ್ರ ಹೆಣ್ಣು ನೋಡಲು ಹೋಗುವುದು, ವರ ಹೋಗಲಿಕ್ಕಿಲ್ಲ. ಹೆಂಗಸರ ಜೊತೆ ಒಂದಿಬ್ಬರು ಹತ್ತಿರದ ಸಂಬಂಧಿ ಹಿರಿಯ ಗಂಡಸರು ಹೋಗುತ್ತಿದ್ದರು. ಈ ಗಂಡಸರಿಗೆ ಹೆಣ್ಣಿನ ಮನೆಯ ಒಳಗೆ ಹೋಗಲಿಕ್ಕಿಲ್ಲ. ಹೆಣ್ಣನ್ನು ನೋಡಲಿಕ್ಕಿಲ್ಲ. ಹೊರಗೆ ಜಗಲಿಯಲ್ಲಿ ಅವರು ಕುಳಿತುಕೊಳ್ಳುತ್ತಿದ್ದರು. ಅವರ ಮುಂದೆ ಎಲೆ–ಅಡಿಕೆ ಹರಿವಾಣ, ಪೀಕದಾನಿ ಇಡಲಾಗುತ್ತಿತ್ತು. ಬೀಡಿ, ಸಿಗರೇಟು ಸೇದುವವರಾದರೆ ಅದನ್ನೂ ಒದಗಿಸಲಾಗುತ್ತಿತ್ತು.

ಆಗಿನ ಕಾಲದಲ್ಲಿ ಬುರ್ಖಾ ಇರಲಿಲ್ಲ. ವೊಲ್ಲಿ ಇತ್ತು. 'ವೊಲ್ಲಿ' ಎಂದರೆ ಚಿಕ್ಕ ಚೌಕಳಿಯ ಕಡು ಅರಸಿನ ಬಣ್ಣದ ದೊಡ್ಡ ಚಾದರದಂತಹ ಬಟ್ಟೆ. ಇದರಲ್ಲಿ ನೂಲು ಮತ್ತು ರೇಶ್ಮೆ ಎರಡು ತರದ್ದಿತ್ತು. ಇದನ್ನು ಕಣ್ಣು ಮಾತ್ರ ಬಿಟ್ಟು ತಲೆ, ಮೈತುಂಬಾ ಹೊದ್ದುಕೊಳ್ಳುವುದು. ಇದರಲ್ಲಿ ಒತ್ತೆ ವೊಲ್ಲಿ, ಜೋಡು ವೊಲ್ಲಿ ಎಂದು ಎರಡು ಅಳತೆಯದ್ದಿತ್ತು. ಒತ್ತೆ ವೊಲ್ಲಿ ಒಬ್ಬರು ಮಾತ್ರ ಹೊದ್ದುಕೊಳ್ಳುವಂತಹದ್ದು, ಜೋಡು ವೊಲ್ಲಿ ಇಬ್ಬರು ಒಟ್ಟಿಗೆ ಹೊದ್ದುಕೊಳ್ಳುವಂತಹದ್ದು. ಈ ಜೋಡು ವೊಲ್ಲಿಯಲ್ಲಿ ಹೋಗುವವರಿಗೆ ಆಗ ಗೌರವ ಜಾಸ್ತಿ. ರಾಣಿ, ರಾಜಕುಮಾರಿಯರು ಹೋಗುವಾಗ ಅವರ ಜೊತೆ ಒಬ್ಬಳು ದಾಸಿಯರಿರುತ್ತಿದ್ದರಲ್ಲ ಹಾಗೆ ಜೋಡು ವೊಲ್ಲಿಯಲ್ಲಿ ಇನ್ನೊಬ್ಬರನ್ನು ಸೇರಿಸಿಕೊಂಡು ಹೋಗುವುದರಲ್ಲಿ ಹೆಂಗಸರಿಗೆ ಘನತೆ ಜಾಸ್ತಿ. ಅವಳು ಜೋಡು ವೊಲ್ಲಿಯಲ್ಲಿ ಹೋಗುವವಳು ಎಂಬ ಮರ್ಯಾದೆ. ಅದು ಶ್ರೀಮಂತಿಕೆಯ ಲಕ್ಷಣ ಕೂಡಾ.

ಹೀಗೆ ಹೆಣ್ಣು ನೋಡಲು ಬಂದವರಿಗೆ ಮೊದಲು ಕಲಸಿದ ಅವಲಕ್ಕಿ, ಬಾಳೆಹಣ್ಣು, ಲಡ್ಡು, ಜಿಲೇಬಿ, ಮಾಲ್ಪುರಿ, ಹಲ್ವಾ, ಚಹಾದ ಉಪಚಾರ. ಮಧ್ಯಾಹ್ನದ ಹೊತ್ತಾದರೆ ಉಪಾಹಾರ ಆದ ಮೇಲೆ ನೈಚೋರು (ತುಪ್ಪದನ್ನ), ಮಾಂಸದೂಟ. ಅನಂತರ ಎಲೆ–ಅಡಿಕೆ. ಹೀಗೆ ಹೆಣ್ಣು ನೋಡಲು ಬಂದವರು ನಮಗೆ ಹೆಣ್ಣು ಇಷ್ಟವಾಗಲಿಲ್ಲ ಎಂದು ಹಿಂದೆ ಹೋಗಿದ್ದು ಬಹಳ ಅಪರೂಪ. ನಗರಪ್ರದೇಶಗಳಲ್ಲಿ ಕೆಲವು ಕಡೆ ಹೆಣ್ಣು ಇಷ್ಟವಾಗದಿದ್ದರೆ ಏನಾದರೂ ಕಾರಣ ಹೇಳಿ ತೆರಳುತ್ತಿದ್ದರು. ಅಲ್ಲಿ ಹೇಗಿತ್ತು

ಎಂದರೆ, ಹೆಣ್ಣು ನೋಡಲು ಬಂದವರು ಹೆಣ್ಣು ನೋಡದೆ, ಇಷ್ಟವಾಗದೆ ಆ ಮನೆಯಲ್ಲಿ ಒಂದು ಲೋಟ ನೀರು ಕೂಡಾ ಕುಡಿಯುತ್ತಿರಲಿಲ್ಲ. ಹೆಣ್ಣು ಇಷ್ಟವಾದ ಮೇಲೆ ಮಲ್ಲಿಗೆ ಹೂ ಮುಡಿಸುವ ಸಂಪ್ರದಾಯ ಕೆಲವು ಕಡೆ ಇತ್ತು.

ಆಗ ಯಾವುದೇ ಶುಭಕಾರ್ಯಕ್ಕೆ ದಿನ ನಿಗದಿ ಮಾಡುವಾಗ ಹೆಚ್ಚಿನವರು ಅಮಾವಾಸ್ಯೆ, ಹುಣ್ಣಿಮೆ, ಭರಣಿ ಕೃತಿಕ, ರಾಹುಕಾಲ, ಗುಳಿಗಕಾಲ ಎಂದು ಸಮಯ ನೋಡುತ್ತಿದ್ದರು. ಮುಹೂರ್ತವನ್ನು ಸಾಮಾನ್ಯವಾಗಿ ಮಸೀದಿಯ ಗುರುಗಳೇ ಹೇಳುತ್ತಿದ್ದರು.

ನಿಶ್ಚಿತಾರ್ಥಕ್ಕೆ ಹೋಗುವಾಗ 50ರಿಂದ 100 ಜನರವರೆಗೂ ಹೋಗುವುದಿತ್ತು. ಹತ್ತಿರದ ಬಂಧುಗಳು, ನೆರೆಹೊರೆಯವರಿಗೆ ಆಮಂತ್ರಣ ನೀಡಲಾಗುತ್ತಿತ್ತು. ಹೋಗುವಾಗ ವರದಕ್ಷಿಣೆಯ ಅರ್ಧ ಹಣವನ್ನು ತೆಗೆದುಕೊಂಡು ಹೋಗಬೇಕು. ವಾಡಿಕೆಯಂತೆ ಹೋದವರಿಗೆ ಉಪಾಹಾರವಾಗುತ್ತದೆ. ನಂತರ ಮದುವೆ ದಿನ ನಿಗದಿಪಡಿಸಲು ಚರ್ಚೆ ಆರಂಭವಾಗುತ್ತದೆ. ಆ ಕಾಲದಲ್ಲಿ ರವಿವಾರ ಅಥವಾ ಗುರುವಾರ ಹೆಚ್ಚಾಗಿ ಮದುವೆ ಯಾಗುವುದು. ಶುಕ್ರವಾರ, ಶನಿವಾರ, ಮಂಗಳವಾರ ಮದುವೆ ಇಡುವುದೇ ಇಲ್ಲ. ದಿನ ನಿಗದಿಯಾದ ಮೇಲೆ ಹೆಣ್ಣಿನ ಕಡೆಯವರು ತಂದ ವರದಕ್ಷಿಣೆಯ ಅರ್ಧ ಹಣವನ್ನು ಅಡ್ವಾನ್ಸ್ ಆಗಿ ಕೊಡಬೇಕು. ಆ ಹಣವನ್ನು ಪಡೆಯಲು ಒಂದು ಹರಿವಾಣಕ್ಕೆ ರೇಶ್ಮೆ ಬಟ್ಟೆ ಹಾಸಿ ವರನ ಕಡೆಯವರು ವಧುವಿನ ಕಡೆಯವರ ಮುಂದೆ ಇಡುವುದು. ಅದರಲ್ಲಿ ಇಂತಿಷ್ಟೇ ಹಣ ಇದೆ ಎಂದು ಎಣಿಸಿ ಎಲ್ಲರಿಗೂ ತೋರಿಸಿ ಹೆಣ್ಣಿನ ಕಡೆಯ ಹಿರಿಯರೊಬ್ಬರು ಆ ಹರಿವಾಣದಲ್ಲಿಡಬೇಕು. ಬಳಿಕ ಎಲ್ಲರ ಒಪ್ಪಿಗೆ ಪಡೆದು ಅದನ್ನು ಒಳಗೆ ತೆಗೆದುಕೊಂಡು ಹೋಗುವುದು. ಅಲ್ಲಿಗೆ ನಿಶ್ಚಿತಾರ್ಥ ಮುಗಿಯುತ್ತಿತ್ತು. ಅಂದು ನೈಚೋರು, ಕುಚ್ಚಲಕ್ಕಿ ಅನ್ನ, ಕೋಳಿ ಸಾರು ಔತಣ. ಬಂದ ಕೂಡಲೇ ಸಾಮಾನ್ಯವಾಗಿ ಎಲ್ಲರಿಗೂ ನನ್ನಾರ್‌ನ ಶರಬತ್ ಕೊಡುತ್ತಿದ್ದರು. ಎಲ್ಲಾ ಕಾರ್ಯಕ್ರಮಗಳಲ್ಲೂ ಎಲೆ-ಅಡಿಕೆ, ಬೀಡಿ-ಸಿಗರೇಟು ತುಂಬಿದ ಹರಿವಾಣವನ್ನು ಎಲ್ಲರಿಗೂ ಕಾಣುವಂತೆ ಇಡುವುದು ಕಡ್ಡಾಯ. ಮನೆಯೊಳಗೆ ಉಗುಳುದಾನಿಯೂ ಜೊತೆಗಿರಬೇಕು.

ಆಗಿನ ಕಾಲದಲ್ಲಿ ಈಗಿನ ಹಾಗೆ ಚಿನ್ನ, ಬೆಳ್ಳಿಯ ಆಭರಣಗಳ ಮಳಿಗೆಗಳಿರಲಿಲ್ಲ. ಮದುವೆ ದಿನ ಹತ್ತಿರ ಬರುತ್ತಿದೆ ಎಂದಾಗ ಆಭರಣ ತಯಾರಿಸುವ ಅಕ್ಕಸಾಲಿಗರನ್ನು ಮನೆಗೆ ಕರೆಸಿ ಮನೆಯಲ್ಲಿಯೇ ಆಭರಣಗಳನ್ನು ತಯಾರಿಸುತ್ತಿದ್ದರು. ಅಕ್ಕಸಾಲಿಗ ಅವನ ತಕ್ಕಡಿ, ಕಲ್ಲು, ಇತರ ಸಾಮಗ್ರಿಗಳ ಪೆಟ್ಟಿಗೆಯೊಂದಿಗೆ ಬಂದು ಮನೆಯ ಜಗಲಿಯಲ್ಲಿಯೇ ತಿಂಗಳುಗಟ್ಟಲೆ ಠಿಕಾಣಿ ಹೂಡುತ್ತಿದ್ದ. ಅಲ್ಲಿಯೇ ನಮಗೆ ಬೇಕಾದ ವಿನ್ಯಾಸದ ಆಭರಣಗಳು ತಯಾರಾಗುತ್ತಿದ್ದವು. ಅಲಿಕಾತ್, ಕೊಪ್ಪು, ಕೊಪ್ಪುರೊ ಸರಪೊಲಿ, ವಾಲೆ, ಬೆಂಡೋಲೆ, ಜುಮ್ಕಿ, ಲೋಲಾಕ್, ತಲೆಸಿಂಗಾರ, ಮಿಸಿರಿಮಾಲೆ, ಮಲ್ಲಿಗೆಮಾಲೆ, ಅವುಲುಮಾಲೆ, ಕೊತ್ತಂಬರಿ ಮಾಲೆ, ನೆಕ್ಲೇಸ್, ವತ್ತೆಉರ್ಕು, ಜೋಡಿ ಉರ್ಕು, ಮೂನುರ್ಕು, ಅಂಜಿ ಉರ್ಕು, ರಾಕೊಟಿ, ಕೇದಗೆ, ಗೊಂಡೆ, ಮೋಂದರ, ಸೊರಗಿ

ಬಲೆ, ಮುರ್ಗಿಬಲೆ, ಗಟ್ಟಿಬಲೆ, ತಿರ್ಪುರೊ ಪೂ, ಕುತ್ತ ಕೇದಗೆ, ಅಡ್ಡಕೇದಗೆ, ರಾಕೊಟಿ ಚೌರಿ, ಇಲ್ಲಿ ಅಲಿಕಾತ್, ಬಂಧಿ ಬಡಕರ – ಇವೆಲ್ಲ ನನಗೆ ನೆನಪಿರುವ ಅಮ್ಮ ಹೇಳಿದ ಆಗಿನ ಕಾಲದ ಕೆಲವು ಚಿನ್ನದ ಆಭರಣಗಳು. ಅರಞಾನ (ಸೊಂಟಪಟ್ಟಿ), ನೂಲು, ಕಾಲುಗೆಜ್ಜೆ, ಕಾಲುಬಲೆ, ಕುಣಿಪು, ಪಾಡಗ ಇವೆಲ್ಲ ಬೆಳ್ಳಿಯ ಆಭರಣಗಳು. ನಮಗೆ ಬೇಕಾದ ಆಭರಣಗಳ ಹೆಸರು ಹೇಳುವುದು ಅಥವಾ ಬೇರೆ ಯಾರ ಮನೆ ಯಿಂದಲಾದರೂ ತಂದು ವಿನ್ಯಾಸ ತೋರಿಸಿದರೆ ಮನೆಯ ಜಗಲಿಯಲ್ಲಿ ಆಭರಣಗಳು ತಯಾರಾಗುತ್ತಿದ್ದವು. ಆಗ ಮಂಗಳೂರು ಪೇಟೆಯಲ್ಲಿ ಚಿನ್ನ, ಬೆಳ್ಳಿಯ ಗಟ್ಟಿ ಮಾರಾಟ ಮಾಡುವ ಶೇಟ್‌ಗಳ ಅಂಗಡಿಗಳಿರುತ್ತಿದ್ದವು. ಅಲ್ಲಿ ಆಭರಣಗಳಿರುತ್ತಿರಲಿಲ್ಲ. ಅಲ್ಲಿಂದ ಗಟ್ಟಿ ಖರೀದಿಸಿ ತಂದು ಆಭರಣಗಳನ್ನು ತಯಾರಿಸುತ್ತಿದ್ದರು.

ಅಂದಿನ ಕಾಲದಲ್ಲಿ ಯಾವುದೇ ಕಾರ್ಯಕ್ರಮಕ್ಕೆ ಸಾಮಗ್ರಿಗಳನ್ನು ಖರೀದಿಸ ಬೇಕಾದರೂ ಮಂಗಳೂರು ಪೇಟೆಗೆ ಬರಬೇಕು. ಮಂಗಳೂರಿನ ಮೇಲಮಚ್ಚೇರಿ ಎಂದರೆ ಈಗಿನ ರಥಬೀದಿ. ಇದು ಮಂಗಳೂರು ಪಟ್ಟಣದ ವ್ಯಾಪಾರದ ಕೇಂದ್ರ ಸ್ಥಳ. ಹಂಪನಕಟ್ಟೆ ಎಂಬ ಹೆಸರು ಆಗ ಇರಲಿಲ್ಲ. ಬಂದರ್, ಗೋಳಿಕಟ್ಟೆ ಬಝಾರ್, ಭಟ್ಕಳ್ ಬಝಾರ್ ಅಂದಿನ ವ್ಯಾಪಾರ ಕೇಂದ್ರಗಳು.

ಅಂದು ಮದುವೆಗೆ ಬಟ್ಟೆ ಖರೀದಿಸಲು ಹೋಗುವುದೆಂದರೆ ಅದು ಮದುವೆಯ ಒಂದು ಭಾಗ ಎಂಬಂತಹ ಕಾರ್ಯಕ್ರಮ. ಹತ್ತಿರದ ಬಂಧುಗಳಿಗೆಲ್ಲ ಈ ವಿಷಯ ತಿಳಿಸಬೇಕು. ಮತ್ತೆ ಕೆಲವರನ್ನು ಖರೀದಿಗೆ ಕರೆದುಕೊಂಡು ಹೋಗಲೇಬೇಕು. ಹೋಗದಿದ್ದರೆ ಅವರು ಮುನಿಸಿಕೊಂಡು ಮದುವೆಗೆ ಬಾರದೇ ಇದ್ದಾರು.

ಆಗ ಮದುಮಗಳ ಬಟ್ಟೆ ಖರೀದಿಗೆ ಹೆಂಗಸರು ಹೋಗುವ ಕ್ರಮ ಇಲ್ಲ. ಎಲ್ಲ ಕಾರುಬಾರೂ ಗಂಡಸರದ್ದೇ. ಮಹಿಳೆಯರು ಈಗಿನಂತೆ ಬ್ರಾ, ಚಡ್ಡಿ, ನೈಟಿ ಧರಿಸುತ್ತಿರಲಿಲ್ಲ. ಬಾಡಿ, ಲಂಗ, ಕುಪ್ಪಸ, ಸೀರೆ; ಮಕ್ಕಳು ಚಡ್ಡಿ, ಅಂಗಿ; ಪುರುಷರು ಚಡ್ಡಿ, ಮುಂಡು, ಅಂಗಿ. ಎಲ್ಲದಕ್ಕೂ ಬಟ್ಟೆ ತಂದು ದರ್ಜಿಯ ಬಳಿ ಹೊಲಿಸುವುದು. ದರ್ಜಿಯನ್ನು ಮನೆಗೇ ಕರೆಸಿ ಅಳತೆ ತೆಗೆಸುವುದು. ಸ್ನಾನದ ಸಾಬೂನು, ಸ್ನೋ, ಕಾಡಿಗೆ ಡಬ್ಬಿ, ಪರಿಮಳದ ಎಣ್ಣೆ, ಪೌಡರು, ಸೆಂಟು, ಬಾಚಣಿಗೆ, ರಿಬ್ಬನ್, ಹೇರ್‌ಕ್ಲಿಪ್, ಸುರ್ಮ (ಪುರುಷರ ಕಾಡಿಗೆ), ಚಪ್ಪಲಿ, ಉರ್ಮಾಲ್ (ರುಮಾಲು) ಇವೆಲ್ಲವನ್ನೂ ಮದುಮಗಳ ಬಟ್ಟೆಯ ಜೊತೆಗೇ ಖರೀದಿಸಲಾಗುತ್ತಿತ್ತು.

ಮದುಮಗಳಿಗೆ ಪಟ್ಟೆಸೀರೆ, ಕಿನ್ಕಾಪು, ವಾಯಿಲ್ ಸೀರೆ, ಅರ್ಗಂಡಿ ಕುಪ್ಪಸದ ಬಟ್ಟೆ ಖರೀದಿಸುತ್ತಿದ್ದರು. ಇವೆಲ್ಲವನ್ನೂ ಮನೆಗೆ ತಂದ ಮೇಲೆಯೇ ಹೆಂಗಸರು ನೋಡುವುದು. ನೋಡಿ ಅದು ಚೆನ್ನಾಗಿಲ್ಲ, ಇದು ಚೆನ್ನಾಗಿಲ್ಲ, ಅದನ್ನು ಬದಲಿಸಿ ತನ್ನಿ, ಇದನ್ನು ಬದಲಿಸಿ ತನ್ನಿ ಎಂದು ಯಾರೂ ಹೇಳುತ್ತಿರಲಿಲ್ಲ. ಸೀರೆ ಈಗಿನಂತೆ ನೆರಿಗೆ ಹಾಕಿ ಉಡುವುದಲ್ಲ, ಮಡಿಲು ಹಾಕಿ ಉಡುವುದು. ಎಷ್ಟು ಶ್ರೀಮಂತರಾದರೂ ಮದುಮಗಳಿಗೆ ನಾಲ್ಕು ಅಥವಾ ಐದು ಸೀರೆ, ಕುಪ್ಪಸ, ಎರಡು ರುಮಾಲು. ಆಗ

ರವಕೆ ಇರಲಿಲ್ಲ. ಅಂದಿನ ಸೀರೆಗಳ ಹೆಸರು : ಕಲ್ಲಿರೆ, ಪೊಡಿಕಲ್, ಬೈಂಗಸ್ ಪಟ್ಟೆ, ಕಿನ್ಕಾಪು, ಗಟ್ಟಿ ಕಿನ್ಕಾಪು. ಈ ಸೀರೆಗಳೆಲ್ಲ ಎಂಟು ಮೊಳ ಉದ್ದ. ಎಲ್ಲವನ್ನೂ ಮಡಿಲು ಹಾಕಿಯೇ ಉಡುವುದು.

ಮದುಮಗನ ಬಟ್ಟೆ : ನಾಲ್ಕು ಮೊಳದ ಮೌಲಾನ ಲುಂಗಿ (ಮದ್ರಾಸ್ ಲುಂಗಿ), ಬಿಳಿ ವಾಯಿಲ್ ಅಂಗಿ, ಗೊಂಡೆ ಇರುವ ಪೇಸ್ ಟೋಪಿ, ರೇಶ್ಮೆ ಶಾಲು, ಚರ್ಮದ ಚಪ್ಪಲಿ, ಕೊಡೆ. ರಾತ್ರಿಯಲ್ಲೂ ಮದುಮಗನಿಗೆ ಕೊಡೆ ಬೇಕು. ಕೊಡೆ ಹಿಡಿಯುವುದು ಆತನ ಬಾವನ ಹಕ್ಕು. ಬಟ್ಟೆ ಖರೀದಿಸಿದ ವಿಷಯ ತಿಳಿದು ನೆರೆಕರೆಯವರು, ಹತ್ತಿರದ ಬಂಧುಗಳು, ಮಹಿಳೆಯರು ಅದನ್ನು ನೋಡಲು ಬರುವ ಕ್ರಮ ಇತ್ತು. ಅದೇ ರೀತಿ ಚಿನ್ನಾಭರಣ ತಯಾರಾದ ಬಳಿಕ ಕೂಡಾ ನೋಡಲು ಬರುವುದಿತ್ತು. ಹತ್ತಿರದ ಬಂಧುಗಳು ಹಾಗೆ ನೋಡಲು ಬಾರದಿದ್ದರೆ ಬೇಸರ ಹೇಳಿಕೊಳ್ಳುವುದೂ ಇತ್ತು. ಅಂತೂ ಮದುವೆಗೆ ಮೊದಲೇ ಯಾವಾಗ ನೋಡಿದರೂ ಮನೆಯಲ್ಲಿ ನೆಂಟರು ತುಂಬಿರುತ್ತಿದ್ದರು.

ಅಂದು ಇಂದಿನಂತೆ ಬಸ್ಸು, ಕಾರು, ಆಟೋರಿಕ್ಷಾ, ಬೈಕುಗಳಿರಲಿಲ್ಲ. ಎಷ್ಟು ದೂರವಿದ್ದರೂ ಎಲ್ಲರೂ ನಡೆದೇ ಹೋಗಬೇಕು. ಹೊಳೆ ಇದ್ದಲ್ಲಿ ದೋಣಿ ಮೂಲಕ ದಾಟುತ್ತಿದ್ದರು. ಆಗ ಕೂಳೂರು ಸೇತುವೆ ಇರಲಿಲ್ಲ. ಕೂಳೂರು ಸೇತುವೆ ಬಳಿಯಿಂದ ಮಂಗಳೂರಿಗೆ ದೋಣಿಯವರು ಎರಡಾಣೆ ತೆಗೆದುಕೊಳ್ಳುತ್ತಿದ್ದುದು ಈಗಲೂ ನೆನಪಿದೆ. ಕೆಲ ಶ್ರೀಮಂತರು ಕುದುರೆ ಗಾಡಿಯಲ್ಲಿ ಹೋಗುತ್ತಿದ್ದರು. ಕೂಳೂರು ಸೇತುವೆ ಆಗುವುದಕ್ಕಿಂತ ಮೊದಲು ಮಂಗಳೂರು ದೊಡ್ಡಾಸ್ಪತ್ರೆಗೆ ರೋಗಿಗಳು, ಹೆರಿಗೆ ನೋವು ಬಂದು ಹೆರಿಗೆಯಾಗದವರನ್ನು ದೋಣಿಯಲ್ಲೇ ಕರೆದುಕೊಂಡು ಹೋಗಬೇಕಾಗಿತ್ತು. ಹೀಗೆ ಕರೆದುಕೊಂಡು ಹೋಗುವಾಗ ಅರ್ಧ ದಾರಿಯಲ್ಲಿಯೇ ಹೆರಿಗೆಯಾದದ್ದು, ತಾಯಿ, ಮಗು ಅಸು ನೀಗಿದ್ದೂ ಇದೆ.

ಮದುವೆ ಮನೆಯ ಅಂಗಳ ತುಂಬಾ ಕಂಗು, ಬಿದಿರು ನೆಟ್ಟು ಬಿದಿರಿನ ಸಲಾಕೆಯನ್ನು ಹುರಿಹಗ್ಗದಿಂದ ಕಟ್ಟಿ ತೆಂಗಿನ ಸೋಗೆಯ ಚಪ್ಪರ ಹಾಕುತ್ತಿದ್ದರು. ಮಳೆಗಾಲವಾದರೆ ಮುಳಿಹುಲ್ಲು ಹಾಸುತ್ತಿದ್ದರು. ಎರಡು ಮಾಡಿನ ಚಪ್ಪರ ಹಾಕುತ್ತಿದ್ದುದೂ ಇತ್ತು. ಆ ಚಪ್ಪರ ಮದುವೆಗೆ ತಿಂಗಳ ಮೊದಲೇ ಹಾಕಲು ತೊಡಗುತ್ತಿದ್ದರು. ಚಪ್ಪರಕ್ಕೆ ಬಿದಿರಿನ ಸಲಾಕೆಯಿಂದ ಸುಂದರವಾದ ಕಮಾನುಗಳು, ಕಿಟಕಿ–ಬಾಗಿಲುಗಳು ಮಾಡಿ, ಬಣ್ಣದ ಕಾಗದದಿಂದ ಅಲಂಕಾರ ಮಾಡುತ್ತಿದ್ದರು. ಧೂಳು ಏಳದಂತೆ ನೆಲವನ್ನು ನೀರು ಹಾಕಿ ಹದಗೊಳಿಸುತ್ತಿದ್ದರು. ವಧು–ವರ ಎರಡು ಕಡೆಯ ಮನೆಯ ಚಪ್ಪರಗಳಲ್ಲೂ ಉಯ್ಯಾಲೆಯನ್ನು ಹಾಕಲಾಗುತ್ತಿತ್ತು. ಉಯ್ಯಾಲೆ ಇಲ್ಲದ ಚಪ್ಪರ ಬಹಳ ಅಪರೂಪ.

ಅಂದು ಬಾಡಿಗೆಯ ಶಾಮಿಯಾನ, ಕುರ್ಚಿಗಳು ಸಿಗುತ್ತಿರಲಿಲ್ಲ. ಮಹಿಳೆಯರಿಗೆ ಕುಳಿತುಕೊಳ್ಳಲು ಮಣೆ ಅಥವಾ ನೆಲದಲ್ಲಿ ಈಚಲ ಚಾಪೆ ಹಾಸುತ್ತಿದ್ದರು. ಪಕ್ಕದ ಮನೆಗಳಲ್ಲಿರುವ ಕುರ್ಚಿ, ಮೇಜು, ಬೆಂಚು, ಮಣೆಗಳನ್ನು ತರಲಾಗುತ್ತಿತ್ತು. ಗಂಡಸರು–ಹೆಂಗಸರು ಎಲ್ಲರಿಗೂ ನೆಲದಲ್ಲೇ ಚಾಪೆ ಹಾಸಿ ಊಟ. ನೈಚೋರು, ಬೇಳೆಸಾರು,

ಮಾಂಸ ಸಾರು ಅಂದಿನ ಔತಣ. ಇಂದಿನ ಬಿರಿಯಾನಿ, ಕೋಳಿ ಫ್ರೈ ಆಗ ಇರಲೇ ಇಲ್ಲ. ವಿದ್ಯುತ್‌ದೀಪ ಇರಲಿಲ್ಲ. ಚಿಮಿಣಿ, ಲ್ಯಾಂಪು, ಬೆಡ್‌ಲ್ಯಾಂಪು, ಲಾಟನ್ ಅಂದಿನ ದೀಪಗಳು. ಮದುವೆ ಸಮಾರಂಭಗಳಲ್ಲಿ ಗ್ಯಾಸ್‌ಲೈಟ್ ಬಳಸುತ್ತಿದ್ದರು. ರಾತ್ರಿ ಹೊತ್ತು ಹೊರಗೆ ಹೋಗುವಾಗ ಟಾರ್ಚ್‌ಲೈಟ್ ಅಥವಾ ಸೋಗೆಯ ದೊಂದಿ ಹಿಡಿದೇ ಹೋಗುತ್ತಿದ್ದರು. ಟಾರ್ಚ್‌ಲೈಟ್‌ನಲ್ಲಿ 2 ಸೆಲ್, 3 ಸೆಲ್, 5 ಸೆಲ್ ಅಂತ ಇತ್ತು.

ಮದುವೆಗೆ ಹೇಳಿಕೆ ಕೊಡಲು ಆಗ ಮದುಮಗ ಖುದ್ದಾಗಿ ಹೋಗಬೇಕು. ಅವನ ಜೊತೆ ಬಾವಂದಿರು ಹೋಗುವುದು ವಾಡಿಕೆ. ಇಂದಿನಂತೆ ಆಮಂತ್ರಣ ಪತ್ರಿಕೆ ಮುದ್ರಿಸುವ ಕ್ರಮ ಆಗ ಇರಲಿಲ್ಲ. ಹೆಣ್ಣಿನ ಕಡೆಯಾದರೆ ತಂದೆ ಅಥವಾ ಅಣ್ಣಂದಿರು ಹೋಗುವುದು ಗೌರವ. ಅವರ ಬದಲು ಬೇರೆಯವರನ್ನು ಕಳುಹಿಸಿದರೆ ಕೋಪಿಸಿಕೊಳ್ಳು ವುದು, ಮದುವೆಗೆ ಬಾರದೆ ಇರುವುದೂ ಇತ್ತು.

ಕಡಿಮೆ ಎಂದರೂ ಹದಿನೈದು ದಿನ ಮದುವೆ ನಡೆಯುತ್ತಿತ್ತು. ಒಂದೊಂದು ದಿನ ಒಂದೊಂದು ಕಾರ್ಯಕ್ರಮಗಳಿರುತ್ತಿದ್ದವು. ಮದುವೆಗೆ ಸುಮಾರು ಒಂಬತ್ತು ಅಥವಾ ಏಳು ದಿನಕ್ಕೆ ಮೊದಲು 'ತಿರುಂಬು' ಹಾಕುವ ಕಾರ್ಯಕ್ರಮ. ಮತ್ತೊಂದು ದಿನ 'ಮೋತುಬಲೆ'. ಇನ್ನೊಂದು ದಿನ 'ಕಾಯಿನ್ತೊ ಕುಲಿ'. ಮತ್ತೊಂದು ದಿನ 'ಮೊಯ್ಲಾಂಜಿ'. ಒಂದು ದಿನ 'ಮೌಲೂದು'. ಹೀಗೆ ಮದುವೆ ಮುಗಿಯುವವರೆಗೂ ನಂತರವೂ ದಿನಾ ಕಾರ್ಯಕ್ರಮಗಳು. ಹಾಗಾಗಿ ಕಡಿಮೆ ಎಂದರೂ ಒಂದು ಹತ್ತು ದಿನ ಮೊದಲೇ ಹತ್ತಿರದ ಬಂಧುಗಳೆಲ್ಲ ಮನೆಯಲ್ಲಿ ಸೇರುತ್ತಿದ್ದರು. ಮದುವೆಗೆ ಆಮಂತ್ರಿಸುವಾಗಲೇ ಈ ಎಲ್ಲ ಕಾರ್ಯಕ್ರಮಗಳಿಗೆ ಹತ್ತಿರದ ಬಂಧುಗಳನ್ನು ಪ್ರತ್ಯೇಕವಾಗಿ ಕರೆಯಲಾಗುತ್ತಿತ್ತು. ಮದುವೆ ಮುಗಿದ ಮೇಲೂ ತಾಲ, ಮದುಮಗಳು ಹೋಗುವುದು, ಬರುವುದು, ಮದುಮಗ – ಮದುಮಗಳಿಗೆ ಔತಣ, ಅವರ ತಂದೆ–ತಾಯಿ, ಅಕ್ಕ, ಬಾವಂದಿರಿಗೆ ಔತಣ, ಹದಿನೈದನೇ ದಿನದ ತಾಲ... ಹೀಗೆ ಕಾರ್ಯಕ್ರಮಗಳಿರುತ್ತಿದ್ದವು.

'ತಿರುಂಬು' ಹಾಕುವುದು ಎಂದರೆ – ಅರಶಿನವನ್ನು ಅರೆದು ಹಾಲಿನಲ್ಲಿ ಬೆರೆಸಿ ಮದುಮಗಳ ಮುಖ, ದೇಹಕ್ಕೆಲ್ಲ ಹಚ್ಚುವುದು. ಮದುವೆಗೆ ಒಂಬತ್ತು ಅಥವಾ ಏಳು ದಿನಕ್ಕೆ ಮೊದಲು ಈ ರೀತಿ ದಿನಾ ಹಚ್ಚಿ ಕತ್ತಲೆ ಕೋಣೆಯಲ್ಲಿ ಕುಳ್ಳಿರಿಸುತ್ತಿದ್ದರು. ಸಾಮಾನ್ಯವಾಗಿ ಇದನ್ನು ನಾದಿನಿಯರು ಹಚ್ಚುವುದು ಅವರ ಮರ್ಯಾದೆ. ಕೆಲವು ಗಂಟೆಗಳ ಬಳಿಕ ಶೀಗೆಹುಡಿ, ಕಡಲೆಹಿಟ್ಟಿನಿಂದ ಬಿಸಿನೀರ ಸ್ನಾನ ಮಾಡಿಸುವುದು, ಹೀಗೆ ಮದುವೆಯ ಮೊದಲ ದಿನದವರೆಗೂ ಮಾಡುತ್ತಿದ್ದರು. ಸ್ನಾನ ಮಾಡಿಸುವಾಗ ಮೊದಲ ನೀರು ಇಂತಹವರೇ ಹಾಕಬೇಕು ಎಂಬ ನಿಯಮವಿತ್ತು. ಅವರಿಗೆ ಅವಕಾಶ ಕೊಡದಿದ್ದರೆ ಕೋಪ ಮಾಡಿಕೊಂಡು ಹೋದದ್ದೂ ಇದೆ.

'ಮೋತುಬಲೆ' ಎಂದರೆ ಮುಖದ ಕೂದಲು ತೆಗೆಯುವುದು. ಈ ಕಾರ್ಯಕ್ರಮ ಮದುಮಗ–ಮದುಮಗಳು ಇಬ್ಬರ ಮನೆಗಳಲ್ಲೂ ಸಂಭ್ರಮದಿಂದ ನಡೆಯುತ್ತಿತ್ತು. ಇದು ಈಗ ಬ್ಯೂಟಿಪಾರ್ಲರ್‌ಗೆ ಹೋಗುತ್ತಾರಲ್ಲ ಹಾಗೆ. ಮುಖದ ಅಲಂಕಾರ

ಮಾಡುವುದು. ಮದುವೆಯ ಮೊದಲ ದಿನ ರಾತ್ರಿ ಮದುಮಗನನ್ನು ಅಂಗಳದಲ್ಲಿ ಹಾಕಿದ ಚಪ್ಪರದ ಮಧ್ಯೆ ಕುರ್ಚಿ ಇಟ್ಟು ಅದಕ್ಕೆ ಬಿಳಿ ಬಟ್ಟೆ ಹಾಸಿ ಕುಳ್ಳಿರಿಸುತ್ತಿದ್ದರು. ಇಬ್ಬರು ಮಕ್ಕಳು ಮೇಣದಬತ್ತಿ ಅಥವಾ ಬೇರೆ ಯಾವುದಾದರೂ ದೀಪ ಹಿಡಿದು ಮದುಮಗನ ಎಡ–ಬಲ ನಿಂತಿರುತ್ತಿದ್ದರು. ಭಂಡಾರಿಯನ್ನು ಮೊದಲೇ ಬರಹೇಳುತ್ತಿದ್ದರು. ಆತ ಬಂದವನು ಈ ದೀಪದ ಬೆಳಕಿನಲ್ಲಿ ಕ್ಷೌರ ಮಾಡುತ್ತಿದ್ದ ಮತ್ತು ಮುಖದ ಅಲಂಕಾರ ಮಾಡುತ್ತಿದ್ದ. ಆಗ ಚಪ್ಪರದಲ್ಲಿ ಒಂದು ಕಡೆ ಹಾಡುವ ಕಾರ್ಯಕ್ರಮ ನಡೆಯುತ್ತಿತ್ತು. ಕೆಲವು ಕಡೆ ಹಾಡುವ ತಂಡಗಳ ಸ್ಪರ್ಧೆ ನಡೆದದ್ದೂ ಇತ್ತು. ಇದಕ್ಕೆ ಆಗ 'ಕಬಿ' ಹೇಳುವುದು ಎಂದು ಹೇಳುತ್ತಿದ್ದರು. ಕಬಿ ಎಂದರೆ ಕವಿತೆ. ಇದೊಂದು ತರ ಕವಿಗೋಷ್ಠಿ ಇದ್ದ ಹಾಗೆ. ಜೊತೆಗೆ 'ಸಬಿನ' ಹಾಡುಗಳನ್ನೂ ಹಾಡುತ್ತಿದ್ದರು. ಅದು ಅರಬಿ ಮಲಯಾಳಂ ಭಾಷೆಯಲ್ಲಿರುತ್ತಿತ್ತು. 'ಸಬಿನ' ಹಾಡು ಎಂದರೆ ಇಸ್ಲಾಮಿನ ಮಹಾಪುರುಷರನ್ನು ಹೊಗಳುವ ಹಾಡುಗಳು. ಇದರಲ್ಲಿ ದುರಂತ ಕತೆಗಳು, ಘಟನೆಗಳ ವಿವರಗಳೂ ಇರುತ್ತಿದ್ದವು. ಇದು ಒಂದು ಮನೋರಂಜನಾ ಕಾರ್ಯಕ್ರಮವಾದುದರಿಂದ ಹೆಚ್ಚಿನ ಜನ ಸೇರುತ್ತಿದ್ದರು. ಕಾರ್ಯಕ್ರಮದ ಬಳಿಕ ಭಂಡಾರಿಗೆ ಕೈತುಂಬಾ ಹಣ, ಕುರ್ಚಿಗೆ ಹಾಕಿದ್ದ ಬಿಳಿಬಟ್ಟೆ, ಊಟ ಎಲ್ಲ ಕೊಟ್ಟು ಸಂತೋಷಪಡಿಸುತ್ತಿದ್ದರು. ಕೂಡಿದವರಿಗೆಲ್ಲ ಪಾನಕ ನೀಡಲಾಗುತ್ತಿತ್ತು.

ಈ ರೀತಿ ಮದುಮಗಳ ಮನೆಯಲ್ಲೂ ನಡೆಯುತ್ತಿತ್ತು. ಮದುಮಗಳನ್ನು ಕುರ್ಚಿಯಲ್ಲಿ ಕುಳ್ಳಿರಿಸಿ, ಎಡ–ಬಲ ಇಬ್ಬರು ಬಾಲಕಿಯರು ದೀಪ ಹಿಡಿದು ನಿಲ್ಲುತ್ತಿದ್ದರು. ಮದುಮಗಳ ಮಾವ (ತಾಯಿಯ ಸಹೋದರ) ಬಾಲ್‌ನಿಂದ ನೆತ್ತಿಯ ಎರಡು ಕೂದಲನ್ನು ತೆಗೆದು ಕಾರ್ಯಕ್ರಮ ಉದ್ಘಾಟಿಸುವುದು. ಇದು ಮಾವನ ಮರ್ಯಾದೆ. ಬಳಿಕ ಯಾರಾದರೂ ಅದರ ಬಗ್ಗೆ ತಿಳಿದಿರುವ ಮಹಿಳೆ ಮುಖದ ಕೂದಲು ತೆಗೆದು ಅಲಂಕಾರ ಮಾಡುತ್ತಿದ್ದರು. ಆಗ ಸೇರಿದವರಲ್ಲಿ ಹಾಡು ತಿಳಿದಿದ್ದ ಹೆಂಗಸರು ಬೇರೆ ಬೇರೆ ತರದ ಹಾಡುಗಳನ್ನು ವಿವಿಧ ಭಂಗಿಯಲ್ಲಿ ಮೈಕುಲುಕುತ್ತಾ, ಕೈತಟ್ಟಿ ಹಾಡುತ್ತಿದ್ದರು. ಕೂಡಿದ ಹೆಂಗಸರೆಲ್ಲ ಅದಕ್ಕೆ ಧ್ವನಿ ಕೂಡಿಸುತ್ತಿದ್ದರು. ಇಡೀ ಮನೆ ಸಂಭ್ರಮದಿಂದ ಕೂಡಿರುತ್ತಿತ್ತು.

'ಮೊಯ್ಲಾಂಜಿ' (ಮೆಹೆಂದಿ) ಕಾರ್ಯಕ್ರಮ ಮದುಮಗಳು ಮತ್ತು ಮದುಮಗ ಇಬ್ಬರ ಮನೆಗಳಲ್ಲೂ ನಡೆಯುತ್ತಿತ್ತು. ಆಗ ಈಗಿನಂತೆ ರೆಡಿಮೆಡ್ ಮೆಹೆಂದಿ ಇರಲಿಲ್ಲ. ಮೊದಲ ದಿನವೇ ಮೆಹೆಂದಿ ಸೊಪ್ಪು ಕೊಯ್ದು ತಂದು ಅದನ್ನು ಕಡೆಯುವ ಕಲ್ಲಿನಲ್ಲಿ ಅರೆದು ಇಡುತ್ತಿದ್ದರು. ಮದುಮಗಳಿಗೆ ಹೊಸ ಸೀರೆ, ಕುಪ್ಪಸ, ರುಮಾಲು, ಆಭರಣ ಗಳನ್ನೆಲ್ಲ ತೊಡಿಸಿ ಒಂದು ಕುರ್ಚಿಯಲ್ಲಿ ಕುಳ್ಳಿರಿಸಿ ಮೆಹೆಂದಿ ಇಡುತ್ತಿದ್ದರು. ಆಗ ಹೆಂಗಸರೆಲ್ಲ ಸುತ್ತ ಸೇರಿ ಕೈತಟ್ಟಿ ಹಾಡುತ್ತಿದ್ದರು. ಉಯ್ಯಾಲೆ ಇದ್ದ ಮನೆಯಲ್ಲಿ ಮದುಮಗಳನ್ನು ಅದರಲ್ಲಿ ಕುಳ್ಳಿರಿಸಿ ತೂಗುತ್ತಿದ್ದರು. ಅಂದು ರಾತ್ರಿ ಇಡೀ ಮಹಿಳೆಯರು ಹಾಡು, ತಮಾಷೆಯ ಸಂಭ್ರಮದಲ್ಲೇ ಕಳೆಯುತ್ತಿದ್ದರು.

ಆಗ ಹಾಡುತ್ತಿದ್ದ ಹಾಡುಗಳಲ್ಲಿ ಕೆಲವು ಜನಪ್ರಿಯ ಹಾಡುಗಳ ಕೆಲವು ಚರಣಗಳು

ಅಮ್ಮ ಹೇಳುತ್ತಿದ್ದುದು ನನಗೆ ಈಗಲೂ ನೆನಪಿದೆ.

ಆದಿ ಅಮ್ಮೈತೆ ಆನುಂ ಪೆನ್ನಿಲ್
ಅಖಿಲರಿವಾಯೆ – ಇಸ್ಲಾಮ್
ಆಯವರ್ ಅಳವಲ್ ಆವಿಶ್ಯಮರಿವದ್
ವಾಜಿಬದಾಯೇ

ಆದರವಾಯೆ ಮುತ್ತು ಮುಹಮ್ಮದ್
ಅನ್ನಬಿಯಾರೇ ಇರುಪದ್
ವಾಪಾನ್ಮಾರುಡೆ ನಾಮಮಿದಾ
ಪರಯುನ್ನರಿವೀರೇ

ಆದಿಯರ್ ಅಬ್ದುಲ್ಲಾಹಿ, ವಅಬ್ದುಲ್
ಮುತ್ತಲಿಬಾನೋರ್ ಹಾಶಿಂ,
ಅಬ್ದುಲ್ ಮನಾಫ್, ಖುಶಯ್ಯ್, ಕಿಲಾಬ್
ಎಂಡಾರ್‌ಇದಿಲಾಯೆ

ಈ ಹಾಡನ್ನು ಎಲ್ಲ ಕಾರ್ಯಕ್ರಮಗಳಲ್ಲೂ ಹೆಂಗಸರು ಹಾಡುತ್ತಿದ್ದರು. ಇದು ಪ್ರವಾದಿ ಮುಹಮ್ಮದ್ (ಸ)ರ ತಂದೆ, ತಾತ, ಮುತ್ತಾತಂದಿರನ್ನು ಪರಿಚಯಿಸುವ ಹಾಡು.

ಆಗ ತುಂಬಾ ಪ್ರಚಾರದಲ್ಲಿದ್ದ ಇನ್ನೊಂದು ಹಾಡು –

ತಶ್ರಿಫುಂ ಮುಬಾರಕಾದರ ವಾಯನೆಬಿಯುಮ್ಮತ್ತಿಮಾರ್ಕ್
ತಾನಮಾನಿದ ಮಾನಮಾಯ್ ಮೇಲಾಯ ನೆಬಿಯುಮ್ಮತ್ತಿಮಾರ್ಕ್
ತಶ್ರಿಪ್ ಬಂದಾಮಿನಾಬಿ ಪೆಟ್ಟ ಪೈದಲ್ ಮಾದಿಯಾರ್ಕ್
ತಂಗಮಾನನ ಮೇನಿಯಾತ ಮೈಪುದಕ್ಕಾನ್ ವನ್ನದಲ್ಲೊ

ತಶ್ರಫಾಲಂ ಅಬಾನ ನೂರ್ ಮುಝ್ಝುಮ್ಮಿಲುಂ ಮೌಲೂದ್ ನಾಳಿಲ್
ಅಂದ ರಕ್ಷತ್ತಾಲೆ ವನ್ನ ಪೈದಲೇ ಪುದೈತ ಮೆನ್ಮಾ
ಮಶ್ರಿಫೋಡ್ ಮಗ್ರಿಬೋಳಂ ಭೂಮಿ ಆಗಾಶತ್ತಿನೆಲ್ಲಾಂ
ಮುಬಾಕುಂ ಮುಬಾರಕಾದರವಾಕಿ ಅಲ್ಲಾ ನೆಬಿಯುಲ್ಲಾಕ್

....................................

ಈ ಹಾಡು ನನಗೆ ಬಹಳ ಇಷ್ಟ. ಇನ್ನು ಮದುಮಗ ಮದುಮಗಳ ಮನೆಗೆ ಮೆರವಣಿಗೆಯಲ್ಲಿ ಬರುವಾಗ ಜೋರಾಗಿ

ಸ್ವಲಾವಾತಿ ಆಲನ್ನಬಿ ವಸ್ಸಲಾಮಿ
ವಹುವ ಖೈರುಲ್ ಆನಾಮಿಂಬದ್‌ರೂತ್ತಮಾಮಿ

.........................................

ಇದಕ್ಕೆ ಸ್ವಲಾತ್ ಎಂದು ಹೇಳುವುದು.

ಇನ್ನೊಂದು ಜನಪ್ರಿಯ ಹಾಡು ಅಮ್ಮ ಹೇಳುತ್ತಿದ್ದುದು ನನಗೆ ನೆನಪಿದೆ. ಈ ಹಾಡು ಪ್ರವಾದಿ ಮುಹಮ್ಮದ್ (ಸ)ರ ಚಿಕ್ಕಪ್ಪ ಹಂಝ (ರ) ಅವರ ಪರಾಕ್ರಮದ ಕುರಿತು ರಚಿಸಿರುವ ಒಂದು ಸಮರಗೀತೆ. ಇದನ್ನು 'ಸಬಿನ ಪಾಟ್' ಎಂದು ಕರೆಯುತ್ತಾರೆ. ಹೆಚ್ಚಾಗಿ ಮದುವೆ ದಿನ, ಮೋತುಬಲೆ ದಿನ, 'ಕಬಿ' ಸ್ಪರ್ಧೆಗಳಲ್ಲಿ ಇದನ್ನು ಹಾಡುತ್ತಿದ್ದರು. ಇದರ ಮೂರು ಚರಣ ನನಗೆ ಈಗಲೂ ತಿಳಿದಿದೆ.

ವಂಬುಟ್ಟ ಹಂಝ ರಳಿಯಲ್ಲಾ ಚಾಡಿ
ಟ್ಟಂಬಿ ಅಸ್ವದಿಲ್ ಮಾರಡಾ
ವಳ್ಳಲ್ ನೆಬೀ ಮಹಮೂದರ್ ಹೌಳಿನ್ನ್
ವೆಲ್ಲಂ ಕುಡಿಕ್ಕುನ್ನೊನಾರಡಾ

ವಂಬರ್ ಶಫೀವುಲ್ಲಾ ಕಾವಳ್ ವೆಚ್ಚುಳ್ಳ
ಸಂಬಾರಮಿಲ್‌ವನ್ನು ಚೇರಡಾ
ಖೈರುಲ್‌ವರಾ ನೆಬಿಯಾರ್ ಕುಳತ್ತಿನ್ನ್
ದೈರಿಯಮುಂಡೆಂಗಿಲ್ ಕೋರೆಡಾ

ವಂಬನ್ ಮಾರುಂಡೆಂಗಿಲ್ ಇಾನೊನ್ನು ಕಾನಟ್ಟೆ
ವನ್ನ್ ವಿಳತ್ತೋಡೆ ವೆಳ್ಳಂ ಕುದಿಚ್ಚಾಟೆ
ಕುಂಬಿಕ್ಕಲ್ ಮಾಮಾಂಗಂ ಪೊಟ್ಟಿ ಉಳಮಟ್ಟಿಲ್
ಕೊರಿಯ ವಾಕಿನೆ ಕೇಟ್ ವೆಳಿಪೆಟ್ಟೆ
ಸಂ ಸಾರಿಗಾ ಸಾರಿಗಾ
ಪಮಗರಿ–ದಂಗಾರಿ ಮಾಗರಿಗಾ

.............................................

ಇವೆಲ್ಲ ಅರಬಿ ಮಲಯಾಳಂ ಭಾಷೆಯಲ್ಲಿರುವ ಹಾಡುಗಳು. ಇಂತಹ ಹಾಡು, ಸಬಿನಗಳನ್ನೆಲ್ಲ ನಾನು ಆಗಾಗ ಅಮ್ಮನಲ್ಲಿ ಹಾಡಲು ಒತ್ತಾಯಿಸುತ್ತಿದ್ದೆ. ಮೇಲಿನ ಹಾಡುಗಳನ್ನೆಲ್ಲ ಅಮ್ಮ ತುಂಬಾ ಇಂಪಾಗಿ, ರಾಗವಾಗಿ ಹಾಡುತ್ತಿದ್ದರು.

'ಮೌಲೂದು' ಎಂದರೆ ಒಂದು ಧಾರ್ಮಿಕ ಕಾರ್ಯಕ್ರಮ. ಪ್ರವಾದಿವರ್ಯರ, ಮಹಾಪುರುಷರ ಸ್ಮರಣೆ ಮಾಡುವುದು ಇದರ ಉದ್ದೇಶ. ಒಂದು ರಾತ್ರಿ ಈ ಕಾರ್ಯಕ್ರಮ ಇರುತ್ತಿತ್ತು. ಈ ಕಾರ್ಯಕ್ರಮಕ್ಕೆ ನೆಂಟರು, ನೆರೆಹೊರೆಯವರೆಲ್ಲ ಸೇರುತ್ತಿದ್ದರು. ಹೆಚ್ಚಾಗಿ ಪುರುಷರೇ ಇದರಲ್ಲಿ ಪಾಲ್ಗೊಳ್ಳುವುದು. ಚಾವಡಿಯಲ್ಲಿ ನೆಲಕ್ಕೆ ಚಾಪೆ ಹಾಸಿ ಪುರುಷರೆಲ್ಲ ಅದರಲ್ಲಿ ಕುಳಿತುಕೊಳ್ಳುವರು. ಅವರ ಮುಂದೆ ಧರ್ಮಗುರುಗಳು, ಮನೆಯ, ಊರಿನ ಗಣ್ಯರು ಸಾಲಾಗಿ ಕುಳಿತುಕೊಳ್ಳುವರು. ಗುರುಗಳ ಮುಂದೆ ಒಂದು ಮಣೆಯಲ್ಲಿ

ಧೂಮ ಹಾಕುವ ಮಣ್ಣಿನ ಪಾತ್ರೆಗೆ ಕೆಂಡ ತುಂಬಿ ಅದರ ಜೊತೆಗೆ ಒಂದು ಪಾತ್ರೆಯಲ್ಲಿ ಲೋಬಾನ ಇಡುವರು. ಒಂದು ಗ್ಲಾಸ್‌ನಲ್ಲಿ ಅರ್ಧದವರೆಗೆ ಅಕ್ಕಿ ಕಾಳು ಹಾಕಿ ಊದಿನ ಕಡ್ಡಿಗಳನ್ನು ಹೊತ್ತಿಸಿ ಆ ಅಕ್ಕಿಯಲ್ಲಿ ಸಿಕ್ಕಿಸಿ ಲೋಬಾನ ಪಾತ್ರೆಯ ಬಳಿ ಇಡುತ್ತಿದ್ದರು. ಒಂದು ದಿಂಬಿಗೆ ಬಿಳಿ ಬಟ್ಟೆ ಸುತ್ತಿ ಅದನ್ನು ಗುರುಗಳ ಮುಂದೆ ಇಟ್ಟು ಮೌಲೂದು ಗ್ರಂಥವನ್ನು ಅದರ ಮೇಲೆ ಇಡುತ್ತಿದ್ದರು. ಮನೆಯ ಹಿರಿಯ ವ್ಯಕ್ತಿಯೊಬ್ಬರು ಪಾತ್ರೆಯಲ್ಲಿದ್ದ ಲೋಬಾನದ ಕೆಲವು ಹರಳುಗಳನ್ನು ಕೆಂಡಕ್ಕೆ ಹಾಕಿದ ತಕ್ಷಣ ಮೌಲೂದು ಪ್ರಾರಂಭವಾಗುತ್ತಿತ್ತು. ಬಳಿಕ ಲೋಬಾನ ಹಾಗೂ ಕೆಂಡದ ಪಾತ್ರೆಗಳನ್ನು ಹಿಡಿದುಕೊಂಡು ಒಬ್ಬ ಎಲ್ಲರ ಬಳಿ ಬರುವನು. ಎಲ್ಲರೂ ಒಂದೆರಡು ಲೋಬಾನದ ಹರಳುಗಳನ್ನು ತೆಗೆದು ಕೆಂಡಕ್ಕೆ ಹಾಕುವರು. ಇಡೀ ಮನೆ ಊದಿನ ಕಡ್ಡಿ ಮತ್ತು ಲೋಬಾನದ ಹೊಗೆ, ಸುವಾಸನೆಯಿಂದ ತುಂಬಿಹೋಗುತ್ತಿತ್ತು. ಅನಂತರ ಮುಹಿಯುದ್ದೀನ್ ಮಾಲೆ, ನಫೀಸತ್ ಮಾಲೆ (ಮಹಾಪುರುಷರ ಸಂಸ್ಮರಣೆ), ಯಾಸೀನ್ ಓದುವುದೂ ಇತ್ತು. ಕಲ್ಲುಸಕ್ಕರೆ, ಓಲೆಬೆಲ್ಲ, ಖರ್ಜೂರ, ಕಡಲೆ ಮಿಠಾಯಿ ಮುಂತಾದವುಗಳನ್ನು ಅಲ್ಲಿದ್ದವರಿಗೆಲ್ಲ ಪ್ರಸಾದರೂಪದಲ್ಲಿ ಹಂಚುತ್ತಿದ್ದರು. ಈ ಕಾರ್ಯಕ್ರಮ ಮದುಮಗ–ಮದುಮಗಳು ಇಬ್ಬರ ಮನೆಗಳಲ್ಲೂ ನಡೆಯುತ್ತಿತ್ತು.

ಹೆಣ್ಣಿನ ಕಡೆಯವರು ಗಂಡಿನ ಮನೆಗೆ ನಿಖಾಹ್‌ಗೆ ಹೋಗುವುದು ರಿವಾಜು. ಬ್ಯಾಂಡ್, ಚೀನಕೋಲು (ಈಗ ಬಸವ ಆಡಿಸುತ್ತಾ ಬರುವಾಗ ಬಾರಿಸುತ್ತಾರಲ್ಲ ಅಂತಹದ್ದು), ಕೊಂಬು, ವಾದ್ಯ ಬಾರಿಸುತ್ತಾ ಗರ್ನಲ್, ಸಿಡಿಮದ್ದುಗಳನ್ನು ಸಿಡಿಸುತ್ತಾ ಹತ್ತಾರು ಗ್ಯಾಸ್‌ಲೈಟ್‌ಗಳ ಬೆಳಕಿನಲ್ಲಿ ನಿಖಾಹ್‌ಗೆ ಮೆರವಣಿಗೆಯಲ್ಲಿ ಬರುವುದು.

ಬಂದವರಿಗೆ ಮೊದಲಿಗೆ ಕಲಸಿದ ಅವಲಕ್ಕಿ, ಬಾಳೆಹಣ್ಣಿನ ಫಲಾಹಾರ. ಇದಕ್ಕೆ 'ಉಲುಪೆ' ಇಡುವುದು ಎಂದು ಹೇಳುತ್ತಿದ್ದರು. ಇದಾದ ಮೇಲೆ ಚಪ್ಪರದಲ್ಲಿ ನಿಖಾಹ್‌ಗೆಂದೇ ಒಂದು ಮಂಚ, ಅದಕ್ಕೆ ಬಿಳಿ ಮುಂಡು ಹಾಸುತ್ತಿದ್ದರು. ಇದನ್ನು ಮದುಮಗಳ ದೊಡ್ಡಪ್ಪ ಅಥವಾ ಚಿಕ್ಕಪ್ಪ ಹಾಸುವುದು ಪದ್ಧತಿ. ಈ ಮುಂಡನ್ನು ಹೆಣ್ಣಿನ ಕಡೆಯವರು ಬರುವಾಗ ತೆಗೆದುಕೊಂಡು ಬರಬೇಕು. ಈ ರೀತಿ ಹಾಸುವ ಮುನ್ನ ತುಂಬಿದ ಸಭೆಯ ಅನುಮತಿ ಕೇಳಲಿಕ್ಕಿತ್ತು. 'ಸಾವಿರ ಜಮಾಅತ್‌ನ ಒಪ್ಪಿಗೆಯೊಂದಿಗೆ ನಾನು ನಿಖಾಹ್ ಬಟ್ಟೆ ಹಾಸುತ್ತೇನೆ. ಇದಕ್ಕೆ ನಿಮ್ಮೆಲ್ಲರ ಒಪ್ಪಿಗೆಯಾ?' ಎಂದು ಜೋರಾಗಿ ಕೇಳುವಾಗ ಕೂಡಿದವರು 'ಏನು ಹೇಳಿದಿರಿ... ನಮಗೆ ಕೇಳಲಿಲ್ಲ... ಇನ್ನೊಮ್ಮೆ ಜೋರಾಗಿ ಹೇಳಿ...' ಎಂದು ತಮಾಷೆಗೆ ಎರಡು ಮೂರು ಸಲ ಹೇಳಿಸುವುದಿತ್ತು. ಬಳಿಕ ಸಭೆ ಅನುಮತಿ ನೀಡುತ್ತಿತ್ತು. ಸಾಮಾನ್ಯವಾಗಿ ನಿಖಾಹ್ ಮುಗಿದ ಮೇಲೆ ಈ ಬಟ್ಟೆಯನ್ನು ಮೌಲವಿಯವರಿಗೆ ಕೊಡುವ ಪದ್ಧತಿ.

ನಿಖಾಹ್‌ಗೆ ಮೊದಲು 'ಮೆಹರ್' (ವಧುದಕ್ಷಿಣೆ) ಎಷ್ಟೆಂದು ತೀರ್ಮಾನವಾಗಲಿಕ್ಕಿತ್ತು. ಈ ವಿಷಯದಲ್ಲಿ ಗಂಡು–ಹೆಣ್ಣಿನ ಕಡೆಯವರಿಂದ ಬಹಳ ಚರ್ಚೆ ನಡೆಯುತ್ತಿತ್ತು. ವಧುವಿನ ಕಡೆಯವರದ್ದು ಪ್ರತಿಷ್ಠಿತ 'ಇಲ್ಲ'ವಾದರೆ ಹೆಚ್ಚು ವಧುದಕ್ಷಿಣೆ ಕೊಡಬೇಕೆಂಬುದು

ಅವರ ವಾದ. 'ಇಲ್ಲ' ಅನುಸರಿಸಿ ವಧುದಕ್ಷಿಣೆ ತೀರ್ಮಾನಿಸಿ ನಿಖಾಹ್ ಪುಸ್ತಕದಲ್ಲಿ ಬರೆಸುವುದು ಪದ್ಧತಿ. ಈ ಚರ್ಚೆ ಬಹಳ ಗಂಭೀರತೆ ಪಡೆದು ನಿಖಾಹ್ ನಡೆಯದೆ ವಧುವಿನ ಕಡೆಯವರು ಹಿಂದಿರುಗಿದ್ದೂ ಇತ್ತು. ಮದುವೆ ನಡೆಯದಿದ್ದರೂ ಪರವಾಗಿಲ್ಲ, ನಮ್ಮ ಮನೆತನದ ಗೌರವ, ಪ್ರತಿಷ್ಠೆಗೆ ಕುಂದುಂಟಾಗಬಾರದು ಎನ್ನುವುದು ಆಗಿನ ಜನರ ಮನಸ್ಥಿತಿಯಾಗಿತ್ತು ಎಂದು ಅಮ್ಮ ಹೇಳುತ್ತಿದ್ದರು.

ಗಂಡು–ಹೆಣ್ಣಿನದ್ದು ಒಂದೇ 'ಇಲ್ಲ' ಎಂದಾದರೆ ಮದುವೆ ನಡೆಯುವುದಿಲ್ಲ. ತುಳುವರಲ್ಲಿ ಈ ಪದ್ಧತಿ ಈಗಲೂ ಕೆಲವು ಕಡೆ ಇದೆ. ನಮ್ಮಲ್ಲಿ ಈಗ ಇಲ್ಲ. ಈಗಿನವರಿಗೆ 'ಇಲ್ಲ' ಎಂದರೆ ಏನು ಎಂಬುದೇ ಗೊತ್ತಿಲ್ಲ. ತುಳುವಿನಲ್ಲಿ ಇದಕ್ಕೆ 'ಬರಿ' ಎನ್ನುತ್ತಾರೆ. ಅವರಲ್ಲೂ ಒಂದೇ 'ಬರಿ'ಯವರಲ್ಲಿ ಸಂಬಂಧ ನಡೆಯುವುದಿಲ್ಲ. ಈ ಬ್ಯಾಂಡ್, ಚೀನಕೋಲು ಬಾರಿಸುವವರಿಗೆ 'ಇಲ್ಲ' ಇರುವುದಿಲ್ಲ. ಇವರನ್ನು ಅಸ್ಪೃಶ್ಯರೆಂಬಂತೆ ಕಾಣಲಾಗುತ್ತಿತ್ತು. ಇವರಿಗೆ ಸಾಮೂಹಿಕ ಭೋಜನಕೂಟದಲ್ಲಿ ಅವಕಾಶ ಇರುತ್ತಿರಲಿಲ್ಲ. ಇವರನ್ನು ಬೇರೆಯೇ ಕುಳ್ಳಿರಿಸಿ ಊಟ ನೀಡಲಾಗುತ್ತಿತ್ತು.

ಚಾಮುಕ್ಕು ಬೆಲಿಯಜ, ಸುಲ್ತಾನ್ ಬೆಲಿಯಜ, ಅಕ್ಕ ಬೆಲಿಯಜ (ಇವರೆಲ್ಲ ಪ್ರತಿಷ್ಠಿತ 'ಇಲ್ಲ'ದವರು), ಚಾರೆಪ್ಪಲ್‌ಮಾರ್, ಕೂಡಂಕಾರ್, ಪಡವುಕಾರ್, ಪಲಯೊ ಪಡವುಕಾರ್, ಪುದಿಯೊ ಪಡವುಕಾರ್, ಕೈಸೆರೆ ಕೂಟಕ್ಕಾರ್, ಪಾಟ್ಲೆಕಾರ್, ಶಾಲಿಡೊ ಡೊಂಗರ್, ಮಾಪುಳತ್ತಜ ಇವೆಲ್ಲ ಕೆಲವು 'ಇಲ್ಲ'ದ ಹೆಸರುಗಳು. ನನ್ನ 'ಇಲ್ಲ' ಪಾಟ್ಲೆಕಾರ್. 'ಇಲ್ಲ' ತುಳುವರ 'ಇಲ್ಲ್' (ಮನೆ)ನಿಂದ ಬಂದ 'ಮನೆತನ'ದ ಹೆಸರು ಆಗಿರಬೇಕು ಎನ್ನುವುದು ಕೆಲವರ ಅಂಬೋಣ.

ವಧುದಕ್ಷಿಣೆ ಆಗ 'ಆಮಾಡೆ' ಅಥವಾ 'ಬಿರಿಯಾನ್' ಲೆಕ್ಕದಲ್ಲಿ ನಿಖಾಹ್ ಪುಸ್ತಕದಲ್ಲಿ ಬರೆಸುತ್ತಿದ್ದರು. 'ಆಮಾಡೆ' ಎಂದರೆ ಚಿನ್ನದ ನಾಣ್ಯ. 'ಬಿರಿಯಾನ್' ಎಂದರೆ ಬೆಳ್ಳಿನಾಣ್ಯ (ವರಹ). ಈ ನಾಣ್ಯಗಳಿಗೆ ಬೆಲೆ ಹೆಚ್ಚಾದ ಬಳಿಕ 'ಆಮಾಡೆ'ಗೆ ಐದು ರೂಪಾಯಿ, 'ಬಿರಿಯಾನ್'ಗೆ ನಾಲ್ಕು ರೂಪಾಯಿ ಲೆಕ್ಕದಲ್ಲಿ ಬರೆಸತೊಡಗಿದರು. ವಧುದಕ್ಷಿಣೆಯನ್ನು ಈಗಿನಂತೆ ಹೆಣ್ಣಿಗೆ ಕೊಡುವ ಪದ್ಧತಿಯೇ ಇರಲಿಲ್ಲ. ಪುಸ್ತಕದಲ್ಲಿ ಬರೆಸುವುದು ಮಾತ್ರ.

ನಿಖಾಹ್‌ಗೆ ಮೊದಲು ನಿಖಾಹ್ ಸ್ನಾನಾಂತ ಮಾಡಿಸಲಿಕ್ಕಿತ್ತು. ಇದಕ್ಕೆ 'ಕಾಯಿನ್ತೊಕುಲಿ' ಎನ್ನುತ್ತಿದ್ದರು. ಇದು ಈಗಲೂ ಕೆಲವು ಕಡೆ ಇದೆ. ಮದುಮಗನ ಬಾವ ಅಥವಾ ಅದಕ್ಕೆ ಅರ್ಹ ಎಂದು ಗುರುತಿಸುವವರು ಮಾತ್ರ ಈ ಸ್ನಾನದ ಮೊದಲ ನೀರು ಹಾಕುವುದು. ಹಾಲು ಬೆರೆಸಿದ ನೀರು ಅಥವಾ ಬರೀ ನೀರನ್ನು ಒಂದು ಚೊಂಬು ಮದುಮಗನ ತಲೆಗೆ ಸುರಿಯುವ ಹಕ್ಕು ಇವರಿಗೆ ಮಾತ್ರ. ಅದು ಅವರಿಗೆ ಸಲ್ಲುವ ಗೌರವ. ಅದನ್ನು ಅವರು ಯಾವ ಕಾರಣಕ್ಕೂ ಬಿಟ್ಟುಕೊಡುತ್ತಿರಲಿಲ್ಲ. ಅನಂತರ ವರ ಸ್ನಾನ ಮಾಡಿಬಂದು ಬಿಳಿ ಮುಂಡು, ಬಿಳಿ ಅಂಗಿ, ಟೊಪ್ಪಿ ಧರಿಸಿ, ಸೆಂಟು ಪೂಸಿ, ತಂದೆ–ತಾಯಿ, ಹಿರಿಯರ ಆಶೀರ್ವಾದ ಪಡೆದು ನಿಖಾಹ್‌ಗೆ ಕುಳಿತುಕೊಳ್ಳಲು ಅನುಮತಿ ಬೇಡಬೇಕು. ಬಳಿಕ ಬಾವಂದಿರು ನಿಖಾಹ್ ಮಂಟಪಕ್ಕೆ ಕರೆತರುವುದು.

ನಿಖಾಹ್ ಆದ ನಂತರ ಮದುಮಗನನ್ನು ಚಪ್ಪರದ ಮಧ್ಯೆ ಒಂದು ಕುರ್ಚಿಗೆ ಬಿಳಿಬಟ್ಟೆ ಹಾಸಿ ಅದರಲ್ಲಿ ಎಲ್ಲರಿಗೂ ಕಾಣುವ ಹಾಗೆ ಕುಳ್ಳಿರಿಸುತ್ತಿದ್ದರು. ಅವನ ಮುಂದೆ ಒಂದು ಮೇಜು ಇಟ್ಟು ಅದರಲ್ಲಿ ಒಂದು ದೊಡ್ಡ ಹರಿವಾಣ ಇಡುತ್ತಿದ್ದರು. ಆ ಹರಿವಾಣದಲ್ಲಿ ಎಲ್ಲರೂ ಹಣ (ಕವರ್) ಇಡುತ್ತಿದ್ದರು. ಹಣ ಇಡದ ಮದುವೆ ಆಗ ಇಲ್ಲವೇ ಇಲ್ಲ. ಈ ಹಣ ಮೊದಲು ಇಡುವುದು ಊರಿನ ಮುಖಂಡ. ನಂತರ ಮನೆ ಅಳಿಯ. ಇದು ಅವರ ಮರ್ಯಾದೆ. ಬೇರೆ ಯಾರು ಇಟ್ಟರೂ ಅಳಿಯನ ಗಲಾಟೆ. ತುಳುವರಲ್ಲೂ ಈ ಸಂಪ್ರದಾಯವಿತ್ತು. ಅವರಲ್ಲಿ ಮೊದಲು ಹಣ ಇಡುವುದು ಊರಿನ ಗುತ್ತಿನ ಯಜಮಾನ. ಬೇರೆ ಯಾರಾದರೂ ಆ ಅವಕಾಶವನ್ನು ದುರುಪಯೋಗ ಪಡಿಸಿಕೊಂಡರೆ ಅಲ್ಲಿ ಜಗಳವೇ ಆರಂಭವಾಗಿಬಿಡುತ್ತಿತ್ತು. ಇದು ಗುತ್ತಿನ ಯಜಮಾನನಿಗೆ ಮಾಡುವ ಅವಮಾನವೆಂದೇ ಪರಿಗಣಿಸಲಾಗುತ್ತಿತ್ತು. ಈ ಹಣ ಇಡುವುದು ವರ–ವಧು ಇಬ್ಬರ ಮನೆಗಳಲ್ಲೂ ಇರುತ್ತಿತ್ತು. ಹೀಗೆ ಇಟ್ಟ ಹಣವನ್ನು ಅವರ ಹೆಸರು – ಮೊತ್ತವನ್ನು ಒಂದು ಪುಸ್ತಕದಲ್ಲಿ ಬರೆದಿಡಲಾಗುತ್ತಿತ್ತು. ಮುಂದೆ ಹಣ ಇಟ್ಟವರ ಮನೆಯಲ್ಲಿ ಮದುವೆ, ಶುಭಕಾರ್ಯಗಳೇನಾದರೂ ಆಗುವಾಗ ಅವರಿಟ್ಟ ಹಣಕ್ಕೆ ಏನಾದರೂ ಸ್ವಲ್ಪ ಸೇರಿಸಿ ಹಿಂದಿರುಗಿಸಬೇಕಾಗುತ್ತಿತ್ತು. ಹೀಗೆ ಹಿಂದಿರುಗಿಸದಿದ್ದರೆ ಮದುವೆ ಕಳೆದ ಮೇಲೆ ಅಂತಹವರ ಮನೆಗೆ ಜನ ಕಳುಹಿಸಿ ಕೇಳುವುದೂ ಇತ್ತು.

ನಿಖಾಹ್ ಆಗಿ ವಧುವಿನ ಕಡೆಯವರು ಮರಳಿದ ಬಳಿಕ ವರ ಬಂದಿ (ಮಾಲೆ) ಹಾಕಲು ವಧುವಿನ ಮನೆಗೆ ಹೋಗುವುದು. ಇದು ಹತ್ತಿರವಾದರೆ ಅಂದೇ, ದೂರವಾದರೆ ಮರುದಿನ ಹೋಗುತ್ತಿದ್ದರು. ಈ ಕಾರ್ಯಕ್ರಮಕ್ಕೆ ಗೆಳೆಯರು, ಪುರುಷರಿಗೆಲ್ಲ ಬೇರೆಯೇ ಹೇಳಿಕೆ ಕೊಡಬೇಕು. 'ಇಂದು ರಾತ್ರಿ ವರ ಬಂದಿ ಹಾಕಲು ಹೋಗುವುದು. ನೀವೆಲ್ಲ ಬರಬೇಕು' ಎಂದು ಕರೆಯದಿದ್ದರೆ ಯಾರೂ ಬರುವುದಿಲ್ಲ. ಬಡವರಾದರೆ ವರ ನಡೆದುಕೊಂಡು ಹೋಗುವುದು. ಶ್ರೀಮಂತರಾದರೆ ಕುದುರೆಯಲ್ಲಿ. ಉಳಿದವರು ನಡೆದುಕೊಂಡು. ಬ್ಯಾಂಡ್, ಚೀನಕೋಲು, ವಾದ್ಯ, ಕೊಂಬು ಊದುತ್ತಾ ಜೊತೆಗೆ ಪಲಿಯತಟ್ಟ್, ದಫ್ಫು, ತಾಲೀಮು ಆಡುತ್ತಾ ಸುಡುಮದ್ದುಗಳನ್ನು ಸಿಡಿಸುತ್ತಾ, ದುರ್ಸುಗಳನ್ನು ಹಚ್ಚುತ್ತಾ ಹೋಗುವುದು. ಆಗ ಇಡೀ ಊರಿನ ಜನರೆಲ್ಲ ದಾರಿಯ ಇಕ್ಕೆಲಗಳಲ್ಲಿ ನಿಂತು ನೋಡುವರು. ಕೆಲವು ಮನೆಯವರು ಗ್ಲಾಸ್‌ನಲ್ಲಿ ಹಾಲು ತಂದು ಮದುಮಗನನ್ನು ತಡೆದು ಅವನ ಕೈಯಲ್ಲಿ ಕೊಡುವರು. ಅವನು ಅದರಲ್ಲಿ ಸ್ವಲ್ಪ ಕುಡಿದು ಮಿಕ್ಕಿದ್ದನ್ನು ತನ್ನ ಜೊತೆ ಇರುವ ಗೆಳೆಯರಿಗೆ ಕೊಡುತ್ತಿದ್ದ. ಅಂದು ಆ ಊರಿಗೆ ಒಂದು ಉತ್ಸವವೇ.

ಮಕ್ಕಳು, ಮಹಿಳೆಯರು ಮೆರವಣಿಗೆ ಬರುವವರೆಗೆ ಮಲಗುವುದಿಲ್ಲ. ಎಷ್ಟು ತಡವಾದರೂ ಕಾಯುತ್ತಿದ್ದರು. ದೀವಟಿಗೆಯ ಬೆಳಕಿನಲ್ಲಿ ಬರುವ ಮೆರವಣಿಗೆ ಆ ಇಡೀ ಊರಿಗೆ ಒಂದು ಸಂಭ್ರಮ. ದಾರಿಯುದ್ದಕ್ಕೂ ಆ ದೀವಟಿಗೆಗೆ ಎಣ್ಣೆ ಸುರಿಯುತ್ತಾ ಇರುತ್ತಿದ್ದರು. ಎಣ್ಣೆಯ ಡಬ್ಬವನ್ನು ಒಬ್ಬ ಆಳು ಮೆರವಣಿಗೆಯುದ್ದಕ್ಕೂ ಹೊತ್ತು ಸಾಗುತ್ತಿದ್ದನು. ಅನಂತರ ಈ ದೀವಟಿಗೆಯ ಬದಲಿಗೆ ಗ್ಯಾಸ್‌ಲೈಟ್ ಬಂತು. ತರತರದ

ಗ್ಯಾಸ್‌ಲೈಟ್‌ಗಳು ಮಂಗಳೂರಿನಲ್ಲಿ ಬಾಡಿಗೆಗೆ ಸಿಗಲಾರಂಭಿಸಿದವು. ಮೂರು–ಐದು ಗ್ಯಾಸ್‌ಲೈಟ್‌ಗಳನ್ನು ಮರದ ಸ್ಟ್ಯಾಂಡ್‌ನಲ್ಲಿ ಜೋಡಿಸಿ ಹೊತ್ತುಕೊಂಡು ಬರುವವರು; ಕುದುರೆ, ಬ್ಯಾಂಡ್‌ಸೆಟ್, ತಾಲೀಮು, ಗ್ಯಾಸ್‌ಲೈಟ್‌ಗೆ ಆಗಾಗ ಗಾಳಿ, ಎಣ್ಣೆ ಹಾಕುವ ಆಳುಗಳು ಎಲ್ಲವೂ ಈ ಬಾಡಿಗೆಯವರಲ್ಲಿ ಸಿಗುತ್ತಿದ್ದವು.

ಮದುಮಗ ಬಂದಿ ಹಾಕಲು ಹೋಗುವ ಮೊದಲೇ ಮದುಮಗನ ಮನೆಯ ಕೆಲವು ಮಹಿಳೆಯರು ಮದುಮಗಳನ್ನು ಕರೆತರಲು, ಸಿಂಗರಿಸಲು ಮದುಮಗಳ ಮನೆಗೆ ಹೋಗಲಿಕ್ಕಿತ್ತು. ಹಾಗೆ ಹೋದ ಮಹಿಳೆಯರು ಮದುಮಗಳ ಮನೆಯೊಳಗೆ ಒಮ್ಮೆಲೇ ಪ್ರವೇಶಿಸುತ್ತಿರಲಿಲ್ಲ. ಎಲ್ಲರಿಗೂ ಕಾಣಿಸುವಂತೆ ಮನೆಯ ಸ್ವಲ್ಪ ದೂರದಲ್ಲಿ ನಿಂತಿರುತ್ತಿದ್ದರು. ಅವರನ್ನು ಕರೆತರಲು ಮದುಮಗಳ ಮನೆಯ ಕೆಲವು ಮಹಿಳೆಯರು ಅವರ ಬಳಿ ಹೋಗಬೇಕು. ಹಾಗೆ ಇವರು ಎದುರ್ಗೊಳ್ಳಲು ಹೋಗುವಾಗ ಇವರು ನಾಲ್ಕು ಹೆಜ್ಜೆ ಮುಂದೆ ಹೋಗಿ ನಿಲ್ಲುವುದು. ಅವರು ನಾಲ್ಕು ಹೆಜ್ಜೆ ಮುಂದೆ ಬಂದು ನಿಲ್ಲುವುದು. ಮತ್ತೆ ಇವರು ನಾಲ್ಕು ಹೆಜ್ಜೆ. ಅವರು ನಾಲ್ಕು ಹೆಜ್ಜೆ... ಹೀಗೆ ಎರಡೂ ಗುಂಪು ಒಟ್ಟಾಗುತ್ತಿದ್ದರು. ಅಲ್ಲಿಂದ ಒಟ್ಟಿಗೆ ಇವರು ಅವರನ್ನು ಮನೆಗೆ ಕರೆತರುತ್ತಿದ್ದರು. ವಧುವಿನ ಮನೆಯ ಮಹಿಳೆಯರು ಎದುರ್ಗೊಳ್ಳಲು ಹೋಗದೆ ವರನ ಕಡೆಯವರು ಯಾವ ಕಾರಣಕ್ಕೂ ಒಂದು ಹೆಜ್ಜೆಯೂ ಮುಂದೆ ಇಡುತ್ತಿರಲಿಲ್ಲ. ಹೀಗೆ ಅಲ್ಲಿ ಬಹಳ ಸಮಯ ವ್ಯಯವಾಗುತ್ತಿತ್ತು. ಮಹಿಳೆಯರು 11 ವೊಲ್ಲಿ, 7 ವೊಲ್ಲಿ ಅಥವಾ 5 ವೊಲ್ಲಿಯಲ್ಲಿ ಬರುತ್ತಿದ್ದರು.

ಚಪ್ಪರಕ್ಕೆ ಬಂದ ಮದುಮಗನನ್ನು ಮದುಮಗಳ ಸಹೋದರ ಬಂದು ಕೈಹಿಡಿದು ಒಳಗೆ ಕರೆದೊಯ್ದು ಮದುಮಗಳ ಪಕ್ಕ ಕುಳ್ಳಿರಿಸುತ್ತಿದ್ದನು. ಆಗ ಮದುಮಗಳ ಸಹೋದರ ಮದುಮಗನ ಕಾಲನ್ನು ತಸ್ತ್ (ಬೇಸಿನ್‌ನಂತಹ ತಾಮ್ರದ ಪಾತ್ರೆ)ನಲ್ಲಿಟ್ಟು ಹಾಲು ಸುರಿಯಬೇಕು. ಆಗ ಮದುಮಗ ತಸ್ತ್‌ಗೆ ಚಿನ್ನದ ಉಂಗುರ ಹಾಕಬೇಕು. ಆ ಉಂಗುರ ಮದುಮಗಳ ಸಹೋದರನಿಗೆ. ಅದು ಅವನ ಹಕ್ಕು. ಹೀಗೆ ಊಟ ಎಲ್ಲ ಆಗಿ ಮದುಮಗ ಹಿಂದಿರುಗುವಾಗ ಅವನ ಮನೆಯಿಂದ ಬಂದ ಮಹಿಳೆಯರೆಲ್ಲ ಕೂಡಿ ಮದುಮಗಳನ್ನು ಸಿಂಗರಿಸಿ ಮದುಮಗನ ಜೊತೆ ಕರೆದೊಯ್ಯುತ್ತಿದ್ದರು. ಎತ್ತಿನಗಾಡಿ, ಶ್ರೀಮಂತರಾದರೆ ಕುದುರೆಗಾಡಿಯಲ್ಲಿ ಮದುಮಗಳು ಹೋಗುವುದಿತ್ತು.

ವರನ ಮನೆಗೆ ಬಂದ ವಧುವನ್ನು ಚಪ್ಪರಕ್ಕೆ ಬರುವ ಮೊದಲು ಎದುರ್ಗೊಳ್ಳಲು ವರನ ಕಡೆಯ ಮಹಿಳೆಯರು ಬರಲೇಬೇಕು. ವಧುವನ್ನು ಮೆಟ್ಟಲ ಕೆಳಗೆ ನಿಲ್ಲಿಸಿ ಒಂದು ಚೊಂಬಲ್ಲಿ ಅರಶಿನ ನೀರಿನಿಂದ ತಲೆ ನಿವಾಳಿಸಿ ತೆಗೆಯಲಿಕ್ಕಿತ್ತು. ಊಟ ಎಲ್ಲ ಆಗಿ ವಧು ಹಿಂದಿರುಗುತ್ತಿದ್ದಳು.

ಮರುದಿನ ಮದುಮಗನನ್ನು ಕರೆದುಕೊಂಡು ಹೋಗಲು ಮದುಮಗಳ ಮನೆಯಿಂದ ಇಬ್ಬರು ಬರಲೇಬೇಕು. ಇಲ್ಲದಿದ್ದರೆ ಮದುಮಗ ಹೋಗುವುದಿಲ್ಲ. ಹಾಗೆ ಬಂದ ಇಬ್ಬರಿಗೆ ಔತಣ ಆಗಲೇಬೇಕು. ಮದುಮಗ ಹೋಗುವಾಗ ಮಲ್ಲಿಗೆ

ಹೂ, ಎಲೆ–ಅಡಿಕೆ, ತಂಬಾಕು ಕೊಂಡುಹೋಗಬೇಕು. ಹೀಗೆ 15ನೇ ತಾಲ (ಹದಿನೈದು ದಿನ)ದವರೆಗೆ ಕೊಂಡುಹೋಗಬೇಕಿತ್ತು.

ಮರುದಿನ ಬೆಳಿಗ್ಗೆ ಮದುಮಗ ಅತ್ತೆಯ ಕಾಲು ಹಿಡಿಯಲಿಕ್ಕಿತ್ತು. ಅದರ ಗೌರವವಾಗಿ ಅತ್ತೆ ಅಳಿಯನಿಗೆ ಚಿನ್ನದ ಉಂಗುರ ನೀಡಬೇಕಿತ್ತು. ಬಳಿಕ ಮದುಮಗಳು ಬಳೆ ಇಡುವುದು, ಮದುಮಗ ಎಣ್ಣೆಸ್ನಾನ ಮಾಡುವುದು, ಅಪ್ಪರಿ ತಾಳ, ನೆಯಿ ಕಂಞಿ, ಮಾಮಿರೊ ಅಪ್ಪ ಹೀಗೆ ದಿನಕ್ಕೊಂದು ಕಾರ್ಯಕ್ರಮ, 15ನೇ ತಾಲದವರೆಗೆ ನಡೆಯುತ್ತಿತ್ತು. ಮಧ್ಯೆ ಮದುಮಗ–ಮದುಮಗಳ ಬಂಧುಗಳ ಮನೆಯಲ್ಲಿ ಇವರಿಗಾಗಿ ಔತಣಕೂಟಗಳನ್ನು ಹಮ್ಮಿಕೊಳ್ಳಲಾಗುತ್ತಿತ್ತು.

15ನೇ ತಾಳಕ್ಕೆ ಮದುಮಗನ ಗೆಳೆಯರೆಲ್ಲ ಕೂಡಿ ಹಾಡುತ್ತಾ ಬಹಳ ವಿಜೃಂಭಣೆ ಯಿಂದ ಮೆರವಣಿಗೆಯಲ್ಲಿ ಹೋಗುವುದು. 15ನೇ ತಾಲ ಎಂದರೆ ಮದುವೆಯಾಗಿ 15ನೇ ರಾತ್ರಿ ಮದುಮಗ ಮದುಮಗಳ ಮನೆಗೆ ಹೋಗುವುದು. ಅಂದಿಗೆ ಮದುವೆ ಸಮಾರಂಭ ಕೊನೆಗೊಳ್ಳುತ್ತಿತ್ತು. ಹಾಗೆ ಹೋಗುವಾಗ ಮಲ್ಲಿಗೆ ಹೂ, ಜಿಲೇಬಿ, ಮಾಲ್ಪುರಿ, ಲಡ್ಡು, ಹಲ್ವ, ಎಲೆಅಡಿಕೆ, ತಂಬಾಕು, ಪರಿಮಳದ ಎಣ್ಣೆ, ಪೌಡರ್, ಸ್ನೋ, ಸ್ನಾನದ ಸಾಬೂನು, ಬಟ್ಟೆ ಒಗೆಯುವ ಸಾಬೂನು, ಬಾಚಣಿಗೆ, ರಿಬ್ಬನ್ ಹೀಗೆ ಬಹಳಷ್ಟು ವಸ್ತುಗಳನ್ನು ದೊಡ್ಡ ದೊಡ್ಡ ಹಲವಾರು ಹರಿವಾಣಗಳಿಗೆ ರೇಶ್ಮೆ ಬಟ್ಟೆ ಹಾಸಿ ಅದರಲ್ಲಿ ಒಂದೊಂದು ತಿಂಡಿಯನ್ನಿಟ್ಟು ಯುವಕರಲ್ಲಿ ಹೊರಿಸಿಕೊಂಡು ಹೋಗುವುದಿತ್ತು. ಹೀಗೆ ಹೋದವರಿಗೆ ಅಲ್ಲಿ ದೊಡ್ಡ ಔತಣಕೂಟವೇ ನಡೆಯುತ್ತಿತ್ತು. ಬಳಿಕ ಮದುಮಗ ಅಲ್ಲಿಯೇ ಉಳಿದು, ಉಳಿದವರೆಲ್ಲ ಹಿಂದಿರುಗುತ್ತಿದ್ದರು.

ಆಗಿನ ಕಾಲದಲ್ಲಿ ಬ್ಯಾರಿಗಳ ಮದುವೆ, ಮುಂಜಿ ಕಾರ್ಯಕ್ರಮಗಳಲ್ಲಿ ಬ್ಯಾಂಡ್ ಬಾರಿಸುತ್ತಿದ್ದರು. ಆಗ ನಮ್ಮಲ್ಲಿ ಎರಡು ಪ್ರಸಿದ್ಧ ಬ್ಯಾಂಡ್ ತಂಡಗಳಿದ್ದವು. ಒಂದು 'ರುಸ್ತುಂ' ಬ್ಯಾಂಡ್ ತಂಡ. ಇನ್ನೊಂದು ತಿಬಾರ್‌ನ ಬೋಜನ ಬ್ಯಾಂಡ್ ತಂಡ. 'ರುಸ್ತುಂ' ತಂಡಕ್ಕೆ ಯೂನಿಫಾರ್ಮ್ ಇತ್ತು. ಈ ತಂಡವನ್ನು ಹೆಚ್ಚಾಗಿ ಶ್ರೀಮಂತರು ತರಿಸುತ್ತಿದ್ದರು. ಬೋಜನ ತಂಡ ಪ್ರಸಿದ್ಧವಾಗಿದ್ದರೂ ಸ್ವಲ್ಪ ಬಡ ತಂಡ.

ಒಮ್ಮೆ ನಮ್ಮೂರಿನ ಬಿ.ಪಿ. ಇಸ್ಮಾಯೀಲ್ ಎಂಬವರ ಅಕ್ಕನ ಮದುವೆಗೆ ಬೋಜನ ತಂಡವನ್ನು ಕರೆಸಿದ್ದರು. ಮದುಮಗನ ಕಡೆಗೆ ರುಸ್ತುಂ ತಂಡ. ಮದುಮಗ ಮದುಮಗಳ ಮನೆಗೆ ಬ್ಯಾಂಡ್‌ನಲ್ಲಿ ಮೆರವಣಿಗೆ ಬಂದಾಗ ಈ ಎರಡೂ ತಂಡಗಳಿಗೆ ಸ್ಪರ್ಧೆ ಏರ್ಪಡಿಸಲಾಯಿತು. ಈ ಸ್ಪರ್ಧೆಯಲ್ಲಿ ಬೋಜನ ತಂಡ ಗೆದ್ದಿತು. ಇದು ಬಿ.ಪಿ. ಇಸ್ಮಾಯೀಲ್ ಕಡೆಯವರಿಗೆ ಬಹಳ ಖುಷಿಯಾಗಿತ್ತು. ಈ ವಿಷಯ ಊರೆಲ್ಲಾ ಸುದ್ದಿಯಾಗಿತ್ತು. ಇದಲ್ಲದೆ ಇನ್ನೊಂದು ಕ್ರಿಶ್ಚಿಯನ್ ಬ್ಯಾಂಡ್ ತಂಡ ಕೂಡಾ ಇತ್ತು. ಅದಷ್ಟು ಪ್ರಚಾರದಲ್ಲಿರಲಿಲ್ಲ.

ನಮ್ಮೂರಲ್ಲಿ ಕುಂಬ್ಡಿಯಾಕಾಂತ ಒಬ್ಬರು ಇದ್ದರು. ಅವರಿಗೆ ಹಣ್ಣಿನ ವ್ಯಾಪಾರ. ಅವರ ಮಗನಿಗೆ ಮದುವೆ. ರಾತ್ರಿ ಸುಮಾರು 11 ಗಂಟೆಗೆ ನಾನೂ ಹೋಗಿದ್ದೆ. ನಾನು

ಹೋಗುವಾಗ ಅಲ್ಲಿ ತುಂಬಾ ಜನ ಸೇರಿದ್ದರು. ಹೆಣ್ಣಿನ ಕಡೆಯವರೂ ನಿಖಾಹ್‌ಗೆ ಬಂದಿದ್ದರು. ಎಷ್ಟು ಕಾದರೂ ಮದುಮಗ ಮನೆಯಿಂದ ಹೊರಬರುವುದು ಕಾಣಿಸಲಿಲ್ಲ. ಆಗ ಎಲ್ಲರೂ ಕುಂಬ್ಡಿಯಾಕನಲ್ಲಿ "ಮದುಮಗ ಎಲ್ಲಿ? ಹೊತ್ತಾಯಿತು ಕರೆಯಿರಿ" ಎಂದಾಗ ಅವರು ಹೇಳಿದರು "ಅವನು ಮನೆಯಲ್ಲಿಲ್ಲ, ಮೈಕ್ ತರಲು ಮಂಗಳೂರಿಗೆ ಹೋಗಿದ್ದಾನೆ. ಅವನಿಗೆ ಮೈಕ್ ಬೇಕೇ ಬೇಕು ಎಂಬ ಹಟ" ಎಂದು. ಎಲ್ಲರಿಗೂ ಆಶ್ಚರ್ಯವಾಗಿತ್ತು. ಹಾಗೆ ನಾವೆಲ್ಲ ಬಹಳ ಹೊತ್ತು ಆತನ ದಾರಿ ಕಾಯುತ್ತಿರುವಾಗ ದೂರದಲ್ಲಿ ಒಂದು ಗ್ಯಾಸ್‌ಲೈಟ್‌ನ ಬೆಳಕು ಕಾಣಿಸಿತು. ಆ ಬೆಳಕು ಹತ್ತಿರವಾಗುತ್ತಿದ್ದಂತೆಯೇ ಆತ ಮೈಕ್ ಹೊತ್ತುಕೊಂಡು ಬರುವುದು ಕಂಡಿತು. ಅದನ್ನು ಮರಕ್ಕೆ ಕಟ್ಟಿ ಸೆಟ್ ಮಾಡಿದ ಮೇಲೆ ಆತ ನಿಖಾಹ್‌ಗೆ ತಯಾರಾಗಿ ಬಂದ. ಆಗ ಸುಮಾರು ಬೆಳಗಿನ ಜಾವ. ಅನಂತರ ನಿಖಾಹ್ ಆಯಿತು. ಹಸಿದು ಕಂಗಾಲಾಗಿದ್ದ ನಾನು ಗಡದ್ದಾಗಿ ನೈಚೋರು ತಿಂದು ಬಂದಿದ್ದೆ.

ಮದುವೆಯಂತೆಯೇ ಸೀಮಂತ ಕೂಡಾ ಬಹಳ ವಿಜೃಂಭಣೆಯಲ್ಲಿ ನಡೆಯುತ್ತಿತ್ತು. ಗರ್ಭಿಣಿಗೆ ಏಳು ತಿಂಗಳು ತುಂಬಿದಾಗ ಗಂಡನ ಮನೆಯವರು ಸೀಮಂತ (ಅಪ್ಪ ಚುಡುರೊ)ದ ದಿನ ನಿಗದಿ ಮಾಡಿ ಹುಡುಗಿಯ ತವರುಮನೆಗೆ ತಿಳಿಸುತ್ತಿದ್ದರು. ಆ ದಿನದಂದು ಹೆಣ್ಣಿನ ತವರುಮನೆಯಿಂದ ಗಂಡಸರು–ಹೆಂಗಸರು ಬ್ಯಾಂಡ್, ಚೀನಕೋಲು, ವಾದ್ಯಗಳೊಂದಿಗೆ ಗಂಡಿನ ಮನೆಗೆ ಹೋಗುವುದು. ತುಂಬ ದೂರವಿದ್ದರೆ ಮೊದಲನೇ ದಿನವೇ ಹೋಗುತ್ತಿದ್ದರು. ಹಾಗೆ ಹೋಗುವಾಗ ಹೂ, ಸಿಹಿತಿಂಡಿಗಳು, ಏನಾದರೂ ಚಿನ್ನಾಭರಣ ಕೊಂಡುಹೋಗುವ ರಿವಾಜು ಇತ್ತು. ಅಂದು ರಾತ್ರಿ ಇಡೀ ಹಾಡುತ್ತಾ ಸಂಭ್ರಮಿಸುತ್ತಾ ಅಲ್ಲೇ ತಂಗುವುದಿತ್ತು.

ಮರುದಿನ ಗರ್ಭಿಣಿಯ ಅಲಂಕಾರ ಮಾಡಿ ತವರುಮನೆಯಿಂದ ತಂದ ಚಿನ್ನಾಭರಣ, ಗಂಡನ ಮನೆಯವರು ಖರೀದಿಸಿದ ಚಿನ್ನಾಭರಣವನ್ನು ಎಲ್ಲರಿಗೂ ತೋರಿಸಿ, ಬೇರೆ ಚಿನ್ನಾಭರಣಗಳನ್ನೆಲ್ಲ ಹಾಕುತ್ತಿದ್ದರು. ಹೀಗೆ ಗರ್ಭಿಣಿಯನ್ನು ಕುರ್ಚಿಯಲ್ಲಿ ಕುಳ್ಳಿರಿಸಿ ಅಲಂಕಾರ ಮಾಡುವಾಗ ಎಲ್ಲ ಮಹಿಳೆಯರೂ ಸುತ್ತ ನೆರೆದು ಚಪ್ಪಾಳೆಯೊಂದಿಗೆ ಲಯಬದ್ಧವಾಗಿ ಹಾಡುತ್ತಿದ್ದರು. ಅನಂತರ ಮಾಂಸದೂಟ ಎಲ್ಲ ಆಗಿ ಬ್ಯಾಂಡ್, ವಾದ್ಯಗಳಲ್ಲಿ ಸಂಭ್ರಮದೊಂದಿಗೆ ತವರುಮನೆಗೆ ಕರೆದೊಯ್ಯುವುದು. ಹೀಗೆ ಹೋಗುವಾಗ ದಾರಿಯುದ್ದಕ್ಕೂ ಇಕ್ಕೆಲಗಳಲ್ಲಿ ಎಲ್ಲ ಜಾತಿಯ ಹೆಂಗಸರು, ಗಂಡಸರು, ಮಕ್ಕಳು ನಿಂತು ನೋಡುತ್ತಿದ್ದರು.

ತವರುಮನೆಯಲ್ಲಿ ಬೇರೆ ಬೇರೆ ತರದ ಅಪ್ಪಗಳನ್ನು ಮಾಡಿ ಗರ್ಭಿಣಿಗೆ ತಿನ್ನಿಸುವುದಿತ್ತು. ಹೆಚ್ಚಾಗಿ ಇರ್ಮಂಡೆಪ್ಪ (ಶಾವಿಗೆ), ಎಣ್ಣೆಡಪ್ಪ (ಎಣ್ಣೆತಿಂಡಿ), ಸಂಕ್ರೋಲಿ, ಗುಳಿಯಪ್ಪ. ಅದರೊಟ್ಟಿಗೆ ಲಡ್ಡು, ಹಲ್ವ, ಜಿಲೇಬಿ, ನೇವರಿ ಎಲ್ಲವನ್ನೂ ಒಂದು ದೊಡ್ಡ ಹರಿವಾಣದಲ್ಲಿ ಇಟ್ಟು ಅದರ ಮುಂದೆ ಗರ್ಭಿಣಿಯನ್ನು ಕುಳ್ಳಿರಿಸಿ, ಸುತ್ತಲೂ ಮಹಿಳೆಯರು ಸೇರಿ ತಿನ್ನಿಸುತ್ತಿದ್ದರು. ಊಟವೂ ಹಾಗೆಯೇ. ಎಲ್ಲರೂ ಒಟ್ಟುಗೂಡಿ ಗರ್ಭಿಣಿಗೆ ತಿನ್ನಿಸುವುದು.

ಈಗಿನ ಕಾಲದಲ್ಲಿ ಬ್ಯಾರಿಗಳಲ್ಲಿ ಈ ಸೀಮಂತ ಬಹಳ ಕಡಿಮೆಯಾಗಿದೆ. ನಗರ ಪ್ರದೇಶಗಳಲ್ಲಿ ಇಲ್ಲವೇ ಇಲ್ಲ ಎನ್ನಬಹುದು. ಇಲ್ಲಿ ಒಂದು ವಿಷಯವನ್ನು ನಾನು ಹೇಳುತ್ತೇನೆ. ಈ ಗರ್ಭಿಣಿಯರಲ್ಲಿ ತಾಯ್ತನದ ಕನಸಿರುತ್ತದೆ. ಅವರ ಮುಖದಲ್ಲಿ ಅದನ್ನು ನಾವು ಗಮನಿಸಬಹುದು. ಅವರು ಸೀಮಂತವನ್ನು ಬಯಸುತ್ತಾರೆ. ಅದನ್ನು ಮಾಡದಿದ್ದರೆ ಅವರು ತುಂಬಾ ನೊಂದುಕೊಳ್ಳುತ್ತಾರೆ. ಸೀಮಂತವನ್ನು ಅವರು ಯಾಕೆ ಇಷ್ಟಪಡುತ್ತಾರೆ ಎಂದರೆ ಇದು ಅವಳೊಬ್ಬಳನ್ನೇ ಕೇಂದ್ರವಾಗಿಸಿಕೊಂಡು ಮಾಡುವ ಕಾರ್ಯಕ್ರಮ. ಆದುದರಿಂದ ಅದು ಅವರಿಗೆ ತುಂಬಾ ಸಂತೋಷವನ್ನು ಕೊಡುತ್ತದೆ. ಇತ್ತೀಚೆಗೆ ಇಲ್ಲಿಯೇ ನನ್ನ ಗೆಳೆಯನೊಬ್ಬನ ಮಗನಿಗೆ ಮದುವೆಯಾಯಿತು. ಸೊಸೆ ಗರ್ಭಿಣಿಯಾದಳು. ಆತನದ್ದು ತುಂಬಾ ಸುಶಿಕ್ಷಿತ ಕುಟುಂಬ. ಅವನು ಸೀಮಂತದಂತಹ ಯಾವುದೇ ಕಾರ್ಯಕ್ರಮವನ್ನು ಮಾಡುವ ಜಾಯಮಾನದವನಲ್ಲ. ಸೊಸೆ ಹೇಳಿದಳಂತೆ "ನನಗೆ ಸೀಮಂತ ಮಾಡಲೇಬೇಕು" ಎಂದು. ಅವಳು ಕೂಡಾ ವಿದ್ಯಾವಂತೆ, ಟೆಕ್ಕಿ.

ನಾನು ಕೇಳಿದೆ, ನೀವು ವಿದ್ಯಾವಂತರು ಮಾತ್ರವಲ್ಲ, ಕ್ರಿಶ್ಚಿಯನ್ನರಾಗಿ ಇಂತಹದ್ದೆಲ್ಲ ಮಾಡುತ್ತೀರಾ ಎಂದು. ಇಲ್ಲ, ನಮ್ಮಲ್ಲಿ ಇಂತಹದ್ದೆಲ್ಲ ಇಲ್ಲ. ಆದರೆ ಅವಳು ಮಾಡಲೇಬೇಕು ಎಂದು ಬಯಸುತ್ತಾಳೆ. ಗರ್ಭಿಣಿಯರಿಗೆ ಅಂತಹ ಆಸೆಗಳಿರುತ್ತವೆ. ಮಾಡಿದರೆ ಅವಳಿಗೆ ಖುಷಿಯಾಗುತ್ತದೆ. ಮಾಡದಿದ್ದರೆ ಖಂಡಿತಾ ಬೇಸರವಾಗುತ್ತದೆ. ಅದಕ್ಕೆ ಮಾಡುತ್ತಿದ್ದೇನೆ ಎಂದರು. ನನ್ನದೂ ಇದೇ ಅಭಿಪ್ರಾಯ. ಒಂದು ಜೀವವನ್ನು ಒಡಲಲ್ಲಿ ಹೊತ್ತುಕೊಂಡಿರುವಾಗ ಅವರಲ್ಲಿ ಹಲವಾರು ತರದ ಭಯ, ಮಾನಸಿಕ–ದೈಹಿಕ ಒತ್ತಡಗಳಿರುತ್ತವೆ. ಸೀಮಂತ ಅವಳಲ್ಲಿರುವ ಈ ಒತ್ತಡಗಳನ್ನೆಲ್ಲ ಕಡಿಮೆ ಮಾಡುತ್ತದೆ. ಸುಗಮ ಹೆರಿಗೆಗೆ ಮಾನಸಿಕ ಸ್ಥಿತಿ ಕೂಡ ಚೆನ್ನಾಗಿರಬೇಕು. ಅದಕ್ಕೆ ಸೀಮಂತ ಸಹಕಾರಿಯಾಗುತ್ತದೆ. ನಾನು ಕೂಡಾ ನನ್ನ ಸೊಸೆಗೆ ದೊಡ್ಡ ಮಟ್ಟದಲ್ಲದಿದ್ದರೂ ಸರಳವಾಗಿ ಸೀಮಂತ ಮಾಡಿದ್ದೇನೆ. ಪ್ರೀತಿಯಿಂದ ಧೈರ್ಯ ತುಂಬಿ ಕಳುಹಿಸಿಕೊಟ್ಟಿದ್ದೇನೆ.

ಅಂದಿನ ಕಾಲದಲ್ಲಿ ಹೆರಿಗೆ ಸಮಯ ಹತ್ತಿರವಾಗುತ್ತಿದ್ದಂತೆಯೇ ಹೆತ್ತವರಿಗೆ ಭಯ ಶುರುವಾಗಿಬಿಡುತ್ತಿತ್ತು. ಬಾಣಂತಿಯ ಆರೈಕೆ ಮಾಡುವ ಮಹಿಳೆಯನ್ನು ಮೊದಲೇ ಹುಡುಕಿ ಗೊತ್ತುಪಡಿಸುತ್ತಿದ್ದರು. ಮತ್ತೆ ಬೇಕಾದಾಗ ಸಿಗಲಿಕ್ಕಿಲ್ಲ ಎಂದು ಅವಳನ್ನು ಮನೆಗೆ ಕರೆಸಿ ಉಪಚಾರ ಮಾಡಿ, ಎಲೆ–ಅಡಿಕೆ, ಮುಂಗಡ ಹಣ ಕೊಡುತ್ತಿದ್ದರು. ಬಾಣಂತಿಗೆ ಬೇಕಾದ ಮದ್ದುಗಳನ್ನೆಲ್ಲ ಮನೆಯಲ್ಲಿಯೇ ತಯಾರಿಸುತ್ತಿದ್ದರು. ಈಗಿನಂತೆ ಹೆರಿಗೆಗೆ, ಪರೀಕ್ಷೆಗೆ ಆಸ್ಪತ್ರೆಗೆ ಹೋಗುವ ವ್ಯವಸ್ಥೆ ಇರಲಿಲ್ಲ. ಏನಿದ್ದರೂ ಮನೆಯಲ್ಲಿಯೇ ಹೆರಿಗೆ. ಗರ್ಭಿಣಿಯ ಪರೀಕ್ಷೆ ಮಾಡುವುದು, ಹೆರಿಗೆ ಮಾಡಿಸುವುದು ಎಲ್ಲ ಸೂಲಗಿತ್ತಿಯರು. ಹೆರಿಗೆ ನೋವು ಪ್ರಾರಂಭವಾಗುವಾಗ ಹೋಗಿ ಆ ಸೂಲಗಿತ್ತಿಯರನ್ನು ಕರೆತರುತ್ತಿದ್ದರು. ಹೆರಿಗೆ ಸ್ವಲ್ಪ ತಡವಾದರೆ ಮನೆಯ ಮಹಿಳೆಯರು ನಫೀಸತ್ ಮಾಲೆ, ಮುಹ್ಯದ್ದೀನ್ ಮಾಲೆ (ಮಹಾಪುರುಷರ ಗುಣಗಾನ) ಜೋರಾಗಿ ಓದುತ್ತಿದ್ದರು. ಯಾವುದೇ ತೊಂದರೆಯಾಗದೆ ಬೇಗ ಹೆರಿಗೆಯಾಗಲಿ ಎಂದು ಹರಕೆಗಳನ್ನು

ಹೊರುತ್ತಿದ್ದರು. ಅದರಲ್ಲಿ ಮಸೀದಿಗೆ ಚಾದರ ಕೊಡುತ್ತೇವೆ, ಮಾಲ್ದೆ (ಅಪ್ಪ) ಮಾಡಿಕೊಡುತ್ತೇವೆ, ಈದ್ಗಾದಲ್ಲಿ ದೀಪ ಹಚ್ಚುತ್ತೇವೆ, ರಾತೀಬುಗೆ ಕೋಳಿ ಕೊಡುತ್ತೇವೆ, ಮೌಲೂದು ಓದಿಸುತ್ತೇವೆ... ಮುಂತಾದ ಹರಕೆಗಳು ಸಾಮಾನ್ಯವಾಗಿತ್ತು.

ಅಂದಿನ ಕಾಲದಲ್ಲಿ ಒಬ್ಬ ಹೆಣ್ಣು ಒಂದು ಜೀವವನ್ನು ಈ ಲೋಕಕ್ಕೆ ತರಲು ಅನುಭವಿಸಬೇಕಾಗಿದ್ದ ನರಕಯಾತನೆಯನ್ನು ಎಣಿಸಿದರೆ ನನಗೆ ಈಗಲೂ ನಡುಕ ಹುಟ್ಟುತ್ತೆ. ಅವಳ ಕಿರುಚಾಟ, ಬೊಬ್ಬೆ ಕೇಳಲಾರದೆ ಮನೆಯವರು ದೂರ ಹೋಗಿ ನಿಂತು ದುಃಖ ತಡೆಯಲಾರದೆ ಅಳುತ್ತಿದ್ದರು. ಹೀಗೆ ಸೂಕ್ತ ಸಮಯಕ್ಕೆ ಚಿಕಿತ್ಸೆ ಸಿಗದೆ, ಹೆರಿಗೆಯಾಗದೆ ಹೊಟ್ಟೆಯಲ್ಲಿಯೇ ಮಗು ಸತ್ತು, ತಾಯಿಯೂ ತೀರಿಕೊಂಡ ಎಷ್ಟೋ ಪ್ರಕರಣಗಳಿವೆ. ಅಂದಿನ ಕಾಲದಲ್ಲಿ ಹೆರಿಗೆ ಅಂತ ಅಲ್ಲ, ಪ್ರತಿಯೊಂದರಲ್ಲೂ ಹೆಣ್ಣು ಅನುಭವಿಸುತ್ತಿದ್ದ ಕಷ್ಟ, ನೋವು, ದೈಹಿಕ–ಮಾನಸಿಕ ಯಾತನೆಗಳು, ಶೋಷಣೆ–ದೌರ್ಜನ್ಯಗಳು ಇಂದು ಕಲ್ಪಿಸಿಕೊಳ್ಳಲು ಕೂಡಾ ಸಾಧ್ಯವಿಲ್ಲ.

ಹಿಂದೆ ಎಷ್ಟೇ ಬಡತನವಿದ್ದರೂ ಮದುವೆ, ಮುಂಜಿ (ಸುನ್ನತ್)ಗಳನ್ನು ಬಹಳ ವಿಜೃಂಭಣೆಯಿಂದ ಮಾಡುತ್ತಿದ್ದರು. ಆಗ ಇದೆಲ್ಲ ಒಂದು ಪ್ರತಿಷ್ಠೆಯಾಗಿತ್ತು. ಹೆಚ್ಚು ವಿಜೃಂಭಣೆಯಿಂದ ಮಾಡಿದವನಿಗೆ ಸಮಾಜದಲ್ಲಿ ಹೆಚ್ಚು ಗೌರವ.

ಅಂದು ಪುಟ್ಟ ಮಕ್ಕಳಿಗೆ ಮುಂಜಿ ಮಾಡುತ್ತಿರಲಿಲ್ಲ. ಏನಿದ್ದರೂ ಹತ್ತು ವರ್ಷ ಪ್ರಾಯದ ನಂತರ. ಹದಿನೈದು ವರ್ಷದಲ್ಲಿ ಆಗಿದ್ದೂ ಇತ್ತು. ಚಿಕ್ಕ ಮಕ್ಕಳಿಗೆ ಮಾಡಲು ಹೆತ್ತವರು ಹೆದರುತ್ತಿದ್ದರು. ಯಾಕೆಂದರೆ ಗಾಯದಲ್ಲಿ ರಕ್ತಸ್ರಾವವಾಗಿ ಮಕ್ಕಳು ಅಸುನೀಗಿದ ಪ್ರಕರಣಗಳೂ ಇದ್ದುವು. ಆಗ ಈಗಿನಂತೆ ಯಾವ ವ್ಯವಸ್ಥೆಯೂ ಇರಲಿಲ್ಲ. ವಸ್ತ (ಅದಕ್ಕೆಂದೇ ನಿಯೋಜಿಸಲ್ಪಟ್ಟ ವ್ಯಕ್ತಿ) ಬಂದು ಮುಂಜಿ ಮಾಡುವುದು. ಇಂದಿನಂತೆ ಬ್ಯಾಂಡೇಜು, ಮುಲಾಮು ಇರಲಿಲ್ಲ. ಗಾಯಕ್ಕೆ ಹತ್ತಿ ಇಟ್ಟು ಬಿಳಿ ಬಟ್ಟೆಯಿಂದ ಕಟ್ಟುತ್ತಿದ್ದರು. ಗಾಯ ತೊಳೆಯಲು ಕೋಳಿಯ ಪುಕ್ಕ. ಗಾಯಕ್ಕೆ ಎಣ್ಣೆ ಸವರುವುದೂ ಅದೇ ಪುಕ್ಕದಲ್ಲಿ. ಗಾಯ ಒಣಗಲು ಮೂರು–ಆರು ತಿಂಗಳು ಕಳೆದಿದ್ದೂ ಇದೆ.

ಮುಂಜಿಯಾದ ಮಕ್ಕಳನ್ನು ಬಾಣಂತಿಯಂತೆ ಸಾಕುತ್ತಿದ್ದರು. ಕುಡಿಯಲು ತಣ್ಣೀರು ಕೊಡುತ್ತಿರಲಿಲ್ಲ. ಗಾಯ ಒಣಗುವವರೆಗೂ ತುಪ್ಪ ಹಾಕಿದ ಪತ್ತಿರ್ ಕೊಡುತ್ತಿದ್ದರು. ಸುವರ್ಣಗೆಡ್ಡೆ, ಕಡಲೆ ನೆನಸಿ ಹಾಕಿ ಅದರ ಕರಿ, ಕೋಳಿಕರಿ. ಮಕ್ಕಳು ನಿದ್ದೆಯಲ್ಲಿ ಹೊರಳಾಡಿ ಗಾಯಕ್ಕೆ ತಾಗದಂತೆ ರಾತ್ರಿ ಇಡೀ ಕೆಲವರು ಜಾಗರಣೆ ಇದ್ದು ಅವರನ್ನು ನೋಡಿಕೊಳ್ಳುತ್ತಿದ್ದರು. ಹೀಗೆ ಜಾಗರಣೆ ಇರುವಾಗ ಸಬಿನ ಹಾಡುವುದು, ಚೆನ್ನೆಮಣೆ, ಇಸ್ಪೀಟ್ ಆಡುತ್ತಾ ಬೆಳಗಾಗಿಸುತ್ತಿದ್ದರು. ಅವರಿಗೆ ನಿದ್ದೆ ಬಾರದಂತೆ ಮನೆಯ ಹೆಂಗಸರು ಆಗಾಗ ಚಹಾ ಮಾಡಿ ಕೊಡುತ್ತಿದ್ದರು.

ಆ ಕಾಲದಲ್ಲಿ ಮುಂಜಿ ಆಗುವ ದಿನ ಮನೆಯಲ್ಲಿ ಬ್ಯಾಂಡ್, ಚೀನಕೋಲು, ವಾದ್ಯ ಬಾರಿಸುತ್ತಿದ್ದರು. ಸುಡುಮದ್ದು, ದುರ್ಸುಗಳನ್ನು ಸಿಡಿಸುತ್ತಿದ್ದರು. ಅಕ್ಕಿಮುಡಿಯ ಮೇಲೆ ಕುಳ್ಳಿರಿಸಿ ಮುಂಜಿ ಮಾಡುವುದು ದೊಡ್ಡ ಗೌರವ. ಮುಂಜಿಯಾದ ಮೇಲೆ

ಎಲ್ಲರಿಗೂ ನೈಚೋರು–ಮಾಂಸದೂಟ. ಈ ಕಾರ್ಯಕ್ರಮದಲ್ಲೂ ಮದುವೆಯಂತೆಯೇ ಹಣ (ಕವರ್) ಇಡಲಿಕ್ಕಿತ್ತು. ಆ ನಂತರ ಬಂಧುಗಳು, ನೆರೆಹೊರೆಯವರ ಮನೆಗಳಿಂದ ಮುಂಜಿಯಾದ ಮಕ್ಕಳಿಗೆ ತಿನ್ನಲು ಸಿಹಿತಿಂಡಿಗಳ ಹೊರೆ ಬರುತ್ತಿತ್ತು. ಕೆಲವರು ಅಕ್ಕಿ ಪತ್ತರ್, ಕೋಳಿ ಕಳುಹಿಸಿ ಕೊಡುವುದೂ ಇತ್ತು. ಶ್ರೀಮಂತರು ಮುಂಜಿಯಾಗುವ ಹುಡುಗನನ್ನು ಕುದುರೆ ಮೇಲೆ ಕುಳ್ಳಿರಿಸಿ ಬ್ಯಾಂಡ್, ಚೀನಕೋಲು, ಸುಡುಮದ್ದು ಸಿಡಿಸುತ್ತಾ ಊರಿಡೀ ಮೆರವಣಿಗೆ ಮಾಡಿಸುತ್ತಿದ್ದುದೂ ಇತ್ತು.

ಗಾಯ ಒಣಗಿದ ಮೇಲೆ ಒಂದು ಶುಕ್ರವಾರ ಮುಂಜಿಯ ಹುಡುಗ ಮೆರವಣಿಗೆಯಲ್ಲಿ ಮಸೀದಿಗೆ ಹೋಗುವುದು. ಈ ಕಾರ್ಯಕ್ರಮಕ್ಕೆ ಬಂಧುಗಳ ಮನೆಗಳಿಗೆ ತೆರಳಿ ಹೇಳಿಕೆ ಕೊಡಲಿಕ್ಕಿತ್ತು. ಮಸೀದಿಗೆ ಹೋಗುವ ಮೊದಲು ಸಣ್ಣ ಹೆಸರು ಬೇಯಿಸಿ ಅದಕ್ಕೆ ಬೆಲ್ಲ, ಹಾಲು, ಏಲಕ್ಕಿ, ತೆಂಗಿನಕಾಯಿಯ ತುರಿ ಹಾಕಿ ನೀರುಪಾಯಸದಂತೆ ಮಾಡಿ ಎಲ್ಲರಿಗೂ ಕುಡಿಯಲು ಕೊಡುತ್ತಿದ್ದರು. ಮಸೀದಿಯಿಂದ ಮರಳಿದ ಮೇಲೆ ಎಲ್ಲರಿಗೂ ಮಾಂಸದೂಟ.

ನನಗೆ ಮುಂಜಿ ಆಗುವಾಗ 12 ವರ್ಷ ಪ್ರಾಯ. ನನಗೆ ಮತ್ತು ತಮ್ಮಂದಿರಿಗೆಲ್ಲ ಒಟ್ಟಿಗೆ ಆದದ್ದು. ನಮ್ಮ ಮುಂಜಿಗೆ ತಂದೆಯವರು ಎಲ್ಲರನ್ನೂ ಕರೆದಿದ್ದರು. ಆದರೆ ಅಷ್ಟೊಂದು ವಿಜೃಂಭಣೆಯಿಂದ ಮಾಡಿರಲಿಲ್ಲ.

# ನನ್ನ ಮದುವೆ

ನಿಜ ಹೇಳಬೇಕೆಂದರೆ ನನಗೆ ಆಗ ಮದುವೆಯಾಗಲು ಇಷ್ಟವಿರಲಿಲ್ಲ. ಮದುವೆಯಾಗುವ ಸ್ಥಿತಿಯಲ್ಲೂ ನಾನಿರಲಿಲ್ಲ. ನನಗೆ ತುಂಬಾ ಕಲಿಯಬೇಕೆಂಬ ಆಸೆ ಇತ್ತು. ನನ್ನ ಕಾಲ ಮೇಲೆ ನಿಂತು ಆಮೇಲೆ ಮದುವೆಯಾಗಬೇಕೆಂದು ತೀರ್ಮಾನಿಸಿದ್ದೆ. ಆಗ ನನ್ನ ಚಿಂತನೆ ಪಾಶ್ಚಿಮಾತ್ಯ ರೀತಿಯದ್ದಾಗಿತ್ತು. ವಿದ್ಯಾವಂತೆ, ಆಧುನಿಕ ಹುಡುಗಿಯನ್ನೇ ಮದುವೆಯಾಗಬೇಕೆಂದು ಕನಸು ಕಾಣುತ್ತಿದ್ದೆ. ಈ ಖತೀಜಾ ಕಲಿತದ್ದು ಬರೇ 5ನೇ ತರಗತಿ. ಆದ್ದರಿಂದ ಈ ಹುಡುಗಿ ಬೇಡವೇ ಬೇಡ ಎಂಬ ಮನಸ್ಥಿತಿ ಇತ್ತು.

ಕೆಲವು ಪ್ರಭಾವಿ ವ್ಯಕ್ತಿಗಳು ನನ್ನ ತಂದೆಯ ತಲೆ ತಿಂದು ಅವರನ್ನು ಈ ಮದುವೆಗೆ ಒಪ್ಪಿಸಿಬಿಟ್ಟಿದ್ದರು. ತಂದೆ ಅವರಿಗೆ ಮಾತು ಕೊಟ್ಟುಬಿಟ್ಟಿದ್ದರು. ಇದಾವುದೂ ನನಗೆ ಗೊತ್ತೇ ಇರಲಿಲ್ಲ. ವಿಷಯ ತಿಳಿದಾಗ ನಾನು ಕಿಡಿಯಾಗಿದ್ದೆ. ಇದೇ ಕೋಪದಲ್ಲಿ ನಾನು ಕಾಲೇಜಿಗೆ ಹೋಗುವುದನ್ನು ನಿಲ್ಲಿಸಿಬಿಟ್ಟೆ. ಮದುವೆಯಾಗುವುದಾದರೆ ನಾನು ಕಲಿಯುವುದಿಲ್ಲ ಎಂದು ಹಟ ಹಿಡಿದೆ. ಯಾವ ಕಾರಣಕ್ಕೂ ಮದುವೆಯಾಗುವುದಿಲ್ಲ ಎಂದು ಚಿಕ್ಕಮಗಳೂರು ಹೊಟೇಲಿನಲ್ಲಿ ಹೋಗಿ ಮಲಗಿಬಿಟ್ಟೆ.

ಆ ನಂತರ ನನ್ನ ತಂದೆ, ಮಾವಂದಿರೆಲ್ಲ ಸೇರಿ ನನ್ನ ಗೆಳೆಯರಲ್ಲಿ, ಬಂಧುಗಳಲ್ಲಿ, ಹೀಗೆ ಎಲ್ಲರಲ್ಲೂ ಹೇಳಿಸಿ ನನ್ನ ಮೇಲೆ ಒತ್ತಡ ಹೇರಿದರು. ಯಾರು ಹೇಳಿದರೂ ನಾನು ಒಪ್ಪಲಿಲ್ಲ. ಆಗ ತಂದೆ ತುಂಬಾ ನಿರಾಶರಾಗಿ ಕುಗ್ಗಿ ಹೋಗಿದ್ದರು. ಕೊನೆಗೂ ಅವರು ಸೋತು ಅವರ ಅಳಿಯ (ನನ್ನ ಬಾವ)ನಲ್ಲಿ 'ನಾನು ನೋಡಿದ ಹೆಣ್ಣನ್ನು ಅವನು ಮದುವೆಯಾಗುತ್ತಾನೆ ಎಂದು ನಾನು ತಿಳಿದಿದ್ದೆ. ನನ್ನ ಮಾತು ಕೇಳುತ್ತಾನೆ ಎಂದು ನಂಬಿದ್ದೆ. ಈಗ ನಾನು ಅವರಿಗೆ ಮಾತು ಕೊಟ್ಟಾಗಿದೆ. ನನ್ನ ಮಗ ನನ್ನ ಮಾತು

ಉಳಿಸಿಕೊಡುತ್ತಾನೆ, ನನ್ನ ಗೌರವ ಕಾಪಾಡ್ತಾನೆ ಎಂದುಕೊಂಡಿದ್ದೆ. ಅವನು ಹಾಗೆ ಮಾಡಲಿಲ್ಲ. ಅವನಿಗೆ ಅವನ ಹಟವೇ ಜಾಸ್ತಿಯಾಯಿತು. ನನ್ನ ಮಾನ, ಮರ್ಯಾದೆ, ಗೌರವವೆಲ್ಲ ಮಣ್ಣುಪಾಲಾಯಿತು. ಹೋಗಲಿ ಬಿಡು' ಎಂದು ಬಹಳ ನೋವಿನಿಂದ ಹೇಳಿದರಂತೆ. ಇದನ್ನು ಬಾವ ಬಂದು ನನ್ನಲ್ಲಿ ಹೇಳಿದರು.

ಯಾಕೋ ಅಂದು ರಾತ್ರಿ ಇಡೀ ನಾನು ನಿದ್ದೆ ಮಾಡಲಿಲ್ಲ. 'ನನ್ನ ತಂದೆ ಈ ಸಮಾಜದಲ್ಲಿ ಒಬ್ಬ ಗೌರವಾನ್ವಿತ ವ್ಯಕ್ತಿ. ಎಲ್ಲರೊಂದಿಗೂ ಬೆರೆತು ನಡೆಯುವವರು. ಅವರ ಮಾತಿಗೆ ಎಲ್ಲರೂ ಬೆಲೆ ಕೊಡುತ್ತಾರೆ. ಅವರು ಯಾವತ್ತೂ ಮಾತಿಗೆ ತಪ್ಪಿದವರಲ್ಲ. ಪ್ರಾಮಾಣಿಕ, ನಂಬಿಕಸ್ಥ ಎಂದು ಜನ ಅವರನ್ನು ಹೊಗಳುತ್ತಾರೆ. ಇಂತಹ ತಂದೆಯ ಒಂದು ಚಿಕ್ಕ ಮಾತಿಗೆ ಬೆಲೆ ಕೊಡದೇ ಇದ್ದರೆ ನಾನು ಮನುಷ್ಯನಾಗಲಾರೆ. ನಾನು ಇಂದು ಇಷ್ಟು ಎತ್ತರಕ್ಕೆ ಬೆಳೆದಿದ್ದರೆ, ವಿದ್ಯಾವಂತನಾಗಿದ್ದರೆ ಎಲ್ಲದಕ್ಕೂ ಕಾರಣ ಅವರು. ಅವರ ಈ ಒಂದು ಆಸೆಯನ್ನು ನೆರವೇರಿಸಿಕೊಡದೇ ಇದ್ದರೆ ನನ್ನಷ್ಟು ಕೃತಘ್ನ ಬೇರೆ ಯಾರೂ ಇರಲಾರರು. ಏನೇ ಆಗಲಿ ತಂದೆಯ ಮಾತಿಗೆ ಬೆಲೆ ಕೊಡುವುದು, ಅವರ ಆಸೆ ಈಡೇರಿಸುವುದು, ಸಮಾಜದಲ್ಲಿ ಅವರ ಮಾತಿಗೆ, ಗೌರವಕ್ಕೆ ಯಾವುದೇ ಕುಂದು ಬಾರದಂತೆ ನಡೆದುಕೊಳ್ಳುವುದು, ಅವರಿಷ್ಟದಂತೆ, ಅವರಿಗಾಗಿ ಮದುವೆಯಾಗುವುದು' ಎಂದು ನಿರ್ಧರಿಸಿದೆ.

ನಾನು ಮದುವೆಗೆ ಒಪ್ಪಿದ್ದು ಎಲ್ಲರಿಗೂ ಸಂತೋಷವಾಗಿತ್ತು. ಅದರಲ್ಲೂ ನನ್ನ ತಂದೆ–ತಾಯಿಯಂತೂ ನನ್ನ ಮೇಲೆ ಪ್ರೀತಿಯ ಮಳೆಯನ್ನೇ ಹರಿಸತೊಡಗಿದ್ದರು. ಅವರಿಗೆ ನನ್ನ ಮೇಲೆ ಅಭಿಮಾನ ಇಮ್ಮಡಿಯಾಗಿತ್ತು. ನಮ್ಮ ಮಕ್ಕಳು ನಾವು ಹೇಳಿದಂತೆ, ನಮ್ಮಿಷ್ಟದಂತೆ ನಡೆದರೆ ಯಾರಿಗೆ ಖುಷಿಯಾಗುವುದಿಲ್ಲ ಹೇಳಿ. ನನ್ನ ಮನಸ್ಸಿನಲ್ಲಿ ಅಸಮಾಧಾನದ ಕಿಡಿ ಇತ್ತಾದರೂ ತಂದೆ, ತಾಯಿ, ಮನೆಯವರ ಸಂತೋಷದ ಮಧ್ಯೆ ನನಗೆ ಅದು ದೊಡ್ಡ ಕೊರಗಾಗಲಿಲ್ಲ. ಅವರ ಸಂತೋಷ, ಸಂಭ್ರಮವನ್ನು ನೋಡಿಯೇ ನಾನು ನನ್ನ ಕನಸುಗಳನ್ನು ಅದುಮಿಟ್ಟುಕೊಂಡೆ.

ಆಗಿನ ಕಾಲದಲ್ಲಿ ಹೆಣ್ಣು ನೋಡುವ ಸಂಪ್ರದಾಯವಿರಲಿಲ್ಲ. ನನ್ನ ತಾಯಿಯಂತೂ ಅದಕ್ಕೆ ಕಡು ವಿರೋಧಿಯಾಗಿದ್ದರು. ತಾಯಿ ಈ ರೀತಿ ವಿರೋಧಿಸುವುದಕ್ಕೆ ಅವರ ಹೃದಯವೈಶಾಲ್ಯವೇ ಕಾರಣವಾಗಿತ್ತು. ಒಂದು ವೇಳೆ ನಾವು ಹೆಣ್ಣು ನೋಡಿ ಇಷ್ಟವಾಗಲಿಲ್ಲ ಎಂದು ಹೇಳಿ ಹಿಂದಿರುಗಿದರೆ ಆ ಹೆಣ್ಣಿಗೆ, ಅವರ ಮನೆಯವರಿಗೆ ಎಷ್ಟು ನೋವಾಗ ಬಹುದು, ಅವಮಾನವಾಗಬಹುದು ಎಂಬ ತಾಯಿ ಮನಸ್ಸು ಅವರದ್ದು. ಹಾಗೆ ಅಮ್ಮನಾಗಲಿ, ಮನೆಯ ಇತರ ಹೆಂಗಸರಾಗಲಿ ಹೆಣ್ಣು ನೋಡಲು ಹೋಗಲಿಲ್ಲ. ಆಗ ಮದುವೆ ಗಂಡಂತೂ ಹೆಣ್ಣು ನೋಡುವ ಕ್ರಮವೇ ಇರಲಿಲ್ಲ. ಗಂಡು ಹೆಣ್ಣನ್ನೂ ಹೆಣ್ಣು ಗಂಡನ್ನೂ ನೋಡುವುದು ಮೊದಲ ರಾತ್ರಿಯಂದೇ. ಹಾಗಾಗಿ ನಾನು ಮದುವೆಗೆ ಮೊದಲು ಹೆಣ್ಣು ನೋಡುವ ಪ್ರಶ್ನೆಯೇ ಅಲ್ಲಿ ಉದ್ಭವಿಸಲಿಲ್ಲ.

ಇಷ್ಟೆಲ್ಲ ನಡೆಯುತ್ತಿರುವಾಗಲೂ ನನ್ನ ತಂದೆ, ತಾಯಿ, ಬಾವಂದಿರಿಗೆಲ್ಲ ನನಗೆ ಈ

ಮದುವೆ ಇಷ್ಟ ಇಲ್ಲ, ಬಲವಂತಕ್ಕೆ ಒಪ್ಪಿದ್ದು ಎನ್ನುವುದು ಚೆನ್ನಾಗಿ ಗೊತ್ತಿತ್ತು. ಅವರಿಗೆ ಈ ಬಗ್ಗೆ ಕೊರಗೂ ಇತ್ತು. ಅದಕ್ಕೆ ಕಾರಣ ನಾನು ಅವರ ಮಾತಿಗೆ ಬೆಲೆ ಕೊಟ್ಟದ್ದು ಮತ್ತು ಅವರಿಗೆ ನನ್ನ ಮೇಲಿದ್ದ ಪ್ರೀತಿ. ಆಗ ನಮ್ಮ ಕೆಲವು ಬಂಧುಗಳು, ಮಾವಂದಿರೆಲ್ಲ ಮನೆಗೆ ಬಂದವರು ತಾಯಿಯ ಜೊತೆ 'ನಿನಗೆ ಸೊಸೆಯಾಗಿ ಬರುವವಳು ಎಷ್ಟು ಚಂದ ಇದ್ದಾಳೆ ಗೊತ್ತಾ, ಒಳ್ಳೆಯ ಪೂರ್ಣಚಂದ್ರನಂತಿದ್ದಾಳೆ. ಅವಳು ಈ ಮನೆಗೆ ಬಂದ ಮೇಲೆ ನಿನ್ನ ಹೆಣ್ಣುಮಕ್ಕಳೆಲ್ಲ ಅವಿತುಕೊಳ್ಳಬೇಕು. ಬಿಳಿ ಬಿಳಿಯಾಗಿ ಅಷ್ಟು ಚಂದ ಇದ್ದಾಳೆ' ಎಂದು ನನಗೆ ಕೇಳಿಸುವಂತೆ ಹೇಳುತ್ತಿದ್ದರು. ಆದರೆ ನನ್ನ ಮನಸ್ಸು ಆಗಲೂ ಬಯಸುತ್ತಿದ್ದುದು ಸೌಂದರ್ಯಕ್ಕಿಂತಲೂ ಆಧುನಿಕ, ವಿದ್ಯಾವಂತೆ ಹುಡುಗಿ.

ಮೇ 24, 1962ಕ್ಕೆ ಮದುವೆ ದಿನ ನಿಶ್ಚಯವಾಯಿತು. ಅದೊಂದು ಒಳ್ಳೆಯ ವರ್ಷವಲ್ಲ ಎಂದು ಆಗ ಜನರೆಲ್ಲ ಆಡಿಕೊಳ್ಳುತ್ತಿದ್ದರು. ಆ ವರ್ಷ ಪ್ರಳಯ, ಬರ ಬರುತ್ತೆ, ತುಂಬಾ ಕೆಟ್ಟ ಘಟನೆಗಳು ನಡೆಯುತ್ತೆ. ಆದ್ದರಿಂದ ಶುಭಕಾರ್ಯಗಳು ಮಾಡಬಾರದು, ಇದರಿಂದ ಕೆಟ್ಟದಾಗುತ್ತೆ ಎಂದೆಲ್ಲ ಪ್ರಚಾರದಲ್ಲಿತ್ತು. ತಂದೆಗೆ ಇದಾವುದರಲ್ಲೂ ನಂಬಿಕೆ ಇರಲಿಲ್ಲ. ಅವರು ಮದುವೆ ದಿನವನ್ನು ನಿಗದಿ ಮಾಡಿಯೇ ಬಿಟ್ಟಿದ್ದರು.

ನನ್ನ ಮದುವೆ ಸಂದರ್ಭದಲ್ಲಿ ಎಲ್ಲದರಲ್ಲೂ ಸ್ವಲ್ಪ ಬದಲಾವಣೆಗಳಾಗಿದ್ದವು. ಜನ ನನ್ನ ಬಾಲ್ಯದಲ್ಲಿದ್ದಂತೆ ಇರಲಿಲ್ಲ. ಎಲ್ಲ ವಿಷಯಗಳಲ್ಲೂ ಸ್ವಲ್ಪ ಮುಂದುವರಿದಿದ್ದರು. ಇದಕ್ಕೆ ಉದಾಹರಣೆಯೆಂದರೆ ನನ್ನ ತಂದೆಯವರು ನನ್ನ ಮದುವೆಗೆ ಆಮಂತ್ರಣ ಪತ್ರ ಮುದ್ರಿಸಿದ್ದು. ಇದು ಆಗ ದೊಡ್ಡ ಬದಲಾವಣೆ ಎಂದೇ ಹೇಳಬಹುದು.

ನಾನು ಕೆಲವು ಆಮಂತ್ರಣಪತ್ರಗಳನ್ನು ಹಿಡಿದುಕೊಂಡು ಗೆಳೆಯರನ್ನೆಲ್ಲ ಆಹ್ವಾನಿಸಲು ಚಿಕ್ಕಮಗಳೂರಿಗೆ ಹೋಗಿದ್ದೆ. ನನ್ನ ಮದುವೆ ನಿಶ್ಚಯವಾಯಿತು ಎಂದು ಹೇಳಿದಾಗ ನನ್ನ ಗೆಳೆಯರಾರೂ ನಂಬಲಿಲ್ಲ. ಅವರು ಹಾಗೆ ನಂಬದೇ ಇರುವುದಕ್ಕೆ ಒಂದು ದೊಡ್ಡ ಕಾರಣವಿತ್ತು.

ನಾನು ಕಾಲೇಜು ಓದುತ್ತಿರುವಾಗ ನಮ್ಮ ತರಗತಿಯವರನ್ನೆಲ್ಲ ಎಪ್ರಿಲ್ ಫೂಲ್ ಮಾಡಲಿಕ್ಕೋಸ್ಕರ ನಾವು ಕೆಲವು ಗೆಳೆಯರು ಸೇರಿ ಗೆಳೆಯ ಚಿನ್ನೇಗೌಡ ಎಂಬವನಿಗೆ ಮದುವೆ ಎಂದು ಹೇಳಿ ಒಂದು ನಾಟಕವಾಡಿದ್ದೆವು. ಅದರ ನೇತೃತ್ವವನ್ನು ನಾನೇ ವಹಿಸಿದ್ದೆ. ಚಿನ್ನೇಗೌಡನ ತಂದೆಯ ಹೆಸರಲ್ಲಿ ಕೆಲವು ಮದುವೆ ಆಮಂತ್ರಣ ಪತ್ರಗಳನ್ನು ಮುದ್ರಿಸಿದ್ದೆವು. ಅದನ್ನು ನಮ್ಮ ತರಗತಿ ಹಾಗೂ ಇನ್ನು ಕೆಲವು ಗೆಳೆಯರಿಗೆಲ್ಲ ಚಿನ್ನೇಗೌಡನ ಕೈಯಲ್ಲಿಯೇ ಕೊಡಿಸಿ ಬಹಳ ಆದರದಿಂದ ಅವರನ್ನೆಲ್ಲ ಆಹ್ವಾನಿಸಿದ್ದೆವು. ಗೆಳೆಯರೆಲ್ಲ ಆಶ್ಚರ್ಯ, ಸಂತೋಷ ವ್ಯಕ್ತಪಡಿಸುತ್ತಾ ನಮಗೆಲ್ಲ ಮದುವೆ ದಿನದಂದು ಸಂಜೆ ಬಿಯರ್ ಪಾರ್ಟಿ ಕೊಡಬೇಕು ಎಂದು ಒತ್ತಾಯಿಸತೊಡಗಿದ್ದರು. ಬಿಯರ್ ಮಾತ್ರ ಅಲ್ಲ 'ಬಡಿಗೆ ಹೆಂಡ'ದ ವ್ಯವಸ್ಥೆಯನ್ನೂ ಮಾಡಿದ್ದೇವೆ, ಎಲ್ಲರೂ ಬರಬೇಕು ಎಂದು ಒತ್ತಾಯಿಸಿದ್ದೆವು. ಬಡಿಗೆ ಹೆಂಡ ಎಂದರೆ ಕಾರ್ಯಕ್ರಮದಂದು ಒಂದು ಪುಟ್ಟ ಹಂಡೆಯಲ್ಲಿ ಹೆಂಡ

ತುಂಬಿಸಿ ಇಟ್ಟಿರುತ್ತಿದ್ದರು. ಅದರಿಂದ ಬೇಕಾದಷ್ಟು ಕುಡಿಯಬಹುದು. ಕಾರ್ಯಕ್ರಮದಲ್ಲಿ ಬಡಿಗೆ ಹೆಂಡ ಇರುತ್ತದೆ ಎಂದರೆ ಎಲ್ಲರೂ ಆಗ ಸಂಭ್ರಮಪಟ್ಟುಕೊಳ್ಳುತ್ತಿದ್ದರು. ಮದುವೆಗೆ ತಪ್ಪಿಸುತ್ತಿರಲಿಲ್ಲ. ಹಾಗೆ, ಆಮಂತ್ರಿಸಿದ ಗೆಳೆಯರೆಲ್ಲ ಮದುವೆಗೆ ಖಂಡಿತ ಬರುತ್ತೇವೆ ಎಂದು ಭರವಸೆ ನೀಡಿದ್ದರು. ಅಂದು ಬೆಳಿಗ್ಗೆ ಆಚಾರ್ಯ ಪಾಠಶಾಲೆಯ ವಠಾರದಿಂದ ಬಸ್ಸಿನ ವ್ಯವಸ್ಥೆ ಮಾಡಿದ್ದೇವೆ. ಎಲ್ಲರೂ ಬೆಳಿಗ್ಗೆ ಬೇಗ ಬರಬೇಕು. ಅಲ್ಲಿಂದ ಎಲ್ಲರೂ ಒಟ್ಟಿಗೆ ಹೋಗೋಣ ಎಂದು ನಾನು ತಿಳಿಸಿದ್ದೆ. ಈ ನಾಟಕದ ಒಂದು ಚಿಕ್ಕ ಸುಳಿವೂ ಸಿಗದಂತೆ ನಾವೆಲ್ಲ ಬಹಳ ಜಾಗರೂಕತೆ ವಹಿಸಿದ್ದೆವು.

ಅಂದು ಬೆಳ್ಳಂಬೆಳಗ್ಗೆಯೇ ಹೊಸ ಹೊಸ ಬಟ್ಟೆ ಧರಿಸಿ ಅಲಂಕಾರ ಮಾಡಿಕೊಂಡು ಗಂಡು–ಹೆಣ್ಣು ಎಲ್ಲರೂ ಆಚಾರ್ಯ ಪಾಠಶಾಲೆಯ ಆವರಣದಲ್ಲಿ ಬಂದು ಸೇರಿದ್ದರು. ತಮಾಷೆಯ ಮಾತುಗಳನ್ನಾಡುತ್ತಾ, ಹಾಸ್ಯಚಟಾಕಿ ಹಾರಿಸುತ್ತಾ, ಕೇಕೆ ಹಾಕುತ್ತಾ ಬಹಳ ಖುಷಿಯಿಂದಿದ್ದ ಎಲ್ಲರೂ ಬಸ್ಸಿಗಾಗಿ ಕಾಯುತ್ತಿದ್ದರು. ನಾವು ದೂರ ಒಂದು ಕಡೆ ಅವರಿಗೆ ಕಾಣದಂತೆ ಮರೆಯಲ್ಲಿ ನಿಂತು ಎಲ್ಲವನ್ನೂ ನೋಡುತ್ತಿದ್ದೆವು. ಬೆಳಿಗ್ಗೆ ಬಂದಿದ್ದವರು ಮಧ್ಯಾಹ್ನದವರೆಗೂ ಬಸ್ಸಿಗಾಗಿ ಕಾದು ಕಾದು ಇವರ ಮೂಡು ಹಾಳಾಗಿತ್ತು. ಎಲ್ಲರ ಮಾತು ಗದ್ದಲ ಬಂದಾಗಿತ್ತು. ಗಾಳಿ ತೆಗೆದ ಬೆಲೂನಿನಂತಾಗಿಬಿಟ್ಟಿದ್ದರು. ಒಬ್ಬರ ಮುಖ ಒಬ್ಬರು ನೋಡಲಾಗದೆ ಅಸಹನೆಯಿಂದ ಸಿಡಿಯತೊಡಗಿದ್ದರು. ಪರಸ್ಪರ ಬೈದುಕೊಳ್ಳುತ್ತಿದ್ದರು. ಆಗ ನಾನು 'ಇಂದು ಎಪ್ರಿಲ್ 1, ಎಪ್ರಿಲ್ ಫೂಲ್. ಇನ್ನು ಎಲ್ಲರೂ ನಿಮ್ಮ ನಿಮ್ಮ ಮನೆಗೆ ತೆರಳಬಹುದು' ಎಂದು ಒಂದು ಚೀಟಿ ಬರೆದು ಕಳುಹಿಸಿದೆ. ಇದನ್ನು ಓದಿದ ಅವರೆಲ್ಲರ ಸಹನೆಯ ಕಟ್ಟೆ ಒಡೆಯತೊಡಗಿತ್ತು. ಬೊಬ್ಬಿರಿಯುತ್ತಾ ನನ್ನನ್ನು ಕೆಟ್ಟ ಶಬ್ದಗಳಿಂದ ಬಯ್ಯತೊಡಗಿದರು. ಆಗ ಅವರ ಮುಖ, ಅವತಾರ ನೋಡಬೇಕಿತ್ತು. ಕೋಪ, ಅವಮಾನದಿಂದ ಅವರೆಲ್ಲ ಕುಗ್ಗಿ ಹೋಗಿದ್ದರು. ಆಗ ನಾನೇನಾದರೂ ಅವರ ಕೈಗೆ ಸಿಕ್ಕಿದ್ದರೆ ಹೊಡೆದು ಚಿಂದಿ ಮಾಡಿಬಿಡುತ್ತಿದ್ದರು.

ಹಾಗೆ ನಾನು ಆಮಂತ್ರಣ ಪತ್ರ ನೀಡಿದಾಗ ಎಲ್ಲರೂ ಸಂದೇಹದಿಂದ – ಹೇಗೆ ಚಿನ್ನೇಗೌಡನ ಮದುವೆಯಂತೆ ಅಲ್ಲವಲ್ಲಾ? – ಎಂದು ಕೇಳಿದರು. ಇದು ಎಪ್ರಿಲ್ ತಿಂಗಳಲ್ಲವಲ್ಲ, ಮೇ ಅಲ್ಲವಾ ಎಂದು ಅವರ ಸಂಶಯ ನಿವಾರಿಸಿದ್ದೆ. ಈಗ ಅವರಿಗೆ ಮದುವೆಯ ಬಗ್ಗೆ ಖಾತ್ರಿಯಾಗಿತ್ತು. ಕೆಲವರು ಆಶ್ಚರ್ಯ ವ್ಯಕ್ತಪಡಿಸಿದರೆ ಇನ್ನು ಕೆಲವರು ನನ್ನನ್ನು ಕೀಟಲೆ ಮಾಡತೊಡಗಿದ್ದರು. ಅಂತೂ ಅವರಿಗೆಲ್ಲ ತುಂಬಾ ಸಂತೋಷವಾಗಿತ್ತು. ಬೆಂಗಳೂರು, ಚಿಕ್ಕಮಗಳೂರಿನಿಂದ ಗೆಳೆಯರೆಲ್ಲ ಮದುವೆಗೆ ಬಂದಿದ್ದರು. ಬಜಪೆಯ ನಮ್ಮ ಮನೆಯಲ್ಲಿಯೇ ಮದುವೆಯಾದದ್ದು.

ನನ್ನ ಮದುವೆ ಬಹಳ ವಿಜೃಂಭಣೆಯಿಂದ ನಡೆಯಿತು. ನಿಖಾಹ್‌ಗೆ ಹೆಣ್ಣಿನ ಮನೆ ಕಡೆಯಿಂದ ಬಹಳಷ್ಟು ಜನ ಬಂದಿದ್ದರು. ಇವರಲ್ಲಿ ಜೋಕಟ್ಟೆಯ ಹಲವಾರು ಗಣ್ಯರೂ ಇದ್ದರು. ಇವರೆಲ್ಲ ನಡೆದುಕೊಂಡೇ ಬಂದದ್ದು. ಆಗ ನಡೆದುಕೊಂಡು ಹೋಗುವುದು ದೊಡ್ಡ ವಿಷಯವಲ್ಲ. ಎಷ್ಟು ದೂರವಾದರೂ ನಡೆದುಕೊಂಡೇ

ಹೋಗುತ್ತಿದ್ದುದು. ರಾತ್ರಿಯೇ ಮದುವೆಯಾದದ್ದು. ಮನೆಯ ಅಂಗಳದಲ್ಲಿ ಹಾಕಲಾಗಿದ್ದ ಸೋಗೆಯ ವಿಶಾಲ ಚಪ್ಪರದಲ್ಲಿ ಎಲ್ಲರನ್ನೂ ಕುಳ್ಳಿರಿಸಿ ಉಪಾಹಾರ ನೀಡಿದೆವು. ಅನಂತರ ನಿಖಾಹ್ ಆಯಿತು. ಎಲ್ಲರೂ ನೈಚೋರು ಊಟ ಮಾಡಿ ಹೋದರು.

ಮತ್ತೆ ನಾನು ರಾತ್ರಿ (ಮದುಮಗ) ಮದುಮಗಳ ಮನೆಗೆ ಹೋಗುವ ಕಾರ್ಯಕ್ರಮ. ಈ ಕಾರ್ಯಕ್ರಮಕ್ಕೆ ನನ್ನ ಗೆಳೆಯರನ್ನೆಲ್ಲ ಆಹ್ವಾನಿಸಿದ್ದೆ. ನನ್ನ ತಂದೆಯೂ ಅವರಿಗೆ ಬೇಕಾದವರನ್ನು ಕರೆದಿದ್ದರು. ಹಸನ್ ಹಾಜಿ, ಬಾವ ಹಾಜಿ (ಟಿ.ಕೆ.ಯ ತಂದೆ) ಇವರೆಲ್ಲ ನನ್ನ ಜೊತೆ ಹೋಗಲು ಬಂದಿದ್ದರು. ಆಗ ಈ ಬ್ಯಾಂಡ್, ಚೀನಕೋಲು, ಸುಡುಮದ್ದು ಮೆರವಣಿಗೆ ಎಲ್ಲ ಸ್ವಲ್ಪ ಕಡಿಮೆಯಾಗಿತ್ತು. ನನ್ನ ಮದುವೆಗೆ ಇದಾವುದೂ ಇರಲಿಲ್ಲ. ನಾವು ಹೊರಡಬೇಕು ಎನ್ನುವಷ್ಟರಲ್ಲಿ ಅದೆಲ್ಲಿತ್ತೋ ಒಂದೇ ಸಮನೆ ಮಳೆ ಸುರಿಯಲಾರಂಭಿಸಿತ್ತು. ಈ ಕುಂಭದ್ರೋಣ ಮಳೆಗೆ ಬಂದವರೆಲ್ಲ ಚಪ್ಪರದಲ್ಲಿ ಕುಳಿತುಕೊಳ್ಳಲಾಗದೆ ಮನೆಯ ಜಗಲಿ, ಅಲ್ಲಿ–ಇಲ್ಲಿ ಮುದುಡಿ ನಿಂತು ರಕ್ಷಣೆ ಪಡೆಯತೊಡಗಿದರು. ಪುಣ್ಯಕ್ಕೆ ನಾವು ಹೋಗಲು ಒಂದು ಬಸ್ಸು ಮಾಡಿದ್ದೆವು. ಹಾಗೆ ಎಲ್ಲರೂ ಬಸ್ಸೇರಿ ಹೊರಟೆವು. ಮಳೆಗೆ ರಸ್ತೆ ಕೂಡಾ ಕಾಣುತ್ತಿರಲಿಲ್ಲ. ಅಂತಹ ಭೀಕರ ಮಳೆ ಸುರಿಯುತ್ತಿತ್ತು. ನಮ್ಮ ಬಸ್ಸು ಕಳವಾರು ತಲುಪಿದಾಗ ಅಲ್ಲಿನ ಒಂದು ಚಿಕ್ಕ ಸೇತುವೆ ಹರಿಯುತ್ತಿದ್ದ ಮಳೆನೀರಿನ ರಭಸಕ್ಕೆ ಕುಸಿಯಿತು. ಪುಣ್ಯಕ್ಕೆ ನಮ್ಮ ಬಸ್ಸು ಸೇತುವೆಯಿಂದ ಕೆಲವೇ ಮೀಟರ್ ದೂರದಲ್ಲಿತ್ತು. ಈ ಸೇತುವೆ ಕುಸಿತದಿಂದ ನಮ್ಮ ಬಸ್ಸು ಮುಂದೆ ಹೋಗಲು ಸಾಧ್ಯವಾಗಲಿಲ್ಲ. ಮಳೆ ಸ್ವಲ್ಪ ಕಡಿಮೆಯಾಗುವವರೆಗೂ ನಾವೆಲ್ಲ ಬಸ್ಸಿನಲ್ಲೇ ಕುಳಿತು ಮತ್ತೆ ಇಳಿದು ನಡೆಯತೊಡಗಿದೆವು.

ಆಗ ಕರೆಂಟ್ ಇರಲಿಲ್ಲ. ದಾರಿದೀಪಗಳಿರಲಿಲ್ಲ. ಸಾಧಾರಣವಾಗಿ ಟಾರ್ಚ್‌ಲೈಟ್ ಇಲ್ಲದೆ ಯಾರೂ ಮನೆಯಿಂದ ಹೊರಗೆ ಇಳಿಯುತ್ತಿರಲಿಲ್ಲ. ನಮ್ಮಲ್ಲೂ ಕೆಲವರಲ್ಲಿ ಟಾರ್ಚ್‌ಲೈಟ್‌ಗಳಿದ್ದವು. ನಾವೆಲ್ಲ ಟಾರ್ಚ್‌ಲೈಟ್ ಬೆಳಕಿನಲ್ಲೇ ರಸ್ತೆ ಬಿಟ್ಟು ಕಾಲುದಾರಿಯಲ್ಲಿ ನಡೆದು ಮದುಮಗಳ ಮನೆ ತಲುಪಿದೆವು. ಮದುಮಗಳ ಮನೆಯ ಅಂಗಳ ತುಂಬಾ ತೆಂಗಿನ ಸೋಗೆಯ ಚಪ್ಪರ ಹಾಕಲಾಗಿತ್ತು. ಬಹಳ ಸುಂದರವಾದ ಚಪ್ಪರ. ನನ್ನ ಮಾವ ಯಾವುದಕ್ಕೂ ಕಡಿಮೆಯಾಗದಂತೆ ಬಹಳ ಖರ್ಚು ಮಾಡಿ ಮದುವೆಯ ಎಲ್ಲಾ ವ್ಯವಸ್ಥೆಯನ್ನು ಮಾಡಿದ್ದರು. ಆದರೆ ಏನು ಮಾಡುವುದು? ಮಳೆಯ ಆರ್ಭಟ ಎಲ್ಲವನ್ನೂ ಹಾಳು ಮಾಡಿತ್ತು. ಅಲ್ಲೇ ತಗ್ಗಿನ ಗದ್ದೆಯಲ್ಲಿ ಜನರೇಟರ್ ಅಳವಡಿಸಲಾಗಿತ್ತು. ಆಗಿನ ಕಾಲದಲ್ಲಿ ಜನರೇಟರ್ ಅಳವಡಿಸುವುದು ಎಂದರೆ ದೊಡ್ಡ ವಿಷಯ. ಮಳೆನೀರು ನುಗ್ಗಿ ಜನರೇಟರ್ ಮುಳುಗಿ ದೀಪಗಳೆಲ್ಲ ಕೈಕೊಟ್ಟಿದ್ದವು. ಚಪ್ಪರವೆಲ್ಲ ಅಸ್ತವ್ಯಸ್ತವಾಗಿತ್ತು. ಅದೆಲ್ಲಿಂದಲೋ ಗ್ಯಾಸ್‌ಲೈಟ್‌ನ ವ್ಯವಸ್ಥೆ ಮಾಡಿದ್ದರು. ಅದರ ಬೆಳಕಿನಲ್ಲಿ ನಾನು ಮದುಮಗಳಿಗೆ ಬಂದಿ ಹಾಕಿದೆ. ಅನಂತರ ಊಟ ಎಲ್ಲ ಆಯಿತು.

ಹಿಂದಿರುಗುವಾಗ ಏನಾಯಿತು ಎಂದರೆ – ನಾವೆಲ್ಲ ಬೇರೆಯೇ ಆದ ಇನ್ನೊಂದು ದಾರಿಯಲ್ಲಿ ಹೊರಟೆವು. ಅದೊಂದು ಹೊಸದಾಗಿ ನಿರ್ಮಾಣವಾಗುತ್ತಿದ್ದ ರಸ್ತೆ. ಆ

ರಸ್ತೆ ತುಂಬಾ ಮಣ್ಣು ಹಾಕಲಾಗಿತ್ತು. ಮಳೆಗೆ ಆ ಮಣ್ಣೆಲ್ಲ ನೆನೆದು ಕೆಸರು ತುಂಬಿದ ಗದ್ದೆಯಂತಾಗಿಬಿಟ್ಟಿತ್ತು. ಆದರೆ ಬಂದಾಗಿದೆ, ಮುಂದೆ ಹೋಗುವ ಹಾಗೂ ಇಲ್ಲ, ಹಿಂದಿರುಗುವ ಹಾಗೂ ಇಲ್ಲ ಎಂಬ ಪರಿಸ್ಥಿತಿ ನಮ್ಮೆಲ್ಲರದ್ದಾಗಿತ್ತು. ಆದದ್ದಾಗಲಿ ಎಂದು ನಡೆದೆವು. ಹಾಗೆ ನಡೆಯುವಾಗ ನಮ್ಮಲ್ಲೊಬ್ಬರ ಕಾಲು ಕೆಸರಲ್ಲಿ ಹೂತು ಹೋಯಿತು. ಅವರು ಒಂದು ಕಾಲನ್ನು ಮೇಲಕ್ಕೆತ್ತುವಾಗ ಇನ್ನೊಂದು ಕಾಲೂ ಹೂತುಹೋಗುತ್ತಿತ್ತು. ಆ ಕಾಲನ್ನು ಮೇಲಕ್ಕೆತ್ತುವಾಗ ಮೊದಲ ಕಾಲು ಮತ್ತೆ ಹೂತು ಹೋಗುತ್ತಿತ್ತು. ಹೀಗೆ ಗೋಣಗುತ್ತಾ ಅವರು ಬಹಳ ಹೊತ್ತು ಪ್ರಯತ್ನಿಸಿದರೂ ಅವರಿಗೆ ಆ ಕೆಸರಿನಿಂದ ಮೇಲೆ ಬರಲು ಸಾಧ್ಯವಾಗಲಿಲ್ಲ. ಅವರದ್ದು ದೊಡ್ಡ ಜೀವ. ಅವರ ಅವತಾರ ನೋಡಿ ನಮಗೆಲ್ಲ ನಗು ಬರತೊಡಗಿತ್ತು. ನಗುವೆಂದರೆ ಹೊಟ್ಟೆ ಹುಣ್ಣಾಗುವಂತೆ ನಾವೆಲ್ಲ ನಗತೊಡಗಿದೆವು. ನಮ್ಮೆಲ್ಲರ ನಗು ನೋಡಿ ಅವರು ಕೋಪದಿಂದ ಕಿರುಚಾಡತೊಡಗಿದರು. ಮತ್ತೆ ಎಲ್ಲರೂ ಸೇರಿ ಅವರನ್ನು ಆ ಕೆಸರಿನಿಂದ ಮೇಲಕ್ಕೆತ್ತಿದೆವು.

ಮತ್ತೊಬ್ಬರು ಅಲ್ಲೇ ನೀರು ಹರಿಯುತ್ತಿದ್ದ ತೋಡಿನ ಬಳಿ ಮೂತ್ರ ಮಾಡಲು ಕುಳಿತಿದ್ದರು. ಅವರು ಸ್ವಲ್ಪ ಪುಕ್ಕಲು ಜನ. ಯಾವತ್ತೂ ರಾತ್ರಿ ಹೊತ್ತು ಟಾರ್ಚ್ ಇಲ್ಲದೆ ಹೊರಬಂದವರಲ್ಲ. ಮೂತ್ರ ಮಾಡುವಾಗ ಟಾರ್ಚ್‌ಲೈಟ್ ಹಾಕಿಯೇ ಕುಳಿತಿದ್ದರು. ಆಗ ಅದೆಲ್ಲಿತ್ತೋ ಕೇರೆಹಾವಿನ ಮರಿಯೊಂದು ಅವರ ತೊಡೆಸಂಧಿಯ ಬಳಿ ಬಂತಂತೆ. ಅವರು ಹೆದರಿ ಹಾವು... ಹಾವು... ಎಂದು ಬೊಬ್ಬಿರಿಯುತ್ತಾ ಅರ್ಧದಲ್ಲಿ ಓಡಿಬಂದದ್ದು ನೋಡಿ ನಾವೆಲ್ಲ ಬಿದ್ದು ಬಿದ್ದು ನಗತೊಡಗಿದ್ದೆವು. ಈ ಘಟನೆಯನ್ನು ಗೆಳೆಯರು ಸಿಕ್ಕಾಗ ಇಂದೂ ನೆನಪಿಸಿ ನಗುತ್ತಾರೆ. ನಾವೆಲ್ಲ ಈ ಮಳೆಯನ್ನು ಅಷ್ಟೊಂದು ಸಂಭ್ರಮಿಸಿದ್ದರೆ ನನ್ನ ಮಾವ ಮಾತ್ರ ಮದುವೆ ಕಾರ್ಯ ಸಂಪೂರ್ಣ ಹಾಳಾಯಿತು ಎಂದು ಬಹಳ ಬೇಸರಗೊಂಡಿದ್ದರು. ನಾನು ಇಷ್ಟು ಖರ್ಚು ಮಾಡಿ ಎಲ್ಲ ದಂಡ ಆಯಿತಲ್ಲ ಎಂದು ನೊಂದು ಹೇಳುತ್ತಿದ್ದರು.

ಆಮೇಲೆ ಮದುಮಗಳು ನಮ್ಮ ಮನೆಗೆ ಬಂದಳು. ಆಗ ಮಳೆ ಕಡಿಮೆಯಾಗಿತ್ತು. ನಂತರ ನಾನು ತಾಲಕ್ಕೆ ಹೋಗುವಾಗ ಗಮ್‌ಬೂಟು ಹಾಕಿಕೊಂಡು ಹೋಗಿದ್ದೆ. ಮಳೆಯಿಂದ ರಸ್ತೆ ಅಷ್ಟೊಂದು ಕೆಸರುಮಯವಾಗಿತ್ತು. ಈ ಮಳೆ ನನಗೆ ಚಿಕ್ಕಮಗಳೂರನ್ನು ನೆನಪಿಸುವಂತಿತ್ತು. ಅಲ್ಲಿ ನಾನು ಈ ಗಮ್‌ಬೂಟು ಧರಿಸುತ್ತಿದ್ದೆ. ಅಲ್ಲಿಯ ಮಳೆ ಹೇಗಿರುತ್ತಿತ್ತು ಎಂದರೆ ಮೇ ತಿಂಗಳಲ್ಲಿ ಪ್ರಾರಂಭವಾದರೆ ಆಗಸ್ಟ್ ತಿಂಗಳವರೆಗೂ ಬಿಡುತ್ತಿರಲಿಲ್ಲ. ಒಂದೇ ಸವನೆ ಈ ನಾಲ್ಕು ತಿಂಗಳು ಸುರಿವ ಮಳೆಗೆ ಸೂರ್ಯನನ್ನು ನೋಡುವುದೇ ಅಪರೂಪವಾಗಿಬಿಡುತ್ತಿತ್ತು. ಅಂತಹ ಜಡಿಮಳೆ. ಸ್ವಾತಂತ್ರ್ಯ ದಿನದ ಧ್ವಜಾರೋಹಣಕ್ಕೆ ಹೋಗುವಾಗಲೂ ನಾವು ಗಮ್‌ಬೂಟು ಧರಿಸಿಯೇ ಹೋಗುತ್ತಿದ್ದೆವು. ನಮ್ಮೂರಿನಲ್ಲಿ ಈ ಗಮ್‌ಬೂಟನ್ನು ಯಾರೂ ನೋಡಿರಲಿಲ್ಲ. ನಾನು ಹಾಕಿಕೊಂಡು ಹೋದಾಗ ಕೆಲವರು ತಮಾಷೆ ಮಾಡಿ ನಗತೊಡಗಿದ್ದರು.

ತಾಲ ಆಯಿತು. ನಾನು ಅಲ್ಲೇ ಉಳಿದೆ. ನನ್ನ ಜೊತೆ ಬಂದವರೆಲ್ಲ ಹಿಂದಿರುಗಿದರು.

ಅಂದು ನನ್ನ ಮೊದಲ ರಾತ್ರಿ. ಅಂದು ರಾತ್ರಿ ಇವಳು ನನ್ನ ಜೊತೆ ಮಾತನಾಡಲಿಲ್ಲ. ನಾನೂ ಮಾತನಾಡಿಸಲು ಪ್ರಯತ್ನಿಸಲಿಲ್ಲ. ಮಾತುಕತೆ ಯಾವುದೂ ಇಲ್ಲ. ಆ ಇಡೀ ಕೋಣೆಯಲ್ಲಿ ನವದಂಪತಿಯಾದ ನಾವಿಬ್ಬರೇ ಇದ್ದರೂ ಹೊರಗಿನ ಮಳೆಯ ಆರ್ಭಟ ಬಿಟ್ಟರೆ ಒಂದು ಶಬ್ದವೂ ಇಲ್ಲ. ಆದರೂ ನಾನು ಸಹನೆ ಕಳೆದುಕೊಳ್ಳಲಿಲ್ಲ. ಅವಸರ ಮಾಡಲಿಲ್ಲ. ಹೆಣ್ಣುಮಕ್ಕಳು ಹೀಗೆಯೇ, ಮೊದಮೊದಲು ಸಂಕೋಚಪಡುತ್ತಾರೆ. ಹೊಂದಿಕೊಳ್ಳಲು ಒಂದು ವಾರವಾದರೂ ಬೇಕು. ಅವರ ಮನವೊಲಿಸಬೇಕು. ಅವರಿಗೆ ಈ ಸಂದರ್ಭ ಏನೇನೋ ಭಯಗಳಿರುತ್ತವೆ ಎಂದು ನಾನು ಪುಸ್ತಕಗಳಲ್ಲಿ ಓದಿದ್ದೆ.

ಹೀಗೆ ನಾನು ಇವಳಿಗಾಗಿ ಒಂದು ವಾರ ಕಾದೆ. ಮನವೊಲಿಸಲು ಪ್ರಯತ್ನಿಸಿದೆ. ಅನಂತರವೂ ಇವಳಿಂದ ಯಾವ ರೀತಿಯ ಸಹಕಾರವೂ ಇಲ್ಲ. ಒಂದು ಮಾತು ಕೂಡಾ ಆಡುತ್ತಿರಲಿಲ್ಲ. ನಾನು ಮಲಗಿದ ಮೇಲೆ ತಡವಾಗಿ ಶಬ್ದವಾಗದಂತೆ ಹಾಲು ಹಿಡಿದುಕೊಂಡು ಮೆಲ್ಲನೆ ಬಂದು ಅದನ್ನು ಒಂದು ಕಡೆ ಇಟ್ಟು ಮಂಚದ ಮೂಲೆಯಲ್ಲಿ ಮುದುಡಿ ಮಲಗುತ್ತಿದ್ದಳು.

ನನ್ನ ಅತ್ತೆ ದಿನಾ ನಾಟಿಕೋಳಿಯ ಸಾರು, ತುಪ್ಪ ಹಾಕಿದ ಅಕ್ಕಿರೊಟ್ಟಿ, ತುಪ್ಪ ಹಾಕಿದ ಗಂಜಿ, ನೈಚೋರು ಹೀಗೆ ಭರ್ಜರಿ ಊಟ, ತಿಂಡಿ ಕೊಟ್ಟು ಉಪಚಾರ ಮಾಡುತ್ತಿದ್ದರು. ನನ್ನ ಮಾವನ ಕೆಲವು ಗೆಳೆಯರು ಹೊಳೆಗೆ ಹೋಗಿ ಗಾಳ ಹಾಕಿಯೋ, ಬಲೆಬೀಸಿಯೇ ಮದುಮಗನಿಗೆ ದೊಡ್ಡ ದೊಡ್ಡ ಒಳ್ಳೆಯ ಮೀನುಗಳನ್ನು ಹಿಡಿದು ತರುತ್ತಿದ್ದರು. ಆ ಹೊಳೆಯಲ್ಲಿ ದೊಡ್ಡ ದೊಡ್ಡ ಸಿಗಡಿಗಳು ಸಿಗುತ್ತಿದ್ದವು. ಆ ಹೊಳೆ ಈಗ ಇಲ್ಲ. ಅಭಿವೃದ್ಧಿ ಹೆಸರಲ್ಲಿ ಅದಕ್ಕೆಲ್ಲ ಮಣ್ಣು ತುಂಬಿಸಿ ಅದರ ಮೇಲೆ ದೊಡ್ಡ ದೊಡ್ಡ ಕಾಂಕ್ರಿಟ್ ಕಟ್ಟಡಗಳು, ಕಾರ್ಖಾನೆಗಳು ಸ್ಥಾಪನೆಯಾಗಿವೆ. ಎಲ್ಲಿಯವರೆಗೆಂದರೆ ಅಲ್ಲಿ ಕೆಲವು ವರ್ಷಗಳ ಹಿಂದೆ ಹೊಳೆ ಇತ್ತು ಎಂಬುದರ ಒಂದು ಚಿಕ್ಕ ಕುರುಹು ಕೂಡಾ ಈಗ ಅಲ್ಲಿ ಕಾಣಿಸುತ್ತಿಲ್ಲ. ಹಾಗೆ ಅತ್ತೆ ನನಗೆ ಒಳ್ಳೊಳ್ಳೆಯ ಅಡಿಗೆ ಮಾಡಿ ಬಡಿಸುತ್ತಿದ್ದರು.

ವಾರಗಳು ಕಳೆದ ಮೇಲೂ ಇವಳು ಹಾಗೆಯೇ ಇದ್ದಳು. ಯಾವುದೇ ಬದಲಾವಣೆ ಇಲ್ಲ. ಎದುರು ನಿಂತು ಮಾತನಾಡುವುದಿಲ್ಲ. ಮಾತನಾಡುತ್ತಿರುವಾಗಲೂ ಮುಖ ನೋಡುತ್ತಿರಲಿಲ್ಲ. ರಾತ್ರಿ ಮಲಗಿ ದೀಪ ಆರಿಸಿದ ಮೇಲೆ ಏನಾದರೂ ಸ್ವಲ್ಪ ಮಾತನಾಡುತ್ತಿದ್ದಳು. ಅದೂ ನನ್ನ ಮಾತಿಗೆ ಉತ್ತರ ಅಷ್ಟೇ. ಬಹಳ ಮೃದುವಾದ ಮೆತ್ತನೆ ಮಾತು. ಮತ್ತಷ್ಟು ಕೇಳಬೇಕು ಎನ್ನುವಂತಹ ಇಂಪಾದ ಧ್ವನಿ. ಆಮೇಲೆ ನನಗೆ ಗೊತ್ತಾಯಿತು. ಇವಳಿಗೆ ಮಾತು ಕಡಿಮೆ ಎಂದು. ಇವತ್ತಿಗೂ ಇವಳು ನನ್ನ ಜೊತೆ ಅಂತ ಅಲ್ಲ, ಯಾರ ಜೊತೆಗೂ ಜಾಸ್ತಿ ಮಾತನಾಡುವುದಿಲ್ಲ, ಬೆರೆಯುವುದಿಲ್ಲ. ಇವಳೂ ಆಯಿತು, ಇವಳ ಕೆಲಸವೂ ಆಯಿತು. ಯಾವುದರ ಬಗ್ಗೆಯೂ ಯಾರ ಬಗ್ಗೆಯೂ ಹೆಚ್ಚು ತಲೆಕೆಡಿಸಿಕೊಂಡವಳಲ್ಲ. ಬಹಳ ಮುಗ್ಧೆ. ಪ್ರಾಮಾಣಿಕಳು. ಧರ್ಮನಿಷ್ಠೆ. ನನ್ನನ್ನು ಮತ್ತು ಇವಳನ್ನು ಮಾತನಾಡಿಸುವುದರಲ್ಲಿ, ಒಂದುಗೂಡಿಸುವುದರಲ್ಲಿ ನನ್ನ ತಾಯಿ

ಬಹಳ ದೊಡ್ಡ ಪಾತ್ರ ವಹಿಸುತ್ತಿದ್ದರು. ನನಗೆ ಈ ಮದುವೆ ಇಷ್ಟವಿಲ್ಲ ಎಂದು ಹೇಳಿದ್ದೆನಲ್ಲ. ಆ ಮಾತು ಕೊನೆಯವರೆಗೂ ತಾಯಿಯ ಮನಸ್ಸಿನಲ್ಲಿತ್ತು. ನಾವಿಬ್ಬರೂ ಮಾತನಾಡಲು, ಒಂದಾಗಲು, ಬೆರೆಯಲು ಸಿಕ್ಕಿದ ಅವಕಾಶಗಳನ್ನೆಲ್ಲ ಅವರು ಬಳಸಿಕೊಳ್ಳುತ್ತಿದ್ದರು.

ನಾನು ಮೊದಮೊದಲು ನನ್ನ ಗೆಳೆಯರನ್ನೆಲ್ಲ ಆಗಾಗ ಮನೆಗೆ ಕರೆತರುತ್ತಿದ್ದೆ. ಊಟದ ಸಮಯವಾದರೆ ಏನಾದರೂ ವಿಶೇಷ ಅಡುಗೆ ಮಾಡಿಸುತ್ತಿದ್ದೆ. ಆದರೆ ಇವಳು ಯಾವತ್ತೂ ನನ್ನ ಗೆಳೆಯರ ಮುಂದೆ ಬಂದವಳಲ್ಲ. ಅವರನ್ನು ಮಾತನಾಡಿಸಿದವಳಲ್ಲ. ಮುಖವನ್ನು ಕೂಡಾ ತೋರಿಸಿದವಳಲ್ಲ. ಮಾಡಿದ ಅಡುಗೆಯನ್ನು ನಾನೇ ತಂದು ಇಡಬೇಕು. ಅದನ್ನು ಗೆಳೆಯರಿಗೆಲ್ಲ ನಾನೇ ಬಡಿಸಬೇಕು. ಇವಳಂತೂ ಬಡಿಸುವವಳಲ್ಲ ಎಂದು ನನಗೆ ಮೊದಲೇ ಗೊತ್ತಿದ್ದುದರಿಂದ ನಾನು ಈ ಬಗ್ಗೆ ಹೇಳಲು, ಒತ್ತಾಯಿಸಲು ಹೋಗುತ್ತಿರಲಿಲ್ಲ. ಎಲ್ಲವನ್ನೂ ನಾನೇ ಮಾಡುತ್ತಿದ್ದೆ. ಆಗೆಲ್ಲ ನನ್ನ ಗೆಳೆಯರು 'ಏನಯ್ಯ, ನಿನ್ನ ಶ್ರೀಮತಿ ಮನೆಯಲ್ಲಿಲ್ಲವಾ? ಕರೆಯಯ್ಯಾ ಅವರನ್ನು. ಒಟ್ಟಿಗೆ ಕುಳಿತು ಊಟ ಮಾಡೋಣ' ಎಂದು ಒತ್ತಾಯಿಸುತ್ತಿದ್ದರು. ನಾನಾಗ ಏನಾದರೂ ಸುಳ್ಳು ಕಾರಣ ಹೇಳಿ ತಪ್ಪಿಸಿಕೊಳ್ಳುತ್ತಿದ್ದೆ. ನನ್ನ ಪತ್ನಿ ಹೀಗೆಯೇ ಎಂದು ಹೇಳಲು ನನಗೆ ಇಷ್ಟವಿರಲಿಲ್ಲ. ಇಂತಹ ಸಂದರ್ಭಗಳಲ್ಲಿ ನನಗೆ ತುಂಬಾ ಅವಮಾನವಾಗುತ್ತಿತ್ತು. ಮತ್ತೆ ನಾನು ಗೆಳೆಯರನ್ನು ಮನೆಗೆ ಕರೆತರುವುದನ್ನೇ ಬಿಟ್ಟುಬಿಟ್ಟೆ. ಊಟ ತಿಂಡಿ ಏನಿದ್ದರೂ ಹೊಟೇಲ್‌ಗೆ ಕರೆದೊಯ್ಯುತ್ತಿದ್ದೆ.

ಅನಂತರ ಒಂದು ದಿನ ನನ್ನ ಮಾವ ನನ್ನನ್ನು ಕರೆದು, ನೀನು ಮುಂದಕ್ಕೆ ಓದು, ಎಲ್.ಎಲ್.ಬಿ. ಮಾಡು, ಅಥವಾ ನಿನಗೆ ಬೇರೆ ಯಾವುದು ಇಷ್ಟವೋ ಅದನ್ನು ಮಾಡು ಎಂದರು. ನನಗೆ ಮುಂದಕ್ಕೆ ಓದಲು ಮನಸ್ಸಿರಲಿಲ್ಲ. ನಾನಿನ್ನು ಮುಂದಕ್ಕೆ ಓದುವುದಿಲ್ಲ, ವ್ಯಾಪಾರ ಮಾಡುತ್ತೇನೆ ಎಂದೆ. ಆಮೇಲೆ ತಂದೆಯವರೂ ನನ್ನ ಓದು ಮುಂದುವರಿಸಲು ಒತ್ತಾಯ ಮಾಡಿದರು. "ಈಗ ನಾನು ಒಬ್ಬಂಟಿಯಲ್ಲ. ನನಗೆ ಮದುವೆಯಾಗಿದೆ. ಹೆಂಡತಿಯನ್ನೂ ನೋಡಿಕೊಳ್ಳಬೇಕು. ಈ ಕಾರಣಕ್ಕಾಗಿಯೇ ಈಗ ಬೇಡ, ನನ್ನ ಕಾಲ ಮೇಲೆ ನಿಂತು ಆಮೇಲೆ ಮದುವೆಯಾಗುತ್ತೇನೆ ಅಂದದ್ದು. ಇನ್ನು ನಾನು ಓದು ಮುಂದುವರಿಸುವುದಿಲ್ಲ. ನನಗೆ ಇನ್ನು ದುಡಿಯಬೇಕು" ಎಂದೆ. ತಂದೆಗೆ ನನ್ನನ್ನು ತುಂಬಾ ಓದಿಸಬೇಕು. ವಕೀಲ ಅಥವಾ ಇಂಜಿನಿಯರ್ ಮಾಡಿಸಬೇಕು. ನಾನು ಸರಕಾರಿ ಉದ್ಯೋಗ ಮಾಡಬೇಕು ಎಂದು ತುಂಬಾ ಆಸೆ ಇತ್ತು. ಆದರೆ ತಂದೆಯ ಯಾವ ಆಸೆಯೂ ಈಡೇರಲಿಲ್ಲ.

# ಹೊಸ ಬದುಕನ್ನು ಅರಸುತ್ತಾ...

ಆ ನಂತರ ನಾನು ಮತ್ತೆ ಚಿಕ್ಕಮಗಳೂರಿಗೆ ಹೋದೆ. ಅಲ್ಲಿ ಹೊಟೇಲಲ್ಲಿ ಕುಳಿತುಕೊಳ್ಳುತ್ತಿರಲಿಲ್ಲ. ಹೆಚ್ಚಾಗಿ ನನ್ನ ತಮ್ಮಂದಿರೇ ಹೊಟೇಲಲ್ಲಿ ದುಡಿಯುತ್ತಿದ್ದರು. ನಾನು ಅಲ್ಲಿ ಜೇಸಿಸ್‌ಗೆ ಸೇರಿದೆ. ಜೇಸಿಸ್‌ನಲ್ಲಿ ನಾನು ಒಂದು ತಂಡವನ್ನು ತಯಾರು ಮಾಡಿದೆ. ಆ ತಂಡದಲ್ಲಿದ್ದವರು ಎಲ್ಲ ಮುಸ್ಲಿಮೇತರರು. ಅದರಲ್ಲಿ ಹೆಣ್ಣುಮಕ್ಕಳೂ ಇದ್ದರು. ಹೆಚ್ಚಿನವರು ವಿವಾಹಿತರು. ಜೇಸಿಸ್ ಸದಸ್ಯರಾಗುವವರಿಗೆ ಒಳ್ಳೆಯ ಇಂಗ್ಲಿಷ್ ಗೊತ್ತಿರಬೇಕು. ಇಂಗ್ಲಿಷ್‌ನಲ್ಲೇ ಮಾತನಾಡಬೇಕು. ಭಾಷಣ ಮಾಡಬೇಕು. ಇದುವೇ ಆ ಸಂಸ್ಥೆಯ ನಾಯಕತ್ವದ ಮಾನದಂಡ. ನನಗೆ ಈ ಎಲ್ಲ ಅರ್ಹತೆಗಳಿದ್ದವು. ಆದ್ದರಿಂದ ನಾನು ಅದರ ಅಧ್ಯಕ್ಷನಾದೆ.

ಒಮ್ಮೆ ಕೇರಳದ ಕೊಚ್ಚಿಯ ವಿಲ್ಲಿಂಗ್‌ಡನ್ ಐಲೆಂಡ್‌ನಲ್ಲಿ ಜೇಸಿಸ್ ವತಿಯಿಂದ ಒಂದು ದೊಡ್ಡ ಡಿನ್ನರ್ ಏರ್ಪಡಿಸಲಾಗಿತ್ತು. ಅದು ಬಹಳ ಪ್ರತಿಷ್ಠಿತ ಹೊಟೇಲ್. ಸದಸ್ಯರಿಗೆಲ್ಲ ಉಚಿತ ಡಿನ್ನರ್. ಆಗ ನಾನು ಅದರ ಉಪಾಧ್ಯಕ್ಷನಾಗಿದ್ದೆ. ನಾವೆಲ್ಲ ಚಿಕ್ಕಮಗಳೂರಿನಿಂದ ಆ ಡಿನ್ನರ್‌ಗೆ ಹೋಗಿದ್ದೆವು. ಅಂದಿನ ಕಾರ್ಯಕ್ರಮಕ್ಕೆ ಅಧ್ಯಕ್ಷರು ಬಂದಿರಲಿಲ್ಲ. ನಾನೇ ನಿಂತು ಎಲ್ಲವನ್ನೂ ನಡೆಸಿಕೊಟ್ಟೆ. ನನ್ನ ಇಂಗ್ಲಿಷ್, ಸಂಘಟನಾ ಚಾತುರ್ಯ, ವ್ಯಕ್ತಿತ್ವದಿಂದಾಗಿ ಅಲ್ಲಿ ದೊಡ್ಡ ದೊಡ್ಡ ವ್ಯಕ್ತಿಗಳ ಪರಿಚಯವಾಯಿತು. ಹೀಗೆ ನಾನು ಬಹಳಷ್ಟು ಗೆಳೆಯರನ್ನು ಸಂಪಾದಿಸಿದೆ.

ಈ ಔತಣಕೂಟದಲ್ಲಿ ಒಂದು ವಿಶೇಷ ನಡೆಯಿತು. ಆ ವಿಶೇಷದಿಂದಾಗಿಯೇ ಆ ಔತಣಕೂಟ ಇನ್ನೂ ನನ್ನ ನೆನಪಿನಲ್ಲಿ ಉಳಿದಿದೆ. ಈ ಔತಣಕೂಟಕ್ಕೆ ಒಬ್ಬಳು ಹೆಣ್ಣುಮಗಳು ಬಂದಿದ್ದಳು. ಅವಳ ಹೆಸರು ಪ್ರಮೀಳಾ ಅಂತ ನೆನಪು. ಚಿಕ್ಕಮಗಳೂರಿನವಳು. ಬಹಳ ಪ್ರತಿಭಾವಂತೆ. ಹಾಡು, ನೃತ್ಯ ಮುಂತಾದವುಗಳಲ್ಲೆಲ್ಲ ತುಂಬಾ

ಹೆಸರುವಾಸಿಯಾಗಿದ್ದವಳು. ವಿಶಾಲ ಮನಸ್ಸಿನವಳು. ಒಳ್ಳೆಯ ಇಂಗ್ಲಿಷ್ ಮಾತನಾಡುತ್ತಿದ್ದಳು. ಅವಳ ಗಂಡ ಜೇಸಿಸ್ ಸದಸ್ಯ. ಆತ ಮೀನು, ಮಾಂಸ ಕಂಡರೆ ಮೈಲಿ ದೂರ ಓಡುವವನು. ನಮ್ಮ ಔತಣಕೂಟದಲ್ಲಿ ಮಾಂಸಾಹಾರ–ಸಸ್ಯಾಹಾರ ಎರಡೂ ಇತ್ತು. ಈ ಪ್ರಮೀಳಾ ಇದ್ದಾಳಲ್ಲ, ಇವಳು ನನ್ನನ್ನು ದೂರ ಕರೆದುಕೊಂಡು ಹೋಗಿ ಮೆಲ್ಲ ಹೇಳಿದಳು "ನನಗೆ ಮೀನು ತಿನ್ನಬೇಕು. ನೀವೆಲ್ಲ ತಿನ್ನುತ್ತಿರುವುದು ನೋಡಿದರೆ ಆಸೆ ಆಗ್ತಾ ಇದೆ. ನನ್ನ ಗಂಡನಿಗೆ ಗೊತ್ತಾಗದೆ ಹಾಗೆ ವ್ಯವಸ್ಥೆ ಮಾಡ್ತೀಯಾ?" ಎಂದು. ಅಂದಿನ ಕೂಟದಲ್ಲಿ ದೊಡ್ಡ ದೊಡ್ಡ ಹುರಿದ ಮೀನುಗಳಿದ್ದವು. ಯಾರಿಗೂ ಗೊತ್ತಾಗದ ಹಾಗೆ ಅವಳಿಗೆ ಬೇಕಾದಷ್ಟು ಮೀನು ತಿನ್ನುವ ವ್ಯವಸ್ಥೆ ಮಾಡಿದೆ. ಅವಳಿಗೆ ಬಹಳ ಖುಷಿಯಾಯಿತು. "ನನಗೆ ಮೀನು ಎಂದರೆ ತುಂಬಾ ಇಷ್ಟ. ನಾವು ಮನೆಯಲ್ಲಿ ಮಾಡುವುದಿಲ್ಲ. ಅಣ್ಣಂದಿರು ಹೊಟೇಲಲ್ಲಿ ತಿನ್ನುತ್ತಾರೆ. ನನಗೂ ತಿನ್ನಿಸುತ್ತಾರೆ. ನನ್ನ ಗಂಡನಿಗೆ ಇದು ಇಷ್ಟ ಇಲ್ಲ. ನಾವೆಲ್ಲ ಕದ್ದು ಮುಚ್ಚಿ ತಿನ್ನುವುದು. ಮೀನು ತುಂಬಾ ಚೆನ್ನಾಗಿತ್ತು. ನಿನಗೆ ತುಂಬಾ ತುಂಬಾ ಥ್ಯಾಂಕ್ಸ್" ಎಂದಳು. ಅವಳ ಧೈರ್ಯ ನೋಡಿ ನನಗೆ ನಿಜವಾಗಲೂ ಆಶ್ಚರ್ಯವಾಗಿತ್ತು.

ಚಿಕ್ಕಮಗಳೂರು ಮುಖ್ಯ ರಸ್ತೆಯ ಬಳಿ ಇದ್ದ ನಮ್ಮ ಹೊಟೇಲ್‌ನ ಹೆಸರು 'ಇಸ್ಲಾಮಿಯಾ ಹೊಟೇಲ್' ಎಂದು ಹೇಳಿದೆನಲ್ಲ. ಒಮ್ಮೆ ಚಿಕ್ಕಮಗಳೂರಿಗೆ 'ಕಮಲಾ ಸರ್ಕಸ್' ಬಂತು. ಆಗ ಅಲ್ಲೇ ಪಕ್ಕದಲ್ಲಿ ಉಸ್ಮಾನ್ ಬ್ಯಾರಿಯವರ ಹೊಟೇಲ್ ಇತ್ತು. ಅವರಿಗೆ ಬಹಳ ಜೋರಾಗಿ ವ್ಯಾಪಾರವಾಗತೊಡಗಿತು. ಆಗ ನಮ್ಮ ತಂದೆಯವರು ಬಸ್ಸು ನಿಲ್ದಾಣದ ಬಳಿ ಲೀಸ್‌ಗೆ ಜಾಗ ತೆಗೆದು ಮತ್ತೊಂದು ಹೊಟೇಲ್ ತೆರೆದರು. ಅದರ ಹೆಸರು 'ಡೀಲಕ್ಸ್ ಹೊಟೇಲ್'. ಈ ಹೊಟೇಲ್ ಬಹಳ ಪ್ರಸಿದ್ಧವಾಯಿತು. ದೊಡ್ಡ ದೊಡ್ಡ ಗೌಡರುಗಳೆಲ್ಲ ಆಗ ನನ್ನನ್ನು ಸಿಗಲು, ಮಾತನಾಡಿಸಲು ಹೊಟೇಲ್‌ಗೆ ಬರುತ್ತಿದ್ದರು.

ಒಮ್ಮೆ ನನಗೆ ಸಬ್‌ಇನ್‌ಸ್ಪೆಕ್ಟರ್ ಕೆಲಸಕ್ಕೆ ಇಂಟರ್‌ವ್ಯೂಗೆ ಬಂತು. ಈ ವಿಷಯ ತಂದೆಗೆ ಹೇಳಿದೆ. ತಂದೆ ಇದರಲ್ಲಿ ಎಷ್ಟು ಸಂಬಳ ಬರುತ್ತೆ ಎಂದು ಕೇಳಿದರು. ಇನ್ನೂರು ರೂಪಾಯಿ ಎಂದೆ. ಈಗಾಗಲೇ ನೀನೊಬ್ಬನೇ ಅಷ್ಟು ದುಡ್ಡು ಖರ್ಚು ಮಾಡುತ್ತಾ ಇದ್ದೀಯಲ್ಲ, ಇನ್ನು ಸಂಸಾರ ಹೇಗೆ ತೂಗಿಸುತ್ತೀ ಎಂದು ಕೇಳಿದರು. ಆಗ ತಂದೆಗೆ ಈ ಗಿಂಬಳದ ಬಗ್ಗೆ ಗೊತ್ತೇ ಇರಲಿಲ್ಲ. ಆಮೇಲೆ ಒಮ್ಮೆ ರೇಂಜ್ ಫಾರೆಸ್ಟ್ ಆಫೀಸರ್ ಹುದ್ದೆಗೆ ಕರೆ ಬಂತು. ಅದನ್ನೂ ತಂದೆಯವರು ಬೇಡ ಎಂದು ಹೇಳಿದರು. ಬಳಿಕ ಈಗ ದುಬೈಯಲ್ಲಿ ಉದ್ಯಮಿಯಾಗಿದ್ದಾರಲ್ಲ ಬಿ.ಆರ್. ಶೆಟ್ಟಿ, ಅವರು ಆಗಾಗ ನಮ್ಮ ಹೊಟೇಲ್‌ಗೆ ಊಟಕ್ಕೆ ಬರುತ್ತಿದ್ದರು. ಅವರು ಆಗ ಮೆಡಿಕಲ್ ರೆಪ್ ಆಗಿದ್ದರು. ನನಗೆ ಅವರ ಪರಿಚಯವಾಯಿತು. ಪರಿಚಯ ಸ್ನೇಹವಾಯಿತು. ಅವರು ಬಹಳ ಒಳ್ಳೆಯ ವ್ಯಕ್ತಿ. ಅವರ ಮುಖಾಂತರ ನನಗೆ ಮೆಡಿಕಲ್ ರೆಪ್ ಕೆಲಸಕ್ಕೆ ಕರೆಬಂತು. ಅದನ್ನೂ ತಂದೆಯವರು ಒಪ್ಪಲಿಲ್ಲ.

ಒಂದು ದಿನ ತಂದೆಯವರು ನನ್ನನ್ನು ಕರೆದು ನಿನಗೆ ನಾನು ಹತ್ತುಸಾವಿರ

ರೂಪಾಯಿ ಕೊಡುತ್ತೇನೆ. ನೀನು ಏನಾದರೂ ವ್ಯಾಪಾರ ಮಾಡು ಎಂದರು. ಆಗ ಹತ್ತುಸಾವಿರ ಎಂದರೆ ಬಹಳ ದೊಡ್ಡ ಮೊತ್ತ. ತಂದೆ ಕೊಟ್ಟ ಹತ್ತುಸಾವಿರ ರೂಪಾಯಿ ಪಡೆದುಕೊಂಡೆ. ಆಗ ಒಬ್ಬರು ಅನುಭವಿ ಟಿಂಬರ್ ಮರ್ಚೆಂಟ್ ಇದ್ದರು. ನನಗೆ ಪರಿಚಯಸ್ಥರಾದ ಅವರು ನಾವಿಬ್ಬರೂ ಒಟ್ಟಿಗೆ ಮರದ ವ್ಯಾಪಾರ ಮಾಡೋಣ ಎಂದು ನನ್ನ ಜೊತೆ ಸೇರಿಕೊಂಡರು. 1964ನೇ ಇಸವಿ ಅದು. ನಾವಿಬ್ಬರೂ ಸೇರಿ ಪ್ರಥಮ ಬಾರಿಗೆ ಖರೀದಿಸಿದ ಮರದಲ್ಲಿ ನಮಗೆ ಮೂರು ಸಾವಿರ ರೂಪಾಯಿ ನಷ್ಟ ಸಂಭವಿಸಿತು. ಇದು ನನಗೆ ಬಿದ್ದ ಬಹಳ ದೊಡ್ಡ ಪೆಟ್ಟು. ನನ್ನ ತಲೆ ಹಾಳಾಗತೊಡಗಿತ್ತು. ಅನಂತರ ಮತ್ತೊಂದು ಕಡೆಯಿಂದ ಮರ ಖರೀದಿಸಿದೆವು. ದೊಡ್ಡ ದೊಡ್ಡ ಗಾತ್ರದ ಹೆಬ್ಬಲಸಿನ ಮರಗಳವು. ಬಹಳ ಒಳ್ಳೆಯ ಮರಗಳು. ಅವು ಅಷ್ಟೊಂದು ಒಳ್ಳೆಯ ಮರಗಳು ಎಂದು ನಮಗೆ ಖರೀದಿಸಿದ ಮೇಲೆಯೇ ಗೊತ್ತಾಗಿದ್ದು. ಅದರಲ್ಲಿ ನಮಗೆ ಸುಮಾರು ಒಂದೂವರೆ ಲಕ್ಷ ರೂಪಾಯಿ ಲಾಭವಾಯಿತು. ಆಗ ಒಂದೂವರೆ ಲಕ್ಷ ಎಂದರೆ ಬಹಳ ದೊಡ್ಡ ಮೊತ್ತ.

ಬುಧವಾರ ದಿನ ನಮ್ಮ ಹೊಟೇಲ್‌ನಲ್ಲಿ ಭರ್ಜರಿ ವ್ಯಾಪಾರ ನಡೆಯುತ್ತಿತ್ತು. ಅದಕ್ಕೆ ಕಾರಣ ಆ ದಿನ ಅಲ್ಲಿ ಸಂತೆ ನಡೆಯುತ್ತಿದ್ದುದು. ಅದು ಬಹಳ ದೊಡ್ಡ ಸಂತೆ. ಕಳಸ, ಬೇಲೂರುಗಳಂತಹ ದೂರದ ಊರುಗಳಿಂದಲೂ ಜನ ಸಂತೆಗೆ ಬರುತ್ತಿದ್ದರು. ಕಿತ್ತಲೆ, ಮಾವು, ಬಾಳೆ, ಇತರ ಹಣ್ಣುಹಂಪಲು, ತರಕಾರಿಗಳನ್ನು ಹೇರಿಕೊಂಡು ಬಹಳಷ್ಟು ಲಾರಿಗಳು ಅಲ್ಲಿಗೆ ಮಾರಾಟಕ್ಕೆ ಬರುತ್ತಿದ್ದವು. ಹಾಗೆಯೇ ಖರೀದಿಗೂ ಹತ್ತಿರದ ಊರು, ಪೇಟೆಗಳಿಂದ ಜನರು ಆಗಮಿಸುತ್ತಿದ್ದರು. ಈ ಸಂತೆಗೆ ಬಂದ ಹೆಚ್ಚಿನವರು ನಮ್ಮ ಹೊಟೇಲ್‌ಗೆ ಊಟಕ್ಕೆ ಬರುತ್ತಿದ್ದರು. ಆ ದಿನ ನಾವು ಎರಡು ದೊಡ್ಡ ಪಾತ್ರೆಗಳಲ್ಲಿ ಬಿರಿಯಾನಿ ಮಾಡುತ್ತಿದ್ದೆವು. ಎಲ್ಲವನ್ನೂ ತಂದೆಯವರೇ ನೋಡಿಕೊಳ್ಳುತ್ತಿದ್ದರು. ಇಸ್ಲಾಮಿಯಾ ಹೊಟೇಲನ್ನು ನನ್ನ ಚಿಕ್ಕಪ್ಪ ಮತ್ತು ತಮ್ಮ ನಡೆಸುತ್ತಿದ್ದರು. ಡೀಲಕ್ಸ್ ಹೊಟೇಲ್‌ನ ವ್ಯಾಪಾರ ಜಾಸ್ತಿಯಾಗುತ್ತಿದ್ದಂತೆಯೇ ಇಸ್ಲಾಮಿಯಾ ಹೊಟೇಲ್‌ನ ವ್ಯಾಪಾರ ಕಡಿಮೆಯಾಗತೊಡಗಿತು. ಕೊನೆಗೆ ಮುಚ್ಚಲ್ಪಟ್ಟಿತು. ಅನಂತರ ಡೀಲಕ್ಸ್ ಹೊಟೇಲ್‌ನ ಭೂಮಿ ಮಾಲಕರು ನಮ್ಮ ಮೇಲೆ ಹೊಟೇಲ್ ಬಿಟ್ಟುಕೊಡಬೇಕು ಎಂದು ಕೇಸ್ ಮಾಡಿದರು. ಕೇಸ್ ನಡೆಯುತ್ತಿರುವಾಗಲೇ 1965ರಲ್ಲಿ ತಂದೆ ತೀರಿಕೊಂಡರು. 1975ರಲ್ಲಿ ಆ ಹೊಟೇಲನ್ನು ನಾವು ಬಿಟ್ಟುಕೊಡಬೇಕಾಗಿ ಬಂತು. ನಮ್ಮ ಸತ್ಯ, ಪ್ರಾಮಾಣಿಕತೆಯೇ ನಮಗೆ ಮುಳುವಾಯಿತು.

ತಂದೆ ತೀರಿಕೊಂಡ ಸಂದರ್ಭದಲ್ಲಿ ಚಿಕ್ಕಮಗಳೂರು ಮತ್ತು ಬೆಂಗಳೂರಿನಿಂದ ನನ್ನ ಮತ್ತು ತಂದೆಯವರ ಗೆಳೆಯರು ಮೃತದೇಹ ನೋಡಲು ಮಂಗಳೂರಿನ ಬಜಪೆಗೆ ಬಂದಿದ್ದರು. ಆಗ ಬಂದಿದ್ದ ಗೆಳೆಯ ಪಟ್ಟಾಭಿರಾಮೇಗೌಡ ಮತ್ತು ನನ್ನ ಒಂದು ಸಂಭಾಷಣೆ ಈಗಲೂ ನನಗೆ ನೆನಪಿದೆ. ತಂದೆಯವರ ಮೃತದೇಹವನ್ನು ಮನೆಯ ಚಾವಡಿಯಲ್ಲಿ ಸಾರ್ವಜನಿಕರ ದರ್ಶನಕ್ಕೆ ಇಟ್ಟಿದ್ದೆವು. ಮನೆಯ ಮುಂದೆ

ಜನಸಾಗರವೇ ನೆರೆದಿತ್ತು. ಕೆಲವರೆಲ್ಲ ಕಣ್ಣೀರು ಹಾಕುತ್ತಿದ್ದರು ಮತ್ತು ಕೆಲವರು ಜೋರಾಗಿ ಅಳುತ್ತಿದ್ದರು. ಇದೆಲ್ಲವನ್ನೂ ನಾನು ದೂರ ಕೈಕಟ್ಟಿ ನಿಂತು ನೋಡುತ್ತಿದ್ದೆ. ಆಗ ಈ ಪಟ್ಟಾಭಿ ನನ್ನ ಬಳಿ ಬಂದವನು "ಏನೋ ಮೊಹಿದೀನ್, ತೀರಿಕೊಂಡಿರುವುದು ನಿನ್ನ ತಂದೆಯವರು ಮಾರಾಯ. ಜನರೆಲ್ಲ ಕಣ್ಣೀರು ಹಾಕುತ್ತಿದ್ದಾರೆ. ಅಳುತ್ತಿದ್ದಾರೆ. ನೀನು ಯಾರದೋ ಮನೆಗೆ, ಯಾರದೋ ಮರಣಕ್ಕೆ ಬಂದಂತೆ ದೂರ ನಿಂತಿದ್ದಿಯಲ್ಲೋ, ನಿನ್ನ ಕಣ್ಣಲ್ಲಿ ಒಂದು ತೊಟ್ಟು ಕಣ್ಣೀರು ಕೂಡಾ ಇಲ್ಲವಲ್ಲೋ, ಯಾಕೋ ನೀನು ಹೀಗೆ?" ಎಂದು ಕೇಳಿದ. ಈ ಪಟ್ಟಾಭಿ ಇದ್ದಾನಲ್ಲ ಇವನು ಹೀಗೆಯೇ ಮಾತನಾಡುವುದು. ಅವನು ಚುಚ್ಚುತ್ತಾನೋ, ನೋವಿನಿಂದ ಹೇಳುತ್ತಾನೋ ಒಂದೂ ಗೊತ್ತಾಗುವುದಿಲ್ಲ. ನಾನು ಅವನ ಮುಖವನ್ನು ದಿಟ್ಟಿಸಿ ನೋಡಿ ಹೇಳಿದೆ "ನಾನು ನನ್ನ ತಂದೆಯವರು ಗುಣಮುಖರಾಗಬೇಕೂಂತ ತುಂಬಾ ಕಷ್ಟಪಟ್ಟೆ ಕಣೋ ಪಟ್ಟಾಭಿ. ಬಹಳಷ್ಟು ಖರ್ಚು ಮಾಡಿದೆ. ಚಿಕಿತ್ಸೆ ಕೊಡಿಸಿದೆ. ಅವರ ಕೊನೆಯ ದಿನಗಳಲ್ಲಿ ಅವರ ಬಳಿಯೇ ಇದ್ದೆ. ಒಂದು ಚೂರೂ ಕದಲಲಿಲ್ಲ. ಇದಕ್ಕಿಂತ ಹೆಚ್ಚು ನನಗೇನೂ ಮಾಡಲು ಸಾಧ್ಯವಿರಲಿಲ್ಲ. ಅವರು ಬದುಕಬೇಕು, ಆರೋಗ್ಯವಂತರಾಗಬೇಕು ಎಂದು ಹಗಲೂ ರಾತ್ರಿ ಪ್ರಯತ್ನಪಟ್ಟೆ. ಆಗಲಿಲ್ಲ. ನೋಡು ಅಲ್ಲಿ ಅಳುತ್ತಾ, ಕಣ್ಣೀರು ಹಾಕುತ್ತಾ ಇದ್ದಾರಲ್ಲ, ಅವರು ಯಾರೂ ನನ್ನ ತಂದೆಯವರಿಗೆ ಒಂದು ಪೈಸೆ ಕೂಡಾ ಖರ್ಚು ಮಾಡಿದವರಲ್ಲ. ಒಂದು ದಿನ ಬಂದು ನನ್ನ ತಂದೆಯವರ ಜೊತೆ ಇದ್ದವರಲ್ಲ. ಅದಕ್ಕೇ ಅವರು ಕಣ್ಣೀರು ಹಾಕುತ್ತ ಇದ್ದಾರೆ. ಒಂದು ವೇಳೆ ನಾನೂ ಖರ್ಚು ಮಾಡದೇ ಇದ್ದಿದ್ದರೆ, ಪ್ರಯತ್ನಪಡದೇ ಇದ್ದಿದ್ದರೆ ಈಗ ಅವರ ಜೊತೆಯಲ್ಲೇ ಅಳುತ್ತಾ ಕುಳಿತಿರುತ್ತಿದ್ದೆ" ಎಂದೆ. ಪಟ್ಟಾಭಿ ಆಮೇಲೆ ಮಾತನಾಡಲಿಲ್ಲ. ತಲೆಯಾಡಿಸುತ್ತಾ ದೂರ ಹೋಗಿ ನಿಂತ.

ಮತ್ತೆ ಈ ಮರದ ವ್ಯಾಪಾರ ಮಾಡಲು ಯಾಕೋ ನನಗೆ ಇಷ್ಟವಾಗಲಿಲ್ಲ. ಬೇರೆ ಏನಾದರೂ ಮಾಡಬೇಕು ಎಂದು ತೀರ್ಮಾನಿಸಿದೆ. ಆಗ ಈ ಮರದ ವ್ಯಾಪಾರಿಗಳೆಲ್ಲ ನನಗೆ ಪರಿಚಿತರಾಗಿಬಿಟ್ಟಿದ್ದರು. ನನ್ನಲ್ಲಿ ಬಹಳ ಪ್ರೀತಿ ವಿಶ್ವಾಸ ತೋರಿಸುತ್ತಿದ್ದರು. ಮತ್ತೆ ಅದೇ ವ್ಯಾಪಾರ ಮಾಡಲು ಒತ್ತಾಯಿಸುತ್ತಿದ್ದರು. ಆದರೆ ನಾನು ಒಪ್ಪಲಿಲ್ಲ. ಕೈಯಲ್ಲಿ ಒಂದೂವರೆ ಲಕ್ಷ ರೂಪಾಯಿ ಇತ್ತು. 1977ರಲ್ಲಿ ಕಲ್ಲತ್ತಿಪುರದಲ್ಲಿ ಇಪ್ಪತ್ತೈದು ಎಕರೆ ತೋಟ ಖರೀದಿಸಿದೆ. ಆ ತೋಟದ ಹೆಸರು 'ಜೆಮಿನಿ ಫಾರ್ಮ್' ಎಂದು. ಕೆಮ್ಮಣ್ಣುಗುಂಡಿಗೆ ಹೋಗುವ ದಾರಿಯಲ್ಲಿ ಮೇಲಕ್ಕೆ ಹತ್ತುವಾಗ ತಿರುವಿನಲ್ಲಿ ಸಿಗುವ ಊರು ಕಲ್ಲತ್ತಿಪುರ. ಇಲ್ಲಿ ಮಲೇರಿಯಾ ಕಾದ್ರಿ ಬ್ಯಾರಿ ಅಂತ ಒಬ್ಬರು ಇದ್ದರು. ಇವರು ಟೀಕ್‌ವುಡ್ ವ್ಯಾಪಾರ ಮಾಡುತ್ತಿದ್ದರು. ಬಹಳ ದೊಡ್ಡ ಕುಳ. ಇಡೀ ಊರಿಗೆ ನಾಯಕನಂತಿದ್ದವರು. ಜನಪ್ರಿಯ ವ್ಯಕ್ತಿ. ಮತ್ತೊಬ್ಬರು ಅಡ್ಯಾರ್ ಅಹ್ಮದ್ ಹಾಜಿಯವರ ತಂಗಿಯ ಮಗ. ಇವರಿಬ್ಬರೂ ಮರದ ವ್ಯಾಪಾರ ಮಾಡುವಾಗ ನನಗೆ ಪರಿಚಯ ವಾದವರು. ಇನ್ನೊಬ್ಬರು ಜೋಕಟ್ಟೆಯ ಸೀದಿ ಹಾಜಿ. ಇವರು ನನ್ನ ಮಾವನ ಬಾವ. ಇವರೆಲ್ಲರೂ ಈ ಫಾರ್ಮ್ ಖರೀದಿಸಲು ನನಗೆ ಸಹಾಯ ಮಾಡಿದ್ದರು.

ಈ ತೋಟ ಖರೀದಿಸಿದ ಮೇಲೆ ಅಲ್ಲಿ ನನಗೆ ಒಬ್ಬ ರೆವೆನ್ಯೂ ಇನ್‌ಸ್ಪೆಕ್ಟರ್‌ರ ಪರಿಚಯವಾಯಿತು. ಪರಿಚಯ ಸ್ನೇಹವಾಯಿತು. ಅಲ್ಲೇ ಪಕ್ಕದಲ್ಲಿ ಲಿಂಗದ ಹಳ್ಳಿ ಎಂಬ ಊರಿತ್ತು. ಅಲ್ಲಿ ಕೆಂಟಿಬಾಯಿ ಅಂತ ಒಬ್ಬಳು ಕ್ರಿಶ್ಚಿಯನ್ ಹೆಂಗಸು ಇದ್ದಳು. ಅವಳು ಈ ಇನ್‌ಸ್ಪೆಕ್ಟರ್‌ಗೆ ಬಹಳ ಬೇಕಾದವಳು. ಅವಳ ತಾಯಿ ಮಂಗಳೂರಿನಿಂದ ಅಲ್ಲಿಗೆ ಮದುವೆಯಾಗಿ ಹೋದದ್ದಂತೆ. ಅಲ್ಲಿ ಈ ಬಾಯಿಗೂ ಒಂದು ಪುಟ್ಟ ತೋಟವಿತ್ತು. ಅವಳು ಅವಿವಾಹಿತೆ. ಆಗ ಅವಳಿಗೆ ಸುಮಾರು 40–45ರ ಪ್ರಾಯ. ತೋಟದಿಂದ ಬಂದ ವರಮಾನದಿಂದಲೇ ಅವಳು ಜೀವನ ಸಾಗಿಸುತ್ತಿದ್ದವಳು. ಅವಳ ತೋಟದಲ್ಲಿ ಒಂದು ಚಿಕ್ಕ ಮನೆಯಿತ್ತು. ಆ ಮನೆಯಲ್ಲಿ ನಾನು, ಈ ಇನ್‌ಸ್ಪೆಕ್ಟರ್ ಮತ್ತು ಕೆಲವು ಗೆಳೆಯರು ಆಗಾಗ ಸೇರುತ್ತಿದ್ದೆವು. ಈ ಬಾಯಿಯ ತೋಟ ನನ್ನ ತೋಟದ ಪಕ್ಕದಲ್ಲೇ ಇತ್ತು. ನಾನಲ್ಲಿ ಇಲ್ಲದಿದ್ದಾಗ ನನ್ನ ತೋಟದ ಕಡೆಯೂ ಇವಳು ಗಮನ ನೀಡುತ್ತಿದ್ದಳು. ಅವಳ ಅಣ್ಣನ ಮಕ್ಕಳು, ಮೊಮ್ಮಕ್ಕಳು ಈಗಲೂ ಬಜಪೆಯ ನಮ್ಮ ಮನೆಗೆ ಆಗಾಗ ಬರುತ್ತಿರುತ್ತಾರೆ. ನನಗೆ ಈಗಲೂ ಅಲ್ಲಿ ಕೆಲವು ಪರಿಚಯಸ್ಥರಿದ್ದಾರೆ. ಈ ಬಾಯಿಯ ಕುಟುಂಬದ ಕೆಲವು ವಿವಾದಗಳನ್ನು ಪರಿಹರಿಸಲು ನಾನು ಸಹಾಯ ಮಾಡಿದ್ದೆ.

ಹೀಗೆ ನಾನು ಒಬ್ಬ ಕೃಷಿಕನಾದೆ. ನಿಷ್ಠೆಯಿಂದ ಕೃಷಿ ಮಾಡತೊಡಗಿದೆ. ಹೊಸ ಹೊಸ ತಳಿಗಳನ್ನೆಲ್ಲ ತಂದು ಆಧುನಿಕತೆ ಅಳವಡಿಸಿಕೊಂಡೆ. ಆಗ ಅಲ್ಲಿಯ ಕೃಷಿಕರು ರಾಗಿ, ಜೋಳ ಮುಂತಾದ ಕೃಷಿಗಳನ್ನೇ ಮಾಡುತ್ತಿದ್ದರು. ನಾನು ಅಲ್ಲಿ ಮೊದಲ ಬಾರಿಗೆ ಸನ್‌ಫ್ಲವರ್ ಮಾಡಿದೆ. ಆತನಕ ಯಾರೂ ಅಲ್ಲಿ ಅದನ್ನು ಮಾಡಿರಲಿಲ್ಲ. ಮತ್ತೆ ಸ್ವಲ್ಪ ಅಡಿಕೆತೋಟ ಮಾಡಿದೆ. ಮೂರು ಸಾವಿರ ರೂಪಾಯಿ ಕೊಟ್ಟು ಕೆಂಪು ಬಣ್ಣದ ಒಂದು ಹೊಸ ರಾಜದೂತ್ ಬೈಕ್ ಖರೀದಿಸಿದೆ. ಆಮೇಲೆ ಅದರಲ್ಲೇ ತೋಟ ಸುತ್ತಾಡತೊಡಗಿದೆ. ಆಗ ಅಲ್ಲಿ ಸುರೇಂದ್ರ ಅಂತ ಒಬ್ಬ ಸರ್ಕಲ್ ಇನ್‌ಸ್ಪೆಕ್ಟರ್‌ರ ಪರಿಚಯವಾಯಿತು. ಆಗಾಗ ಅವರ ಮನೆಗೂ ಟೈಂಪಾಸ್‌ಗೆ ಹೋಗುತ್ತಾ ಇದ್ದೆ. ಅವರು ರುಚಿಯಾದ ಅಕ್ಕಿರೊಟ್ಟಿ, ಮಾಂಸ ಸಾರು ಮಾಡುತ್ತಿದ್ದರು. ಅದರ ರುಚಿ ಸವಿಯಲಿಕ್ಕಾಗಿಯೇ ಹೆಚ್ಚಾಗಿ ನಾನು ಅವರ ಮನೆಗೆ ಹೋಗುತ್ತಿದ್ದುದು.

ನಾನು ಚಿಕ್ಕಮಗಳೂರು ಜೇಸಿಸ್‌ನಲ್ಲಿರುವಾಗ ಭೂಮಿ, ಕುಟುಂಬ ಕಲಹ ಅಥವಾ ಬೇರೇನಾದರೂ ವಿವಾದಗಳಿದ್ದಲ್ಲಿ ನನ್ನಲ್ಲಿ ದೂರು ಕೊಡಲು, ಪಂಚಾತಿಯಿಗೆ ಕರೆಯಲು ಬರುತ್ತಿದ್ದರು. ನಾನು ಹೋಗುತ್ತಿದ್ದೆ ಅಥವಾ ನಾನಿದ್ದಲ್ಲಿಗೆ ಎರಡು ಕಡೆಯುವರನ್ನೂ ಕರೆಸುತ್ತಿದ್ದೆ. ಪಂಚಾಯಿತಿಯಲ್ಲಿ ನನ್ನ ಮಾತಿಗೆ ಎಲ್ಲರೂ ಬೆಲೆ ಕೊಡುತ್ತಿದ್ದರು. ಗೌರವಿಸುತ್ತಿದ್ದರು. ಅವರಿಗೆಲ್ಲ ನಾನು ನ್ಯಾಯ ಪಾಲಿಸುತ್ತೇನೆ ಎಂಬ ವಿಶ್ವಾಸವಿತ್ತು. ನಾನು ಎರಡು ಕಡೆಯ ವಾದವನ್ನೂ ಆಲಿಸಿ ಹೆಚ್ಚು ಚರ್ಚೆಗೆ ಆಸ್ಪದ ಕೊಡದೆ ನ್ಯಾಯ ವಾಗಿ ತೀರ್ಪು ಹೇಳಿಬಿಡುತ್ತಿದ್ದೆ. ಇದನ್ನು ಎರಡು ಕಡೆಯವರೂ ಒಪ್ಪಿಕೊಳ್ಳುತ್ತಿದ್ದರು. ಇಲ್ಲಿ ಒಂದು ವಿಶೇಷ ಎಂದರೆ ಚಿಕ್ಕಮಗಳೂರಿನಲ್ಲಿ ದೊಡ್ಡ ದೊಡ್ಡ ಮೇಧಾವಿಗಳಿದ್ದರೂ ಜನ ನನ್ನನ್ನೇ ಹುಡುಕಿ ಬರುತ್ತಿದ್ದರು. ಅವರನ್ನು ಯಾರಾದರೂ ಕರೆಯಲು ಹೋದರೆ

“ಮೊಹಿದೀನ್ ಬಳಿ ಹೋಗಿ, ಇದಕ್ಕೆಲ್ಲ ಅವರೇ ಸರಿ. ಅರ್ಧ ಗಂಟೆಯಲ್ಲಿ ಪರಿಹರಿಸಿಬಿಡುತ್ತಾರೆ” ಎಂದು ಅವರೇ ಸಲಹೆ ಕೊಡುತ್ತಿದ್ದರಂತೆ.

ನಮ್ಮ ಬಜಪೆಯಲ್ಲಿ ಕೂಡಾ ಸಣ್ಣಪುಟ್ಟ ಗಲಾಟೆ, ಜಾಗದ ತಕರಾರು, ಮಸೀದಿಯಲ್ಲಿ ಏನಾದರೂ ವಿವಾದವಾದಾಗ ಪಂಚಾಯಿತಿಗೆ ನನ್ನನ್ನು ಕರೆಯುತ್ತಿದ್ದರು. ನಾನು ಊರಲ್ಲಿಲ್ಲದಿದ್ದರೆ ‘ಮ್ಯೊದಿನಾಕ ಬರಲಿ, ಅವರು ಬಂದ ಮೇಲೆ ಎಲ್ಲ ಸರಿಮಾಡುವ’ ಎಂದು ಮುಂದೂಡುತ್ತಿದ್ದರು. ಊರಿನಲ್ಲಿ ಕೂಡ ನಾನು ಹೇಳಿದ ಮಾತಿಗೆ ಬೆಲೆ ಕೊಡುತ್ತಿದ್ದರು. ಅದು ನನಗೆ ಬಹಳ ಸಂತೋಷ ಕೊಡುತ್ತಿತ್ತು.

ನನ್ನೂರು ಬಜಪೆಯಲ್ಲಿ ಒಮ್ಮೆ ಒಂದು ದೊಡ್ಡ ಪ್ರಕರಣ ನಡೆಯಿತು. ನಮ್ಮಲ್ಲಿ ‘ಸೌಹಾರ್ದ ಸಮಿತಿ’ ಎಂಬ ಸಂಘಟನೆ ಇತ್ತು. ಇದು ಊರಿನಲ್ಲಿ ಸೌಹಾರ್ದ ಕಾಪಾಡಲಿಕ್ಕಾಗಿ ಪ್ರಜ್ಞಾವಂತರು ಕೂಡಿ ಕಟ್ಟಿಕೊಂಡ ಒಂದು ಸಂಘಟನೆ. ಇದರಲ್ಲಿ ಹಿಂದೂ, ಮುಸ್ಲಿಂ, ಊರಿನ ಗಣ್ಯರು, ಧಾರ್ಮಿಕ–ರಾಜಕೀಯ ನೇತಾರರು ಎಲ್ಲರೂ ಇದ್ದರು. ಪಾಪ್ಯುಲರ್ ಜಗದೀಶ್ ಶೆಟ್ಟಿ ಇದರ ಅಧ್ಯಕ್ಷ. ಇವರು ಗುತ್ತಿನ ಬಂಟ ಸಮುದಾಯದವರು. ಇವರಿಗೆ ಊರಿನಲ್ಲಿ ಎಸ್ಟೇಟ್, ಕೃಷಿ ಇತ್ತು. ಮುಂಬಯಿಯಲ್ಲಿ ಕೂಡಾ ವ್ಯಾಪಾರ ಇತ್ತು. ಜಾತ್ಯತೀತ ವ್ಯಕ್ತಿ. ಜಾತಿ ಧರ್ಮ ನೋಡದೆ ನ್ಯಾಯ ಪಾಲಿಸುತ್ತಿದ್ದವರು. ಕೋಮುಗಲಭೆಯ ಸಂದರ್ಭದಲ್ಲಿ ಅಲ್ಪಸಂಖ್ಯಾತರಿಗೆ ಬಹಳ ಸಹಾಯ ಮಾಡಿದವರು, ರಕ್ಷಣೆ ಒದಗಿಸಿದವರು. ನಮ್ಮೂರಲ್ಲಿ ಯಾವುದೇ ಕೋಮುಗಲಭೆ, ಮನಸ್ತಾಪ ಆಗದಂತೆ ನೋಡಿಕೊಂಡವರು. ಒಂದು ವೇಳೆ ಅಂತಹ ಘಟನೆಗಳೇನಾದರೂ ಆದರೆ ಪಂಚಾಯಿತಿ ಮಾಡಿ ಮುಗಿಸಿದವರು.

ನಿಮಗೆ ನೆನಪಿರಬಹುದು ಬಿಜೆಪಿ ಹಿರಿಯ ಮುಖಂಡ ಎಲ್.ಕೆ. ಅಡ್ವಾಣಿಯವರು ರಥಯಾತ್ರೆ ದೇಶಾದ್ಯಂತ ಸಂಚರಿಸಿದ್ದು. ನಮ್ಮೂರಿಗೂ ಈ ರಾಮ ರಥ ಬರುವುದಿತ್ತು. ಸೌಹಾರ್ದ ಸಮಿತಿ ವತಿಯಿಂದ ಈ ರಥಕ್ಕೆ ಜಗದೀಶ್ ಶೆಟ್ಟಿಯವರು ಒಂದು ಹಾರ ಹಾಕುವುದು ಎಂದು ಸಮಿತಿಯಲ್ಲಿ ತಿರ್ಮಾನವಾಯಿತು. ಈ ಸಮಿತಿಯಲ್ಲಿ ಅಬುಲ್ ಹಸನ್ ಮೌಲವಿ ಅಂತ ಒಬ್ಬರು ಇದ್ದರು. ಅವರು ಹಿಂದೊಮ್ಮೆ ಬಜಪೆ ಮಸೀದಿಯಲ್ಲಿ ಗುರುಗಳಾಗಿದ್ದವರು. ಇವರು ರಾಮರಥಕ್ಕೆ ನಾನೂ ಒಂದು ಹಾರ ಹಾಕುತ್ತೇನೆ ಎಂದರು. ಆಗ ಜಗದೀಶ್ ಶೆಟ್ಟಿಯವರು ಇದು ನಿಮ್ಮ ಧರ್ಮಕ್ಕೆ ವಿರುದ್ಧವಾಗುವುದಾದರೆ ಅಥವಾ ಬೇರೇನಾದರೂ ವಿವಾದವಾಗುವುದಾದರೆ ನೀವು ಹಾರ ಹಾಕಬೇಡಿ ಎಂದು ಹೇಳಿದರು. ಇಲ್ಲ, ಅಂಥದ್ದೇನೂ ಆಗುವುದಿಲ್ಲ ಎಂದ ಮೌಲವಿಯವರಿಗೆ ಹಾರ ಹಾಕಲು ಜಗದೀಶ್ ಶೆಟ್ಟಿಯವರು ಒಪ್ಪಿಗೆ ನೀಡಿದರು. ಹಾಗೆ, ರಥ ಬಂತು. ಮೊದಲು ಜಗದೀಶ್ ಶೆಟ್ಟಿಯವರು ಹಾರ ಹಾಕಿದರು. ನಂತರ ಮೌಲವಿ ಹಾಕಿದರು.

ಮರುದಿನ ಪತ್ರಿಕೆಗಳಲ್ಲಿ ‘ರಾಮರಥಕ್ಕೆ ಬಜಪೆ ಮಸೀದಿಯ ಗುರುಗಳಿಂದ ಮಾಲಾರ್ಪಣೆ’ ಎಂದು ದೊಡ್ಡದಾಗಿ ಸುದ್ದಿ ಪ್ರಕಟವಾಯಿತು. ಬೆಳ್ಳಂಬೆಳಗ್ಗೆಯೇ ಮಸೀದಿಯ ಆಡಳಿತ ಸಮಿತಿಯವರಿಗೆ ಫೋನ್‌ಗಳ ಸುರಿಮಳೆ. ‘ಮಸೀದಿಯ

ಗುರುಗಳು ರಾಮರಥಕ್ಕೆ ಹಾರ ಹಾಕಿದ್ದು ಸರಿಯಾ' ಎಂದು ಅಲ್ಲಲ್ಲಿ ಚರ್ಚೆಗಳು ಪ್ರಾರಂಭವಾಯಿತು. ವಾಸ್ತವದಲ್ಲಿ ಆಗ ಈ ಮೌಲವಿಯವರು ಯಾವುದೇ ಮಸೀದಿಯ ಗುರುಗಳಾಗಿರಲಿಲ್ಲ. ಬಜಪೆ ಮಸೀದಿಯಲ್ಲಿ ಬೇರೆ ಗುರುಗಳಿದ್ದರು.

ಊರಿನ ಯುವಕರೆಲ್ಲ ಅಲ್ಲಲ್ಲಿ ಗುಂಪುಗೂಡತೊಡಗಿದರು. ಮೌಲವಿಯವರಲ್ಲಿ ಹೋಗಿ ಕೇಳುವುದು ಎಂದು ಕೆಲವು ಯುವಕರು ತೀರ್ಮಾನಿಸಿದರು. ಏನಾದರೂ ಸರಿ ಈ ಮೌಲವಿಯನ್ನು ಬಿಡಬಾರದು ಎಂದು ಇನ್ನೊಂದು ಗುಂಪು ಮಾತನಾಡಿಕೊಳ್ಳ ತೊಡಗಿತು. ಆಗ ಜಗದೀಶ್ ಶೆಟ್ಟಿಯವರು ಊರಲ್ಲಿರಲಿಲ್ಲ. ರಥ ಬಂದ ದಿನ ರಾತ್ರಿಯೇ ಅವರು ಮುಂಬೈಗೆ ಹೋಗಿಯಾಗಿತ್ತು. ಅವರಿಗೆ ಊರಿನಲ್ಲಿ ಯುವಕರು ಒಟ್ಟಾದ ವಿಷಯ ತಿಳಿಯಿತು. ಕೂಡಲೇ ಅವರು ಬಿ.ಎಂ. ಝಕರಿಯಾನಿಗೆ ಫೋನ್ ಮಾಡಿ "ನೋಡಿ, ನಿಮ್ಮ ಯುವಕರೆಲ್ಲ ಮೌಲವಿಯವರಿಗೆ ಹೊಡೆಯಲು ಅವರ ಮನೆಗೆ ಹೊರಟಿದ್ದಾರಂತೆ. ಏನೂ ಆಗದಂತೆ ನೀವೆಲ್ಲ ನೋಡಿಕೊಳ್ಳಬೇಕು. ನಾನು ಆದಷ್ಟು ಬೇಗ ಊರಿಗೆ ಬರುತ್ತೇನೆ. ಯಾವ ಕಾರಣಕ್ಕೂ ಜಗಳಕ್ಕೆ ಅವಕಾಶ ನೀಡಬಾರದು. ಮೌಲವಿಯವರು ಮಸೀದಿಗೆ ಬಂದರೆ (ಅಂದು ಶುಕ್ರವಾರ) ಏನೂ ತೊಂದರೆ ಮಾಡಬಾರದು" ಎಂದು ತಿಳಿಸಿದರಂತೆ. ಈ ಝಕರಿಯಾ ಸೌಹಾರ್ದ ಸಮಿತಿಯ ಒಬ್ಬ ಸದಸ್ಯ. ಅವನು ಮಸೀದಿ ಕಮಿಟಿಯಲ್ಲೂ ಸದಸ್ಯನಾಗಿದ್ದ. ಜಗದೀಶ ಶೆಟ್ಟಿಗೆ ಈ ಝಕರಿಯಾನ ಬಗ್ಗೆ ಬಹಳ ವಿಶ್ವಾಸವಿತ್ತು. ಝಕರಿಯಾ ಜಗದೀಶ್ ಶೆಟ್ಟಿಯವರು ಫೋನ್ ಮಾಡಿದ ಬಗ್ಗೆ ಯುವಕರಲ್ಲಿ ತಿಳಿಸಿ ಅವರು ಬರುವವರೆಗೆ ಮೌಲವಿಯವರಿಗೆ ಯಾರೂ ಏನೂ ಮಾಡಬಾರದು ಎಂದು ಸಮಾಧಾನಪಡಿಸಿದ. ಮೌಲವಿಯವರು ತಡವಾಗಿ ಜುಮಾಪ್ರಾರ್ಥನೆಗೆ ಬಂದು ಯಾರಿಗೂ ತಿಳಿಯದಂತೆ ಬೇಗ ಹೋಗಿಬಿಟ್ಟಿದ್ದರು. ಯುವಕರು ಜಗದೀಶ್ ಶೆಟ್ಟಿಯವರು ಬರುವವರೆಗೆ ಮೌಲವಿಯವರಿಗೆ ನಾವೇನೂ ತೊಂದರೆ ಕೊಡುವುದಿಲ್ಲ ಎಂದು ಭರವಸೆಯನ್ನೂ ನೀಡಿದ್ದರು.

ಮರುದಿನ ಜಗದೀಶ್ ಶೆಟ್ಟಿಯವರು ಬಜಪೆ ನಿಲ್ದಾಣದಲ್ಲಿ ವಿಮಾನದಿಂದ ಇಳಿದವರೇ ಅಲ್ಲೊಂದು ಸಿಮೆಂಟ್ ಅಂಗಡಿಯ ಮುಂದೆ ಕಾರು ನಿಲ್ಲಿಸಿ, ಅಲ್ಲೊಬ್ಬ ಖಾದರ್ ಅಂತ ಇದ್ದರು. ಅವರಲ್ಲಿ "ಯಾರು ಮೌಲವಿಯವರಿಗೆ ಹೊಡೆಯಲು ಹೊರಟಿದ್ದು, ಯಾರದು" ಎಂದು ಸ್ವಲ್ಪ ಜೋರಾಗಿ ಗದರಿಸುವಂತೆ ಮಾತನಾಡಿದರಂತೆ. ಇದು ಬಾಯಿಂದ ಬಾಯಿಗೆ ಹರಡಿ, ಒಂದಕ್ಕೆ ಹತ್ತು ಸೇರಿ 'ಜಗದೀಶ್ ಶೆಟ್ಟಿಯವರು ಬ್ಯಾರಿಗಳಿಗೆ ಬೈದರಂತೆ' ಎಂಬ ವದಂತಿಗಳು ಊರೆಲ್ಲ ಹರಡತೊಡಗಿತು. ವಾತಾವರಣ ಕಾವೇರತೊಡಗಿತು.

ಆಗ ಪಂಚಾಯತ್ ಚೆಯರ್‌ಮೆನ್ ಆಗಿದ್ದ ಸುಂದರ ಶೆಟ್ಟಿಯವರು ಒಂದು ತುರ್ತು ಸಭೆ ಕರೆದರು. ಆ ಸಭೆಯಲ್ಲಿ ಅಲ್ಲಿನ ಲಯನ್ಸ್‌ನ ಹಲವು ಸದಸ್ಯರು, ಊರಿನ ಹಿಂದೂ ಮುಸ್ಲಿಂ ಹಿರಿಯರು, ಧಾರ್ಮಿಕ, ಸಾಮಾಜಿಕ, ರಾಜಕೀಯ ನಾಯಕರು ಎಲ್ಲ ಸೇರಿದರು. ಆಗ ಈ ಜಗದೀಶ್ ಶೆಟ್ಟಿಯವರು ಜೀಪು ತೆಗೆದುಕೊಂಡು ಸೀದಾ ಬಂದದ್ದು ನನ್ನ ಮನೆಗೆ "ನೀವು ಬೇಕು ಮೊಹಿದೀನ್‌ರವರೇ, ನೀವಿಲ್ಲದೆ ಇದು

ಸರಿಯಾಗುವುದಿಲ್ಲ. ನೀವೊಂದು ಮಾತು ಹೇಳಿದರೆ ಆ ಯುವಕರೆಲ್ಲ ಬಾಯಿಮುಚ್ಚಿ ಸುಮ್ಮನಿರುತ್ತಾರೆ. ಬನ್ನಿ, ನಮಗೆ ನಮ್ಮೂರಿನ ಸೌಹಾರ್ದ ಮುಖ್ಯ" ಎಂದು ನನ್ನನ್ನೂ, ಝಕರಿಯಾನನ್ನೂ ಕರೆದುಕೊಂಡು ಸಭೆ ನಡೆಯುವಲ್ಲಿಗೆ ಬಂದರು. ಅಲ್ಲಿ ಎಲ್ಲರೂ ನಮ್ಮನ್ನೇ ಕಾಯುತ್ತಿರುವಂತೆ ಕುಳಿತಿದ್ದರು. ಮೌಲವಿಯೂ ಇದ್ದರು.

ಜಗದೀಶ್ ಶೆಟ್ಟಿಯವರು ಮೊದಲು ಮಾತು ಪ್ರಾರಂಭಿಸಿದರು. ಅಂದಿನ ಪತ್ರಿಕೆಯಲ್ಲಿ 'ರಾಮರಥಕ್ಕೆ ಹಾರ ಹಾಕಿದ ಮೌಲವಿ ನಮ್ಮ ಮಸೀದಿಯ ಗುರುಗಳಲ್ಲ' ಎಂದು ನಾವು ನೀಡಿದ್ದ ಸ್ಪಷ್ಟೀಕರಣ ಪ್ರಕಟವಾಗಿತ್ತು. ಇಡೀ ಪ್ರಕರಣದ ಬಗ್ಗೆ ಬಹಳ ಹೊತ್ತು ಚರ್ಚೆಯಾಗಿ ಸಭೆ ಸುಖಾಂತ್ಯವಾಯಿತು. ಇಲ್ಲಿ ಜಗದೀಶ್ ಶೆಟ್ಟಿ ಹಾಗೂ ನನ್ನ ಎರಡು ಮಾತುಗಳು ಬಹಳ ಪರಿಣಾಮ ಬೀರಿದ್ದವು. ಎಲ್ಲರೂ ಒಂದೇ ತಾಯಿ ಮಕ್ಕಳಂತೆ ಸೌಹಾರ್ದದಿಂದ ಬಾಳಬೇಕೆಂದು ಇಬ್ಬರೂ ಕರೆಕೊಟ್ಟೆವು. ವದಂತಿಗಳಿಗೆ ಕಿವಿಗೊಡಬಾರದು, ಏನಾದರೂ ತಪ್ಪು ಅಭಿಪ್ರಾಯಗಳಿದ್ದಲ್ಲಿ ಜಗದೀಶ್ ಶೆಟ್ಟಿ ಅಥವಾ ಬಿ.ಎ. ಮೊಹಿದೀನ್ ಅವರಲ್ಲಿ ತಿಳಿಸಬೇಕೆಂದು ಎಲ್ಲರೂ ಸಲಹೆ ನೀಡಿದರು.

ಈ ಸಭೆಯಿಂದ ಇನ್ನೊಂದು ದೊಡ್ಡ ಪ್ರಯೋಜನವಾಗಿದ್ದೆಂದರೆ ಇಲ್ಲಿ ಕೆಲವು ಪ್ರಭಾವಿ ಶೆಟ್ಟಿ–ಶೆಟ್ಟಿಗಳಿಗೆ, ಬ್ಯಾರಿ–ಬ್ಯಾರಿಗಳಿಗೆ ಒಬ್ಬರನ್ನೊಬ್ಬರಿಗೆ ಕಂಡರೆ ಆಗುತ್ತಿರಲಿಲ್ಲ. ಎದುರೆದುರು ಸಿಕ್ಕಿದರೂ ಮುಖ ನೋಡುತ್ತಿರಲಿಲ್ಲ. ಅವರವರ ಪ್ರತಿಷ್ಠೆ ಮತ್ತು ವೃತ್ತಿಮತ್ಸರ ಹೊರತು ಇದರಲ್ಲಿ ಬೇರೇನೂ ಇರಲಿಲ್ಲ. ಅಂದಿನ ಈ ಸಭೆಯಲ್ಲಿ ಎಲ್ಲರನ್ನೂ ಪರಸ್ಪರ ಕೈಕೊಡಿಸಲಾಯಿತು. ರಾಜಿ ಮಾಡಿಸಲಾಯಿತು. ಅವರೆಲ್ಲ ಗೆಳೆಯರಾದರು. ಈ ಸಭೆ ಅನಂತರ ಬಜಪೆಯ ಸೌಹಾರ್ದಕ್ಕೆ ಒಂದು ಮಹತ್ವದ, ಮಾದರಿ ಕೊಡುಗೆಯಾಯಿತು. ಈ ಪಾಪ್ಯುಲರ್ ಜಗದೀಶ್ ಶೆಟ್ಟಿಯವರು ಇತ್ತೀಚೆಗೆ ತೀರಿಕೊಂಡರು.

ನಾನು ತೋಟ ಖರೀದಿಸಿ ಕೃಷಿಕನಾದೆ ಎಂದೆನಲ್ಲ; ಈಗ ಮತ್ತೆ ಅಲ್ಲಿಗೆ ಬರುತ್ತೇನೆ – ಅಷ್ಟೊತ್ತಿಗಾಗಲೇ ಅಲ್ಲಿ ಏನೋ ಒಂದು ರಾಜಕೀಯ ಪ್ರಾರಂಭವಾಗತೊಡಗಿತ್ತು. ಪ್ರಾರಂಭದಲ್ಲಿ ಅದು ಏನೆಂದೇ ನನಗೆ ಗೊತ್ತಾಗಲಿಲ್ಲ. ನಾನು ಅದರ ಬಗ್ಗೆ ತಲೆ ಕೆಡಿಸಲು ಹೋಗಲಿಲ್ಲ. ನಮ್ಮ ಪಕ್ಕದ ಊರು ತನಿಖೆಬೈಲು ಎಂಬಲ್ಲಿ ಗೋವಿಂದೇಗೌಡ ಎಂಬವರೊಬ್ಬರು ಇದ್ದರು. ಅವರು ಸೋಷಿಯಲಿಸ್ಟ್. ಒಂದು ದಿನ ಅವರು ನನ್ನಲ್ಲಿ ಬಂದಿದ್ದರು. ತನ್ನ ಪರಿಚಯ ಹೇಳಿಕೊಂಡರು. ಈಗ ಒಂದು ಹೊಸ ಕಾನೂನು ಬಂದಿದೆ ನಿಮಗೆ ಗೊತ್ತಿದೆಯಾ ಎಂದು ಕೇಳಿದರು. ಇಲ್ಲ ಎಂದೆ. ಖಾಲಿ ಭೂಮಿಯನ್ನು ಕೃಷಿ ಇಲ್ಲದ ಕೃಷಿಕನಿಗೆ ಹಂಚಬೇಕು ಎಂದು ಸರಕಾರ ಕಾನೂನು ತಂದಿದೆ. ನಮ್ಮಲ್ಲಿ ಒಂದು 400 ಎಕರೆ ಸರಕಾರಿ ಭೂಮಿ ಖಾಲಿ ಇದೆ. ನಾನು ಕೆಲವು ಬಡವರ, ಭೂಮಿ ಇಲ್ಲದವರ ಅರ್ಜಿಗಳನ್ನು ತಂದಿದ್ದೇನೆ. ಇದನ್ನು ನೀವು ನಿಮ್ಮ ಗೆಳೆಯ ರೆವೆನ್ಯೂ ಇನ್‌ಸ್ಪೆಕ್ಟರ್‌ರಿಗೆ ಕೊಡಬೇಕು. ನಾನು ರೆಕಮಂಡ್ ಮಾಡುತ್ತೇನೆ. ನೀವು ಇನ್‌ಸ್ಪೆಕ್ಟರನ್ನು ತಹಶೀಲ್ದಾರರ ಬಳಿ ಹೋಗುವಂತೆ ಹೇಳಿ ಆರ್ಡರ್ ಮಾಡಿಸಬೇಕು. ಈ ಬಗ್ಗೆ ಸ್ವಲ್ಪ ಮುತುವರ್ಜಿ ವಹಿಸಬೇಕು ಎಂದರು. ಯಾಕೋ ಆ ಮನುಷ್ಯ ನನಗೆ

ಬಹಳ ಇಷ್ಟವಾದರು. ಬಡವರು, ತುಳಿತಕ್ಕೊಳಗಾದವರ ಬಗ್ಗೆ ಅವರಿಗಿರುವ ಕಾಳಜಿ, ಪ್ರಾಮಾಣಿಕತೆ, ನಿಷ್ಠೆ ನನ್ನನ್ನು ಚಿಂತಿಸುವಂತೆ ಮಾಡಿತು. ಅಲ್ಲಿಂದ ಹೋದ ಅವರು ಹತ್ತಿರದಲ್ಲಿ ಸರಕಾರಿ ಖಾಲಿ ಭೂಮಿಗಳನ್ನೆಲ್ಲ ಸರ್ವೆ ಮಾಡಿಸಿದರು. ಹೀಗೆ ಸರ್ವೆ ಮಾಡುವಾಗ ಅಲ್ಲಿಯ ಕೆಲವು ಸ್ಥಾಪಿತ ಹಿತಾಸಕ್ತಿಗಳು ಅಡ್ಡಗಾಲು ಇಡಲು, ಅಪಪ್ರಚಾರ ಮಾಡಲು ತೊಡಗಿದರು. ಆಗ ಮಾರ್ಗದ ಮಲ್ಲಪ್ಪ ಎಂಬ ಶಾಸಕರಿದ್ದರು. ಅವರು ಕಾಂಗ್ರೆಸ್ ಸರಕಾರದಲ್ಲಿ ಆರೋಗ್ಯ ಸಚಿವರಾಗಿದ್ದವರು. ಈ ಸ್ಥಾಪಿತ ಹಿತಾಸಕ್ತಿಗಳು ಅವರ ಬಳಿ ಚಾಡಿ ಹೇಳತೊಡಗಿದರು. 'ಈ ಗೋವಿಂದೇಗೌಡ ಭೂಮಿ ಕೊಡಿಸುತ್ತೇನೆ ಎಂದು ಹೇಳಿ ಬಡವರು, ಕೂಲಿ ಕಾರ್ಮಿಕರಲ್ಲಿ ದುಡ್ಡು ವಸೂಲಿ ಮಾಡುತ್ತಾ ಇದ್ದಾನೆ. ನಿಮಗೆ, ಸರಕಾರಕ್ಕೆ ಕೆಟ್ಟ ಹೆಸರು ತರುತ್ತಿದ್ದಾನೆ, ಇದೆಲ್ಲ ಸರಿಯಲ್ಲ. ಇದಕ್ಕೆಲ್ಲ ನೀವು ಅವಕಾಶ ಮಾಡಿಕೊಡಬಾರದು' ಎಂದೆಲ್ಲ ದೂರತೊಡಗಿದರು.

ಅನಂತರ ಕಲ್ಲತ್ತಿಪುರದಲ್ಲಿ ಈ ಬಗ್ಗೆ ಒಂದು ಸಭೆ ನಡೆಯಿತು. ಈ ಸಭೆಗೆ ನಾನೂ ಹೋಗಿದ್ದೆ. ಆ ಸಭೆಯಲ್ಲಿ ಒಬ್ಬರು ವಿಷಯ ಮಂಡಿಸಿದರು. ಅದರಲ್ಲಿ ಗೋವಿಂದೇಗೌಡರು ಬಡವರಿಂದ ಹಣ ವಸೂಲಿ ಮಾಡುತ್ತಿದ್ದಾರೆ, ಏನೂ ತಿಳಿಯದ ಕಾರ್ಮಿಕರಿಗೆ ಮೋಸ ಮಾಡುತ್ತಿದ್ದಾರೆ ಎಂಬ ವಿಷಯವೂ ಪ್ರಸ್ತಾಪವಾಯಿತು.

ಆಗ ಗೋವಿಂದೇಗೌಡರು ಹೇಳಿದರು "ನೋಡಿ ಶಾಸಕ ಮಲ್ಲಪ್ಪನವರೇ, ನಿಮ್ಮ ಸರಕಾರ ಭೂಮಿ ಇಲ್ಲದವರಿಗೆ ಭೂಮಿ ಕೊಡಬೇಕು ಎಂಬ ಕಾನೂನು ತಂದಿದೆ. ನಾನು ನಮ್ಮ ಕಡೆ ಇರುವ ಕೆಲವು ಸರಕಾರಿ ಖಾಲಿ ಭೂಮಿಯನ್ನೆಲ್ಲ ಗುರುತಿಸಿದ್ದೇನೆ ಮತ್ತು ಬಡವರು, ರೈತರು, ಕಾರ್ಮಿಕರನ್ನೆಲ್ಲ ಒಟ್ಟುಗೂಡಿಸಿ ಅವರಿಗೆ ವಿಷಯ ವಿವರಿಸಿ ಮನದಟ್ಟು ಮಾಡಿದ್ದೇನೆ. ಇದರ ಕೆಲಸಕ್ಕಾಗಿ ಒಬ್ಬೊಬ್ಬರಿಂದ ತಲಾ 15 ರೂಪಾಯಿ ತೆಗೆದುಕೊಂಡಿದ್ದೇನೆ. ಈ ಕೆಲಸಕ್ಕಾಗಿ ನನಗೆ ಇನ್ನೂ ತಲಾ 10 ರೂಪಾಯಿ ಬೇಕಾಗಬಹುದು. ಈ ದುಡ್ಡನ್ನು ನಾನು ಯಾಕೆ ತೆಗೆದುಕೊಂಡಿದ್ದೇನೆ ಎಂದರೆ ನನ್ನಲ್ಲಿ ದುಡ್ಡಿಲ್ಲ. ಅವರು ಕೊಟ್ಟ ದುಡ್ಡನ್ನು ನಾನೇನೂ ತಿಂದು ಹಾಕಿಲ್ಲ. ಈ ದುಡ್ಡಲ್ಲಿ ಭೂಮಿಯ ತನಿಖೆ ಮಾಡಿಸಿ, ಬರೆಸಿ, ಸರ್ವೆ ಮಾಡಿಸಿ ರೆವೆನ್ಯೂ ಇನ್‌ಸ್ಪೆಕ್ಟರ್‌ರಿಂದ ಇನ್‌ಸ್ಪೆಕ್ಷನ್, ಇನ್ನೊಂದು, ಮತ್ತೊಂದು ಎಲ್ಲ ಮಾಡಿಸಿದ್ದೇನೆ. ಇದನ್ನೆಲ್ಲ ಮಾಡಿಸಲು ಖರ್ಚು ಆಗುತ್ತೆ. ಅದಕ್ಕೆ ದುಡ್ಡು ಬೇಕು. ಅದಕ್ಕಾಗಿ ಎಲ್ಲರಿಂದಲೂ ಅದಕ್ಕೆ ತಗಲುವಷ್ಟು ಹಣ ತೆಗೆದುಕೊಂಡಿದ್ದೇನೆ. ನಿಮ್ಮ ಹಾಗೆ ನನ್ನಲ್ಲಿ ದುಡ್ಡಿದ್ದಿದ್ದರೆ ನಾನು ಖಂಡಿತ ಅವರಿಂದ ತೆಗೆದುಕೊಳ್ಳುತ್ತಿರಲಿಲ್ಲ. ಶ್ರಮದ ಜೊತೆ ಆ ಖರ್ಚನ್ನೂ ನಾನೇ ನಿಭಾಯಿಸುತ್ತಿದ್ದೆ" ಎಂದು ಹೇಳಿ ಕುಳಿತುಬಿಟ್ಟರು.

ಜನರು ಅವರ ಮೇಲೆ ಮಾಡಿದ ಆರೋಪ, ಅದಕ್ಕೆ ಅವರು ಕೊಟ್ಟ ಸ್ಪಷ್ಟೀಕರಣ ಕೇಳಿ ನನಗೆ ಬಹಳ ನೋವಾಯಿತು. ಒಳ್ಳೆಯವರು ಒಳ್ಳೆಯ ಕೆಲಸ ಮಾಡುವಾಗ ಹೇಗೆ ವಿರೋಧಿಗಳು ಹುಟ್ಟಿಕೊಳ್ಳುತ್ತಾರೆ ಎಂಬುದು ಮನದಟ್ಟಾಯಿತು. ಗೋವಿಂದೇ ಗೌಡರು, ಅವರ ಕೆಲಸ, ಬಡವರು, ರೈತರು, ಕಾರ್ಮಿಕರ ಬಗ್ಗೆ ಅವರಿಗಿದ್ದ ಕಾಳಜಿ ನನಗೆ ತುಂಬಾ ಇಷ್ಟವಾಯಿತು. ಆಗ ನಾನು ಎದ್ದುನಿಂತು "ಗೋವಿಂದೇಗೌಡರೇ,

ನೀವು ಒಳ್ಳೆಯ ಕೆಲಸ ಮಾಡುತ್ತಿದ್ದೀರಿ. ಜನಪರ ಕೆಲಸ ಮಾಡುತ್ತಿದ್ದೀರಿ. ನೀವು ಒಳ್ಳೆಯವರು, ಪ್ರಾಮಾಣಿಕರು ಎಂಬುದು ನಿಮ್ಮ ಮೇಲೆ ಆರೋಪ ಮಾಡುವವರಿಗೂ ಗೊತ್ತು. ಅವರು ಯಾಕೆ ಈ ಆರೋಪ ಮಾಡುತ್ತಿದ್ದಾರೆಂದು ನನಗೂ, ನಿಮಗೂ, ಶಾಸಕರಿಗೂ, ಇಲ್ಲಿರುವ ಎಲ್ಲರಿಗೂ ಗೊತ್ತು. ಯಾರು ಏನು ಬೇಕಾದರೂ ಆರೋಪ ಮಾಡಲಿ. ನೀವು ನಿಮ್ಮ ಕೆಲಸವನ್ನು ಮುಂದುವರಿಸಿ. ನಿಮ್ಮ ಜೊತೆ ನಾನಿದ್ದೇನೆ" ಎಂದು ಹೇಳಿದೆ.

ಈ ಸಭೆ, ಗೋವಿಂದೇಗೌಡರು ಮತ್ತು ಅವರ ಸಮಾಜಸೇವೆ ನನ್ನ ಬದುಕಿಗೆ ಒಂದು ಹೊಸ ತಿರುವು ನೀಡಿತು. ಅಲ್ಲಿಂದ ನನ್ನ ಸಮಾಜಮುಖಿ ಕೆಲಸ ಪ್ರಾರಂಭ ವಾಯಿತು. ನಾನು ನನ್ನ ಬಗ್ಗೆ ಮಾತ್ರ ಚಿಂತಿಸುವುದನ್ನು ಬಿಟ್ಟು ಬಡವರ, ಶೋಷಿತರ, ಹಿಂದುಳಿದವರ, ಶಿಕ್ಷಣದಿಂದ ವಂಚಿತರಾದವರ ಬಗ್ಗೆ ಯೋಚಿಸತೊಡಗಿದೆ. ಆಗ ನನಗೆ ಹೊಳೆದದ್ದು ನಾನು ರಾಜಕೀಯಕ್ಕೆ ಹೋದರೆ ಈ ಎಲ್ಲ ಜನರಿಗೆ ಸಾಮಾಜಿಕ ನ್ಯಾಯ ಒದಗಿಸಿಕೊಡಬಹುದು, ಇವರ ಸೇವೆ ಮಾಡಬಹುದು ಎಂದು. ಅದಕ್ಕಾಗಿ ಗೋವಿಂದೇಗೌಡರ ಬೆಂಬಲಕ್ಕೆ ನಿಂತೆ. ಅವರಿಗೆ ಬೇಕಾದ ಕೆಲಸಗಳನ್ನೆಲ್ಲ ಮಾಡಿಸಿಕೊಟ್ಟೆ. ಅಲ್ಲಿಂದ ನಾನು ರಾಜಕೀಯದ ದಾರಿಗೆ ಹೆಜ್ಜೆ ಇರಿಸಿದೆ. ಒಂದು ಲೆಕ್ಕದಲ್ಲಿ ರಾಜಕೀಯ ಪ್ರವೇಶ ಮಾಡಿದೆ ಎಂದೇ ಹೇಳಬಹುದು.

ಅನಂತರ ಕಲ್ಲತ್ತಿಪುರದ ಫಾರ್ಮ್‌ನ್ನು ನೋಡಿಕೊಳ್ಳಲು, ಅದರ ಬಗ್ಗೆ ಹೆಚ್ಚಿನ ಕಾಳಜಿ ವಹಿಸಲು ನನ್ನಿಂದ ಸಾಧ್ಯವಾಗಲಿಲ್ಲ. ಹಾಗೆ ಅದನ್ನು ಮಾರಿ ಬೆಂಗಳೂರಿಗೆ ಹೋದೆ. ಅಲ್ಲಿ ಸುಬೇದಾರ್ ಚತ್ರಂ ರಸ್ತೆಯಲ್ಲಿ ಕಪಾಲಿ ಟಾಕೀಸು ಎದುರು ಒಂದು ರೆಸ್ಟೋರೆಂಟ್ ಮಾಡಿದೆ. ಅದರ ಹೆಸರು 'ಸುಧಾ ರೆಸ್ಟೋರೆಂಟ್' ಎಂದು. ಚಿಕ್ಕಮಗಳೂರಿನ ಗೆಳೆಯ ಗೋಪಾಲ್ ಸಿಂಗ್ ಪಾಲುದಾರಿಕೆಯಲ್ಲಿ ಈ ಹೊಟೇಲ್ ಮಾಡಿದ್ದು. ಇನ್ನೊಬ್ಬ ಪಾಲುದಾರ ಹೊಟೇಲ್ ಕಟ್ಟಡದ ಮಾಲಕ. ಈತನನ್ನು ಯಾಕೆ ಪಾಲುದಾರನನ್ನಾಗಿ ಮಾಡಿಕೊಂಡದ್ದು ಎಂದರೆ, ನಾಳೆ ಎಲ್ಲಿಯಾದರೂ ಅರ್ಧದಲ್ಲಿ ಹೊಟೇಲ್ ಬಿಡು ಎಂದುಬಿಟ್ಟರೆ ನಮಗೆ ತುಂಬಾ ನಷ್ಟವಾಗಬಹುದು, ಹಾಗೆಯೇ ನಮ್ಮ ಪಾಲುದಾರನಾಗಿದ್ದರೆ ನಮಗೆ ತುಂಬಾ ಪ್ರಯೋಜನವಾಗಬಹುದು, ಭದ್ರತೆ ಇರಬಹುದು ಎಂಬ ಲೆಕ್ಕಾಚಾರದಿಂದ ಆತನನ್ನು ಸೇರಿಸಿಕೊಂಡಿದ್ದೆವು. ಹೊಟೇಲ್ ತುಂಬಾ ಚೆನ್ನಾಗಿ ನಡೆಯುತ್ತಿತ್ತು. ಆಮೇಲೆ ನಮ್ಮ ದುರದೃಷ್ಟಕ್ಕೆ ಏನಾಯಿತು ಎಂದರೆ, ನಮ್ಮ ಪಾಲುದಾರ – ಆ ಕಟ್ಟಡದ ಮಾಲಕ ಒಂದು ದಿನ ಇದ್ದಕ್ಕಿದ್ದಂತೆ ಹೃದಯಾಘಾತ ದಿಂದ ತೀರಿಕೊಂಡ. ಬಳಿಕ ಅವನ ಹೆಂಡತಿ ಹೊಟೇಲ್ ಮುಂದುವರಿಸಲು ಬಿಡಲಿಲ್ಲ. ಆ ಹೊಟೇಲ್ ಪ್ರಾರಂಭಿಸಿದ ಘಳಿಗೆಯೇ ಸರಿಯಿಲ್ಲ. ಆ ಹೊಟೇಲ್ ಮಾಡಿದ್ದರಿಂದಲೇ ಅವಳ ಗಂಡ ಸತ್ತದ್ದು ಎಂಬ ನಂಬಿಕೆ ಅವಳದ್ದು. ನಾವು ಎಷ್ಟು ಕೇಳಿಕೊಂಡರೂ ಅವಳ ಮೂಢನಂಬಿಕೆಯ ಎದುರು ನಮ್ಮ ಮಾತು ನಡೆಯಲೇ ಇಲ್ಲ. ಕೊನೆಗೆ ನಾವು ಹೊಟೇಲ್ ಮುಚ್ಚಿ ಬಂದುಬಿಟ್ಟೆವು.

## ರಾಜಕೀಯ

ನನ್ನ ರಾಜಕೀಯ ಬದುಕು ತೆರೆದಿಟ್ಟ ಒಂದು ಪುಸ್ತಕದಂತೆ. ನಾನು ತೆಗೆದುಕೊಂಡಂತಹ ತೀರ್ಮಾನಗಳು, ನಾನು ಮಾಡಿದ ಕೆಲಸಗಳು ಪಾರದರ್ಶಕ. ಎಂದೂ ಸಹ ನಾನು ಅಧಿಕಾರಕ್ಕಾಗಿ ರಾಜಕಾರಣ ಮಾಡಿದವನೇ ಅಲ್ಲ. ಆಕಸ್ಮಿಕವಾಗಿ ಅವಕಾಶಗಳು ಸಿಕ್ಕಿದಾಗಲೆಲ್ಲಾ ಅದನ್ನು ಬಳಸಿಕೊಂಡವನು. ನನ್ನ ಎಲ್ಲ ರಾಜಕೀಯ ತೀರ್ಮಾನಗಳು ದೂರಗಾಮಿ ದೃಷ್ಟಿಕೋನ ಹೊಂದಿತ್ತು. ಯಾರನ್ನೋ ಖುಷಿಪಡಿಸಲು ಅಥವಾ ಬೆಂಬಲಿಗರನ್ನು ಹೆಚ್ಚಿಸಿ ಕೊಳ್ಳಲು ರಾಜಕೀಯ ಮಾಡಿದವನೇ ಅಲ್ಲ. ಎಲ್ಲಿಯೂ ಪ್ರಚಾರವನ್ನು ಬಯಸಲೇ ಇಲ್ಲ. ಶಾಸಕನಾದಾಗ, ಸಚಿವನಾದಾಗ ಪಕ್ಷಾತೀತವಾಗಿ, ಜಾತ್ಯತೀತವಾಗಿ ತೀರ್ಮಾನಗಳನ್ನು ಕೈಗೊಂಡಿದ್ದೇನೆ. ಸಾಮೂಹಿಕ ಅಭಿವೃದ್ಧಿಯೇ ನನ್ನ ಚಿಂತನೆಯಾಗಿತ್ತು. ಯಾವುದೇ ಸಂದರ್ಭದಲ್ಲಿ ಎಂತಹ ಒತ್ತಡಗಳು ಬಂದರೂ ನಾನು ನನ್ನ ಧೋರಣೆ, ನಿಲುವುಗಳೊಂದಿಗೆ ರಾಜಿ ಮಾಡಿಕೊಂಡವನಲ್ಲ. ಹೀಗಾಗಿ ನನ್ನ ಐದು ದಶಕಗಳ ರಾಜಕೀಯ ಬದುಕಿನಲ್ಲಿ ಅನಿವಾರ್ಯವಾಗಿ ಪಕ್ಷಗಳನ್ನು ಬದಲಿಸಿದ್ದೇನೆ. ನಾನು ಭಾರತೀಯ ರಾಷ್ಟ್ರೀಯ ಕಾಂಗ್ರೆಸ್‌ನಲ್ಲಿ ನನ್ನ ರಾಜಕೀಯ ಬದುಕನ್ನು ಪ್ರಾರಂಭಿಸಿದೆ.

1980ರಲ್ಲಿ ದೇವರಾಜ ಅರಸು ಅವರು ಇಂದಿರಾ ಗಾಂಧಿಯನ್ನು ಬಿಟ್ಟು ಹೊರಹೋದಾಗ ಅರಸು ಅವರ ಜೊತೆ ನಿಂತೆ. ದೇವರಾಜ ಅರಸು ಅವರು ರಾಜೀನಾಮೆ ನೀಡಿ ವಿರೋಧ ಪಕ್ಷದ ನಾಯಕರಾದಾಗಲೂ ಅವರೊಂದಿಗೆ ನಿಂತೆ. ದೇವರಾಜ ಅರಸು ಅವರ ನಿಧನಾ ನಂತರ ಎಲ್ಲರ ಜೊತೆಗೆ ಮರಳಿ ಇಂದಿರಾ ಕಾಂಗ್ರೆಸ್‌ಗೆ ಬಂದೆ. 1983ರಲ್ಲಿ ಕಾಂಗ್ರೆಸ್ ನನಗೆ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ನಿರಾಕರಿಸಿದರೂ ಪಕ್ಷವನ್ನು ಬಿಡದೆ ಮುಂದುವರಿದೆ. ಆದರೆ ಜನಾರ್ದನ ಪೂಜಾರಿಯ ಕಪಿಮುಷ್ಟಿಯಲ್ಲಿ

ಸಿಲುಕಿದ್ದ ದಕ್ಷಿಣಕನ್ನಡ ಜಿಲ್ಲಾ ಕಾಂಗ್ರೆಸ್ ನನ್ನನ್ನು ಸಂಪೂರ್ಣವಾಗಿ ನಿರ್ಲಕ್ಷಿಸಿದಾಗ ಜನತಾ ಪಕ್ಷ ನನ್ನನ್ನು ಗುರುತಿಸಿ, ಆಹ್ವಾನಿಸಿ, ನನಗೆ ಪಕ್ಷದ ಪ್ರಧಾನ ಕಾರ್ಯದರ್ಶಿ ಹುದ್ದೆ, ವಿಧಾನ ಪರಿಷತ್ ಸದಸ್ಯತ್ವ, ಮುಖ್ಯ ಸಚೇತಕ ಹುದ್ದೆ, ಸಚಿವ ಪದವಿ, ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಜವಾಬ್ದಾರಿಗಳನ್ನು ನೀಡಿತು.

1999ರಲ್ಲಿ ಜನತಾ ಪಕ್ಷ ಇಬ್ಭಾಗವಾದಾಗ ನಾನು ಮತ್ತು ನನ್ನ ಕೆಲವು ಗೆಳೆಯರು ತಟಸ್ಥರಾಗಿದ್ದೆವು. 2002ರಲ್ಲಿ ನನ್ನ ವಿಧಾನ ಪರಿಷತ್ ಸದಸ್ಯತ್ವ ಕೊನೆಗೊಂಡ ನಂತರದ ರಾಜಕೀಯ ಬದಲಾವಣೆಗಳು ನನ್ನನ್ನು ಪುನಃ ಕಾಂಗ್ರೆಸ್‌ಗೆ ಸೇರ್ಪಡೆಗೊಳಿಸಿತು.

ಈ ಎಲ್ಲ ಪಕ್ಷ ಬದಲಾವಣೆಗಳು ಆದಾಗಲೂ ನಾನು ನನ್ನ ರಾಜಕೀಯ ನೀತಿ ನಿಲುವುಗಳೊಂದಿಗೆ ರಾಜಿ ಮಾಡಿಕೊಂಡಿಲ್ಲ. ಎಂದೂ ನನ್ನ ಜಾತ್ಯತೀತ ಧೋರಣೆಗೆ ಧಕ್ಕೆ ತಂದಿಲ್ಲ. ಕೋಮುವಾದಿ ರಾಜಕೀಯವನ್ನು ವಿರೋಧಿಸುತ್ತಲೇ ಬಂದಿದ್ದೇನೆ.

ನನ್ನ ಈ ಎಲ್ಲ ನೆನಪುಗಳನ್ನು ನಿಮ್ಮ ಮುಂದೆ ಬಿಚ್ಚಿಡುವ ಪ್ರಯತ್ನ ಮಾಡುತ್ತಿದ್ದೇನೆ. ಇಲ್ಲಿ ನಾನು ವಿವರಿಸಲು ಬಯಸುವ ಘಟನೆಗಳು ಹಿಂದು ಮುಂದಾಗಬಹುದು. ಹೇಳಲೇಬೇಕಾದ ಹೆಸರುಗಳು, ಘಟನೆಗಳು ಮರೆತಿರಲೂಬಹುದು.

ಯಾರ ಬಗ್ಗೆಯಾದರೂ ನನಗಿದ್ದ ಅನಿಸಿಕೆ, ಅಭಿಪ್ರಾಯ ನಾನು ವಿವರಿಸುವ ಆ ಕಾಲದ್ದು ಮಾತ್ರವಾಗಿದೆ. ಈಗಲೂ ನನ್ನ ಅಭಿಪ್ರಾಯ, ಆಲೋಚನೆಗಳು ಹಾಗೆಯೇ ಇದೆಯೆಂದು ಯಾರೂ ತಪ್ಪು ತಿಳಿಯಬಾರದು. ಯಾಕೆಂದರೆ ದೇವರಾಜ ಅರಸು ಅವರ ಜನ್ಮಶತಾಬ್ದಿಯ ಸಂದರ್ಭದಲ್ಲಿ 'ದೇವರಾಜ ಅರಸು ಪ್ರಶಸ್ತಿ'ಯನ್ನು ಕರ್ನಾಟಕ ರಾಜ್ಯ ಸರಕಾರ ನನಗೆ ನೀಡಿ ಪುರಸ್ಕರಿದ ಹಿನ್ನೆಲೆಯಲ್ಲಿ ಮಂಗಳೂರು ಪುರಭವನದಲ್ಲಿ ದಿನಾಂಕ 15–9–2016ರಂದು ಅತ್ಯಂತ ಹೃದಯಸ್ಪರ್ಶಿಯಾಗಿ ನಾಗರಿಕ ಸನ್ಮಾನ ಮಾಡಲಾಯಿತು. ಅಂದೇ ನಾನು ನನ್ನೆಲ್ಲ ನೋವುಗಳನ್ನು ಮರೆತುಬಿಟ್ಟಿದ್ದೇನೆ. ಎಲ್ಲರನ್ನೂ ನನ್ನ ಆತ್ಮೀಯ ಗೆಳೆಯರಾಗಿ ಸ್ವೀಕರಿಸಿದ್ದೇನೆ. ಈಗ ಹೇಳುವುದೇನಿದ್ದರೂ ಗತಕಾಲದ ನೆನಪುಗಳು ಮಾತ್ರ. ನೆನಪಿಸಿಕೊಳ್ಳಲು ಸುಲಭವಾಗಲಿ ಎಂಬ ಕಾರಣಕ್ಕಾಗಿ ನನ್ನ ರಾಜಕೀಯ ಬದುಕಿನ ಅವಧಿಯನ್ನು ಮೂರು ಭಾಗಗಳಾಗಿ ವಿಂಗಡಿಸಿಕೊಳ್ಳುತ್ತೇನೆ.

**ಒಂದನೆಯ ಅವಧಿ – 1969ರಿಂದ 1978**

ಈ ಅವಧಿಯನ್ನು ಇತಿಹಾಸ 'ದೇವರಾಜ ಅರಸು ಯುಗ' ಎಂದು ಗುರುತಿಸುತ್ತದೆ. ಈ ಅವಧಿಯ 1969ರಲ್ಲಿ ಕಾಂಗ್ರೆಸ್ ಕೇಂದ್ರ ಮಟ್ಟದಲ್ಲಿ ಇಬ್ಭಾಗವಾಯಿತು. 1971ರ ಲೋಕಸಭಾ ಚುನಾವಣೆಯಲ್ಲಿ ಡಿ.ಬಿ. ಚಂದ್ರೇಗೌಡರು ಲೋಕಸಭಾ ಚುನಾವಣೆಗೆ ಸ್ಪರ್ಧಿಸಿದರು ಮತ್ತು ನಾನು ಅವರ ನಿಕಟವರ್ತಿಯಾಗಿ ಸಕ್ರಿಯ ರಾಜಕಾರಣಕ್ಕೆ ಪಾದಾರ್ಪಣೆ ಮಾಡಿದೆ. ರಾಜ್ಯ ಕಾಂಗ್ರೆಸ್‌ನ ಸಂಪೂರ್ಣ ಜವಾಬ್ದಾರಿ ದೇವರಾಜ ಅರಸು ಅವರ ಹೆಗಲಿಗೆ ಬಂತು. 1972ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದಲ್ಲಿ ಇಂದಿರಾ ಕಾಂಗ್ರೆಸ್ ಪ್ರಚಂಡ ಬಹುಮತ ಗಳಿಸಿತು. ಚುನಾವಣೆಗೆ ಸ್ಪರ್ಧಿಸದ ದೇವರಾಜ

ಅರಸು ಮುಖ್ಯಮಂತ್ರಿಯಾದರು. ನಾನು ಯುವ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗಿ, ಅನಂತರ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದೆ. ದೇವರಾಜ ಅರಸು ಅವರ ನೇತೃತ್ವದಲ್ಲಿ ರಾಜ್ಯ ಐತಿಹಾಸಿಕ ಅಭಿವೃದ್ಧಿ ಮತ್ತು ರಾಜಕೀಯ ಬದಲಾವಣೆಗಳಿಗೆ ಸಾಕ್ಷಿಯಾಯಿತು. 1975ರಲ್ಲಿ ದೇಶಾದ್ಯಂತ ತುರ್ತು ಪರಿಸ್ಥಿತಿ ಜಾರಿಯಾಯಿತು. 1977ರ ಮಹಾ ಚುನಾವಣೆಯಲ್ಲಿ ಇಂದಿರಾ ಕಾಂಗ್ರೆಸ್ ಧೂಳೀಪಟವಾಗಿ ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರಕ್ಕೆ ಬಂತು.

ಇಂದಿರಾ ಗಾಂಧಿಯವರೂ ಸೋತರು. ಜಿಲ್ಲೆಯಲ್ಲಿ ಜನಾರ್ದನ ಪೂಜಾರಿಯೆಂಬ ಹೊಸ ಮುಖವೊಂದು ಬೆಳಕಿಗೆ ಬಂತು. ಕಲ್ಲಡ್ಕ ಇಸ್ಮಾಯೀಲ್ ಕೊಲೆ ಪ್ರಕರಣ, ಸೇಮಿತ ಕೊಲೆ ಪ್ರಕರಣಗಳಿಗೆ ಜಿಲ್ಲೆ ಸಾಕ್ಷಿಯಾಯಿತು. 1978ರಲ್ಲಿ ವಿಧಾನಸಭಾ ಚುನಾವಣೆ ಘೋಷಣೆಯಾಯಿತು ಮತ್ತು ಅತ್ಯಂತ ಅನಿರೀಕ್ಷಿತವಾಗಿ ನಾನು ಬಂಟ್ವಾಳ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಗೆದ್ದು ಶಾಸಕನಾದೆ.

**ಎರಡನೆಯ ಅವಧಿ : 1978ರಿಂದ 1986**

ಈ ಅವಧಿಯಲ್ಲಿ ನನ್ನ ಶಾಸಕತ್ವ ಪ್ರಾರಂಭವಾಯಿತು. ರಾಜ್ಯದಲ್ಲಿ ಜನತಾ ಪಕ್ಷಕ್ಕೆ ಅತ್ಯಂತ ಅನಿರೀಕ್ಷಿತ ಸೋಲಾಗಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ದೇವರಾಜ ಅರಸು ಮತ್ತೊಮ್ಮೆ ಮುಖ್ಯಮಂತ್ರಿಯಾದರು. 1978ರಲ್ಲಿ ಚಿಕ್ಕಮಗಳೂರಿನ ಐತಿಹಾಸಿಕ ಉಪಚುನಾವಣೆಯಲ್ಲಿ ಶ್ರೀಮತಿ ಇಂದಿರಾ ಗಾಂಧಿ ಗೆದ್ದು ಲೋಕಸಭೆಯನ್ನು ಪ್ರವೇಶಿಸಿದರು. ವಿರೋಧ ಪಕ್ಷದ ನಾಯಕಿಯಾದರು. ದ್ವೇಷದ ರಾಜಕಾರಣಕ್ಕೆ ಸಾಕ್ಷಿಯಾಗಿ ಶ್ರೀಮತಿ ಇಂದಿರಾ ಗಾಂಧಿಯವರ ಬಂಧನವಾಯಿತು. ಆ ನಂತರದ ಬೆಳವಣಿಗೆಗಳಲ್ಲಿ ಇಂದಿರಾ ಗಾಂಧಿ ಮತ್ತು ಅರಸು ಮಧ್ಯೆ ಭಿನ್ನಾಭಿಪ್ರಾಯಗಳು ಬೆಳೆದು ರಾಜ್ಯದಲ್ಲಿ 1979ರಲ್ಲಿ ಕಾಂಗ್ರೆಸ್ ಇಬ್ಭಾಗವಾಯಿತು. ನಾನು ಅರಸು ಜೊತೆ ಉಳಿದೆ. 1980ರ ಲೋಕಸಭಾ ಚುನಾವಣೆಯಲ್ಲಿ ದೇವರಾಜ ಅರಸು ಪಕ್ಷದಿಂದ ಮಂಗಳೂರು ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿದೆ. ರಾಜ್ಯಾದ್ಯಂತ ದೇವರಾಜ ಅರಸು ಅವರ ಎಲ್ಲ ಅಭ್ಯರ್ಥಿಗಳು ಸೋತರು. ದೇವರಾಜ ಅರಸು ಅವರು ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿ ಅವರ ಜೊತೆಗಿದ್ದ ಶಾಸಕರಿಗೆ ತಮ್ಮ ತಮ್ಮ ನಿರ್ಧಾರವನ್ನು ತೆಗೆದುಕೊಳ್ಳುವ ಸ್ವಾತಂತ್ರ್ಯ ಕೊಟ್ಟರು. ಗುಂಡೂರಾವ್ ಮುಖ್ಯಮಂತ್ರಿಯಾದರು. ದೇವರಾಜ ಅರಸು ಅವರು ವಿರೋಧ ಪಕ್ಷದ ನಾಯಕರಾದರು. ನಾನು ಅರಸು ಜೊತೆಗೆ ನಿಂತೆ. ಅರಸು ಅವರ ನಿಧನಾ ನಂತರ ನಾವೆಲ್ಲ ಇಂದಿರಾ ಕಾಂಗ್ರೆಸ್ ಸೇರಿದೆವು. 1983ರ ವಿಧಾನಸಭಾ ಚುನಾವಣೆ ಘೋಷಣೆಯಾಯಿತು. ಬಂಟ್ವಾಳದಿಂದ ಪುನಃ ಸ್ಪರ್ಧಿಸುವ ಅವಕಾಶ ನನಗೆ ನಿರಾಕರಿಸಲ್ಪಟ್ಟಿತು. ಚುನಾವಣೆಯಲ್ಲಿ ಕಾಂಗ್ರೆಸ್‌ಗೆ ಸೋಲಾಗಿ ಜನತಾ ಪಕ್ಷ ಮತ್ತು ಬಿಜೆಪಿ ಸಮ್ಮಿಶ್ರ ಸರಕಾರ ಆಡಳಿತಕ್ಕೆ ಬಂದು ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾದರು. 1985ರಲ್ಲಿ ರಾಜ್ಯ ವಿಧಾನಸಭೆಗೆ ಮಧ್ಯಂತರ ಚುನಾವಣೆ ನಡೆಯಿತು. ಈ

ಸಲವೂ ಜನಾರ್ದನ ಪೂಜಾರಿ ಮತ್ತು ಆಸ್ಕರ್ ಫೆರ್ನಾಂಡಿಸ್ ನನಗೆ ಟಿಕೆಟ್ ಕೊಡದೆ ನನ್ನ ರಾಜಕೀಯ ಬದುಕನ್ನು ಒಂದು ಹಂತದಲ್ಲಿ ಸಾಯಿಸಿಬಿಟ್ಟರು. ಚುನಾವಣೆಯಲ್ಲಿ ಪುನಃ ಕಾಂಗ್ರೆಸ್ ಸೋತು ಜನತಾ ಪಕ್ಷ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ರಾಮಕೃಷ್ಣ ಹೆಗಡೆ ಮತ್ತೊಮ್ಮೆ ಮುಖ್ಯಮಂತ್ರಿಯಾದರು. ಈ ಮಧ್ಯೆ 1984ರಲ್ಲಿ ಇಂದಿರಾ ಗಾಂಧಿಯ ಹತ್ಯೆಯಾಯಿತು. ರಾಜೀವ್ ಗಾಂಧಿ ಪ್ರಧಾನಮಂತ್ರಿಯಾದರು.

**ಮೂರನೆಯ ಅವಧಿ : 1986ರಿಂದ 2002**

ಈ ಅವಧಿಯಲ್ಲಿ ರಾಜೀವ್ ಗಾಂಧಿ ಸಂಪುಟದಲ್ಲಿ ರಕ್ಷಣಾಮಂತ್ರಿಯಾಗಿದ್ದ ವಿ.ಪಿ. ಸಿಂಗ್ ಹೊರಬಂದು 1987ರಲ್ಲಿ ಜನ ಮೋರ್ಚಾ ಪಕ್ಷ ಸ್ಥಾಪಿಸಿದರು. 1989ರಲ್ಲಿ ಜನಮೋರ್ಚಾ, ಲೋಕದಳ ಇನ್ನಿತರ ಪಕ್ಷಗಳೆಲ್ಲ ಸೇರಿ ಜನತಾದಳ ಸ್ಥಾಪನೆಯಾಯಿತು. ಜನಮೋರ್ಚಾ ಪಕ್ಷಕ್ಕೆ ಸೇರಿದ್ದ ನಾನು ಜನತಾದಳಕ್ಕೆ ಸೇರ್ಪಡೆಯಾದೆ. ರಾಮಕೃಷ್ಣ ಹೆಗಡೆಯವರು ನನ್ನನ್ನು ಗುರುತಿಸಿ ರಾಜ್ಯ ಜನತಾದಳದ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಿದರು. ಜನತಾ ದಳ ಕಚೇರಿಯ ಸಂಪೂರ್ಣ ಜವಾಬ್ದಾರಿಯನ್ನು ನನಗೆ ವಹಿಸಿದರು. 1990ರಲ್ಲಿ ನಾನು ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆಯಾದೆ. 1994–95ರಲ್ಲಿ ಮುಖ್ಯ ಸಚೇತಕನಾದೆ. 1995ರಿಂದ 1999ರವರೆಗೆ ಸಣ್ಣ ಕೈಗಾರಿಕಾ ಸಚಿವ ಮತ್ತು ಉನ್ನತ ಶಿಕ್ಷಣ ಸಚಿವ, ದ.ಕ. ಜಿಲ್ಲಾ ಉಸ್ತುವಾರಿ ಸಚಿವನಾಗಿ ಜವಾಬ್ದಾರಿಗಳನ್ನು ನಿರ್ವಹಿಸಿದೆ. 1999ರಲ್ಲಿ ಜನತಾದಳ ಇಬ್ಭಾಗವಾದಾಗ ನಾನು ಮತ್ತು ಕೆಲವು ಗೆಳೆಯರು ತಟಸ್ಥರಾಗಿ ಉಳಿದೆವು. 2002ರಲ್ಲಿ ನನ್ನ ವಿಧಾನ ಪರಿಷತ್ ಅವಧಿ ಮುಗಿಯಿತು. ಅನಂತರದ ಬೆಳವಣಿಗೆಗಳಲ್ಲಿ ನಾನು ಕಾಂಗ್ರೆಸ್ ಪಕ್ಷಕ್ಕೆ ಸೇರಿದೆ.

**ದೇವರಾಜ ಅರಸು ಯುಗ ಆರಂಭ**

"ನೀವು ಕಾಂಗ್ರೆಸ್ ಪಕ್ಷದ ಶಾಸಕಾಂಗ ನಾಯಕರಾಗಿ ಆಯ್ಕೆಗೊಂಡು ಮುಖ್ಯಮಂತ್ರಿಯಾಗಿ ಸರಕಾರ ರಚಿಸುವುದು ಸರಿಯಲ್ಲ. ಯಾಕೆಂದರೆ ನೀವು ಸೋತ ಅಭ್ಯರ್ಥಿ. ಇದರಿಂದ ಆ ಪದವಿಗೆ ಶಕ್ತಿ ಬರುವುದಿಲ್ಲ. ಹಾಗೆಯೇ ಅಧಿಕಾರದಲ್ಲಿ ಕುಳಿತ ನಿಮಗೆ ಆತ್ಮಬಲವೂ ಬರುವುದಿಲ್ಲ. ಆದ್ದರಿಂದ ನೀವು ಮುಖ್ಯಮಂತ್ರಿಯಾಗಬಾರದು. ನಿಮಗೆ ಬೇಕಾದ ಒಬ್ಬ ಶಾಸಕನನ್ನು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆ ಮಾಡಿ ನೀವು ಯಾವುದಾದರೂ ಒಂದು ಸ್ಥಾನವನ್ನು ತೆರವು ಮಾಡಿಸಿ ಚುನಾವಣೆಯಲ್ಲಿ ಗೆದ್ದು ಬನ್ನಿ" – ಇದು 1962ರಲ್ಲಿ ಆಗಿನ ಪ್ರಶ್ನಾತೀತ ನಾಯಕ ನಿಜಲಿಂಗಪ್ಪ ಅವರ ಎದುರು ದೇವರಾಜ ಅರಸು ಅವರು ಎತ್ತಿದ ಮೊದಲ ಧ್ವನಿ.

1962ರ ಮೈಸೂರು ರಾಜ್ಯ ವಿಧಾನಸಭಾ ಚುನಾವಣೆ ಒಂದು ವಿಚಿತ್ರವಾದ ಫಲಿತಾಂಶವನ್ನು ನೀಡಿತ್ತು. ರಾಜ್ಯಾದ್ಯಂತ ಕಾಂಗ್ರೆಸ್ ಪಕ್ಷ ಜಯಭೇರಿ ಗಳಿಸಿತ್ತು. ನಿಜಲಿಂಗಪ್ಪ ಅವರ ಬೆಂಬಲಿಗರು ಎಲ್ಲರೂ ಗೆದಿದ್ದರು. ಆದರೆ ಮುಖ್ಯಮಂತ್ರಿ ನಿಜಲಿಂಗಪ್ಪ

ನವರು ಹೊಸದುರ್ಗ ಕ್ಷೇತ್ರದಿಂದ ಅನಿರೀಕ್ಷಿತವಾಗಿ ಸೋಲನ್ನು ಅನುಭವಿಸಿದ್ದರು. ಇದಕ್ಕೆ ಕಾರಣ ಪಕ್ಷದಲ್ಲಿ ನಿಜಲಿಂಗಪ್ಪ ಗುಂಪು ಮತ್ತು ಬಿಡಿ ಜತ್ತಿ ಗುಂಪುಗಳ ಮಧ್ಯೆ ಇದ್ದಂತಹ ತೀವ್ರವಾದ ಹಣಾಹಣಿ ಮತ್ತು ಸೆಣಸಾಟ. ನಿಜಲಿಂಗಪ್ಪ ಅವರ ಬೆಂಬಲಿಗರೆಲ್ಲರೂ ಒಂದಾಗಿ ನಿಜಲಿಂಗಪ್ಪ ಅವರು ಸೋತರೂ ಪರವಾಗಿಲ್ಲ ಅವರನ್ನು ನಮ್ಮ ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆರಿಸಿ ಅವರನ್ನು ಮುಖ್ಯಮಂತ್ರಿಯಾಗಿ ಮಾಡೋಣ. ಅನಂತರ ಅವರನ್ನು ಯಾವುದಾದರೂ ಒಂದು ಕ್ಷೇತ್ರದಲ್ಲಿ ನಿಲ್ಲಿಸಿ ಗೆಲ್ಲಿಸೋಣ ಎಂಬ ತೀರ್ಮಾನಕ್ಕೆ ಬಂದಿದ್ದರು. ಈ ಒಂದು ತೀರ್ಮಾನಕ್ಕೆ ಆಗಿನ ಕಾಂಗ್ರೆಸ್‌ನಲ್ಲಿದ್ದ ಹಿರಿಯ ನಾಯಕರಾದಂತಹ ಸಾಹುಕಾರ್ ಚೆನ್ನಯ್ಯ, ಕೆಂಗಲ್ ಹನುಮಂತಯ್ಯ, ಶ್ರೀನಿವಾಸ ಮಲ್ಯ ಅಂತಹವರ ವಿರೋಧವಿದ್ದರೂ ಅದನ್ನು ಬಹಿರಂಗ ವಾಗಿ ಹೇಳುವ ಧೈರ್ಯ ಯಾರಿಗೂ ಇರಲಿಲ್ಲ. ಆದರೆ ಆ ಒಂದು ಸಂದಿಗ್ಧ ಪರಿಸ್ಥಿತಿಯಲ್ಲಿ ಧೈರ್ಯವಾಗಿ ತನ್ನ ಧ್ವನಿಯನ್ನು ಎತ್ತಿದವರು ದೇವರಾಜ ಅರಸು ಅವರು. ಅವರು ತಮ್ಮ ಈ ಮೇಲಿನ ಅಭಿಪ್ರಾಯವನ್ನು ಮಂಡಿಸಿದಾಗ ನಿಜಲಿಂಗಪ್ಪ ಅವರು ಕೂಡಾ ಅದನ್ನು ಒಪ್ಪಲೇಬೇಕಾಯಿತು. ನಿಜಲಿಂಗಪ್ಪ ಅವರ ಬದಲಿಗೆ ಎಸ್.ಆರ್. ಕಂಠಿ ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆರಿಸಿ ಮುಖ್ಯಮಂತ್ರಿ ಮಾಡಲಾಯಿತು. ಮತ್ತು ಈ ಒಂದು ಘಟನೆಯಿಂದಾಗಿ ದೇವರಾಜ ಅರಸು ಇಡೀ ರಾಜ್ಯದ ಗಮನವನ್ನು ಸೆಳೆದರು. ದೇವರಾಜ ಅರಸು ಅವರ ಹೆಸರು ಪ್ರಚಲಿತಕ್ಕೆ ಬಂತು.

ಹೀಗೆ ತನ್ನ ದಿಟ್ಟ ನಿಲುವು, ಪ್ರಗತಿಪರ ಚಿಂತನೆಗಳು, ಹಿಂದುಳಿದವರ, ಅಲ್ಪಸಂಖ್ಯಾತರ ಬಗ್ಗೆ ಅವರಿಗಿದ್ದಂತಹ ಕಾಳಜಿ ಇವುಗಳಿಂದೆಲ್ಲ ದೇವರಾಜ ಅರಸು ಅವರು ಹಂತ ಹಂತವಾಗಿ ರಾಜಕೀಯದಲ್ಲಿ ಮೇಲೇರುತ್ತಾ ಬಂದರು. 1967ರಲ್ಲಿ ಲೋಕಸಭಾ ಚುನಾವಣೆ ನಡೆಯಿತು. ಅದರಲ್ಲಿಯೂ ಇಂಡಿಯನ್ ನೇಶನಲ್ ಕಾಂಗ್ರೆಸ್ ಪಕ್ಷ 286 ಸ್ಥಾನಗಳನ್ನು ಗೆದ್ದು ಅಧಿಕಾರಕ್ಕೆ ಬಂತು. ಶ್ರೀಮತಿ ಇಂದಿರಾ ಗಾಂಧಿಯವರು ಪ್ರಧಾನಮಂತ್ರಿಯಾದರು. ಮೊರಾರ್ಜಿ ದೇಸಾಯಿಯವರು ಉಪಪ್ರಧಾನಿಯಾದರು. ಇಲ್ಲಿ ಭಿನ್ನಾಭಿಪ್ರಾಯಗಳು ಪ್ರಾರಂಭವಾಯಿತು. ಶ್ರೀಮತಿ ಇಂದಿರಾ ಗಾಂಧಿಯವರು ಬ್ಯಾಂಕುಗಳ ರಾಷ್ಟ್ರೀಕರಣ ಮಾಡಲು ಹೊರಟಿರುವುದು ಮೊರಾರ್ಜಿ ದೇಸಾಯಿಯವರಿಗೆ ಅಷ್ಟು ಇಷ್ಟವಾಗಲಿಲ್ಲ. ಈ ಸಂದರ್ಭದಲ್ಲಿ ಎಸ್. ನಿಜಲಿಂಗಪ್ಪ ಅವರು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಈ ಸಣ್ಣ ಸಣ್ಣ ಅಭಿಪ್ರಾಯ ಭೇದಗಳು ಮತ್ತೆ ಬೆಳೆಯುತ್ತಾ ಹೋಯಿತು. ಪರಸ್ಪರರು ದೂರವಾಗುತ್ತಾ ಹೋದರು. ಪ್ರತಿ ತಿಂಗಳು ಕಾಂಗ್ರೆಸ್‌ನ ಒಂದು ವರ್ಕಿಂಗ್ ಕಮಿಟಿಯ ಸಭೆ ನಡೆಯುತ್ತಿತ್ತು. ಅದರಲ್ಲಿ 21 ಸದಸ್ಯರುಗಳಿದ್ದರು. ಆದರೆ ಆ ಮಾಸಿಕ ಸಭೆಯಲ್ಲಿ ಇಂದಿರಾ ಗಾಂಧಿಯವರು ಪಾಲ್ಗೊಳ್ಳಲಿಲ್ಲ. ಅವರು ಮತ್ತು ಅವರ ಒಂಬತ್ತು ಜನ ಬೆಂಬಲಿಗರು ಪ್ರತ್ಯೇಕವಾಗಿ ಸಭೆ ಸೇರುತ್ತಿದ್ದರು. ಇದು ಸಹ ಹಳೆಯ ಕಾಂಗ್ರೆಸಿಗರಿಗೆ ಬಹಳ ಮುಜುಗರ ಉಂಟುಮಾಡುತ್ತಿತ್ತು ಮತ್ತು

ಇಂದಿರಾ ಗಾಂಧಿಯವರ ಮೇಲೆ ಶಿಸ್ತಿನ ಕ್ರಮ ಜರುಗಿಸಬೇಕೆಂದು ಹೇಳಿ 1969ರಲ್ಲಿ ಇಂದಿರಾ ಗಾಂಧಿ ಅವರನ್ನು ಶಾಸಕಾಂಗ ಪಕ್ಷದಿಂದಲೇ ಹೊರ ಹಾಕುವಂತಹ ಒಂದು ನಿರ್ಣಯವನ್ನು ನಿಜಲಿಂಗಪ್ಪ ಅವರ ನೇತೃತ್ವದ ಕಾಂಗ್ರೆಸ್ ಪಕ್ಷ ತೆಗೆದುಕೊಂಡಿತು. ಇದರಿಂದ ಕಾಂಗ್ರೆಸ್ ಒಂದು ವಿಧದಲ್ಲಿ ಅನಧಿಕೃತವಾಗಿ ಇಬ್ಭಾಗವಾಯಿತು. ಇಲ್ಲಿ ಯಾರೆಲ್ಲ ಇಂದಿರಾ ಗಾಂಧಿಗೆ ಬೆಂಬಲ ನೀಡುತ್ತ ಇದ್ದರೋ ಕಾಂಗ್ರೆಸ್ ಪಕ್ಷದಲ್ಲಿ ಅವರನ್ನು 'ಇಂಡಿಕೇಟ್' ಎಂದೂ, ನಿಜಲಿಂಗಪ್ಪ ಮತ್ತು ಬೆಂಬಲಿಗರನ್ನು 'ಸಿಂಡಿಕೇಟ್' ಎಂದೂ ಗುರುತಿಸಲಾಯಿತು.

ಇದೇ ಸಂದರ್ಭದಲ್ಲಿ ರಾಷ್ಟ್ರಪತಿ ಚುನಾವಣೆ ಬಂತು. ರಾಷ್ಟ್ರಪತಿ ಚುನಾವಣೆ ನಡೆಯುವಾಗ ನಿಜಲಿಂಗಪ್ಪ ಅವರ 'ಸಿಂಡಿಕೇಟ್' ಬಣದವರು ನೀಲಂ ಸಂಜೀವ ರೆಡ್ಡಿ ಅವರನ್ನು ರಾಷ್ಟ್ರಪತಿ ಸ್ಥಾನದ ಅಭ್ಯರ್ಥಿಯಾಗಿ ಆಯ್ಕೆ ಮಾಡಿದರು. ಇಂದಿರಾ ಗಾಂಧಿ ಅವರು ಅದನ್ನು ಒಪ್ಪಲಿಲ್ಲ. ಇಂದಿರಾ ಗಾಂಧಿ ಅವರು ಜಗಜೀವನ್‌ರಾಂ ಅವರನ್ನು ರಾಷ್ಟ್ರಪತಿ ಮಾಡಬೇಕೆಂದು ಪ್ರಯತ್ನಿಸಿದರು. ಕೊನೆಗೆ ವಿ.ವಿ. ಗಿರಿಯವರೇ ರಾಷ್ಟ್ರಪತಿಯಾಗಬೇಕೆಂಬ ತೀರ್ಮಾನಕ್ಕೆ ಬಂದು ಒಂದು ಇತಿಹಾಸವೇ ನಿರ್ಮಾಣ ವಾಯಿತು. ಪಕ್ಷೇತರರಾಗಿ ಸ್ಪರ್ಧಿಸಿದ್ದಂತಹ ವಿವಿ ಗಿರಿಯವರು ಪಕ್ಷದ ಮುಸುಕಿನ ಘರ್ಷಣೆಯ ಲಾಭವನ್ನು ಪಡೆದುಕೊಂಡು ಇಂದಿರಾ ಗಾಂಧಿಯವರ ಬೆಂಬಲದೊಂದಿಗೆ ರಾಷ್ಟ್ರಪತಿಯಾದರು.

1969ರ ಜುಲೈ 15ರಂದು ಬೆಂಗಳೂರು ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ಐತಿಹಾಸಿಕ ಎಐಸಿಸಿ ಅಧಿವೇಶನ ನಡೆಯಿತು. ಈ ಸಂದರ್ಭದಲ್ಲಿ ಇಂದಿರಾ ಗಾಂಧಿಯವರು ಒಂದು ರಾಜಕೀಯ ಶಕ್ತಿಯಾಗಿ ಮೂಡಿಬಂದರು. ಸಭೆಯಲ್ಲಿ ಕೆಲವು ನಿರ್ಣಯಗಳನ್ನು ಸ್ವೀಕರಿಸಲಾಯಿತು. ಬ್ಯಾಂಕುಗಳ ರಾಷ್ಟ್ರೀಕರಣ, ರಾಜಧನ ರದ್ದತಿಯಂತಹ ಕೆಲವು ಪುರೋಗಾಮಿ ಕಾರ್ಯಕ್ರಮಗಳಿಗೆ ಅಂಗೀಕಾರ ಸಹ ಪಡೆದುಕೊಳ್ಳಲಾಯಿತು. ಇದರಿಂದಾಗಿ ನಿಜಲಿಂಗಪ್ಪ ಅವರ ಗುಂಪಿಗೆ ಬಹಳ ಮುಖಭಂಗವಾಯಿತು ಮತ್ತು ಚುನಾವಣಾ ಆಯೋಗ ಇಂದಿರಾ ಕಾಂಗ್ರೆಸನ್ನು ಗುರುತಿಸಿ ಅದಕ್ಕೆ ಮಾನ್ಯತೆಯನ್ನು ಕೊಟ್ಟಿತು. ಈ ಅಧಿವೇಶನದಲ್ಲಿ ದೇವರಾಜ ಅರಸು ಅವರು ಮತ್ತು ಬಿ. ಬಸವಲಿಂಗಪ್ಪ ಅವರು ಇಂದಿರಾ ಬಣದಲ್ಲಿ ಸಕ್ರಿಯ ಕಾರ್ಯನಿರ್ವಹಿಸಿದರು. ಕಾಂಗ್ರೆಸ್ ಇಬ್ಭಾಗವಾದಾಗ ವೀರೇಂದ್ರ ಪಾಟೀಲರು ಮೈಸೂರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು ಮತ್ತು ಆ ಸರಕಾರ ನಿಜಲಿಂಗಪ್ಪ ನೇತೃತ್ವದ ಸಂಸ್ಥಾ ಕಾಂಗ್ರೆಸ್‌ಗೆ ತನ್ನ ಒಲವನ್ನು ತೋರಿಸಿತು.

ಇಂದಿರಾ ಕಾಂಗ್ರೆಸ್ ಕರ್ನಾಟಕದಲ್ಲಿ ಉದಯವಾಯಿತು ಮತ್ತು ಇಂದಿರಾ ಕಾಂಗ್ರೆಸ್‌ನ ಸಂಪೂರ್ಣ ಜವಾಬ್ದಾರಿಯನ್ನು, ಅದರ ನಾಯಕತ್ವವನ್ನು ದೇವರಾಜ ಅರಸು ಅವರಿಗೆ ವಹಿಸಲಾಯಿತು. ಇಂದಿರಾ ಕಾಂಗ್ರೆಸ್‌ನ ರಾಜ್ಯ ಸಂಚಾಲಕರಾಗಿ ದೇವರಾಜ ಅರಸು ಅವರು ನೇಮಕವಾದರು. ಇದು ಬಹಳ ಗಮನಿಸಬೇಕಾದಂತಹ ವಿಚಾರ. ಇಲ್ಲಿಂದ

ಕರ್ನಾಟಕದಲ್ಲಿ ದೇವರಾಜ ಅರಸು ಅವರ ಯುಗ ಆರಂಭವಾಯಿತು. ಅದುವರೆಗೂ ಮೇಲ್ಜಾತಿಯವರ ಹಿಡಿತದಲ್ಲಿದ್ದಂತಹ ಕಾಂಗ್ರೆಸ್ ಪಕ್ಷವನ್ನು ಅವರ ಹಿಡಿತದಿಂದ ತಪ್ಪಿಸಿ ಕಾಂಗ್ರೆಸ್‌ನಲ್ಲಿ ಹಿಂದುಳಿದವರಿಗೆ, ಅಲ್ಪಸಂಖ್ಯಾತರಿಗೆ ಸ್ಥಾನಮಾನ ಸಿಗುವಂತಹ ಒಂದು ಬದಲಾವಣೆ ಆ ಕಾಲದಲ್ಲಿ ಪ್ರಾರಂಭವಾಯಿತು. ಇಂದಿರಾ ಕಾಂಗ್ರೆಸ್‌ನ ಹೊಣೆಗಾರಿಕೆಯನ್ನು ಹೊತ್ತುಕೊಂಡಂತಹ ದೇವರಾಜ ಅರಸು ಅವರ ಬಗ್ಗೆ ಆಗ ಮಾಧ್ಯಮಗಳು ಬಹಳ ಲಘುವಾಗಿ ಬರೆಯಲು ಪ್ರಾರಂಭಿಸಿದವು. ಏಕೆಂದರೆ ವೀರೇಂದ್ರ ಪಾಟೀಲ್ ಮತ್ತು ರಾಮಕೃಷ್ಣ ಹೆಗಡೆಯವರು ಆ ಕಾಲದಲ್ಲಿ ಲವ–ಕುಶ ಎಂಬಂತೆ ಬಹಳ ಹೆಸರು ಪಡೆದವರಾಗಿದ್ದರು. ಶ್ರೀಮಂತರ ಮತ್ತು ಉದ್ಯಮಿಗಳ ಒಲವು ಸಹ ನಿಜಲಿಂಗಪ್ಪ ಅವರ ಸಂಸ್ಥಾ ಕಾಂಗ್ರೆಸ್‌ಗಿತ್ತು. ಅವರ ಎದುರಿನಲ್ಲಿ ದೇವರಾಜ ಅರಸು ಅವರು ಇಂದಿರಾ ಕಾಂಗ್ರೆಸ್‌ನ ರಾಜ್ಯ ಸಂಚಾಲಕರಾಗಿ ಆ ಪಕ್ಷವನ್ನು ಹೇಗೆ ನಿಭಾಯಿಸುತ್ತಾರೆ ಎನ್ನುವ ಒಂದು ಅನುಮಾನ ಮತ್ತು ಕುತೂಹಲವು ಸಹ ಎಲ್ಲ ವಲಯಗಳಲ್ಲಿದ್ದವು.

ಇದೇ ವೇಳೆ ಏನಾಗುತ್ತದೆ ಅಂದರೆ, 1970ರಲ್ಲಿ ವೀರೇಂದ್ರ ಪಾಟೀಲರ ಸರಕಾರ ಜಪಾನಿನ ಟೋಕಿಯೋದಲ್ಲಿ ನಡೆದ 'ಎಕ್ಸ್‌ಪೋ–70'ಗೆ ಕರ್ನಾಟಕ ರಾಜ್ಯದಿಂದ ಒಂದು ನಿಯೋಗವನ್ನು ಕಳುಹಿಸಿತು. ಈ ನಿಯೋಗ ಪ್ರಕಟವಾದಾಗ ಸ್ವಜನ ಪಕ್ಷಪಾತದ ಹಗರಣ ಬೆಳಕಿಗೆ ಬಂತು. ಈ ವಿಷಯವನ್ನು ಗಂಭೀರವಾಗಿ ತೆಗೆದುಕೊಂಡ ದೇವರಾಜ ಅರಸು ಅವರು ಕೆ.ಎಚ್. ಪಾಟೀಲ್, ಅಝೀಝ್ ಸೇಟ್, ಸಿದ್ದವೀರಪ್ಪ ಮೊದಲಾದವರನ್ನು ಸೇರಿಸಿಕೊಂಡು ಸಂಸ್ಥಾ ಕಾಂಗ್ರೆಸ್ ಸರಕಾರದ ವಿರುದ್ಧ ದೊಡ್ಡ ಒಂದು ಆಂದೋಲನವನ್ನು ನಡೆಸುವಲ್ಲಿ ಯಶಸ್ವಿಯಾದರು. ಈ ಸಂದರ್ಭದಲ್ಲಿ ದೇವರಾಜ ಅರಸು ಅವರಿಗೆ ಲಿಂಗಾಯತರು, ರೆಡ್ಡಿಗಳು, ಗಾಣಿಗರು ಇಂತಹ ಜನಾಂಗಗಳ ದೊಡ್ಡ ಮಟ್ಟದ ಬೆಂಬಲ ಸಹ ಸಿಕ್ಕಿತು. ಆರ್. ಗುಂಡೂರಾವ್ ಅವರು ಸಹ ಆ ಸಂದರ್ಭದಲ್ಲಿ ವಿದ್ಯಾರ್ಥಿಗಳ ಒಂದು ಸಂಘಟನೆಯನ್ನು ಕಟ್ಟಿಕೊಂಡು 'ಎಕ್ಸ್‌ಪೋ–70' ವಿರುದ್ಧ ಪ್ರತಿಭಟನೆಯನ್ನು ಮಾಡಿದರು. ಒಟ್ಟಿನಲ್ಲಿ ರಾಜಕೀಯ ಪ್ರಭುಗಳಾಗಿದ್ದಂತಹ ಸಂಸ್ಥಾ ಕಾಂಗ್ರೆಸ್‌ನ ವಿರುದ್ಧ ರಾಜಕೀಯ ಶಕ್ತಿಯನ್ನು ಸಂಘಟಿಸಿದ ಅರಸು ಅವರ ಪ್ರಯತ್ನಕ್ಕೆ ಎಕ್ಸ್‌ಪೋ–70 ಹೋರಾಟ ಬಹಳಷ್ಟು ಸಹಕಾರಿಯಾಯಿತು. ರಾಜ್ಯದಲ್ಲಿ ಸಣ್ಣಪುಟ್ಟ ಸಮುದಾಯಗಳು ಸಹ ದೇವರಾಜ ಅರಸು ಅವರ ಹೋರಾಟಗಳಿಗೆ ಬೆಂಬಲ ನೀಡಿದವು. ಆಗ ದೇವರಾಜ ಅರಸು ಅವರಿಗೆ ಹೊಳೆದದ್ದು, ಈ ಪ್ರಬಲ ಸಮುದಾಯಗಳು ಅನೇಕ ವರ್ಷಗಳಿಂದ ಹಲವಾರು ತಳ ಸಮುದಾಯಗಳನ್ನು ಶೋಷಣೆ ಮಾಡುತ್ತಾ ಬಂದಿವೆ. ಇದನ್ನು ತಡೆದು ಅಸಹಾಯಕ ಸಮುದಾಯಗಳಿಗೆ ರಾಜಕೀಯ ಅಧಿಕಾರ ನೀಡಬೇಕು. ಸಂಘಟನೆ, ಅಭಿವೃದ್ಧಿ, ಅವರ ಹಕ್ಕುಗಳ ಬಗ್ಗೆ ಅರಿವು ಮೂಡಿಸಬೇಕು ಎಂದು.

ಇಂತಹ ಒಂದು ಹೊಸ ಮಾರ್ಗವನ್ನು ಕಂಡುಕೊಂಡಲ್ಲಿ ರಾಜಕೀಯ

ಪರಿವರ್ತನೆಯ ಒಂದು ಯುಗವನ್ನು ಸೃಷ್ಟಿಸಲು ಸಾಧ್ಯ ಎಂದು ಯೋಚಿಸಿದ ಅರಸು ಅವರು, ಒಂದು ಆಂದೋಲನವನ್ನೇ ಆರಂಭಿಸಿದರು. ಹೀಗಿರುವಾಗ 1971ರಲ್ಲಿ ಲೋಕಸಭಾ ಮಧ್ಯಂತರ ಚುನಾವಣೆ ನಡೆಯಿತು. ಈ ಚುನಾವಣೆಯ ಫಲಿತಾಂಶ ಬಂದಾಗ ಮೈಸೂರು ರಾಜ್ಯದಲ್ಲಿ 27ರಲ್ಲಿ 27 ಸ್ಥಾನಗಳಲ್ಲೂ ಇಂದಿರಾ ಕಾಂಗ್ರೆಸ್ ಗೆಲುವು ಸಾಧಿಸಿತು. ಇದರಿಂದಾಗಿ ಇಂದಿರಾ ಗಾಂಧಿಯವರಿಗೂ ಬಹಳ ಖುಷಿಯಾಯಿತು. ನಿಜಲಿಂಗಪ್ಪ ಮತ್ತು ವೀರೇಂದ್ರ ಪಾಟೀಲ್ ಅವರಿಗೆ ಬಹಳ ನಿರಾಸೆಯಾಯಿತು. ದೇವರಾಜ ಅರಸು ಅವರ ಹೆಸರು ರಾಷ್ಟ್ರಮಟ್ಟದಲ್ಲಿ ಚರ್ಚೆಯಾಯಿತು. ಆಗ ಸಂಸ್ಥಾ ಕಾಂಗ್ರೆಸ್ ರಾಜ್ಯದಲ್ಲಿ ಅಧಿಕಾರದಲ್ಲಿತ್ತು. ವೀರೇಂದ್ರ ಪಾಟೀಲರು ಮುಖ್ಯಮಂತ್ರಿಯಾಗಿದ್ದರು. ಈ ಚುನಾವಣಾ ಫಲಿತಾಂಶ ಒಂದು ರೀತಿಯ ಮುನ್ಸೂಚನೆಯಂತಿತ್ತು. ಆಗ ವೀರೇಂದ್ರ ಪಾಟೀಲ್ ಅವರ ಮಂತ್ರಿಮಂಡಲದಿಂದ ಅನೇಕರು ಒಬ್ಬೊಬ್ಬರಾಗಿ ಆ ಪಾಳಯ ಬಿಟ್ಟು ಇಂದಿರಾ ಕಾಂಗ್ರೆಸ್ ಕಡೆ ಬರಲು ಪ್ರಾರಂಭಿಸಿದರು. ಅಂತಹವರನ್ನು ದೇವರಾಜ ಅರಸು ಅವರು ಬಹಳ ಪ್ರೀತಿಪೂರ್ವಕ ವಾಗಿ ಇಂದಿರಾ ಕಾಂಗ್ರೆಸ್ ಪಕ್ಷಕ್ಕೆ ಸೇರಿಸಿಕೊಂಡರು. ಅದರಲ್ಲಿ ಮುಖ್ಯವಾಗಿ ಗದಗಿನ ಕೆ.ಎಚ್. ಪಾಟೀಲ್, ಬಿಜಾಪುರದ ಬಿ.ಎಂ. ಪಾಟೀಲ್, ಶಿವಮೊಗ್ಗದ ಎಚ್. ಸಿದ್ದವೀರಪ್ಪನವರು, ಚಿತ್ರದುರ್ಗದ ಬಿ.ಎಲ್. ಗೌಡ, ಬೆಳಗಾವಿಯ ಡಿ.ಬಿ. ಪವಾರ್, ಮೈಸೂರಿನ ಕೆ. ಪುಟ್ಟಸ್ವಾಮಿ ಮತ್ತು ವೀರೇಂದ್ರ ಪಾಟೀಲ್ ಅವರ ಬಲಗೈ ಬಂಟನೆಂದೇ ಹೆಸರಾಗಿದ್ದ ನೀಲಕಂಠ ರಾವ್ ಪಾಟೀಲ್, ಎಂ. ಮುಹಮ್ಮದಲಿ ಮುಂತಾದ ಅನೇಕರು ಇಂದಿರಾ ಕಾಂಗ್ರೆಸ್‌ಗೆ ಬಂದು ಸೇರಿಕೊಂಡರು.

ಆಗ ನಡೆದ ಒಂದು ದೊಡ್ಡ ಬದಲಾವಣೆ ಏನು ಎಂದರೆ ಅದುವರೆಗೂ ಶ್ರೀಮಂತರ, ಮೇಲ್ಜಾತಿಯವರ ಕೈಯಲ್ಲೇ ಇದ್ದಂತಹ ಕಾಂಗ್ರೆಸ್ ಪಕ್ಷದಲ್ಲಿ ಹಿಂದುಳಿದವರು, ಅಲ್ಪಸಂಖ್ಯಾತರು ಮೊದಲಾದವರಿಗೆ ಸ್ಥಾನಮಾನ ಸಿಗಲು ಪ್ರಾರಂಭವಾಯಿತು. ಒಂದು ಹಂತದಲ್ಲಿ 40ಕ್ಕೂ ಹೆಚ್ಚು ಸಂಸ್ಥಾ ಕಾಂಗ್ರೆಸ್‌ನ ವೀರೇಂದ್ರ ಪಾಟೀಲ್ ಸರಕಾರದಲ್ಲಿ ಸಚಿವರಾಗಿದ್ದವರು, ಶಾಸಕರು ರಾಜೀನಾಮೆ ಕೊಟ್ಟು ಇಂದಿರಾ ಕಾಂಗ್ರೆಸ್‌ನಲ್ಲಿ ಗುರುತಿಸಿ ಕೊಂಡರು. ಆಗ ವೀರೇಂದ್ರ ಪಾಟೀಲ್ ಅವರಿಗೆ ಏನೂ ಮಾಡಲು ಸಾಧ್ಯವಾಗಲಿಲ್ಲ. ಅವರೂ ರಾಜೀನಾಮೆಯನ್ನು ಕೊಟ್ಟರು. ಸರಕಾರ ಪತನವಾಯಿತು.

ಹೆಚ್ಚಿನ ಎಲ್ಲ ಶಾಸಕರು ಇಂದಿರಾ ಕಾಂಗ್ರೆಸ್‌ಗೆ ಬಂದರು. ದೇವರಾಜ ಅರಸು ಅವರ ಮುತ್ಸದ್ದಿತನ, ಮುಂದಾಲೋಚನೆಗೆ ಈ ಸನ್ನಿವೇಶ ಒಂದು ಜೀವಂತ ಸಾಕ್ಷಿಯಾಯಿತು. ಸನ್ನಿವೇಶ ಹೇಗಿತ್ತು ಎಂದರೆ ವೀರೇಂದ್ರ ಪಾಟೀಲ್ ಅವರ ಸರ್ಕಾರ ಪತನವಾಗಿ, ಅಲ್ಲಿಂದ ರಾಜೀನಾಮೆ ಕೊಟ್ಟು ಬಂದ ಎಲ್ಲ ಶಾಸಕರು, ಸಚಿವರು ಬದಲಿ ಸರಕಾರ ರಚಿಸಲು ಸಿದ್ಧರಾಗಿದ್ದರು. ಆದರೆ ದೇವರಾಜ ಅರಸು ಅವರು ಮಾತ್ರ ಏನೂ ಮಾತನಾಡಲಿಲ್ಲ. ಸುಮ್ಮನಿದ್ದರು. ಪತ್ರಕರ್ತರು ಬಂದು ದೇವರಾಜ ಅರಸು ಅವರಲ್ಲಿ ಮುಂದಿನ ಮುಖ್ಯಮಂತ್ರಿ ಯಾರು – ಏನು ಎಂದು ಕೇಳಿದಾಗ

ದೇವರಾಜ ಅರಸು ಏನೂ ಹೇಳಲಿಲ್ಲ. "ನನಗೇನೂ ಗೊತ್ತಿಲ್ಲಪ್ಪ, ನೀವೇ ಏನಾದರೂ ಹೇಳಬೇಕು. ನಾನು ಕೇಳಿಸಿಕೊಳ್ಳುತ್ತೇನೆ" ಎಂದರು. ಏಕೆಂದರೆ ದೇವರಾಜ ಅರಸು ಅವರಿಗೆ ಗೊತ್ತಿತ್ತು. ಈಗ ಒಂದು ವೇಳೆ ನಾವು ಸರಕಾರ ರಚಿಸಿದರೆ ಪುನಃ ಅದೇ ಮೇಲ್ಜಾತಿಯವರು, ಅದೇ ಶ್ರೀಮಂತರು, ಬಂಡವಾಳಶಾಹಿಗಳ ಕೈಗೆ ಅಧಿಕಾರ ಹೋಗುತ್ತದೆ. ಯಾಕೆಂದರೆ ಆರಿಸಿ ಬಂದಂತಹ ಹೆಚ್ಚಿನ ಶಾಸಕರು, ರಾಜೀನಾಮೆ ಕೊಟ್ಟು ಬಂದಂತಹ ಸಚಿವರು, ಸಂಸ್ಥಾ ಕಾಂಗ್ರೆಸ್‌ನಿಂದ ಯಾರೆಲ್ಲ ಇಂದಿರಾ ಕಾಂಗ್ರೆಸ್‌ಗೆ ಬಂದಿದ್ದರು ಇವರೆಲ್ಲ ಅದೇ ಗುಂಪಿಗೆ ಸೇರಿದವರು.

ಈ ಕಾಂಗ್ರೆಸನ್ನು ಈ ಮೇಲ್ವರ್ಗದ ಕಪಿಮುಷ್ಟಿಯಿಂದ ತಪ್ಪಿಸಬೇಕು. ಇದನ್ನು ದೀನ ದಲಿತರ, ಬಡಜನರ, ಶೋಷಿತರ, ಹಿಂದುಳಿದವರ, ಅಲ್ಪಸಂಖ್ಯಾತರ ಪಕ್ಷವಾಗಿ ಪರಿವರ್ತಿಸಬೇಕು. ಇದೊಂದು ಸದವಕಾಶ ಎನ್ನುವುದು ದೇವರಾಜ ಅರಸು ಅವರಿಗೆ ಗೊತ್ತಿತ್ತು. ಅವರು ಇಂದಿರಾ ಗಾಂಧಿ ಅವರಿಗೂ ಈ ವಿಷಯವನ್ನು ಹೇಳಿದಾಗ ಇಂದಿರಾ ಗಾಂಧಿಯವರು ಸಹ ಇದನ್ನು ಒಪ್ಪಿದರು. ಇದೊಂದು ಒಳ್ಳೆಯ ಸಂದರ್ಭ ಎಂದು ಯೋಚಿಸಿದ ಅವರು, ದೇವರಾಜ ಅರಸು ಅವರಿಗೆ ಸಾಥ್ ಕೊಟ್ಟರು. ಸರಕಾರ ರಚಿಸುವ ಬದಲು ಅರಸು ಚುನಾವಣೆಗೆ ಹೋಗಲು ಸಿದ್ಧರಾದರು. ಇದರಿಂದ ಮುಖ್ಯಮಂತ್ರಿ ಸ್ಥಾನ ಗಿಟ್ಟಿಸಿಕೊಳ್ಳುವ ಆಸೆಯಲ್ಲಿ ಹೊಸ ಹೊಸ ಬಟ್ಟೆಯನ್ನು ಧರಿಸಿಕೊಂಡು ಬಂದಿದ್ದ ಎಲ್ಲರಿಗೂ ಬಹಳ ನಿರಾಸೆಯಾಯಿತು. ಆದರೂ ಶಾಂತವೇರಿ ಗೋಪಾಲ ಗೌಡರ ನೇತೃತ್ವದಲ್ಲಿ ಸರಕಾರವನ್ನು ರಚಿಸುವ ಒಂದು ಪ್ರಯತ್ನ ನಡೆಯಿತು. ಶಾಂತವೇರಿ ಗೋಪಾಲ ಗೌಡರಿಗೆ ಮನಸ್ಸಿಲ್ಲದಿದ್ದರೂ ಎಲ್ಲರ ಒತ್ತಾಯಕ್ಕೆ ಮಣಿದು ಅವರು ಒಪ್ಪಿದ್ದರು. ರಾಜ್ಯಪಾಲರನ್ನು ಸಹ ಭೇಟಿಯಾದರು. ಸರಕಾರ ರಚಿಸಲು ಪ್ರಯತ್ನಿಸಿದರು. ಆದರೆ ತಮಗಿರುವ ಶಾಸಕರ ಬೆಂಬಲವನ್ನು ಸಾಬೀತುಪಡಿಸಲಿಕ್ಕೆ ಸಾಧ್ಯವಾಗಲಿಲ್ಲ. ಶಾಂತವೇರಿ ಗೋಪಾಲ ಗೌಡರು ಸಮಾಜವಾದಿ ಮತ್ತು ದೇವರಾಜ ಅರಸು ಅವರಿಗೆ ಬಹಳ ಆದರ್ಶ ವ್ಯಕ್ತಿಯಾಗಿ ಇದ್ದ ಕಾರಣ ದೇವರಾಜ ಅರಸು ಅವರು ತಟಸ್ಥರಾಗಿ ಉಳಿದಿದ್ದರು. ಏಕೆಂದರೆ ಶಾಂತವೇರಿ ಗೋಪಾಲ ಗೌಡರನ್ನು ವಿರೋಧಿಸುವುದು ಅರಸು ಅವರಿಗೆ ಸಾಧ್ಯವಿರಲಿಲ್ಲ. ಅಂತೂ ಈ ಪ್ರಯತ್ನ ವಿಫಲವಾದಾಗ ಇಲ್ಲಿ ರಾಷ್ಟ್ರಪತಿ ಆಡಳಿತ ಘೋಷಣೆಯಾಯಿತು. ಆಗ ಮೈಸೂರು ರಾಜ್ಯದ ರಾಜ್ಯಪಾಲ ರಾಗಿದ್ದಂತಹ ಧರ್ಮವೀರ ಅವರು ಹತ್ತು ತಿಂಗಳ ಕಾಲ ರಾಷ್ಟ್ರಪತಿ ಆಡಳಿತದ ಉಸ್ತುವಾರಿಯಾಗಿ ರಾಜ್ಯದ ಆಡಳಿತವನ್ನು ನಡೆಸಿದರು.

ರಾಷ್ಟ್ರಪತಿ ಆಡಳಿತ ಮುಗಿದ ನಂತರ ಚುನಾವಣೆ ಘೋಷಣೆಯಾಯಿತು. 1972ನೆಯ ಫೆಬ್ರವರಿ ತಿಂಗಳಲ್ಲಿ ಚುನಾವಣೆ ನಡೆಯಿತು. ಬಹಳ ಜಿದ್ದಾಜಿದ್ದಿನ ಚುನಾವಣೆ. ದೇವರಾಜ ಅರಸು ಅವರು ಇಂದಿರಾ ಕಾಂಗ್ರೆಸ್ ಪಕ್ಷದ ರಾಜ್ಯ ಸಂಚಾಲಕರಾಗಿದ್ದು ಅವರ ಅಧ್ಯಕ್ಷತೆಯಲ್ಲಿ ಈ ಚುನಾವಣೆಯನ್ನು ಎದುರಿಸಲಾಯಿತು. 223 ಸ್ಥಾನಗಳ ಪೈಕಿ 166 ಸ್ಥಾನಗಳು ಇಂದಿರಾ ಕಾಂಗ್ರೆಸ್‌ಗೆ ಸಿಕ್ಕಿತು. ಪ್ರಚಂಡ ಬಹುಮತದಿಂದ ಇಂದಿರಾ

ಕಾಂಗ್ರೆಸ್ ಆರಿಸಲ್ಪಟ್ಟಾಗ ಮುಂದಿನ ಮುಖ್ಯಮಂತ್ರಿ ಯಾರು ಎಂಬುದು ಒಂದು ಪ್ರಶ್ನೆಯಾಯಿತು. ಇಲ್ಲಿ ಗಮನಿಸಬೇಕಾದದ್ದು ಏನು ಎಂದರೆ ಇಡೀ ರಾಜ್ಯದ ಇಂದಿರಾ ಕಾಂಗ್ರೆಸ್‌ನ ಸಂಪೂರ್ಣ ಜವಾಬ್ದಾರಿಯನ್ನು ಹೊತ್ತಿದ್ದ ದೇವರಾಜ ಅರಸು ಅವರು ಈ ಚುನಾವಣೆಯಲ್ಲಿ ಸ್ಪರ್ಧಿಸಿರಲಿಲ್ಲ.

ಈ ಚುನಾವಣೆಯಲ್ಲಿ ಅರಸು ಅವರು ಒಂದು ಅದ್ಭುತವಾದಂತಹ ಬದಲಾವಣೆಯನ್ನು ಮಾಡಿದ್ದರು. ಅದುವರೆಗೆ ಕಾಂಗ್ರೆಸ್‌ನ ರಾಜಕೀಯದಲ್ಲಿ 223 ಸ್ಥಾನಗಳಲ್ಲಿ 145 ಟಿಕೆಟ್‌ಗಳನ್ನು ಮೇಲ್ಜಾತಿಯವರಿಗೆ, ಮೇಲ್ವರ್ಗದವರಿಗೆ ಕೊಟ್ಟು ಕೇವಲ 73 ಸ್ಥಾನಗಳನ್ನು ಹಿಂದುಳಿದವರಿಗೆ ಮತ್ತು ಅಲ್ಪಸಂಖ್ಯಾತರಿಗೆ ನೀಡಲಾಗುತ್ತಿತ್ತು. ಈ ಸಂಪೂರ್ಣ ಚಿತ್ರಣವನ್ನು ಬದಲಾಯಿಸಿ 133 ಸ್ಥಾನಗಳನ್ನು ಹಿಂದುಳಿದವರಿಗೆ ಮತ್ತು 90 ಸ್ಥಾನಗಳನ್ನು ಮೇಲ್ಜಾತಿಯವರಿಗೆ ನೀಡುವುದರ ಮೂಲಕ ಒಂದು ಸಾಮಾಜಿಕ ಪರಿವರ್ತನೆಯನ್ನು ಇಲ್ಲಿ ಅರಸು ಮಾಡಿದ್ದರು. ಇಂದಿರಾ ಕಾಂಗ್ರೆಸ್‌ನಿಂದ ಗೆದ್ದ 166 ಶಾಸಕರ ಪೈಕಿ 92 ಮಂದಿ ದುರ್ಬಲ, ಹಿಂದುಳಿದ ಹಾಗೂ ಮತೀಯ ಅಲ್ಪಸಂಖ್ಯಾತ ಅಭ್ಯರ್ಥಿಗಳಾಗಿದ್ದರು. ಇದು 1972ರಲ್ಲಿ ದೇವರಾಜ ಅರಸು ಅವರು ಮಾಡಿದ ಒಂದು ಕ್ರಾಂತಿಕಾರಿ ರಾಜಕೀಯ ಬದಲಾವಣೆ. ಬಹುಸಂಖ್ಯಾತರಿಗೆ ಮೀಸಲಿದ್ದ ರಾಜಕೀಯ ಪ್ರಾಬಲ್ಯವನ್ನು ಮುರಿದು ಹಿಂದುಳಿದವರು ಮತ್ತು ಮತೀಯ ಅಲ್ಪಸಂಖ್ಯಾತರು ಕರ್ನಾಟಕದಲ್ಲಿ ಅಧಿಕಾರವನ್ನು ಹಿಡಿಯಬಲ್ಲರು ಎಂಬುದನ್ನು ಅರಸು ಸಾಬೀತು ಮಾಡಿ ತೋರಿಸಿದರು. ಹಾಗಾಗಿ ರಾಜಕೀಯ ಇತಿಹಾಸದಲ್ಲಿ ಒಂದು ಹೊಸ ಅಧ್ಯಾಯ ಪ್ರಾರಂಭವಾಯಿತು.

1972ರ ಚುನಾವಣೆ ಮುಗಿಯಿತು. ಇಂದಿರಾ ಕಾಂಗ್ರೆಸ್ ಬಹುಮತವನ್ನು ಗಳಿಸಿತು. ದೇವರಾಜ ಅರಸು ಅವರು ಎಲ್ಲಿಯೂ ಸ್ಪರ್ಧಿಸಿರಲಿಲ್ಲ. ಆದರೆ ಸಂಪೂರ್ಣ ಈ ವಿಜಯಕ್ಕೆ ಅವರು ಕಾರಣಕರ್ತರಾಗಿದ್ದರು. ಮುಖ್ಯಮಂತ್ರಿಯ ಆಯ್ಕೆ ಪ್ರಕ್ರಿಯೆ ನಡೆಯುತ್ತಿತ್ತು. ಅಲ್ಲಿ ಪೈಪೋಟಿ ಇದ್ದದ್ದು ಹರಿಹರದ ಶಾಸಕ ಎಚ್. ಸಿದ್ದವೀರಪ್ಪ ಮತ್ತು ದೇವರಾಜ ಅರಸು ಅವರ ನಡುವೆ. ಹೈಕಮಾಂಡ್ ರಾಜ್ಯದ ರಾಜಕೀಯ ಸ್ಥಿತಿಯನ್ನು ಪರಿಶೀಲನೆ ಮಾಡಿತು. ಹೆಚ್ಚು ಶಾಸಕರ ಒಲವು ಯಾರ ಕಡೆ ಇದೆ ಎಂಬುದನ್ನು ಗಮನಿಸಿತು. ದೇವರಾಜ ಅರಸು ಅವರಿಗೆ ಹೆಚ್ಚಿನ ಶಾಸಕರ ಬೆಂಬಲ ಇರುವುದನ್ನು ಖಾತರಿಪಡಿಸಿಕೊಂಡ ಮೇಲೆ ಅರಸು ಅವರನ್ನು ಶಾಸಕಾಂಗ ಪಕ್ಷದ ನಾಯಕನನ್ನಾಗಿ ಆಯ್ಕೆ ಮಾಡಲಾಯಿತು. 1972 ಮಾರ್ಚ್ 18ರಂದು ಇಂದಿರಾ ಗಾಂಧಿ ಅವರ ಸೂಚನೆಯಂತೆ ವಿಧಾನಸಭೆ ಸದಸ್ಯರಲ್ಲದ ಅರಸು ಅವರನ್ನು ಮುಖ್ಯಮಂತ್ರಿಯಾಗಿ ನೇಮಕ ಮಾಡಲಾಯಿತು. ಇಂದಿರಾ ಗಾಂಧಿಯವರ ಸಂದೇಶ ಹೊರಬಿದ್ದ ಎರಡೇ ನಿಮಿಷದಲ್ಲಿ ಶಾಸಕರೆಲ್ಲರೂ ಅರಸು ಅವರಿಗೆ ಜೈಕಾರ ಘೋಷಣೆ ಕೂಗಿ ಸಂತೋಷವನ್ನು ಹಂಚಿಕೊಂಡರು. ರಾಜ್ಯದ ಇತಿಹಾಸದಲ್ಲಿ ಮೊದಲ ಬಾರಿಗೆ ಜಾತಿ ಮೂಲದ ರಾಜಕೀಯ ಪ್ರಭುತ್ವವನ್ನು ಒಡೆದು 1972 ಮಾರ್ಚ್ 20ರಂದು

ದೇವರಾಜ ಅರಸು ಅವರು ಮೈಸೂರು ರಾಜ್ಯದ 8ನೇ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು.

ಅರಸು ಅವರು ದೀರ್ಘ ಕಾಲ ಆಡಳಿತ ನಡೆಸಿ ಸಮಾಜದ ಹಿಂದುಳಿದ ವರ್ಗಗಳು, ದಲಿತರು, ಅಲ್ಪಸಂಖ್ಯಾತರು, ಬಡವರನ್ನು ಜಾಗೃತಗೊಳಿಸಿ ಈ ವರ್ಗಗಳನ್ನು ಸಮಾಜದ ಮುಖ್ಯವಾಹಿನಿಗೆ ತರಲು ಹಗಲಿರುಳು ಶ್ರಮಿಸಿದರು. ಈ ರೀತಿ ಕಾಂಗ್ರೆಸ್ ಪಕ್ಷದಲ್ಲಿ ಒಂದು ವಿಶೇಷವಾದ ಬದಲಾವಣೆಯ ಪರ್ವ ಪ್ರಾರಂಭವಾಗುವ ಇದೇ ಸಂದರ್ಭದಲ್ಲಿ ನಾನು ಕಾಂಗ್ರೆಸ್ ಪಕ್ಷದ ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಯಾಗಿ ನೇಮಿಸಲ್ಪಟ್ಟೆ. ಬಹುಶಃ ನನ್ನ ರಾಜಕೀಯದ ಪ್ರಾರಂಭವೇ ಒಂದು ವಿಶೇಷವಾದ ಬದಲಾವಣೆಯೊಂದಿಗೆ ಆರಂಭವಾಯಿತು ಮತ್ತು ಓರ್ವ ಧೀಮಂತ ನಾಯಕ ದೇವರಾಜ ಅರಸು ಅವರ ನೆರಳಿನಲ್ಲಿ ಬೆಳೆಯುವ ಒಂದು ಸುಂದರ ಅವಕಾಶ ನನಗೆ ದೊರಕಿತು.

**ದೇವರಾಜ ಅರಸು ಆಡಳಿತದ ಮೊದಲ ಐದು ವರ್ಷ**

ದೇವರಾಜ ಅರಸು ಅವರು ಮುಖ್ಯಮಂತ್ರಿಯಾದ 1972ನೇ ಇಸವಿಯಿಂದ, ವಿಧಾನಸಭೆ ಚುನಾವಣೆಗೆ ಬಂಟ್ವಾಳ ಕ್ಷೇತ್ರದಲ್ಲಿ ಸ್ಪರ್ಧಿಸಿದ 1978ರವರೆಗೆ ನಾನು, ದೇವರಾಜ ಅರಸು ಅವರ ಅತ್ಯಂತ ನಿಕಟವರ್ತಿಯಾಗಿದ್ದೆ. ಮುಖ್ಯಮಂತ್ರಿಯಾಗಿ ಅವರು ಈ ರಾಜ್ಯಕ್ಕೆ ನೀಡಿದ್ದ ಒಂದು ಅಪೂರ್ವ ಆಡಳಿತ ವ್ಯವಸ್ಥೆಯನ್ನು ನಾನು ಬಹಳ ಹತ್ತಿರದಿಂದ ಕಂಡಿದ್ದೇನೆ. ಆ ಸಂದರ್ಭದಲ್ಲಿ ನನ್ನ ಜೊತೆಗಿದ್ದವರು ನನ್ನ ಆತ್ಮೀಯ ಮಿತ್ರ ಈಗಿನ ವಿಧಾನ ಸಭಾಧ್ಯಕ್ಷ ರಮೇಶ್ ಕುಮಾರ್. ಅನೇಕ ಸಲ ದೇವರಾಜ ಅರಸು ಅವರು ನನ್ನನ್ನು ಮತ್ತು ರಮೇಶ್ ಕುಮಾರ್ ಅವರನ್ನು ಕರೆಸಿಕೊಂಡು ಹತ್ತಿರ ಕುಳ್ಳಿರಿಸಿ ಅವರ ಮನದಾಳದ ಮಾತುಗಳನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. ಅರಸು ಅವರು ನಮಗೆ ನೀಡಿದ ಪ್ರೀತಿ, ವಿಶ್ವಾಸ ಈ ಜನ್ಮದಲ್ಲಿ ನಮಗೆ ಮರೆಯಲು ಸಾಧ್ಯವಿಲ್ಲ.

ಇಲ್ಲಿ ನಾನು ಒಂದು ಹಳೆಯ ಘಟನೆಯನ್ನು ನೆನಪಿಸಿಕೊಳ್ಳಲೇಬೇಕಾಗುತ್ತದೆ. 1971ರ ಲೋಕಸಭೆಗೆ ಮಧ್ಯಂತರ ಚುನಾವಣೆ ನಡೆಯುತ್ತಾ ಇತ್ತು. ಕಾಂಗ್ರೆಸ್ ಇಬ್ಭಾಗವಾಗಿರುವಂತಹ ಸಂದರ್ಭ. ಒಂದು ಕಡೆ ಸಂಸ್ಥಾ ಕಾಂಗ್ರೆಸ್ ಮತ್ತೊಂದು ಕಡೆ ಇಂದಿರಾ ಕಾಂಗ್ರೆಸ್. ನಾನಾಗ ಚಿಕ್ಕಮಗಳೂರಿನಲ್ಲಿದ್ದೆ. ನನ್ನ ರಾಜಕೀಯ ಜೀವನದ ಪ್ರಾರಂಭದ ದಿನಗಳವು. ಬಹಳ ಉತ್ಸಾಹ ಇತ್ತು. ಲೋಕಸಭಾ ಚುನಾವಣೆ ಘೋಷಣೆ ಯಾದ ನಂತರ ಚಿಕ್ಕಮಗಳೂರಿಗೆ ಯಾರು ಅಭ್ಯರ್ಥಿ ಎನ್ನುವುದರ ಬಗ್ಗೆ ಚರ್ಚೆಗಳು ನಡೆಯುತ್ತಿತ್ತು. ಅಭ್ಯರ್ಥಿಗಳ ಆಯ್ಕೆ ಇನ್ನೂ ಆಗಿರಲಿಲ್ಲ. ಅಲ್ಲಿ ಎಚ್.ಎ. ನಾರಾಯಣ ಗೌಡ ಎಂಬವರು ಟಿಕೆಟ್‌ಗೆ ಪ್ರಯತ್ನಿಸುತ್ತಿದ್ದರು. ಈ ನಾರಾಯಣ ಗೌಡ ಯಾರು ಎಂದರೆ – ಡಿಸಿಸಿ ಬ್ಯಾಂಕಿನ ಅಧ್ಯಕ್ಷರಾಗಿದ್ದು, ಪ್ರಭಾವಿ ವ್ಯಕ್ತಿಯಾಗಿದ್ದವರು. ಮುಂದೆ ಇವರು ಶಾಸಕರು, ಸಚಿವರೂ ಆಗಿ ದುಡಿದವರು.

ಆದರೆ ನಾನು, ಚಂದ್ರೇಗೌಡ ಮತ್ತು ಅನೇಕ ಯುವಕರು ಒಂದಾಗಿದ್ದೆವು. ಹಾಲಿ ಲೋಕಸಭಾ ಸದಸ್ಯರಾದ ಮಾಕೋನಳ್ಳಿ ಹುಚ್ಚೇಗೌಡರೇ ಅಲ್ಲಿ ಅಭ್ಯರ್ಥಿಯಾಗಬೇಕು ಎನ್ನುವುದು ನಮ್ಮೆಲ್ಲರ ಬೇಡಿಕೆಯಾಗಿತ್ತು. ಆದರೆ ಈ ಹುಚ್ಚೇಗೌಡರು ಒಪ್ಪಲಿಲ್ಲ. ಅವರಿಗೆ ಕಾಂಗ್ರೆಸ್ ಗೆಲ್ಲುತ್ತದೆ ಎನ್ನುವ ವಿಶ್ವಾಸವೇ ಇರಲಿಲ್ಲ. ದೇವರಾಜ ಅರಸು ಅವರು ಇಂದಿರಾ ಕಾಂಗ್ರೆಸ್‌ನ ಮೈಸೂರು ರಾಜ್ಯದ ಸಂಚಾಲಕರಾಗಿದ್ದರು. ಈ 1971ರ ಲೋಕಸಭೆ ಚುನಾವಣೆಗೆ ಅಭ್ಯರ್ಥಿಗಳನ್ನು ಆಯ್ಕೆ ಮಾಡುವ, ಟಿಕೆಟ್ ಹಂಚುವ ಸಂಪೂರ್ಣ ಜವಾಬ್ದಾರಿ ಮತ್ತು ಅಧಿಕಾರವನ್ನು ದೇವರಾಜ ಅರಸು ಅವರಿಗೆ ನೀಡಲಾಗಿತ್ತು. ನಮ್ಮ ಯುವಕರ ಒಂದು ತಂಡ ದೇವರಾಜ ಅರಸು ಅವರನ್ನು ಭೇಟಿಯಾಗಿ ಚಿಕ್ಕಮಗಳೂರಿನ ವಿಷಯಗಳನ್ನೆಲ್ಲ ಹೇಳಿ ಹುಚ್ಚೇಗೌಡರಿಗೆ ಟಿಕೆಟ್ ಕೊಡಬೇಕು, ಅವರನ್ನು ನಾವು ಗೆಲ್ಲಿಸುತ್ತೇವೆ ಎಂದು ಹೇಳಿದೆವು. ಆ ತಂಡದಲ್ಲಿ ನಾನು, ಡಿ.ಬಿ. ಚಂದ್ರೇಗೌಡ, ಗೆಳೆಯರೆಲ್ಲ ಇದ್ದೆವು. ದೇವರಾಜ ಅರಸು ಅವರು ಕೂಡಾ ಹುಚ್ಚೇಗೌಡರಲ್ಲಿ ಮಾತನಾಡಿದರು. ಆದರೂ ಹುಚ್ಚೇಗೌಡರು ಚುನಾವಣೆಗೆ ಸ್ಪರ್ಧಿಸಲು ಒಪ್ಪಲಿಲ್ಲ. ಹೀಗೆ ಮಾತನಾಡುವಾಗ ದೇವರಾಜ ಅರಸು ಅವರು ಡಿ.ಬಿ. ಚಂದ್ರೇಗೌಡರನ್ನು ಗಮನಿಸಿ, 'ನೀನೇನು ಮಾಡ್ತಿದ್ದಿಯಾ?' ಎಂದು ಕೇಳಿದರು. 'ನಾನೀಗ ಲಾ ಕಂಪ್ಲೀಟ್ ಮಾಡಿದ್ದೇನೆ. ಪ್ರಾಕ್ಟೀಸ್ ಮಾಡ್ತಿದ್ದೇನೆ' ಎಂದು ಡಿ.ಬಿ. ಚಂದ್ರೇಗೌಡ ಹೇಳಿದರು. 'ಹೋಗು, ನಾಮಿನೇಶನ್ ಹಾಕು' ಹೀಗೆ ಡೈರೆಕ್ಟ್ ಆಗಿ ದೇವರಾಜ ಅರಸು ಅವರು ಡಿ.ಬಿ. ಚಂದ್ರೇಗೌಡರಿಗೆ ಹೇಳಿದರು. 'ಯು ಆರ್ ಮೈ ಕೇಂಡಿಡೇಟ್. ಯು ಗೋ ಆ್ಯಂಡ್ ಫೈಲ್‌ದ ನಾಮಿನೇಶನ್' ಎಂದು ಘೋಷಿಸಿಯೇ ಬಿಟ್ಟರು.

ನಮಗೆ ಒಂದು ರೀತಿಯ ಸಂತೋಷದ ಜೊತೆಗೆ ಆತಂಕವೂ ಆಯಿತು. ಅಂದಿನ ಆ ಕ್ಷಣದ ಪರಿಸ್ಥಿತಿಯನ್ನು ವಿವರಿಸಲು ನನ್ನಲ್ಲೀಗ ಶಬ್ದಗಳೇ ಇಲ್ಲ. ನಾವು ಹಿಂದೇಟು ಹಾಕಲಿಲ್ಲ. ದೇವರಾಜ ಅರಸು ಅವರ ಆಶೀರ್ವಾದದೊಂದಿಗೆ ಡಿ.ಬಿ. ಚಂದ್ರೇಗೌಡರು 1971ರಲ್ಲಿ ಚಿಕ್ಕಮಗಳೂರು ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದರು. ಎಲ್ಲವೂ ನಮಗೆ ಹೊಸತು. ಆದರೂ ಒಂದು ಉತ್ಸಾಹ ಇತ್ತು. ಡಿ.ಬಿ. ಚಂದ್ರೇಗೌಡರು ಬಹಳ ಅಂತರದಿಂದ ಗೆಲುವನ್ನು ಸಾಧಿಸಿ ಲೋಕಸಭಾ ಸದಸ್ಯರಾಗಿ ಆಯ್ಕೆಯಾದರು. ಆಗ ಕಿಂಗ್ ಮೇಕರ್ ಎಂದೇ ಪ್ರಖ್ಯಾತರಾಗಿದ್ದ ನಾರಾಯಣ ಗೌಡ ಅವರ ತಂದೆ ಅಣ್ಣೇಗೌಡ ಹೇಳಿದ ಒಂದು ಮಾತು ಈಗಲೂ ನನ್ನ ಕಿವಿಯಲ್ಲಿ ಗುಂಯ್‌ಗುಡುತ್ತಿದೆ. "ಚಂದ್ರೇಗೌಡ ಶಾಟ ಕಟ್ಟಿ ಗುಡ್ಡ ಎಳೆದ. ಬಂದರೆ ಗುಡ್ಡ, ಹೋದರೆ ಶಾಟ. ಅವನ ನಸೀಬು ನೋಡು, ಗುಡ್ಡನೇ ಬಂದು ಬಿಡ್ತು".

ಈ ಚುನಾವಣೆಯ ಸಂದರ್ಭದಲ್ಲಿ ಡಿ.ಬಿ. ಚಂದ್ರೇಗೌಡರಿಗೆ ನಾನು ಬಹಳ ನಿಕಟವರ್ತಿಯಾದೆ. ನನ್ನ ಚಟುವಟಿಕೆ, ನನ್ನ ಭಾಷಣಗಳು, ನನ್ನ ವಿಚಾರಧಾರೆಗಳು ಇವುಗಳನ್ನೆಲ್ಲ ಗಮನಿಸಿದ ಡಿ.ಬಿ. ಚಂದ್ರೇಗೌಡರು 'ನೀನು ಇಲ್ಲಲ್ಲ, ನೀನು ಬೆಂಗಳೂರಿನಲ್ಲಿರಬೇಕು ಬಾ' ಎಂದು ಹೇಳಿ ನನ್ನನ್ನು ಬೆಂಗಳೂರಿಗೆ ಕರೆದುಕೊಂಡು ಹೋದರು

ಮತ್ತು ರಾಜ್ಯ ಯುವ ಕಾಂಗ್ರೆಸ್‌ನ ಸಂಘಟನಾ ಕಾರ್ಯದರ್ಶಿಯನ್ನಾಗಿ ನೇಮಿಸಿದರು. ಈ ಘಟನೆಯಿಂದಾಗಿ ಮತ್ತು ಡಿ.ಬಿ. ಚಂದ್ರೇಗೌಡರ ಪ್ರೀತಿ ವಿಶ್ವಾಸದ ಫಲವಾಗಿ ನಾನು ದೇವರಾಜ ಅರಸು ಅವರ ಮಡಿಲಿಗೆ ಬಿದ್ದೆ.

ಮುಖ್ಯಮಂತ್ರಿಯಾಗಿ ತನ್ನ ಮೊದಲ ಮಂತ್ರಿಮಂಡಲವನ್ನು ರಚಿಸುವುದರ ಮೂಲಕ ಮೈಸೂರು ರಾಜ್ಯದ ಅಂದಿನವರೆಗೂ ಇದ್ದ ರಾಜಕೀಯ ವ್ಯವಸ್ಥೆಗೆ ಒಂದು ಹೊಸ ಬದಲಾವಣೆಯ ಮೆರುಗನ್ನು ತಂದುಕೊಟ್ಟವರು ದೇವರಾಜ ಅರಸು ಅವರು. ಮೇಲ್ಜಾತಿ ಮತ್ತು ವರ್ಗದವರ ಕಪಿಮುಷ್ಟಿಯಲ್ಲಿದ್ದ ಅಧಿಕಾರದ ಚುಕ್ಕಾಣಿಯನ್ನು ಹಿಂದುಳಿದವರು, ಅಲ್ಪಸಂಖ್ಯಾತರ ಕೈ ಸೇರುವಂತೆ ನೋಡಿಕೊಂಡವರು. ತಮ್ಮ ಮಂತ್ರಿಮಂಡಲದಲ್ಲಿ ಸಮರ್ಥರು, ಪ್ರಾಮಾಣಿಕರು, ಸೇವಾ ಮನೋಭಾವ ಹೊಂದಿರುವವರು, ಸಮಾಜವಾದಿಗಳು, ಹಿಂದುಳಿದ, ಅಲ್ಪಸಂಖ್ಯಾತ, ಪರಿಶಿಷ್ಟ ವರ್ಗ, ಪರಿಶಿಷ್ಟ ಜಾತಿಯವರನ್ನೆಲ್ಲ ಸೇರಿಸಿ ಒಂದು ಸುಂದರ ಸರಕಾರವನ್ನು ರಚಿಸಿದರು. ಕೆ.ಎಚ್. ರಂಗನಾಥ್, ಬಿ. ಬಸವಲಿಂಗಪ್ಪ, ಎಲ್.ಜಿ. ಹಾವನೂರು, ಎಮ್.ವೈ. ಗೋರ್ಪಡೆ, ಕೆ.ಎಚ್. ಪಾಟೀಲ, ಎಚ್.ಎಸ್. ಚನ್ನಬಸಣ್ಣ, ವೀರಪ್ಪ ಮೊಯಿಲಿ, ದೇವೇಂದ್ರ ಘಾಳೆಪ್ಪ, ಶಿವಣ್ಣ, ಬಿ. ಸುಬ್ಬಯ್ಯ ಶೆಟ್ಟಿ, ಮನೋರಮಾ ಮಧ್ವರಾಜ್, ಮಲ್ಲಿಕಾರ್ಜುನ ಖರ್ಗೆ, ಎಸ್.ಎಂ. ಯಹ್ಯಾ, ಅಝೀಝ್ ಸೇಟ್, ಎಸ್.ಎಂ. ಕೃಷ್ಣ, ಎಚ್.ಎನ್. ನಂಜೇಗೌಡ, ಎಚ್. ಹುಚ್ಚಮಾಸ್ತಿ ಗೌಡ, ಎಚ್. ಸಿದ್ದವೀರಪ್ಪ, ಡಿ.ಕೆ. ನಾಯ್ಕರ್, ಆರ್.ಡಿ. ಕಿತ್ತೂರ ಇಂತಹ ಸಮರ್ಥರನ್ನು ಸಚಿವರನ್ನಾಗಿ ಮಾಡಿ ಐತಿಹಾಸಿಕ ಸಾಮಾಜಿಕ ಬದಲಾವಣೆಗೆ ನಾಂದಿ ಹಾಡಿದರು.

ಎಲ್ಲರಿಗೂ ಸಮಪಾಲು – ಎಲ್ಲರಿಗೂ ಸಮಬಾಳು ತತ್ವವನ್ನು ಅಕ್ಷರಶಃ ಅನುಷ್ಠಾನಗೊಳಿಸುವಲ್ಲಿ ದೇವರಾಜ ಅರಸು ಅವರ ನಿರ್ಧಾರಗಳನ್ನು ಈ ರಾಜ್ಯದ ಜನತೆ ಎಂದೆಂದೂ ಮರೆಯಲು ಸಾಧ್ಯವಿಲ್ಲ. ಅವರ ಹೃದಯ ಸದಾಕಾಲ ಅಸಂಘಟಿತ, ಅಸಹಾಯಕ ಪಂಗಡಗಳಿಗಾಗಿ ತುಡಿಯುತ್ತಿತ್ತು. ರೈತರ, ಕಾರ್ಮಿಕರ, ಬಡವರ, ಮಹಿಳೆಯರ ಸಂಕಷ್ಟಗಳಿಗೆ ಸ್ಪಂದಿಸುತ್ತಿದ್ದ ಅರಸು ಅವರು ಈ ವರ್ಗಗಳ ಜನರ ಶಾಶ್ವತ ಅಭಿವೃದ್ಧಿಗಾಗಿ ಕಾರ್ಯಯೋಜನೆಗಳನ್ನು ಹಮ್ಮಿಕೊಳ್ಳಲು ಸದಾ ತವಕಿಸುತ್ತಿದ್ದರು.

ಅರಸು ಅವರು ಮುಖ್ಯಮಂತ್ರಿಯಾಗಿ ಈ ರಾಜ್ಯದ ಸಾಮಾನ್ಯ ಜನರಿಗಾಗಿ ನೀಡಿದ ಒಂದೊಂದು ಕಾರ್ಯಕ್ರಮಗಳನ್ನು ಅವಲೋಕಿಸಿದರೆ ಅವರಿಗೆ ಈ ಹಿಂದುಳಿದ, ಬಡಜನರ ಬಗ್ಗೆ ಎಷ್ಟು ಕಾಳಜಿ ಇತ್ತು ಮತ್ತು ಅವರ ಅಭಿವೃದ್ಧಿಗಾಗಿ ದುಡಿಯಲು ಅವರಿಗೆ ಎಂತಹ ಇಚ್ಛಾಶಕ್ತಿ ಇತ್ತು ಎಂಬುದು ತಿಳಿಯಬಹುದಾಗಿದೆ.

ದೇವರಾಜ ಅರಸು ಅವರು ಅಪ್ಪಟ ಕನ್ನಡ ಪ್ರೇಮಿಯಾಗಿದ್ದರು. ಅಪಾರವಾದ ಸಾಹಿತ್ಯಾಸಕ್ತಿಯೂ ಅವರಿಗಿತ್ತು. ಅರಸು ಅವರಿಗೆ ನಿರಂತರ ಓದುವ ಹವ್ಯಾಸವಿತ್ತು. ಆಗಿನ ಕಾಲದ ಸುಪ್ರಸಿದ್ಧ ಬರಹಗಾರರಾದ ಮಾಸ್ತಿ, ಕುವೆಂಪು, ಬೇಂದ್ರೆ, ಕಾರಂತ, ಡಿವಿಜಿ, ಚದುರಂಗ ಮುಂತಾದವರ ಸಾಹಿತ್ಯವನ್ನು ಆಸಕ್ತಿಯಿಂದ ಓದುತ್ತಿದ್ದರು.

ರಾಮಾಯಣ, ಮಹಾಭಾರತವನ್ನೂ ಅಧ್ಯಯನ ಮಾಡಿದ್ದರು. ಇಂಗ್ಲಿಷ್ ಪುಸ್ತಕಗಳನ್ನೂ ಓದುತ್ತಿದ್ದರು. ಬಸವಣ್ಣ, ಮಹಾತ್ಮಾ ಗಾಂಧಿ, ವಿನೋಬಾ ಭಾವೆ ಇವರೆಲ್ಲರ ವಿಚಾರಧಾರೆಗಳಿಂದ ಅರಸು ಅವರು ಪ್ರಭಾವಿತರಾಗಿದ್ದರು. 1973ರ ನವೆಂಬರ್ 1ರಂದು ಮೈಸೂರು ರಾಜ್ಯಕ್ಕೆ 'ಕರ್ನಾಟಕ' ಎಂದು ನಾಮಕರಣ ಮಾಡಿದ ಅರಸು ಅವರು, ಕರ್ನಾಟಕ ರಾಜ್ಯದ ಮೊದಲ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆಗೂ ಪಾತ್ರರಾದರು. ಭಾಷೆ ಮತ್ತು ಕನ್ನಡ ಅಭಿವೃದ್ಧಿ ನಿರ್ದೇಶನಾಲಯ ಎಂಬ ಇಲಾಖೆಯನ್ನು ಸ್ಥಾಪಿಸುವ ಮೂಲಕ ಕನ್ನಡ ಭಾಷೆಯ ಅಭಿವೃದ್ಧಿಗೆ ಒತ್ತು ನೀಡಿದರು. ಇಂದು ಇದೇ ನಿರ್ದೇಶನಾಲಯ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಾಗಿ ಬೆಳೆದು ನಿಂತಿದೆ. ಜಿಲ್ಲೆ ಜಿಲ್ಲೆಗಳಲ್ಲೂ ಈ ಇಲಾಖೆಯ ವಿಭಾಗಗಳನ್ನು ಸ್ಥಾಪಿಸುವುದರ ಮೂಲಕ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಅಭಿವೃದ್ಧಿಗೆ ದೇವರಾಜ ಅರಸು ಅವರು ನೀಡಿದ ಕೊಡುಗೆ ಅವಿಸ್ಮರಣೀಯ.

**ಭೂಸುಧಾರಣೆ**

'ಉಳುವವನೇ ಹೊಲದೊಡೆಯ' ಎಂಬ ಘೋಷಣೆಯೊಂದಿಗೆ ಭೂಸುಧಾರಣಾ ಕಾನೂನನ್ನು ಜಾರಿಗೆ ತರುವುದರ ಮೂಲಕ ದೇಶದ ಇತಿಹಾಸದಲ್ಲಿ ಗೇಣಿ ಪದ್ಧತಿ ವಿರುದ್ಧ ಎದೆ ಸೆಟೆದು ನಿಂತ ಪ್ರಪ್ರಥಮ ವ್ಯಕ್ತಿ ದೇವರಾಜ ಅರಸು. ಸಮಾಜವಾದಿ ಆಂದೋಲನ ಹುಟ್ಟಿಕೊಂಡದ್ದೇ ಗೇಣಿ ಪದ್ಧತಿ ವಿರುದ್ಧದ ಚಳುವಳಿಯೊಂದಿಗೆ. ಈ ಬಗ್ಗೆ ಒಂದು ಕಾನೂನು ಇದ್ದರೂ ಅದು ಅತ್ಯಂತ ದುರ್ಬಲವಾಗಿತ್ತು. 1974ರ ಮಾರ್ಚ್ 1ರಂದು ಸಮಗ್ರ ಬದಲಾವಣೆಯೊಂದಿಗೆ ಅರಸು ಅವರು ಜಾರಿಗೆ ತಂದ ಭೂಸುಧಾರಣಾ ಮಸೂದೆ ಒಂದು ದಿಟ್ಟ ಹೆಜ್ಜೆಯಾಗಿತ್ತು. ಭೂಮಾಲಕರ ಗುಲಾಮರಾಗಿ ಬದುಕುತ್ತಿದ್ದ ರೈತರು ಜಮೀನ್ದಾರರ ವಿರುದ್ಧ ನಿಂತು ಕಾನೂನು ಪ್ರಕಾರ ಭೂಮಿಯನ್ನು ಪಡೆಯಲು ಮುಂದಾದರು. ಈ ಶಾಸನ ರಾಜ್ಯದ ಲಕ್ಷಾಂತರ ಗೇಣಿದಾರ ರೈತರ ಸಾಮಾಜಿಕ ಬದುಕನ್ನೇ ಬದಲಾಯಿಸಿತು. ಇನ್ನೊಂದು ಅರ್ಥದಲ್ಲಿ ಇದು ಭೂಮಾಲಕರು ಮತ್ತು ಬಂಡವಾಳಶಾಹಿಗಳ ವಿರುದ್ಧ ದೇವರಾಜ ಅರಸು ಸಾರಿದ ಸಮರವಾಗಿತ್ತು. ಕೇವಲ ಮಸೂದೆಯನ್ನು ರಚಿಸಿದ್ದು ಮಾತ್ರವಲ್ಲ, ಅದರ ಲಾಭ ಸಮಾಜದ ಅತ್ಯಂತ ಕೆಳಹಂತದ ಪ್ರತಿಯೊಬ್ಬ ಕಟ್ಟಕಡೆಯ ವ್ಯಕ್ತಿಗೂ ಲಭಿಸುವಂತೆ ಆಡಳಿತ ಯಂತ್ರವನ್ನು ಚುರುಕುಗೊಳಿಸಿದ ಕೀರ್ತಿಯೂ ಅರಸು ಅವರಿಗೆ ಸಲ್ಲುತ್ತದೆ.

ಭೂಸುಧಾರಣಾ ಮಸೂದೆಯನ್ನು ಜಾರಿಗೊಳಿಸುವುದು ಅಷ್ಟು ಸುಲಭದ ಕೆಲಸವಲ್ಲ ಎಂದು ದೇವರಾಜ ಅರಸು ಅವರಿಗೆ ಗೊತ್ತಿತ್ತು. ಈ ಮಸೂದೆಯಿಂದ ಕುಪಿತಗೊಂಡ ಭೂಮಾಲಕರು ಮತ್ತು ಬಂಡವಾಳಶಾಹಿಗಳು ಬಡ ಗೇಣಿದಾರರನ್ನು ಆಕ್ರಮಿಸುವ ಭಯವೂ ಇತ್ತು. ಅದಕ್ಕಾಗಿಯೇ ಅರಸು ಅವರು ನ್ಯಾಯಾಲಯಗಳು ಈ ವಿಚಾರದಲ್ಲಿ ಹಸ್ತಕ್ಷೇಪ ಮಾಡದಂತೆ ನೋಡಿಕೊಳ್ಳಲು ಇದನ್ನು ನ್ಯಾಯಾಂಗದ ಪರಾಮರ್ಶೆಯಿಂದ ಹೊರಗಿಟ್ಟಿದ್ದರು ಮಾತ್ರವಲ್ಲ ನಿರಕ್ಷರಸ್ಥ, ಅಸಂಘಟಿತ ಗೇಣಿ ರೈತರಿಗೆ ಯಾವ ಹಂತದಲ್ಲೂ

ಅನ್ಯಾಯ ಆಗಬಾರದು ಎಂದು ಪ್ರತಿ ಗ್ರಾಮಗಳಲ್ಲೂ 'ಜನತಾ ನ್ಯಾಯಮಂಡಳಿ' (ಟ್ರಿಬ್ಯೂನಲ್)ಗಳನ್ನು ಸ್ಥಾಪಿಸಿದ್ದರು. ಎಲ್ಲ ಹಂತದಲ್ಲೂ ಗೇಣಿ ರೈತರಿಗೆ ಸಂಪೂರ್ಣ ರಕ್ಷಣೆಯನ್ನು ನೀಡಲಾಗಿತ್ತು. ಆದರೂ ಅಲ್ಲೊಂದು ಇಲ್ಲೊಂದು ಅಹಿತಕರ ಘಟನೆಗಳು ನಡೆದಿದ್ದವು. ಅದರಲ್ಲಿ ಎರಡು ಮುಖ್ಯ ಘಟನೆಗಳು ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಡೆದಿತ್ತು. ಅದು ಯಾವುದೆಂದರೆ ಒಂದು – ಕಲ್ಲಡ್ಕ ಇಸ್ಮಾಯೀಲ್ ಕೊಲೆ ಪ್ರಕರಣ. ಮತ್ತೊಂದು ಸೇಮಿತ ಕೊಲೆ ಪ್ರಕರಣ. ಇವೆರಡು ಘಟನೆಗಳನ್ನು ಮುಂದೆ ನಾನು ವಿವರಿಸುತ್ತೇನೆ. ಒಂದೇ ಮಾತಿನಲ್ಲಿ ಹೇಳುವುದಾದರೆ ದೇವರಾಜ ಅರಸು ಅವರ ಈ ಭೂಸುಧಾರಣಾ ಮಸೂದೆಯು ಇಡೀ ದೇಶದಲ್ಲೇ ಪ್ರಪ್ರಥಮ ಬಾರಿಗೆ ಯಾವುದೇ ಹೇಳಿಕೊಳ್ಳುವಂತಹ ಹಿಂಸೆ, ಸಂಘರ್ಷ ಇಲ್ಲದೆ ಸಮರ್ಪಕವಾಗಿ ಜಾರಿಯಾದ ಅತ್ಯಂತ ಕ್ರಾಂತಿಕಾರಿ ಸಾಮಾಜಿಕ ಬದಲಾವಣೆ ಎಂದರೂ ಅತಿಶಯೋಕ್ತಿಯಾಗಲಾರದು.

**ಹಾವನೂರು ವರದಿ**

ದೇವರಾಜ ಅರಸು ಅವರ ಮೇಲೆ ಡಾ. ಲೋಹಿಯಾ ಅವರ ತತ್ವ ಆದರ್ಶಗಳು ಆಳವಾದ ಪರಿಣಾಮವನ್ನು ಉಂಟುಮಾಡಿದ್ದವು. ಈ ದೇಶಕ್ಕೆ ಸಿಕ್ಕಿರುವ ಸ್ವಾತಂತ್ರ್ಯವು ಅರ್ಥಪೂರ್ಣವಾಗಬೇಕಾದರೆ ರಾಜಕೀಯದಲ್ಲಿ ಮತ್ತು ಅಧಿಕಾರದಲ್ಲಿ ಹಿಂದುಳಿದ ವರ್ಗಗಳಿಗೆ ದೊಡ್ಡ ಪಾಲು ಸಲ್ಲಬೇಕು ಹಾಗೂ ಸರಕಾರಿ ಹುದ್ದೆಗಳಲ್ಲೂ ದುರ್ಬಲರಿಗೆ ಮೀಸಲಾತಿ ಇರಬೇಕು ಎಂಬ ಲೋಹಿಯಾ ಅವರ ಅಭಿಪ್ರಾಯಕ್ಕೆ ಅರಸು ಅವರು ಬದ್ಧರಾಗಿದ್ದರು. ಈ ಬಗ್ಗೆ ಆಳವಾದ ಅಧ್ಯಯನವನ್ನು ನಡೆಸಿ ಒಂದು ಸಮಗ್ರ ವರದಿಯನ್ನು ಸಿದ್ಧಪಡಿಸಲು ಅರಸು ಅವರು ಹಾವನೂರು ಆಯೋಗವನ್ನು ರಚಿಸಿದರು. ಇದು ಕರ್ನಾಟಕದ ಪ್ರಪ್ರಥಮ ಹಿಂದುಳಿದ ವರ್ಗಗಳ ಆಯೋಗವಾಗಿದೆ. ನ್ಯಾಯವಾದಿ, ರಾಜಕಾರಣಿ ಹಾಗೂ ಹಿಂದುಳಿದ ವರ್ಗಕ್ಕೆ ಸೇರಿದವರೂ ಆದ ಹಾವನೂರು ಬಹು ವ್ಯಾಪಕವಾದ ಸಮೀಕ್ಷೆಯನ್ನು ನಡೆಸಿದರು. ಹಿಂದಿನ ಮೀಸಲಾತಿ ವರದಿಗಳನ್ನೆಲ್ಲ ಈ ಆಯೋಗ ಅಭ್ಯಸಿಸಿ ಸಮಗ್ರವಾದ ಸಾಮಾಜಿಕ ಮತ್ತು ಆರ್ಥಿಕ ಸಮೀಕ್ಷೆ ನಡೆಸಿತು. ಈ ವರದಿಯಲ್ಲಿ ಹಿಂದುಳಿದ ವರ್ಗಗಳನ್ನು ಮೂರು ಗುಂಪುಗಳಾಗಿ ವಿಂಗಡಿಸಲಾಯಿತು. 1. ಹಿಂದುಳಿದ ಸಮುದಾಯಗಳು 2. ಹಿಂದುಳಿದ ಜಾತಿಗಳು 3. ಹಿಂದುಳಿದ ಬುಡಕಟ್ಟುಗಳು. ಹಾವನೂರು ಆಯೋಗದ ಸಮೀಕ್ಷೆಯ ಪ್ರಕಾರ ರಾಜ್ಯದ ಒಟ್ಟು ಜನಸಂಖ್ಯೆಯ ಶೇಕಡಾ 14ರಷ್ಟು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಬುಡಕಟ್ಟುಗಳು ಇದ್ದರೆ, ಶೇಕಡಾ 44.52ರಷ್ಟು ಜನಸಂಖ್ಯೆ ಇತರ ಹಿಂದುಳಿದ ವರ್ಗಗಳಾಗಿರುತ್ತದೆ.

ಇಂದು ರಾಜ್ಯದಲ್ಲಿ ಪರಿಶಿಷ್ಟ ಜಾತಿ, ಪರಿಶಿಷ್ಟ ಬುಡಕಟ್ಟು ಹಾಗೂ ಎಲ್ಲ ಹಿಂದುಳಿದ ಸಮುದಾಯ, ಜಾತಿ, ಬುಡಕಟ್ಟುಗಳಿಗೆ ಶೈಕ್ಷಣಿಕ, ಸರಕಾರಿ ಹುದ್ದೆ, ರಾಜಕೀಯ ಎಲ್ಲದರಲ್ಲೂ ಸೂಕ್ತ ಮೀಸಲಾತಿ ದೊರಕಲು ಈ ಹಾವನೂರು ವರದಿಯೇ ಮೂಲ ಕಾರಣವಾಗಿರುತ್ತದೆ. ಈ ವರದಿ ರಾಜ್ಯದ ಹಿಂದುಳಿದ ವರ್ಗಗಳ ಸಾಮಾಜಿಕ ನ್ಯಾಯದ

ಕೂಗಿಗೆ ಶಕ್ತಿಯನ್ನು ಕೊಟ್ಟಿತು ಮಾತ್ರವಲ್ಲ ಒಂದು ಜನಾಂದೋಲನಕ್ಕೂ ಇದು ಸ್ಫೂರ್ತಿಯಾಯಿತು.

### ಋಣ ಪರಿಹಾರ ಕಾಯ್ದೆ

ರಾಜ್ಯದಲ್ಲಿ ಪರೋಕ್ಷವಾದ ಆರ್ಥಿಕ ಶೋಷಣೆಯ ಒಂದು ಅನಿಷ್ಟ ಪದ್ಧತಿ ಜಾರಿಯಲ್ಲಿತ್ತು. ಸಮಾಜದ ಕೆಳ ಸಮುದಾಯಗಳಾದ ಕೃಷಿಕರು, ಕಾರ್ಮಿಕರು, ಕುಂಬಾರರು, ಹೂಗಾರರು, ಚಮ್ಮಾರರು, ಅಗಸರು, ಬಡಿಗರು ಮುಂತಾದವರು ಶ್ರೀಮಂತರ ಮತ್ತು ಬಂಡವಾಳಶಾಹಿಗಳ ಕಪಿಮುಷ್ಟಿಯಲ್ಲಿ ಸಾಲದ ಶೂಲದ ಒಳಗೆ ಬಂಧಿಯಾಗಿದ್ದರು. ಆರ್ಥಿಕ ಸಂಕಷ್ಟದಲ್ಲಿದ್ದ ಈ ಬಡವರು ಈ ಶ್ರೀಮಂತರಿಂದ ಪಡೆದ ಸಾಲವನ್ನು ಮರುಪಾವತಿಸಲಾಗದೆ, ಆ ಸಾಲಕ್ಕೆ ಬಡ್ಡಿಗೆ ಬಡ್ಡಿ ಸೇರಿ ಈ ಬಡವರ ಹೊಲ, ಗದ್ದೆ, ಮನೆ ಎಲ್ಲವೂ ಶ್ರೀಮಂತರ ಪಾಲಾಗಿಬಿಟ್ಟಿದ್ದವು. ನೂರಾರು ಕುಟುಂಬಗಳು ಇದರಿಂದಾಗಿ ಬೀದಿಪಾಲಾಗಿದ್ದವು. ಇದರ ಸಂಪೂರ್ಣ ಅರಿವಿದ್ದ ದೇವರಾಜ ಅರಸು ಅವರು 1976ರಲ್ಲಿ ಸಾಲ ಮನ್ನಾ ಯೋಜನೆಯನ್ನು ಜಾರಿಗೆ ತಂದರು. ಶ್ರೀಮಂತರಿಂದ ಸಾಲ ಪಡೆದ ಬಡವರೆಲ್ಲರಿಗೂ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡುವ ಶಾಸನವನ್ನು ಜಾರಿಗೆ ತಂದರು. ಇದನ್ನು 'ಋಣ ಪರಿಹಾರ ಕಾಯ್ದೆ' ಎಂದು ಕರೆಯಲಾಯಿತು. ದೇವರಾಜ ಅರಸು ಅವರು ಈ ಕಾಯ್ದೆಯ ಅನುಷ್ಠಾನದಲ್ಲೂ ವೈಯಕ್ತಿಕ ಆಸಕ್ತಿಯನ್ನು ತೋರಿಸಿ ಇದರ ಲಾಭ ಕಟ್ಟಕಡೆಯ ಬಡವನಿಗೂ ಸಿಗುವಂತೆ ನೋಡಿಕೊಂಡರು. ಪ್ರತಿ ಜಿಲ್ಲೆಗಳಲ್ಲೂ ಜಿಲ್ಲಾಧಿಕಾರಿಗಳು ಕಾರ್ಯ ನಿರ್ವಹಿಸಿ ಶ್ರೀಮಂತರಲ್ಲಿ, ಸಾಹುಕಾರರ ಮನೆಗಳಲ್ಲಿ, ಮಾರ್ವಾಡಿ ಅಂಗಡಿಗಳಲ್ಲಿ ಸಾಲದ ಸಲುವಾಗಿ ಒತ್ತೆಯಲ್ಲಿದ್ದ ಭೂದಾಖಲೆ, ಒಡವೆ ಇನ್ನಿತರ ಎಲ್ಲ ವಸ್ತುಗಳನ್ನೂ ಪತ್ತೆ ಹಚ್ಚಿ ಬಡವರಿಗೆ ಹಿಂದಿರುಗಿಸಿದರು. ದೇವರಾಜ ಅರಸು ಅವರ ಈ ದಿಟ್ಟ ನಿಲುವಿನ ಶಾಸನದಿಂದಾಗಿ ಈ ರಾಜ್ಯದ ಲಕ್ಷಾಂತರ ಬಡವರು ಸಾಲದ ಸಂಕೋಲೆಯಿಂದ ಬಿಡುಗಡೆ ಹೊಂದಿ ನಿಟ್ಟುಸಿರು ಬಿಡುವಂತಾಯಿತು.

### ಜೀತಪದ್ಧತಿಯ ನಿರ್ಮೂಲನೆ

ಈ ರಾಜ್ಯದಲ್ಲಿ ಅತ್ಯಂತ ಹೀನ, ಅನಿಷ್ಟ ಪದ್ಧತಿಯೊಂದು ಜಾರಿಯಲ್ಲಿತ್ತು. ಶ್ರೀಮಂತರು, ಸಾಹುಕಾರರು ಅಸಹಾಯಕ ರೈತರಿಗೆ, ಬಡವರಿಗೆ ಅವರ ಸಂಕಷ್ಟ ಕಾಲದಲ್ಲಿ ಒಂದಿಷ್ಟು ಹಣವನ್ನು ಕೊಟ್ಟು ಆ ಸಾಲ ತೀರುವವರೆಗೆ ಆ ಬಡವರ ಕುಟುಂಬದ ಸದಸ್ಯರನ್ನು ತಮ್ಮ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡು ಅವರನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಿದ್ದರು. ಬರಗಾಲದಂತಹ ಸಂದರ್ಭದಲ್ಲಿ ಸಂಕಷ್ಟಕ್ಕೆ ಒಳಗಾಗುವ ಬಡವರಿಗೆ ಹಣ ಕೊಟ್ಟು ಅವರನ್ನು ಗುಲಾಮರಂತೆ ದುಡಿಸಿಕೊಳ್ಳುತ್ತಿದ್ದರು. ಶ್ರೀಮಂತರ ಮನೆಯ ದನದ ಕೊಟ್ಟಿಗೆಯಲ್ಲಿ ವಾಸ ಮಾಡಿ ಶ್ರೀಮಂತರ ಹೊಲ, ಗದ್ದೆಗಳಲ್ಲಿ

ಹಗಲೂ ರಾತ್ರಿ ದುಡಿಯುತ್ತಿದ್ದ ಈ ಬಡವರ ಸ್ಥಿತಿ ಪ್ರಾಣಿಗಳಿಗಿಂತ ಕಡೆಯಾಗಿತ್ತು. ಇದನ್ನು ಮನಗಂಡ ದೇವರಾಜ ಅರಸು ಅವರು ಈ ಅನಿಷ್ಟ ಪದ್ಧತಿಯನ್ನು ನಿರ್ಮೂಲನ ಮಾಡಲು ಪಣ ತೊಟ್ಟು 1976ರಲ್ಲಿ ಒಂದು ಕಾನೂನನ್ನು ಜಾರಿಗೆ ತಂದರು. ಇಡೀ ರಾಜ್ಯದಲ್ಲಿ ಸಂಪೂರ್ಣ ಆಡಳಿತ ಯಂತ್ರದ ಮುಖಾಂತರ ದಕ್ಷ ಅಧಿಕಾರಿಗಳನ್ನು ನೇಮಿಸಿ ರಾಜ್ಯದ ಮೂಲೆ ಮೂಲೆಗಳಿಗೆ ದಾಳಿ ನಡೆಸಿ ಜೀತದಾಳುಗಳನ್ನು ಪತ್ತೆ ಹಚ್ಚಿ ಬಿಡುಗಡೆಗೊಳಿಸಲು ಅರಸು ಅವರು ಅವಿರತ ಪರಿಶ್ರಮಪಟ್ಟರು. ಒಂದು ಅಂದಾಜು ಪ್ರಕಾರ 50 ಸಾವಿರಕ್ಕೂ ಅಧಿಕ ಜೀತದಾಳುಗಳನ್ನು ವಿಮೋಚನೆಗೊಳಿಸಿ ಅವರಿಗೆ ಪುನರ್ವಸತಿ ಕಲ್ಪಿಸಿಕೊಡುವಲ್ಲಿ ಅರಸು ಸಫಲರಾದರು.

**ತಲೆಯ ಮೇಲೆ ಮಲ ಹೊರುವ ಪದ್ಧತಿ ನಿಷೇಧ**

ತಲೆಯ ಮೇಲೆ ಮಲ ಹೊರುವ ಪದ್ಧತಿ ರಾಜ್ಯದಲ್ಲಿ ಅನಾದಿ ಕಾಲದಿಂದಲೂ ಜಾರಿಯಲ್ಲಿತ್ತು. ಮೇಲ್ಜಾತಿಯವರ ಮಲವನ್ನು ಒಂದು ಕೆಲ ಜಾತಿಯ ಜನರು ತಲೆಯ ಮೇಲೆ ಹೊತ್ತುಕೊಂಡು ಸಾಗಿಸುವ ಪದ್ಧತಿ ಇದಾಗಿತ್ತು. ಇದಕ್ಕಾಗಿ ದಲಿತ ವರ್ಗದಲ್ಲಿ ಒಂದು ಜಾತಿಯೇ ಇತ್ತು. ಇಂತಹ ಒಂದು ಅಮಾನವೀಯ, ಕೊಳಕು ಪದ್ಧತಿಯನ್ನು ಬದಲಾಯಿಸುವ ಸಾಹಸ ಯಾರೂ ಮಾಡಿರಲಿಲ್ಲ. ಈ ಪದ್ಧತಿ ದೇವರಾಜ ಅರಸು ಅವರ ಮನ ಕಲಕಿತ್ತು. ಒಬ್ಬ ಮನುಷ್ಯನ ಹೇಲನ್ನು ತಲೆಯಲ್ಲಿ ಹೊರುವ ದೃಶ್ಯವನ್ನು ಸಹಿಸಿಕೊಳ್ಳಲು ಅರಸು ಅವರಿಗೆ ಸಾಧ್ಯವಾಗಲಿಲ್ಲ. ತಲೆಯ ಮೇಲೆ ಮಲ ಹೊರುವ ಪದ್ಧತಿಯನ್ನು ಸಂಪೂರ್ಣ ನಿರ್ಮೂಲನೆ ಮಾಡಲು 1977ರಲ್ಲಿ ಅರಸು ಅವರು ಒಂದು ಕಾನೂನನ್ನು ತಂದರು. ಆಗ ಸರಕಾರದ ಪೌರಾಡಳಿತ ಸಚಿವರಾಗಿದ್ದ ಬಿ. ಬಸವಲಿಂಗಪ್ಪ ಅವರು ಈ ಮಲ ಹೊರುವ ಪದ್ಧತಿ ನಿಷೇಧ ಶಾಸನ ಜಾರಿಗೊಳಿಸಲು ಬಹಳಷ್ಟು ದುಡಿದಿದ್ದರು. ಆದರೂ ಮೇಲ್ಜಾತಿಯವರು ಈ ಪದ್ಧತಿಯ ತಡೆಗೆ ಸಹಕಾರ ನೀಡಲಿಲ್ಲ. ಅರಸು ಅವರ ನಿರ್ದಾಕ್ಷಿಣ್ಯ ಕಠಿಣ ಕಾನೂನು ಜಾರಿಯಿಂದಾಗಿ ಆರೇ ತಿಂಗಳಲ್ಲಿ ರಾಜ್ಯಾದ್ಯಂತ ಈ ಕಾನೂನು ಪರಿಣಾಮಕಾರಿಯಾಗಿ ಅನುಷ್ಠಾನಗೊಂಡಿತು ಮತ್ತು ದೇಶದಲ್ಲೇ ಇಂತಹ ಒಂದು ಕಾನೂನನ್ನು ಜಾರಿಗೊಳಿಸಿದ ರಾಜ್ಯವೆಂಬ ಹೆಗ್ಗಳಿಕೆಗೆ ನಮ್ಮ ರಾಜ್ಯ ಪಾತ್ರವಾಯಿತು.

**ಬರಗಾಲದ ಪರಿಹಾರ**

ದೇವರಾಜ ಅರಸು ಅವರ ಕಾಲದಲ್ಲಿ ಎರಡು ಸಲ ರಾಜ್ಯ ತೀವ್ರ ಬರಗಾಲಕ್ಕೆ ಒಳಗಾಗಿತ್ತು. 1972–73ರ ಸಂದರ್ಭದಲ್ಲಿ ರಾಜ್ಯದ ಉತ್ತರ ಭಾಗಗಳಾದ ಗುಲ್ಬರ್ಗಾ, ಬಿಜಾಪುರ, ರಾಯಚೂರು, ಬೆಳಗಾವಿ, ಧಾರವಾಡ, ಚಿತ್ರದುರ್ಗಗಳಲ್ಲಿ, ಹಾಗೆಯೇ 1974–75ರ ಸಂದರ್ಭದಲ್ಲಿ ಹಾಸನ, ಮಂಡ್ಯ, ಮೈಸೂರು, ಧಾರವಾಡ ಜಿಲ್ಲೆಗಳಲ್ಲಿ ಭೀಕರವಾದ ಬರಗಾಲ ಕಾಣಿಸಿಕೊಂಡಿತು. ಬರಗಾಲದಂತಹ ವಿಕೋಪ ಪರಿಸ್ಥಿತಿಗಳನ್ನು

ನಿವಾರಿಸುವ ಸಲುವಾಗಿ ಹಲವು ನೀರಾವರಿ ಯೋಜನೆಗಳನ್ನು ಅರಸು ಅವರು ಕಾರ್ಯರೂಪಕ್ಕೆ ತಂದರು. ಸೂಪಾ ಅಣೆಕಟ್ಟು ಯೋಜನೆ, ಹಾರಂಗಿ ಯೋಜನೆ, ಹೇಮಾವತಿ ಯೋಜನೆ, ಕೃಷ್ಣಾ ಮೇಲ್ದಂಡೆ ಯೋಜನೆ, ಕಬಿನಿ ಯೋಜನೆ, ಮಲಪ್ರಭಾ ಮತ್ತು ಘಟಪ್ರಭಾ ಯೋಜನೆ ಅವುಗಳಲ್ಲಿ ಮುಖ್ಯವಾದವುಗಳು.

ದೇವರಾಜ ಅರಸು ಅವರು ಇಂತಹ ಇನ್ನೂ ಹತ್ತು ಹಲವಾರು ಜನಪರ ಕಾರ್ಯಕ್ರಮ, ಯೋಜನೆಗಳನ್ನು ಹಮ್ಮಿಕೊಳ್ಳುವುದರ ಮೂಲಕ ಇಡೀ ರಾಜ್ಯದ ಬಡವರ, ದೀನ ದಲಿತರ, ಹಿಂದುಳಿದವರ, ರೈತರ, ಕಾರ್ಮಿಕರ ಹೃದಯವನ್ನು ಗೆದ್ದಿದ್ದರು. ದೇವರಾಜ ಅರಸು ಅವರ ಈ ಎಲ್ಲ ಧೀಮಂತ, ದೂರಗಾಮಿ, ಬಡಜನ ಪರ ಕಾರ್ಯಯೋಜನೆಗಳನ್ನು ನಾನು ಇಲ್ಲೇಕೆ ನೆನಪಿಸಿಕೊಳ್ಳುತ್ತಿದ್ದೇನೆ ಎಂದರೆ, ಅರಸು ಅವರು ಈ ಎಲ್ಲ ಕಾರ್ಯಕ್ರಮಗಳನ್ನು, ಯೋಜನೆಗಳನ್ನು, ಶಾಸನಗಳನ್ನು ಸಿದ್ಧಗೊಳಿಸುವಾಗ, ಜಾರಿಗೊಳಿಸುವಾಗ ನಾನು ಅತ್ಯಂತ ಹತ್ತಿರದಿಂದ ಇವೆಲ್ಲವನ್ನೂ ನೋಡುತ್ತಿದ್ದೆ. ಅರಸು ಅವರು ನವ ಕರ್ನಾಟಕದ ನಿರ್ಮಾಣಕ್ಕಾಗಿ ನಿರಂತರವಾಗಿ ದುಡಿಯುತ್ತಿದ್ದರು ಮತ್ತು ಅವರ ಜೊತೆಗಿದ್ದವರನ್ನು ಪ್ರೇರೇಪಿಸಿ ದುಡಿಸುತ್ತಿದ್ದರು. ಈ ಸಂದರ್ಭಗಳಲ್ಲಿ ಅವರಿಗೆ ಎದುರಾಗುತ್ತಿದ್ದ ಕಷ್ಟ – ಸಂಕಷ್ಟಗಳನ್ನು ಹಾಗೆಯೇ ಸಂತೋಷವನ್ನು ನಮ್ಮೊಂದಿಗೆ ಹಂಚಿಕೊಳ್ಳುತ್ತಿದ್ದರು. 1972ರಲ್ಲಿ ಯುವ ಕಾಂಗ್ರೆಸ್ ಸಂಘಟನಾ ಕಾರ್ಯದರ್ಶಿಯಾಗುವುದರ ಮೂಲಕ ದೇವರಾಜ ಅರಸು ಅವರ ಮಡಿಲಿಗೆ ಬಿದ್ದ ನಾನು, ಅವರ ಒಂದೊಂದು ಹೆಜ್ಜೆಯನ್ನು ಹಿಂಬಾಲಿಸುತ್ತಾ ಹಿಂಬಾಲಿಸುತ್ತಾ ಓರ್ವ ಪ್ರಬುದ್ಧ ಮತ್ತು ಜವಾಬ್ದಾರಿಯುತ ರಾಜಕಾರಣಿಯಾಗಿ ರೂಪುಗೊಳ್ಳತೊಡಗಿದೆ. ಯಾರಿಂದಲೂ ಕಲಿಯಲಾಗದಂತಹ ಅದ್ವಿತೀಯ ಮಾನವತಾ ಮಾದರಿಯೊಂದು ನನ್ನ ಪಾಲಿಗೆ ಗುರುವಾಗಿ ಲಭಿಸಿತು. ನಾನು ದೇವರಾಜ ಅರಸು ಅವರ ನೆರಳಲ್ಲಿ, ಅವರ ನಡೆ ನುಡಿಯ ದಾರಿಯಲ್ಲಿ ಹಂತ ಹಂತವಾಗಿ ಬೆಳೆಯತೊಡಗಿದೆ. ದೇವರಾಜ ಅರಸು ಓರ್ವ ಅಪೂರ್ವ ವ್ಯಕ್ತಿಯಾಗಿ, ಶಕ್ತಿಯಾಗಿ ಇಂದಿಗೂ ನನ್ನ ಹೃದಯದಲ್ಲಿ ನೆಲೆ ನಿಂತಿದ್ದಾರೆ.

**ಅರಸು ಭ್ರಷ್ಟ!**

ಇಷ್ಟೆಲ್ಲ ಇದ್ದರೂ ಅರಸು ಅವರನ್ನು ಕೆಲವು ಪತ್ರಿಕೆಗಳು, ಕೆಲವು ವ್ಯಕ್ತಿಗಳು ಭ್ರಷ್ಟ ಭ್ರಷ್ಟ ಎಂದು ಟೀಕಿಸುತ್ತಿದ್ದರು. ಒಂದು ದಿನ ನಾನು ಮುಖ್ಯಮಂತ್ರಿ ದೇವರಾಜ ಅರಸು ಅವರ ಚೇಂಬರಿಗೆ ಹೋಗಿ ಕೇಳಿದೆ. “ಸರ್ ನಿಮ್ಮನ್ನು ಭ್ರಷ್ಟ ಮುಖ್ಯಮಂತ್ರಿ ಎಂದು ಹೇಳುತ್ತಾರಲ್ಲ. ನೀವೇಕೆ ಈ ಅಪವಾದಕ್ಕೆ ಪ್ರತಿಕ್ರಿಯಿಸುವುದಿಲ್ಲ” ಎಂದು. ಈ ಪ್ರಶ್ನೆಯಿಂದ ಸ್ವಲ್ಪವೂ ವಿಚಲಿತರಾಗದ ಅರಸು ಅವರು ಅವರದೇ ಶೈಲಿಯಲ್ಲಿ “ಅಯ್ಯೋ, ಅವರಿಗೆ ತಲೆ ಸರಿ ಇಲ್ಲಪ್ಪಾ, ಮಾತಾಡ್ತಾರೆ. ನನಗ್ಯಾಕಪ್ಪ ದುಡ್ಡು? ನನಗೆ ಎರಡು ಮುದ್ದೆ ಇದ್ದರೆ ಸಾಕು, ಅದಕ್ಕಿಂತ ಹೆಚ್ಚೇನೂ ಬೇಕಿಲ್ಲಪ್ಪಾ. ಈ ಇವರಿದ್ದಾರಲ್ಲಾ...

ಎಂ.ಎಲ್.ಎ.ಗಳು, ಇವರನ್ನೆಲ್ಲ ಸಾಕಬೇಕಲ್ಲ. ಇವರ ಬೇಕು ಬೇಡಗಳನ್ನೆಲ್ಲ ಈಡೇರಿಸಬೇಕಲ್ಲ. ಅಧಿಕಾರದಲ್ಲಿರಬೇಕಾದರೆ ಇವರನ್ನೆಲ್ಲ ಸರಿಯಾಗಿ ಇಟ್ಟುಕೊಳ್ಳಬೇಕಲ್ಲ. ಅದಕ್ಕಾಗಿ ದುಡ್ಡು ಬೇಕಾಗುತ್ತದೆ. ನನಗೆ ದುಡ್ಡು ಬ್ಯಾಡ" ಎಂದು ಹೇಳಿದರು. ಅವರ ಈ ಮಾತು ಕೇಳಿ ನಾನು ಸುಮ್ಮನಾದೆ.

ಇದಾಗಿ ಬಹಳ ದಿನಗಳ ನಂತರ ಒಂದು ದಿನ ನಾನು ಅರಸು ಅವರ ಚೇಂಬರ್‌ನಲ್ಲಿರುವಾಗ ಒಬ್ಬ ಎಂ.ಎಲ್.ಎ. ಬಂದರು. ಅವರ ಹೆಸರು ನೆನಪಾಗುತ್ತಿಲ್ಲ. ಆದರೆ ಅವರು ಕಡೂರಿನ ಎಂ.ಎಲ್.ಎ. ಒಳಗೆ ಬಂದವರೇ "ಬುದ್ದೀ" ಎಂದು ಕರೆಯುತ್ತಾ ದೇವರಾಜ ಅರಸು ಅವರ ಕಾಲಿಗೆ ಬಿದ್ದುಬಿಟ್ಟರು. "ಏನಯ್ಯಾ ಬಂದೆ?" ಎಂದು ಅರಸು ಕೇಳಿದರು. "ಏನಿಲ್ಲ ಬುದ್ದಿ, ನನ್ನ ಮಗಳಿಗೆ ಮದುವೆ ನಿಶ್ಚಯ ಮಾಡಿದ್ದೇನೆ, ನಿಮ್ಮನ್ನೇ ನಂಬಿ". ನಿಜವಾಗಿಯೂ ಈ ಎಂ.ಎಲ್.ಎ. ಬಹಳ ಪ್ರಾಮಾಣಿಕ ವ್ಯಕ್ತಿ. ಅವರಲ್ಲಿ ದುಡ್ಡಿಲ್ಲ ಎನ್ನುವುದು ಸಹ ನಿಜ. ಇಂತಹ ಅನೇಕ ಶಾಸಕರು ಅರಸು ಅವರ ಬೆಂಬಲಿಗರಾಗಿದ್ದರು. ಅಲ್ಲೇ ಕುಳಿತಿದ್ದ ನನ್ನನ್ನೊಮ್ಮೆ ನೋಡಿದ ಅರಸು ಅವರು ಆ ಶಾಸಕನ ಮುಖ ನೋಡಿ, "ಏನಪ್ಪಾ, ನನ್ನಲ್ಲಿ ಎಲ್ಲಿದೆ ದುಡ್ಡು? ನಾನೆಲ್ಲಿಂದ ಕೊಡಬೇಕು?" ಎಂದು ಕೇಳಿದರು. "ಇಲ್ಲ ಬುದ್ದೀ, ನಿಮ್ಮನ್ನೇ ನಂಬಿ ಬಂದಿದ್ದೇನೆ" ಎಂದು ಶಾಸಕ ಮತ್ತೆ ಹೇಳಿದರು. ಮತ್ತೊಮ್ಮೆ ನನ್ನತ್ತ ತಿರುಗಿದ ಅರಸು ಅವರು "ನೋಡ್ರಿ ಮೊಹಿದೀನ್, ಆರ್.ಎನ್. ದೇಸಾಯಿ ಅವರಿಗೆ ಹೇಳಿ, ಏನಾದರೂ ಕೊಡಲಿಕ್ಕೆ" ಎಂದು ಹೇಳಿದರು. ಆರ್.ಎನ್. ದೇಸಾಯಿ ಎಂದರೆ ಅರಸು ಅವರ ಅತ್ಯಂತ ನಂಬಿಗಸ್ಥ ಹಣಕಾಸು ವ್ಯವಹಾರ ನೋಡಿಕೊಳ್ಳುತ್ತಿದ್ದವರು. ದೇಸಾಯಿ ಬಿಜಾಪುರದವರು ಮತ್ತು ರಾಜ್ಯಸಭಾ ಸದಸ್ಯರಾಗಿದ್ದವರು. ಅನಂತರ ಆ ಕಡೂರು ಶಾಸಕರು ದೇಸಾಯಿ ಅವರ ಬಳಿಗೆ ಹೋಗಿ 40 ಸಾವಿರ ರೂಪಾಯಿಯನ್ನು ತೆಗೆದುಕೊಂಡು ಹೋಗಿದ್ದರು.

ದೇವರಾಜ ಅರಸು ಅವರಿಗೆ ಇಬ್ಬರು ಅಳಿಯಂದಿರು. ಒಬ್ಬ ನಟರಾಜ್. ಇವರು ಡಾಕ್ಟರ್. ಇವರಿಗೆ ಸ್ವಲ್ಪ ರಾಜಕೀಯದಲ್ಲೂ ಆಸಕ್ತಿ ಇತ್ತು. ರಾಜಕೀಯದಲ್ಲಿ ಮುಂದೆ ಬರಬೇಕೆಂಬ ಹಂಬಲವೂ ಇತ್ತು. ಇನ್ನೊಬ್ಬ ಅಳಿಯ ಮೋಹನ್. ಅರಸು ಅವರ ನಿಧನಾ ನಂತರ ಒಂದು ದಿನ ನನಗೆ ಅವರ ಅಳಿಯ ಮೋಹನ್ ಸಿಕ್ಕಿದ್ದರು. "ನೋಡಿ ಮೊಹಿದೀನ್‌ರವರೇ, ನಿಮ್ಮ ಬುದ್ದಿ (ಅರಸು) ಅವರಿಗೆ ಡಿ.ಎಲ್.ಬಿ. ಬ್ಯಾಂಕಿನಿಂದ ಒಂದು ನೋಟೀಸು ಬಂದಿದೆ" ಎಂದು ಹೇಳಿ ಒಂದು ನೋಟೀಸು ತೋರಿಸಿದರು. "ನೀವು ನಿಮ್ಮ ಭೂಮಿಯನ್ನು ಅಡವಿಟ್ಟು ತೆಗೆದುಕೊಂಡಿದ್ದ ಸಾಲದಲ್ಲಿ ಇಷ್ಟು ಬಾಕಿ ಇದೆ. ಇದನ್ನು ಕೂಡಲೇ ಕಟ್ಟಬೇಕು. ಇಲ್ಲದಿದ್ದರೆ ನಿಮ್ಮ ಭೂಮಿಯನ್ನು ಹರಾಜು ಮಾಡುತ್ತೇವೆ" ಎಂದು ದೇವರಾಜ ಅರಸು ಅವರ ಹೆಸರಿಗೆ ಬಂದ ನೋಟೀಸಿನಲ್ಲಿ ತಿಳಿಸಲಾಗಿತ್ತು. ನಿಜವಾದ ವಿಷಯ ಏನೆಂದರೆ, ಆ ಊರಲ್ಲಿ ಒಬ್ಬ ಮುಸ್ಲಿಂ ಶಾಸಕ ಇದ್ದ. ಅವನಿಗೆ ಅರಸು ಅವರು ಸೀಟು ಕೊಡಿಸಿ ಶಾಸಕನಾಗಿ ಮಾಡಿಸಿದ್ದರು. ಅವನಲ್ಲಿ ಈ ಬ್ಯಾಂಕ್ ಸಾಲ ಕಟ್ಟಲು ಹೇಳಿದ್ದರು. ಅವನು ಒಪ್ಪಿದ್ದ ಕೂಡಾ. ಆದರೆ ಆ ಶಾಸಕ

ಹಣ ಕಟ್ಟಲೇ ಇಲ್ಲ. ಅರಸು ಅವರು ಹುಟ್ಟಿ ಬೆಳೆದ ಭೂಮಿ ಅದು. ಅದನ್ನೇ ಅಡವಿಟ್ಟು ಬ್ಯಾಂಕಿನಿಂದ ಸಾಲ ಪಡೆದಿದ್ದರು. ಒಬ್ಬ ಮುಖ್ಯಮಂತ್ರಿಯಾಗಿದ್ದರೂ ಆ ಸಾಲವನ್ನು ತೀರಿಸಲು ಅವರಿಗೆ ಸಾಧ್ಯವಾಗಿರಲಿಲ್ಲ. ಇಂತಹ ಅರಸು ಅವರನ್ನು ಅವರ ವಿರೋಧಿಗಳು ಭ್ರಷ್ಟ ಎಂದು ಗುರುತಿಸುತ್ತಿದ್ದುದು ದೊಡ್ಡ ವಿಪರ್ಯಾಸ.

ಸಾರ್ವಜನಿಕ ಜೀವನದಲ್ಲಿ ಇಂತಹುದೇ ಬದುಕನ್ನು ಬದುಕಿದ ಅನೇಕರನ್ನು ನಾನು ಕಂಡಿದ್ದೇನೆ. ಉದಾಹರಣೆಗೆ ದಕ್ಷಿಣಕನ್ನಡ ಜಿಲ್ಲೆ ಕಂಡ ಅತ್ಯಂತ ದಕ್ಷ, ಪ್ರಾಮಾಣಿಕ ರಾಜಕಾರಣಿ ಕೆ.ಕೆ. ಶೆಟ್ಟಿ. ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷರಾಗಿ, ಲೋಕಸಭಾ ಸದಸ್ಯರಾಗಿ ತನ್ನ ಬದುಕನ್ನೇ ದೀನ ದಲಿತರ ಏಳಿಗೆಗಾಗಿ ಮುಡಿಪಾಗಿಟ್ಟಿದ್ದ ಕೆ.ಕೆ. ಶೆಟ್ಟಿ ಕೂಡಾ ಬರಿಗೈಯಲ್ಲಿ ಹೋದವರು. ಸ್ವಂತಕ್ಕೆಂದು ಏನೂ ಮಾಡದೇ, ತನ್ನವರಿಗಾಗಿ ಏನೂ ಉಳಿಸದೆ, ನಮ್ಮೆಲ್ಲರ ಪಾಲಿಗೆ ಆದರ್ಶದ ಮಾದರಿಯನ್ನು, ಸುಂದರ ನೆನಪನ್ನು ಬಿಟ್ಟುಹೋದವರು ಇವರು.

**ನಝೀರ್ ಸಾಬ್**

ಇಂತಹದ್ದೇ ನಾ ಕಂಡ ಮತ್ತೊಬ್ಬ ವ್ಯಕ್ತಿ ನಝೀರ್ ಸಾಬ್. ಇವರು ತನಗಾಗಿ, ತನ್ನವರಿಗಾಗಿ ಏನನ್ನೂ ಮಾಡದೆ ಸಮಾಜಕ್ಕಾಗಿ ಸಂತನಂತೆ ಬದುಕಿದ್ದ ವ್ಯಕ್ತಿ. ಹಳ್ಳಿಯಿಂದ ಬಂದಿದ್ದ, ಕೃಷಿಕರ ಕಷ್ಟ ಗೊತ್ತಿದ್ದ, ಬಡವರ ಬವಣೆ ಅರಿತಿದ್ದ, ಗ್ರಾಮಗಳ ಸ್ಥಿತಿಗತಿಗಳನ್ನು ತಿಳಿದಿದ್ದ ನಝೀರ್ ಸಾಬ್ ಗಾಂಧೀಜಿಯ ಗ್ರಾಮ ಸ್ವರಾಜ್ಯದ ಕನಸನ್ನು ನನಸು ಮಾಡಲು ಅವಿರತ ದುಡಿದವರು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ಮಂತ್ರಿಮಂಡಲದಲ್ಲಿ ಅವರೇ ಇಷ್ಟಪಟ್ಟು ಪಡೆದುಕೊಂಡ ಗ್ರಾಮಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಖಾತೆಯಲ್ಲಿ ಅದ್ವಿತೀಯ ಪ್ರಗತಿಯನ್ನು ಸಾಧಿಸಿದವರು. ಹಣ ಮಾಡಬೇಕು ಎಂದಿದ್ದರೆ ಕೋಟಿಗಟ್ಟಲೆ ಮಾಡಬಹುದಾಗಿದ್ದ ನಝೀರ್ ಸಾಬ್ 1988ರಲ್ಲಿ ಕ್ಯಾನ್ಸರ್ ರೋಗ ಪೀಡಿತರಾಗಿ ಬರಿಗೈಯಲ್ಲೇ ವಿಧಿವಶರಾದವರು. ನಾನು ಅವರಿಗೆ ಬಹಳ ಆಪ್ತನಾಗಿದ್ದೆ. ಅವರನ್ನು ಅಣ್ಣಾ ಅಂತಲೇ ಕರೆಯುತ್ತಿದ್ದೆ. ಪರಸ್ಪರ ಏಕವಚನದಲ್ಲಿ ಸಂಬೋಧಿಸುವಷ್ಟು ಗೆಳೆತನವನ್ನು ನಾವು ಹೊಂದಿದ್ದೆವು.

ಮರೆಯುವುದಕ್ಕೆ ಮುನ್ನ ಅವರೊಂದಿಗೆ ನಡೆದ ಒಂದು ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳಲು ಬಯಸುತ್ತೇನೆ. ಮಂಗಳೂರಿನಿಂದ ಬಹಳ ದೊಡ್ಡ ನಿಯೋಗವೊಂದು ಬೆಂಗಳೂರಿಗೆ ನನ್ನ ಬಳಿ ಬಂದಿತ್ತು. ಆ ನಿಯೋಗದಲ್ಲಿ ಮಂಗಳೂರಿನ ಅನೇಕ ದೊಡ್ಡ ದೊಡ್ಡ ಉದ್ಯಮಿಗಳು ಇದ್ದರು. ಮಂಗಳೂರಿನ ಕೇಂದ್ರಭಾಗವಾದ ಹಂಪನಕಟ್ಟೆಯ ಮಿಲಾಗ್ರಿಸ್ ಚರ್ಚ್‌ನ ಪಕ್ಕದಲ್ಲಿ ಮಸೀದಿಯೊಂದನ್ನು ನಿರ್ಮಿಸಲು ಬಹಳ ವಿರೋಧವಿತ್ತು. ಈ 'ಮಸ್ಜಿದುನ್ನೂರು' ಈಗ ತಲೆ ಎತ್ತಿ ನಿಂತಿದ್ದರೆ ಅದಕ್ಕೆ ಅನುಮತಿಯನ್ನು ಕೊಡಿಸಿದ್ದು ಇದೇ ನಝೀರ್ ಸಾಬ್. ಈ ನಝೀರ್ ಸಾಬ್ ಒಂದು ರೀತಿಯ ನಾಸ್ತಿಕ. ದೇವರ ಮೇಲೆ ವಿಶೇಷವಾದ ನಂಬಿಕೆ ಅವರಿಗೆ ಇರಲಿಲ್ಲ. ದೇವರಿದ್ದಾನೆ ಎಂದು ಹೇಳುತ್ತಿದ್ದರು.

ಆದರೆ, ನಮಾಝ್, ಪ್ರಾರ್ಥನೆ ಏನೂ ಮಾಡುತ್ತಿರಲಿಲ್ಲ. ತನ್ನನ್ನು ತಾನು ಮುಸ್ಲಿಂ ಎಂದು ಗುರುತಿಸಿಕೊಳ್ಳುತ್ತಿದ್ದರು. ಧಾರ್ಮಿಕ ವಿಚಾರಗಳಲ್ಲಿ ಯಾವುದೇ ತಕರಾರುಗಳು ಬಂದಾಗ ಸಾಮಾಜಿಕ ನ್ಯಾಯ ಒದಗಿಸುತ್ತಿದ್ದರು. ಮಂಗಳೂರಿನ ಈ ಮಸೀದಿಗೆ ಅನುಮತಿ ಯಾಕೆ ಕೊಡಬಾರದು ಎಂಬ ಭಾವನೆ ಅವರಿಗಿತ್ತು. ಒಂದು ವಿಭಾಗದ ವಿಪರೀತ ಒತ್ತಡ ಇದ್ದ ಕಾರಣ ನಝೀರ್‌ಸಾಬ್ ಅನುಮತಿ ನೀಡಲು ಸ್ವಲ್ಪ ಹಿಂಜರಿದಿದ್ದರು. ಈ ನಿಯೋಗದೊಂದಿಗೆ ನಾನು ಹೋದಾಗ ನನ್ನನ್ನು ಒಳಗೆ ಕರೆದುಕೊಂಡು ಹೋದ ನಝೀರ್ ಸಾಬ್ ಅದರ ಹಿನ್ನೆಲೆಯನ್ನು ವಿವರಿಸಿದರು. “ನೋಡು ಮೊಹಿದೀನ್, ಈ ಮಸೀದಿ ನಿರ್ಮಾಣಕ್ಕೆ ಅಲ್ಲಿಯ ಕ್ರೈಸ್ತರ ತುಂಬಾ ವಿರೋಧವಿದೆ. ಅವರು ಪ್ರಧಾನಮಂತ್ರಿಯವರೆಗೂ ದೂರು ಸಲ್ಲಿಸಿದ್ದಾರೆ. ಅಲ್ಲಿಂದಲೂ ನಮಗೆ ಒತ್ತಡ ಬರುತ್ತಲೇ ಇದೆ. ಈ ಮಸೀದಿ ನಿರ್ಮಾಣಕ್ಕೆ ಅನುಮತಿ ಕೊಟ್ಟರೆ ಪರಿಸರದಲ್ಲಿ ಶಾಂತಿ ಭಂಗವಾಗುತ್ತದೆ ಎಂಬಂತಹ ದೂರುಗಳನ್ನು ಸಲ್ಲಿಸಿದ್ದಾರೆ. ಅವರ ವಾದಕ್ಕೆ ಪೂರಕವಾಗಿ ಓರ್ವ ಡಿಐಜಿಯ ಅಭಿಪ್ರಾಯ ಪತ್ರವೂ ಇದೆ.”

ಆಗ ನಾನು ಹೇಳಿದೆ “ನೋಡು ನಝೀರ್, ನಾನು ಮಂಗಳೂರಿನವನು. ಇಲ್ಲಿ ಮಸೀದಿ ನಿರ್ಮಾಣವಾದರೆ ಯಾವುದೇ ಘರ್ಷಣೆಯಾಗಲು ಸಾಧ್ಯವಿಲ್ಲ. ಕ್ರೈಸ್ತರು–ಮುಸ್ಲಿಮರು ನಾವಿಬ್ಬರೂ ಅಲ್ಪಸಂಖ್ಯಾತರು. ನಮ್ಮ ಮಧ್ಯೆ ಅಂತಹ ಘರ್ಷಣೆ ಬರಲು ಸಾಧ್ಯವೇ ಇಲ್ಲ. ಇದರ ಹಿಂದೆ ಏನೋ ರಾಜಕೀಯ ಷಡ್ಯಂತ್ರ ಇದೆ. ನೀನು ನನ್ನ ಮಾತನ್ನು ನಂಬು. ನನ್ನ ಮೇಲೆ ವಿಶ್ವಾಸವಿಡು. ‘ಮಸ್ಜಿದುನ್ನೂರು’ ಮಸೀದಿ ನಿರ್ಮಾಣಕ್ಕೆ ಅನುಮತಿ ಕೊಡಿಸು” ಎಂದು ವಿವರಿಸಿದೆ. ನಿಜವಾಗಿ ನಝೀರ್ ಸಾಬ್ ಇದಕ್ಕೆ ಸಂಬಂಧಪಟ್ಟ ಮಂತ್ರಿ ಅಲ್ಲ. ಆದರೂ ಸರಕಾರದಲ್ಲಿ ಅವರ ಮಾತಿಗೆ ಅಷ್ಟು ಮನ್ನಣೆ ಇತ್ತು. ಏಕೆಂದರೆ ಅವರೊಬ್ಬ ಜಾತ್ಯತೀತ ಎಂಬುದು ಎಲ್ಲರಿಗೂ ಗೊತ್ತಿತ್ತು. ಆದುದರಿಂದಲೇ ಮಂಗಳೂರಿನಿಂದ ಬಂದಿದ್ದ ಮುಸ್ಲಿಂ ನಿಯೋಗವನ್ನು ನಾನು ನಝೀರ್ ಸಾಬ್ ಬಳಿಗೆ ಕರೆದುಕೊಂಡು ಹೋದದ್ದು. ನನ್ನ ಮಾತುಗಳನ್ನು ಕೇಳಿದ ನಂತರ ನಝೀರ್ ಸಾಬ್ ‘ಆಲ್ ರೈಟ್ ಹೋಗು’ ಎಂದು ಹೇಳಿದ್ದರು. ಮುಂದಿನ ದಿನಗಳಲ್ಲಿ ಮಸೀದಿ ನಿರ್ಮಾಣಕ್ಕೆ ಅನುಮತಿ ದೊರಕಿಸಿಕೊಟ್ಟರು.

**ತುರ್ತು ಪರಿಸ್ಥಿತಿ**

ದೇವರಾಜ ಅರಸು ಅವರ ಆಡಳಿತದ ಪ್ರಥಮ ಅವಧಿ 1972–78ರ ಮಧ್ಯೆ ಎರಡು ವಿಶೇಷ ಘಟನೆಗಳು ರಾಷ್ಟ್ರಮಟ್ಟದಲ್ಲಿ ನಡೆಯಿತು. ಒಂದು 1975 ಜೂನ್ 25ರಿಂದ 1977 ಮಾರ್ಚ್ 21ರವರೆಗೆ ದೇಶಾದ್ಯಂತ ಹೇರಲ್ಪಟ್ಟ ತುರ್ತು ಪರಿಸ್ಥಿತಿ. ಎರಡನೆಯದು – 1977ರ ಲೋಕಸಭಾ ಚುನಾವಣೆಯಲ್ಲಿ ಇಂದಿರಾ ಗಾಂಧಿ ಸಹಿತ ಕಾಂಗ್ರೆಸ್ ಪಕ್ಷ ರಾಷ್ಟ್ರಮಟ್ಟದಲ್ಲಿ ಸೋತು ಕೇಂದ್ರದಲ್ಲಿ ಜನತಾಪಕ್ಷ ಅಧಿಕಾರಕ್ಕೆ ಬಂದದ್ದು.

ತುರ್ತು ಪರಿಸ್ಥಿತಿ ಹೇರಿಕೆಗೆ ಎರಡು ಕಾರಣಗಳಿದ್ದವು. ಪಾಕಿಸ್ಥಾನದೊಂದಿಗಿನ

ಯುದ್ಧ ಆಗತಾನೇ ಮುಗಿದಿತ್ತು. ಯುದ್ಧಾ ನಂತರದ ಸ್ಥಿತಿ, ತೀವ್ರವಾದ ಬರಗಾಲ ಮತ್ತು 1973ರಲ್ಲಿ ಉಂಟಾದ ತೈಲ ಬಿಕ್ಕಟ್ಟಿನಿಂದ ದೇಶ ತತ್ತರಿಸಿ ಹೋಗಿತ್ತು. ಇದೇ ಸಂದರ್ಭದಲ್ಲಿ 1971ರ ಲೋಕಸಭಾ ಚುನಾವಣೆಯಲ್ಲಿ ರಾಯಬರೇಲಿ ಕ್ಷೇತ್ರದಿಂದ ಇಂದಿರಾ ಗಾಂಧಿಯವರ ವಿರುದ್ಧ ಸ್ಪರ್ಧಿಸಿ ಸೋತಿದ್ದ ರಾಜ್‌ನಾರಾಯಣ್ ಎಂಬವರು ಅಲಹಾಬಾದ್ ಹೈಕೋರ್ಟಿನಲ್ಲಿ ಇಂದಿರಾ ಗಾಂಧಿಯವರ ವಿರುದ್ಧ ಭ್ರಷ್ಟಾಚಾರ, ಅಧಿಕಾರ ದುರುಪಯೋಗ, ಆಡಳಿತ ಯಂತ್ರದ ದುರ್ಬಳಕೆಯಂತಹ ಆರೋಪಗಳನ್ನು ಮಾಡಿ ದಾವೆ ಹೂಡಿದ್ದರು.

ಅಲಹಾಬಾದ್ ಹೈಕೋರ್ಟ್ ಈ ದಾವೆಯನ್ನು ಇತ್ಯರ್ಥಗೊಳಿಸಿ ನೀಡಿದ ತೀರ್ಪಿನಲ್ಲಿ ಆಡಳಿತ ಯಂತ್ರವನ್ನು ದುರ್ಬಳಕೆ ಮಾಡಿದ್ದಾರೆ ಎಂಬ ಒಂದೇ ಕಾರಣವನ್ನು ಎತ್ತಿ ಹಿಡಿದು ಇಂದಿರಾ ಗಾಂಧಿ ಅವರ ಆಯ್ಕೆಯನ್ನು ರದ್ದುಗೊಳಿಸಿತು ಮತ್ತು ಮುಂದಿನ ಆರು ವರ್ಷಗಳ ಕಾಲ ಚುನಾವಣೆಯಲ್ಲಿ ಸ್ಪರ್ಧಿಸಲು ಅವರನ್ನು ಅನರ್ಹಗೊಳಿಸಿತು. ಇಂದಿರಾ ಗಾಂಧಿ ಅವರು ಸರ್ವೋಚ್ಚ ನ್ಯಾಯಾಲಯದ ಮೊರೆ ಹೋದರು. ಅಲ್ಲಿಯೂ ಅಲಹಾಬಾದ್ ಕೋರ್ಟಿನ ತೀರ್ಪನ್ನೇ ಎತ್ತಿ ಹಿಡಿಯಲಾಯಿತು. ಈ ಕಾರಣವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ದೇಶಾದ್ಯಂತ ಇಂದಿರಾ ಗಾಂಧಿ ಅವರ ವಿರುದ್ಧ ಮುಷ್ಕರಗಳನ್ನು, ಆಂದೋಲನಗಳನ್ನು ಪ್ರಾರಂಭಿಸಿದವು. ಅಖಿಲ ಭಾರತ ರೈಲ್ವೆ ನೌಕರರ ಒಕ್ಕೂಟದ ಅಧ್ಯಕ್ಷರಾಗಿದ್ದ ಜಾರ್ಜ್ ಫೆರ್ನಾಂಡಿಸ್ ಅವರು ದೇಶಾದ್ಯಂತ ರೈಲ್ವೆ ಮುಷ್ಕರಕ್ಕೆ ಕರೆ ಕೊಟ್ಟರು. ಮೊರಾರ್ಜಿ ದೇಸಾಯಿ ಮತ್ತು ರಾಜ್ ನಾರಾಯಣ್ ದೆಹಲಿಯಲ್ಲಿ ಬೃಹತ್ ಪ್ರತಿಭಟನೆಯನ್ನು ಸಂಘಟಿಸಿ ಪಾರ್ಲಿಮೆಂಟಿಗೆ ಮುತ್ತಿಗೆ ಹಾಕಿದರು. ಕೊನೆಯದಾಗಿ ಜಯಪ್ರಕಾಶ್ ನಾರಾಯಣ್ ಈ ದೇಶದ ರಕ್ಷಣಾಪಡೆಗೆ ಇಂದಿರಾ ಗಾಂಧಿ ಅವರ ವಿರುದ್ಧ ದಂಗೆ ಏಳಲು ಕರೆ ಕೊಟ್ಟರು. ದೇಶಾದ್ಯಂತ ಒಂದು ರೀತಿಯ ಅರಾಜಕತೆಯೇ ಸೃಷ್ಟಿಯಾಯಿತು. ಆ ಸಂದರ್ಭದಲ್ಲಿ ಪ್ರಧಾನಮಂತ್ರಿ ಇಂದಿರಾ ಗಾಂಧಿ ಅವರು ಸಂವಿಧಾನದ 352ನೇ ವಿಧಿಯ ಪ್ರಕಾರ ಆಂತರಿಕ ತೊಡಕುಗಳ ಕಾರಣ ನೀಡಿ ಆಗ ಭಾರತದ ರಾಷ್ಟ್ರಪತಿಯಾಗಿದ್ದ ಫಕ್ರುದ್ದೀನ್ ಅಲಿ ಅವರಿಗೆ ತುರ್ತು ಪರಿಸ್ಥಿತಿಯನ್ನು ಜಾರಿಗೆ ತರಲು ವಿನಂತಿಸಿದರು. ಹಾಗೆಯೇ 1975, ಜೂನ್ 25ರಂದು ದೇಶಾದ್ಯಂತ ತುರ್ತು ಪರಿಸ್ಥಿತಿ ಘೋಷಿಸಲಾಯಿತು.

ದೇಶದ ವಿವಿಧ ರಾಜ್ಯಗಳಲ್ಲಿ ತುರ್ತು ಪರಿಸ್ಥಿತಿಯಿಂದಾಗಿ ಕೆಲವು ಅನಪೇಕ್ಷಿತ ಘಟನೆಗಳು ನಡೆದಿದ್ದರೂ ಮುಖ್ಯಮಂತ್ರಿ ದೇವರಾಜ ಅರಸು ಅವರು ಈ ಅವಕಾಶವನ್ನು ರಾಜ್ಯದ ಸರ್ವತೋಮುಖ ಅಭಿವೃದ್ಧಿಗಾಗಿ ಬಹಳ ಪರಿಣಾಮಕಾರಿಯಾಗಿ ಬಳಸಿಕೊಂಡರು. ಇಂದಿರಾ ಗಾಂಧಿ ಅವರು ಘೋಷಿಸಿದ್ದ 20 ಅಂಶಗಳ ಕಾರ್ಯಕ್ರಮ ಗಳನ್ನು ಬಹಳ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಮೂಲಕ ಅರಸು ಅವರು ತಮ್ಮ ಮುತ್ಸದ್ದಿತನವನ್ನು ಪ್ರದರ್ಶಿಸಿದರು. ವಿರೋಧ ಪಕ್ಷಗಳು 'ಇಂದಿರಾ

ಹಟಾವೋ' ಘೋಷಣೆಯನ್ನು ಕೂಗಿದಾಗ ಅದಕ್ಕೆ ವಿರುದ್ಧವಾಗಿ ಇಂದಿರಾ ಗಾಂಧಿ ಅವರು ಹೊರಡಿಸಿದ 'ಗರೀಬಿ ಹಟಾವೋ' ಘೋಷಣೆ ಕರ್ನಾಟಕ ರಾಜ್ಯದಲ್ಲಿ ಅತ್ಯಂತ ಜನಪ್ರಿಯವಾಯಿತು.

ಬಡತನ ನಿವಾರಣೆ ಮತ್ತು ದುರ್ಬಲ ಜನತೆಗೆ ಬೇಕಾಗುವ ದಿನನಿತ್ಯದ ಅಗತ್ಯ ವಸ್ತುಗಳ ಬೆಲೆ ಕಡಿಮೆ ಮಾಡುವಲ್ಲಿ ಅರಸು ಅವರು ಯಶಸ್ವಿಯಾದರು. ಬಡವರ, ದುರ್ಬಲರ ಅಭಿವೃದ್ಧಿಗಾಗಿ ಸಮರೋಪಾದಿಯಲ್ಲಿ ಕೆಲಸಗಳು ನಡೆದವು. ಸರಕಾರಿ ನೌಕರರ ನಿವೃತ್ತಿ ವಯಸ್ಸನ್ನು 58ರಿಂದ 55 ವರ್ಷಕ್ಕೆ ಇಳಿಸುವುದರ ಮೂಲಕ ಸಾವಿರಾರು ನಿರುದ್ಯೋಗಿ ಪದವೀಧರರಿಗೆ ಉದ್ಯೋಗಾವಕಾಶಗಳು ದೊರೆತವು. ದೇಶದ ಇತರ ಭಾಗಗಳಲ್ಲಿ ತುರ್ತು ಪರಿಸ್ಥಿತಿ ಅವಧಿಯಲ್ಲಿ ಅಹಿತಕರ ಘಟನೆಗಳು ನಡೆದಿದ್ದರೂ ಕರ್ನಾಟಕದಲ್ಲಿ ಆ ಅವಧಿ ಬಡವರ, ದೀನ ದಲಿತರ ಪಾಲಿಗೆ ಅಭಿವೃದ್ಧಿಯ ಅವಧಿಯಾಯಿತು.

1977ರ ಮಾರ್ಚ್ 21ರಂದು ತುರ್ತು ಪರಿಸ್ಥಿತಿಯನ್ನು ಹಿಂಪಡೆಯಲಾಯಿತು ಮತ್ತು ದೇಶಾದ್ಯಂತ ಲೋಕಸಭಾ ಚುನಾವಣೆ ಘೋಷಿಸಲಾಯಿತು. ಈ ಚುನಾವಣೆಯಲ್ಲಿ ಇಂದಿರಾ ಗಾಂಧಿ ಸೋಲನುಭವಿಸಿದರು ಮತ್ತು ಕೇಂದ್ರದಲ್ಲಿ 345 ಸ್ಥಾನಗಳನ್ನು ಬಾಚಿಕೊಂಡು ವಿರೋಧ ಪಕ್ಷಗಳ ಒಕ್ಕೂಟವಾದ ಜನತಾ ಪಕ್ಷ ಅಧಿಕಾರಕ್ಕೆ ಬಂತು. ಮೊರಾರ್ಜಿ ದೇಸಾಯಿ ಅವರು ಭಾರತದ ಪ್ರಪ್ರಥಮ ಕಾಂಗ್ರೆಸೇತರ ಪ್ರಧಾನಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದರು. ಈ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಿಂದ 28ರಲ್ಲಿ 26 ಸ್ಥಾನಗಳನ್ನು ಕಾಂಗ್ರೆಸ್‌ಗೆ ಗೆಲ್ಲಿಸಿಕೊಟ್ಟ ಕೀರ್ತಿ ದೇವರಾಜ ಅರಸು ಅವರಿಗೆ ಸಲ್ಲುತ್ತದೆ. ನಾನು ಈ ಚುನಾವಣೆಯನ್ನು ಬಹಳಷ್ಟು ನೆನಪಿಸಿಕೊಳ್ಳುತ್ತೇನೆ. ಏಕೆಂದರೆ ಜನಾರ್ದನ ಪೂಜಾರಿ ಎಂಬ ಅದುವರೆಗೂ ಯಾರೂ ಕೇಳರಿಯದ ಹೆಸರೊಂದು ದೇವರಾಜ ಅರಸು ಅವರ ಕೃಪೆಯಿಂದ ಪ್ರಚಲಿತಕ್ಕೆ ಬಂತು. ಅವರು ಲೋಕಸಭಾ ಸದಸ್ಯರಾದದ್ದು ಇದೇ 1977ರಲ್ಲಿ. ಜನಾರ್ದನ ಪೂಜಾರಿಯವರ ಬಗ್ಗೆ ಮತ್ತಷ್ಟು ವಿಷಯಗಳನ್ನು ಮುಂದೆ ಹೇಳುತ್ತೇನೆ.

**ನಾನು ಚುನಾವಣೆಗೆ ಸ್ಪರ್ಧಿಸಿದ್ದು**

ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ನಾನು ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಯಾಗಿದ್ದೆ. ಆಗ ಕೇಂದ್ರದಲ್ಲಿ ಜನತಾ ಪಕ್ಷದ ಸರಕಾರ ಅಧಿಕಾರದಲ್ಲಿತ್ತು. ಇಂದಿರಾ ಗಾಂಧಿಯವರು ಚುನಾವಣೆಯಲ್ಲಿ ಸೋತಿದ್ದರು. ರಾಜ್ಯದಲ್ಲಿದ್ದ ದೇವರಾಜ ಅರಸು ಅವರ ಸರಕಾರದ ಅವಧಿ 1978ರಲ್ಲಿ ಮುಗಿಯುವುದಿತ್ತು. ಅರಸು ಅವರ ಕಾರ್ಯವೈಖರಿ, ಸಾಧನೆಗಳು, ಗಳಿಸಿದ ಜನಪ್ರಿಯತೆ ಇವೆಲ್ಲವನ್ನು ಗಮನಿಸಿದ ಕೇಂದ್ರದ ಜನತಾ ಪಕ್ಷ ಸರಕಾರ ಅರಸು ಅವರು ಅಧಿಕಾರದಲ್ಲಿರುವಾಗಲೇ ಚುನಾವಣೆ ನಡೆಸಿದರೆ ಅವರನ್ನು ಸೋಲಿಸುವುದು ಕಷ್ಟವಾಗಬಹುದೆಂದು ಮನಗಂಡು 1977ರ ಡಿಸೆಂಬರ್ 31ರಂದು

ಅರಸು ಅವರ ಸರಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಡಳಿತವನ್ನು ಹೇರಿತು. ಜೊತೆಗೆ ಚುನಾವಣೆಗೂ ಆದೇಶವನ್ನು ಹೊರಡಿಸಿತು. ಅರಸು ಅವರು ಇದರಿಂದ ಎದೆಗುಂದಲಿಲ್ಲ. ಅದೇ ಸಮಯದಲ್ಲಿ ಕಾಂಗ್ರೆಸ್‌ನಿಂದ ಹೊರಬಂದ ಕೆಂಗಲ್ ಹನುಮಂತಯ್ಯ ಸ್ವರಾಜ್ಯ ಪಕ್ಷವನ್ನು ಕಟ್ಟಿದರು. ಮೈಸೂರಿನ ಪ್ರಭಾವಿ ನಾಯಕ ಎನ್. ರಾಚಯ್ಯ ಜನತಾ ಕಾಂಗ್ರೆಸ್ ಪಕ್ಷವನ್ನು ಕಟ್ಟಿದರು. ಇಂತಹ ಅನಿರೀಕ್ಷಿತ ಬೆಳವಣಿಗೆಗಳಿಂದ ಕಿಂಚಿತ್ತೂ ವಿಚಲಿತರಾಗದ ಅರಸು ಅವರು ಚುನಾವಣೆಯಲ್ಲಿ ಗೆಲ್ಲಲು ಶಕ್ತಿ ಇರುವ ಅಭ್ಯರ್ಥಿಗಳ ಹುಡುಕಾಟದಲ್ಲಿ ತೊಡಗಿಸಿಕೊಂಡರು. ನನ್ನನ್ನು 1978ರ ಎಲೆಕ್ಷನ್ ಕಮಿಟಿಯ ಸದಸ್ಯನನ್ನಾಗಿ ನೇಮಿಸಿದರು ಮತ್ತು ಟಿಕೆಟ್ ಹಂಚಿಕೆಯ ಮಹತ್ತರ ಜವಾಬ್ದಾರಿ ನನಗೂ ನೀಡಲಾಗಿತ್ತು. ಆ ಸಂದರ್ಭದಲ್ಲಿ 38 ಗಂಟೆಗಳ ಸುದೀರ್ಘ ಸಮಾಲೋಚನಾ ಸಭೆ ಅರಸು ಅವರ ನೇತೃತ್ವದಲ್ಲಿ ನಡೆದಿತ್ತು. ದಕ್ಷಿಣಕನ್ನಡ ಜಿಲ್ಲೆಯ ಬಂಟ್ವಾಳ ಕ್ಷೇತ್ರಕ್ಕೆ ಅಭ್ಯರ್ಥಿ ಯಾರು ಎಂಬ ವಿಷಯ ಬಂದಾಗ ಅಲ್ಲಿಯ ಹಾಲಿ ಶಾಸಕ ಬಿ.ವಿ. ಕಕ್ಕಿಲ್ಲಾಯರು ನನಗೆ ಬಂಟ್ವಾಳ ಬೇಡ, ಪಕ್ಕದ ವಿಟ್ಲ ಕ್ಷೇತ್ರವನ್ನು ಕೊಡಿ ಎಂದು ಕೇಳಿದರು. ಅವರ ಬೇಡಿಕೆಯನ್ನು ಮನ್ನಿಸುವ ಅನಿವಾರ್ಯತೆ ಕಾಂಗ್ರೆಸ್‌ಗಿತ್ತು. ಏಕೆಂದರೆ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಸಿಪಿಐ ಒಂದು ಶಕ್ತಿಯಾಗಿತ್ತು ಮತ್ತು ಅದರೊಂದಿಗೆ ಕಾಂಗ್ರೆಸ್ ಪಕ್ಷ ಒಡಂಬಡಿಕೆಯನ್ನು ಮಾಡಿಕೊಂಡಿತ್ತು. ಕಾಂಗ್ರೆಸ್‌ನ ಶಿವರಾಮ ಶೆಟ್ಟಿಯವರು ವಿಟ್ಲ ಕ್ಷೇತ್ರದಲ್ಲಿ ಟಿಕೆಟ್ ಕೇಳುತ್ತಿದ್ದರು ಸಹ – ಇಲ್ಲ ಸಾಧ್ಯವಿಲ್ಲ, ನಾವು ಸಿಪಿಐಗೆ ಒಂದು ಸ್ಥಾನ ಕೊಡಲೇಬೇಕು, ನೀವು ಬಂಟ್ವಾಳದಲ್ಲಿ ನಿಲ್ಲಿ – ಎಂದು ಶಿವರಾಮ ಶೆಟ್ಟಿ ಅವರಿಗೆ ಅರಸು ಹೇಳಿದರು. ಆದರೆ ಶಿವರಾಮ ಶೆಟ್ಟಿ ಬಂಟ್ವಾಳದಲ್ಲಿ ನಿಲ್ಲಲು ನಿರಾಕರಿಸಿದರು. ಹೀಗೆ ಚರ್ಚೆ ಸಾಗುತ್ತಿರುವಾಗ ಅರಸು ಅವರು ನನ್ನೊಂದಿಗೆ "ನಿನ್ನದು ಯಾವುದು ಕ್ಷೇತ್ರ?" ಎಂದು ಕೇಳಿದರು. "ನಾನು ಬಜಪೆಯವನು. ನನ್ನದು ಗುರುಪುರ ಹೋಬಳಿ ಆಗುತ್ತದೆ. ಅದು ಬಂಟ್ವಾಳ ಕ್ಷೇತ್ರಕ್ಕೆ ಸೇರುತ್ತದೆ" ಎಂದು ಹೇಳಿದೆ. ಆಗ ಅರಸು ಅವರು "ಯು ಆರ್ ದಿ ಕ್ಯಾಂಡಿಡೇಟ್" ಎಂದು ಹೇಳಿಬಿಟ್ಟರು. "ಗೋ ಆ್ಯಂಡ್ ಕಂಟೆಸ್ಟ್, ಯು ಆರ್ ಮೈ ಜನರಲ್ ಸೆಕ್ರೆಟರಿ" ಎಂದು ಆದೇಶಿಸಿದರು. "ಇಲ್ಲ ಸರ್, ನನಗೆ ಆಗಲಿಕ್ಕಿಲ್ಲ. ಆ ಕ್ಷೇತ್ರ ನನಗೆ ಹೆಚ್ಚು ಪರಿಚಯವಿಲ್ಲ. ಅಲ್ಲಿಯ ಸ್ಥಳೀಯ ಮುಖಂಡರ ವೈಯಕ್ತಿಕ ಪರಿಚಯವೂ ಇಲ್ಲ" ಎಂದು ಹೇಳಿದೆ. "ಏನೂ ಹೆದರಬೇಡ, ಹೋಗು ನಾಮಿನೇಶನ್ ಹಾಕು, ನಿನ್ನ ಚುನಾವಣಾ ಪ್ರಚಾರಕ್ಕೆ ನಾನು ಬರುತ್ತೇನೆ" ಎಂದರು. ಆಗ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕೆ.ಕೆ. ಶೆಟ್ಟಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷರಾಗಿದ್ದರು. ಕೆ.ಕೆ. ಶೆಟ್ಟಿ ಅವರ ದಕ್ಷತೆ, ಕಾರ್ಯಶೈಲಿ ಮತ್ತು ಬದ್ಧತೆ ಜನಜನಿತವಾಗಿತ್ತು.

ಆದರೂ ನನಗೆ ಚುನಾವಣೆಗೆ ಸ್ಪರ್ಧಿಸುವುದರ ಬಗ್ಗೆ ಗೊಂದಲವಿತ್ತು. ನಾನು ಹುಟ್ಟಿದ್ದು ಮಂಗಳೂರಿನ ಬಜಪೆಯಲ್ಲಾದರೂ ನನ್ನ ಅದುವರೆಗಿನ ಬದುಕಿನ ಹೆಚ್ಚಿನ ಭಾಗ ಚಿಕ್ಕಮಗಳೂರು ಮತ್ತು ಬೆಂಗಳೂರಿನಲ್ಲೇ ಕಳೆದಿದ್ದೆ. ನಾನು ಕೆಪಿಸಿಸಿಯ

ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ದಕ್ಷಿಣಕನ್ನಡ ಜಿಲ್ಲೆಯ ಅನೇಕರು ಅವರ ಕೆಲಸ ಕಾರ್ಯಗಳಿಗೆ ನನ್ನನ್ನು ಸಂಪರ್ಕಿಸುತ್ತಿದ್ದರು. ಇಲ್ಲಿ ಹೇಳಬೇಕಾದ ಒಂದು ವಿಷಯ ವೇನೆಂದರೆ ಆಗಿನ ಕಾಲದಲ್ಲಿ ಪಕ್ಷಕ್ಕೆ ಬಹಳ ಘನತೆ ಗೌರವ ಮರ್ಯಾದೆ ಇತ್ತು. ಕೆಪಿಸಿಸಿ ಕಚೇರಿಯಿಂದ ಮುಖ್ಯಮಂತ್ರಿ ಸಹಿತ ಯಾವುದೇ ಮಂತ್ರಿ ಅಥವಾ ಇಲಾಖೆಗಳಿಗೆ ಒಂದು ಸಣ್ಣ ಪತ್ರ ಹೋದರೂ ಅದನ್ನು ಗಂಭೀರವಾಗಿ ಪರಿಗಣಿಸಲಾಗುತ್ತಿತ್ತು ಮತ್ತು ಆ ಪತ್ರಕ್ಕೆ ಅನುಪಾಲನಾ ವರದಿಯೂ ಬರುತ್ತಿತ್ತು. ಯಾವುದೇ ಕೆಲಸಕ್ಕೆ ನಾವು ಮಂತ್ರಿಗಳನ್ನು ಭೇಟಿ ಮಾಡುವ ಅಥವಾ ಫೋನ್ ಮಾಡುವ ಪದ್ಧತಿಯೇ ಇರಲಿಲ್ಲ. ಪಕ್ಷದ ಕಚೇರಿಯಿಂದ ಹೋಗುವ ಒಂದು ಸಣ್ಣ ಪತ್ರಕ್ಕೂ ಅಷ್ಟು ಬೆಲೆ ಇತ್ತು.

ನಿಮಗೊಂದು ಉದಾಹರಣೆ ಹೇಳುವುದಾದರೆ ಈಗ ರಾಜ್ಯದ ಪ್ರತಿಷ್ಠಿತ 'ಪ್ರೆಸಿಡೆನ್ಸಿ ಸ್ಕೂಲ್' ಇದೆಯಲ್ಲ ಇದರ ಸ್ಥಾಪಕ ನಿಸಾರ್ ಎಂಬವರು ನಾನು ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಯಾಗಿದ್ದಾಗ ನನ್ನ ಬಳಿ ಬಂದು "ಸರ್, ನನ್ನ ಕೈಯಲ್ಲಿ ಸ್ವಲ್ಪ ಹಣ ಇದೆ. ನನಗೆ ಒಂದು ಶಾಲೆಯನ್ನು ಪ್ರಾರಂಭಿಸಬೇಕು. ತಾವು ನನಗೆ ಸರಕಾರದ ಅನುಮತಿಯನ್ನು ಕೊಡಿಸಬೇಕು" ಎಂದು ಕೋರಿದರು. ನಾನು ಪಕ್ಷದ ವತಿಯಿಂದ ಸಂಬಂಧಪಟ್ಟ ಸಚಿವರಿಗೆ ಒಂದು ಸಣ್ಣ ಪತ್ರ ಬರೆದು ಸಹಿ ಮಾಡಿಕೊಟ್ಟೆ. "ಈ ಪತ್ರ ತೆಗೆದುಕೊಂಡು ಹೋಗು. ನಿನಗೆ ಅನುಮತಿ ಸಿಗುತ್ತದೆ" ಎಂದು ಹೇಳಿದೆ. ಯಾವುದೇ ಅಡಚಣೆ ಇಲ್ಲದೆ ನಿಸಾರ್‌ಗೆ ಶಾಲೆ ಪ್ರಾರಂಭಿಸಲು ಅನುಮತಿ ಸಿಕ್ಕಿತ್ತು. ಹಾಗೆ ಸ್ಥಾಪನೆಯಾದ ಪ್ರೆಸಿಡೆನ್ಸಿ ಎಂಬ ಚಿಕ್ಕ ಶಾಲೆ ಇಂದು ಪ್ರೆಸಿಡೆನ್ಸಿ ಯುನಿವರ್ಸಿಟಿ ಎಂಬ ಬೃಹತ್ ಸಂಸ್ಥೆಯಾಗಿ ಬೆಳೆದುನಿಂತಿದೆ.

ಈ ರೀತಿ ನನ್ನಿಂದ ಸಹಾಯ ಪಡೆದ ಕೆಲವರು ದಕ್ಷಿಣಕನ್ನಡ ಜಿಲ್ಲೆಯಲ್ಲಿದ್ದರು. ದೇವರಾಜ ಅರಸು ಅವರು ಬಂಟ್ವಾಳದಲ್ಲಿ ನೀನು ಸ್ಪರ್ಧಿಸು ಎಂದು ಆದೇಶಿಸಿದಾಗ ತುಸು ವಿಚಲಿತನಾದ ನಾನು ನೇರವಾಗಿ ಮಂಗಳೂರಿಗೆ ಬಂದೆ. ನನ್ನ ಆತ್ಮೀಯ ಮಿತ್ರರನ್ನು, ಕುಟುಂಬದ ಹಿರಿಯ ಕಿರಿಯರನ್ನೆಲ್ಲ ಸಂಪರ್ಕಿಸಿ ಒಂದು ಸುತ್ತಿನ ಮಾತುಕತೆ ನಡೆಸಿದೆ. ಎಲ್ಲರೂ ನನ್ನನ್ನು ಪ್ರೋತ್ಸಾಹಿಸಿದರು. "ಇದೊಂದು ಒಳ್ಳೆಯ ಅವಕಾಶ, ಇದನ್ನು ಕೈಬಿಡಬೇಡ" ಎಂದು ಹೇಳಿದರು.

ಆಗ ನಾನು ನನ್ನ ಕೆಲವು ಅಭಿಪ್ರಾಯಗಳನ್ನು ಅವರ ಮುಂದಿಟ್ಟೆ. ಒಂದನೆಯದು ನನ್ನ ಬಳಿ ದುಡ್ಡಿಲ್ಲ. ಚುನಾವಣೆಯ ಖರ್ಚಿಗಾಗಿ ನಾನು ಯಾರ ಬಳಿಯೂ ಹಣ ಕೇಳುವುದಿಲ್ಲ. ಪಕ್ಷದ ವತಿಯಿಂದ ಏನಾದರೂ ಸಿಕ್ಕಿದರೆ ಆ ಹಣವನ್ನು ನಾನು ಕೈಯಿಂದ ಮುಟ್ಟುವುದಿಲ್ಲ. ಅದನ್ನು ಬ್ಲಾಕ್‌ನ ಅಧ್ಯಕ್ಷರಿಗೆ ಹಸ್ತಾಂತರಿಸುತ್ತೇನೆ. ನನ್ನ ಬಳಿ ಯಾರೂ ಹಣ ಕೇಳಬಾರದು. ನನ್ನ ಹೆಸರಿನಲ್ಲಿ ಯಾರೂ ಹಣ ಸಂಗ್ರಹಿಸಬಾರದು. ನನ್ನ ಎರಡನೆಯ ನಿಲುವು – ನಾನು ಯಾವುದೇ ಕಾರಣಕ್ಕೂ ದೇವಸ್ಥಾನ, ಚರ್ಚು, ಮಸೀದಿಗಳಿಗೆ ಹೋಗಿ ಮತ ಯಾಚಿಸುವುದಿಲ್ಲ. ಯಾವುದೇ ಧಾರ್ಮಿಕ ಸ್ಥಳಗಳನ್ನು ರಾಜಕೀಯಕ್ಕೆ ಬಳಸಿಕೊಳ್ಳುವುದಿಲ್ಲ. ಧರ್ಮ, ಜಾತಿಯ ಹೆಸರಿನಲ್ಲಿ ಯಾರೂ ಮತ

ಯಾಚಿಸಬಾರದು. ನನ್ನ ಚುನಾವಣೆಯ ಅವಧಿಯಲ್ಲಿ ಎಲ್ಲಿಯೂ ಯಾವ ರೀತಿಯ ಗಲಾಟೆ–ಘರ್ಷಣೆಗಳು ಆಗಬಾರದು. ಅಂತಹ ಘಟನೆಗಳು ನಡೆದರೆ ನಾನು ಮಧ್ಯೆ ಪ್ರವೇಶಿಸುವುದಿಲ್ಲ. ಪೊಲೀಸ್ ಠಾಣೆಗಳಿಗೆ ಯಾರ ಪರವಾಗಿಯೂ ಫೋನ್ ಮಾಡುವುದಿಲ್ಲ. ಯಾರ ಬಿಡುಗಡೆ ಅಥವಾ ಬಂಧನಕ್ಕೆ ಶಿಫಾರಸು ಮಾಡುವುದಿಲ್ಲ.

ನನ್ನ ಆತ್ಮೀಯರು, ಸ್ನೇಹಿತರು, ಕುಟುಂಬಿಕರು, ಬಂಧು ಬಳಗದವರನ್ನೆಲ್ಲ ಸೇರಿಸಿ ನನ್ನ ಈ ವಿಚಾರಗಳನ್ನೆಲ್ಲ ಚರ್ಚಿಸುವಾಗ ಕುಪಿತಗೊಂಡ ಕೆಲವು ಯುವಕರು ಸಭೆಯಲ್ಲಿ ಎದ್ದು ನಿಂತು “ಇದೆಲ್ಲ ಆಗುವ ಹೋಗುವ ವಿಷಯವಲ್ಲ. ಹೀಗೆಲ್ಲ ಷರತ್ತು ಹಾಕಿ ಗೆಲ್ಲಲಿಕ್ಕೆ ಸಾಧ್ಯವಿದೆಯಾ?” ಎಂದು ಹೇಳಿ ಸಭೆಯಿಂದ ಹೊರನಡೆದರು. ಆಗ ಅವರನ್ನು ಹಿಂಬಾಲಿಸಿದ ಎಂ.ಕೆ. ಮುಹಮ್ಮದ್ ಮಳಲಿ ಎಂಬವ ಆ ಯುವಕರನ್ನೆಲ್ಲ ವಾಪಾಸು ಸಭೆಗೆ ಕರೆತಂದು, ಏರಿದ ಧ್ವನಿಯಲ್ಲಿ ಮಾತನಾಡಲು ಪ್ರಾರಂಭಿಸಿದ. ಈ ಮುಹಮ್ಮದ್ ಮಳಲಿ ಬಹಳ ಬುದ್ಧಿವಂತ. ರಾಜಕೀಯದ ಆಟದಲ್ಲಿ ಬಹಳ ಪಳಗಿದವ. ಈತ ಯುವಕರನ್ನು ಉದ್ದೇಶಿಸಿ ಹೇಳಿದ, “ನಿಮ್ಮ ಸಮಸ್ಯೆ ಏನು – ಮೊಹಿದೀನ್ ಮಸೀದಿ, ದೇವಸ್ಥಾನ, ಚರ್ಚುಗಳಿಗೆ ವೋಟು ಕೇಳಲು ಹೋಗುವುದಿಲ್ಲ ಅಂತ ಅಲ್ಲವಾ? ಹೌದು ಅವನು ಬರುವುದಿಲ್ಲ. ಈ ಚುನಾವಣೆಯಲ್ಲಿ ನಾವು ಈ ವಿಷಯವನ್ನೇ ಪ್ರಚಾರ ಮಾಡುವ. ಮೊಹಿದೀನ್ ಒಬ್ಬ ಜಾತ್ಯತೀತ ವ್ಯಕ್ತಿ. ಯಾವತ್ತೂ ರಾಜಕೀಯಕ್ಕೆ ಮಸೀದಿ, ದೇವಸ್ಥಾನ, ಚರ್ಚು ಮತ್ತು ಯಾವುದೇ ಧಾರ್ಮಿಕ ನಂಬಿಕೆಗಳನ್ನು ಬಳಸಿಕೊಳ್ಳುವುದಿಲ್ಲ. ಧಾರ್ಮಿಕ ಸ್ಥಳಗಳಲ್ಲಿ ರಾಜಕೀಯ ಮಾಡುವುದಿಲ್ಲ. ಇದನ್ನೇ ನಮ್ಮ ಚುನಾವಣಾ ಪ್ರಚಾರದ ಅಸ್ತ್ರವನ್ನಾಗಿ ಬಳಸುವ. ಖಂಡಿತವಾಗಿಯೂ ಮೊಹಿದೀನ್‌ನ ಈ ನಿಲುವು ಎಲ್ಲರಿಗೂ ಇಷ್ಟವಾಗಬಹುದು.” ಮುಹಮ್ಮದ್ ಮಳಲಿ ಅವನದೇ ಆದ ಶೈಲಿಯಲ್ಲಿ, ಭಾಷೆಯಲ್ಲಿ ಇದನ್ನು ಹೇಳಿದಾಗ ಎಲ್ಲರೂ ತಲೆದೂಗಿದರು. ನಾನು ಸಹ ಚುನಾವಣೆಗೆ ಸ್ಪರ್ಧಿಸಲು ಮಾನಸಿಕವಾಗಿ ಸಜ್ಜಾದೆ.

ಬೆಂಗಳೂರಿಗೆ ಹಿಂದಿರುಗಿದ ನಾನು ನಾಮಪತ್ರ ಸಲ್ಲಿಸಲು ಮಂಗಳೂರಿಗೆ ಆಗಮಿಸಿದೆ. ಈ ಸಂದರ್ಭ ನಾನು ಮೊದಲು ಸಂಪರ್ಕಿಸಿದ್ದು ಬಂಟ್ವಾಳ – ಪಾಣೆಮಂಗಳೂರು ಬ್ಲಾಕ್‌ನ ಪ್ರಧಾನ ಕಾರ್ಯದರ್ಶಿ ಸದಾನಂದ ಪೂಂಜಾರನ್ನು. ಬಂಟ್ವಾಳ ಕ್ಷೇತ್ರಕ್ಕೆ ಸಂಬಂಧಪಟ್ಟ ಎರಡು ಬ್ಲಾಕ್‌ಗಳಿದ್ದವು. ಒಂದು – ಗುರುಪುರ ಬ್ಲಾಕ್. ಮತ್ತೊಂದು – ಪಾಣೆಮಂಗಳೂರು ಬ್ಲಾಕ್. ಗುರುಪುರ ಫಿರ್ಕಕ್ಕೆ ಸಂಬಂಧಪಟ್ಟು 29 ಗ್ರಾಮಗಳು, ಪಾಣೆಮಂಗಳೂರು ಫಿರ್ಕಕ್ಕೆ ಸಂಬಂಧಪಟ್ಟು 65 ಗ್ರಾಮಗಳಿದ್ದುವು. ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ಕಾರ್ಯಕರ್ತರ ಸಭೆಯೊಂದನ್ನು ಆಯೋಜಿಸ ಬೇಕಾಗಿತ್ತು. ಆದರೆ ಜಿಲ್ಲೆಯ ರಾಜಕೀಯ ಸ್ಥಿತಿ ಇಂದಿರಾ ಕಾಂಗ್ರೆಸ್‌ಗೆ ಪೂರಕವಾಗಿರಲಿಲ್ಲ. ಬೆರಳೆಣಿಕೆಯ ಸ್ಥಳೀಯ ನಾಯಕರು ಮಾತ್ರ ಇದ್ದರು. ಕಾಂಗ್ರೆಸ್ (ಒ) ಪಕ್ಷಕ್ಕೆ ಪ್ರಭಾವಿ ವ್ಯಕ್ತಿಯಾಗಿದ್ದ ಮಹಾಬಲ ಶೆಟ್ಟಿ ಅವರು ಅಧ್ಯಕ್ಷರಾಗಿದ್ದರು. ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿದ್ದು ಹೆಚ್ಚಿನ ಶ್ರೀಮಂತರು, ಭೂಮಾಲಕರು, ಬಂಡವಾಳಶಾಹಿಗಳು ಜನತಾ

ಪಕ್ಷಕ್ಕೆ ಬೆನ್ನೆಲುಬಾಗಿದ್ದರು. ಆ ಸಂದರ್ಭದಲ್ಲಿ ಬಂಟ್ವಾಳದಲ್ಲಿ ನಮಗಿದ್ದ ಶಕ್ತಿ ಎಂದರೆ ಸಿಪಿಐ ಪಕ್ಷದ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರು. ಸಿಪಿಐಯ ಬಿ.ವಿ. ಕಕ್ಕಿಲ್ಲಾಯ ಅವರಿಗೆ ಪಕ್ಷದ ವಿಟ್ಲ ಕ್ಷೇತ್ರವನ್ನು ಬಿಟ್ಟುಕೊಡಲಾಗಿತ್ತು. ಬಂಟ್ವಾಳ ಕ್ಷೇತ್ರದಲ್ಲಿ ಕಕ್ಕಿಲ್ಲಾಯ ಅವರ ಅಭಿಮಾನಿಗಳು ಮತ್ತು ಅನುಯಾಯಿಗಳ ದೊಡ್ಡ ದಂಡೇ ಇತ್ತು. ಅತ್ಯಂತ ನಿಷ್ಠಾವಂತ ಹಾಗೂ ಅವಿರತ ದುಡಿಯುವ ಆ ದಂಡು ನನ್ನ ಬೆಂಬಲಕ್ಕೆ ನಿಂತಿತು. ಸದಾನಂದ ಪೂಂಜಾ ಅತ್ಯಂತ ಸಮರ್ಪಕವಾಗಿ ಮತ್ತು ಧೈರ್ಯದಿಂದ ಎಲ್ಲರನ್ನೂ ಒಗ್ಗೂಡಿಸಿ ಚುನಾವಣೆಗೆ ಸಜ್ಜಾದರು. ಅವರೆಲ್ಲರಿಗಿದ್ದ ಒಂದು ದೊಡ್ಡ ಸಮಸ್ಯೆ ಎಂದರೆ ನನ್ನನ್ನು ಕ್ಷೇತ್ರಕ್ಕೆ ಪರಿಚಯಿಸುವುದು. ಆ ಕೆಲಸವನ್ನು ಸದಾನಂದ ಪೂಂಜ ಅವರು ಸಮರ್ಪಕವಾಗಿ ನಿರ್ವಹಿಸಿದ್ದರು. ಈ ಸಂದರ್ಭದಲ್ಲಿ ನನಗೆ ಹೆಚ್ಚಿನ ಬೆಂಬಲ ನೀಡಿದವರು ಇತ್ತೀಚೆಗೆ ನಿಧನರಾದ ಕಾಮ್ರೇಡ್ ವಿಶ್ವನಾಥ ನಾಯ್ಕ ಮತ್ತು ಪಿ. ಸಂಜೀವ ಅವರು.

ನಾವು ಅತ್ಯಂತ ಸರಳವಾಗಿ ಮೂರು ಕಾರಿನಲ್ಲಿ ಹೋಗಿ ನಾಮಪತ್ರ ಸಲ್ಲಿಸಿದೆವು. ಪ್ರಚಾರ ಕಾರ್ಯವನ್ನು ನಿಧಾನವಾಗಿ ಪ್ರಾರಂಭಿಸಿದೆವು. ಕ್ಷೇತ್ರದಾದ್ಯಂತ ನನ್ನ ಹಿತೈಷಿಗಳು, ಬೆಂಬಲಿಗರು ಮನೆ ಮನೆಗೆ ಹೋಗಿ ಮತ ಯಾಚಿಸುವ ಕಾರ್ಯದಲ್ಲಿ ತೊಡಗಿಸಿ ಕೊಂಡರು. ನಿಜವಾಗಿಯೂ ಹೇಳುತ್ತೇನೆ, ನನ್ನ ಗೆಲುವಿಗಾಗಿ ದುಡಿದ ಅದೆಷ್ಟೋ ಬಂಧು, ಬಳಗ, ಹಿತೈಷಿಗಳ ನಿಸ್ವಾರ್ಥ ಸೇವೆ ನನ್ನ ಗಮನಕ್ಕೇ ಬಂದಿರಲಿಲ್ಲ.

ಈ ಮಧ್ಯೆ ನಡೆದ ಘಟನೆಯೊಂದನ್ನು ನಾನು ಎಂದೆಂದೂ ಮರೆಯಲು ಸಾಧ್ಯವಿಲ್ಲ. ಮಂಗಳೂರಿನ ಬಂದರ್‌ನಲ್ಲಿ ಬಹಳ ದೊಡ್ಡ ಉದ್ಯಮಿಯೊಬ್ಬರು ಇದ್ದರು. ಅವರ ಹೆಸರು ಪಿ.ಬಿ. ಹುಸೈನ್ ಕುಂಞಿ. ಸ್ಥಳೀಯ ನಾಯಕರು. ಅವರಿಗೆ ಬಂಟ್ವಾಳದಲ್ಲಿ ತುಂಬಾ ಜನರ ಸಂಪರ್ಕವಿತ್ತು. ಅಲ್ಲಿ ಅವರಿಗೊಂದು ಕಟ್ಟಡವಿತ್ತು. ಆ ಕಟ್ಟಡದ ಒಂದು ಚಿಕ್ಕ ಕೋಣೆಯನ್ನು ನನ್ನ ಚುನಾವಣಾ ಪ್ರಚಾರ ಕಚೇರಿ ಮಾಡಲು ಕೇಳಿದೆ. ಆದರೆ ಅವರು ನನಗೆ ಅವಕಾಶ ಕೊಡಲಿಲ್ಲ. ಅಲ್ಲೇ ಒಂದು ಕೊಂಕಣಿಯೊಬ್ಬರ ಹೊಟೇಲಿತ್ತು. ಅವರು ತುಂಬಾ ಒಳ್ಳೆಯ ವ್ಯಕ್ತಿ. ಅವರ ಹೆಸರು ನನಗೆ ಈಗ ನೆನಪಾಗುತ್ತಾ ಇಲ್ಲ. ಅವರು ನಮ್ಮ ಪಕ್ಷದವರಾಗಿರಲಿಲ್ಲ. ಜನಸಂಘದವರು. ಆದರೆ ಅವರು ನನ್ನನ್ನು ಕರೆದು "ನೀವು ಟೆನ್ಷನ್ ಮಾಡಬೇಡಿ, ನನ್ನ ಹೊಟೇಲ್ ಇದೆಯಲ್ಲ. ಅದನ್ನೇ ನಿಮ್ಮ ಕಚೇರಿ ಮಾಡಲು ಕೊಡುತ್ತೇನೆ" ಎಂದರು. ಆ ವ್ಯಕ್ತಿ ನನಗೆ ನೇರವಾಗಿ ಪರಿಚಿತರಲ್ಲ. ನಮ್ಮ ಕಾಂಗ್ರೆಸ್‌ನಲ್ಲಿ ಒಬ್ಬರು ಕೊಂಕಣಿ ಸ್ಥಳೀಯ ಮುಖಂಡರಿದ್ದರು. ಅವರ ಮೂಲಕ ಇವರ ಪರಿಚಯವಾಗಿ ನನಗೆ ಅವರು ಸ್ಥಳಾವಕಾಶವನ್ನು ಕೊಟ್ಟಿದ್ದರು. ದೊಡ್ಡ ಉದ್ಯಮಿಯಾಗಿದ್ದ ಪಿ.ಬಿ. ಹುಸೈನ್ ಯಾಕೆ ನನಗೆ ಕೋಣೆ ಕೊಡಲು ಹಿಂಜರಿದದ್ದು ಎಂದರೆ, ಕೇಂದ್ರದಲ್ಲಿ ಜನತಾ ಪಕ್ಷ ಅಧಿಕಾರದಲ್ಲಿತ್ತು. ರಾಜ್ಯದಲ್ಲೂ ಅಧಿಕಾರಕ್ಕೆ ಬರುವ ಲಕ್ಷಣಗಳಿತ್ತು. ನಾನು ಕೋಣೆ ಕೊಟ್ಟರೆ ಮುಂದೆ ತನಗೆ ತೊಂದರೆಯಾಗಬಹುದು ಎಂದು ಹೆದರಿ ಕೋಣೆ ಕೊಡಲಿಲ್ಲ. ಆದರೆ ಈ ಕೊಂಕಣಿ ನನಗೆ ಕೋಣೆ ಕೊಟ್ಟರು.

ನನ್ನ ಬಳಿ ಒಂದು ಕಾರಿತ್ತು. ನಾನು ಮತ್ತು ಸದಾನಂದ ಪೂಂಜಾ ಆ ಕಾರಿನಲ್ಲಿ ಪ್ರಚಾರ ಕಾರ್ಯ ಆರಂಭಿಸಿದೆವು. ನಾನು ಕನ್ನಡದಲ್ಲಿ ಭಾಷಣ ಮಾಡುತ್ತಿದ್ದೆ. ಆಗ ವಿರೋಧ ಪಕ್ಷದವರು ಅಪಪ್ರಚಾರ ಪ್ರಾರಂಭಿಸಿದರು. 'ಬಿ.ಎ. ಮೊಹಿದೀನ್ ಗಟ್ಟದವನು. ಅವನಿಗೆ ತುಳು ಭಾಷೆಯೇ ಬರುವುದಿಲ್ಲ' ಎಂದು ಪ್ರಚಾರ ಮಾಡತೊಡಗಿದರು. ಅನಂತರ ನಾನು ತುಳುವಿನಲ್ಲೇ ಭಾಷಣ ಮಾಡಲು ಪ್ರಾರಂಭಿಸಿದೆ. ನನ್ನ ಭಾಷಣದಲ್ಲಿ ನಾನು ಒಂದೇ ವಿಷಯವನ್ನು ಹೇಳುತ್ತಿದ್ದುದು. ಇಂದಿರಾ ಗಾಂಧಿಯವರ ಕಾರ್ಯಕ್ರಮ ಗಳನ್ನು ಮತ್ತು ಅವರು ಬಡವರಿಗಾಗಿ ಹಮ್ಮಿಕೊಂಡಿದ್ದ ಯೋಜನೆಗಳನ್ನು ವಿವರಿಸುವುದು. ಇಂದಿರಾ ಗಾಂಧಿ ಅವರ ಭೂಸುಧಾರಣೆ, ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಇಂತಹ ಜನಪರ ಕಾರ್ಯಕ್ರಮಗಳನ್ನು ವಿವರಿಸಿ 'ನಾನು ಇಂದಿರಾ ಗಾಂಧಿಯವರ ಅಭ್ಯರ್ಥಿ, ಅವರೇ ನನ್ನನ್ನು ವೋಟಿಗೆ ನಿಲ್ಲಿಸಿರುವುದು, ನೀವು ನನ್ನನ್ನು ಗೆಲ್ಲಿಸಿದರೆ ಅದು ಇಂದಿರಾ ಗಾಂಧಿ ಅವರು ಗೆದ್ದಂತೆ' ಎಂದು ಸರಳವಾಗಿ ವಿವರಿಸುತ್ತಿದ್ದೆ. ಯಾವುದೇ ಭಾಷಣದಲ್ಲೂ ವಿರೋಧ ಪಕ್ಷವನ್ನಾಗಲೀ ಅಭ್ಯರ್ಥಿಯನ್ನಾಗಲೀ ಉದ್ದೇಶಿಸಿ ಟೀಕಿಸುತ್ತಿರಲಿಲ್ಲ. ಕ್ರಮೇಣ ನಮ್ಮ ಸಭೆಗಳಿಗೆ ಜನ ಸೇರತೊಡಗಿದರು.

ವಿರೋಧ ಪಕ್ಷದವರು ಅಲ್ಲಿ ಎಂತಹ ಒಂದು ವಾತಾವರಣವನ್ನು ಸೃಷ್ಟಿಸಿದ್ದರು ಎಂದರೆ ಬಿ.ಎ. ಮೊಹಿದೀನ್ ಖಂಡಿತಾ ಗೆಲ್ಲುವುದಿಲ್ಲ. ಯಾರಾದರೂ ಅವರೊಂದಿಗೆ ಗುರುತಿಸಿಕೊಂಡರೆ ಮುಂದೆ ಅಂತಹವರಿಗೆ ತೊಂದರೆಯಾಗಬಹುದು ಎನ್ನುವ ಭಯವನ್ನು ಸೃಷ್ಟಿಸತೊಡಗಿದ್ದರು. ದಿನ ಕಳೆದಂತೆ ಈ ಭಾವನೆ ದೂರವಾಗತೊಡಗಿತು. ಜನರು ತಂಡೋಪತಂಡವಾಗಿ ನಮ್ಮ ಸಭೆಗಳಲ್ಲಿ ಭಾಗವಹಿಸತೊಡಗಿದರು. ಚುನಾವಣೆಯ ರಂಗು ಬದಲಾಗತೊಡಗಿತು. ಚುನಾವಣೆಯ ಕೊನೆಯ ಹಂತದವರೆಗೂ ಕ್ಷೇತ್ರದ ಶ್ರೀಮಂತರು, ಜಮೀನ್ದಾರರು, ಉದ್ಯಮಿಗಳು ನನ್ನ ಜೊತೆ ಗುರುತಿಸಿಕೊಳ್ಳಲು ಹಿಂಜರಿದರು. ಆದರೆ ಬಡವರು, ದೀನ ದಲಿತರು ಹುಮ್ಮಸ್ಸಿನಿಂದ ಇಂದಿರಾ ಗಾಂಧಿ ಅವರ ಹೆಸರಿಗೆ ಜಯ ಘೋಷಣೆ ಮಾಡಲು ತೊಡಗಿದರು. ಆಗ ನನಗೂ ಧೈರ್ಯ ಮತ್ತು ಉತ್ಸಾಹ ಬರತೊಡಗಿತು. ನನ್ನ ಎದುರಾಳಿಯಾಗಿ ಸ್ಪರ್ಧಿಸುತ್ತಿದ್ದುದು ಜನತಾ ಪಕ್ಷದ ಅತ್ಯಂತ ಪ್ರಭಾವಿ ವ್ಯಕ್ತಿ ಮತ್ತು ನನ್ನ ಕ್ಷೇತ್ರದಲ್ಲಿರುವ ಅತೀ ಹೆಚ್ಚು ಮತದಾರರಾದ ಬಿಲ್ಲವ ಸಮುದಾಯಕ್ಕೆ ಸೇರಿದ ರುಕ್ಮಯ ಪೂಜಾರಿ ಅವರು ಎಂಬುದು ಬಹಳ ಮುಖ್ಯವಾಗಿತ್ತು.

ಚುನಾವಣಾ ಪ್ರಚಾರದ ಕಾವು ಏರುತ್ತಿತ್ತು. ಚುನಾವಣಾ ದಿನಾಂಕ ಹತ್ತಿರ ಹತ್ತಿರ ಬರುತ್ತಿತ್ತು. ಗೇಣಿದಾರರು ರಂಗಕ್ಕೆ ಇಳಿದು ನನ್ನ ಪರವಾಗಿ ನಿರಂತರ ಪ್ರಚಾರದಲ್ಲಿ ತೊಡಗಿಸಿಕೊಂಡಿದ್ದರು. ಇಡೀ ಚುನಾವಣೆ ಒಂದು ಅರ್ಥದಲ್ಲಿ ಬಡವರು–ಶ್ರೀಮಂತರು, ಉಳ್ಳವರು–ಇಲ್ಲದವರು, ಜಮೀನ್ದಾರರು–ಗೇಣಿದಾರರ ಸಮರವಾಗಿ ಪರಿವರ್ತಿತವಾಯಿತು.

ಈ ಸಂದರ್ಭದಲ್ಲಿ ತೆರೆಮರೆಯಲ್ಲಿ ನನಗಾಗಿ ದುಡಿದ ನನ್ನ ಕೆಲವು ಆತ್ಮೀಯರು

ಚುನಾವಣೆಯ ನಂತರ ನನ್ನ ಗಮನಕ್ಕೆ ತಂದ ಒಂದೆರಡು ವಿಚಾರಗಳನ್ನು ಇಲ್ಲಿ ನಿಮ್ಮೊಂದಿಗೆ ಹಂಚಿಕೊಳ್ಳುತ್ತೇನೆ – ಅಂದಿನ ಕಾಲದ ಚುನಾವಣೆ ಹೇಗೆಂದರೆ – ಆವರಣ ಗೋಡೆ, ದೊಡ್ಡ ದೊಡ್ಡ ಬಂಡೆಕಲ್ಲುಗಳ ಮೇಲೆ ಸುಣ್ಣದಲ್ಲಿ ಪ್ರಚಾರ ಘೋಷಣೆಗಳನ್ನು ಬರೆಯುವುದು. ಸೋಡಾ ಬಾಟಲಿಯ ಮುಚ್ಚಳಗಳನ್ನು ಸಂಗ್ರಹಿಸಿ ಅವುಗಳನ್ನು ಡಾಮಾರು ರಸ್ತೆಗೆ ಅಂಟಿಸಿ ಪಕ್ಷದ ಚಿಹ್ನೆಯನ್ನು ರಚಿಸುವುದು. ಹಳ್ಳಿ ಹಳ್ಳಿಗಳಲ್ಲಿ ಹೊಟೇಲ್, ಬಸ್ಸು ನಿಲ್ದಾಣಗಳಂತಹ ಜನನಿಬಿಡ ಸ್ಥಳಗಳಲ್ಲಿ ಪೋಸ್ಟರ್‌ಗಳನ್ನು ಅಂಟಿಸುವುದು. ಇವೆಲ್ಲವನ್ನು ಪಕ್ಷದ ಕಾರ್ಯಕರ್ತರು ರಾತ್ರಿ 11 – 12 ಗಂಟೆಯ ನಂತರವೇ ಮಾಡುತ್ತಿದ್ದರು. ಮೆರವಣಿಗೆ, ಪ್ರಚಾರ ಸಭೆಗಳು ಕಡಿಮೆಯಾದರೂ ಮನೆ ಮನೆಗೆ ಹೋಗಿ ಮತ ಯಾಚಿಸುವ ಕಾರ್ಯ ಭರದಿಂದ ಸಾಗುತ್ತಿತ್ತು. ಹಗಲಿಡೀ ಕಾರ್ಯಕರ್ತರು ಗುಂಪು ಗುಂಪಾಗಿ ಈ ಕೆಲಸ ಮಾಡುತ್ತಿದ್ದರು.

ಚುನಾವಣೆಯ ಸಂದರ್ಭದಲ್ಲಿ ಮತ್ತೊಂದು ದೊಡ್ಡ ಹುಚ್ಚೆಂದರೆ ದೊಡ್ಡ ದೊಡ್ಡ ಬಾವುಟಗಳನ್ನು ಎತ್ತರದ ಕಂಬಗಳಿಗೆ ಕಟ್ಟಿ ಹಾರಿಸುವುದು. ಇನ್ನೊಬ್ಬರಿಗಿಂತ ನಮ್ಮ ಬಾವುಟ ಎತ್ತರದಲ್ಲಿ ಹಾರಬೇಕೆಂಬ ಪೈಪೋಟಿ. ಒಂದು ಸ್ಥಳದಲ್ಲಿ ಬಲು ಎತ್ತರದ ಕಂಗು (ಅಡಿಕೆ ಮರ) ಒಂದನ್ನು ಹುಗಿದು ಜನತಾ ಪಕ್ಷದವರು ಬಾವುಟವನ್ನು ಬಹಳ ಎತ್ತರದಲ್ಲಿ ಹಾರಿಸಿದ್ದರಂತೆ. ಇದನ್ನು ನೋಡಿ ನಮ್ಮ ಕಾಂಗ್ರೆಸ್ ಕಾರ್ಯಕರ್ತರು ಎಲ್ಲೆಲ್ಲೋ ಹುಡುಕಾಡಿ ಅದಕ್ಕಿಂತ ಎತ್ತರವಾದ ಕಂಗೊಂದನ್ನು ತಂದು ಅದಕ್ಕೆ ನಮ್ಮ ಬಾವುಟವನ್ನು ಕಟ್ಟಿ ಜನತಾ ಪಕ್ಷದ ಬಾವುಟದ ಪಕ್ಕದಲ್ಲೇ ಹುಗಿಯಲು ತೊಡಗಿದರಂತೆ. ಇಲ್ಲಿ ಈ ಕಂಬವನ್ನು ನೇರಗೊಳಿಸುವುದು ಬಲು ತ್ರಾಸದ ಕೆಲಸ. ದೊಡ್ಡ ಹೊಂಡವನ್ನು ತೆಗೆದು, ಕಂಗಿನ ಬುಡವನ್ನು ಹೊಂಡಕ್ಕೆ ಇಟ್ಟು, ಅದರ ತುದಿಗೆ ಉದ್ದದ ಹಗ್ಗಗಳನ್ನು ಕಟ್ಟಿ, ಹತ್ತಾರು ಜನರು ಬಹಳ ನಾಜೂಕಿನಿಂದ ಶಕ್ತಿ ಬಳಸಿ ಎಳೆದು ಕಂಗನ್ನು ನೇರಗೊಳಿಸಬೇಕು. ಇದು ಅನುಭವ ಇದ್ದವರಿಗೆ ಮಾತ್ರ ಸಾಧ್ಯ. ಈ ರೀತಿ ನಮ್ಮ ಹುಡುಗರು ಜನತಾ ಪಕ್ಷದ ಕಂಬದ ಪಕ್ಕದಲ್ಲಿ ಕಾಂಗ್ರೆಸ್‌ನ ಅದಕ್ಕಿಂತ ಎತ್ತರವಾದ ಈ ಕಂಬವನ್ನು ನೇರಗೊಳಿಸಲು ಅಸಾಧ್ಯವಾದಾಗ ದೂರದಲ್ಲಿ ನಿಂತು ಇದನ್ನೆಲ್ಲ ನೋಡುತ್ತಿದ್ದ ಜನತಾ ಪಕ್ಷದ ಕಾರ್ಯಕರ್ತರು ಬಂದು ನಮ್ಮ ಕಾರ್ಯಕರ್ತರೊಂದಿಗೆ ಕೈಜೋಡಿಸಿ ನಮ್ಮ ಪಕ್ಷದ ಬಾವುಟದ ಕಂಬವನ್ನು ನಿಲ್ಲಿಸಲು ಸಹಾಯ ಮಾಡಿದ್ದರಂತೆ. ಇದು ನನಗೆ ಆ ನಂತರ, ನನ್ನ ಚುನಾವಣೆಗಾಗಿ ಅವಿರತ ದುಡಿದಿದ್ದ ಅಬ್ದುಲ್ ರಹೀಂ ಟೀಕೆ ಅವರು ಹೇಳಿದ್ದು. ಇದು ಅಂದಿನ ಚುನಾವಣಾ ಪ್ರಚಾರಗಳಲ್ಲೂ ಎದ್ದು ಕಾಣುತ್ತಿದ್ದ ಸೌಹಾರ್ದ, ಮಾನವೀಯತೆಯ ಒಂದು ನಿದರ್ಶನ.

ನನ್ನ ಚುನಾವಣಾ ಪ್ರಚಾರಕ್ಕೆ ಆಗ ಒಂದು ಜೀಪಿನ ಅಗತ್ಯ ಇತ್ತು. ಆದರೆ ಜೀಪನ್ನು ಕೊಳ್ಳುವಷ್ಟು ಹಣ ನನ್ನ ಬಳಿ ಇರಲಿಲ್ಲ. ಇದನ್ನು ಅರಿತ ನನ್ನ ಹಿತೈಷಿ, ಬಾಲ್ಯದ ಗೆಳೆಯ ಬಿ.ಎಂ. ಝುಕರಿಯಾ ಹೇಗಾದರೂ ಮಾಡಿ ಒಂದು ಜೀಪನ್ನು ತರಲು ಪ್ರಯತ್ನಿಸುತ್ತಿದ್ದ. ಆಗ ನನ್ನ ಮನೆಯ ಪಕ್ಕದಲ್ಲಿ ಡೀಲಕ್ಸ್ ಹಾಜಿ ಎಂಬವರಿದ್ದರು.

ಅವರ ಹೆಸರು ಎಂ.ಕೆ. ಮುಹಮ್ಮದ್. ಇವರು ನನ್ನ ಬಾವ – ತಂಗಿಯ ಗಂಡ. ಅವರಿಗೆ ಮೂಡಿಗೆರೆಯಲ್ಲಿ ಅಂಗಡಿ ಇತ್ತು. ಅವರದು ದೊಡ್ಡ ವ್ಯಾಪಾರ. ಅವರು ಝಕರಿಯಾರಿಗೆ ಹೇಳಿದರು. ಮೂಡಿಗೆರೆಯ ಒಬ್ಬ ಗೌಡರಲ್ಲಿ ಒಂದು ಜೀಪು ಇದೆ. ಅವರು ಮಾರುತ್ತೇನೆ ಎಂದು ಹೇಳುತ್ತಿದ್ದಾರೆ. ದುಡ್ಡು ಆಮೇಲೆ ಕೊಡಬಹುದು ಎಂದು. ಈ ಝಕರಿಯಾ, ಡೀಲಕ್ಸ್ ಹಾಜಿ ಇವರೆಲ್ಲ ಒಟ್ಟಿಗೆ ಹೋಗಿ ಜೀಪನ್ನು ನೋಡಿದರಂತೆ. ಹಳೆಯ ಜೀಪು. ನಿಂತಲ್ಲೇ ನಿಂತು ಬಹಳ ಸಮಯವಾಗಿರಬೇಕು. ಡೀಲಕ್ಸ್ ಹಾಜಿ ಜೀಪಿನ ಬೆಲೆ ಕೇಳಿದರಂತೆ. ಗೌಡರು ಹೇಳಲಿಲ್ಲ. ಎಷ್ಟಾದರೂ ಕೊಡಿ ಎಂದರಂತೆ. ಗೌಡರಿಗೂ ಡೀಲಕ್ಸ್ ಹಾಜಿಗೂ ಒಳ್ಳೆಯ ಸಂಬಂಧ. ಇವರ ಅಂಗಡಿ ಯಿಂದಲೇ ಅವರ ಮನೆಗೆ ಸಾಮಗ್ರಿ ಸರಬರಾಜಾಗುತ್ತಿದ್ದುದು. ಕೊನೆಗೆ ಡೀಲಕ್ಸ್ ಹಾಜಿ ಒತ್ತಾಯ ಮಾಡಿದಾಗ ಗೌಡರು "ಸರಿ, ಒಂದು ಐದು ಸಾವಿರ ರೂಪಾಯಿ ಕೊಡಿ" ಎಂದರಂತೆ. ಚರ್ಚೆ ಇಲ್ಲದೆ ವ್ಯಾಪಾರ ಮುಗಿಯಿತು. ದುಡ್ಡು ಯಾವಾಗಲಾದರೂ ಕೊಡಿ ಎಂದು ಗೌಡರು ಹೇಳಿದರಂತೆ. ತುಂಬಾ ಸಮಯದಿಂದ ನಿಂತಿದ್ದ ಜೀಪು ಹೇಗಿದೆಯೋ ಏನೋ ಎಂದು ಯಾರಿಗೂ ಗೊತ್ತಿಲ್ಲ. ಇವರು ಹೋಗುವಾಗಲೇ ಒಬ್ಬ ಮೆಕ್ಯಾನಿಕ್‌ನನ್ನು ಕರೆದುಕೊಂಡು ಹೋಗಿದ್ದರು. ಅವನು ಜೀಪನ್ನು ಪರಿಶೋಧಿಸಿ ಕೊಂಡುಹೋಗಿದ್ದ ಕೈಪಂಪಿನಿಂದ ಚಕ್ರಗಳಿಗೆ ಗಾಳಿ ತುಂಬಿಸಿ ಜೀಪನ್ನು ಸ್ಟಾರ್ಟ್ ಮಾಡಿ ಕ್ಷೇತ್ರಕ್ಕೆ ತಂದ. ಜೀಪು ಚೆನ್ನಾಗಿತ್ತು. ಆ ಜೀಪನ್ನು ಇಡೀ ಚುನಾವಣೆಯಲ್ಲಿ ಹಳ್ಳಿ ಹಳ್ಳಿಗಳಲ್ಲಿ ಪ್ರಚಾರಕ್ಕೆ ಬಳಸಿದೆವು. ಚುನಾವಣೆ ಮುಗಿದ ಮೇಲೆ ಆ ಜೀಪನ್ನು ಮಾರಿ ಗೌಡರಿಗೆ ದುಡ್ಡು ಕೊಟ್ಟರಂತೆ. ಈ ಎಲ್ಲ ವಿಷಯ ನನಗೆ ಚುನಾವಣೆಯ ನಂತರವೇ ಗೊತ್ತಾಗಿದ್ದು.

ಈ ಚುನಾವಣೆಗೆ ನನಗೇನೂ ದೊಡ್ಡ ಹಣ ಖರ್ಚಾಗಿರಲಿಲ್ಲ. ಒಂದು ಲಕ್ಷ ರೂಪಾಯಿಯವರೆಗೆ ನನಗೆ ಖರ್ಚಾಗಿರಬಹುದು. ಕೆಲವು ಗೆಳೆಯರು ನನಗೆ ಒಂದು ಸಾವಿರ ಎರಡು ಸಾವಿರ ರೂಪಾಯಿ ತಂದುಕೊಟ್ಟರು. ಸೀದಿ ಹಾಜಿ ಎನ್ನುವವರು ಐದು ಸಾವಿರ ಕೊಟ್ಟಿದ್ದರು. ನನ್ನ ಮಾವ ಎಂ. ಫಕೀರಬ್ಬ ಅವರು ಸ್ವಲ್ಪ ಹಣ ನನಗಾಗಿ ಖರ್ಚು ಮಾಡಿದ್ದರು. ಹೀಗೆ ಚುನಾವಣೆ ಮುಗಿಯುವಾಗ ಒಂದು ಲಕ್ಷ ರೂಪಾಯಿವರೆಗೆ ಖರ್ಚಾಗಿ ನನ್ನ ಕೈಯಲ್ಲಿ ಐದಾರು ಸಾವಿರ ರೂಪಾಯಿ ಉಳಿದಿತ್ತು. ಹಣದ ಯಾವ ಅಡಚಣೆಯೂ ನನಗೆ ಆಗಿರಲಿಲ್ಲ.

ಮತ್ತೊಂದು ಮುಖ್ಯವಾದ ವಿಷಯವೆಂದರೆ ನನ್ನ ಚುನಾವಣೆಯ ಸಂದರ್ಭದಲ್ಲಿ ಒಂದೆರಡು ಕಡೆ ಸಣ್ಣ ಪುಟ್ಟ ಘರ್ಷಣೆ–ಗಲಾಟೆಗಳು ನಡೆದಿದ್ದವು. ಇಂತಹ ಗಲಭೆಗಳು ನಡೆದಾಗ ನಮ್ಮ ಕಾರ್ಯಕರ್ತರಾಗಲೀ ಸ್ಥಳೀಯ ನಾಯಕರಾಗಲೀ ನನ್ನಲ್ಲಿ ಹೇಳುತ್ತಿರಲಿಲ್ಲ. ಅದರ ಬದಲು ಸುರತ್ಕಲ್ ಕ್ಷೇತ್ರದಿಂದ ಸ್ಪರ್ಧಿಸುತ್ತಿದ್ದ ಬಿ. ಸುಬ್ಬಯ್ಯ ಶೆಟ್ಟಿ ಅವರ ಗಮನಕ್ಕೆ ತಂದು ಅವರ ಮೂಲಕವೇ ಅದಕ್ಕೆ ತಕ್ಕ ವ್ಯವಸ್ಥೆ ಮಾಡುತ್ತಿದ್ದರು. ಆ ಕಾಲದಲ್ಲಿ ಬಿ. ಸುಬ್ಬಯ್ಯ ಶೆಟ್ಟಿ ಜಿಲ್ಲೆಯ ಪ್ರಭಾವಿ ನಾಯಕರಾಗಿದ್ದರು ಮತ್ತು ಎಲ್ಲ

ಕಡೆ ಅವರಿಗೆ ತುಂಬಾ ಗೌರವವಿತ್ತು.

ಚುನಾವಣೆ ಮುಗಿಯಿತು. ಮತಗಳ ಎಣಿಕೆಯೂ ಆಯಿತು. ಚುನಾವಣೆಯ ಸಂದರ್ಭದಲ್ಲಿ ಬಹಳಷ್ಟು ಸದ್ದು ಮಾಡಿದ್ದ ಕಾಂಗ್ರೆಸ್ (ಒ) ಪಕ್ಷದ ಅಭ್ಯರ್ಥಿ ಮಹಾಬಲ ಶೆಟ್ಟಿಯವರು ಇಡುಗಂಟನ್ನೇ ಕಳೆದುಕೊಂಡಿದ್ದರು.

ಕೇಂದ್ರದಲ್ಲಿ ಅಧಿಕಾರದಲ್ಲಿದ್ದ ಜನತಾ ಪಕ್ಷದ ಅತ್ಯಂತ ಪ್ರಬಲ ಅಭ್ಯರ್ಥಿ ರುಕ್ಮಯ ಪೂಜಾರಿಗಿಂತ ನಾನು 14 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದು ಗೆದ್ದಿದ್ದೆ. ಇಲ್ಲಿ ಗಮನಿಸಬೇಕಾದ ಅತೀ ಮುಖ್ಯವಾದ ವಿಷಯವೇನೆಂದರೆ ಬಂಟ್ವಾಳ ಕ್ಷೇತ್ರದಲ್ಲಿ ರುಕ್ಮಯ ಪೂಜಾರಿಯವರ ಬಿಲ್ಲವ ಸಮುದಾಯದ ಮತದಾರರು ಗಣನೀಯ ಸಂಖ್ಯೆಯಲ್ಲಿದ್ದರು. ಅವರು ಭೂಸುಧಾರಣೆಯ ಕಾನೂನಿನಿಂದಾಗಿ ಅತಿ ಹೆಚ್ಚು ಲಾಭ ಪಡೆದವರು. ಇಂದಿರಾ ಗಾಂಧಿಯವರ ಆ ಒಂದು ಉಪಕಾರವನ್ನು ನೆನಪಿಟ್ಟು ಅವರದ್ದೇ ಬಿಲ್ಲವ ಸಮುದಾಯದ ರುಕ್ಮಯ ಪೂಜಾರಿ ಅಭ್ಯರ್ಥಿಯಾಗಿದ್ದರೂ ಅವರಿಗೆ ಮತವನ್ನು ನೀಡದೆ ಓರ್ವ ಮುಸ್ಲಿಂ ಅಭ್ಯರ್ಥಿಯಾದ ನನಗೆ ಮತ ನೀಡಿದ್ದರು. ಇದರ ಅರ್ಥ ಬಿಲ್ಲವರು ಜಾತಿ–ಮತ ನೋಡಿದವರಲ್ಲ. ಬದಲಾಗಿ ಇಂದಿರಾ ಗಾಂಧಿಗೆ ತಮ್ಮ ಸಂಪೂರ್ಣ ಬೆಂಬಲ ನೀಡಿದವರು.

1978ರ ಈ ವಿಧಾನಸಭಾ ಚುನಾವಣೆಯ ಫಲಿತಾಂಶ ಜನತಾ ಪಕ್ಷಕ್ಕೆ ಅತ್ಯಂತ ಅನಿರೀಕ್ಷಿತವಾಗಿತ್ತು. ಖಂಡಿತವಾಗಿಯೂ ಕರ್ನಾಟಕದಲ್ಲಿ ಇಂದಿರಾ ಕಾಂಗ್ರೆಸ್ ಸೋತು ಜನತಾ ಪಕ್ಷ ಇಲ್ಲಿ ಆಡಳಿತಕ್ಕೆ ಬರುತ್ತದೆ ಎಂಬ ಎಲ್ಲ ಸಮೀಕ್ಷೆಗಳೂ, ನಿರೀಕ್ಷೆಗಳೂ ಸುಳ್ಳಾಗಿ ದೇವರಾಜ ಅರಸು ಅವರ ನೇತೃತ್ವದ ಇಂದಿರಾ ಕಾಂಗ್ರೆಸ್ 149 ಸ್ಥಾನಗಳನ್ನು ಗೆಲ್ಲುವುದರ ಮೂಲಕ ಒಂದು ದಾಖಲೆಯನ್ನು ಸ್ಥಾಪಿಸಿತು. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಮೊತ್ತಮೊದಲ ಬಾರಿಗೆ 5 ವರ್ಷಗಳ ಮುಖ್ಯಮಂತ್ರಿ ಸ್ಥಾನದ ಅಧಿಕಾರವನ್ನು ಪೂರೈಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದ ಅರಸು ಅವರು 1978ರಲ್ಲಿ ಎರಡನೆಯ ಅವಧಿಗೆ ಮುಖ್ಯಮಂತ್ರಿಯಾಗಿ ಪ್ರಮಾಣವಚನವನ್ನು ಸ್ವೀಕರಿಸಿದರು.

ತುರ್ತು ಪರಿಸ್ಥಿತಿಯ ಅವಕಾಶಗಳನ್ನು ಮತ್ತು ಅಧಿಕಾರಗಳನ್ನು ಅತ್ಯಂತ ಸಮರ್ಪಕವಾಗಿ ಮತ್ತು ಜನಪರವಾಗಿ ಬಳಸಿಕೊಳ್ಳುವುದರ ಮೂಲಕ ದೇವರಾಜ ಅರಸು ಅವರು ರಾಜ್ಯದ ಅಭಿವೃದ್ಧಿಯನ್ನು ಸಾಧಿಸಿದ್ದರು. ಇಂದಿರಾ ಗಾಂಧಿ ಅವರ 20 ಅಂಶಗಳ ಕಾರ್ಯಕ್ರಮವನ್ನು ಅತ್ಯಂತ ಪರಿಣಾಮಕಾರಿಯಾಗಿ ಜಾರಿಗೊಳಿಸಿದ್ದರಿಂದಾಗಿ ಅರಸು ಅವರಿಗೆ ಈ ಸಾಧನೆ ಮಾಡಲು ಸಾಧ್ಯವಾಯಿತು.

1978ರ ಈ ಚುನಾವಣೆಯಲ್ಲಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ, ಪುತ್ತೂರು ಎರಡು ಕ್ಷೇತ್ರಗಳನ್ನು ಬಿಟ್ಟು ವಿಟ್ಲದಲ್ಲಿ ಕಾಂಗ್ರೆಸ್ ಬೆಂಬಲಿತ ಸಿಪಿಐ ಅಭ್ಯರ್ಥಿ ಬಿ.ವಿ. ಕಕ್ಕಿಲ್ಲಾಯರ ಸಹಿತ 13 ಸ್ಥಾನಗಳಲ್ಲಿ ಇಂದಿರಾ ಕಾಂಗ್ರೆಸ್ ಜಯಭೇರಿ ಬಾರಿಸಿತ್ತು. ಸುಳ್ಯದಲ್ಲಿ ಎ. ರಾಮಚಂದ್ರ ಮತ್ತು ಪುತ್ತೂರಿನಲ್ಲಿ ಕೆ. ರಾಮ ಭಟ್ ಇವರಿಬ್ಬರು ಮಾತ್ರ ಜನತಾ ಪಕ್ಷದಿಂದ ಆಯ್ಕೆಯಾಗಿದ್ದರು. ಬೆಳ್ತಂಗಡಿಯಿಂದ ಕೆ.

ಗಂಗಾಧರ ಗೌಡ, ಮಂಗಳೂರಿನಿಂದ ಪಿ.ಎಫ್. ರೊಡ್ರಿಗಸ್, ಉಳ್ಳಾಲದಿಂದ ಯು.ಟಿ. ಫರೀದ್, ಸುರತ್ಕಲ್‌ನಿಂದ ಬಿ. ಸುಬ್ಬಯ್ಯ ಶೆಟ್ಟಿ, ಕಾಪುವಿನಿಂದ ಬಿ. ಭಾಸ್ಕರ ಶೆಟ್ಟಿ, ಉಡುಪಿಯಿಂದ ಎಂ. ಮನೋರಮಾ ಮಧ್ವರಾಜ್, ಬ್ರಹ್ಮಾವರದಿಂದ ಆನಂದ ಕುಂದ ಹೆಗ್ಡೆ, ಕುಂದಾಪುರದಿಂದ ಕಾಪು ಸಂಜೀವ ಶೆಟ್ಟಿ, ಬೈಂದೂರಿನಿಂದ ಗೋಪಾಲಕೃಷ್ಣ ಕೊಡ್ಗಿ, ಕಾರ್ಕಳದಿಂದ ಎಂ. ವೀರಪ್ಪ ಮೊಯ್ಲಿ, ಮೂಡುಬಿದಿರೆಯಿಂದ ದಾಮೋದರ ಮುಲ್ಕಿ ಮತ್ತು ಬಂಟ್ವಾಳದಿಂದ ನಾನು ಗೆದ್ದು ಬಂದಿದ್ದೆವು. ಮೇಲಿನ ಹೆಸರುಗಳನ್ನೆಲ್ಲ ನೆನಪಿಸುವಾಗ ಮೈ ಜುಂ ಎನ್ನುತ್ತದೆ. ಇವರೆಲ್ಲರೂ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜಾತ್ಯತೀತ, ಪ್ರಾಮಾಣಿಕ ಮತ್ತು ದಕ್ಷ ರಾಜಕೀಯ ಚರಿತ್ರೆಯನ್ನು ಬರೆದವರು. ಬಡವರ, ದೀನ ದಲಿತರ ಬದುಕನ್ನು ಸುಂದರಗೊಳಿಸಲು ತ್ಯಾಗ ಮನೋಭಾವದಿಂದ ದುಡಿದವರು. ಇವರಲ್ಲಿ ನನ್ನನ್ನು ಸಹಿತ ಕಾಂಗ್ರೆಸನ್ನು ಜಿಲ್ಲೆಯಲ್ಲಿ ಜಾತ್ಯತೀತವಾಗಿ ಕಟ್ಟಿ ಬೆಳೆಸಿದ ಅನೇಕ ನಾಯಕರ ರಾಜಕೀಯ ಬದುಕನ್ನು ಈ ಜನಾರ್ದನ ಪೂಜಾರಿ ಎಂಬ ವ್ಯಕ್ತಿ ಸರ್ವನಾಶ ಮಾಡಿದರು. ಮತ್ತು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮುವಾದಿ ರಾಜಕೀಯಕ್ಕೆ ಮುನ್ನುಡಿ ಬರೆದವರು ಈ ಜನಾರ್ದನ ಪೂಜಾರಿ.

ಶಾಸಕನಾಗಿ ಆಯ್ಕೆಯಾದ ನಂತರ ಜಾತಿ, ಮತ, ಭೇದವಿಲ್ಲದೆ ಆ ಪಕ್ಷ ಈ ಪಕ್ಷ ಎಂದು ನೋಡದೆ ಅತ್ಯಂತ ಪ್ರಾಮಾಣಿಕವಾಗಿ ಎಲ್ಲರ ಸೇವೆಯನ್ನು ಮಾಡಿದ್ದೆ. ನಾನು ಅತಿ ಹೆಚ್ಚು ಗಮನ ಹರಿಸಿದ್ದು ನನ್ನ ಕ್ಷೇತ್ರಾದ್ಯಂತ ಇದ್ದ ಬಡ ಗೇಣಿದಾರರ ಪರವಾಗಿ. ಭೂಸುಧಾರಣಾ ಕಾನೂನಿನ ಸಮರ್ಪಕ ಅನುಷ್ಠಾನಕ್ಕಾಗಿ ಅವಿರತ ದುಡಿದಿದ್ದೆ.

### ನನ್ನ ಶಾಸಕತ್ವದ ಅವಧಿ

ನಾನು ಶಾಸಕನಾಗುವುದಕ್ಕೂ ಮೊದಲೇ ಭೂಸುಧಾರಣೆಯ ಕಾನೂನಿನಡಿ ಗೇಣಿದಾರರಿಗೆ ಮಾರ್ಗದರ್ಶನ, ಧೈರ್ಯ ತುಂಬಿ ಅವರಿಂದ ಡಿಕ್ಲರೇಶನ್ ಕೊಡಿಸಲು ಗುರುಪುರ ಫಿರ್ಕದಾದ್ಯಂತ ಸಾಧ್ಯವಾದಷ್ಟು ಕೆಲಸ ಮಾಡಿದ್ದೆ. 1973ರಲ್ಲಿ ಒಂದು ಬಹಳ ದೊಡ್ಡ ನೆರೆ ಬಂದಿತ್ತು. ಆ ನೆರೆ ಬಂದಾಗ ಬಜಪೆ ಸಮೀಪದ ಅದ್ಯಪಾಡಿ ಮತ್ತು ಕೊಳಂಬೆ ಗ್ರಾಮಗಳಲ್ಲಿ ಅನೇಕ ಮನೆಗಳು ಹಾನಿಗೊಂಡು ಆ ಗ್ರಾಮದ ಜನರು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದರು. ಅದರಲ್ಲಿ ಹೆಚ್ಚಿನವರು ಜಮೀನ್ದಾರರ ಮನೆಯಲ್ಲಿ, ಹೊಲದಲ್ಲಿ ಜೀತದಾಳುಗಳಂತೆ ದುಡಿಯುತ್ತಿದ್ದ ಕಡು ಬಡವರಾಗಿದ್ದರು. ಆಗ ಶ್ರೀಮಂತ ಜಮೀನ್ದಾರರು ಅವರಿಗೆ ಯಾವುದೇ ಸಹಾಯ ಮಾಡುತ್ತಲೂ ಇರಲಿಲ್ಲ ಅಥವಾ ಇತರರು ಪರ್ಯಾಯ ವ್ಯವಸ್ಥೆ ಮಾಡಲು ಸಹ ಬಿಡುತ್ತಿರಲಿಲ್ಲ.

ಆಗ ಬಜಪೆ ವಿಮಾನ ನಿಲ್ದಾಣದ ಆ ಕಡೆ ಅದ್ಯಪಾಡಿಯಲ್ಲಿ ಮೇವು ಎಂಬ ಒಂದು ಗುಡ್ಡ ಪ್ರದೇಶವಿತ್ತು. ಆಗ ಕೊಳಂಬೆ ಗ್ರಾಮದಲ್ಲಿ ಸರ್ವಸ್ವವನ್ನು ಕಳೆದುಕೊಂಡ ಆ ಬಡವರಿಗೆ ಮೇವು ಎಂಬಲ್ಲಿ 5–10–15 ಸೆಂಟ್ಸ್ ಜಾಗವನ್ನು ಮಂಜೂರು ಮಾಡಿಸಿ ಅವರು ಮನೆ ಕಟ್ಟಿ ಕೂರಲು ಕ್ರಮ, ಹಕ್ಕುಪತ್ರ ಪಡೆಯಲು ನಾನು ಶ್ರಮಿಸಿದ್ದೆ.

ಅನಂತರ ಬಜಪೆ ವಿಮಾನ ನಿಲ್ದಾಣ ವಿಸ್ತರಣೆಯಾಗುವ ಸಂದರ್ಭದಲ್ಲಿ ಈ ಪುನರ್ವಸತಿ ಕಾಲನಿ ಸಹ ಭೂಸ್ವಾಧೀನಕ್ಕೊಳಗಾದಾಗ ಅವರಿಗೆ ಕೊಳಂಬೆ ಗ್ರಾಮದ ಆದರ್ಶ ನಗರದಲ್ಲಿ ಸೈಟುಗಳು ಸಿಕ್ಕಿ ಉತ್ತಮ ಪರಿಹಾರವೂ ದೊರಕಿ ಅವರೆಲ್ಲರೂ ಈಗ ಸುಂದರವಾದ ತಾರಸಿ ಮನೆಗಳನ್ನು ಕಟ್ಟಿ ವಾಸಿಸುತ್ತಿದ್ದಾರೆ. ಆ ಸಂದರ್ಭದಲ್ಲಿ ಸರಕಾರವು ಈ ನಿರ್ವಸಿತರನ್ನು ಮುಚ್ಚೂರು ಗ್ರಾಮದ ನೀರುಡೆ ಎಂಬ ದೂರದ ಪ್ರದೇಶಕ್ಕೆ ಸ್ಥಳಾಂತರಿಸಲು ಯೋಚಿಸಿತ್ತು. ಆದರೆ ನಾನು ಅದಕ್ಕೆ ಅವಕಾಶವನ್ನು ಕೊಡದೆ ಅವರಿಗೆ ಕೊಳಂಬೆ ಗ್ರಾಮದಲ್ಲೇ ಪುನರ್ವಸತಿಯನ್ನು ಕಲ್ಪಿಸಿಕೊಟ್ಟೆ. ಅದೂ ಸಹ ಖಾಸಗಿ ಜಾಗವನ್ನು ಸರಕಾರದ ಮೂಲಕ ಸ್ವಾಧೀನಪಡಿಸಿಕೊಂಡು ಈ ನಿರ್ವಸಿತರಿಗೆ ಹಂಚಿಕೆ ಮಾಡಿಸಿದೆ. ವಿಶೇಷವೆಂದರೆ ಕಾರವಾರ ಸೀಬರ್ಡ್ ಪ್ರಾಜೆಕ್ಟ್‌ನಲ್ಲಿ ನಿರ್ವಸಿತರಿಗೆ ನೀಡಲಾಗಿದ್ದ ಪರಿಹಾರ ಪ್ಯಾಕೇಜನ್ನೇ ಬಜಪೆ ವಿಮಾನ ನಿಲ್ದಾಣದ ನಿರ್ವಸಿತರಿಗೂ ನಾನು ಮಂತ್ರಿಯಾಗಿದ್ದಾಗ ಕೊಡಿಸಿದ್ದೆ.

ಭೂಮಸೂದೆ ಕಾನೂನು ಜಾರಿಯಾಗುವ ಸಂದರ್ಭದಲ್ಲಿ ಇಲ್ಲಿಯ ದನಿ–ಒಕ್ಕಲು ಮಧ್ಯೆ ಪರಸ್ಪರ ವಿಶ್ವಾಸದ ಒಳ್ಳೆಯ ಬಾಂಧವ್ಯವಿತ್ತು. ಹಾಗಾಗಿ ಗೇಣಿದಾರರ ಕೈಯಲ್ಲಿ ತಾನು ಗೇಣಿ ಮಾಡುತ್ತಿದ್ದೇನೆ ಎನ್ನುವುದಕ್ಕೆ ಅವರಲ್ಲಿ ಯಾವುದೇ ದಾಖಲೆ ಇರಲಿಲ್ಲ. ವರ್ಷಾನುಗಟ್ಟಲೆಯಿಂದ ಗೇಣಿದಾರರಾಗಿ ದುಡಿಯುತ್ತಿದ್ದರೂ ಗೇಣಿಯನ್ನು ಕೊಡುತ್ತಿದ್ದರೂ ಜಮೀನ್ದಾರನ ಬಿಟ್ಟಿ ಚಾಕರಿ ಮಾಡುತ್ತಿದ್ದರೂ ಅವನ ಬಳಿ ಭೂಮಿಗೆ ಸಂಬಂಧಿಸಿದ ಒಂದು ಚಿಕ್ಕ ದಾಖಲೆಯಾಗಲೀ ಗೇಣಿ ಕೊಟ್ಟದ್ದಕ್ಕೆ ಒಂದು ರಸೀದಿಯಾಗಲೀ ಗುರುಪುರ ಫಿರ್ಕದ ಯಾವ ಗೇಣಿದಾರರ ಬಳಿಯಲ್ಲೂ ಇರಲಿಲ್ಲ. ಎಲ್ಲ ದಾಖಲೆಗಳೂ ಭೂಮಾಲಕರ ಬಳಿಯಲ್ಲೇ ಇತ್ತು. ಹಾಗಾಗಿ ಕುಪ್ಪೆಪದವು, ಎಡಪದವು, ಕೊಳಂಬೆ, ಅದ್ಯಪಾಡಿ, ಗುರುಪುರದಲ್ಲಿ ತುಂಬಾ ಘರ್ಷಣೆಗಳು ನಡೆದಿದ್ದವು.

ಕೊಳಂಬೆ ಗ್ರಾಮದಲ್ಲಿ ಮೊನ ಮೂಲ್ಯ ಎಂಬ ಬಡ ಗೇಣಿದಾರನಿಗೆ ಹತ್ತು ಎಕರೆಯಷ್ಟು ಗದ್ದೆ ಇತ್ತು. ಆದರೆ ಆ ಮೊನ ಮೂಲ್ಯನ ಬಳಿ ಅದಕ್ಕೆ ಯಾವುದೇ ದಾಖಲೆ ಇರಲಿಲ್ಲ. ಅವರಿಗೆ ಡಿಕ್ಲರೇಶನ್ ಕೊಡಲು ಧೈರ್ಯವೂ ಇರಲಿಲ್ಲ. ನಾನು ಅವರಿಗೆ ಧೈರ್ಯ ತುಂಬಿ, ನಿಮಗೇನು ತೊಂದರೆ ಬಂದರೂ ನಾನಿದ್ದೇನೆ ಎಂದು ಹೇಳಿ ಅವರ ಮೂಲಕ ಕಾನೂನು ಸಮರವನ್ನೇ ಪ್ರಾರಂಭಿಸಿದೆ. ಆ ವ್ಯಾಜ್ಯ ಈಗಲೂ ಹೈಕೋರ್ಟ್‌ನಲ್ಲಿ ತೀರ್ಪಿಗೆ ಬಾಕಿ ಇದೆ. ಆ ಮೊನ ಮೂಲ್ಯ ಇತ್ತೀಚೆಗೆ ತನ್ನ 95ನೇ ವರ್ಷ ಪ್ರಾಯದಲ್ಲಿ ತೀರಿಕೊಂಡರು. ಅವರ ವ್ಯಾಜ್ಯ ತೀರ್ಪಿಗೆ ಬಾಕಿ ಇದ್ದರೂ ಅವರ ಕುಟುಂಬ ಆ ಹತ್ತು ಎಕರೆ ಪ್ರದೇಶದಲ್ಲಿ ಸ್ವಾಧೀನ ಹೊಂದಿ ಬದುಕುತ್ತಿದೆ.

ಕೊಳಂಬೆ ಗ್ರಾಮದ ಮಧ್ಯಭಾಗದಲ್ಲಿ ತಿಮ್ಮ ಮೂಲ್ಯ ಎಂಬ ಹೆಸರಿನ ಒಬ್ಬ ಗೇಣಿದಾರರಿದ್ದು ಅವರ ಪರಿಸ್ಥಿತಿಯೂ ಹೀಗೆಯೇ ಇತ್ತು. ಅವರಿಗೂ ಇದೇ ರೀತಿ ಧೈರ್ಯ ಕೊಟ್ಟು ನ್ಯಾಯ ಸಿಗುವಂತೆ ಮಾಡಿದ್ದೆ.

ಅದೇ ಕೊಳಂಬೆ ಗ್ರಾಮದಲ್ಲಿ ಯಮುನಾ ಎನ್ನುವ ಪರಿಶಿಷ್ಟ ಜಾತಿಗೆ ಸೇರಿದ

ಮಹಿಳೆ ಇದ್ದರು. ಅವರ ಗಂಡ ತೀರಿಕೊಂಡಿದ್ದರು. ಸಣ್ಣ ಸಣ್ಣ ಮಕ್ಕಳು. ಅವರು ಗೇಣಿ ಮಾಡಿಕೊಂಡಿದ್ದಂತಹ ಭೂಮಿಯಿಂದ ಅವರನ್ನು ಬಲಾತ್ಕಾರವಾಗಿ ಹೊರದಬ್ಬಲು ಜಮೀನು ಮಾಲಕ ದಬ್ಬಾಳಿಕೆಯನ್ನು ಮಾಡಿದ್ದ. ಆ ವಿಧವೆಗೂ ಧೈರ್ಯ ಕೊಟ್ಟು ಅವರ ಭೂಮಿ ಸಿಗುವಂತೆ ಮಾಡಿದ್ದೆ.

ಕೊಳಂಬೆ ಗ್ರಾಮದ ಗಡಿಯಲ್ಲಿ ಒಬ್ಬ ಗೇಣಿದಾರ ಬೈರೋ ಶೆಟ್ಟಿ ಎಂಬವರಿದ್ದರು. ತುಂಬಾ ವೃದ್ಧ. ಅವರ ಭೂಮಾಲಕ ತುಂಬಾ ಶ್ರೀಮಂತ ಹಾಗೂ ಪ್ರಭಾವಿ ವ್ಯಕ್ತಿಯಾಗಿದ್ದರು. ಬೈರೋ ಶೆಟ್ಟಿ ಕುಟುಂಬವನ್ನು ಬಲಾತ್ಕಾರವಾಗಿ ಹೊರದಬ್ಬಲು ಪ್ರಯತ್ನಿಸಿದ್ದರು. ಪೊಲೀಸ್ ಠಾಣೆ ಮತ್ತು ಅಧಿಕಾರಿಗಳಲ್ಲಿ ಆತನಿಗೆ ಬಹಳ ಪ್ರಭಾವವಿತ್ತು. ಬೈರೋ ಶೆಟ್ಟಿಯ ಹೆಂಡತಿ ಹೊಲದಲ್ಲಿ ಕೆಲಸ ಮಾಡುತ್ತಿರುವಾಗ ಭೂಮಾಲಕನ ಜನರು ಬಂದು ಅವಳ ಎರಡೂ ಕೈಗಳನ್ನು ಹಗ್ಗದಿಂದ ಕಟ್ಟಿ ಹಿಗ್ಗಾಮುಗ್ಗಾ ಥಳಿಸಿದ್ದರು. ಅದೇ ಸ್ಥಿತಿಯಲ್ಲಿ ಆ ಮಹಿಳೆ ಅಳುತ್ತಾ ನನ್ನ ಮನೆ ಬಾಗಿಲಿಗೆ ಬಂದಿದ್ದಳು. ನಾನು ತಕ್ಷಣ ಕಾರ್ಯಪ್ರವೃತ್ತನಾಗಿ ಆ ಕುಟುಂಬಕ್ಕೆ ಪೊಲೀಸ್ ರಕ್ಷಣೆಯನ್ನು ಕೊಡಿಸಿ ಧೈರ್ಯ ತುಂಬಿದ್ದೆ. ಆ ಕುಟುಂಬ ಈಗ ತಾವು ಉಳುತ್ತಿದ್ದ ಭೂಮಿಗೆ ಒಡೆಯರಾಗಿ ನೆಮ್ಮದಿಯ ಬದುಕು ಬದುಕುತ್ತಿದೆ.

**ಸೇಮಿತ ಕೊಲೆ ಪ್ರಕರಣ**

ಪಡುಪೆರಾರದಲ್ಲಿ ರಾಘವ ಕೋಟ್ಯಾನ್ ಎಂಬ ಗೇಣಿದಾರನಿಗೂ ಭಾಸ್ಕರ ಸೇಮಿತ ಎಂಬ ಭೂಮಾಲಕರಿಗೂ ತಕರಾರಿತ್ತು. ರಾಘವ ಕೋಟ್ಯಾನ್ ಕೊಳಂಬೆ ಗ್ರಾಮದ ಆರು ಜನ ಬಡ ಕೃಷಿ ಕೂಲಿಗಾರರನ್ನು ಕರೆದುಕೊಂಡು ಹೋಗಿ ತನ್ನ ಗದ್ದೆಯ ಕೊಯ್ಲನ್ನು ಮಾಡುತ್ತಿರುವಾಗ ಭೂಮಾಲಕ ಸೇಮಿತ ಮತ್ತು ಅವರ ಕಡೆಯವರು ರಾಘವ ಕೋಟ್ಯಾನ್ ಅವರ ಮೇಲೆ ಹಲ್ಲೆ ನಡೆಸಿದರು. ಘರ್ಷಣೆಯ ಸಂದರ್ಭದಲ್ಲಿ ಸೇಮಿತ ಅವರಿಗೆ ಕತ್ತಿಯ ಗಾಯವಾಗಿ ಚಿಕಿತ್ಸೆ ಫಲಕಾರಿಯಾಗದೆ ಸಾವನ್ನಪ್ಪಿದರು. ಕೂಲಿ ಕಾರ್ಮಿಕರಾಗಿ ಹೋಗಿದ್ದ ಕೊಳಂಬೆ ಗ್ರಾಮದ ಈ ಆರು ಜನರನ್ನು ಸಹ ಕೇಸಿನಲ್ಲಿ ಸೇರಿಸಲಾಯಿತು ಮತ್ತು ಅವರೆಲ್ಲ ಜೈಲು ಸೇರಿದರು. ಆರೂ ಜನ ಕೂಲಿಕಾರ್ಮಿಕರ ಕುಟುಂಬಗಳು ನಿರ್ಗತಿಕವಾದವು. ಆಗ ನಾವೆಲ್ಲ ಸೇರಿ ಈ ಬಡವರ ಸಹಾಯಕ್ಕೆ ನಿಂತೆವು. ಆರ್ಥಿಕ ಹಾಗೂ ಕಾನೂನಿನ ಎಲ್ಲ ನೆರವನ್ನು ಅವರಿಗೆ ನೀಡಿದೆವು. ಮಂಗಳೂರಿನ ಪ್ರಖ್ಯಾತ ನ್ಯಾಯವಾದಿ ಯೂಸುಫ್ ಹೈದರ್ ಅವರು ಈ ಬಡವರಿಗಾಗಿ ವಾದಿಸಿದ್ದರು. ಆಗ ಈ ಜನಾರ್ದನ ಪೂಜಾರಿ ಯೂಸುಫ್ ಹೈದರ್ ಅವರಿಗೆ ಸಹಾಯಕ ನ್ಯಾಯವಾದಿಯಾಗಿದ್ದರು. ತೀರ್ಪು ಗೇಣಿದಾರರ ಪರವಾಗಿ ಬಂದು ಕೇಸು ಬಿದ್ದುಹೋಯಿತು.

ದುಃಖದ ವಿಷಯವೆಂದರೆ ನ್ಯಾಯಾಲಯದಲ್ಲಿ ಈ ಮೊಕದ್ದಮೆಯ ವಾದವನ್ನು ಮಂಡಿಸುತ್ತಿರುವಾಗಲೇ ವಕೀಲ ಯೂಸುಫ್ ಹೈದರ್ ಅವರು ಅಸ್ವಸ್ಥರಾದರು.

ಅದು ಮೂರು ದಿನಗಳ ಸುದೀರ್ಘ ವಾದವಾಗಿತ್ತು. ಕೊನೆಯ ದಿನ ವಾದ ಮಂಡಿಸುತ್ತಿರುವಾಗಲೇ ಮತ್ತೆ ಅಸ್ವಸ್ಥರಾದ ಅವರು ನ್ಯಾಯಾಧೀಶರ ಅನುಮತಿಯನ್ನು ಪಡೆದು ನ್ಯಾಯಾಲಯದಿಂದ ಹೊರಗೆ ಬಂದು ಸ್ವಲ್ಪ ಹೊತ್ತು ವಿಶ್ರಾಂತಿಯನ್ನು ಪಡೆದು, ಪುನಃ ವಾದ ಮಂಡಿಸಿದರು. ವಾದ ಮುಗಿದ ನಂತರ ಅವರನ್ನು ನೇರವಾಗಿ ನ್ಯಾಯಾಲಯದಿಂದ ಮಂಗಳೂರಿನ ಫಾದರ್ ಮುಲ್ಲರ್ ಆಸ್ಪತ್ರೆಗೆ ದಾಖಲಿಸಲಾಯಿತು. ಅಲ್ಲಿ ಒಂದೆರಡು ವಾರಗಳ ಚಿಕಿತ್ಸೆಯ ಹೊರತಾಗಿಯೂ ದಿನಾಂಕ 5–9–1975ದಂದು ಯೂಸುಫ್ ಹೈದರ್ ನಿಧನ ಹೊಂದಿದರು. ಅಂದು ಬಿಡುಗಡೆಗೊಂಡ ಆ ಗೇಣಿದಾರರು ಮತ್ತು ಕಾರ್ಮಿಕರ ಕುಟುಂಬ ಇಂದು ಸುಂದರವಾದ ನೆಮ್ಮದಿಯ ಬದುಕನ್ನು ಸಾಗಿಸುತ್ತಿದ್ದು ಅವರ ಕುಟುಂಬದಲ್ಲಿ ಅನೇಕರು ವಿದ್ಯಾವಂತರಾಗಿ ಒಳ್ಳೊಳ್ಳೆಯ ಹುದ್ದೆಗಳಲ್ಲಿದ್ದಾರೆ.

ಮೊಕದ್ದಮೆ ನಡೆಯುತ್ತಿದ್ದ ಸಂದರ್ಭದಲ್ಲಿ ನನಗೆ ತಿಳಿದುಬಂದ ಮತ್ತೊಂದು ವಿಷಯ ಏನೆಂದರೆ, ರಾಘವ ಕೋಟ್ಯಾನ್‌ರವರು ಭಾಸ್ಕರ ಸೇಮಿತರ ಗೇಣಿದಾರರಲ್ಲ. ಆ ಭೂಮಾಲಕ ಬೇರೆಯೇ ಆಗಿದ್ದರು. ಆ ಭೂಮಾಲಕರಿಗೂ, ರಾಘವ ಕೋಟ್ಯಾನ್ ಮತ್ತು ಅವರ ಜೊತೆಗಿದ್ದ ಕೃಷಿ ಕಾರ್ಮಿಕರಿಗೂ ಘರ್ಷಣೆ ನಡೆಯುತ್ತಿದ್ದಾಗ ಅಲ್ಲಿಗೆ ಧಾವಿಸಿದ್ದ ಭಾಸ್ಕರ ಸೇಮಿತರು ಘರ್ಷಣೆಯನ್ನು ತಪ್ಪಿಸಲು ಮಧ್ಯೆ ಪ್ರವೇಶಿಸಿದ್ದರು. ಆದರೆ ತಪ್ಪು ತಿಳುವಳಿಕೆಯಿಂದಾಗಿಯೋ ಅಥವಾ ಆಕಸ್ಮಿಕವಾಗಿಯೋ ಭಾಸ್ಕರ ಸೇಮಿತ ಅವರಿಗೆ ಕತ್ತಿ ಇರಿತವಾಗಿತ್ತು. ಇದರಿಂದ ಅವರು ಸಾವನ್ನಪ್ಪಿದ್ದರು. ವಾಸ್ತವದಲ್ಲಿ ಭಾಸ್ಕರ ಸೇಮಿತರು ಒಬ್ಬ ಪ್ರಗತಿಪರ ಕೃಷಿಕ ಮತ್ತು ಭೂಮಾಲಕರಾದರೂ ಶ್ರಮಿಕ ವರ್ಗದೊಡನೆ ತನ್ನನ್ನು ಗುರುತಿಸಿಕೊಂಡವರು. ಗೇಣಿದಾರರಿಗೆ ಸ್ವಇಚ್ಛೆಯಿಂದ ಸ್ವಂತ ಭೂಮಿಯನ್ನು ಬಿಟ್ಟುಕೊಟ್ಟವರು. ಸೇಮಿತ ಅವರ ದುರ್ಮರಣಕ್ಕಾಗಿ ಅಂದು ಇಡೀ ಊರಿಗೆ ಊರೇ ಕಣ್ಣೀರಿಟ್ಟಿತ್ತು.

### ಕಲ್ಲಡ್ಕ ಇಸ್ಮಾಈಲ್ ಕೊಲೆ ಪ್ರಕರಣ

ಇಡೀ ರಾಜ್ಯದ ಗಮನವನ್ನು ಸೆಳೆದಿದ್ದ ಮತ್ತೊಂದು ಭೀಕರ ಘಟನೆ ಎಂದರೆ ಕಲ್ಲಡ್ಕ ಇಸ್ಮಾಈಲ್ ಕೊಲೆ ಪ್ರಕರಣ. ಸ್ಥಳೀಯ ಕಾಂಗ್ರೆಸ್ ಮುಖಂಡನಾಗಿದ್ದ ಈ ಕಲ್ಲಡ್ಕ ಇಸ್ಮಾಈಲ್ ಓರ್ವ ಸಮಾಜಸೇವಕ. ಎಲ್ಲರ ಸುಖ, ದುಃಖಗಳಲ್ಲಿ ಪಾಲ್ಗೊಂಡು, ಸಂಕಷ್ಟದಲ್ಲಿರುವವರಿಗೆ ಸಹಾಯಹಸ್ತ ನೀಡುತ್ತಿದ್ದ. ತನ್ನ ನಿಸ್ವಾರ್ಥ ಸೇವೆಯಿಂದಾಗಿ ಅತ್ಯಂತ ಜನಪ್ರಿಯವಾಗಿದ್ದ ವ್ಯಕ್ತಿ. ಭೂಸುಧಾರಣಾ ಕಾನೂನು ಜಾರಿಯಾದ ಸಂದರ್ಭದಲ್ಲಿ ಬಡ ಗೇಣಿದಾರರ ಪರವಾಗಿ ಅತೀ ಹೆಚ್ಚು ಕೆಲಸ ಮಾಡಿದವನು. ಇದರಿಂದಾಗಿ ಇಸ್ಮಾಈಲ್ ಸ್ಥಳೀಯ ಭೂಮಾಲಕರ ಕೆಂಗಣ್ಣಿಗೆ ಗುರಿಯಾಗಿದ್ದ.

ಇಸ್ಮಾಈಲ್‌ಗೆ ಕಲ್ಲಡ್ಕ ಪೇಟೆಯಲ್ಲಿ ಒಂದು ಕಟ್ಲೆರಿ ಅಂಗಡಿ ಇತ್ತು. ಅದು ರಮಝಾನ್ ತಿಂಗಳು. ಸಂಜೆಯ ಹೊತ್ತು ಅವನ ಅಂಗಡಿಯ ಎದುರು ಪೊಲೀಸ್ ಜೀಪೊಂದು

ಬಂದು ನಿಂತಿತು. ಆ ಜೀಪಿನಿಂದ ಇಳಿದು ಬಂದ ಒಬ್ಬ ಪೊಲೀಸ್ ಕಾನ್‌ಸ್ಟೇಬಲ್ ಇಸ್ಮಾಈಲ್‌ನೊಂದಿಗೆ "ಎಸ್ಸೈ ಸಾಹೇಬರಿಗೆ ನಿಮ್ಮಲ್ಲಿ ಸ್ವಲ್ಪ ಮಾತನಾಡಲಿಕ್ಕಿದೆಯಂತೆ, ಕರೆಯುತ್ತಿದ್ದಾರೆ" ಎಂದು ಹೇಳಿದ. ಇಸ್ಮಾಈಲ್ ಇಣುಕಿ ನೋಡಿದಾಗ ಪೊಲೀಸ್ ಜೀಪಿನಲ್ಲಿ ಎಸ್ಸೈ ಮತ್ತು ಕೆಲವು ಪೊಲೀಸರು ಇದ್ದರು. ಅಂಗಡಿಯ ಬಾಗಿಲು ಮುಚ್ಚಿ ಪೊಲೀಸ್ ಜೀಪಿನ ಬಳಿ ಹೋದ ಇಸ್ಮಾಈಲ್‌ನನ್ನು ಎಸ್ಸೈ "ಬನ್ನಿ, ಜೀಪಿನಲ್ಲಿ ಕುಳಿತುಕೊಳ್ಳಿ. ಸ್ವಲ್ಪ ಸ್ಟೇಶನ್‌ವರೆಗೆ ಹೋಗಿ ಬರೋಣ" ಎಂದರು. ಇಸ್ಮಾಈಲ್ ಪೊಲೀಸ್ ಜೀಪು ಹತ್ತಿದ.

ನಿಜವಾಗಿಯೂ ಅದು ಪೊಲೀಸ್ ಜೀಪು ಆಗಿರಲಿಲ್ಲ. ಅದರಲ್ಲಿದ್ದವರೆಲ್ಲ ಪೊಲೀಸ್ ವೇಷಧಾರಿಗಳಾಗಿದ್ದರು. ಹಾಗೆ ಜೀಪಿನ ಮುಂದಿನ ಸೀಟಿನಲ್ಲಿ ಇಸ್ಮಾಈಲ್‌ನನ್ನು ಕುಳ್ಳಿರಿಸಿಕೊಂಡು ಹೋಗುವಾಗ ಹಿಂದಿನ ಸೀಟಿನಲ್ಲಿದ್ದವರು ಇಸ್ಮಾಈಲ್ ಕೊರಳನ್ನು ನೈಲನ್ ಹಗ್ಗದಲ್ಲಿ ಬಿಗಿದು ಕೊಲೆ ಮಾಡಿದ್ದರು. ಮೂರು ದಿನಗಳ ಬಳಿಕ ಇಸ್ಮಾಈಲ್‌ನ ಮೃತದೇಹ ಸರಪಾಡಿ ಬಳಿ ಹೊಳೆಯ ಬದಿ ಪತ್ತೆಯಾಗಿತ್ತು.

ಈ ಕೇಸ್‌ನಲ್ಲಿ ಮಹಾಬಲ ದೇವಾಡಿಗ, ಪುರಂದರ ಭಟ್, ಪ್ರಭಾಕರ ಭಟ್, ಜೀಪು ಮಾಲಕ ನೆರಿಯದ ಒಬ್ಬ ವ್ಯಕ್ತಿ ಮತ್ತಿತರರು ಆರೋಪಿಗಳಾಗಿದ್ದರು. ಪೊಲೀಸರು ಅತ್ಯುತ್ತಮ ರೀತಿಯಲ್ಲಿ ತನಿಖೆಯನ್ನು ಮಾಡಿ ಬಲವಾದ ಚಾರ್ಜ್‌ಶೀಟ್ ಹಾಕಿದ್ದರು ಮತ್ತು ಸರಕಾರಿ ವಕೀಲರು ಪ್ರಬಲವಾದ ವಾದ ಮಂಡಿಸಿದ್ದರೂ ಆ ಕೇಸು ಬಿದ್ದುಹೋಯಿತು. ಈ ರೀತಿ ಆರೋಪ ಸಾಬೀತಾಗಲೇಬೇಕಾಗಿದ್ದ ಈ ಪ್ರಕರಣ ಬಿದ್ದುಹೋಗಲು ಒಂದು ನಿರ್ದಿಷ್ಟವಾದ ಕಾರಣವಿತ್ತು. ಅದನ್ನು ನಾನು ಇಲ್ಲಿ ದಾಖಲಿಸಲು ಇಷ್ಟಪಡುವುದಿಲ್ಲ.

ಭೂಮಾಲಕ ಗೇಣಿದಾರರ ಮಧ್ಯೆ ಅತೀ ಹೆಚ್ಚು ಘರ್ಷಣೆ ನಡೆದ ಪ್ರದೇಶವಿದ್ದರೆ ಅದು ದಕ್ಷಿಣಕನ್ನಡ ಜಿಲ್ಲೆಯ ಗುರುಪುರ ಫಿರ್ಕದಲ್ಲಿ. ಇಲ್ಲಿಯ ಭೂಮಾಲಕರು ಬಹಳ ಪ್ರಭಾವಶಾಲಿಯಾಗಿದ್ದರು. ಅದೇ ಸಂದರ್ಭದಲ್ಲಿ ಗೇಣಿದಾರರು, ಬಡವರು, ಅನಕ್ಷರಸ್ಥರಾಗಿದ್ದು, ಅವರ ಕೈಯಲ್ಲಿ ಗೇಣಿ ಮಾಡುತ್ತಿರುವುದಕ್ಕೆ ಯಾವುದೇ ದಾಖಲೆಗಳಿರಲಿಲ್ಲ. ಬಿ. ಸುಬ್ಬಯ್ಯ ಶೆಟ್ಟಿಯವರು ಆಗ ಭೂಸುಧಾರಣಾ ಮಂತ್ರಿಯಾಗಿದ್ದರು. ಅವರ ಬೆಂಬಲ, ಧೈರ್ಯದಿಂದಾಗಿ ಇಲ್ಲಿಯ ಗೇಣಿದಾರರು ಯಶಸ್ವಿಯಾಗಲು ಸಾಧ್ಯವಾಯಿತು. ಆಂದೋಲನ ರೂಪದಲ್ಲಿ ನಡೆಯುತ್ತಿದ್ದ ಭೂಸುಧಾರಣಾ ಕಾನೂನಿನ ಯಶಸ್ಸನ್ನು ಗಮನಿಸಿದ ಮುಖ್ಯಮಂತ್ರಿ ದೇವರಾಜ ಅರಸು ಸ್ವತಃ ಇಲ್ಲಿಗೆ ಭೇಟಿ ನೀಡಿದ್ದರು. ಅವರು ಬರಲು ಸಚಿವ ಬಿ. ಸುಬ್ಬಯ್ಯ ಶೆಟ್ಟಿ ಕಾರಣರಾಗಿದ್ದರು. ಸಹಸ್ರಾರು ಗೇಣಿದಾರರ ಸಭೆ ಸೇರಿಸಿ ಅರಸು ಭಾಷಣ ಮಾಡಿ ಅವರಿಗೆ ಧೈರ್ಯ ತುಂಬಿದ್ದರು. ಜಮೀನುದಾರರ ಪುಂಡತನ ಎಷ್ಟು ಜೋರಿತ್ತೆಂದರೆ ಮಾನ್ಯ ಮುಖ್ಯಮಂತ್ರಿಗಳ ಕಾರಿಗೇ ಆ ಸಂದರ್ಭದಲ್ಲಿ ಕಲ್ಲು ಹೊಡೆಯಲು ಪ್ರಯತ್ನಿಸಿದ್ದರು.

ನಾನು ಈ ಹಿಂದೆಯೇ ಹೇಳಿದ್ದ ಕೊಳಂಬೆಯಲ್ಲಿ ಭೂಮಾಲಕರ ಅಟ್ಟಹಾಸ,

ದೌರ್ಜನ್ಯ ಬಹಳ ಜಾಸ್ತಿಯಿತ್ತು. ತಿಮ್ಮ ಮೂಲ್ಯ ಎಂಬವರು ಈ ಭೂಮಾಲಕರ ವಿರುದ್ಧ ಬಹಳ ಹೋರಾಟ ಮಾಡುತ್ತಿದ್ದರು. ತಿಮ್ಮ ಮೂಲ್ಯ ಅವರಿಗೆ ಆಮೇಲೆ ಪಾರ್ಶ್ವವಾಯು ಆಯಿತು. ಯಾರಾದರೂ ಅವರನ್ನು ಕಂಡು ಮಾತನಾಡಿಸಲು ಹೋದರೆ ಮಲಗಿದಲ್ಲಿಂದಲೇ ನನ್ನ ಮನೆಯತ್ತ ಕೈ ತೋರಿಸುತ್ತಿದ್ದರಂತೆ (ನನ್ನ ಮನೆಗೆ ಹೋಗಿ ನನ್ನನ್ನು ಮಾತನಾಡಿಸಿ ಎಂದು). ಇದನ್ನು ತಿಮ್ಮ ಮೂಲ್ಯರ ಅಳಿಯ ನನಗೆ ಹೇಳುತ್ತಿದ್ದರು. ಅಂತಹ ನಿಸ್ವಾರ್ಥ ಕಾರ್ಯಕರ್ತರು ಅಂದು ನನ್ನ ಜೊತೆಗಿದ್ದರು. ತಿಮ್ಮ ಮೂಲ್ಯ, ಬಜಪೆಯ ವಿನ್ಸೆಂಟ್, ಮುತ್ತೂರು ದೊಡ್ಡಯ್ಯ ಶೆಟ್ಟಿ, ಅಬೂಬಕರ್, ಬಡಗ ಎಡಪದವು ಪಂಚಾಯತ್ ಅಧ್ಯಕ್ಷ ರಾಮಣ್ಣ ತಂತ್ರಿ ಇವರನ್ನೆಲ್ಲ ನಾನು ಟ್ರಿಬ್ಯುನಲ್ ಮೆಂಬರ್ ಮಾಡಿದ್ದೆ. ಇವರೆಲ್ಲ ಗುರುಪುರ ಫಿರ್ಕದಲ್ಲಿ ಭೂಸುಧಾರಣಾ ಕಾನೂನನ್ನು ಜಾರಿಗೊಳಿಸುವಲ್ಲಿ ಹಗಲೂ ರಾತ್ರಿ ನಿಸ್ವಾರ್ಥವಾಗಿ ದುಡಿದವರು.

ನಾನು ಶಾಸಕನಾಗಿದ್ದಾಗ ಪ್ರತಿ ವರ್ಷ ಬಜಪೆಯಲ್ಲಿ ರೈತ ದಿನಾಚರಣೆಯನ್ನು ಆಚರಿಸುವ ಪದ್ಧತಿ ಜಾರಿಗೊಳಿಸಿದ್ದೆ. ಶಾಸಕರಾದ ಬಿ.ವಿ. ಕಕ್ಕಿಲ್ಲಾಯ, ರೊಡ್ರಿಗಸ್ ಸಹ ಎರಡು ಮೂರು ದಿನಗಳು ನಡೆಯುವ ಈ ರೈತ ದಿನಾಚರಣೆ ಕಾರ್ಯಕ್ರಮಗಳಲ್ಲಿ ಭಾಗವಹಿಸುತ್ತಿದ್ದರು. ಗ್ರಾಮೀಣ ಕ್ರೀಡೆಗಳು, ಪಂದ್ಯಾಟಗಳು, ಸ್ಪರ್ಧೆಗಳು, ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸುತ್ತಿದ್ದೆವು. ಈ ಸಂದರ್ಭದಲ್ಲಿ ರೈತರು, ಕೂಲಿ ಕಾರ್ಮಿಕರು, ಶ್ರಮಜೀವಿಗಳನ್ನು ಗುರುತಿಸಿ ಸನ್ಮಾನಿಸುತ್ತಿದ್ದೆವು. ದೊಡ್ಡಯ್ಯ ಶೆಟ್ಟಿ, ಅಬೂಬಕರ್ ಇಂತಹ ಅನೇಕ ನಿಷ್ಠಾವಂತ ಕಾರ್ಯಕರ್ತರು ನನ್ನ ಜೊತೆಗಿದ್ದರು.

**ಚಿಕ್ಕಮಗಳೂರು ಚುನಾವಣೆ**

1978ರಲ್ಲಿ ನಡೆದ ಚಿಕ್ಕಮಗಳೂರು ಲೋಕಸಭೆ ಉಪಚುನಾವಣೆ ಈ ದೇಶದ ರಾಜಕೀಯ ಇತಿಹಾಸದ ಒಂದು ಅವಿಸ್ಮರಣೀಯ ಘಟನೆ. ಕೇಂದ್ರದಲ್ಲಿ ಜನತಾ ಪಕ್ಷ ಪೂರ್ಣ ಬಹುಮತದೊಂದಿಗೆ ಆಡಳಿತ ನಡೆಸುತ್ತಿತ್ತು. ರಾಯಬರೇಲಿ ಕ್ಷೇತ್ರದಿಂದ ಸ್ಪರ್ಧಿಸಿದ್ದ ಶ್ರೀಮತಿ ಇಂದಿರಾ ಗಾಂಧಿ ಸೋತು ಲೋಕಸಭಾ ಸದಸ್ಯತ್ವವನ್ನು ಕಳೆದುಕೊಂಡಿದ್ದರು. ಬೇರೆ ಬೇರೆ ತನಿಖೆಗಳು, ಆಯೋಗಗಳ ಹೆಸರಿನಲ್ಲಿ ಇಂದಿರಾ ಗಾಂಧಿಯವರಿಗೆ ತೀವ್ರ ಕಿರುಕುಳ ನೀಡಲಾಗುತ್ತಿತ್ತು. ದೇಶಾದ್ಯಂತ ಇಂದಿರಾ ಕಾಂಗ್ರೆಸ್ ಸೋತಿದ್ದರೂ ಕರ್ನಾಟಕದಲ್ಲಿ ದೇವರಾಜ ಅರಸು ಅವರ ನೇತೃತ್ವದಲ್ಲಿ ಇಂದಿರಾ ಕಾಂಗ್ರೆಸ್ ಪ್ರಚಂಡ ಬಹುಮತದೊಂದಿಗೆ ಆಡಳಿತ ನಡೆಸುತ್ತಿತ್ತು. ಈ ಹಂತದಲ್ಲಿ ದೇವರಾಜ ಅರಸು ಅವರು ಹೇಗಾದರೂ ಮಾಡಿ ಇಂದಿರಾ ಗಾಂಧಿ ಅವರನ್ನು ಲೋಕಸಭೆಗೆ ಮತ್ತೊಮ್ಮೆ ಪ್ರವೇಶಿಸುವಂತೆ ಮಾಡಲು ಪಣ ತೊಟ್ಟರು.

1977ರ ಚುನಾವಣೆಯಲ್ಲಿ ಡಿ.ಬಿ. ಚಂದ್ರೇಗೌಡರು ಚಿಕ್ಕಮಗಳೂರು ಕ್ಷೇತ್ರದಿಂದ ಭಾರೀ ಬಹುಮತದೊಂದಿಗೆ ಗೆದ್ದು ಲೋಕಸಭಾ ಸದಸ್ಯರಾಗಿದ್ದರು. ಚಂದ್ರೇಗೌಡರು ದೇವರಾಜ ಅರಸು ಅವರ ಅತ್ಯಂತ ಪ್ರೀತಿಯ ಅಭಿಮಾನಿಯಾಗಿದ್ದರು. ಅರಸು

ಅವರು ಚಿಕ್ಕಮಗಳೂರು ಕ್ಷೇತ್ರವೇ ಇಂದಿರಾ ಗಾಂಧಿ ಅವರಿಗೆ ಗೆಲ್ಲಲು ಅತ್ಯಂತ ಸುರಕ್ಷಿತ ಕ್ಷೇತ್ರವೆಂದು ಪರಿಗಣಿಸಿ, ಚಂದ್ರೇಗೌಡರಿಂದ ಲೋಕಸಭಾ ಸದಸ್ಯತ್ವಕ್ಕೆ ರಾಜೀನಾಮೆ ಕೊಡಿಸಿದರು. ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆ ಘೋಷಣೆ ಯಾಯಿತು. ಇಂದಿರಾ ಗಾಂಧಿ ಸ್ಪರ್ಧಿಸುವುದು ಖಚಿತವಾಗುತ್ತಿದ್ದಂತೆಯೇ ಜನತಾ ಪಕ್ಷ ಅವರನ್ನು ಸೋಲಿಸಲು ಸಿದ್ಧತೆ ಪ್ರಾರಂಭಿಸಿತು. ಇಂದಿರಾ ಗಾಂಧಿಯವರ ವಿರುದ್ಧ ಕನ್ನಡದ ವರನಟ ಡಾ. ರಾಜ್‌ಕುಮಾರ್ ಅವರನ್ನು ಕಣಕ್ಕಿಳಿಸಲು ಜನತಾ ಪಕ್ಷದ ನೇತಾರರು ಶತಾಯ ಗತಾಯ ಪ್ರಯತ್ನಿಸಿದರು. ಆದರೆ ಡಾ. ರಾಜ್‌ಕುಮಾರ್ ಅವರು ರಾಜಕೀಯ ಪ್ರವೇಶವನ್ನು ಖಡಾಖಂಡಿತವಾಗಿ ನಿರಾಕರಿಸಿದರು. ಕೊನೆಯ ಹಂತದಲ್ಲಿ ಮಾಜಿ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಇಂದಿರಾ ಗಾಂಧಿ ಅವರ ವಿರುದ್ಧ ಜನತಾ ಪಕ್ಷದ ಅಭ್ಯರ್ಥಿಯಾದರು. ಆ ನಂತರ ನಡೆದದ್ದೆಲ್ಲವೂ ರಾಜಕೀಯ ಇತಿಹಾಸದಲ್ಲಿ ಹಿಂದೆಂದೂ ಕಾಣದ, ಮುಂದೆಂದೂ ಕಾಣಲು ಸಾಧ್ಯವಿಲ್ಲದಂತಹ ಒಂದು ಚುನಾವಣೆ.

ಒಂದರ್ಥದಲ್ಲಿ ಇದು ಚುನಾವಣೆಯಲ್ಲ. ಒಂದು ಸಮರ ಅಥವಾ ಸಂಘರ್ಷ. 1975ರಲ್ಲಿ ಇಂದಿರಾ ಗಾಂಧಿಯವರಿಂದ ಘೋಷಿಸಲ್ಪಟ್ಟ ತುರ್ತು ಪರಿಸ್ಥಿತಿಯಡಿ ದೌರ್ಜನ್ಯಕ್ಕೆ ಒಳಗಾಗಿ ಬಂಧಿಸಲ್ಪಟ್ಟು, ಬಹಳಷ್ಟು ಮಾನಸಿಕ, ದೈಹಿಕ ಕಷ್ಟಗಳನ್ನು ಅನುಭವಿಸಿದ್ದ ಘಟಾನುಘಟಿಗಳು ಮತ್ತು ಕೆಲವು ಸಂಘಟನೆಗಳ ಹೃದಯದಲ್ಲಿ ಹೆಪ್ಪುಗಟ್ಟಿದ್ದ ದ್ವೇಷ, ಭೂಸುಧಾರಣಾ ಕಾನೂನಿನಿಂದ ಭೂಮಿಯನ್ನು ಕಳೆದುಕೊಂಡು ಅತಂತ್ರರಾಗಿದ್ದ ಭೂಮಾಲಕರ ಸಿಟ್ಟು, ಋಣ ಪರಿಹಾರ ಕಾಯ್ದೆಯಿಂದ ಹಣ, ಸಂಪತ್ತು ಕಳೆದುಕೊಂಡಿದ್ದ ಬಂಡವಾಳಶಾಹಿಗಳ ಆಕ್ರೋಶ, ಜೀತಪದ್ಧತಿ ನಿರ್ಮೂಲನೆ ಕಾಯಿದೆಯಿಂದ ಆಗಿದ್ದ ದೀನ ದಲಿತರ, ಅಲ್ಪಸಂಖ್ಯಾತರ ಏಳಿಗೆಯನ್ನು ಕಂಡು ಸಹಿಸದ ಅಸಹ್ಯ ಮನಸ್ಸುಗಳ ಕೋಪ ಇವೆಲ್ಲ ಒಂದು ಕಡೆಯಾದರೆ; ಇಂದಿರಾ ಗಾಂಧಿಯವರ 'ಗರೀಬಿ ಹಠಾವೋ' ಘೋಷಣೆಯಿಂದ ಪ್ರೇರಿತರಾದ, ಭೂಸುಧಾರಣಾ ಕಾಯಿದೆಯಿಂದ ಲಾಭ ಪಡೆದ, 20 ಅಂಶಗಳ ಕಾರ್ಯಕ್ರಮಗಳಿಂದ ಅತಿ ಹೆಚ್ಚು ಪ್ರಯೋಜನ ಗಳಿಸಿದ ಬಡವರು, ದೀನ ದಲಿತರು, ಅಲ್ಪಸಂಖ್ಯಾತರು, ರೈತರು, ಕಾರ್ಮಿಕರು ಮತ್ತೊಂದು ಕಡೆ.

ಚಿಕ್ಕಮಗಳೂರು ಚುನಾವಣೆ ನಡೆಯುವಾಗ ದೇವರಾಜ ಅರಸು ಅವರು ನನ್ನನ್ನು 'ಇನ್‌ಚಾರ್ಜ್ ಚಿಕ್ಕಮಗಳೂರು' ಎಂದು ಘೋಷಿಸಿದ್ದರು. ಆಗ ಕೆಲವು ಹಿರಿಯ ನಾಯಕರು ಇದಕ್ಕೆ ಅಭ್ಯಂತರ ವ್ಯಕ್ತಪಡಿಸಿದ್ದರು. "ಏನು ಸಾರ್, ನಮ್ಮಂತಹ ಅನುಭವಿಗಳನ್ನು ಬಿಟ್ಟು ಆ ಹುಡುಗನನ್ನು ಇನ್‌ಚಾರ್ಜ್ ಮಾಡಿದ್ದೀರಲ್ಲಾ" ಎಂದು ಕೇಳಿದ್ದರು. ಆಗ ಅರಸು, "ಇಲ್ಲಾರೀ, ಆ ಹುಡುಗನಿಗೆ ಚಿಕ್ಕಮಗಳೂರಿನ ಮೂಲೆ ಮೂಲೆಯ ಪರಿಚಯವಿದೆ. ಮಾಡ್ತಾನೆ ಬಿಡಿ. ಚಂದ್ರೇಗೌಡ ಅವನ ಜೊತೆಯಲ್ಲಿದ್ದಾನೆ" ಎಂದು ಅವರದ್ದೇ ಶೈಲಿಯಲ್ಲಿ ಹೇಳಿದ್ದರು.

ಚಿಕ್ಕಮಗಳೂರು ಲೋಕಸಭಾ ವ್ಯಾಪ್ತಿಗೆ ದಕ್ಷಿಣಕನ್ನಡ ಜಿಲ್ಲೆಯ ಎರಡು ವಿಧಾನಸಭಾ

ಕ್ಷೇತ್ರಗಳು, ಚಿಕ್ಕಮಗಳೂರು ಜಿಲ್ಲೆಯ ಆರು ವಿಧಾನಸಭಾ ಕ್ಷೇತ್ರಗಳು ಒಳಪಟ್ಟಿತ್ತು. ಬೆಳ್ತಂಗಡಿ ಮತ್ತು ಕಾರ್ಕಳ ದಕ್ಷಿಣಕನ್ನಡ ಜಿಲ್ಲೆಯ ಎರಡು ಕ್ಷೇತ್ರಗಳಾದರೆ ತರೀಕೆರೆ, ಕಡೂರು, ಬೀರೂರು, ಚಿಕ್ಕಮಗಳೂರು, ಮೂಡಿಗೆರೆ ಮತ್ತು ಶೃಂಗೇರಿ ಇದು ಚಿಕ್ಕಮಗಳೂರು ಜಿಲ್ಲೆಗೆ ಒಳಪಟ್ಟ ಆರು ವಿಧಾನಸಭಾ ಕ್ಷೇತ್ರಗಳಾಗಿತ್ತು.

ಈ ಎಂಟು ಕ್ಷೇತ್ರಗಳಲ್ಲಿ ಕಡೂರು ಕ್ಷೇತ್ರ ಒಂದರಲ್ಲಿ ಮಾತ್ರ ಜನತಾ ಪಕ್ಷದ ಕೆ.ಎಂ. ತಮ್ಮಯ್ಯ ಒಬ್ಬರನ್ನು ಬಿಟ್ಟರೆ ಉಳಿದ ಏಳೂ ಕ್ಷೇತ್ರಗಳಲ್ಲಿ ಇಂದಿರಾ ಕಾಂಗ್ರೆಸ್‌ನ ಶಾಸಕರು ಅಧಿಕಾರದಲ್ಲಿದ್ದರು. ಬೆಳ್ತಂಗಡಿಯಲ್ಲಿ ಗಂಗಾಧರ ಗೌಡ, ಕಾರ್ಕಳದಲ್ಲಿ ವೀರಪ್ಪ ಮೊಯ್ಲಿ, ಶೃಂಗೇರಿಯಲ್ಲಿ ಬಿ. ರಾಮಯ್ಯ, ಮೂಡಿಗೆರೆಯಲ್ಲಿ ಮೋಟಮ್ಮ, ಚಿಕ್ಕಮಗಳೂರಿನಲ್ಲಿ ಸಿ.ಎ. ಚಂದ್ರೇಗೌಡ, ಬೀರೂರಿನಲ್ಲಿ ಎಂ. ಮಲ್ಲಪ್ಪ, ತರೀಕೆರೆಯಲ್ಲಿ ಎಚ್.ಎಂ. ಮಲ್ಲಿಕಾರ್ಜುನಪ್ಪ ಕಾಂಗ್ರೆಸ್ ಶಾಸಕರಾಗಿದ್ದರು. ಇವರೆಲ್ಲರಿಗೂ ಅರಸು ಅವರು ಅವರವರ ಕ್ಷೇತ್ರದ ಸಂಪೂರ್ಣ ಜವಾಬ್ದಾರಿಯನ್ನು ಕೊಟ್ಟಿದ್ದರು ಮತ್ತು ಎಲ್ಲ ಕಾಂಗ್ರೆಸ್ ಶಾಸಕರು ಈ ಚುನಾವಣೆಯನ್ನು ಪ್ರತಿಷ್ಠೆಯ ಸವಾಲಾಗಿ ಸ್ವೀಕರಿಸಿ ಹಗಲಿರುಳು ನಿಸ್ವಾರ್ಥವಾಗಿ ದುಡಿದಿದ್ದರು. ಇಂದಿರಾ ಗಾಂಧಿಯವರಿಗೆ ತನ್ನ ಲೋಕಸಭಾ ಸ್ಥಾನವನ್ನು ಬಿಟ್ಟುಕೊಟ್ಟಿದ್ದ ಡಿ.ಬಿ. ಚಂದ್ರೇಗೌಡ ಅವರು ಕಾಲಿಗೆ ಚಕ್ರ ಕಟ್ಟಿಕೊಂಡವರಂತೆ ಇಡೀ ಕ್ಷೇತ್ರವನ್ನು ತಿರುಗುತ್ತಾ ಎಲ್ಲರಿಗೂ ಮಾರ್ಗದರ್ಶನ, ಸ್ಫೂರ್ತಿ ನೀಡುತ್ತಿದ್ದರು. ಮಾಜಿ ಶಾಸಕ ಸಿ.ಎಂ.ಎಸ್. ಶಾಸ್ತ್ರಿಯವರು ಚಿಕ್ಕಮಗಳೂರು ಜಿಲ್ಲಾ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಅವರ ಜೊತೆಗೆ ತಾಲೂಕು ಡೆವಲಪ್‌ಮೆಂಟ್ ಬೋರ್ಡಿನ ಅಧ್ಯಕ್ಷರಾದ ರಾಮಚಂದ್ರ ರಾವ್ ಎಂಬವರು ಸಕ್ರಿಯವಾಗಿ ದುಡಿಯುತ್ತಿದ್ದರು. ನನಗೆ ಎರಡು ಜವಾಬ್ದಾರಿಗಳನ್ನು ನೀಡಲಾಗಿತ್ತು. ಒಂದು ಹಣಕಾಸಿನ ನಿರ್ವಹಣೆ ಮತ್ತೊಂದು ಇಂದಿರಾ ಗಾಂಧಿ ಅವರ ದೈನಂದಿನ ಪ್ರಚಾರ ಕಾರ್ಯಕ್ರಮದ ಸೂಚಿಯನ್ನು ಸಿದ್ಧಪಡಿಸುವುದು. ಪ್ರತಿದಿನ ಕಾಂಗ್ರೆಸ್ ಜಿಲ್ಲಾ ಕಚೇರಿಯಲ್ಲಿ ಮಧ್ಯಾಹ್ನದವರೆಗೂ ಕುಳಿತು ಈ ಕೆಲಸಗಳನ್ನು ಮಾಡಿ ಸಂಜೆಯ ನಂತರ ನಾವು ಪ್ರಚಾರ ಕಾರ್ಯಕ್ಕೆ ಇಳಿಯುತ್ತಿದ್ದೆವು. ಆಗ ಈಗಿನಂತೆ ಹೆಚ್ಚಿನ ಚುನಾವಣಾ ಪ್ರತಿಬಂಧಗಳು ಇರಲಿಲ್ಲ. ರಾತ್ರಿ ಒಂದು – ಎರಡು ಗಂಟೆಯವರೆಗೂ ಪ್ರಚಾರ ಕಾರ್ಯ ನಡೆಯುತ್ತಿತ್ತು.

ದೇಶದ ಹೆಚ್ಚಿನ ಎಲ್ಲ ಕಾಂಗ್ರೆಸ್ ನಾಯಕರ ದಂಡು ಚಿಕ್ಕಮಗಳೂರಿಗೆ ಬಂದು ಬೀಡುಬಿಟ್ಟಿತ್ತು. ಬೂಟಾಸಿಂಗ್, ಅರ್ಜುನ್ ಸಿಂಗ್ ಇಂತಹ ನೂರಾರು ನಾಯಕರು ಬಂದಿದ್ದರು. ಇವರಿಗೆ ಹಾಗೂ ಇಂತಹ ಹತ್ತಾರು ನಾಯಕರಿಗೆ ತನ್ನ ಸ್ವಂತ ಮನೆಯನ್ನು ವಾಸ್ತವ್ಯಕ್ಕೆ ಬಿಟ್ಟುಕೊಟ್ಟು ಈ ಚುನಾವಣೆಯಲ್ಲಿ ಹಗಲಿರುಳೂ ದುಡಿದ ಗೆಳೆಯ ಹಾಗೂ ಚಿಕ್ಕಮಗಳೂರಿನ ಪ್ರಸಿದ್ಧ ದಂತವೈದ್ಯ ಡಾ. ಅಬ್ದುಲ್ ಖಾದರ್‌ನನ್ನು ನಾನಿಲ್ಲಿ ನೆನಪಿಸುಸ್ತಿದ್ದೇನೆ. 'ಪೂಮೋನು' ಎಂಬ ಹೆಸರಿನಲ್ಲಿ ಪರಿಚಿತನಾಗಿರುವ ಈತ ಗೆಳೆಯ ಬಿ.ಎಂ. ಝುಕರಿಯಾನ ಕಿರಿಯ ಸಹೋದರ.

ಗುಜರಾತಿನ ಮಾಧವ ಸಿನ್ಹಾ ಸೋಲಂಕಿಯವರು ನನ್ನ ಬಳಿ ಬಂದು ನನಗೆ

ಯಾವುದಾದರೂ ಒಂದೆರಡು ಮೂರು ಗ್ರಾಮಗಳನ್ನು ಪ್ರಚಾರ ಮಾಡಲು ಕೊಡಿ ಎಂದು ಕೇಳಿದ್ದರು. ಮಹಾರಾಷ್ಟ್ರದ ಪ್ರಭಾದೇವಿ ಎಂಬವರು ಹತ್ತು ಲಕ್ಷ ರೂಪಾಯಿ ಹಿಡಿದುಕೊಂಡು ಬಂದಿದ್ದರು. ಅವರು ಬಹಳ ದೊಡ್ಡ ನಾಯಕಿ. "ಮೊಹಿದೀನ್, ಇದು ನಿನ್ನ ಬಳಿ ಇರಲಿ. ಕಾರ್ಯಕರ್ತರಿಗೆ ಖರ್ಚಿಗೆ ಕೊಡಲು ಬೇಕಾಗಬಹುದು" ಎಂದಿದ್ದರು. ನಾನು "ಮೇಡಂ, ನಾನು ಹಣದ ವ್ಯವಹಾರ ಮಾಡುವುದಿಲ್ಲ. ದುಡ್ಡೇನಾದರೂ ಇದ್ದರೆ ನೀವು ದೇವರಾಜ ಅರಸು ಅವರಲ್ಲಿ ನೇರವಾಗಿ ಮಾತನಾಡಿ" ಎಂದು ಹೇಳಿದ್ದೆ.

ನನ್ನ ಬಳಿ ದೇವರಾಜ ಅರಸು ಅವರು ಚುನಾವಣೆ ಖರ್ಚಿಗೆ ಕೊಟ್ಟಿದ್ದ ದುಡ್ಡಿನ ಪೈಸೆ – ಪೈಸೆಯ ಲೆಕ್ಕವನ್ನು ನಾನು ಬರೆದಿಟ್ಟಿದ್ದೆ. ಚುನಾವಣೆಯ ನಂತರ ಉಳಿದ ಹಣವನ್ನು ನಾನು ಪಕ್ಷಕ್ಕೆ ಹಿಂದಿರುಗಿಸಿದ್ದೆ. ಗೆಳೆಯ ರಮೇಶ್ ಕುಮಾರ್ ಇತ್ತೀಚಿನವರೆಗೂ ನನ್ನನ್ನು ಈ ವಿಷಯದಲ್ಲಿ ರೇಗಿಸುತ್ತಿದ್ದ. "ಏನು ಮಾರಾಯ, ಚುನಾವಣೆಗೆ ಖರ್ಚಿಗೆ ಕೊಟ್ಟ ಹಣ ಯಾರಾದರೂ ವಾಪಾಸ್ ಕೊಡ್ತಾರಾ? ಈ ಸತ್ಯವಂತ ಆ ಹಣವನ್ನು ಹಿಂದಿರುಗಿಸಿದ್ದಾನೆ" ಎಂದು. ಆಗ ನನ್ನ ಬಳಿ ಉಳಿದಿದ್ದ ಹಣ ಎಷ್ಟು ಗೊತ್ತಾ? 1978ರ 13 ಲಕ್ಷ ರೂಪಾಯಿಗಳು.

ಈ ಚುನಾವಣೆಯಲ್ಲಿ ಅತೀ ಕಡಿಮೆ ಕೆಲಸ ಮಾಡಿದವರೆಂದರೆ ಮಂಗಳೂರಿನ ಲೋಕಸಭಾ ಸದಸ್ಯರಾಗಿದ್ದ ಜನಾರ್ದನ ಪೂಜಾರಿ. ರಾಜಕಾರಣಕ್ಕೆ ತೀರಾ ಹೊಸಬ ರಾಗಿದ್ದ ಅವರಿಗೆ ಒಂದು ಭಾಷಣ ಮಾಡಲು ಸಹ ಸರಿಯಾಗಿ ಬರುತ್ತಿರಲಿಲ್ಲ. ವೀರಪ್ಪ ಮೊಯ್ಲಿಯವರ ಹಿಂಬಾಲಕರಾಗಿ ದಕ್ಷಿಣ ಕನ್ನಡ ಜಿಲ್ಲೆಯ ಎರಡು ಕ್ಷೇತ್ರಗಳಲ್ಲಿ ಇಂದಿರಾ ಗಾಂಧಿಯವರ ಹಿಂದೆ ತಿರುಗಾಡುತ್ತಿದ್ದರು.

ಈ ಚುನಾವಣೆಯನ್ನು ಜನತಾ ಪಕ್ಷದ ಘಟಾನುಘಟಿಗಳು ಕೂಡಾ ಸವಾಲಾಗಿ ಸ್ವೀಕರಿಸಿದ್ದರು. ಈ ಪಕ್ಷದ ಸರ್ವ ರಾಷ್ಟ್ರೀಯ ನಾಯಕರು ಬಂದು ಚಿಕ್ಕಮಗಳೂರಿನಲ್ಲಿ ಬೀಡು ಬಿಟ್ಟಿದ್ದರು. ಮುಂಚೂಣಿಯಲ್ಲಿದ್ದವರು ಜನತಾ ಪಕ್ಷದ ಅಭ್ಯರ್ಥಿ ವೀರೇಂದ್ರ ಪಾಟೀಲ್ ಅವರ ಚುನಾವಣಾ ಏಜೆಂಟ್ ಜಾರ್ಜ್ ಫೆರ್ನಾಂಡಿಸ್. ಇವರು ತನ್ನ ಅತ್ಯಂತ ಉಗ್ರ ಭಾಷಣಗಳಿಂದ ಜನರನ್ನು ಕೆರಳಿಸುವ ನಿರಂತರ ಪ್ರಯತ್ನ ಮಾಡುತ್ತಿದ್ದರು. ಇವರ ಕೆಂಡದಂತಹ ಭಾಷಣದಿಂದ ಪ್ರಚೋದಿತರಾದ ವಿದ್ಯಾರ್ಥಿಗಳು ಬೆಳ್ತಂಗಡಿ ಕ್ಷೇತ್ರದ ಉಜಿರೆಯಲ್ಲಿ ಗಲಭೆಯನ್ನು ಸೃಷ್ಟಿಸಿದಾಗ ಪೋಲೀಸರಿಗೆ ಅನಿವಾರ್ಯವಾಗಿ ಗೋಲಿಬಾರ್ ಮಾಡಬೇಕಾಗಿ ಬಂತು. ಈ ಗೋಲಿಬಾರ್‌ನಲ್ಲಿ ಅಮಾಯಕ ವಿದ್ಯಾರ್ಥಿನಿ ಗಾಯತ್ರಿ ಸಾವನ್ನಪ್ಪಿದರು. ಜನತಾ ಪಕ್ಷ ಇದನ್ನೇ ನೆಪವಾಗಿಟ್ಟುಕೊಂಡು ಮತ್ತಷ್ಟು ಗಲಭೆಗಳನ್ನು ಸೃಷ್ಟಿಸಲು ಹೊರಟಾಗ ಉಜಿರೆ ಸಹಿತ ಕೆಲವು ಕಡೆ ಕರ್ಫ್ಯೂ ಹೇರಲಾಗಿತ್ತು. ಈ ಘಟನೆ ಕಾಂಗ್ರೆಸ್‌ಗೆ ತುಸು ಹಿನ್ನೆಡೆಯನ್ನು ಉಂಟುಮಾಡಿತ್ತು.

ಈ ಚುನಾವಣೆಯ ಮತ್ತೊಂದು ವೈಶಿಷ್ಟ್ಯವೆಂದರೆ ಚುನಾವಣಾ ಪ್ರಚಾರದಲ್ಲಿ ತನ್ನನ್ನು ತೊಡಗಿಸಿಕೊಂಡಿದ್ದ ಕಾರ್ಯಕರ್ತರ ದಂಡು ಏನನ್ನೂ ಅಪೇಕ್ಷಿಸದೆ ಕಾಂಗ್ರೆಸ್‌ನ

ಸೇನಾನಿಗಳಂತೆ ಕಾರ್ಯನಿರ್ವಹಿಸಿದ್ದುದು. ಗ್ರಾಮ ಮಟ್ಟದ ಮುಖಂಡರು ತಮ್ಮದೇ ಆದ ಕಾರ್ಯಕರ್ತರ ತಂಡವನ್ನು ರಚಿಸಿಕೊಂಡು ಮನೆ ಮನೆಗೆ ಹೋಗಿ ಮತ ಯಾಚಿಸುತ್ತಿದ್ದರು. ಚಿಕ್ಕಮಗಳೂರಿನ ಎಸ್ಟೇಟ್‌ಗಳಲ್ಲಿ ಮತ ಯಾಚಿಸಬೇಕಾದರೆ ಸಂಜೆಯ ನಂತರವೇ ಹೋಗಬೇಕಾಗಿತ್ತು. ಏಕೆಂದರೆ ಆಗ ಮಾತ್ರ ಎಸ್ಟೇಟ್ ಕಾರ್ಮಿಕರು ಭೇಟಿಯಾಗಲು ಸಿಗುತ್ತಿದ್ದರು. ನಮ್ಮ ಕಾರ್ಯಕರ್ತರು ಸಂಜೆ 6 ಗಂಟೆಯ ನಂತರ ಎಸ್ಟೇಟ್‌ಗಳ ಒಳಗೆ ನಡೆದುಕೊಂಡು ಹೋಗಿ ಪ್ರಚಾರ ಮಾಡಿ ಹಿಂದಿರುಗುವಾಗ ರಾತ್ರಿ 1 – 2 ಗಂಟೆಯಾಗುತ್ತಿತ್ತು. ಈ ಕಾರ್ಯಕರ್ತರೇ ನಮಗೆ ಶಕ್ತಿಯಾಗಿದ್ದರು. ಜನತಾ ಪಕ್ಷದೊಂದಿಗೆ ಶ್ರೀಮಂತರು, ಬಂಡವಾಳಶಾಹಿಗಳು, ಎಸ್ಟೇಟ್ ಮಾಲಕರು ಬಹುದೊಡ್ಡ ಸಂಖ್ಯೆಯಲ್ಲಿದ್ದರು ಸಹ ಇಂತಹ 'ಖಾಲಿ ಕಾಲಿನ ಕಾರ್ಯಕರ್ತರು' ಅವರಲ್ಲಿರಲಿಲ್ಲ. ಒಬ್ಬೊಬ್ಬ ಎಸ್ಟೇಟ್ ಮಾಲಕನ ಕೈಕೆಳಗೆ ನೂರಾರು ಕಾರ್ಮಿಕರಿದ್ದರು. ಅಂತಹವರನ್ನು ಆಮಿಷ, ಬೆದರಿಕೆಗಳ ಮೂಲಕ ಜನತಾ ಪಕ್ಷ ಪರ ತಿರುಗಿಸಲು ಎಷ್ಟೇ ಪ್ರಯತ್ನಿಸಿದರೂ ಅದು ಸಾಧ್ಯವಾಗಿರಲಿಲ್ಲ. ಈ ಕಾರ್ಮಿಕರಲ್ಲಿ ಹೆಚ್ಚಿನವರು ತಮಿಳರಾಗಿದ್ದರು.

ತಮಿಳುನಾಡಿನಿಂದ ಎಂ.ಜಿ. ರಾಮಚಂದ್ರನ್ ಅವರು ನೂರಾರು ತಮಿಳು ಕಾರ್ಯಕರ್ತರನ್ನು ಚಿಕ್ಕಮಗಳೂರಿಗೆ ಕಳುಹಿಸಿದ್ದರು. ಈ ಕಾರ್ಯಕರ್ತರು ಬಟ್ಟೆಬರೆ, ಪಾತ್ರೆ ಪಗಡೆಗಳನ್ನು ವಲಸಿಗರಂತೆ ಹೊತ್ತುಕೊಂಡು ಬಂದು ಶಾಲೆಗಳ ಜಗಲಿಗಳಲ್ಲಿ ಮಲಗಿ ಅಲ್ಲೇ ಅವರೇ ಬೇಯಿಸಿ ತಿಂದು ಬೆಳಗೆದ್ದು ಎಸ್ಟೇಟಿನ ಒಳಗೆ ಪ್ರಚಾರಕ್ಕೆ ಹೋಗುತ್ತಿದ್ದರು. ರಾತ್ರಿ ಬಂದು ಅದೇ ಜಗಲಿಯಲ್ಲಿ ಮಲಗುತ್ತಿದ್ದರು. ಯಾರಿಂದಲೂ ಏನನ್ನೂ ಪಡೆಯದೆ, ಬಯಸದೆ ತಮ್ಮಷ್ಟಕ್ಕೆ ತಾವು ಇಂದಿರಾ ಗಾಂಧಿ ಅವರ ಗೆಲುವಿಗೆ ಶ್ರಮಿಸುತ್ತಿದ್ದರು. ಕೆಲವು ಎಸ್ಟೇಟ್ ಮಾಲಕರು ಇವರನ್ನು ಹೆದರಿಸಲು, ಬೆದರಿಸಲು ಪ್ರಯತ್ನಿಸುತ್ತಿದ್ದರು. ಆದರೆ ತಮಿಳು ಕಾರ್ಮಿಕರ ಒಗ್ಗಟ್ಟಿನ ಎದುರು ಅವರದ್ದು ಏನೂ ನಡೆಯುತ್ತಿರಲಿಲ್ಲ.

ಒಂದು ಹಂತದಲ್ಲಿ ಚುನಾವಣೆಯಲ್ಲಿ ಸೋಲುವುದು ಖಚಿತ ಎಂದು ಜನತಾ ಪಕ್ಷದ ನಾಯಕರಿಗೆ ಮನದಟ್ಟಾದಾಗ ಹತಾಶರಾದ ಅವರು ಅಲ್ಲಲ್ಲಿ ಗಲಾಟೆ, ಗದ್ದಲ, ಗಲಭೆಗಳನ್ನು ಸೃಷ್ಟಿಸಿದರು. ಇಂದಿರಾ ಗಾಂಧಿ ಅವರ ಮೆರವಣಿಗೆ, ಸಭಾ ಕಾರ್ಯಕ್ರಮಗಳ ವೇದಿಕೆಗಳಿಗೆ ಕಲ್ಲುಗಳನ್ನು ಎಸೆಯಲು ಪ್ರಾರಂಭಿಸಿದರು. ಕಾಂಗ್ರೆಸ್ ಕಾರ್ಯಕರ್ತರ ಮೇಲೂ ಅಲ್ಲಲ್ಲಿ ಹಲ್ಲೆಗಳಾದವು. ಈ ಹಂತದಲ್ಲಿ ಜನತಾ ಪಕ್ಷದವರಿಗಿದ್ದ ಒಂದೇ ಉದ್ದೇಶವೆಂದರೆ ಹೇಗಾದರೂ ಮಾಡಿ ಈ ಚುನಾವಣೆಯನ್ನು ರದ್ದುಗೊಳಿಸಬೇಕು ಎಂಬುದು. ಇದನ್ನು ತಿಳಿದಿದ್ದ ದೇವರಾಜ ಅರಸು ಅವರು ಎಲ್ಲ ಕಾಂಗ್ರೆಸ್ ಮುಖಂಡರಿಗೆ ಮತ್ತು ಕಾರ್ಯಕರ್ತರಿಗೆ ಒಂದೇ ಸಂದೇಶ ನೀಡುತ್ತಿದ್ದರು. ಯಾವುದೇ ಕಾರಣಕ್ಕೂ ತಾಳ್ಮೆಯನ್ನು ಕಳೆದುಕೊಳ್ಳಬೇಡಿ. ಪ್ರತಿ ಹಲ್ಲೆ, ಗಲಭೆಗೆ ಮುಂದಾಗಬೇಡಿ. ಚುನಾವಣೆ ಮುಗಿಯುವವರೆಗೂ ಅತ್ಯಂತ ತಾಳ್ಮೆ ವಹಿಸಿ ಶಾಂತಿಯನ್ನು ಕಾಪಾಡಿ ಎಂದು ಕರೆ ನೀಡಿದ್ದರು.

ಚುನಾವಣೆಯ ಕೊನೆಯ ಹಂತದಲ್ಲಿ ಇಡೀ ಚಿಕ್ಕಮಗಳೂರು ಕ್ಷೇತ್ರ ಅಕ್ಷರಶಃ ರಣರಂಗವಾಗಿತ್ತು. ಇಂದಿರಾ ಗಾಂಧಿ ಅವರು ಹಳ್ಳಿ ಹಳ್ಳಿಗಳಿಗೆ ಮಿಂಚಿನ ಭೇಟಿಯನ್ನು ನೀಡುತ್ತಿದ್ದರು. ದೇವರಾಜ ಅರಸು ಅವರು ಒಂದು ಗಳಿಗೆಯೂ ಇಂದಿರಾ ಗಾಂಧಿಯವರನ್ನು ಬಿಟ್ಟು ಇರುತ್ತಿರಲಿಲ್ಲ. ಬೀದಿ ಬೀದಿಗಳಲ್ಲಿ ಬಡವರು, ಮಹಿಳೆಯರು, ಕಾರ್ಮಿಕರು ಇಂದಿರಾ ಗಾಂಧಿ ಅವರನ್ನು ನೋಡಲು, ಕೈ ಮುಗಿಯಲು ಸಾವಿರ ಸಾವಿರ ಸಂಖ್ಯೆಗಳಲ್ಲಿ ಸೇರುತ್ತಿದ್ದರು. ಸಂಜೆ ಆರು ಗಂಟೆಗೆ ಬರುತ್ತಾರೆಂದು ಘೋಷಿಸಿದ ಸ್ಥಳಗಳಿಗೆ ಇಂದಿರಾ ಗಾಂಧಿ ಬರುವಾಗ ರಾತ್ರಿ 10 – 11 ಗಂಟೆಯಾಗುತ್ತಿತ್ತು. ಆದರೂ ಅವರನ್ನು ಕಾಣಲು ಕಾತರದಿಂದ ಕಾಯುತ್ತಿದ್ದ ಜನರು ಸ್ಥಳದಿಂದ ಕದಲುತ್ತಿರಲಿಲ್ಲ. ಇಂದಿರಾ ಗಾಂಧಿ ಅವರು ಆಗಮಿಸುತ್ತಿರುವಾಗ ಅಲ್ಲಿ ಒಂದು ರೋಮಾಂಚನ ಸೃಷ್ಟಿಯಾಗುತ್ತಿತ್ತು. ನೆರೆದ ಜನಸಮೂಹ ಅವರನ್ನು ಕಂಡು ಸಮ್ಮೋಹನಕ್ಕೆ ಒಳಗಾಗುತ್ತಿತ್ತು. ಜಯಕಾರ ಮುಗಿಲು ಮುಟ್ಟುತ್ತಿತ್ತು. ಅಂತಹದ್ದೇನೋ ಒಂದು ಆಕರ್ಷಣೆ ಇಂದಿರಾ ಗಾಂಧಿ ಅವರಲ್ಲಿತ್ತು.

ಇನ್ನೇನು ಚುನಾವಣೆಗೆ ಹತ್ತು ದಿನಗಳಿವೆ ಎನ್ನುವಾಗ ಚಿಕ್ಕಮಗಳೂರಿನ ಆಝಾದ್ ಪಾರ್ಕ್‌ನಲ್ಲಿ ಬೃಹತ್ ಚುನಾವಣಾ ಪ್ರಚಾರ ಸಭೆಯನ್ನು ಹಮ್ಮಿಕೊಳ್ಳಲಾಗಿತ್ತು. ದೇವರಾಜ ಅರಸು ಅವರು ಮೊದಲೇ ಆಗಮಿಸಿ ಭಾಷಣ ಪ್ರಾರಂಭಿಸಿದ್ದರು. ಸಹಸ್ರಾರು ಜನರು ಸೇರಿದ್ದ ಆ ಸಭೆ ಒಂದು ರೀತಿಯಲ್ಲಿ ಇಂದಿರಾ ಗಾಂಧಿ ಅವರ ವಿಜಯೋತ್ಸವದ ಪೂರ್ವಭಾವಿ ಸಭೆಯಂತೆ ಕಾಣುತ್ತಿತ್ತು. ಆಗ ಜನತಾ ಪಕ್ಷದ ಕೆಲವು ಕಿಡಿಗೇಡಿಗಳು ಸಭೆಯತ್ತ ಕಲ್ಲು ತೂರಾಟ ಮಾಡಿ ಗಲಭೆಗೆ ಪ್ರಯತ್ನಿಸಿದರು. ಅದುವರೆಗೂ ಶಾಂತಿ, ಶಾಂತಿ ಎಂದು ನಮ್ಮೆಲ್ಲರಿಗೂ ಬುದ್ಧಿ ಹೇಳುತ್ತಿದ್ದ ಅರಸು ಅವರಿಗೆ ಕೋಪ ಉಕ್ಕಿ ಬಂದಿತ್ತು. ಅವರ ಏರು ಧ್ವನಿಯ ಮಾತುಗಳು ಧ್ವನಿವರ್ಧಕಗಳಲ್ಲಿ ಮೊಳಗತೊಡಗಿತು. “ನಮ್ಮನ್ನು ಕೆಣಕುತ್ತಿರುವ ಹೇಡಿಗಳೇ, ನಾವು ಇಂದಿನವರೆಗೂ ನಿಮ್ಮನ್ನು ಸಹಿಸಿದೆವು. ಅದು ಈ ಚುನಾವಣೆ ಶಾಂತಿಯುತವಾಗಿ ನಡೆಯಬೇಕು ಮತ್ತು ಎಲ್ಲೂ ಸಹ ಗಲಭೆಗಳು ಆಗಿ ಅಮಾಯಕರಿಗೆ ತೊಂದರೆ ಆಗಬಾರದು ಎಂಬ ಒಂದೇ ಕಾರಣಕ್ಕಾಗಿ. ‘ಹಿಂದೆ ಹೊಡೆಯಿರಿ’ ಎಂದು ನಾನು ನಮ್ಮ ಕಾರ್ಯಕರ್ತರಿಗೆ ಒಂದು ಕರೆ ಕೊಟ್ಟರೆ ನೀವು ಯಾರೂ ಇರುವುದಿಲ್ಲ. ಆದರೆ ಅಂತಹ ಕರೆ ಈಗಲೂ ನಾನು ಕೊಡುವುದಿಲ್ಲ. ಆದರೆ ಪೊಲೀಸರಿಗೆ ಹೇಳುತ್ತಿದ್ದೇನೆ. ನಾನು ಈ ರಾಜ್ಯದ ಮುಖ್ಯಮಂತ್ರಿ. ಇದುವರೆಗೆ ನಾನು ನಿಮಗೆ ಯಾವುದೇ ಸೂಚನೆ ನೀಡಿಲ್ಲ. ನಿಮ್ಮನ್ನು ಸ್ವತಂತ್ರವಾಗಿ ಕಾರ್ಯ ನಿರ್ವಹಿಸಲು ಬಿಟ್ಟಿದ್ದೇನೆ. ಆದರೆ ಈಗ ಮುಖ್ಯಮಂತ್ರಿಯ ಜವಾಬ್ದಾರಿಯ ಸ್ಥಾನದಿಂದ ಆದೇಶಿಸುತ್ತಿದ್ದೇನೆ. ಶಾಂತಿಯನ್ನು ಕಾಪಾಡುವುದು ನಿಮ್ಮ ಕರ್ತವ್ಯ. ನಿಮ್ಮ ಕೈಯಲ್ಲಿರುವ ಲಾಠಿ, ಸೊಂಟದಲ್ಲಿರುವ ಪಿಸ್ತೂಲು ಅದು ಪ್ರದರ್ಶನಕ್ಕಲ್ಲ. ಸಮಯ ಬಂದಾಗ, ಅನಿವಾರ್ಯವಾದಾಗ ಶಾಂತಿಯನ್ನು ಕಾಪಾಡಲು ನಿಮ್ಮ ಕೈಗೆ ಕೊಟ್ಟಿರುವ ಅಸ್ತ್ರಗಳು ಅವು. ಇಂದಿನಿಂದ ಚುನಾವಣೆ ಮುಗಿಯುವವರೆಗೆ ಏನೇ ಅಹಿತಕರ ಘಟನೆಗಳು

ನಡೆದರೂ ನೀವು ಪೊಲೀಸರೇ ಜವಾಬ್ದಾರಿ. ನಿಮಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಕೊಡುತ್ತಿದ್ದೇನೆ. ನಿಮ್ಮ ಕರ್ತವ್ಯ ಮತ್ತು ಜವಾಬ್ದಾರಿಯನ್ನು ಸರಿಯಾಗಿ ನಿಭಾಯಿಸಿ. ನಿಮ್ಮಿಂದ ಏನಾದರೂ ಲೋಪವಾದರೆ ಅದನ್ನು ಸರಕಾರ ಗಂಭೀರವಾಗಿ ಪರಿಗಣಿಸುವುದು". ಅರಸು ಅವರ ಈ ಮಾತುಗಳು ಮೊಳಗುತ್ತಿದ್ದಂತೆಯೇ ಚುನಾವಣಾ ಕಣದ ದೃಶ್ಯವೇ ಬದಲಾಯಿತು. ಚಿಕ್ಕಮಗಳೂರು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಸಾಂಗ್ಲಿಯಾನ ಎಚ್ಚೆತ್ತುಕೊಂಡರು. ಪೊಲೀಸ್ ಪಡೆ ಸರ್ವಸನ್ನದ್ಧವಾಗಿ ಅತ್ಯಂತ ಶಾಂತಿಯುತವಾಗಿ ಚುನಾವಣೆಯ ಪ್ರಕ್ರಿಯೆ ಮುಗಿಯುವವರೆಗೂ ಕಾರ್ಯತತ್ಪರ ವಾಯಿತು. ಈ ದೇಶ ಕಂಡ ಐತಿಹಾಸಿಕ 1978ರ ಚಿಕ್ಕಮಗಳೂರು ಲೋಕಸಭಾ ಉಪಚುನಾವಣೆ ಮುಗಿಯಿತು. ಶ್ರೀಮತಿ ಇಂದಿರಾ ಗಾಂಧಿ ಅವರನ್ನು ದೇವರಾಜ ಅರಸು ಅವರು 77,313 ಮತಗಳ ಅಂತರದ ಪ್ರಚಂಡ ಬಹುಮತದಿಂದ ಗೆಲ್ಲಿಸಿ ದೇಶದ ಲೋಕಸಭೆಗೆ ಮತ್ತೊಮ್ಮೆ ಪ್ರವೇಶಿಸುವಂತೆ ಮಾಡಿದರು.

**ದುರಂತಗಳು ಪ್ರಾರಂಭ**

1978ರ ಚಿಕ್ಕಮಗಳೂರು ಲೋಕಸಭೆ ಉಪಚುನಾವಣೆಯಲ್ಲಿ ಇಂದಿರಾ ಗಾಂಧಿ ಅವರ ಭರ್ಜರಿ ವಿಜಯದ ನಂತರ ದೇವರಾಜ ಅರಸು ಅವರ ದುರಂತದ ದಿನಗಳು ಪ್ರಾರಂಭವಾಯಿತು. ದೇವರಾಜ ಅರಸು ಅವರ ಜನಪ್ರಿಯತೆಯನ್ನು ಕಂಡು ಅಸೂಯೆ ಪಡುವ ಕೆಲವರು ಕಾಂಗ್ರೆಸ್‌ನಲ್ಲಿದ್ದರು ಮತ್ತು ಅವರು ನಿರಂತರವಾಗಿ ಅರಸು ಅವರ ವಿರುದ್ಧ ಪಿತೂರಿಯನ್ನು ಮಾಡುತ್ತಲೇ ಇದ್ದರು. ತುರ್ತು ಪರಿಸ್ಥಿತಿಯ ಸಮಯದಲ್ಲಿ ಇಂದಿರಾ ಗಾಂಧಿ ಅವರ ಪುತ್ರ ಸಂಜಯ ಗಾಂಧಿ ಅವರಿಗೆ ನಿಕಟವರ್ತಿಗಳಾಗಿದ್ದಂತಹ ಗುಂಡೂರಾವ್, ಎಫ್.ಎಂ. ಖಾನ್, ಸಿ.ಕೆ. ಜಾಫರ್ ಶರೀಫ್ ಅಂತಹವರು ಸಂಜಯ ಗಾಂಧಿಯವರನ್ನು ದೇವರಾಜ ಅರಸು ಅವರ ವಿರುದ್ಧ ಎತ್ತಿಕಟ್ಟಲು ಪ್ರಯತ್ನಿಸುತ್ತಲೇ ಇದ್ದರು. ಚಿಕ್ಕಮಗಳೂರು ಚುನಾವಣೆಯ ವಿಜಯದ ನಂತರ ಅರಸು ಅವರನ್ನು ಇಡೀ ರಾಷ್ಟ್ರ ಗಮನಿಸಿತ್ತು ಮತ್ತು ಕೆಲವು ಮಾಧ್ಯಮಗಳು ಅರಸು ಅವರನ್ನು ಹೊಗಳಿ ಅಟ್ಟಕ್ಕೇರಿಸಿತ್ತು.

ಹಾಸನ ಜಿಲ್ಲೆಯ ಅರಸೀಕೆರೆ ಬಳಿಯ ಗ್ರಾಮವೊಂದರಲ್ಲಿ ಪುರಾತನ ತಾಳೆಗರಿ ಬರಹ ಓದಿ ಭವಿಷ್ಯ ನುಡಿಯುವ ಸ್ವಾಮೀಜಿಯೊಬ್ಬರು "ಅರಸು ಅವರಿಗೆ ಭಾರತದ ಪ್ರಧಾನಿ ಆಗುವ ಯೋಗವಿದೆ" ಎಂಬ ಭವಿಷ್ಯವಾಣಿ ನುಡಿದಿದ್ದು ಎಲ್ಲಾ ಕಡೆ ಪ್ರಚಾರವಾಯಿತು. ಸಂಜಯ ಗಾಂಧಿಗೆ ದೇವರಾಜ ಅರಸು ಅವರು ಬೆಲೆ ಕೊಡುತ್ತಿಲ್ಲ ಎಂಬ ದೂರನ್ನು ಅರಸು ಸಂಪುಟದಲ್ಲಿ ಸಚಿವರಾಗಿದ್ದ ಆರ್. ಗುಂಡೂರಾವ್ ತಮ್ಮ ಆಪ್ತ ಪತ್ರಕರ್ತರಲ್ಲಿ ಹೇಳಿಕೊಂಡದ್ದು ಒಂದು ದೊಡ್ಡ ಸುದ್ದಿಯಾಗಿ ಹಬ್ಬಿತು. ಚಿಕ್ಕಮಗಳೂರು ಚುನಾವಣೆಯಲ್ಲಿ ಅರಸು ಅವರ ಸಾಧನೆಯನ್ನು ಗಮನಿಸಿ ದೇಶದ ನಾನಾ ರಾಜ್ಯಗಳಲ್ಲಿ ಅರಸು ಅವರಿಗೆ ಗೌರವ, ಸನ್ಮಾನಗಳು ನಡೆದವು. 1979ರ

ಜನವರಿಯಲ್ಲಿ ಗುಜರಾತ್‌ನ ಕ್ಷತ್ರಿಯ ಸಮಾಜದವರು ಅರಸು ಅವರಿಗೆ ಒಂದು ಗೌರವ ಸನ್ಮಾನವನ್ನು ಏರ್ಪಡಿಸಿದರು. ಈ ಕ್ಷತ್ರಿಯ ಸಮಾಜದವರು ಅಂದು ಅರಸು ಅವರಿಗೆ ಅರ್ಪಿಸಿದ ಸನ್ಮಾನಪತ್ರದಲ್ಲಿ ದಕ್ಷಿಣಭಾರತದ ಈ ಮಹಾ ಕ್ಷತ್ರಿಯನ ಗುಣ ವಿಶೇಷತೆಗಳ ವರ್ಣನೆ ಮಾಡುವುದರೊಂದಿಗೆ ಅರಸು ಅವರಿಗೆ 'ಪೃಥ್ವಿವಲ್ಲಭ' ಎಂಬ ಬಿರುದನ್ನು ನೀಡಿದರು. ಈ ಎಲ್ಲ ಬೆಳವಣಿಗೆಗಳು ಇಂದಿರಾ ಗಾಂಧಿ ಅವರಿಗೆ ಅರಸು ಅವರ ಮೇಲೆ ಅಸಹನೆಯನ್ನು ಹೆಚ್ಚಿಸಲು ಕಾರಣವಾಯಿತು.

1979ರ ಜನವರಿಯಲ್ಲಿ ದೆಹಲಿಯಲ್ಲಿ ಅಖಿಲ ಭಾರತ ಇಂದಿರಾ ಕಾಂಗ್ರೆಸಿನ ಮಹಾಸಭೆಯಲ್ಲಿ ಅರಸು ತಮ್ಮ ಪಕ್ಷ ವಂಶಾಡಳಿತಕ್ಕೆ ಜೋತುಬಿದ್ದ ಜೀತದಾಳುಗಳ ಕೂಟವೆಂಬ ಅಪಖ್ಯಾತಿಯನ್ನು ನಿವಾರಿಸಿಕೊಳ್ಳಬೇಕೆಂದು ಭಾಷಣ ಮಾಡಿದರು. ಅಂದು ಇಂದಿರಾ ಕಾಂಗ್ರೆಸ್‌ನಲ್ಲಿ ಸಂಜಯ ಗಾಂಧಿ ನಡೆಸಿಕೊಂಡು ಬರುತ್ತಿದ್ದ ಅತಿ ಅಬ್ಬರದ ರಾಜಕೀಯವನ್ನು ಅರಸು ಅವರು ಸ್ವಲ್ಪ ನೇರವಾಗಿಯೇ ಟೀಕಿಸಿದ್ದರು. ಇದರಿಂದ ವಂಶಾಡಳಿತದ ಶಿಶುವಾದ ಸಂಜಯ ಗಾಂಧಿ ಸಿಡಿಮಿಡಿಗೊಂಡರು. ಅರಸು ಅವರನ್ನು ಮುಗಿಸಿಯೇ ಬಿಡುವೆನೆಂದು ಬಹಿರಂಗವಾಗಿಯೇ ಮಾತನಾಡಲು ಶುರು ಮಾಡಿದರು. ಅರಸು ಸಂಪುಟದ ಕೆಲವರ ಕುಮ್ಮಕ್ಕಿನಿಂದ ಅರಸು ಅವರು ಮೂಲೆಗುಂಪಾಗ ತೊಡಗಿದರು. ಹೀಗೆ ರಾಜಕೀಯ ಜೀವನದ ದುರಂತ ನಾಯಕರಾಗಿ ಅರಸು ಅವರು ಕಂಡುಬರುತ್ತಾರೆ.

1979 ಮೇ ತಿಂಗಳ ಸಂದರ್ಭದಲ್ಲಿ ಇಂದಿರಾ ಗಾಂಧಿ ಮತ್ತು ಅರಸು ಅವರ ವಿರಸ ದೊಡ್ಡ ಸುದ್ದಿಯಾಯಿತು. ಇಂದಿರಾ ಗಾಂಧಿ ಅವರು ಗುಂಡೂರಾವ್, ಸಿ.ಕೆ. ಜಾಫರ್ ಶರೀಫ್, ಎಫ್.ಎಂ. ಖಾನ್ ಇವರನ್ನೆಲ್ಲ ಬಳಸಿಕೊಂಡು ಅರಸು ಅವರ ಕಾಲೆಳೆಯುವ ಕೆಲಸದಲ್ಲಿ ತೊಡಗಿಸಿಕೊಂಡರು. ಅರಸು ಅವರು ಮುಖ್ಯಮಂತ್ರಿ ಯಾಗಿದ್ದರು ಮತ್ತು ಕರ್ನಾಟಕ ರಾಜ್ಯ ಕಾಂಗ್ರೆಸ್‌ನ ಅಧ್ಯಕ್ಷರು ಸಹ ಆಗಿದ್ದರು. ಅರಸು ಅವರನ್ನು ಇಂದಿರಾ ಗಾಂಧಿ ಅವರು ಕಾಂಗ್ರೆಸ್ ಪಕ್ಷದ ಅಧ್ಯಕ್ಷತೆಯನ್ನು ತ್ಯಜಿಸಲು ಸೂಚಿಸಿದರು. ಆದರೆ ಅರಸು ಅವರು ಆ ಸಂದರ್ಭದಲ್ಲಿ ಅನಾರೋಗ್ಯದಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿದ್ದರು. ಅವರಿಗೆ ಆಗ 'ಸರ್ಪಸುತ್ತು' ಆಗಿತ್ತು. "ನಾನೀಗ ಅನಾರೋಗ್ಯದಲ್ಲಿದ್ದೇನೆ. ಚಿಕಿತ್ಸೆ ಮುಗಿದ ಬಳಿಕ ನಿಮ್ಮನ್ನು ಭೇಟಿಯಾಗುತ್ತೇನೆ. ನಾವು ಕುಳಿತು ಮಾತನಾಡೋಣ" ಎಂದು ದೇವರಾಜ ಅರಸು ಅವರು ತಿಳಿಸಿದರೂ ಅದಕ್ಕೆ ಒಪ್ಪದ ಇಂದಿರಾ ಗಾಂಧಿ ಅವರು 1979ರ ಜೂನ್ ತಿಂಗಳ 20ನೆಯ ತಾರೀಕು ಅರಸು ಅವರನ್ನು ಇಂದಿರಾ ಕಾಂಗ್ರೆಸ್‌ನ ಅಧ್ಯಕ್ಷತೆಯಿಂದ ವಜಾಗೊಳಿಸಿದರು.

ಈ ಸಂದರ್ಭದಲ್ಲಿ ಅರಸು ಅವರಿಗೆ ಅತ್ಯಂತ ಆಘಾತವಾದದ್ದೆಂದರೆ ಹಿಂದಿನ ದಿನದ ರಾತ್ರಿಯವರೆಗೂ ಅವರೊಂದಿಗಿದ್ದು ಸದಾ ಅವರ ಜೊತೆಗೇ ಇರುತ್ತೇನೆ ಎಂಬ ಭರವಸೆಯನ್ನೂ ನೀಡಿದ್ದಂತಹ ಎಸ್. ಬಂಗಾರಪ್ಪ ಅವರು ಮಾರನೆಯ ದಿನ ಕಾಂಗ್ರೆಸ್‌ನ ಅಧ್ಯಕ್ಷತೆಯನ್ನು ವಹಿಸಿಕೊಂಡಿದ್ದು.

ಇಂದಿರಾ ಗಾಂಧಿ ಅವರು ಬಂಗಾರಪ್ಪ ಅವರನ್ನು ಕರ್ನಾಟಕ ರಾಜ್ಯ ಇಂದಿರಾ ಕಾಂಗ್ರೆಸ್‌ನ ಅಧ್ಯಕ್ಷರನ್ನಾಗಿ ನೇಮಿಸಿದ್ದರು. ಅದುವರೆಗೂ ಅರಸು ಅವರಿಗೆ ಅಚಲ ನಿಷ್ಠೆಯನ್ನು ತೋರಿಸುತ್ತಿದ್ದ ಹಿಂದುಳಿದ ವರ್ಗಗಳ ಶಾಸಕರು ಒಬ್ಬೊಬ್ಬರಾಗಿ ಅರಸು ಅವರಿಂದ ದೂರ ಸರಿಯತೊಡಗಿದರು. ವೀರಪ್ಪ ಮೊಯಿಲಿ, ಧರಂಸಿಂಗ್, ಮಲ್ಲಿಕಾರ್ಜುನ ಖರ್ಗೆ, ವೆಂಕಟರಮಣ ಪಿ., ಶ್ರೀಮತಿ ರೇಣುಕಾ ರಾಜೇಂದ್ರ, ಕೆ. ವೆಂಕಟಪ್ಪ, ಬಿ. ರಾಮಯ್ಯ, ವೈ. ರಾಮಕೃಷ್ಣ ಇಂತಹ ನಾಯಕರೆಲ್ಲ ಅರಸು ಅವರಿಂದ ದೂರವಾದರು. ರಾಜ್ಯದ ವಿಧಾನಸಭೆಯಲ್ಲಿ ಇಂದಿರಾ ಕಾಂಗ್ರೆಸ್‌ನ ಪ್ರತ್ಯೇಕ ಘಟಕ ರಚನೆಯಾಯಿತು. ಅರಸು ನಾಯಕತ್ವದ ಕಾಂಗ್ರೆಸ್ ಪಕ್ಷದ ಸಂಖ್ಯೆಯ ಬಲ ಕುಸಿಯಿತು. ಸುಮಾರು 40ಕ್ಕೂ ಹೆಚ್ಚು ಶಾಸಕರು ಅರಸು ಕಾಂಗ್ರೆಸ್ ಪಕ್ಷವನ್ನು ತ್ಯಜಿಸಿ ಇಂದಿರಾ ಕಾಂಗ್ರೆಸನ್ನು ಸೇರಿದರು. ಈ ಹೊಸ ವಿದ್ಯಮಾನದಿಂದ ಅರಸು ಅವರಿಗೆ ಜನತಾ ಪಕ್ಷದ ಕೆಲವು ಗಣ್ಯರ ಸಹಾನುಭೂತಿ ದೊರೆಯಿತು. ಜೆ.ಎಚ್. ಪಟೇಲ್, ಜೀವರಾಜ ಆಳ್ವ, ಪ್ರಮೀಳಾ ನೇಸರ್ಗಿ ಮುಂತಾದ 25 ಮಂದಿ ಜನತಾ ಪಕ್ಷದ ಶಾಸಕರು ಅರಸು ಅವರನ್ನು ಬೆಂಬಲಿಸಿದರು. ಇದರಿಂದಾಗಿ ಅರಸು ಅವರ ಸರಕಾರ ಪತನಗೊಳ್ಳುವುದ ರಿಂದ ರಕ್ಷಿಸಲ್ಪಟ್ಟಿತು. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯ ಶಾಸಕರಲ್ಲಿ ವೀರಪ್ಪ ಮೊಯಿಲಿ ಅವರೊಬ್ಬರನ್ನು ಬಿಟ್ಟು ನಾನೂ ಸಹಿತ ಉಳಿದವರೆಲ್ಲರೂ ಅರಸು ಅವರ ಜೊತೆಗೆ ನಿಂತೆವು.

ನಮಗೂ ಇದು ಬಹಳ ಸಂದಿಗ್ಧ ಸಂಕಟದ ಪರಿಸ್ಥಿತಿಯಾಗಿತ್ತು. ಕೆಲವು ದಿನಗಳ ಹಿಂದೆ ಇಂದಿರಾ ಗಾಂಧಿ ಅವರು ಬೆಂಗಳೂರಿಗೆ ಬಂದಿದ್ದಾಗ ನನ್ನನ್ನು ಮತ್ತು ರಮೇಶ್ ಕುಮಾರ್ ಅವರನ್ನು, ಅವರು ಉಳಿದುಕೊಂಡಿದ್ದ ಅತಿಥಿಗೃಹಕ್ಕೆ ಕರೆಸಿ ಮಾತನಾಡಿದ್ದರು. 'ನೀವಿಬ್ಬರೂ ನನ್ನ ಜೊತೆಗೆ ಇರಬೇಕು' ಎಂದು ಕೇಳಿಕೊಂಡಿದ್ದರು. 'ನಾವು ಇರುತ್ತೇವೆ ಮೇಡಂ' ಎಂದು ಹೇಳಿ ಅಲ್ಲಿಂದ ಹೊರಬಂದಿದ್ದೆವು. ಆದರೆ ನಾವು ಇಂದಿರಾ ಗಾಂಧಿ ಅವರನ್ನು ಭೇಟಿಯಾದ ಸುದ್ದಿ ತಿಳಿದ ಅರಸು ಅವರು ನಮ್ಮಿಬ್ಬರನ್ನು ಕರೆಸಿಕೊಂಡು "ಏನಪ್ಪಾ, ನೀವೂ ನನ್ನನ್ನು ಬಿಟ್ಟು ಹೋಗುತ್ತೀರಾ?" ಎಂದು ಕೇಳಿದಾಗ ನಾವು ಮೂಕರಾಗಿಬಿಟ್ಟಿದ್ದೆವು. ಅರಸು ಅವರು ನಮ್ಮ ಪಾಲಿಗೆ ಎಲ್ಲವೂ ಆಗಿದ್ದರು. ಅವರನ್ನು ಬಿಟ್ಟು ಹೋಗಲು ನಮ್ಮ ಮನಸ್ಸು ಕೇಳಲಿಲ್ಲ. ನಾವು ಅವರೊಂದಿಗೆ ಉಳಿದುಕೊಂಡೆವು.

ಖಂಡಿತವಾಗಿಯೂ ಈ ಒಂದು ಬಿರುಕನ್ನು ತಪ್ಪಿಸಬಹುದಾಗಿತ್ತು. ಹಿರಿಯ ಸಚಿವರುಗಳಾದಂತಹ ಸುಬ್ಬಯ್ಯ ಶೆಟ್ಟಿ ಹಾಗೂ ಇತರರು ಮನಸ್ಸು ಮಾಡಿದ್ದರೆ ಇಂದಿರಾ ಗಾಂಧಿ ಮತ್ತು ಅರಸು ಅವರ ಮಧ್ಯೆ ಉಂಟಾಗಿದ್ದಂತಹ ಈ ಸಣ್ಣ ಅನುಮಾನದ ಬೀಜವನ್ನು ಮೊಳಕೆಯಲ್ಲೇ ಕಿತ್ತು ಹಾಕಬಹುದಾಗಿತ್ತು ಅಥವಾ ಅರಸು ಅವರಿಗೆ ಮನವರಿಕೆ ಮಾಡಿಸಿ ಅವರನ್ನು ಕಾಂಗ್ರೆಸ್‌ನಲ್ಲೇ ಉಳಿಸಿಕೊಳ್ಳುವಂತೆ ಮಾಡಿಕೊಳ್ಳ ಬಹುದಾಗಿತ್ತು. ಆದರೆ ಇಲ್ಲಿ ಯಾರು ಅರಸು ಅವರಿಗೆ ತಿಳುವಳಿಕೆ ಮಾಡಿಕೊಡ

ಬೇಕಾಗಿತ್ತೋ ಅವರು ಆ ಕೆಲಸ ಮಾಡಲಿಲ್ಲ. ಅರಸು ಅವರಿಗೆ ಒಬ್ಬಳು ಸಾಕುಮಗಳಿದ್ದಳು. ಅವಳು ಐಪಿಎಸ್ ಅಧಿಕಾರಿಯಾಗಿದ್ದಳು. ಅರಸು ಅವರನ್ನು ತಪ್ಪುದಾರಿಗೆಳೆಯುವಲ್ಲಿ ಅವಳ ಪಾತ್ರವೂ ಬಹಳಷ್ಟು ಇತ್ತು.

ಒಂದು ಸಣ್ಣ ಅರ್ಥದಲ್ಲಿ ದೇವರಾಜ ಅರಸು ಅವರ ಸ್ವಾಭಿಮಾನ ಮತ್ತು ಓವರ್ ಕಾನ್ಫಿಡೆನ್ಸ್ ಅವರನ್ನು ಹೀಗೆ ಪ್ರೇರೇಪಿಸಿತು ಎಂದೆನಿಸುತ್ತದೆ. ಕೆಲವು ಕೇಂದ್ರದ ನಾಯಕರು ಸಹ ಅರಸು ಅವರಿಗೆ ಕುಮ್ಮಕ್ಕು ನೀಡಿ ರಾಷ್ಟ್ರ ನಾಯಕತ್ವದ ಕನಸನ್ನು ಅವರಲ್ಲಿ ಹುಟ್ಟಿಸಿದ್ದರು ಎಂದು ಕಾಣುತ್ತದೆ.

ಈ ಸಂದರ್ಭದಲ್ಲಿ ಒಂದು ಘಟನೆ ನನಗೆ ನೆನಪಿಗೆ ಬರುತ್ತಿದೆ. 1978ರ ರಾಜ್ಯಸಭಾ ಚುನಾವಣೆ ಪ್ರಕ್ರಿಯೆ ಪ್ರಾರಂಭವಾಗಿತ್ತು. ಕರ್ನಾಟಕದಿಂದ ಅಭ್ಯರ್ಥಿಗಳ ಪಟ್ಟಿ ಸಿದ್ಧಪಡಿಸಿ ಅದಕ್ಕೆ ಇಂದಿರಾ ಗಾಂಧಿ ಅವರ ಅನುಮತಿಯನ್ನು ಪಡೆಯಲು ದೇವರಾಜ ಅರಸು ಅವರು ಆ ಪಟ್ಟಿಯನ್ನು ನನ್ನ ಕೈಯಲ್ಲಿ ಕೊಟ್ಟು ದೆಹಲಿಗೆ ಕಳುಹಿಸಿದ್ದರು. ನಾನು ಆ ಪಟ್ಟಿಯನ್ನು ಹಿಡಿದುಕೊಂಡು ದೆಹಲಿಯ ವಿಲ್ಲಿಂಗ್‌ಟನ್ ಅನೆಕ್ಸ್ ಎಂಬಲ್ಲಿಯ ಇಂದಿರಾ ಗಾಂಧಿ ನಿವಾಸಕ್ಕೆ ಹೋಗಿದ್ದೆ. ಪಡಸಾಲೆಯಲ್ಲಿ ನಾನು ಕುಳಿತು ಅವರಿಗಾಗಿ ಕಾಯುತ್ತಿರುವಾಗ ಖುದ್ದು ಇಂದಿರಾ ಗಾಂಧಿ ಅವರು ಕೈಯಾರೆ ಒಂದು ಕಪ್ ಕಾಫಿ ಹಿಡಿದುಕೊಂಡು ಬಂದು ನನಗೆ ಕೊಟ್ಟರು. ಎದ್ದು ನಿಂತಿದ್ದ ನನ್ನನ್ನು ಕುಳಿತುಕೊಳ್ಳಲು ಹೇಳಿ ಅವರು ಅಲ್ಲೇ ಪಕ್ಕದಲ್ಲಿ ಕುಳಿತುಕೊಂಡರು. ಹೀಗೆ ವಿಷಯ ಮಾತನಾಡುತ್ತಾ "ನಿಮ್ಮ ಅರಸು ಹೀಗೇಕೆ ಮಾಡುತ್ತಿದ್ದಾರೆ? ನಾನೇನು ಮಾಡಿದ್ದೇನೆ ಅವರಿಗೆ?" ಎಂದು ಕೇಳಿದರು.

ನಾನು "ಅವರೇನು ಮಾಡಿದ್ದಾರೆ ಮೇಡಂ?" ಎಂದು ಕೇಳಿದೆ. "ಅವರೇಕೆ ರಜನಿ ಪಟೇಲರ ಜೊತೆಯಲ್ಲಿ ಹೆಚ್ಚು ಕಾಣಿಸಿಕೊಳ್ಳುತ್ತಿದ್ದಾರೆ?." ಇಂದಿರಾ ಗಾಂಧಿ ಮತ್ತೇನನ್ನೂ ಕೇಳಲಿಲ್ಲ.

ಈ ವಿಷಯ ಇಂದಿರಾ ಗಾಂಧಿ ನನ್ನ ಬಳಿ ಯಾಕೆ ಹೇಳಿದ್ದು ಗೊತ್ತಾ? ನಾನೇನು ದೊಡ್ಡ ಜನಾಂತ ಏನೂ ಹೇಳಿದ್ದಲ್ಲ. ನನ್ನನ್ನು ಅವರು ಸಂದೇಶವಾಹಕನಾಗಿ ಬಳಸಿಕೊಂಡರು. ಅವರಿಗೆ ಗೊತ್ತು ಈ ವಿಷಯ ನಾನು ಹೋಗಿ ಅರಸು ಅವರಿಗೆ ತಲುಪಿಸುತ್ತೇನೆ ಎಂದು. ಬೆಂಗಳೂರಿಗೆ ಹಿಂದಿರುಗಿದ ನಾನು ಅರಸು ಅವರಿಗೆ ಇಂದಿರಾ ಗಾಂಧಿ ಅವರು ವ್ಯಕ್ತಪಡಿಸಿದ ಈ ವಿಷಯವನ್ನು ಮುಟ್ಟಿಸಿದೆ. ಅದಕ್ಕೆ ಪ್ರತಿಕ್ರಿಯಿಸಿದ ಅರಸು "ಅಯ್ಯೋ, ಆ ಅಮ್ಮ ಬಹಳ ಡೌಟು ಮಾಡ್ತಾರೆ ಮಾರಾಯ. ಏಕೆ ಹೀಗೆ ಮಾಡ್ತಾರೆ ಅವರು. ನಾನು ಅಂತಹದ್ದು ಏನೂ ಇಟ್ಟುಕೊಳ್ಳಲಿಲ್ಲ. ನನ್ನ ರಾಜ್ಯವನ್ನೇ ಪಣಕ್ಕಿಟ್ಟು ಆ ಅಮ್ಮನನ್ನು ಕರೆದು ಹೋರಾಡಿ ಅವರನ್ನು ಗೆಲ್ಲಿಸಿ ಕಳುಹಿಸಿದ್ದೇನೆ. ನಾನವರಿಗೆ ಮೋಸ ಮಾಡ್ತೇನಾ?" ಎಂದು ವಿಷಾದಿಸಿದರು.

ಅರಸು ಅವರು ಆಡಿದ ಆ ಮಾತಿನ ಒಂದೊಂದು ಪದಗಳು ಈಗಲೂ ನನ್ನ ಕಿವಿಯಲ್ಲಿ ಪ್ರತಿಧ್ವನಿಸುತ್ತಿದೆ. ಅರಸು ಮತ್ತು ಇಂದಿರಾ ಮಧ್ಯೆ ಈ ಬಿರುಕನ್ನು ಸೃಷ್ಟಿಸುವಲ್ಲಿ

ಮಹತ್ವದ ಪಾತ್ರ ವಹಿಸಿದವರು ಜಾಫರ್ ಶರೀಫ್, ಗುಂಡೂರಾವ್, ಎಫ್.ಎಂ. ಖಾನ್ ಮತ್ತು ಬಂಗಾರಪ್ಪ.

ಸುಬ್ಬಯ್ಯ ಶೆಟ್ಟಿ, ರಂಗನಾಥ್ ಇವರೆಲ್ಲ ಮನಸ್ಸು ಮಾಡಿದ್ದರೆ ಖಂಡಿತ ಈ ವಿಭಜನೆಯನ್ನು ತಪ್ಪಿಸಬಹುದಾಗಿತ್ತು. ನಾನು ಮತ್ತು ನನ್ನಂತಹ ಕೆಲವರು, 'ನಾವು ಎಲ್ಲವನ್ನೂ ಇಂದಿರಾ ಗಾಂಧಿ ಹೆಸರಲ್ಲೇ ಮಾಡಿದ್ದೇವೆ. ಅಭಿವೃದ್ಧಿ ಕಾರ್ಯಕ್ರಮ ಎಲ್ಲಾ ನಿಮ್ಮದೇ ಆಗಿದ್ದಿರಬಹುದು. ಆದರೆ ಜನರಿಗೆ ಗೊತ್ತಿರುವುದು ಇಂದಿರಾ ಗಾಂಧಿ ಹೆಸರು ಮಾತ್ರ' ಎಂದು ವಾದಿಸಿದೆವು. ಹಿರಿಯ ನಾಯಕರ ಎದುರಿನಲ್ಲಿ ನಮ್ಮ ಈ ವಾದಕ್ಕೆ ಬೆಲೆ ಸಿಗಲಿಲ್ಲ. ಅರಸು ಅವರಿಗೆ ಸರಿಯಾದ ಸಲಹೆ ನೀಡುವುದರಲ್ಲಿ ಹಿರಿಯ ನಾಯಕರು ಮಾಡಿದ ಪ್ರಮಾದದಿಂದಾಗಿ ಪಕ್ಷ ವಿಭಜನೆಯಾಯಿತು.

ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿದ್ದಂತಹ ಜನತಾ ಪಕ್ಷ ತನ್ನ ಒಳಜಗಳದಿಂದಾಗಿ ಸಂಕಷ್ಟಕ್ಕೆ ಗುರಿಯಾಯಿತು. ಕಾಂಗ್ರೆಸ್ (ಓ), ಜನಸಂಘ, ಭಾರತೀಯ ಲೋಕದಳ, ಸಮಾಜವಾದಿ ಪಕ್ಷ ಇವೆಲ್ಲ ಸೇರಿ ರಚಿಸಿಕೊಂಡಿದ್ದಂತಹ ಜನತಾ ಪಕ್ಷ ತನ್ನದೇ ಆದ ತಪ್ಪುಗಳಿಂದಾಗಿ ಛಿದ್ರ ಛಿದ್ರವಾಯಿತು. ಮೊರಾರ್ಜಿ ದೇಸಾಯಿ ಅವರು 1979ರ ಜುಲೈ 15ರಂದು ಬಹುಮತದ ಕೊರತೆಯಿಂದಾಗಿ ಪ್ರಧಾನಿ ಹುದ್ದೆಗೆ ರಾಜೀನಾಮೆ ನೀಡಿದರು. ಚೌಧರಿ ಚರಣ್ ಸಿಂಗ್ ಅವರು ಪ್ರಧಾನಿಯಾದರು. ಅವರೂ ಲೋಕಸಭೆಯಲ್ಲಿ ಬಹುಮತ ಸಾಬೀತುಪಡಿಸಲು ಸಾಧ್ಯವಾಗದೆ ಜುಲೈ 26ರಂದು ರಾಜೀನಾಮೆ ಕೊಟ್ಟರು. ಕೇಂದ್ರದಲ್ಲಿ ಜನತಾ ಪಕ್ಷದ ಸರಕಾರ ಪತನಗೊಂಡಿತು. ಇದು ಇಂದಿರಾ ಗಾಂಧಿ ಅವರ ಪುನರವತಾರಕ್ಕೆ ನಾಂದಿಯಾಯಿತು. ದೇವರಾಜ ಅರಸು ಅವರು ರಾಜ್ಯ, ರಾಷ್ಟ್ರಮಟ್ಟದಲ್ಲಿ ಜನತಾ ಪಕ್ಷದ ಪೂರ್ಣ ಬೆಂಬಲ ತನಗೆ ದೊರೆಯುತ್ತದೆ ಎಂದು ಭಾವಿಸಿದ್ದರು. ಈ ಲೆಕ್ಕಾಚಾರವೆಲ್ಲ ತಲೆಕೆಳಗಾಯಿತು. ಈ ಮಧ್ಯೆ ಲೋಕಸಭೆಗೆ ಮಧ್ಯಂತರ ಚುನಾವಣೆ ಘೋಷಣೆಯಾಯಿತು.

**ಅರಸು ರಾಜೀನಾಮೆ**

ಕೇಂದ್ರದಲ್ಲಿ ಜನತಾ ಪಕ್ಷ ಸರಕಾರ ಪತನಗೊಂಡು ಲೋಕಸಭೆಗೆ 1980ರ ಮಧ್ಯಾವಧಿ ಚುನಾವಣೆ ಘೋಷಣೆಯಾಯಿತು. ಮುಖ್ಯಮಂತ್ರಿ ದೇವರಾಜ ಅರಸು ಅವರು ರಾಜ್ಯದ 27 ಕ್ಷೇತ್ರಗಳಲ್ಲಿ ತನ್ನ ಅಭ್ಯರ್ಥಿಯನ್ನು ನಿಲ್ಲಿಸಿದರು. ಅರಸು ಅವರ ಆದೇಶದ ಮೇರೆಗೆ ನಾನು ಮಂಗಳೂರು ಲೋಕಸಭೆಗೆ ಅರಸು ಕಾಂಗ್ರೆಸ್‌ನ ಅಭ್ಯರ್ಥಿಯಾದೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆಯಲ್ಲಿ ವೀರಪ್ಪ ಮೊಯಿಲಿಯೊಬ್ಬರನ್ನು ಬಿಟ್ಟು ಉಳಿದ ಎಲ್ಲ ಶಾಸಕರು ಅರಸು ಕಾಂಗ್ರೆಸ್‌ನಲ್ಲಿ ಇದ್ದರೂ ವಾತಾವರಣ ನಮಗೆ ಅನುಕೂಲವಾಗಿರಲಿಲ್ಲ. ಉಡುಪಿ ಲೋಕಸಭಾ ಕ್ಷೇತ್ರದಲ್ಲಿ ಅರಸು ಕಾಂಗ್ರೆಸ್‌ನ ಟಿ.ಎ. ಪೈ ಅವರ ವಿರುದ್ಧ ಪ್ರಥಮ ಬಾರಿಗೆ ಆಸ್ಕರ್ ಫೆರ್ನಾಂಡಿಸ್ ಅವರು ಸ್ಪರ್ಧಿಸುವುದರ ಮೂಲಕ ಚುನಾವಣಾ ರಾಜಕೀಯ ಪ್ರವೇಶಿಸಿದ್ದರು.

ಜನಸಾಮಾನ್ಯರ ಮಾನಸಿಕ ಸ್ಥಿತಿ ಹೇಗಿತ್ತೆಂದರೆ ನಾನು ಲೋಕಸಭಾ ಚುನಾವಣೆಗೆ ನಾಮಪತ್ರ ಸಲ್ಲಿಸಲು ಹೋಗುತ್ತಿದ್ದಾಗ ಕೆಲವು ಕಿಡಿಗೇಡಿಗಳು ಮಂಗಳೂರಿನ ಬಾವುಟಗುಡ್ಡದ ಬಳಿ ನಮಗೆ ಕಲ್ಲು ತೂರಾಟ ಮಾಡಿದ್ದರು. ಈ ಸಂದರ್ಭದಲ್ಲಿ ನನಗೆ ಸಣ್ಣಪುಟ್ಟ ಗಾಯಗಳೂ ಆಗಿದ್ದವು.

ಚುನಾವಣಾ ಫಲಿತಾಂಶ ಪ್ರಕಟವಾದಾಗ ಬಹಳಷ್ಟು ನಿರೀಕ್ಷೆ ಇಟ್ಟುಕೊಂಡಿದ್ದ ದೇವರಾಜ ಅರಸು ಅವರಿಗೆ ಭ್ರಮನಿರಸನವಾಗಿತ್ತು. ಲಕ್ಷದ್ವೀಪದಿಂದ ಪಿ.ಎಂ. ಸಯೀದ್ ಒಬ್ಬರನ್ನು ಬಿಟ್ಟರೆ ಅರಸು ಕಾಂಗ್ರೆಸ್‌ನ ಒಬ್ಬನೇ ಒಬ್ಬ ಅಭ್ಯರ್ಥಿ ಗೆದ್ದಿರಲಿಲ್ಲ. ಲೋಕಸಭೆ ಚುನಾವಣೆಯ ಫಲಿತಾಂಶಗಳು ಪ್ರಕಟವಾಗುತ್ತಿದ್ದಾಗ ಅರಸು ಮತ್ತು ಬಿ. ಸುಬ್ಬಯ್ಯ ಶೆಟ್ಟಿ ಒಂದು ಹೋಟೇಲ್‌ನಲ್ಲಿದ್ದರಂತೆ. ಅವರ ಅಭ್ಯರ್ಥಿಗಳು ಪರಾಜಿತರಾಗುತ್ತಿರುವ ಸುದ್ದಿ ಬರುತ್ತಿರುವಾಗ ಅರಸು ಅವರು ಮೌನಕ್ಕೆ ಜಾರಿದ್ದರಂತೆ. ಅವರ ಅಳಿಯ ನಟರಾಜ ಸೋತ ಫಲಿತಾಂಶ ಪ್ರಕಟವಾದಾಗ ನಿರಾಶರಾದ ಅರಸು "ನಟರಾಜ ಕೂಡಾ ಸೋತನಾ?" ಎಂದು ನಿಟ್ಟುಸಿರುಬಿಟ್ಟಿದ್ದರಂತೆ. ಕೇಂದ್ರದಲ್ಲಿ 374 ಸ್ಥಾನಗಳನ್ನು ಗಳಿಸುವುದರ ಮೂಲಕ ಇಂದಿರಾ ಕಾಂಗ್ರೆಸ್ ಪ್ರಚಂಡ ಗೆಲುವನ್ನು ಸಾಧಿಸಿ ಇಂದಿರಾ ಗಾಂಧಿ ಮತ್ತೊಮ್ಮೆ ಪ್ರಧಾನಮಂತ್ರಿಯಾದರು.

ಈ ಫಲಿತಾಂಶದಿಂದ ಕುಗ್ಗಿದ ಅರಸು ಅವರ ರಾಜಕೀಯ ಮಂಕಾಯಿತು. ರಾಜೀನಾಮೆಗೆ ಒತ್ತಡ ಹೆಚ್ಚಾಯಿತು. ಮಾನಸಿಕವಾಗಿ ಜರ್ಜರಿತರಾದ ಅರಸು 1980ರ ಜನವರಿ 6ರಂದು ಮುಖ್ಯಮಂತ್ರಿ ಹುದ್ದೆಗೆ ರಾಜೀನಾಮೆ ನೀಡಿದರು. ಆಗ ಶಾಸಕರಿಗೆ ಮಧ್ಯಂತರ ಚುನಾವಣೆ ಬೇಕಿರಲಿಲ್ಲ. ಹೆಚ್ಚಿನ ಎಲ್ಲ ಶಾಸಕರೂ ಇಂದಿರಾ ಕಾಂಗ್ರೆಸ್‌ನ ಬಂಗಾರಪ್ಪ ಅವರೊಂದಿಗೆ ಗುರುತಿಸಿಕೊಳ್ಳಲು ಮುಂದಾದರು. ಲೋಕಸಭೆ ಚುನಾವಣೆ ಯಲ್ಲಿ ಪ್ರಚಂಡ ಗೆಲುವು ತಂದುಕೊಟ್ಟ ಎಸ್. ಬಂಗಾರಪ್ಪ ಅವರು ಮುಖ್ಯಮಂತ್ರಿ ಯಾಗುತ್ತಾರೆ ಎಂಬ ಪ್ರಬಲ ನಿರೀಕ್ಷೆ ಸುಳ್ಳಾಯಿತು. ಅದಾಗಲೇ ಸಂಜಯ ಗಾಂಧಿ ಅವರಿಗೆ ಆಪ್ತರಾಗಿದ್ದ ಆರ್. ಗುಂಡೂರಾವ್ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಬಾಚಿಕೊಂಡರು.

ಇತ್ತ ತನ್ನ ಜೊತೆಗಿದ್ದ 40 ಶಾಸಕರ ಬಲದೊಂದಿಗೆ ದೇವರಾಜ ಅರಸು ಅವರು ವಿರೋಧಪಕ್ಷದ ನಾಯಕರಾಗಿ ಕುಳಿತುಕೊಂಡರು. ಆಗ ಡಿ.ಬಿ. ಚಂದ್ರೇಗೌಡರು ಅರಸು ಕಾಂಗ್ರೆಸ್‌ನ ರಾಜ್ಯಾಧ್ಯಕ್ಷರಾಗಿದ್ದರು.

ಗುಂಡೂರಾವ್ ಅವರ ಸರಕಾರ ಅಂಕೆ ಇಲ್ಲದೆ ಮನ ಬಂದಂತೆ ಸಾಗಿತ್ತು. 1980 ಜೂನ್ ತಿಂಗಳಲ್ಲಿ ನವಲಗುಂದದಲ್ಲಿ ನಡೆದ ರೈತ ದಂಗೆಯನ್ನು ಬಳಸಿಕೊಳ್ಳುವುದರ ಮೂಲಕ ದೇವರಾಜ ಅರಸು ಅವರು ಮತ್ತೊಮ್ಮೆ ಇಂದಿರಾ ಗಾಂಧಿಯ ವಿರುದ್ಧ ರಾಜಕೀಯ ಶಕ್ತಿಯಾಗಿ ಎದ್ದು ನಿಲ್ಲಲು ಪ್ರಯತ್ನಿಸಿದರು. ಆದರೆ ಆ ಸಂದರ್ಭದಲ್ಲಿ ಅತ್ಯಂತ ಅನಿರೀಕ್ಷಿತವಾದ ದುರಂತ ಒಂದು ಸಂಭವಿಸಿತು. ಅರಸು ಅವರ ಪ್ರೀತಿಯ ಮಗಳಾದ ನಾಗರತ್ನಾ ತಮ್ಮ ತೋಟದ ಮನೆಯಲ್ಲಿ ತೋಡಿಸಿದ್ದ

ಬಾವಿಗೆ ಕಾಲು ಜಾರಿ ಬಿದ್ದು ಅಸುನೀಗಿದರು. ನಾಗರತ್ನಾ ಅವರು ಡಾ. ಎಂ.ಡಿ. ನಟರಾಜ್ ಅವರ ಪತ್ನಿ. ಈ ದುರ್ಘಟನೆಯಿಂದ ದಿಗ್ಭ್ರಮೆಗೊಳಗಾದ ಅರಸು ಅವರು ಕೆಲವು ದಿನಗಳ ಕಾಲ ಮೌನಿಯಾಗಿ ಉಳಿದರು.

ಗುಂಡೂರಾವ್ ಅವರ ಆಡಳಿತದಿಂದ ಜನ ಭ್ರಮನಿರಸನಗೊಂಡಿದ್ದರು. ಗುಂಡೂರಾವ್ ಮತ್ತು ಬಂಗಾರಪ್ಪ ಅವರ ವಿರಸ ತಾರಕಕ್ಕೇರಿತ್ತು. ರೈತ ಚಳುವಳಿ, ಗೋಕಾಕ್ ಚಳುವಳಿಗಳು ನಡೆದವು. ರಾಜ್ಯದಲ್ಲಿ ಬದಲಿ ಶಕ್ತಿಯೊಂದರ ಉಗಮಕ್ಕೆ ರಂಗ ಸಜ್ಜಾಗಿತ್ತು. ಇದನ್ನು ಮನಗಂಡ ದೇವರಾಜ ಅರಸು ಅವರು 1982ರಲ್ಲಿ ಕ್ರಾಂತಿರಂಗ ಎಂಬ ಪಕ್ಷವನ್ನು ಕಟ್ಟಿದರು. ಕ್ರಾಂತಿರಂಗ ಜನಾಕರ್ಷಣೆಯ ಬಿಂದುವಾಯಿತು. ಜಾರ್ಜ್ ಫೆರ್ನಾಂಡಿಸ್, ಚಂದ್ರಶೇಖರ್‌ರಂತಹ ರಾಷ್ಟ್ರೀಯ ನಾಯಕರು ಅರಸು ಅವರಿಗೆ ಬೆಂಬಲ ಸೂಚಿಸಿದರು. ಅರಸು ಅವರ ರಾಜಕೀಯ ಬದುಕಿನಲ್ಲಿ ಹೊಸ ಆಸೆಯೊಂದು ಚಿಗುರೊಡೆಯಲು ಪ್ರಾರಂಭವಾಯಿತು. ಅರಸು ಒಲವಿನ ರಾಜಕೀಯ ಗಾಳಿ ಬೀಸಲಾರಂಭಿಸಿತು. ಅರಸು ಅವರನ್ನು ಬೆಂಬಲಿಸದೆ ನಾವು ತಪ್ಪು ಮಾಡಿದ್ದೇವೆ ಎಂಬ ಭಾವನೆ ಹಿಂದುಳಿದ ವರ್ಗಗಳಲ್ಲಿ ಮೂಡತೊಡಗಿತು. ಇಂತಹ ಪರ್ವ ಕಾಲದಲ್ಲಿ 1982ರ ಜೂನ್ 6ರಂದು ಸಂಜೆ 6 ಗಂಟೆಗೆ ಬೆಂಗಳೂರಿನ ಜಯನಗರ ಬಡಾವಣೆಯ ತಮ್ಮ ಗೆಳೆಯನ ಮನೆಯೊಂದರಲ್ಲಿ ಹೃದಯಾಘಾತದಿಂದ ದೇವರಾಜ ಅರಸು ಅವರ ಪ್ರಾಣಪಕ್ಷಿ ಹಾರಿಹೋಯಿತು.

### ನನ್ನ ರಾಜಕೀಯದ ದುರಂತದ ದಿನಗಳು

ದೇವರಾಜ ಅರಸು ಅವರ ಮರಣಾನಂತರ ನಾನು ಮತ್ತು ಜಿಲ್ಲೆಯ ನನ್ನ ಎಲ್ಲ ಸಹೋದ್ಯೋಗಿ ಶಾಸಕರು ಅರಸು ಅವರು ಸ್ಥಾಪಿಸಿದ ಕ್ರಾಂತಿರಂಗ ಪಕ್ಷವನ್ನು ಸೇರದೆ ನಾವೆಲ್ಲ ಒಟ್ಟಾಗಿ ಇಂದಿರಾ ಕಾಂಗ್ರೆಸ್‌ಗೆ ಮರಳಿದೆವು. ಗುಂಡೂರಾವ್ ಅವರು ಮುಖ್ಯಮಂತ್ರಿಯಾಗಿದ್ದರು. ನಾನು 1983ರವರೆಗೂ ಶಾಸಕನಾಗಿದ್ದೆ. ಈ ಅವಧಿಯಲ್ಲಿ ನಾನು ನನ್ನ ಬಂಟ್ವಾಳ ಕ್ಷೇತ್ರದ ಅಭಿವೃದ್ಧಿಗಾಗಿ ಬಹಳಷ್ಟು ಶ್ರಮಿಸಿದ್ದೆ ಮತ್ತು ಪಕ್ಷ ಸಂಘಟನೆಯ ಕೆಲಸವನ್ನೂ ಮಾಡಿದ್ದೆ.

1983ರ ವಿಧಾನಸಭಾ ಚುನಾವಣೆ ಘೋಷಣೆಯಾಯಿತು. ಬಂಟ್ವಾಳ ಕ್ಷೇತ್ರಕ್ಕೆ ಮರಳಿ ನಾನು ಮತ್ತೆ ಆ ಕ್ಷೇತ್ರದ ಟಿಕೆಟ್ ಕೇಳಿದೆ. ಆ ಕ್ಷೇತ್ರದಲ್ಲಿ ಅತ್ಯಂತ ಪ್ರಬಲ ಅಭ್ಯರ್ಥಿಯಾಗಿದ್ದಂತಹ ರುಕ್ಮಯ ಪೂಜಾರಿ ಅವರನ್ನು ಬಹುದೊಡ್ಡ ಅಂತರದಲ್ಲಿ ಸೋಲಿಸಿ ಕ್ಷೇತ್ರಕ್ಕಾಗಿ ಬಹಳಷ್ಟು ದುಡಿದ ನನಗೆ 1983ರ ಚುನಾವಣೆಯಲ್ಲಿ ಜನಾರ್ದನ ಪೂಜಾರಿ ಅವರು ಟಿಕೆಟನ್ನು ಕೊಡಲು ಬಿಡಲೇ ಇಲ್ಲ. ಆದರೂ ನಾನು ಪಕ್ಷಕ್ಕಾಗಿ ಅವಿರತವಾಗಿ ಕೆಲಸವನ್ನು ಮಾಡಿದೆ. 1983ರ ಚುನಾವಣೆಯ ಫಲಿತಾಂಶ ಬಂದಾಗ ಈಗಿನ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಕಾಂಗ್ರೆಸ್ ಪ್ರಥಮ ಬಾರಿಗೆ ಹೀನಾಯವಾಗಿ ಸೋಲು ಅನುಭವಿಸಿತ್ತು. ಜಿಲ್ಲೆಯ 9 ಕ್ಷೇತ್ರಗಳಾದಂತಹ ಸುಳ್ಯ, ಪುತ್ತೂರು, ವಿಟ್ಲ, ಬೆಳ್ತಂಗಡಿ,

ಬಂಟ್ವಾಳ, ಮಂಗಳೂರು, ಉಳ್ಳಾಲ, ಸುರತ್ಕಲ್ ಮತ್ತು ಮೂಡುಬಿದಿರೆ ಇವೆಲ್ಲ ಕ್ಷೇತ್ರಗಳಲ್ಲಿಯೂ ಕಾಂಗ್ರೆಸ್ ಸೋತಿದ್ದು ಮಾತ್ರವಲ್ಲ, ಭಾರತೀಯ ಜನತಾ ಪಕ್ಷ (ಬಿಜೆಪಿ) ಪ್ರಥಮ ಬಾರಿಗೆ 6 ಸ್ಥಾನಗಳನ್ನು ಗೆದ್ದುಕೊಂಡು ದಾಖಲೆಯನ್ನು ನಿರ್ಮಿಸಿತು. ಸುಳ್ಯ ಕ್ಷೇತ್ರದಿಂದ ಬಿಜೆಪಿಯ ಬಾಕಿಲ ಹುಕ್ರಪ್ಪ, ಪುತ್ತೂರಿನಿಂದ ರಾಮ ಭಟ್, ವಿಟ್ಲದಲ್ಲಿ ರುಕ್ಮಯ ಪೂಜಾರಿ, ಬೆಳ್ತಂಗಡಿಯಲ್ಲಿ ವಸಂತ ಬಂಗೇರ, ಬಂಟ್ವಾಳದಲ್ಲಿ ಶಿವರಾವ್, ಮಂಗಳೂರಿನಲ್ಲಿ ಧನಂಜಯ ಕುಮಾರ್ ಬಿಜೆಪಿಯ ಶಾಸಕರಾಗಿ ಆಯ್ಕೆಯಾದರು. ಉಳ್ಳಾಲದಲ್ಲಿ ರಾಮಚಂದ್ರ ರಾವ್ ಸಿಪಿಎಂನಿಂದ ಗೆದ್ದರೆ, ಸುರತ್ಕಲ್‌ನಿಂದ ಲೋಕಯ್ಯ ಶೆಟ್ಟಿ ಕ್ರಾಂತಿರಂಗದಿಂದ ಮತ್ತು ಮೂಡುಬಿದಿರೆಯಿಂದ ಅಮರನಾಥ ಶೆಟ್ಟಿ ಅವರು ಜನತಾ ಪಕ್ಷದಿಂದ ಗೆಲುವು ಸಾಧಿಸಿದರು.

ಜಿಲ್ಲೆಯಲ್ಲಿ ಕಾಂಗ್ರೆಸ್‌ಗೆ ಹೀನಾಯ ಸೋಲಾಗುವುದರ ಜೊತೆಗೆ ರಾಜ್ಯದಲ್ಲಿಯೂ ಕಾಂಗ್ರೆಸ್ ಸೋತು ಜನತಾ ಪಾರ್ಟಿ ಬಿಜೆಪಿಯವರ ಬೆಂಬಲದೊಂದಿಗೆ ಸರಕಾರ ರಚಿಸಿತು. ಚುನಾವಣೆಯಲ್ಲಿ ಬಿಜೆಪಿಯಿಂದ 18 ಶಾಸಕರು ಆಯ್ಕೆಯಾಗಿದ್ದರೆ ಜನತಾ ಪಾರ್ಟಿಯಿಂದ 95 ಮಂದಿ ಶಾಸಕರು, ಕಾಂಗ್ರೆಸ್‌ನಿಂದ 82 ಮತ್ತು ಇತರ 29 ಜನ ಆಯ್ಕೆಯಾಗಿದ್ದರು. ರಾಮಕೃಷ್ಣ ಹೆಗಡೆಯವರು ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ಪ್ರಪ್ರಥಮ ಕಾಂಗ್ರೆಸೇತರ ಮುಖ್ಯಮಂತ್ರಿಯಾಗಿ ಅಧಿಕಾರವನ್ನು ಸ್ವೀಕರಿಸಿದರು. 1983ರಿಂದ 1985ರ ವರೆಗೆ ಇವರ ಸರಕಾರ ನಡೆಯಿತು.

ಬಿಜೆಪಿಯ ಬೆಂಬಲದೊಂದಿಗೆ ಆಡಳಿತ ನಡೆಸುತ್ತಿದ್ದಂತಹ ರಾಮಕೃಷ್ಣ ಹೆಗಡೆ ಅವರಿಗೆ ಬಿಜೆಪಿಯವರು ಬಹಳ ಕಿರುಕುಳ ನೀಡಲಾರಂಭಿಸಿದರು. ಒಂದು ರೀತಿಯ ಹಂಗಿನ ಸರಕಾರ ನಡೆಸುತ್ತಿರುವಂತಹ ಪರಿಸ್ಥಿತಿ ಅವರದ್ದಾಗಿತ್ತು. ಅದೇ ಸಂದರ್ಭದಲ್ಲಿ ಅಂದರೆ, 1984ರಲ್ಲಿ ಲೋಕಸಭಾ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲಿ ಕರ್ನಾಟಕ ರಾಜ್ಯದಲ್ಲಿ 28 ಲೋಕಸಭಾ ಸ್ಥಾನಗಳ ಪೈಕಿ 24 ಸ್ಥಾನಗಳನ್ನು ಕಾಂಗ್ರೆಸ್ ಗೆದ್ದುಕೊಂಡರೆ, ಆಡಳಿತಾರೂಢ ಜನತಾಪಕ್ಷ ಕೇವಲ 4 ಸ್ಥಾನಗಳನ್ನು ಮಾತ್ರ ಗಳಿಸಿತ್ತು. ಈ ಸೋಲಿನ ಹೊಣೆ ಹೊತ್ತು ರಾಮಕೃಷ್ಣ ಹೆಗಡೆ ಅವರು ವಿಧಾನಸಭೆಯನ್ನು ವಿಸರ್ಜಿಸಿ ಚುನಾವಣೆಗೆ ಶಿಫಾರಸು ಮಾಡಿದರು. ಇದು ಅವರು ರಾಜಕೀಯವಾಗಿ ತೆಗೆದುಕೊಂಡ ಬಹಳ ಧೈರ್ಯದ ಒಂದು ತೀರ್ಮಾನವಾಗಿತ್ತು. ಹಾಗೆ 1985ರಲ್ಲಿ ಕರ್ನಾಟಕ ವಿಧಾನಸಭೆಗೆ ಮಧ್ಯಾವಧಿ ಚುನಾವಣೆ ನಡೆಯಿತು. ಈ ಚುನಾವಣೆಯಲ್ಲು ಸಹ ನಾನು ಎಷ್ಟೇ ಪ್ರಯತ್ನಿಸಿದರೂ ನನಗೆ ಟಿಕೆಟ್ ಕೊಡಲಿಕ್ಕೆ ಜನಾರ್ದನ ಪೂಜಾರಿ ಬಿಡಲೇ ಇಲ್ಲ. ಕಾಂಗ್ರೆಸ್‌ನಿಂದ ಕೆಲವು ಹೊಸ ಮುಖಗಳನ್ನು ಜಿಲ್ಲೆಯಲ್ಲಿ ಪರಿಚಯಿಸಲಾಯಿತು. ಬಂಟ್ವಾಳದಿಂದ ರಮಾನಾಥ ರೈ, ವಿಟ್ಲದಿಂದ ಬಿ.ಎ. ಉಮರಬ್ಬ, ಪುತ್ತೂರಿನಿಂದ ವಿನಯಕುಮಾರ್ ಸೊರಕೆ, ಸುರತ್ಕಲ್‌ನಿಂದ ಎನ್.ಎಂ. ಅಡ್ಯಂತಾಯ ಹೀಗೆ ಕೆಲವು ಹೊಸ ಮುಖಗಳನ್ನು ಹಾಕಿ ಚುನಾವಣೆ ಎದುರಿಸಲಾಯಿತು. ಫಲಿತಾಂಶ ಬಂದಾಗ ಜನತಾ ಪಕ್ಷ ಅತ್ಯಂತ ದೊಡ್ಡ ಬಹುಮತದೊಂದಿಗೆ ಗೆದ್ದು ಅಧಿಕಾರದ

ಗದ್ದುಗೆ ಏರಿತು. 1985ರ ಚುನಾವಣೆಯಲ್ಲಿ ಜನತಾ ಪಕ್ಷ 139 ಸ್ಥಾನಗಳನ್ನು ಗೆದ್ದರೆ ಕಾಂಗ್ರೆಸ್ ಕೇವಲ 65 ಸ್ಥಾನಗಳಲ್ಲಿ ಮಾತ್ರ ವಿಜಯ ಸಾಧಿಸಿತು. ವಿಶೇಷವೆಂದರೆ 1983ರ ಚುನಾವಣೆಯಲ್ಲಿ 18 ಸ್ಥಾನಗಳನ್ನು ಹೊಂದಿದ್ದಂತಹ ಬಿಜೆಪಿ ಹೀನಾಯವಾಗಿ ಸೋತು ಕೇವಲ 2 ಸ್ಥಾನಗಳನ್ನು ಮಾತ್ರ ಉಳಿಸಿಕೊಂಡಿತು. ಸಿಪಿಐ 3, ಸಿಪಿಎಂ 3, ಸ್ವತಂತ್ರವಾಗಿ 13 ಮಂದಿ ಗೆದ್ದು ಬಂದರು. ಜಿಲ್ಲೆಯಲ್ಲಿ ಕಾಂಗ್ರೆಸ್ ಚೇತರಿಸಿಕೊಂಡಿತು. ಸುಳ್ಯದಿಂದ ಕುಶಲ, ಪುತ್ತೂರಿನಿಂದ ವಿನಯಕುಮಾರ್ ಸೊರಕೆ, ವಿಟ್ಲದಿಂದ ಬಿ.ಎ. ಉಮರಬ್ಬ, ಬಂಟ್ವಾಳದಿಂದ ಬಿ. ರಮಾನಾಥ ರೈ, ಮಂಗಳೂರಿನಿಂದ ಬ್ಲೇಸಿಯಸ್ ಎಂ. ಡಿ'ಸೋಜ, ಉಳ್ಳಾಲದಿಂದ ಬಿ.ಎಂ. ಇದಿನಬ್ಬ, ಸುರತ್ಕಲ್‌ನಿಂದ ಎನ್.ಎಂ. ಅಡ್ಯಂತಾಯ ಕಾಂಗ್ರೆಸ್‌ನ ಶಾಸಕರಾಗಿ ಆಯ್ಕೆಯಾದರು. ಮೂಡುಬಿದಿರೆಯಿಂದ ಅಮರನಾಥ ಶೆಟ್ಟಿ ಅವರು ಜನತಾ ಪಕ್ಷದಿಂದ ಗೆದ್ದರೆ, ಬೆಳ್ತಂಗಡಿಯಲ್ಲಿ ಪುನಃ ವಸಂತ ಬಂಗೇರ ಅವರು ಬಿಜೆಪಿಯ ಶಾಸಕರಾಗಿ ಆಯ್ಕೆಯಾದರು. ಈ ಚುನಾವಣೆಯೊಂದಿಗೆ ನನ್ನ ರಾಜಕೀಯದ ಒಂದು ಹಂತ ಮುಗಿಯಿತು. ನಾನು ರಾಜಕೀಯ ಪರದೆಯ ಹಿಂದೆ ಸರಿದು ಹೋದೆ.

**ಹೀಗೇಕೆ ಮಾಡಿದರು ಈ ಮೂವರು?**

ಒಂದು ಹಂತದಲ್ಲಿ ನನ್ನ ರಾಜಕೀಯ ಜೀವನವನ್ನು ಮುಗಿಸಿದವರು ಮೂರು ಜನ. ಜನಾರ್ದನ ಪೂಜಾರಿ, ಆಸ್ಕರ್ ಫೆರ್ನಾಂಡಿಸ್ ಮತ್ತು ವೀರಪ್ಪ ಮೊಯ್ಲಿ. ಈ ಮೂರು ಜನ ನನಗೇಕೆ ಈ ರೀತಿಯ ಅನ್ಯಾಯ ಮಾಡಿದರು ಎಂದು ಈಗಲೂ ನಾನು ಒಮ್ಮೊಮ್ಮೆ ಯೋಚಿಸುತ್ತೇನೆ. ಈ ಮೂವರಿಗೂ ನಾನು ಯಾವುದೇ ಹಂತದಲ್ಲಿ ಯಾವುದೇ ರೀತಿಯ ತೊಂದರೆ ಕೊಟ್ಟವನಲ್ಲ. ಸಾಧ್ಯವಾದಾಗ ಅವರಿಗೆ ಸಹಕಾರ ನೀಡಿದ್ದೇನೆ. ಆದರೆ ಈ ಮೂವರು ನನಗೆ ಮಾಡಿದ ಘನ ಘೋರ ಅನ್ಯಾಯ ಈಗಲೂ ಒಮ್ಮೊಮ್ಮೆ ನೆನಪಾಗುವಾಗ ನನಗೇಕೋ ಒಂದು ರೀತಿಯ ನೋವು ಕಾಡುತ್ತದೆ. ನಾನು 1969ರಿಂದ ಸಕ್ರಿಯವಾಗಿ ರಾಜಕಾರಣದಲ್ಲಿದ್ದವನು. ರಾಜ್ಯ ಯುವ ಕಾಂಗ್ರೆಸ್‌ನ ಪ್ರಧಾನ ಕಾರ್ಯದರ್ಶಿಯಾಗಿ, ಕೆಪಿಸಿಸಿಯ ಪ್ರಧಾನ ಕಾರ್ಯದರ್ಶಿಯಾಗಿ, ಇಂದಿರಾ ಗಾಂಧಿ ಅವರ 20 ಅಂಶಗಳ ಕಾರ್ಯಕ್ರಮವನ್ನು ಅನುಷ್ಠಾನಗೊಳಿಸುವಲ್ಲಿ ದೇವರಾಜ ಅರಸು ಅವರ ಹೆಗಲಿಗೆ ಹೆಗಲು ಕೊಟ್ಟು ದುಡಿದವನು.

ಜಿಲ್ಲೆಯಲ್ಲಿ ಕಲ್ಲಡ್ಕ ಇಸ್ಮಾಯೀಲ್ ಕೊಲೆ ಪ್ರಕರಣ ಮತ್ತು ಸೇಮಿತ ಕೊಲೆ ಪ್ರಕರಣವಾದಾಗ ಅದರಲ್ಲಿ ಅನ್ಯಾಯಕ್ಕೆ ಒಳಗಾದವರ ಪರವಾಗಿ, ಗೇಣಿದಾರರ ಪರವಾಗಿ ನಿರಂತರ ಹೋರಾಟ ಮಾಡಿದವನು. 1977ರವರೆಗೂ ನಾನು ಕಾಂಗ್ರೆಸ್‌ನಲ್ಲೇ ಅವಿರತ ಹೋರಾಟವನ್ನು ಮಾಡಿದವನು. ಆದರೆ ಈ ಜನಾರ್ದನ ಪೂಜಾರಿ ಯಾರು? ಓರ್ವ ವಕೀಲ. ಬಂಟ್ವಾಳದಲ್ಲಿ ವಕೀಲ ವೃತ್ತಿ ಮಾಡುತ್ತಿದ್ದವರು. ಆಗಿನ ಪ್ರಖ್ಯಾತ ವಕೀಲ ಯೂಸುಫ್ ಹೈದರ್ ಅವರ ಸಹಾಯಕ. ಯೂಸುಪ್ ಹೈದರ್ ಅವರು

ಸೇಮಿತ ಕೊಲೆ ಪ್ರಕರಣದಲ್ಲಿ ಗೇಣಿದಾರರ ಪರವಾಗಿ ವಾದ ಮಾಡಿದವರು. ಎಲ್ಲಿಯವರೆಗೆಂದರೆ ಸೇಮಿತ ಕೊಲೆ ಪ್ರಕರಣದಲ್ಲಿ ಕೆಲವು ಸಾಕ್ಷಿಗಳ ಅಗತ್ಯವಿದ್ದು ಸದಾನಂದ ಪೂಂಜಾ ಅಂತಹವರು ಆ ಸಾಕ್ಷಿಯನ್ನು ಹಾಕುವಂತಹ ಸಂದರ್ಭದಲ್ಲಿ ಇದೇ ಜನಾರ್ದನ ಪೂಜಾರಿ "ನಿಮಗೆಲ್ಲ ಯಾಕ್ರೀ ಈ ಉಸಾಬರಿ? ಈ ಗೇಣಿದಾರರು, ಬಡವರು ಅಂತ ಹೋರಾಟ ಮಾಡಿ ಸುಮ್ಮನೆ ನೀವು ನಿಮ್ಮನ್ನು ಯಾಕೆ ತೊಂದರೆಗೆ ಒಳಪಡಿಸಿಕೊಳ್ಳುತ್ತೀರಿ" ಎಂದು ಹೇಳಿದವರು.

ಈ ಜನಾರ್ದನ ಪೂಜಾರಿ ರಾಜಕೀಯಕ್ಕೆ ಬಂದದ್ದು ವೀರಪ್ಪ ಮೊಯ್ಲಿ ಅವರ ಕೃಪೆಯಿಂದ. ವೀರಪ್ಪ ಮೊಯ್ಲಿ ಅವರಿಗೆ ಆಗಿನ ಲೋಕಸಭಾ ಸದಸ್ಯ ಕೆ.ಕೆ. ಶೆಟ್ಟಿ ಅವರ ಮೇಲೆ ಏನೋ ಒಂದು ಸಣ್ಣ ಅಸಮಾಧಾನವಿತ್ತು. ಅವರು ಸಮಯಕ್ಕಾಗಿ ಕಾಯುತ್ತಾ ಇದ್ದರು. 1977ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ಕೆ.ಕೆ. ಶೆಟ್ಟಿ ಅವರು ಏನೋ ಒಂದು ಮಾತಿಗೆ "ನಾನು ಈ ಸಲ ಚುನಾವಣೆಗೆ ಸ್ಪರ್ಧಿಸುವುದಿಲ್ಲ" ಎಂದು ಹೇಳಿಬಿಟ್ಟರು. ಇದನ್ನೇ ಕಾಯುತ್ತಿದ್ದಂತಹ ವೀರಪ್ಪ ಮೊಯ್ಲಿ ಅವರು, ಟಿ.ಎ. ಪೈ ಅವರನ್ನು ಸಂಪರ್ಕಿಸಿದರು. ಆಗ ಟಿ.ಎ. ಪೈ ಅವರು ರಾಷ್ಟ್ರಮಟ್ಟದಲ್ಲಿ ಕಾಂಗ್ರೆಸ್‌ನ ಬಹಳ ಪ್ರಭಾವಿ ರಾಜಕಾರಣಿಯಾಗಿದ್ದರು. ದೇವರಾಜ ಅರಸು ಅವರು ಸಹ ಟಿ.ಎ. ಪೈ ಅವರಿಗೆ ತುಂಬಾ ಗೌರವವನ್ನು ಕೊಡುತ್ತಿದ್ದರು.

ವೀರಪ್ಪ ಮೊಯ್ಲಿ ಟಿ.ಎ. ಪೈ ಅವರ ತಲೆ ತಿಂದರು. "ಸಾರ್, ನಿಮ್ಮ ಉಡುಪಿ ಲೋಕಸಭಾ ಕ್ಷೇತ್ರದಲ್ಲಿ ಅತೀ ಹೆಚ್ಚು ಮತದಾರರು ಬಿಲ್ಲವರಾಗಿದ್ದಾರೆ. ನೀವು ಗೆಲ್ಲಲು ಬಿಲ್ಲವರ ಮತ ಬಹಳ ಅಗತ್ಯ. ಬಿಲ್ಲವರ ಮನವೊಲಿಸಿಕೊಳ್ಳಬೇಕಾದರೆ ಮಂಗಳೂರು ಲೋಕಸಭಾ ಕ್ಷೇತ್ರದಲ್ಲಿ ನಾವು ಓರ್ವ ಹಿಂದುಳಿದ ಬಿಲ್ಲವ ಅಭ್ಯರ್ಥಿಗೆ ಟಿಕೆಟನ್ನು ಕೊಡಬೇಕು" ಎಂದು. ಟಿ.ಎ. ಪೈ ಅವರಿಗೆ ಇದು ಸರಿ ಕಂಡಿರಬೇಕು ಮತ್ತು ಹೇಗೂ ಕೆ.ಕೆ. ಶೆಟ್ಟಿ ಅವರು ಚುನಾವಣೆಯಲ್ಲಿ ಸ್ಪರ್ಧಿಸುವುದಿಲ್ಲ ಎಂತಲೂ ಹೇಳಿದ್ದಾರೆ. "ಆಯಿತಪ್ಪ, ಒಂದು ಒಳ್ಳೆಯ ಬಿಲ್ಲವ ಅಭ್ಯರ್ಥಿಯನ್ನು ಹುಡುಕು" ಎಂದು ಹೇಳಿದರು. ಇಲ್ಲಿಗೆ ಕೆ.ಕೆ. ಶೆಟ್ಟಿ ಅವರನ್ನು ಬದಿಗೆ ಸರಿಸುವ ವೀರಪ್ಪ ಮೊಯ್ಲಿ ಅವರ ಉದ್ದೇಶ ಈಡೇರುತ್ತದೆ. ಓರ್ವ ಬಿಲ್ಲವ ಅಭ್ಯರ್ಥಿಯ ಹುಡುಕಾಟದಲ್ಲಿ ವೀರಪ್ಪ ಮೊಯ್ಲಿ ತೊಡಗಿದರು. ಆವಾಗ ಅವರ ಕಣ್ಣಿಗೆ ಬಿದ್ದದ್ದು ಈ ಪೂಜಾರಿ. ಆಗ ಇವರು ಜನಾರ್ದನ ಪೂಜಾರಿ ಅಲ್ಲ, ಖಾಲಿ ಜನಾರ್ದನ ಅಷ್ಟೆ. 'ಪೂಜಾರಿ' ಆಮೇಲೆ ವೀರಪ್ಪ ಮೊಯ್ಲಿ ಅವರು ಸೇರಿಸಿದ್ದು. ಹಾಗೆ ಜನಾರ್ದನ ಪೂಜಾರಿ ಅವರನ್ನು ಸಂಪರ್ಕಿಸಿ ಅವರನ್ನು ಹುರಿದುಂಬಿಸಿದರು. ಪೂಜಾರಿ ಹಿಂಜರಿದಿದ್ದರು. ಅದುವರೆಗೆ ರಾಜಕೀಯ ಏನು ಎಂದು ಗೊತ್ತಿರದಿದ್ದ ಅವರಿಗೆ ಖಾದಿ ಅಂಗಿಯನ್ನು ಹಾಕಿಸಿ ಟಿ.ಎ. ಪೈ ಅವರ ಎದುರಿಗೆ ಕರೆದುಕೊಂಡು ಹೋಗಿ ನಿಲ್ಲಿಸಿದರು. ಅವರನ್ನು ಹೊಗಳಿ ಪರಿಚಯಿಸಿ ಟಿ.ಎ. ಪೈ ಅವರನ್ನು ಒಪ್ಪಿಸಿದರು. ಆಮೇಲೆ ದೇವರಾಜ ಅರಸು ಅವರ ಹತ್ತಿರ ಟಿ.ಎ. ಪೈ ಮತ್ತು ವೀರಪ್ಪ ಮೊಯ್ಲಿ ಹೋಗಿ ಜನಾರ್ದನ ಪೂಜಾರಿ ಅವರ ಹೆಸರನ್ನು ಹೇಳಿ, ಅವರ ಬಗ್ಗೆ ಸ್ವಲ್ಪ ಹೊಗಳಿ,

ಅರಸು ಅವರ ಮನವೊಲಿಸಿದರು. ಹೀಗೆ ಕಾಂಗ್ರೆಸ್ ಪಕ್ಷದ ಪ್ರಾಥಮಿಕ ಸದಸ್ಯನೂ ಅಲ್ಲದ ಒಬ್ಬ ವ್ಯಕ್ತಿ ನೇರವಾಗಿ ಮಂಗಳೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾದರು. ಯಾರಿಗೂ ಪರಿಚಯ ಇಲ್ಲದ ಈ ಜನಾರ್ದನ ಪೂಜಾರಿ ಚುನಾವಣಾ ಕಣಕ್ಕೆ ಇಳಿದರು. ಆಗ ಇಂಗ್ಲಿಷ್ ದೈನಿಕವೊಂದರಲ್ಲಿ ಬಂದ ಒಂದು ತಲೆಬರಹ ಈಗಲೂ ನನಗೆ ನೆನಪಾಗುತ್ತಿದೆ. 'ಹೂ ಈಸ್ ದಿಸ್ ಪೂಜಾರಿ".

ಈ ಜನಾರ್ದನ ಪೂಜಾರಿ ಚುನಾವಣೆಯಲ್ಲಿ ಗೆದ್ದರಲ್ಲ, ಅದು ಇಂದಿರಾ ಗಾಂಧಿ ಅವರ ಹೆಸರಿನಿಂದ ಮಾತ್ರ ಗೆದ್ದದ್ದಲ್ಲದೆ, ಜನಾರ್ದನ ಪೂಜಾರಿ ಗೆದ್ದದ್ದಲ್ಲ. ಈ ಇಂದಿರಾ ಗಾಂಧಿಯವರ ಹೆಸರು ಈ ಜಿಲ್ಲೆಯಲ್ಲಿ ಇಷ್ಟೊಂದು ಪ್ರಚಲಿತಕ್ಕೆ ಬರಲು ಕಾರಣ ಯಾರು? ದೇವರಾಜ ಅರಸು ಅವರು. ದೇವರಾಜ ಅರಸು ಅವರ ಎಲ್ಲ ಕಾರ್ಯಕ್ರಮಗಳನ್ನು ಈ ಜಿಲ್ಲೆಯಲ್ಲಿ ಅನುಷ್ಠಾನಕ್ಕೆ ತಂದವರು ಯಾರು? ನಾವು. ಅದು ನಾನಾಗಿರಬಹುದು, ಸುಬ್ಬಯ ಶೆಟ್ಟಿ ಅವರಾಗಿರಬಹುದು, ಕೆ.ಕೆ. ಶೆಟ್ಟಿ ಅವರಾಗಿರಬಹುದು, ನಾವೆಲ್ಲ ನಿರಂತರವಾಗಿ ದುಡಿದ ಆ ಬೆವರಿನ ಫಲದಿಂದಾಗಿ ಜನಾರ್ದನ ಪೂಜಾರಿ ಅವರು ಲೋಕಸಭಾ ಸದಸ್ಯರಾದದ್ದು. ಆದರೆ ಗೆದ್ದ ನಂತರ ಈ ಜನಾರ್ದನ ಪೂಜಾರಿ ನಮ್ಮನ್ನೆಲ್ಲ ಮರೆತುಬಿಟ್ಟರು. ಇಡೀ ಜಿಲ್ಲೆಯ ರಾಜಕೀಯವನ್ನು ತಮ್ಮ ಕಪಿಮುಷ್ಟಿಯಲ್ಲಿ ಇಟ್ಟುಕೊಂಡರು. ಎಲ್ಲಿಯವರೆಗೆಂದರೆ ಒಂದು ಗ್ರಾಮ ಪಂಚಾಯತ್‌ನ ಚುನಾವಣೆ ಆಗುವಾಗ ಅಲ್ಲಿಯ ಅಭ್ಯರ್ಥಿಯ ಹೆಸರು ಕೂಡಾ ಜನಾರ್ದನ ಪೂಜಾರಿ ಹೇಳಬೇಕು. ಕಾರ್ಪೊರೇಷನ್ ಚುನಾವಣೆ ಆಗುವಾಗಲೂ ಯಾರಿಗೆಲ್ಲ ಕಾರ್ಪೊರೇಟರ್ ಟಿಕೆಟ್ ಕೊಡಬೇಕು ಎಂದು ಈ ಪೂಜಾರಿ ಹೇಳಬೇಕು. ಯಾರು ಮೇಯರ್ ಆಗಬೇಕು ಎಂದು ಈ ಪೂಜಾರಿ ಹೇಳಬೇಕು. ಯಾರು ಶಾಸಕರಾಗಬೇಕು ಅದನ್ನೂ ಪೂಜಾರಿಯೇ ಹೇಳಬೇಕು. ಅಂತಹ ಒಂದು ಪರಿಸ್ಥಿತಿಯನ್ನು ಪೂಜಾರಿ ತಮ್ಮ ಸ್ವಾರ್ಥಕ್ಕಾಗಿ ನಿರ್ಮಾಣ ಮಾಡಿಕೊಂಡರು. ನಾವೆಲ್ಲ ದುಡಿದದ್ದು, ಪೂಜಾರಿ ಬಂದು ಕುಳಿತದ್ದು, ನಮ್ಮನ್ನೆಲ್ಲ ತುಳಿದದ್ದು.

ಈ ಜನಾರ್ದನ ಪೂಜಾರಿ ಅವರು ಎಷ್ಟು ಅಹಂಕಾರವನ್ನು ಪ್ರದರ್ಶಿಸಿದ್ದರು ಮತ್ತು ನನಗೆ ಅವಮಾನ ಮಾಡಿದ್ದರು ಎಂದರೆ 1985ರಲ್ಲಿ ನಾನು ಬಂಟ್ವಾಳ ವಿಧಾನಸಭಾ ಕ್ಷೇತ್ರಕ್ಕೆ ಟಿಕೆಟ್‌ಗಾಗಿ ಬಹಳಷ್ಟು ಪ್ರಯತ್ನಿಸುತ್ತಿರುವಾಗ ಒಮ್ಮೆಯೂ ಸಹ ಅವರನ್ನು ಭೇಟಿಯಾಗುವ ಅವಕಾಶವನ್ನು ಅವರು ನನಗೆ ಕೊಡಲೇ ಇಲ್ಲ. ಎಷ್ಟೋ ಸಲ ಫೋನ್‌ನಲ್ಲಿ ಪ್ರಯತ್ನಿಸಿದರೂ ಸೌಜನ್ಯಕ್ಕಾದರೂ ಮಾತನಾಡಲಿಲ್ಲ. ಆಸ್ಕರ್ ಫೆರ್ನಾಂಡಿಸ್ ಅವರು ನನಗೆ ಸಲಹೆ ನೀಡಿ, ನೀವು ಪೂಜಾರಿ ಅವರನ್ನು ಕಂಡು ಮಾತನಾಡಿಸಿ, ಅವರನ್ನು ಒಪ್ಪಿಸಿ ಎಂದು ಹೇಳಿದ್ದರೂ ಸಹ ನನ್ನನ್ನು ಭೇಟಿಯಾಗುವ ಕನಿಷ್ಠ ಸೌಜನ್ಯವನ್ನೂ ಈ ಪೂಜಾರಿ ತೋರಿಸಲಿಲ್ಲ. ಅದು ಮಾತ್ರ ಅಲ್ಲ, ಬಂಟ್ವಾಳ ಕ್ಷೇತ್ರಕ್ಕೆ ರಮಾನಾಥ ರೈ ಅವರಿಗೆ ಟಿಕೆಟ್ ಖಾತ್ರಿಯಾಗಿ ಅವರ ಹೆಸರು ಘೋಷಣೆಯಾದ ನಂತರ ನಾನು ಪುನಃ ಪೂಜಾರಿ ಅವರಿಗೆ ಫೋನ್ ಮಾಡಿದಾಗ, ಫೋನ್‌ನಲ್ಲಿ

ಮಾತನಾಡಿದರು. ಆವಾಗ ಅವರು ಹೇಳಿದ ಮಾತು ಇಂದೂ ಸಹ ನನ್ನ ಕಿವಿಗಳಲ್ಲಿ ಪ್ರತಿಧ್ವನಿಸುತ್ತಿದೆ. "ಪೋಲೆ, ಪೋಲೆ, ಫೀಲ್ಡ್‌ಡ್ ಕೆಲಸ ಮಲ್ಪುಲೆ, ಬೊಕ್ಕ ಪೂರ ತೂಕ" (ಹೋಗಿ ಹೋಗಿ, ಫೀಲ್ಡ್‌ನಲ್ಲಿ ಕೆಲಸ ಮಾಡಿ, ಮತ್ತೆ ಎಲ್ಲ ನೋಡುವ) ಎಂದು ಮುಖಕ್ಕೆ ಹೊಡೆದಂತೆ ಹೇಳಿದ್ದರು.

ಆಸ್ಕರ್ ಫೆರ್ನಾಂಡಿಸ್ ಅವರು ನಾನು ಗುರುತಿಸಿದ ಜಿಲ್ಲೆಯ ಓರ್ವ ಯುವಕ. ಹರಿಶ್ಚಂದ್ರ ಬೆಂಗ್ರೆ ಎಂಬವರು ದಕ್ಷಿಣ ಕನ್ನಡ ಜಿಲ್ಲೆಯ ಯೂತ್ ಕಾಂಗ್ರೆಸ್‌ನ ಅಧ್ಯಕ್ಷರಾಗಿದ್ದರು. ಅವರನ್ನು ಅಧ್ಯಕ್ಷರನ್ನಾಗಿ ಮಾಡಿದವರು ಸಚಿವ ಬಿ. ಸುಬ್ಬಯ್ಯ ಶೆಟ್ಟಿ ಅವರು. ಆಗ ಆಸ್ಕರ್ ಫೆರ್ನಾಂಡಿಸ್ ಪ್ರಧಾನ ಕಾರ್ಯದರ್ಶಿಯಾಗಿದ್ದರು. ಅವರನ್ನು ರಾಜಕೀಯದಲ್ಲಿ ಮೇಲೆ ತರಬೇಕು ಎನ್ನುವುದು ನನ್ನ ಬಯಕೆಯಾಗಿತ್ತು. ಅದಕ್ಕಾಗಿ ನಾನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯನ್ನು ಅರ್ಬನ್ ಮತ್ತು ರೂರಲ್ ಎಂದು ವಿಭಜಿಸಿ ಉಡುಪಿಯನ್ನು ದಕ್ಷಿಣ ಕನ್ನಡದ ರೂರಲ್ ಜಿಲ್ಲೆ ಎಂದು ಗುರುತಿಸಿ, ಆ ಜಿಲ್ಲೆಗೆ ಆಸ್ಕರ್ ಫೆರ್ನಾಂಡಿಸ್ ಅವರನ್ನು ಅಧ್ಯಕ್ಷನನ್ನಾಗಿ ನೇಮಿಸಿದೆ. ಇದಕ್ಕೆ ಕೆಲವರ ಆಕ್ಷೇಪ ಇದ್ದರೂ ನಾನು ಅದಕ್ಕೆ ಸಮಜಾಯಿಸಿ ಕೊಟ್ಟಿದ್ದೆ. ಅವಿಭಜಿತ ದಕ್ಷಿಣಕನ್ನಡ ಜಿಲ್ಲೆ ಮಂಗಳೂರಿನಿಂದ ಬೈಂದೂರುವರೆಗೆ ಬಹಳ ವಿಶಾಲವಾಗಿದೆ. ಇದನ್ನು ಹೀಗೆ ವಿಭಜಿಸದಿದ್ದರೆ ಯುವ ಕಾಂಗ್ರೆಸ್‌ನ ಸಂಘಟನೆಗೆ ಕಷ್ಟವಾಗಬಹುದೆಂದು ಕಾರಣ ನೀಡಿದ್ದೆ. ನನಗೆ ಆಸ್ಕರ್ ಫೆರ್ನಾಂಡಿಸ್ ಅವರಿಗೆ ಒಂದು ಸೂಕ್ತ ಸ್ಥಾನಮಾನ ಕೊಡಬೇಕು ಎಂಬ ಉದ್ದೇಶ ಮನಸ್ಸಿನಲ್ಲಿತ್ತು. ಇದು ಸುಬ್ಬಯ್ಯ ಶೆಟ್ಟಿ ಅವರಿಗೆ ಇಷ್ಟವಿರಲಿಲ್ಲ. 1980ರ ಲೋಕಸಭಾ ಚುನಾವಣೆ ಬಂದಾಗ ಟಿಕೆಟ್ ಅನ್ನು ಕೊಡುವಾಗ ಯುವ ಕಾಂಗ್ರೆಸ್‌ಗೆ ಒಂದು ಪ್ರಾತಿನಿಧ್ಯ ಕೊಡಬೇಕು ಎಂದು ಕಾಂಗ್ರೆಸ್‌ನಲ್ಲಿ ತೀರ್ಮಾನ ಆದ ಕಾರಣ ಆ ಕೋಟಾದಲ್ಲಿ ಆಸ್ಕರ್ ಫೆರ್ನಾಂಡಿಸ್ ಅವರಿಗೆ ಉಡುಪಿ ಲೋಕಸಭೆಗೆ ಟಿಕೆಟ್ ಸಿಕ್ಕಿತು ಮತ್ತು ಆಸ್ಕರ್ ಫೆರ್ನಾಂಡಿಸ್, ಟಿ.ಎ. ಪೈ ಅವರ ಎದುರು ಭರ್ಜರಿ ವಿಜಯವನ್ನು ಸಾಧಿಸಿ ಲೋಕಸಭಾ ಸದಸ್ಯರಾದರು.

1985ರ ವಿಧಾನಸಭಾ ಚುನಾವಣೆಯಲ್ಲಿ ನಾನು ಬಂಟ್ವಾಳದ ಟಿಕೆಟಿಗಾಗಿ ಪುನಃ ಪ್ರಯತ್ನಿಸುತ್ತಿರುವಾಗ ನನ್ನ ಮಿತ್ರ ಮಾಜಿ ಶಾಸಕ ಶುಂಠಿಕೊಪ್ಪ ಇಬ್ರಾಹೀಂ ಅವರು ನನಗೆ ತುಂಬ ಬೆಂಬಲ ನೀಡಿದ್ದರು. ಇಬ್ರಾಹೀಂ ಅವರು ಗುಂಡೂರಾವ್ ಅವರ ಅತ್ಯಂತ ಆತ್ಮೀಯರಾಗಿದ್ದರು. ಗುಂಡೂರಾವ್ ಬಳಿಗೂ ನನ್ನನ್ನು ಕರೆದುಕೊಂಡು ಹೋಗಿದ್ದರು. ಶಾಸಕನಾಗಿ ನೀವು ಒಳ್ಳೆಯ ಕೆಲಸ ಮಾಡಿದ್ದೀರಿ. ದೇವರಾಜ ಅರಸು ಅವರ ಜೊತೆಗಿದ್ದು, ಆ ನಂತರ ಕಾಂಗ್ರೆಸ್‌ಗೆ ಬಂದ ಇತರ ಎಲ್ಲ ಜಿಲ್ಲೆಗಳಲ್ಲಿ ಇತರ ಎಲ್ಲ ಶಾಸಕರಿಗೆ ಸಮಾನ ಸ್ಥಾನಮಾನ ನೀಡಲಾಗಿದೆ. ನಿಮಗೆ ಟಿಕೆಟ್ ನಿರಾಕರಿಸುವುದು ಸರಿಯಲ್ಲ. ನೀವು ಇಲ್ಲಿಯೇ ಕುಳಿತುಕೊಳ್ಳಬೇಡಿ. ದೆಹಲಿಗೆ ಹೋಗಿ ಪ್ರಯತ್ನಿಸಿ ಎಂದು ಗುಂಡೂರಾವ್ ಸಲಹೆ ನೀಡಿದ್ದರು. ನನಗೆ ಆ ಸಂದರ್ಭದಲ್ಲಿ ಸಹಾಯ ಮಾಡಬಹುದಾಗಿದ್ದ ಏಕೈಕ ವ್ಯಕ್ತಿ ಆಸ್ಕರ್ ಫೆರ್ನಾಂಡಿಸ್. ನಾನು ಆಸ್ಕರ್‌ಗೆ ಮಾಡಿದ್ದ

ಉಪಕಾರವನ್ನು ಸ್ಮರಿಸಿಯಾದರೂ ನನಗೆ ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಸಹಾಯ ಮಾಡಬಹುದು ಎಂದು ಆಗ ನಿರೀಕ್ಷಿಸಿದ್ದೆ. ಆದರೆ ನನ್ನ ನಿರೀಕ್ಷೆ ಸುಳ್ಳಾಯಿತು.

ಆ ಸಂದರ್ಭದಲ್ಲಿ ನನ್ನ ಬಳಿ ದುಡ್ಡಿರಲಿಲ್ಲ. ಎಷ್ಟು ಕಷ್ಟದಲ್ಲಿದ್ದೆ ಎಂದರೆ ದೆಹಲಿಗೆ ಹೋಗುವಷ್ಟು ದುಡ್ಡೂ ನನ್ನಲ್ಲಿರಲಿಲ್ಲ. ಆದರೂ ಹೇಗಾದರೂ ದುಡ್ಡು ಜೋಡಿಸಿಕೊಂಡು ದೆಹಲಿಗೆ ಹೋಗಿ ಆಸ್ಕರ್ ಫೆರ್ನಾಂಡಿಸ್ ಅವರನ್ನು ಭೇಟಿಯಾಗಿ ನನ್ನ ಎಲ್ಲ ಭಾವನೆಗಳನ್ನು ವಿವರಿಸಿ ಟಿಕೆಟ್ ಕೇಳಿದೆ. ಆದರೆ ಆಸ್ಕರ್ ತನ್ನ ಅಸಹಾಯಕತೆಯನ್ನು ಪ್ರದರ್ಶಿಸಿದರು. "ಜನಾರ್ದನ ಪೂಜಾರಿ ಮತ್ತು ವೀರಪ್ಪ ಮೊಯ್ಲಿ ಅವರ ತೀವ್ರ ಒತ್ತಡ ನನ್ನ ಮೇಲೆ ಇದೆ. ನನಗೆ ಏನೂ ಮಾಡಲು ಸಾಧ್ಯವಿಲ್ಲ" ಎಂದು ಕೈಚೆಲ್ಲಿದ್ದರು. ಆಗ ನಾನು ಹೇಳಿದೆ "ಬಂಟ್ವಾಳ ವಿಧಾನಸಭಾ ಕ್ಷೇತ್ರ ನಿಮ್ಮ ಉಡುಪಿ ಲೋಕಸಭಾ ಕ್ಷೇತ್ರದ ಒಳಗೆ ಬರುತ್ತದೆ. ಅಲ್ಲಿ ಯಾರಿಗೆ ಟಿಕೆಟ್ ಕೊಡಬೇಕೆಂದು ನಿರ್ಧರಿಸುವವರು ನೀವು. ಕೇಂದ್ರದಲ್ಲಿ ಒಳ್ಳೆಯ ಸ್ಥಾನದಲ್ಲಿದ್ದೀರಿ. ಖಂಡಿತವಾಗಿಯೂ ನೀವು ನನಗೆ ಸಹಾಯ ಮಾಡಬಹುದು. ನನಗೆ ಟಿಕೆಟ್ ನಿರಾಕರಿಸಿದರೆ ನೀವು ನನ್ನನ್ನು ರಾಜಕೀಯದ ತಿಪ್ಪೆಗುಂಡಿಗೆ ಎಸೆದಂತೆ" ಎಂದು ಹೇಳಿದೆ. ಆದರೂ ಆಸ್ಕರ್ ಫೆರ್ನಾಂಡಿಸ್ ಮನಸ್ಸು ಮಾಡಲಿಲ್ಲ.

ನೀವು ಈಗ ಸಾಮಾನ್ಯ ರಾಜಕಾರಣಿ ಅಲ್ಲ. ಪ್ರಧಾನಮಂತ್ರಿಯವರ ಪ್ರಿನ್ಸಿಪಲ್ ಸೆಕ್ರೆಟರಿಯಾಗಿದ್ದೀರಿ. ಈ ದೇಶದ ಅನೇಕ ವ್ಯಕ್ತಿಗಳ ರಾಜಕೀಯ ಭವಿಷ್ಯ ನಿಮ್ಮ ಕೈಯಲ್ಲಿದೆ. ನಿಮ್ಮಿಂದ ಯಾರಿಗೂ ಅನ್ಯಾಯವಾಗಬಾರದು. ನಿಮ್ಮ ಚುನಾವಣೆಯಲ್ಲಿ ನಾನು ದುಡಿದಿದ್ದೇನೆ. ಬಂಟ್ವಾಳ ಕ್ಷೇತ್ರದಲ್ಲಿ ನಿಮಗೆ ಒಳ್ಳೆಯ ಲೀಡ್ ತೆಗೆದುಕೊಟ್ಟಿದ್ದೇನೆ. ನಾನು ಅರಸು ಜೊತೆ ನಿಂತೆ ಎಂಬ ಕಾರಣಕ್ಕಾಗಿ ನನಗೆ ಟಿಕೆಟ್ ನಿರಾಕರಿಸುವುದು ಸರಿಯಲ್ಲ. ಬೇರೆ ಎಲ್ಲಾ ಜಿಲ್ಲೆಗಳಲ್ಲೂ ಅರಸು ಜೊತೆಗಿದ್ದು ಬಿಟ್ಟು ಬಂದವರಿಗೆ ಟಿಕೆಟ್ ಕೊಟ್ಟಿದ್ದಾರೆ ಎಂದೆಲ್ಲ ಹೇಳಿ ಮನವರಿಕೆ ಮಾಡಿದೆ. ಆದರೂ ಆಸ್ಕರ್ ಫೆರ್ನಾಂಡಿಸ್ ಅವರ ಮನಸ್ಸು ಕರಗಲೇ ಇಲ್ಲ.

ಇನ್ನು ವೀರಪ್ಪ ಮೊಯ್ಲಿ. ವೀರಪ್ಪ ಮೊಯ್ಲಿ ಅವರು ನನ್ನ ರಾಜಕೀಯ ಬದುಕಿಗೆ ಏಕೆ ಅಡ್ಡಗಾಲಿಟ್ಟರು ಎಂಬುದು ಇಂದಿಗೂ ಒಂದು ಯಕ್ಷಪ್ರಶ್ನೆಯಾಗಿ ಉಳಿದಿದೆ. ಏಕೆಂದರೆ ನಾನೆಂದೂ ವೀರಪ್ಪ ಮೊಯ್ಲಿ ಅವರಿಗೆ ಯಾವ ರೀತಿಯ ತೊಂದರೆಯನ್ನೂ ಕೊಟ್ಟವನಲ್ಲ. ಬಹಳ ಒಳ್ಳೆಯ ರೀತಿಯಲ್ಲಿ ವ್ಯವಹರಿಸಿಕೊಂಡು ಬಂದಿದ್ದೆ. ದೇವರಾಜ ಅರಸು ಮತ್ತು ಇಂದಿರಾ ಗಾಂಧಿ ಅವರ ಮಧ್ಯೆ ರಾಜಕೀಯ ಬಿರುಕನ್ನು ಹುಟ್ಟಿಸುವುದರಲ್ಲಿ ವೀರಪ್ಪ ಮೊಯ್ಲಿ ಅವರ ಕಿಂಚಿತ್ ಕೈವಾಡ ಇದೆ ಎಂಬ ಸುದ್ದಿ ಇತ್ತಾದರೂ ಅದನ್ನು ಎಲ್ಲಿಯೂ ಎಂದೂ ನಾನು ಹೇಳಿಕೊಂಡವನಲ್ಲ. ಆದರೂ ಮೊಯ್ಲಿ ಅವರು ನನಗೇಕೆ ಅನ್ಯಾಯ ಮಾಡಿದರು ಎಂಬ ಪ್ರಶ್ನೆ ಇಂದಿಗೂ ನನ್ನ ಮನಸ್ಸಿನಲ್ಲಿ ಪ್ರಶ್ನೆಯಾಗಿಯೇ ಉಳಿದಿದೆ.

ನಾನು ದೇವರಾಜ ಅರಸು ಜೊತೆ ಹೋಗಿದ್ದೆ ಎಂಬ ಕಾರಣವನ್ನು ನೀಡಿ

ನನ್ನನ್ನು ತುಳಿದರು. ಇಡೀ ರಾಜ್ಯದಲ್ಲಿ ಯಾವ ಜಿಲ್ಲೆಯಲ್ಲಿಯೂ ಸಹ ಅರಸು ಜೊತೆ ಹೋಗಿ ಹಿಂದೆ ಬಂದವರಿಗೆ ಈ ಪರಿಸ್ಥಿತಿ ಆಗಲಿಲ್ಲ. ಮಲ್ಲಿಕಾರ್ಜುನ ಖರ್ಗೆ ಅವರೂ ಸಹ ಅರಸು ಜೊತೆ ಹೋಗಿ ಬಂದವರು. ಆದರೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಮಾತ್ರ ಅರಸು ಜೊತೆ ಹೋಗಿಬಂದ ಎಲ್ಲ ನಾಯಕರನ್ನು ನೆಲಸಮ ಮಾಡಿಬಿಟ್ಟರು. ಕಾಪು ಭಾಸ್ಕರ ಶೆಟ್ಟಿ, ದಾಮೋದರ ಮುಲ್ಕಿ, ಬಿ. ಸುಬ್ಬಯ್ಯ ಶೆಟ್ಟಿ, ಆನಂದಕುಂದ ಹೆಗ್ಡೆ; ಪಕ್ಷಕ್ಕಾಗಿ ಬಹಳಷ್ಟು ತ್ಯಾಗ ಮಾಡಿದ, ಭೂಸುಧಾರಣೆಯ ಕಾನೂನು ಬಂದಾಗ ತನ್ನ ಜಮೀನನ್ನು ಗೇಣಿದಾರರಿಗೆ ಸ್ವಇಚ್ಛೆಯಿಂದ ಬಿಟ್ಟುಕೊಟ್ಟ ಎ.ಜೆ. ಕೊಡ್ಗಿ ಈ ಎಲ್ಲ ನಾಯಕರನ್ನು ಈ ಜನಾರ್ದನ ಪೂಜಾರಿ, ವೀರಪ್ಪ ಮೊಯ್ಲಿ ಮತ್ತು ಆಸ್ಕರ್ ಫೆರ್ನಾಂಡಿಸ್ ನಿಷ್ಕರುಣೆಯಿಂದ ತುಳಿದುಬಿಟ್ಟರು. ಆಸ್ಕರ್ ಫೆರ್ನಾಂಡಿಸ್ ಮನಸ್ಸು ಮಾಡಿದ್ದರೆ ನ್ಯಾಯ ಒದಗಿಸಬಹುದಾಗಿತ್ತು. ಅವರು ಕೂಡಾ ಈ ಪೂಜಾರಿ, ಮೊಯ್ಲಿ ಅವರಿಗೆ ಹೆದರಿದರು. ಆನಂದಕುಂದ ಹೆಗ್ಡೆ ಬಹಳ ಸುಂದರ ಕನ್ನಡ ಮಾತಾಡುವವರು. ಈ ಮೂರು ಜನರಿಗೆ ಅವರೊಂದೊಂದು ಹೆಸರಿಟ್ಟಿದ್ದರು. ಒಬ್ಬ ಕೀಚಕ, ಮತ್ತೊಬ್ಬ ನಯವಂಚಕ, ಇನ್ನೊಬ್ಬ ಮಾಯಾವಿ. ಈ ತ್ರಿಮೂರ್ತಿಗಳು ನಮ್ಮನ್ನು ಮೇಲೆ ಬರಲು ಬಿಡುವುದಿಲ್ಲ ಎಂದು ಹೇಳುತ್ತಿದ್ದರು ಮತ್ತು ಹಾಗೆಯೇ ಆಯಿತು.

ಈ ಎಲ್ಲ ಘಟನೆಗಳನ್ನು ನಾನಿಲ್ಲಿ ನೆನಪಿಸಿಕೊಳ್ಳುತ್ತಿದ್ದೇನೆ ಅಷ್ಟೆ. ಈ ಗಳಿಗೆಯಲ್ಲಿ ನನ್ನ ಮನಸ್ಸಿನಲ್ಲಿ ಈ ಮೂರು ಜನರ ಮೇಲೆ ಯಾವುದೇ ರೀತಿಯ ಕೋಪವಾಗಲಿ, ದ್ವೇಷವಾಗಲಿ ಖಂಡಿತಾ ಇಲ್ಲ. ಇವೆಲ್ಲ ರಾಜಕೀಯದಲ್ಲಿ ಆಗಬಹುದಾದ ಘಟನೆಗಳು. ಇಲ್ಲಿ ಯಾರನ್ನು ಯಾರೂ ದೂಷಿಸಬಾರದು, ದೂಷಿಸುವುದು ಸಹ ಸರಿಯಲ್ಲ. ಜನಾರ್ದನ ಪೂಜಾರಿ ಅವರು ಈಗ ನನ್ನ ಹಾಗೆ ವಯೋವೃದ್ಧರಾಗಿದ್ದಾರೆ. ಅನಾರೋಗ್ಯ ದಿಂದ ಬಳಲುತ್ತಿದ್ದಾರೆ. ನಿರಂತರ ರಾಜಕೀಯ ಸೋಲಿನಿಂದ, ಕಾಲಚಕ್ರದ ಹೊಡೆತದಿಂದ, ಸಣ್ಣಪುಟ್ಟ ಘಟನೆಗಳಿಂದ ಬಹಳ ನೊಂದಿದ್ದಾರೆ, ನಲುಗಿದ್ದಾರೆ. ಅವರಿಗೆ ದೇವರು ಆರೋಗ್ಯವನ್ನು, ಮನಃಶಾಂತಿಯನ್ನು ನೀಡಲಿ ಎಂದು ನಾನು ಬಯಸುತ್ತೇನೆ. ಹಾಗೆಯೇ ಆಸ್ಕರ್ ಫೆರ್ನಾಂಡಿಸ್, ಈಗಲೂ ನನ್ನನ್ನು ಕಂಡರೆ ಬಹಳ ಗೌರವಪೂರ್ವಕವಾಗಿ ವ್ಯವಹರಿಸುತ್ತಾರೆ. ನನ್ನನ್ನು ಬಹಳಷ್ಟು ಪ್ರೀತಿಸುತ್ತಾರೆ. ಇತ್ತೀಚಿನ ದಿನಗಳಲ್ಲಿ ನನ್ನನ್ನು ಆತ್ಮೀಯವಾಗಿ ಸನ್ಮಾನಿಸಿದ್ದಾರೆ. ಅವರಿಗೆ ಇನ್ನೂ ರಾಜಕೀಯ ಭವಿಷ್ಯವಿದೆ. ಅವರಿಗೂ ನಾನು ಶುಭವನ್ನು ಹಾರೈಸುತ್ತೇನೆ. ವೀರಪ್ಪ ಮೊಯ್ಲಿ ಅವರು ಸಕ್ರಿಯವಾಗಿ ರಾಜಕಾರಣದಲ್ಲಿದ್ದಾರೆ. ಕೇಂದ್ರದಲ್ಲಿ ಈಗ ರಾಷ್ಟ್ರಮಟ್ಟದ ನಾಯಕರಾಗಿ ಗುರುತಿಸಿ ಕೊಂಡಿದ್ದಾರೆ. ಈಗಲೂ ನನ್ನನ್ನು ಭೇಟಿಯಾದಾಗಲೆಲ್ಲಾ ಪ್ರೀತಿಪೂರ್ವಕವಾಗಿ ಮಾತನಾಡಿಸುತ್ತಾರೆ.

ಇತ್ತೀಚೆಗೆ ನಡೆದ ಒಂದು ಘಟನೆಯನ್ನು ಇಲ್ಲಿ ನೆನಪಿಸಿಕೊಳ್ಳುತ್ತೇನೆ. ಹಜ್‌ಗೆ ಸಂಬಂಧಪಟ್ಟ ವಿಷಯದಲ್ಲಿ ವೀರಪ್ಪ ಮೊಯ್ಲಿ ಅವರಿಗೆ ಒಂದು ಮನವಿಯನ್ನು ಕೊಡಲು ದೆಹಲಿಗೆ ನಾವು ಒಂದು ನಿಯೋಗ ಹೋಗಿದ್ದೆವು. ಆ ನಿಯೋಗದಲ್ಲಿ

ನಮ್ಮ ಜೊತೆಗೆ ಸುರತ್ಕಲ್ ಶಾಸಕ ಮುಹಿಯುದ್ದೀನ್ ಬಾವಾ ಅವರೂ ಇದ್ದರು. ನಮ್ಮನ್ನು ನೋಡಿದ ವೀರಪ್ಪ ಮೊಯ್ಲಿ ಅವರು ಮುಹಿಯುದ್ದೀನ್ ಬಾವಾ ಅವರ ಕಡೆಗೆ ತಿರುಗಿ "ನೀವು ಯಾವುದೇ ಕೆಲಸಕ್ಕೆ ಬಂದರೂ ನಾನು ನಿಮಗೆ ಮಾಡಿ ಕೊಡುವುದಿಲ್ಲ. ಯಾಕೆಂದರೆ ನಿಮ್ಮ ದಕ್ಷಿಣಕನ್ನಡ ಜಿಲ್ಲೆಯ ಜನರು ನನಗೆ ಮೋಸ ಮಾಡಿದ್ದಾರೆ" ಎಂದು ಹೇಳಿದರು. ಈ ಮಾತು ಮೊಯ್ಲಿ ಹೇಳಲು ಕಾರಣವೂ ಇತ್ತು. ಮೊಯ್ಲಿಗೆ ಆಗ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಲೋಕಸಭೆ ಚುನಾವಣೆಗೆ ಸ್ಪರ್ಧಿಸಲು ಟಿಕೆಟ್ ಕೊಟ್ಟಿರಲಿಲ್ಲ. ಅವರು ಚಿಕ್ಕಬಳ್ಳಾಪುರದಲ್ಲಿ ಸ್ಪರ್ಧಿಸಿ ಗೆದ್ದಿದ್ದರು. ಆ ಕೋಪದಲ್ಲಿ ಅವರು ನಮಗೆ ಈ ಮಾತನ್ನು ಹೇಳಿದ್ದರು.

ಆಗ ನಾನು ತುಸು ಏರಿದ ಧ್ವನಿಯಲ್ಲಿ "ಮೊಯ್ಲಿ ಅವರೇ, ನಿಮಗೆ ಪುನರ್ಜನ್ಮ ಕೊಟ್ಟದ್ದು ಚಿಕ್ಕಬಳ್ಳಾಪುರ ಆಗಿರಬಹುದು, ಆದರೆ ನಿಮಗೆ ರಾಜಕೀಯ ಜನ್ಮ ಕೊಟ್ಟದ್ದು ದಕ್ಷಿಣಕನ್ನಡ ಜಿಲ್ಲೆ. ಈ ಬಾರಿ ನಿಮಗೆ ದಕ್ಷಿಣಕನ್ನಡ ಜಿಲ್ಲೆಯವರು ಟಿಕೆಟ್ ಕೊಡಬಾರದು ಎಂದು ತೀರ್ಮಾನಿಸಿದ್ದರೆ ಅದು ನಿಮ್ಮ ಒಳ್ಳೆಯದಕ್ಕೆ. ಅದರಿಂದ ನಿಮಗೆ ಒಳ್ಳೆಯದೇ ಆಯಿತು. ಚಿಕ್ಕಬಳ್ಳಾಪುರದಲ್ಲಿ ನಿಂತ ಕಾರಣ ನೀವು ಲೋಕಸಭಾ ಸದಸ್ಯರಾದಿರಿ. ದಕ್ಷಿಣಕನ್ನಡ ಜಿಲ್ಲೆಯಲ್ಲಿ ನಿಂತಿದ್ದರೆ ನೀವು ಲೋಕಸಭಾ ಸದಸ್ಯರಾಗುತ್ತಿರಲಿಲ್ಲ. ಖಂಡಿತಾ ಸೋಲುತ್ತಿದ್ದಿರಿ. ನೀವು ದಕ್ಷಿಣಕನ್ನಡ ಜಿಲ್ಲೆಯ ಜನರಿಗೆ ಆಭಾರಿಯಾಗಿರಬೇಕು. ನೀವು ಈ ರೀತಿ ಹೇಳುವುದು ಸರಿಯಲ್ಲ" ಎಂದು ಖಡಾಖಂಡಿತವಾಗಿ ಹೇಳಿದೆ.

ಆಗಲೇ ಮೊಯ್ಲಿ ಅವರು ಬದಲಾದರು. ಎಲ್ಲರನ್ನೂ ಕುಳಿತುಕೊಳ್ಳಲು ಹೇಳಿದರು. ನಮ್ಮ ಮನವಿಯನ್ನು ಸ್ವೀಕರಿಸಿದರು. ನನ್ನ ಮಾತಿಗೆ ಬೆಲೆ ಕೊಟ್ಟು ಸುಮ್ಮನಾಗಿಬಿಟ್ಟರು. ನಾನು ಹೇಳಿದ್ದು ಸತ್ಯವಾಗಿತ್ತು. ಅವರು ದಕ್ಷಿಣಕನ್ನಡ ಜಿಲ್ಲೆಯಲ್ಲಿ ಓಟಿಗೆ ನಿಂತಿದ್ದರೆ ಖಂಡಿತಾ ಸೋಲುತ್ತಿದ್ದರು.

ಮೊಯ್ಲಿ ಅವರಿಗೂ ನಾನು ಒಳಿತನ್ನು ಆಶಿಸುತ್ತೇನೆ. ಇಲ್ಲಿ ನಾನು ನೆನಪಿಸಿ ಕೊಂಡಿರುವುದು ಇತಿಹಾಸದ ಕೆಲವು ಘಟನೆಗಳನ್ನು ಮಾತ್ರ. ಯಾರೂ ಇದನ್ನು ಅಪಾರ್ಥ ಮಾಡಿಕೊಳ್ಳಬಾರದು ಮತ್ತು ರಾಜಕೀಯದಲ್ಲಿ ಇದೆಲ್ಲ ಸಹಜವಾದ ಪ್ರಕ್ರಿಯೆಗಳು ಎಂದು ಭಾವಿಸಬೇಕು.

## ನನ್ನ ರಾಜಕೀಯದ ಪುನರ್ಜನ್ಮ

1985ರಲ್ಲಿ ನನಗೆ ಬಂಟ್ವಾಳ ಕ್ಷೇತ್ರದಿಂದ ಸ್ಪರ್ಧಿಸಲು ಟಿಕೆಟ್ ನಿರಾಕರಿಸಲ್ಪಟ್ಟ ನಂತರ ನಾನು ಯಾವ ಹುದ್ದೆಯೂ ಇಲ್ಲದೆ ಯಾವ ಕೆಲಸವೂ ಇಲ್ಲದೆ ಮನೆಯಲ್ಲೇ ಕುಳಿತಿದ್ದೆ. ದೈನಂದಿನ ಖರ್ಚಿಗೂ ನನ್ನ ಬಳಿ ದುಡ್ಡಿರಲಿಲ್ಲ. ನನ್ನ ಈ ಸ್ಥಿತಿಗೆ ಜನಾರ್ದನ ಪೂಜಾರಿ ಮತ್ತು ಆಸ್ಕರ್ ಫೆರ್ನಾಂಡಿಸ್‌ರೇ ಕಾರಣ. 1986 ಫೆಬ್ರವರಿ 6ರಂದು ಪೋಪ್ ಜಾನ್‌ಪಾಲ್ II ಮಂಗಳೂರಿನ ಬಜಪೆಗೆ ಭೇಟಿ ನೀಡಿದ್ದರು. ಇದು ಪೋಪ್ ಅವರು ಭಾರತಕ್ಕೆ ನೀಡಿದ ಪ್ರಪ್ರಥಮ ಭೇಟಿಯಾಗಿತ್ತು. ಆಗ ರಾಜ್ಯದಲ್ಲಿ

ಜನತಾ ಪಕ್ಷ ಮತ್ತು ಬಿಜೆಪಿ ಸಮ್ಮಿಶ್ರ ಸರಕಾರವಿತ್ತು. ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿ ಆಗಿದ್ದರು. ಪೋಪ್ ಅವರ ಈ ಐತಿಹಾಸಿಕ ಭೇಟಿಗೆ ಒಂದು ಸಂಘಟನೆ ವಿರೋಧವನ್ನೂ ವ್ಯಕ್ತಪಡಿಸಿತ್ತು. ಪ್ರತಿಭಟನೆಯನ್ನೂ ಹಮ್ಮಿಕೊಂಡಿತ್ತು. ಆ ಸಂದರ್ಭದಲ್ಲಿ ನಾನು ಯಾವುದೇ ಅಧಿಕಾರ, ಹುದ್ದೆ ಇಲ್ಲದಿದ್ದರೂ ಸಹ ಸಂಬಂಧಪಟ್ಟವರನ್ನೆಲ್ಲ ಸಂಪರ್ಕಿಸಿ ಮಾತನಾಡಿ ಪೋಪ್ ಅವರ ಭೇಟಿಯ ಮಹತ್ವವನ್ನು ವಿವರಿಸಿ ಅವರ ಮನವೊಲಿಸಿ ಯಾವುದೇ ಅಹಿತಕರ ಘಟನೆ ಆಗದಂತೆ ನನ್ನ ಕೈಲಾದ ಪ್ರಯತ್ನ ಮಾಡಿದ್ದೆ. ಪೋಪ್ ಅವರ ಭೇಟಿ ಬಜಪೆಯಲ್ಲಿ ಒಂದು ಇತಿಹಾಸವನ್ನೇ ನಿರ್ಮಿಸಿತ್ತು. ಐದು ಲಕ್ಷಕ್ಕೂ ಅಧಿಕ ಜನಸಾಗರವೇ ಮಂಗಳೂರಿನ ಬಜಪೆಗೆ ಹರಿದು ಬಂದಿತ್ತು. ಪೋಪ್‌ರನ್ನು ಸ್ವಾಗತಿಸಲು ಕರ್ನಾಟಕ ಸರಕಾರದ ಪರವಾಗಿ ಅಂದಿನ ಗೃಹಸಚಿವ ರಾಚಯ್ಯ ಆಗಮಿಸಿದ್ದರು. ರಾಚಯ್ಯ ನನಗೆ ಬಹಳಷ್ಟು ಪರಿಚಿತರಾಗಿದ್ದಂತಹ ವ್ಯಕ್ತಿ. ನನ್ನ ಎಲ್ಲ ಸ್ಥಿತಿಗತಿಗಳನ್ನು ಅರಿತುಕೊಂಡ ಅವರು ನನಗೆ ಧೈರ್ಯ ತುಂಬಿದರು.

1985ರ ನಂತರ ನಾನು ಮಾನಸಿಕವಾಗಿ ಕಾಂಗ್ರೆಸ್ ಪಕ್ಷದಿಂದ ದೂರ ಸರಿದಿದ್ದೆ. ಆದರೂ ನನ್ನ ಮನಸ್ಸು ತುಡಿಯುತ್ತಿತ್ತು. ನನಗೆ ನನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಬೇಕಾಗಿತ್ತು. ಅದೇ ಸಂದರ್ಭದಲ್ಲಿ ಅಂದರೆ 1987ರಲ್ಲಿ ವಿ.ಪಿ. ಸಿಂಗ್ ಅವರು ಕೇಂದ್ರದಲ್ಲಿ ರಕ್ಷಣಾ ಸಚಿವರಾಗಿದ್ದರು. ರಾಜೀವ್ ಗಾಂಧಿ ಅವರು ಪ್ರಧಾನಮಂತ್ರಿಯಾಗಿದ್ದರು. ರಾಜೀವ್ ಗಾಂಧಿ ಸರಕಾರದ ಭ್ರಷ್ಟಾಚಾರಗಳನ್ನು ವಿರೋಧಿಸಿ ವಿ.ಪಿ. ಸಿಂಗ್ ಕಾಂಗ್ರೆಸನ್ನು ತೊರೆದು ಹೊರಬಂದು 'ಜನಮೋರ್ಚಾ' ಎಂಬ ಪಕ್ಷವನ್ನು ಸ್ಥಾಪಿಸಿದರು. ವಿ.ಪಿ. ಸಿಂಗ್ ಅವರ ವಿಚಾರಧಾರೆಗಳು, ಅವರ ಕಾರ್ಯಕ್ರಮಗಳು ನನಗೆ ಇಷ್ಟವಾಯಿತು ಮತ್ತು ನಾನು 1987ರಲ್ಲಿ 'ಜನಮೋರ್ಚಾ' ಪಕ್ಷವನ್ನು ಸೇರಿದೆ. 1989ರಲ್ಲಿ ಜನತಾ ಪಕ್ಷ, ಜನಮೋರ್ಚಾ ಮತ್ತು ಲೋಕದಳ ಈ ಮೂರು ಪಕ್ಷಗಳು ಸೇರಿ 'ಜನತಾ ದಳ' ಎಂಬ ಪಕ್ಷ ಸ್ಥಾಪನೆಯಾಯಿತು. ಅದರ ಚಿಹ್ನೆ ಚಕ್ರ. ನಾನು ಆ ಮೂಲಕ ಜನತಾ ದಳವನ್ನು ಸೇರಿದೆ.

ಈ ಸಂದರ್ಭದಲ್ಲಿ ನನಗೆ ರಾಜಕೀಯದ ಪುನರ್ಜನ್ಮ ಕೊಟ್ಟಿದ್ದರೆ ಅದು ಶ್ರೀ ರಾಮಕೃಷ್ಣ ಹೆಗಡೆ. ನಾನು ಎಂದೆಂದಿಗೂ ರಾಮಕೃಷ್ಣ ಹೆಗಡೆ ಅವರನ್ನು ಮರೆಯಲಾರೆ. ಅವರಿಗೆ ನಾನು ಸದಾ ಕಾಲ ಆಭಾರಿಯಾಗಿದ್ದೇನೆ. ಯಾವ ಹುದ್ದೆಯೂ ಇಲ್ಲದೆ, ಯಾವ ಕೆಲಸವೂ ಇಲ್ಲದೆ ಮನೆಯಲ್ಲಿ ಕುಳಿತಿದ್ದ ನನ್ನನ್ನು ರಾಮಕೃಷ್ಣ ಹೆಗಡೆ ಕರೆಸಿಕೊಂಡರು. ಅವರ ಜೊತೆ ಜೀವರಾಜ ಆಳ್ವ ಸಹ ಇದ್ದರು. ನನ್ನ ಎಲ್ಲ ಆಗುಹೋಗುಗಳನ್ನು ಹೆಗಡೆ ವಿಚಾರಿಸಿದರು. ಬಹುಶಃ ಪೋಪ್ ಅವರ ಮಂಗಳೂರು ಭೇಟಿಯ ಸಂದರ್ಭದಲ್ಲಿ ನನಗೆ ಸಿಕ್ಕಿದ್ದ ರಾಚಯ್ಯ ಅವರು ಹೆಗಡೆ ಅವರಿಗೆ ನನ್ನ ಎಲ್ಲ ವಿಷಯಗಳನ್ನು ಹೇಳಿರಬೇಕು.

"ನೀನು ಸಕ್ರಿಯ ರಾಜಕಾರಣಕ್ಕೆ ಬಾ. ನಿನ್ನಂತಹ ಒಬ್ಬ ಮುಸ್ಲಿಂ ನಾಯಕ ನಮ್ಮ ಪಕ್ಷಕ್ಕೆ ಅಗತ್ಯವಿದೆ" ಎಂದು ರಾಮಕೃಷ್ಣ ಹೆಗಡೆ ನನ್ನನ್ನು ಆಹ್ವಾನಿಸಿದರು. ಮಾತ್ರವಲ್ಲ,

ಕರ್ನಾಟಕ ರಾಜ್ಯ ಜನತಾ ದಳದ ಪ್ರಧಾನ ಕಾರ್ಯದರ್ಶಿ ಹುದ್ದೆಯನ್ನು ನನಗೆ ನೀಡಿದರು. ಇದಕ್ಕೆ ಕೆಲವರು ಅಸಮಾಧಾನ ವ್ಯಕ್ತಪಡಿಸಿದಾಗ ರಾಮಕೃಷ್ಣ ಹೆಗಡೆ "ಹಾಗಲ್ಲ, ಬಿ.ಎ. ಮೊಹಿದೀನ್ ಜನಮೋರ್ಚಾದಿಂದ ಬಂದವರು. ಆ ಪಕ್ಷಕ್ಕೆ ಒಂದು ಪ್ರಾತಿನಿಧ್ಯ ಕೊಡಲೇಬೇಕಾಗುತ್ತದೆ" ಎಂದು ಸಮಜಾಯಿಸಿ ನೀಡಿದರು. ಜನತಾ ದಳ ಪಕ್ಷದ ಕಚೇರಿಯ ಸಂಪೂರ್ಣ ಜವಾಬ್ದಾರಿಯನ್ನು ಸಹ ನನಗೆ ವಹಿಸಲಾಯಿತು. ನಾನು ಅತ್ಯಂತ ಪ್ರಾಮಾಣಿಕವಾಗಿ ನನ್ನ ಕೆಲಸವನ್ನು ಪ್ರಾರಂಭಿಸಿದೆ. ಪಕ್ಷಕ್ಕೆ ಸಂಬಂಧಿಸಿದ ಪತ್ರ ವ್ಯವಹಾರಗಳು, ಚುನಾವಣಾ ಮೇಲುಸ್ತುವಾರಿ, ಸ್ಥಳೀಯ ಚುನಾವಣೆಗಳಿಗೆ ಟಿಕೆಟ್ ಹಂಚಿಕೆ ಇಂತಹ ಮಹತ್ವದ ಜವಾಬ್ದಾರಿಗಳನ್ನು ನನಗೆ ನೀಡಿದ್ದರು. ಇದೇ ಸಂದರ್ಭದಲ್ಲಿ ವಿಧಾನ ಪರಿಷತ್‌ನ ಒಂದು ಸ್ಥಾನ ಖಾಲಿಯಾಯಿತು. ರಾಮಕೃಷ್ಣ ಹೆಗಡೆ ಆ ಸ್ಥಾನವನ್ನು ನನಗೆ ನೀಡಿದರು. 1990ರಲ್ಲಿ ನಾನು ವಿಧಾನ ಪರಿಷತ್ ಸದಸ್ಯನಾಗಿ ಆಯ್ಕೆಯಾದೆ.

ರಾಮಕೃಷ್ಣ ಹೆಗಡೆ ಅವರಿಗೆ ಗೊತ್ತಿತ್ತೋ ಏನೋ ನಾನು ಕಷ್ಟದಲ್ಲಿದ್ದೇನೆ ಎಂದು. ಜನತಾ ದಳದ ಕಚೇರಿಗೆ ಬಂದಾಗಲೆಲ್ಲ ಎರಡು–ಮೂರು ಸಲ ಅವರು ನನಗೆ ದುಡ್ಡು ಕೊಟ್ಟಿದ್ದರು. ರಾಜಕಾರಣಿಗಳು ಹೀಗೆ ಸಾಧಾರಣವಾಗಿ ದುಡ್ಡು ಕೊಡುವುದಿಲ್ಲ. ಈ ವಿಷಯ ನಾನು ಜೀವರಾಜ ಆಳ್ವ ಅವರಿಗೆ ಹೇಳಿದೆ. ಅದಕ್ಕೆ ಆಳ್ವರು 'ರಾಮಕೃಷ್ಣ ಹೆಗಡೆ ಅವರು ಹಾಗೆಯೇ. ಆರ್ಥಿಕವಾಗಿ ನೀವು ತೀರಾ ಸಂಕಷ್ಟದಲ್ಲಿದ್ದೀರಿ ಎಂಬುದು ಅವರಿಗೆ ಗೊತ್ತಿದೆ. ಹೀಗಾಗಿ ಅವರು ನಿಮಗೆ ದುಡ್ಡು ಕೊಡುತ್ತಿದ್ದಾರೆ' ಎಂದರು.

1994ರಲ್ಲಿ ಜನತಾ ದಳ ಬಹುಮತದೊಂದಿಗೆ ಅಧಿಕಾರಕ್ಕೆ ಬಂದು ಎಚ್.ಡಿ. ದೇವೇಗೌಡರು ಮುಖ್ಯಮಂತ್ರಿಯಾದರು. ಆಗ ನನ್ನನ್ನು ಸರಕಾರದ ಮುಖ್ಯ ಸಚೇತಕನಾಗಿ ನೇಮಿಸಲಾಯಿತು. 1996ರಲ್ಲಿ ದೇವೇಗೌಡರು ಈ ರಾಷ್ಟ್ರದ ಪ್ರಧಾನಮಂತ್ರಿ ಹುದ್ದೆ ಅಲಂಕರಿಸಿದಾಗ ಕರ್ನಾಟಕದ ಮುಖ್ಯಮಂತ್ರಿಯಾಗಿ ಜೆ.ಎಚ್. ಪಟೇಲರು ಆಯ್ಕೆಯಾದರು. ಅವರ ಸಂಪುಟದಲ್ಲಿ ಅವರ ವೈಯಕ್ತಿಕ ಆಯ್ಕೆಯಾಗಿ ನನ್ನನ್ನು ಸೇರಿಸಿಕೊಂಡು ಕ್ಯಾಬಿನೆಟ್ ದರ್ಜೆಯ ಸಣ್ಣ ಕೈಗಾರಿಕಾ ಸಚಿವ ಹುದ್ದೆಯನ್ನು ನೀಡಿದರು. ಅದರ ಜೊತೆಗೆ ದಕ್ಷಿಣಕನ್ನಡ ಜಿಲ್ಲೆಯ ಉಸ್ತುವಾರಿ ನನಗೆ ವಹಿಸಿದರು. 1997ರಲ್ಲಿ ನನ್ನನ್ನು ಉನ್ನತ ಶಿಕ್ಷಣ ಸಚಿವನನ್ನಾಗಿ ಮಾಡಿದರು.

1996ರಲ್ಲಿ ನನ್ನ ವಿಧಾನ ಪರಿಷತ್ ಸದಸ್ಯತ್ವ ಅವಧಿ ಕೊನೆಗೊಂಡು ಅದು ನವೀಕರಿಸಲ್ಪಡಬೇಕಾಗಿತ್ತು. ಆಗ ಸಿ.ಎಂ. ಇಬ್ರಾಹೀಂ ಸ್ವಲ್ಪ ಅಡ್ಡಗಾಲು ಹಾಕಲು ಪ್ರಯತ್ನಿಸಿದರು. ಇದನ್ನು ತಿಳಿದ ರಮೇಶ್‌ಕುಮಾರ್ ಮತ್ತು ಎಂ.ಸಿ. ನಾಣಯ್ಯ, ಸಿ.ಎಂ. ಇಬ್ರಾಹೀಂ ಅವರನ್ನು ತರಾಟೆಗೆ ತೆಗೆದುಕೊಂಡಿದ್ದರು. ನನ್ನ ವಿಧಾನ ಪರಿಷತ್ ಸದಸ್ಯತ್ವ ಮುಂದಿನ ಆರು ವರ್ಷಕ್ಕೆ ನವೀಕರಿಸಲ್ಪಟ್ಟಿತು. 2002ರವರೆಗೂ ನಾನು ವಿಧಾನ ಪರಿಷತ್‌ನ ಸದಸ್ಯನಾಗಿದ್ದೆ. ಹೀಗೆ ನನ್ನ ಬದುಕಿನಲ್ಲಿ ರಾಜಕೀಯ ಸೇವೆಗೆ ಎರಡನೇ ಅವಕಾಶ ದೊರೆಯಿತು. ಈ ಅವಧಿಯಲ್ಲಿ ನಾನು ಪಕ್ಷಾತೀತವಾಗಿ, ಜಾತ್ಯತೀತವಾಗಿ

ಸೇವೆಯನ್ನು ಸಲ್ಲಿಸಿದ್ದೇನೆ. 1990ರಲ್ಲಿ ವಿಧಾನ ಪರಿಷತ್ ಸದಸ್ಯನಾಗಿ, 1994–1995ರಲ್ಲಿ ಮುಖ್ಯ ಸಚೇತಕನಾಗಿ, 1995ರಿಂದ 1999ರವರೆಗೆ ಕ್ಯಾಬಿನೆಟ್ ದರ್ಜೆಯ ಸಚಿವನಾಗಿ, ದಕ್ಷಿಣಕನ್ನಡ ಜಿಲ್ಲಾ ಉಸ್ತುವಾರಿ ಸಚಿವನಾಗಿ, ಅನಂತರ 1999ರಿಂದ 2002ರವರೆಗೆ ವಿಧಾನ ಪರಿಷತ್ ಸದಸ್ಯನಾಗಿ ನಾನು ಸಲ್ಲಿಸಿದ ಸೇವೆ ನನಗೆ ತೃಪ್ತಿಯನ್ನು ನೀಡಿದೆ. ಹಿಂದೆ ನಡೆದ ಘಟನೆಗಳನ್ನು, ನನಗಾದ ಅನ್ಯಾಯಗಳನ್ನೆಲ್ಲ ಮರೆತು ಈ ಅವಕಾಶ ನನಗೆ ಸಿಕ್ಕಿರುವುದು ಜನಸೇವೆಗಾಗಿ ಎಂದು ತಿಳಿದು ಪ್ರಾಮಾಣಿಕವಾಗಿ ನಾನು ನನ್ನನ್ನು ತೊಡಗಿಸಿಕೊಂಡಿದ್ದೆ. ಈ ಅವಧಿಯಲ್ಲಿ ನಾನು ಯಾವುದೇ ಪ್ರಚಾರವನ್ನು ಬಯಸಿ ಕೆಲಸವನ್ನು ಮಾಡಿದವನಲ್ಲ. ನಾನು ಯಾವಾಗಲೂ ವೈಯಕ್ತಿಕ ಆಸಕ್ತಿಗಿಂತ ಸಾಮಾಜಿಕ, ಸಮುದಾಯದ, ಸಾಮೂಹಿಕ ಹಿತಾಸಕ್ತಿಯ ಕೆಲಸಗಳಿಗೆ ಅತೀ ಹೆಚ್ಚು ಆದ್ಯತೆಯನ್ನು ಕೊಟ್ಟವನು. ಈ ಅವಧಿಯಲ್ಲಿ ನಾನು ಮಾಡಿದ ಅನೇಕ ಕೆಲಸಗಳನ್ನು ನೆನಪಿಟ್ಟುಕೊಂಡಿಲ್ಲ. ಈಗ ಅದರಲ್ಲಿ ಕೆಲವನ್ನು ನೆನಪಿಸಿಕೊಳ್ಳಲು ಪ್ರಯತ್ನಿಸುತ್ತೇನೆ.

**ಮಂಗಳೂರು ಮಹಾನಗರಪಾಲಿಕೆಯ ವಿಸ್ತರಣೆ**

ಸುರತ್ಕಲ್ ಪ್ರದೇಶದಲ್ಲಿ ಸೀತಾರಾಮ ಐತಾಳ ಮತ್ತು ಪಿ.ಎಂ.ಎ. ರಝಾಕ್ ಮುಂತಾದವರೆಲ್ಲ ಸೇರಿ ಅಲ್ಲಿನ ಅಭಿವೃದ್ಧಿಯ ಬಗ್ಗೆ ಚರ್ಚಿಸಲು ಒಂದು ಸಭೆ ಕರೆದಿದ್ದರು. ನಾನು ಮತ್ತು ಸಚಿವ ದೇಶಪಾಂಡೆ ಸೇರಿ ಕರ್ನಾಟಕದ ಕರಾವಳಿಯ ಅಭಿವೃದ್ಧಿಗಾಗಿ ಒಂದು ಸಾವಿರ ಕೋಟಿ ರೂಪಾಯಿಯ ಎಡಿಬಿ ಯೋಜನೆಯ ಗ್ರಾಂಟ್ ಅನ್ನು ಕ್ಯಾಬಿನೆಟ್‌ನಲ್ಲಿ ಮಂಜೂರು ಮಾಡಿಸಿಕೊಂಡಿದ್ದೆವು. ಗ್ರಾಂಟ್ ಅಂದರೆ ಅದೊಂದು ಸಾಲ. ಇದು ಹೇಗೆ ಅಂದರೆ ಮಂಗಳೂರಿನಿಂದ ಕಾರವಾರದವರೆಗೆ ಕರಾವಳಿ ಪ್ರದೇಶದಲ್ಲಿರುವ ಪಟ್ಟಣಗಳನ್ನು ಅಭಿವೃದ್ಧಿಪಡಿಸಲು ಸಿಗುವ ಸಾಲ ಸೌಲಭ್ಯ. ಇದನ್ನು ನಾನು ಮತ್ತು ದೇಶಪಾಂಡೆ ಸೇರಿ ಕ್ಯಾಬಿನೆಟ್‌ನಲ್ಲಿ ಮಂಜೂರು ಮಾಡಿಸಿಕೊಂಡಿದ್ದೆವು. ಈ ಯೋಜನೆಯ ಅಡಿಯಲ್ಲಿ ಕಾಟಿಪಳ್ಳ, ಕೃಷ್ಣಾಪುರವನ್ನು ತರಬೇಕೆಂದು ನಮ್ಮ ಉದ್ದೇಶವಾಗಿತ್ತು. ಈ ಯೋಜನೆ ಲಭ್ಯವಾದರೆ ಈ ಪ್ರದೇಶದ ರಸ್ತೆ, ದಾರಿದೀಪ, ಕುಡಿಯುವ ನೀರು, ಒಳಚರಂಡಿ ಈ ಎಲ್ಲ ಅಭಿವೃದ್ಧಿಗಳನ್ನು ಮಾಡಬಹುದು. ಈ ಸೌಲಭ್ಯಗಳು ಸಿಗಬೇಕಾದರೆ ಈ ಪ್ರದೇಶಗಳು ಪಂಚಾಯತ್‌ಗೆ ಒಳಪಟ್ಟಿದ್ದರೆ ಆಗುವುದಿಲ್ಲ. ಅದಕ್ಕಾಗಿ ನಾನು ಮಂಗಳೂರು ನಗರಪಾಲಿಕೆಯನ್ನು ಕಾಟಿಪಳ್ಳ–ಕೃಷ್ಣಾಪುರ ಸಹಿತ ಮುಕ್ಕದವರೆಗೂ ವಿಸ್ತರಿಸಲು ಯೋಜನೆಯನ್ನು ರೂಪಿಸಿದೆ. ಇದರ ಹಿಂದೂ – ಮುಂದೂ ತಿಳಿಯದ ಕೆಲವು ಸ್ಥಳೀಯರು ಈ ಪ್ರದೇಶಗಳನ್ನು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸುವುದನ್ನು ವಿರೋಧಿಸಿ ಬಹುದೊಡ್ಡ ಅಂದರೆ ಸುಮಾರು ಹತ್ತು ಸಾವಿರ ಜನರನ್ನು ಸೇರಿಸಿ ಒಂದು ಪ್ರತಿಭಟನಾ ಸಭೆಯನ್ನು ಕರೆದಿದ್ದರು. ಈ ಪ್ರದೇಶಗಳೆಲ್ಲಾ ಮೊದಲು ಹೇಗೆ ಪುರಸಭೆ, ಪಂಚಾಯತ್ ಇತ್ತೋ ಹಾಗೇ ಇರಬೇಕೆಂದು ಒತ್ತಾಯಿಸಿದ್ದರು. ಎಷ್ಟು ತಪ್ಪು ಮಾಹಿತಿಗಳನ್ನು ಇವರು

ಹರಡಿದ್ದರೆಂದರೆ ಈ ಪ್ರದೇಶಗಳು ಮಂಗಳೂರು ಮಹಾನಗರಪಾಲಿಕೆಗೆ ಸೇರಿಸಲ್ಪಟ್ಟರೆ ನೀವು ಕಟ್ಟುತ್ತಿರುವ ಮನೆತೆರಿಗೆ, ನೀರಿನ ತೆರಿಗೆ ಇತ್ಯಾದಿಗಳು ಹತ್ತು ಪಟ್ಟು ಜಾಸ್ತಿಯಾಗುತ್ತದೆ. ಬಹಳ ಕಷ್ಟ ಆಗುತ್ತದೆ. ಆದುದರಿಂದ ಹೀಗೇ ಇರುವುದು ಒಳ್ಳೆಯದು ಎಂದು ಹೇಳಿ ಜನರನ್ನು ಸೇರಿಸಿದ್ದರು. ನನಗೆ ಗೊತ್ತಿತ್ತು, ಇವರೆಲ್ಲ ತಪ್ಪು ತಿಳಿದುಕೊಂಡಿದ್ದಾರೆ, ಜನರಿಗೆ ತಪ್ಪು ಮಾಹಿತಿ ನೀಡಲಾಗಿದೆ ಎಂದು. ನಾನು ಅವರಿಗೆ ಎಲ್ಲಾ ವಿಚಾರಗಳನ್ನು ವಿವರಿಸಿ ಮನದಟ್ಟು ಮಾಡಿಕೊಡಲು ಪ್ರಯತ್ನಿಸಿದರೂ ಅವರು ನಂಬುವ ಸ್ಥಿತಿಯಲ್ಲಿ ಇರಲಿಲ್ಲ. ನಾನು ಅವರಿಗೆ ಹೆಚ್ಚಿನ ಭರವಸೆಯನ್ನೇನೂ ಕೊಡಲಿಲ್ಲ. ನನ್ನ ಭಾಷಣದಲ್ಲಿ ಇಷ್ಟೇ ಹೇಳಿದೆ – "ನಿಮ್ಮ ಮನವಿಯನ್ನು ಕೊಡಿ. ನಾನು ಪರಿಶೀಲಿಸುತ್ತೇನೆ. ಯಾವುದರಿಂದ ಮುಂದಿನ ದಿನಗಳಲ್ಲಿ ನಿಮಗೆ ಒಳ್ಳೆಯದಾಗುತ್ತದೋ ಅಂತಹ ನಿರ್ಧಾರವನ್ನೇ ನಾನು ತೆಗೆದುಕೊಳ್ಳುತ್ತೇನೆ" ಎಂದು.

ನಾನು ಮುಂದಿನ ದಿನಗಳಲ್ಲಿ ಮಂಗಳೂರು ಮಹಾನಗರಪಾಲಿಕೆಯನ್ನು ಸುರತ್ಕಲ್, ಕಾಟಿಪಳ್ಳ, ಕೃಷ್ಣಾಪುರ ಸಹಿತ ಮುಕ್ಕದವರೆಗೂ ವಿಸ್ತರಿಸಲು ತೀರ್ಮಾನ ತೆಗೆದುಕೊಂಡೆ. ಸುರತ್ಕಲ್ ಕ್ಷೇತ್ರದ ಶಾಸಕ ಕುಂಬ್ಳೆ ಸುಂದರ ರಾವ್ ಸಹಿತ ಕೆಲವರು ರಾಜಕೀಯ ಕಾರಣಕ್ಕಾಗಿ ಈ ನಿರ್ಧಾರವನ್ನು ವಿರೋಧಿಸಿದರೂ ನಾನು ಅದನ್ನು ಗಣನೆಗೆ ತೆಗೆದುಕೊಳ್ಳಲಿಲ್ಲ. ಅಂದು ನಾನು ತೆಗೆದುಕೊಂಡ ಆ ನಿರ್ಧಾರದಿಂದಾಗಿ ಕಾಟಿಪಳ್ಳ, ಕೃಷ್ಣಾಪುರ ಸಹಿತ ಸುರತ್ಕಲ್ ಮುಕ್ಕದವರೆಗೆ ಇಂದು ಬಹಳಷ್ಟು ಅಭಿವೃದ್ಧಿಯ ಕಾರ್ಯಗಳು ನಡೆದಿವೆ. ಇಂದು ಸುರತ್ಕಲ್ ಪ್ರದೇಶ ಮಂಗಳೂರು ಮಹಾನಗರ ಪಾಲಿಕೆಯ ಅತೀ ಹೆಚ್ಚು ಅಭಿವೃದ್ಧಿ ಪಡೆದ ಒಂದು ಕೇಂದ್ರವಾಗಿ ಮಾರ್ಪಟ್ಟಿದೆ. ಇದು ನಾನು ಸಚಿವನಾಗಿದ್ದಾಗ ಮಾಡಿದ ಒಂದು ಜನಪರ ಕಾರ್ಯವಾಗಿದೆ. ಇದನ್ನು ಆಮೇಲೆ ಸ್ಥಳೀಯರು ಮನಗಂಡು ನನ್ನನ್ನು ಹೊಗಳಿದರು.

### ಉಳ್ಳಾಲಕ್ಕೂ ವಿಸ್ತರಿಸಿದ ಎಡಿಬಿ ಯೋಜನೆ

ಈ ಎಡಿಬಿ ಯೋಜನೆಯನ್ನು ಆ ನಂತರ ನಾನು ಉಳ್ಳಾಲಕ್ಕೂ ವಿಸ್ತರಿಸಿದೆ. ಉಳ್ಳಾಲ ಒಂದು ಪ್ರಸಿದ್ಧ ಯಾತ್ರಾಸ್ಥಳ. ಅಲ್ಲಿ ಬಹಳ ಪ್ರಖ್ಯಾತ ಸೈಯದ್ ಮದನಿ ದರ್ಗಾ ಇದೆ. ರಾಜ್ಯಾದ್ಯಂತ ಮತ್ತು ನೆರೆಯ ಕೇರಳದಿಂದ ಪ್ರತಿದಿನ ಸಾವಿರಾರು ಯಾತ್ರಾರ್ಥಿಗಳು ಇಲ್ಲಿಗೆ ಬರುತ್ತಿರುತ್ತಾರೆ. ಈ ಎಲ್ಲ ಕಾರಣಗಳನ್ನು ನೀಡಿ, ವಿಶೇಷ ಅನುಮತಿಯನ್ನು ಪಡೆದು ಉಳ್ಳಾಲವನ್ನೂ ಎಡಿಬಿ ಯೋಜನೆಯ ಒಳಗೆ ಸೇರಿಸಿದೆ. ಇದರಿಂದಾಗಿ ಉಳ್ಳಾಲದಲ್ಲೂ ಮೂಲಭೂತ ಸೌಕರ್ಯಗಳು ಹೆಚ್ಚಾಗಲು ಸಾಧ್ಯವಾಯಿತು. ಇವೆಲ್ಲವೂ ನಾನು ಯಾವುದೇ ಪ್ರಚಾರವನ್ನು ಬಯಸಿ ಅಥವಾ ವೋಟಿಗಾಗಿ ಮಾಡಿದ ಕೆಲಸಗಳಲ್ಲ. ಇವುಗಳು ನಾನು ಓರ್ವ ಮಂತ್ರಿಯಾಗಿ, ಜಿಲ್ಲಾ ಉಸ್ತುವಾರಿ ಸಚಿವನಾಗಿ ಏನು ಮಾಡಬೇಕೋ ಆ ಬದ್ಧತೆಯೊಂದಿಗೆ ಮಾಡಿದ ಕೆಲಸಗಳಾಗಿರುತ್ತದೆ.

**ಹಕ್ಕುಪತ್ರ ವಿತರಣೆ**

ಮಂಗಳೂರು ಮಹಾನಗರ ಪಾಲಿಕೆಗೆ ಒಳಪಟ್ಟ ಕುಂಜತ್ತಬೈಲು, ಕಾವೂರು, ಪಂಜಿಮೊಗರು ಮುಂತಾದ ಕಡೆ ಬಡವರು ಸರಕಾರಿ ಜಾಗದಲ್ಲಿ ಮನೆ ಕಟ್ಟಿ ಕುಳಿತಿದ್ದರು. ಅಂತಹ ನೂರಾರು ಮನೆಗಳಿದ್ದವು. ಅವರು ಯಾರಿಗೂ ಯಾವುದೇ ದಾಖಲೆಪತ್ರಗಳಿರಲಿಲ್ಲ. ಅವರೆಲ್ಲ ಬಹಳ ಸಂಕಷ್ಟಕ್ಕೆ ಒಳಗಾಗಿದ್ದರು. ಸ್ಥಳೀಯ ಜನಪ್ರತಿನಿಧಿಗಳೂ ಸಹ ಸ್ಪಂದಿಸುತ್ತಿರಲಿಲ್ಲ. ಅಧಿಕಾರಿಗಳಲ್ಲಿ ಕೇಳಿದರೆ ಅದು ಮಹಾನಗರ ಪಾಲಿಕೆಯ ಸರಹದ್ದಿನ ಒಳಗೆ ಬರುತ್ತದೆ. ಹಾಗಾಗಿ ಹಕ್ಕುಪತ್ರ ಕೊಡಲು ಸಾಧ್ಯವಿಲ್ಲ ಎಂದು ನಿರಾಕರಿಸುತ್ತಿದ್ದರು. ಅದು ಸರಕಾರಕ್ಕೆ ಹೋಗಬೇಕು. ಅಲ್ಲಿಂದ ಮಂಜೂರಾಗಿ ಬರಬೇಕು ಎಂದು ಕಾರಣಗಳನ್ನು ನೀಡುತ್ತಿದ್ದರು. ಆಗ ನಾನು ಅಧಿಕಾರಿಗಳಿಗೆ ಕೇಳಿದೆ "ನೋಡಿ, ಒಂದು ಸ್ಕೀಮ್ ಇದೆಯಲ್ಲ, ಮಹಾನಗರ ಪಾಲಿಕೆಯ ಪರಿಧಿಯ ಒಳಗೆ ಮನೆ ಕಟ್ಟಲು ಮೂರು ಸೆಂಟ್ಸ್ ಸ್ಥಳ ಮಂಜೂರು ಮಾಡುವ ಅವಕಾಶ ಇದೆಯಲ್ಲ?" ಎಂದು. ಅದಕ್ಕೆ ಅವರು "ಹೌದು ಸಾರ್, ಅವಕಾಶ ಇದೆ" ಎಂದು ಹೇಳಿದರು. ಆಗ ನಾನು ಎಲ್ಲ ಬಡವರಿಗೂ ಆ ಸ್ಕೀಮಿನ ಪ್ರಕಾರ ತಲಾ ಮೂರು ಸೆಂಟ್ಸ್ ಜಾಗ ನೀಡಿ ಎಂದು ಆದೇಶಿಸಿದೆ. ಕೆಲವೇ ದಿನಗಳಲ್ಲಿ ಎಲ್ಲರಿಗೂ ಮೂರು ಮೂರು ಸೆಂಟ್ಸ್ ಸ್ಥಳದ ಹಕ್ಕುಪತ್ರ ಸಿದ್ಧವಾಯಿತು. ಈ ಯೋಜನೆಯ ಅಡಿಯಲ್ಲಿ ಎಂಟು ಸಾವಿರ ಫಲಾನುಭವಿಗಳಿಗೆ ಹಕ್ಕುಪತ್ರವನ್ನು ಇದೇ ಮಂಗಳೂರು ಪುರಭವನದಲ್ಲಿ ನಾನು ಹಂತ ಹಂತವಾಗಿ ವಿತರಿಸಿದೆ. ಅಂದು ನಾನು ಎಲ್ಲಾ ಹಕ್ಕುಪತ್ರಗಳನ್ನು ಹೆಣ್ಣುಮಕ್ಕಳ ಹೆಸರಿನಲ್ಲಿ ಕೊಟ್ಟೆ. ಅಂದರೆ ಗಂಡಸರ ಹೆಸರಲ್ಲಿ ಕೊಟ್ಟರೆ ಮುಂದೊಂದು ದಿನ ಅವರು ಅದನ್ನು ಮಾರಿ ತಿನ್ನುವ ಸಾಧ್ಯತೆ ಇತ್ತು. ಈ ಹಕ್ಕುಪತ್ರ ಆ ಬಡವರಿಗೆ ಸಿಕ್ಕಿದುದರಿಂದಾಗಿ ಅವರಿಗೆ ಒಳ್ಳೆಯ ಮನೆಯನ್ನು ಕಟ್ಟಿಕೊಳ್ಳಲು ಬ್ಯಾಂಕ್ ಸಾಲ ಕೂಡ ಸಿಕ್ಕಿತು.

ಈ ಹಕ್ಕುಪತ್ರ ವಿತರಣಾ ಸಮಾರಂಭವು ನನ್ನ ಬದುಕಿನ ಅವಿಸ್ಮರಣೀಯ ಕಾರ್ಯಕ್ರಮ. ಹಕ್ಕುಪತ್ರವನ್ನು ಪಡೆದುಕೊಳ್ಳುವಾಗ ಆ ಬಡ ಹೆಣ್ಣುಮಕ್ಕಳ ಮುಖದಲ್ಲಿ ಅರಳುತ್ತಿದ್ದ ಸಂತೋಷ ಮತ್ತು ಕೆಲವರು ಹಕ್ಕುಪತ್ರ ಸ್ವೀಕರಿಸುವಾಗ ಭಾವೋದ್ವೇಗಗೊಂಡು ನನ್ನ ಪಾದಗಳನ್ನು ಸ್ಪರ್ಶಿಸಲು ಪ್ರಯತ್ನಿಸುತ್ತಿದ್ದುದು, ಅವರನ್ನು ತಡೆದು ನಾನು ಅವರ ಬೆನ್ನು ತಟ್ಟುತ್ತಿದ್ದುದು ಆಗ ಅವರ ಕಣ್ಣುಗಳಲ್ಲಿ ಕಾಣುತ್ತಿದ್ದ ಕೃತಜ್ಞತಾಭಾವ ನಾನು ಎಂದೆಂದೂ ಮರೆಯಲಾರೆ.

ಈ ಸಂದರ್ಭದಲ್ಲಿ ಈ ಕುಂಜತ್ತಬೈಲ್ ಪ್ರದೇಶದಲ್ಲಿ ಈ ಹಕ್ಕುಪತ್ರ ಕೊಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ನನ್ನ ಆತ್ಮೀಯ ಹುಡುಗ ಮುಹಮ್ಮದ್ ಕುಂಜತ್ತಬೈಲ್ ಎಂಬವನು. ಈ ಹುಡುಗ ಅಂದು ನಮ್ಮ ಜನತಾದಳ ಪಕ್ಷದಿಂದಲೇ ಮಂಗಳೂರು ಮಹಾನಗರ ಪಾಲಿಕೆಗೆ ಸ್ಪರ್ಧಿಸಿದ್ದ. ಆ ಪ್ರದೇಶದ ಜನ ಅವನನ್ನು ಭಾರೀ ಬಹುಮತದಿಂದ ಗೆಲ್ಲಿಸಿದ್ದರು. ಮಂಗಳೂರು ಮಹಾನಗರ ಪಾಲಿಕೆಯ ಸದಸ್ಯನಾಗಿ ಗೆದ್ದು ಬರುತ್ತಿರುವ

ಮುಹಮ್ಮದ್ ಕುಂಜತ್ತಬೈಲ್, ಈಗ 2018ರ ಮಂಗಳೂರು ಮಹಾನಗರಪಾಲಿಕೆಯ ಉಪಮೇಯರ್ ಆಗಿ ಆಯ್ಕೆಯಾಗಿದ್ದಾನೆ.

**ಪಟ್ರಮೆ ಸೇತುವೆ**

ಇತ್ತೀಚೆಗೆ ನನಗೆ ಬೆಳ್ತಂಗಡಿಯ ಶಾಸಕ ವಸಂತ ಬಂಗೇರ ಸಿಕ್ಕಿದ್ದರು. "ನೀವು ಬೆಳ್ತಂಗಡಿಗೆ ಒಮ್ಮೆ ಬರಬೇಕು" ಎಂದು ಅವರು ಹೇಳಿದರು. "ಯಾಕೆ" ಎಂದು ಕೇಳಿದೆ. "ನೀವು ಸಚಿವರಾಗಿದ್ದಾಗ ನನ್ನ ಕ್ಷೇತ್ರದ ಪಟ್ರಮೆ ಎಂಬ ಗ್ರಾಮಕ್ಕೆ ಭಾರೀ ದೊಡ್ಡ ಮೊತ್ತ ಮಂಜೂರು ಮಾಡಿ ಒಂದು ಸೇತುವೆಯನ್ನು ನಿರ್ಮಿಸಿಕೊಟ್ಟಿದ್ದೀರಿ. ಅದರಿಂದಾಗಿ ಆ ಪ್ರದೇಶ ಬಹಳಷ್ಟು ಅಭಿವೃದ್ಧಿಯಾಗಿದೆ. ನೀವು ಒಮ್ಮೆ ಅಲ್ಲಿಗೆ ಬರಬೇಕು. ಅದೆಲ್ಲವನ್ನೂ ಒಮ್ಮೆ ನೋಡಬೇಕು. ನಿಮ್ಮ ಕೈಯಲ್ಲಿ ಆ ಸೇತುವೆಯನ್ನು ಪುನಃ ಉದ್ಘಾಟಿಸಬೇಕು ಎಂಬ ಆಸೆಯಿದೆ" ಎಂದು ಆಹ್ವಾನಿಸಿದರು. "ಅಯ್ಯೋ, ಬಹಳ ವರ್ಷಗಳ ಹಿಂದಿನ ಕಥೆ ಅದು. ನಿಮಗೆಲ್ಲ ಸಂತೋಷವಾಗಿದ್ದರೆ ನನಗೆ ಅದೇ ಸಂತೋಷ" ಎಂದೆ. ಇಂತಹ ಅನೇಕ ಕೆಲಸಗಳನ್ನು ನಾನು ಮರೆತೇ ಬಿಟ್ಟಿದ್ದೇನೆ.

**ತುಂಬೆ ಡ್ಯಾಂ**

ಮಂಗಳೂರು ಮಹಾನಗರಕ್ಕೆ ನೀರನ್ನು ಪೂರೈಸುತ್ತಿರುವ ತುಂಬೆಯ ಡ್ಯಾಂಗೆ ನನ್ನ ಅಧಿಕಾರದ ಅವಧಿಯಲ್ಲಿ ಸುಮಾರು 40 ಕೋಟಿ ರೂಪಾಯಿ ಎಡಿಬಿಯಿಂದ ನಾವು ಖರ್ಚು ಮಾಡಿದ್ದೆವು. ಡ್ಯಾಂನ ಎತ್ತರವನ್ನು ಹೆಚ್ಚಿಸಿದ್ದೆವು. ಅದರ ಪರಿಣಾಮವಾಗಿ ಇಂದು ಮಂಗಳೂರಿನ ಕುಡಿಯುವ ನೀರಿನ ವ್ಯವಸ್ಥೆ ಬಹಳಷ್ಟು ಸುಧಾರಿಸಿದೆ. ಇದೆಲ್ಲಾ ನಮ್ಮ ಜಿಲ್ಲೆಗಾಗಿ ನಾನು ಮಾಡಿದ ಕೆಲಸಗಳಲ್ಲಿ ಕೆಲವು.

**ಸುಳ್ಯ–ಬೆಳ್ತಂಗಡಿ ತಾಲೂಕು ಅಭಿವೃದ್ಧಿ**

ಸುಳ್ಯ ತಾಲೂಕಿಗೆ ನಾನು ಹೆಚ್ಚು ಪ್ರಾಮುಖ್ಯತೆ ಕೊಟ್ಟಿದ್ದೆ. ಅಲ್ಲಿನ ಅನೇಕ ರಸ್ತೆಗಳನ್ನು ನನ್ನ ಅವಧಿಯಲ್ಲಿ ಅಭಿವೃದ್ಧಿಪಡಿಸಿದ್ದೇನೆ. ಸುಳ್ಯ ಮತ್ತು ಬೆಳ್ತಂಗಡಿಯನ್ನು ಹಿಂದುಳಿದ ತಾಲೂಕುಗಳು ಎಂದು ಪರಿಗಣಿಸಿ ಆ ತಾಲೂಕುಗಳಿಗೆ ನನ್ನ ಅಧಿಕಾರದ ಅವಧಿಯಲ್ಲಿ ಸಾಧ್ಯವಾದಷ್ಟು ಅಭಿವೃದ್ಧಿ ಕಾರ್ಯಗಳನ್ನು ಮಂಜೂರು ಮಾಡಿದ್ದೆನು.

**ಸಣ್ಣ ಕೈಗಾರಿಕಾ ಸಬ್ಸಿಡಿ ಪಾವತಿ**

ನಾನು ಸಣ್ಣ ಕೈಗಾರಿಕೆ ಸಚಿವನಾಗಿದ್ದಾಗ ನಮ್ಮಲ್ಲಿ ಬಹಳಷ್ಟು 'ಸಿಕ್' ಯುನಿಟ್‌ಗಳು ಇದ್ದವು. ಇವಕ್ಕೆಲ್ಲ ಒಂದು ಕಾಯಕಲ್ಪ ಮಾಡಬೇಕು ಎಂದು ಹೇಳಿ ನಾನು ಇಡೀ ರಾಜ್ಯದಲ್ಲಿ ಬಹಳ ಓಡಾಡಿದ್ದೇನೆ. ಅಲ್ಲೆಲ್ಲಾ ಸಮಸ್ಯೆಗಳಿತ್ತು. ಬಹಳ ಭ್ರಷ್ಟಾಚಾರವಿತ್ತು. ಅವೆಲ್ಲವನ್ನೂ ಪರಿಹರಿಸಿದ್ದೇನೆ.

ಅಸಂಬ್ಲಿಯಲ್ಲಿ ನನಗೆ ಒಂದು ಪ್ರಶ್ನೆ ಬಂದಿತ್ತು. ಇಂಡಸ್ಟ್ರಿಗಳಿಗೆ ಕೊಡಬೇಕಾಗಿದ್ದ ನೂರಾರು ಕೋಟಿ ರೂಪಾಯಿ ಸಬ್ಸಿಡಿ ಬಾಕಿ ಇತ್ತು. ಇದರಿಂದ ಸಣ್ಣ ಕೈಗಾರಿಕೆಗಳಿಗೆ ತುಂಬಾ ತೊಂದರೆಯಾಗುತ್ತಿತ್ತು. 3–4 ವರ್ಷಗಳಿಂದ ಈ ರೀತಿ ಸಬ್ಸಿಡಿ ಬಾಕಿ ಇಟ್ಟಿರುವುದು ಸರಿಯೇ? ಎಂದು ಕೇಳಲಾಗಿತ್ತು. ನಾನು ಅಸಂಬ್ಲಿಯಲ್ಲಿ ಆ ಪ್ರಶ್ನೆಗೆ ಉತ್ತರಿಸುತ್ತಾ, ಮೂರು ತಿಂಗಳ ಒಳಗೆ ಬಾಕಿ ಇರುವ ಎಲ್ಲ ಸಬ್ಸಿಡಿಗಳನ್ನು ಕೊಟ್ಟು ಮುಗಿಸುತ್ತೇನೆ ಎಂದು ಉತ್ತರಿಸಿದೆ.

ಆಗ ಎಚ್.ಕೆ. ಪಾಟೀಲರು ವಿರೋಧ ಪಕ್ಷದ ನಾಯಕರಾಗಿದ್ದರು. ಅವರು "ಅದು ಹೇಗೆ ಕೊಡುತ್ತೀರಿ, ಅಷ್ಟೊಂದು ದೊಡ್ಡ ಮೊತ್ತವನ್ನು ಮೂರು ತಿಂಗಳಲ್ಲಿ. ಸುಮ್ಮನೆ ತಮಾಷೆ ಮಾಡಬೇಡಿ. ಅದು ನಿಮ್ಮಿಂದ ಆಗುವುದಿಲ್ಲ ಮತ್ತು ಸುಮ್ಮನೆ ನೀವು ಮತ್ತೆ ನಮ್ಮ ಟೀಕೆಗೆ ಬಲಿಯಾಗುತ್ತೀರಿ. ಹಾಗಾಗುವುದು ಬೇಡ. ಕಾರ್ಯ ಸಾಧ್ಯವಿರುವ ಯೋಜನೆಯನ್ನು ಮಾತ್ರ ಹೇಳಿ" ಎಂದು ಹೇಳಿದರು. ನಾನು ಹೇಳಿದೆ "ನೋಡಿ ನೀವು, ನಾನು ಮಾಡಿತೋರಿಸುತ್ತೇನೆ" ಎಂದು.

ಇದಾದ ಮಾರನೆಯ ದಿನವೇ ನಾನೊಂದು ಪ್ರಪೋಸಲ್ ಸಿದ್ಧಪಡಿಸಿದೆ. ಆ ಪ್ರಪೋಸಲ್ ಇಷ್ಟೇ. ವರ್ಷಕ್ಕೆ 50–55 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತಾ ಹೋದರೂ 250 ಕೋಟಿ ರೂಪಾಯಿಗೂ ಅಧಿಕ ಬಾಕಿ ಇರುವ ಸಬ್ಸಿಡಿಯನ್ನು ಕೊಟ್ಟು ಮುಗಿಸಲು ಐದು ವರ್ಷಗಳು ಬೇಕಾಗುತ್ತವೆ. ಅದು ಆಗುವ ಹೋಗುವ ಕೆಲಸವಲ್ಲ. ನಾವು ಬಾಂಡ್ ರೈಸ್ ಮಾಡುವ ಎಂದು ಹೇಳಿದೆ. ಕೆಎಸ್ಎಫ್ಸಿ ಬಾಂಡ್ ರಿಲೀಸ್ ಮಾಡಲಿ. ಆ ಬಾಂಡ್ ರಿಲೀಸ್ ಮಾಡುವುದರಿಂದ ನಮಗೆ 250 ಕೋಟಿ ರೂಪಾಯಿ ಬರುತ್ತದೆ. ಆ ಬಾಂಡನ್ನು ನಾವು ನಮಗೆ ಹೇಗೆ ಸಬ್ಸಿಡಿ ಬರುತ್ತದೋ ಹಾಗೆ ಪಾವತಿ ಮಾಡಬಹುದು. ಆದುದರಿಂದ ಇದಕ್ಕೆ ಸರಕಾರ ಅನುಮತಿ ನೀಡಬೇಕು ಎಂದು ಕೇಳಿದೆ.

ಆಗ ಆರ್ಥಿಕ ಸಚಿವಾಲಯ ನನ್ನ ಈ ಪ್ರಪೋಸಲ್‌ಗೆ ಹಿಂಜರಿದರೂ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ನನ್ನನ್ನು ಬೆಂಬಲಿಸಿದರು. ನಾನು ಬಾಂಡ್ ರಿಲೀಸ್ ಮಾಡಲು ಏರ್ಪಾಡು ಮಾಡಿದೆ. 250 ಕೋಟಿ ರೂಪಾಯಿ ನಮಗೆ ಬಂತು. ಅದನ್ನು ನಾವು ಎಲ್ಲ ಸಣ್ಣ ಕೈಗಾರಿಕೆಗಳ ಬಾಕಿ ಇದ್ದ ಸಬ್ಸಿಡಿಯನ್ನು ಕೊಟ್ಟು ಮುಗಿಸಿದೆವು.

ಒಂದು ಕೈಗಾರಿಕೆಗೆ ಸಬ್ಸಿಡಿ ರಿಲೀಸ್ ಆಗಬೇಕಿದ್ದರೆ ಆಗ ತುಂಬಾ ದಾಖಲೆಗಳು ಬೇಕಾಗಿತ್ತು. ಹಂತ ಹಂತವಾಗಿ ಲಂಚ ಕೊಟ್ಟು ರಿಲೀಸ್ ಮಾಡಿಸಿಕೊಳ್ಳುತ್ತಿದ್ದರು. ಆದರೆ ನಾನು ಆ ದಿನಗಳಲ್ಲಿ ಪ್ರಥಮ ಬಾರಿಗೆ ಇಲೆಕ್ಟ್ರಾನಿಕ್ ತಂತ್ರಜ್ಞಾನವನ್ನು ಬಳಸಿಕೊಂಡು ಮೊದಲು ಬಂದವರಿಗೆ ಮೊದಲ ಆದ್ಯತೆ ಜಾರಿ ಮಾಡಿ ಎಲ್ಲಿಯೂ ಭ್ರಷ್ಟಾಚಾರ ನಡೆಯದಂತೆ ಸುವ್ಯವಸ್ಥಿತವಾಗಿ 250 ಕೋಟಿ ರೂಪಾಯಿ ಸಬ್ಸಿಡಿಯನ್ನು ಕ್ಲಪ್ತ ಸಮಯಕ್ಕೆ ಎಲ್ಲರಿಗೂ ಹಂಚುವ ವ್ಯವಸ್ಥೆಯನ್ನು ಮಾಡಿಸಿದೆ. ಯಾರ ಪ್ರಭಾವವೂ ಇಲ್ಲದೆ ನೇರವಾಗಿ ಅವರವರ ಹಕ್ಕಿನ ಸಬ್ಸಿಡಿ ಅವರವರ ಮನೆಗೆ ತಲುಪಿರುವುದು

ಎಲ್ಲ ಸಣ್ಣ ಕೈಗಾರಿಕೋದ್ಯಮಿಗಳಿಗೆ ಬಹಳ ಸಂತೋಷವಾಗಿತ್ತು. ಈಗಲೂ ನನಗೆ ಅನೇಕರು ಸಿಕ್ಕಿದಾಗ ಈ ವಿಚಾರವನ್ನು ಪ್ರಸ್ತಾವಿಸಿ ಮೆಚ್ಚುಗೆಯ ಮಾತುಗಳನ್ನು ಆಡುತ್ತಾರೆ.

ಆಡಳಿತದಲ್ಲಿ ಪಾರದರ್ಶಕದ ಬಗ್ಗೆ ಮಾತನಾಡಿ, ಭಾಷಣ ಮಾಡಿ ಪ್ರಯೋಜನವಿಲ್ಲ. ಅದನ್ನು ಮಾಡಿ ತೋರಿಸಬೇಕು. ಆ ಕೆಲಸ ನಾನು ಮಾಡಿದ್ದೇನೆ. ನಾನು ಸಣ್ಣ ಕೈಗಾರಿಕಾ ಸಚಿವನಾಗಿದ್ದುದು ಕೇವಲ ಒಂದು ವರ್ಷ ಮಾತ್ರ. ಆ ಒಂದು ವರ್ಷದಲ್ಲೇ ಹತ್ತು ವರ್ಷಗಳಷ್ಟು ಕೆಲಸ ಮಾಡಿದ್ದೇನೆ ಎಂಬ ತೃಪ್ತಿ ನನಗಿದೆ. ನನ್ನ ಸಣ್ಣ ಅವಧಿಯಲ್ಲಿ ಇಡೀ ರಾಜ್ಯದ ಎಲ್ಲ ಸಣ್ಣ ಕೈಗಾರಿಕೆಗಳ ಸಬ್ಸಿಡಿ ಬಾಕಿಯನ್ನು ಶೂನ್ಯ ಮಾಡಿದ್ದೇನೆ.

## GTTCಗಳ ಸ್ಥಾಪನೆ

ನಾನು ಮಾಡಿದ ಮತ್ತೊಂದು ಮುಖ್ಯವಾದ ಕೆಲಸವೆಂದರೆ GTTC (Govt. Tool Room Training Center)ಗಳ ಸ್ಥಾಪನೆ. ಈ GTTC ಎಂದರೆ ಏನೆಂದು ಹೆಚ್ಚಿನವರಿಗೆ ಗೊತ್ತಿಲ್ಲ. ಸರಕಾರದ ಈ ಕೇಂದ್ರದಲ್ಲಿ ಒಬ್ಬ ಯುವಕ ತರಬೇತಿ ಮುಗಿಸಿದರೆ ವಿದೇಶಗಳಲ್ಲಿ ತಿಂಗಳಿಗೆ 2–3 ಲಕ್ಷ ರೂಪಾಯಿಯ ಸಂಬಳದ ಕೆಲಸ ಸಿಗುತ್ತಿತ್ತು. ಇವರಿಗೆ ಡೈ ಮೇಕರ್ ಎಂದು ಹೇಳುತ್ತಾರೆ. ಇದು ಬಹಳ ಬುದ್ಧಿವಂತಿಕೆಯ ಕೆಲಸ. ಒಂದು ಹೊಸ ಮಾಡೆಲ್‌ನ ಕಾರು ಬರುವುದಾದರೆ ಅದಕ್ಕೆ ಒಬ್ಬ ನಿಪುಣ ಡೈ ಮೇಕರ್ ಬೇಕೇ ಬೇಕು. ಇಂಡಸ್ಟ್ರೀಯಲ್ಲಿ ಇಂತಹ ನಿಪುಣರಿಗೆ ಬಹಳ ಬೇಡಿಕೆ ಇದೆ. GTTCಗಳಲ್ಲಿ ಇಂತಹ ತಜ್ಞರನ್ನು ತಯಾರು ಮಾಡಲಾಗುತ್ತದೆ. ಇದರಲ್ಲಿ ಬೇರೆ ಬೇರೆ ಜಾತಿ ಧರ್ಮದವರಿಗೆ ಮೀಸಲಾತಿ ಇದೆ. ಅಲ್ಪಸಂಖ್ಯಾತರಿಗೂ ಮೀಸಲಾತಿ ಇದೆ. ಮಂಗಳೂರು ಸಮೀಪದ ಬೈಕಂಪಾಡಿ ಕೈಗಾರಿಕಾ ಪ್ರದೇಶದಲ್ಲೂ ಈ GTTCಯ ಒಂದು ಘಟಕವಿದೆ.

## ಕೌಶಲ್ಯ ನೈಪುಣ್ಯತೆಯ ತರಬೇತಿ

ಈಗ ನರೇಂದ್ರ ಮೋದಿ ಸರಕಾರ ಯುವಕರಿಗೆ ಕೌಶಲ್ಯ ನೈಪುಣ್ಯತೆಯನ್ನು ಕೊಡಬೇಕು ಎಂದು ಯೋಜನೆಗಳನ್ನು ರೂಪಿಸುತ್ತಿದೆಯೋ ಇದನ್ನು ನಾನು ಬಹಳ ಹಿಂದೆಯೇ ಮಾಡಿದ್ದೇನೆ.

ಚಮ್ಮಾರರಿಗೆ ತರಬೇತಿಯನ್ನು ಕೊಟ್ಟು ಅವರ ಕೌಶಲ್ಯತೆಯನ್ನು ಹೆಚ್ಚಿಸಲು ಪ್ರಯತ್ನಿಸಿದ್ದೇನೆ. ಚಮ್ಮಾರ, ಕಮ್ಮಾರರಂತಹ ವ್ಯಕ್ತಿಗಳು ಯಾವುದೋ ಒಂದು ನಿರ್ದಿಷ್ಟ ಜಾತಿಯವರಿಗೆ ಸೀಮಿತವಾಗಿರಬಾರದು. ಎಲ್ಲ ಜಾತಿ, ಧರ್ಮದವರೂ ಇಂತಹ ಎಲ್ಲ ಕರಕುಶಲ ಕೆಲಸಗಳನ್ನು ಕಲಿಯಬೇಕು ಎಂಬ ನಿಟ್ಟಿನಲ್ಲಿ ತರಬೇತಿಗಳನ್ನು ಕೊಡಿಸಿದ್ದೇನೆ.

## ಬಿದ್ರಿ ವರ್ಕ್‌ಗೆ ಪ್ರೋತ್ಸಾಹ

ಬಿದ್ರಿ ವರ್ಕ್ ಎನ್ನುವ ಒಂದು ಅತ್ಯಂತ ಸುಂದರ, ಸೂಕ್ಷ್ಮ ಕೌಶಲ್ಯದ ಕೈಗಾರಿಕೆ ಇದೆ. ಇದನ್ನು ಅತೀ ಹೆಚ್ಚು ಬಡ ಮುಸ್ಲಿಮರೇ ಮಾಡುತ್ತಾರೆ. ಇವರ ಆ ಬಿದ್ರಿ ಉತ್ಪನ್ನಗಳಿಗೆ ವಿಶ್ವಾದ್ಯಂತ ಬಹಳ ಬೇಡಿಕೆ ಇದೆ. ಅವರಿಗೆ ಯಾವುದೇ ತರಬೇತಿ ಇಲ್ಲದೆ, ಸೌಲಭ್ಯಗಳಿಲ್ಲದೆ, ವ್ಯವಸ್ಥಿತ ಮಾರುಕಟ್ಟೆ ಇಲ್ಲದೆ ಬಹಳ ಸಂಕಷ್ಟದಲ್ಲಿದ್ದರು. ಅವರನ್ನೆಲ್ಲ ಗುರುತಿಸಿ ಅವರಿಗೆ ಸಾಧ್ಯವಿರುವ ಎಲ್ಲ ಸವಲತ್ತುಗಳನ್ನು ಕೊಡಿಸಿದ್ದೇನೆ. ದುಬೈಯಲ್ಲಿ ಸಹ ಇವರ ಕರಕೌಶಲ್ಯ ವಸ್ತುಗಳ ಮಾರಾಟಕ್ಕೆ ಒಂದು ಕೇಂದ್ರವನ್ನು ತೆರೆಸಿಕೊಟ್ಟಿದ್ದೇನೆ.

ಇವೆಲ್ಲ ಸಣ್ಣ ಕೈಗಾರಿಕಾ ಸಚಿವನಾಗಿ ಅಲ್ಪ ಸಮಯದಲ್ಲಿ ನಾನು ಮಾಡಿದ ಕೆಲಸಗಳು. ಆ ನಂತರ ಮಾನ್ಯ ಮುಖ್ಯಮಂತ್ರಿ ಜೆ.ಎಚ್. ಪಟೇಲರು ನನಗೆ ಉನ್ನತ ಶಿಕ್ಷಣ ಖಾತೆಯನ್ನು ನೀಡಿದರು.

## ಪ್ರಾಧ್ಯಾಪಕರಿಗೆ ವೇತನಶ್ರೇಣಿ

ಉನ್ನತ ಶಿಕ್ಷಣ ಸಚಿವನಾಗಿ ಅಧಿಕಾರ ಸ್ವೀಕರಿಸಿದಾಗ ಪ್ರಪ್ರಥಮವಾಗಿ ನನ್ನ ಮುಂದೆ ಬಂದ ಸವಾಲು ಶಿಕ್ಷಣದ ಗುಣಮಟ್ಟವನ್ನು ಹೆಚ್ಚಿಸಬೇಕು ಎಂಬುದು. ಈ ನಿಟ್ಟಿನಲ್ಲಿ ನಾನು ಕಾರ್ಯಪ್ರವೃತ್ತನಾದಾಗ ಪ್ರಾಧ್ಯಾಪಕರಿಗೆ ಯುಜಿಸಿ ವೇತನಶ್ರೇಣಿ ಕೊಡಬೇಕು ಎಂಬ ಪ್ರಸ್ತಾಪ ಬಂತು. ಇದರಲ್ಲಿ ಯುಜಿಸಿಯವರು 180 ಕೋಟಿ ರೂಪಾಯಿ ಕೊಡುತ್ತಾರೆ. ನಾವು 20 ಕೋಟಿ ರೂಪಾಯಿ ಕೊಡಬೇಕಾಗಿತ್ತು.

"ಆಯಿತು, ನಾನು ಯುಜಿಸಿ ವೇತನಶ್ರೇಣಿ ಕೊಡುತ್ತೇನೆ" ಎಂದು ಹೇಳಿದಾಗ ಆರ್ಥಿಕ ಇಲಾಖೆಯವರು ಇದಕ್ಕೆ ವಿರೋಧ ವ್ಯಕ್ತಪಡಿಸಿದರು. ಈಗಿನ ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಆಗ ಆರ್ಥಿಕ ಸಚಿವರಾಗಿದ್ದರು. ಈ ಮೇಷ್ಟ್ರುಗಳಿಗೆಲ್ಲ ಅಷ್ಟು ದೊಡ್ಡ ವೇತನ ಯಾಕೆ ಕೊಡಬೇಕು ಎಂಬುದು ಆರ್ಥಿಕ ಇಲಾಖೆಯ ಪ್ರಶ್ನೆಯಾಗಿತ್ತು. "ನಾವು ಕೊಡುವುದಲ್ಲ, ಯುಜಿಸಿಯಿಂದ ಹಣ ಕೊಡುತ್ತಾರೆ. ಅದಕ್ಕೆ ನಾವೇಕೆ ತಲೆ ಕೆಡಿಸಿಕೊಳ್ಳುವುದು" ಎಂದು ಹೇಳಿದೆ. "ಅಲ್ಲ, ಮುಂದೆ ನಾವು ಕೊಡಬೇಕಾಗುತ್ತದೆ. ಆಗ ತೊಂದರೆಯಾಗುತ್ತದೆ" ಎಂದು ಹೇಳಿದರು.

ಹೌದು ನಾವು ಕೊಡಬೇಕು. ಯಾಕೆಂದರೆ ಈ ಪ್ರಾಧ್ಯಾಪಕರು ಹಗಲೂ ರಾತ್ರಿ ದುಡಿಯುತ್ತಾರೆ. ಅವರಿಗೆ ಲಂಚ ಮತ್ತೊಂದು ಇಲ್ಲ. ಅವರಿಂದಾಗಿ ಮಾತ್ರ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಸಾಧ್ಯ ಎಂದು ವಾದಿಸಿದೆ.

ಈ ವಿಷಯದಲ್ಲಿ ಮಾನ್ಯ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಒಂದು ವಿಶೇಷ ಸಭೆಯನ್ನು ಆಯೋಜಿಸಿದರು. ಬಹಳಷ್ಟು ಚರ್ಚೆಯ ನಂತರ ಮಾನ್ಯ ಮುಖ್ಯಮಂತ್ರಿಗಳು ಪ್ರಾಧ್ಯಾಪಕರುಗಳಿಗೆ ಯುಜಿಸಿ ವೇತನಶ್ರೇಣಿಯನ್ನು ಕೊಡಲು ಒಪ್ಪಿಗೆ ಸೂಚಿಸಿದರು. ನಮಗೆ ಬಹಳ ಸಂತೋಷವಾಗಿತ್ತು. ತಕ್ಷಣ ನಾನು ಪತ್ರಿಕಾ ಹೇಳಿಕೆಯನ್ನು ಬಿಡುಗಡೆಗೊಳಿಸಿದೆ.

ಈ ನಿರ್ಧಾರ ಬಹಳ ಪರಿಣಾಮಕಾರಿಯಾಯಿತು. ಇಂದು ಓರ್ವ ಪ್ರಾಧ್ಯಾಪಕನಿಗೆ ಎಷ್ಟು ಸಂಬಳ ಬರುತ್ತದೆ ಕೇಳಿ ನೋಡಿ? ಇದರಿಂದಾಗಿ ಪ್ರಾಧ್ಯಾಪಕರುಗಳ ಸಾಮಾಜಿಕ, ಆರ್ಥಿಕ ಪರಿಸ್ಥಿತಿ ಸುಧಾರಿಸಲ್ಪಟ್ಟು ಅವರಿಂದ ಉತ್ತಮ ಗುಣಮಟ್ಟದ ಶಿಕ್ಷಣ ಸಮಾಜಕ್ಕೆ ದೊರೆಯುವಂತಾಯಿತು.

ಇದನ್ನು ಸಹ ನಾನು ಬಹಳ ಪಾರದರ್ಶಕವಾಗಿ ಮಾಡಿದ್ದೇನೆ. ಈ ಯುಜಿಸಿ ವೇತನಶ್ರೇಣಿ ಕೊಡಬೇಕೇ ಬೇಡವೇ ಎಂದು ಚರ್ಚೆ ನಡೆಯುತ್ತಿರುವಾಗ ಈ ಪ್ರಾಧ್ಯಾಪಕ ಸಂಘದ ಪದಾಧಿಕಾರಿಗಳು ನನ್ನನ್ನು ಭೇಟಿಯಾಗಲು ಬಂದಿದ್ದರು. ಅವರ ಮಾತಿನ ಶೈಲಿ ಹೇಗಿತ್ತೆಂದರೆ ಈ ವೇತನಶ್ರೇಣಿ ನಾನು ಅವರಿಗೆ ಕೊಡಿಸಿದರೆ ನನಗೆ ಒಂದು ದೊಡ್ಡ ಮೊತ್ತವನ್ನು, ಕನಿಷ್ಠ ಆಗಿನ ಎರಡು ಕೋಟಿ ರೂಪಾಯಿಯನ್ನು ಅವರು ನನಗೆ ಕೊಡುಗೆಯಾಗಿ ನೀಡಲು ಸಿದ್ಧರಿದ್ದರು. ಆದರೆ ನಾನು ಅಂತಹ ಯಾವುದೇ ವಿಷಯದ ಪ್ರಸ್ತಾಪಕ್ಕೆ ಅವಕಾಶವೇ ಕೊಡಲಿಲ್ಲ.

ಒಂದು ದಿನ ನಾನು ಮನೆಯಲ್ಲಿ ಕುಳಿತಿರುವಾಗ ಒಬ್ಬರು ಪ್ರಾಧ್ಯಾಪಕರು ಕುಟುಂಬ ಸಮೇತ ಬಂದರು. ಅವರ ಕೈಯಲ್ಲಿ ಒಂದು ದೊಡ್ಡ ಹೂವಿನ ಹಾರವಿತ್ತು. ಅದನ್ನು ನನ್ನ ಕೊರಳಿಗೆ ಹಾಕಿ ಬಹಳ ಪ್ರೀತಿಪೂರ್ವಕ ಒಂದು ತಟ್ಟೆಯಲ್ಲಿ ಹಣ್ಣು ಹಂಪಲುಗಳನ್ನು ಕೊಟ್ಟರು. ನಾನು “ಇದೆಲ್ಲ ಯಾಕೆ ರೀ” ಎಂದು ಕೇಳಿದೆ. “ಇಲ್ಲ ಸಾರ್, ನೀವು ಯುಜಿಸಿ ವೇತನಶ್ರೇಣಿ ಕೊಡಿಸಿದ್ದರಿಂದಾಗಿ ಹಳೆಯ ಹೆಚ್ಚುವರಿ ಸಂಬಳದ ಬಾಬ್ತು ನನಗೆ ಐದು ಲಕ್ಷ ರೂಪಾಯಿ ಒಂದೇ ಗಂಟಿನಲ್ಲಿ ಸಿಕ್ಕಿತು. ನನಗೊಬ್ಬಳು ಬೆಳೆದ ಮಗಳಿದ್ದಳು. ಹಣದ ಅಡಚಣೆಯಿಂದಾಗಿ ಅವಳ ಮದುವೆ ಬಾಕಿಯಾಗಿತ್ತು. ನನಗೆ ಸಿಕ್ಕಿದ ಐದು ಲಕ್ಷ ರೂಪಾಯಿಯಲ್ಲಿ ನಮ್ಮ ಮಗಳ ಮದುವೆ ಮಾಡಿ ಮುಗಿಸಿದ್ದೇನೆ”. ಇದನ್ನು ಹೇಳುವಾಗ ಆ ಪ್ರಾಧ್ಯಾಪಕರು ಮತ್ತು ಅವರ ಪತ್ನಿಯ ಕಣ್ಣುಗಳು ತೇವಗೊಂಡಿದ್ದವು.

**ಮೆಡಿಕಲ್ ಕಾಲೇಜುಗಳಿಗೆ ಅನುಮತಿ**

ಮಂಗಳೂರಿನ ಮೂರು ಶಿಕ್ಷಣ ಸಂಸ್ಥೆಗಳವರು ಮೆಡಿಕಲ್ ಕಾಲೇಜಿಗೆ ಅನುಮತಿಯನ್ನು ಕೋರಿದ್ದರು. ನಾನು ಮೂರೂ ಸಂಸ್ಥೆಯವರಿಗೆ ಶಿಫಾರಸು ಮಾಡಿದ್ದೆ. ಆದರೆ ಸರಕಾರದ ಅನುಮತಿ ಪ್ರಕಟವಾದಾಗ ಯೇನೆಪೋಯ ಮೆಡಿಕಲ್ ಕಾಲೇಜು ಮತ್ತು ಕೆ.ಎಸ್. ಹೆಗ್ಡೆ ಮೆಡಿಕಲ್ ಕಾಲೇಜು ಈ ಎರಡು ಶಿಕ್ಷಣ ಸಂಸ್ಥೆಗಳಿಗೆ ಮಾತ್ರ ಅನುಮತಿ ನೀಡಲಾಗಿತ್ತು. ಫಾದರ್ ಮುಲ್ಲರ್ಸ್ ಶಿಕ್ಷಣ ಸಂಸ್ಥೆಗೆ ಮೆಡಿಕಲ್ ಕಾಲೇಜು ಮಾಡಲು ಅನುಮತಿ ಸಿಕ್ಕಿರಲಿಲ್ಲ. ಈ ವಿಷಯ ನನಗೆ ತಿಳಿದ ಕೂಡಲೇ ನಾನು ಈಗಿನ ಮುಖ್ಯ ಸಚೇತಕ ಐವನ್ ಡಿ'ಸೋಜ ಅವರಿಗೆ ತಕ್ಷಣ ಫೋನ್ ಮಾಡಿ ಅವರನ್ನು ಕರೆಸಿಕೊಂಡು ನೇರವಾಗಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರ ಚೇಂಬರ್‌ಗೆ ಹೋದೆ. ಫಾದರ್ ಮುಲ್ಲರ್ಸ್‌ನವರಿಗೂ ಮೆಡಿಕಲ್ ಕಾಲೇಜು ಮಾಡಲು ಅನುಮತಿ

ನೀಡಬೇಕೆಂದು ವಾದಿಸಿದೆ. ಯಾಕೆಂದರೆ ಫಾದರ್ ಮುಲ್ಲರ್ಸ್ ಅಲ್ಪಸಂಖ್ಯಾತ ಕ್ರಿಶ್ಚಿಯನ್ ಸಮುದಾಯದವರು ನಡೆಸಿಕೊಂಡು ಬರುತ್ತಿರುವ ಸಂಸ್ಥೆ. ಇದಕ್ಕೆ ನೂರು ವರ್ಷಗಳ ಇತಿಹಾಸವಿದೆ. ನಾವು ಎರಡು ಹೊಸ ಶಿಕ್ಷಣ ಸಂಸ್ಥೆಗಳಿಗೆ ಮೆಡಿಕಲ್ ಕಾಲೇಜು ಮಾಡಲು ಅವಕಾಶ ಮಾಡಿಕೊಟ್ಟು ಈ ಸಂಸ್ಥೆಗೆ ಕೊಡದಿದ್ದರೆ ಅದೊಂದು ದೊಡ್ಡ ಸಾಮಾಜಿಕ ಅನ್ಯಾಯವಾಗಬಹುದು ಎಂದು ಹೇಳಿದೆ. ನನ್ನ ಮಾತುಗಳನ್ನು ಸಮಾಧಾನದಿಂದ ಆಲಿಸಿದ ಮಾನ್ಯ ಮುಖ್ಯಮಂತ್ರಿಗಳು 'ನೋಡೋಣ' ಎಂದಷ್ಟೇ ಹೇಳಿದರು. ಮಾರನೆಯ ದಿನಪತ್ರಿಕೆಗಳಲ್ಲಿ ಪ್ರಕಟವಾದ ಮೆಡಿಕಲ್ ಕಾಲೇಜುಗಳ ಅನುಮತಿ ಪಡೆದ ಶಿಕ್ಷಣ ಸಂಸ್ಥೆಗಳ ಹೆಸರಿನ ಪಟ್ಟಿಯಲ್ಲಿ ಮಂಗಳೂರಿನ ಫಾದರ್ ಮುಲ್ಲರ್ಸ್ ಹೆಸರು ಕೂಡಾ ಇತ್ತು. ಒಂದೇ ಸಮಯದಲ್ಲಿ ಒಂದು ಜಿಲ್ಲೆಗೆ ಮೂರು ಮೆಡಿಕಲ್ ಕಾಲೇಜುಗಳು ಮಂಜೂರಾದದ್ದು ಒಂದು ಐತಿಹಾಸಿಕ ದಾಖಲೆ.

**ವಿದ್ಯುತ್ ಉತ್ಪಾದನೆಗೆ ಅಡ್ಡಗಾಲು**

ಕೆಪಿಟಿಸಿಎಲ್‌ನಲ್ಲಿ ಒಂದು ಯೋಜನೆ ಮಾಡಬೇಕೆಂದು ಪ್ರಯತ್ನಿಸಿದೆ. ಆ ಯೋಜನೆಗೆ ಆಸ್ಟ್ರಿಯ ಶೇಕಡಾ 100 ಸಾಲ ಕೊಡುತ್ತದೆ. ಆ ಸಾಲ ಪಡೆದು ಬಂಟ್ವಾಳ ಕ್ಷೇತ್ರದ ಸರಪಾಡಿಯಲ್ಲಿ ಒಂದು ವಿದ್ಯುತ್ ಉತ್ಪಾದಕ ಘಟಕವನ್ನು ಸ್ಥಾಪಿಸಲು ಯೋಚಿಸಿದ್ದೆ. ಅದರಲ್ಲಿ 50 ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಬಹುದಿತ್ತು. ಅದು ಆಗಿದ್ದರೆ ಸಾವಿರಾರು ಎಕರೆ ಭೂಮಿಗೆ ನೀರಾವರಿ ಸೌಲಭ್ಯ ದೊರಕುತ್ತಿತ್ತು. ಇಂತಹ ಒಂದು ಯೋಜನೆಯನ್ನು ನಾನು ಹಾಕಿದಾಗ ಅಲ್ಲಿನ ಆಗಿನ ಶಾಸಕರು ತಮ್ಮ ಅಸಮ್ಮತಿಯನ್ನು ಸೂಚಿಸಿದರು. ಕೆಲವು ಸ್ಥಾಪಿತ ಹಿತಾಸಕ್ತಿಗಳ ಮಾತು ಕೇಳಿ ಕೆಲವರ ಗದ್ದೆ, ತೋಟ ಮುಳುಗುತ್ತದೆ ಎಂಬ ಕುಂಟು ನೆಪದಿಂದ ಒಂದು ಉತ್ತಮ ಯೋಜನೆಯನ್ನು ತಡೆದರು.

ಈ ಯೋಜನೆ ಅಸ್ತಿತ್ವಕ್ಕೆ ಬಂದರೆ ಸರಪಾಡಿ ನದಿ ದಡದಲ್ಲಿರುವ ದೇವಾಲಯ, ಮಸೀದಿ, ದರ್ಗಾಗಳು ಮುಳುಗುತ್ತವೆ ಎಂದು ವದಂತಿ ಹುಟ್ಟಿಸಿ ಗೊಂದಲಗೊಳಿಸಿದರು. ನಾನು ಸಭೆಯನ್ನು ಕರೆದೆ. ಆ ಸಭೆಯಲ್ಲಿ ವಿವರಿಸಿದೆ. ನಾನು 1978ರಲ್ಲಿ ಶಾಸಕನಾಗುವುದಕ್ಕೆ ಮೊದಲು ನಿಮಗಾರಿಗೂ ವಿದ್ಯುತ್ ಸಂಪರ್ಕ ಇರಲಿಲ್ಲ. ನಾನು ನಿಮಗೆ ವಿದ್ಯುತ್ ಸಂಪರ್ಕ ಮಾಡಿಸಿಕೊಟ್ಟೆ. ನೀವೆಲ್ಲ ಪಂಪ್‌ಸೆಟ್ ಇಟ್ಟಿರಿ. ಒಳ್ಳೆಯ ತೋಟವನ್ನು ಬೆಳೆಸಿದಿರಿ. ನಿಮಗೆ ಈಗ ಒಳ್ಳೆಯ ಅಡಿಕೆ ಇಳುವರಿ ಇದೆ. ಸರಕಾರಿ ಜಾಗದಲ್ಲಿ ನೀವು ತೋಟ ಮಾಡಿಕೊಂಡಿದ್ದೀರಿ. ಆದರೂ ನಾನು ನಿಮಗೆ ಆಶ್ವಾಸನೆ ಕೊಡುತ್ತೇನೆ. ಸರಕಾರಿ ಜಾಗದಲ್ಲಿರುವ ನಿಮ್ಮ ತೋಟಗಳಿಗೂ ನಾನು ಒಳ್ಳೆಯ ಪರಿಹಾರ ಕೊಡಿಸುತ್ತೇನೆ. ನೀವು ಈ ಯೋಜನೆಗೆ ಅಡ್ಡ ಬರಬಾರದು ಎಂದು ವಿನಂತಿಸಿದೆ. ಅವರ ಮನಃಪರಿವರ್ತನೆ ಯಾಗುವ ಸಾಧ್ಯತೆ ಇತ್ತು. ಆದರೆ ಅಲ್ಲಿಯ ಶಾಸಕರು 'ಜನರಿಗೆ ಬೇಡವಾದರೆ ನಮಗೂ ಬೇಡ' ಎಂದು ಸುಮ್ಮನಾದರು. ನಾನು ಆ ಯೋಜನೆಯನ್ನು ಅಲ್ಲಿಗೇ ಕೈಬಿಟ್ಟೆ.

ಈಗ ಏನಾಯಿತು? ಅಲ್ಲಿ ಎಂ.ಆರ್.ಪಿ.ಎಲ್.ನವರು ಡ್ಯಾಂ ಕಟ್ಟಿದರು. ಆದರೆ ನೀರು ಯಾರಿಗೂ ಇಲ್ಲ. ಎಂ.ಆರ್.ಪಿ.ಎಲ್. ಮತ್ತು ಒಎನ್‌ಜಿಸಿಯವರು ಅದರ ಲಾಭ ಪಡೆದುಕೊಳ್ಳುತ್ತಿದ್ದಾರೆ. ಜನರಿಗೆ ಏನೂ ಪ್ರಯೋಜನವಿಲ್ಲ. ಆದರೆ ನಾನೊಂದು ಕೆಲಸ ಮಾಡಿದೆ. ಎಂ.ಆರ್.ಪಿ.ಎಲ್.ನವರು ಈ ಕಡೆ ಸರಪಾಡಿ ಡ್ಯಾಂನಿಂದ ನೀರು ತೆಗೆದುಕೊಳ್ಳುತ್ತಿದ್ದರು ಹಾಗೂ ಆ ಕಡೆ ಮಂಗಳೂರು ಮಹಾನಗರಪಾಲಿಕೆಯಿಂದಲೂ ನೀರು ಸರಬರಾಜು ಆಗುತ್ತಿತ್ತು. ನಾನು ಈ ವಿಷಯವನ್ನು ಸಂಬಂಧಪಟ್ಟವರ ಗಮನಕ್ಕೆ ತಂದು ಎಂ.ಆರ್.ಪಿ.ಎಲ್.ಗೆ ಮಂಗಳೂರು ಮಹಾನಗರಪಾಲಿಕೆಯಿಂದ ಹೋಗುತ್ತಿದ್ದ ನೀರನ್ನು ನಿಲ್ಲಿಸಿದೆ ಮತ್ತು ಆ ನೀರನ್ನು ಕಾಟಿಪಳ್ಳ–ಕೃಷ್ಣಾಪುರಕ್ಕೆ ಕೊಡಿಸಿದೆ. ಇದರಿಂದಾಗಿ ಕಾಟಿಪಳ್ಳ–ಕೃಷ್ಣಾಪುರಕ್ಕೆ ಸಮೃದ್ಧವಾಗಿ ನೀರು ಸಿಗುವಂತಾಯಿತು.

**ಇದಿನಬ್ಬನೆಂಬ ನಿಸ್ವಾರ್ಥ ಜನಸೇವಕ**

ಕೃಷ್ಣಾಪುರ – ಚೊಕ್ಕಬೆಟ್ಟುವಿನಲ್ಲಿ ಇದಿನಬ್ಬ ಎಂಬ ನಮ್ಮ ಪಕ್ಷದ ಕಾರ್ಪೊರೇಟರ್ ಒಬ್ಬ ಇದ್ದ. ಈ ಯುವಕ ಅವಿದ್ಯಾವಂತ, ತೀರಾ ಬಡವ. ಒಮ್ಮೆ ನಾನು ರಮಝಾನ್ ಸಂದರ್ಭದಲ್ಲಿ ಅವನನ್ನು ಕರೆದು ಐದು ಸಾವಿರ ರೂಪಾಯಿ ಕೈಯಲ್ಲಿ ಹಿಡಿದು "ಇದಿನಬ್ಬ, ಇದನ್ನು ಕೊಂಡುಹೋಗು. ನಿನ್ನ ಹೆಂಡತಿ ಮಕ್ಕಳ ಜೊತೆಗೆ ಸಂತೋಷದಿಂದ ಹಬ್ಬ ಆಚರಿಸು" ಎಂದೆ. ಆಗ ಅವನು ವಿನೀತನಾಗಿ "ಬೇಡ ಸರ್, ನನಗೆ ದುಡ್ಡು ಬೇಡ. ಕೃಷ್ಣಾಪುರದಲ್ಲಿ ಕುಡಿಯುವ ನೀರಿನ ತುಂಬ ಸಮಸ್ಯೆ ಇದೆ. ನಮಗೆ ಕೃಷ್ಣಾಪುರ 6ನೇ ಬ್ಲಾಕ್‌ನಲ್ಲಿ ಒಂದು ನೀರಿನ ಟ್ಯಾಂಕ್ ಕಟ್ಟಿಸಿಕೊಡಿ. ಅದೇ ದೊಡ್ಡ ಉಪಕಾರ" ಎಂದ. ಅವನ ಮಾತು ಕೇಳಿ ನಾನು ಭಾವುಕನಾಗಿದ್ದೆ. ಇಂದು ಕೃಷ್ಣಾಪುರ 6–7ನೇ ಬ್ಲಾಕುಗಳಲ್ಲಿ ನೀರಿನ ಸಮಸ್ಯೆ ನೀಗಿದ್ದರೆ ಅದು ಆ ಕಾರ್ಪೊರೇಟರ್ ದಿವಂಗತ ಇದಿನಬ್ಬನ ನಿಸ್ವಾರ್ಥ ಶ್ರಮದ ಫಲ.

**ಮಂಗಳೂರಿನ ಪಿಲಿಕುಳ ನಿಸರ್ಗಧಾಮ**

ಮಂಗಳೂರಿನ ಪಿಲಿಕುಳ ನಿಸರ್ಗಧಾಮದ ಯೋಜನೆಯನ್ನು ಪ್ರಥಮ ಬಾರಿಗೆ ಕೈಗೆತ್ತಿಕೊಂಡವನು ನಾನು. ನಾನು ಶಾಸಕನಾಗಿರುವಾಗ ನನಗೊಂದು ಸ್ಕೀಂ ಬಂತು. ಅದು ಯು.ಕೆ. ಸರಕಾರ ಕೊಟ್ಟದ್ದು. 46 ಕೋಟಿ ರೂಪಾಯಿಯ ಯೋಜನೆ ಅದು. ಈ ಯೋಜನೆಯ ಮೂಲ ಉದ್ದೇಶ ಕಾಡನ್ನು ಬೆಳೆಸಿ ವಿಹಾರಧಾಮ ಮಾಡುವುದು. ಆಗ ನಾನು ಗುರುತಿಸಿದ್ದ ಜಾಗವೇ ಈ ಪಿಲಿಕುಳ. ಸರಿಯಾದ ಆವರಣ ಗೋಡೆಯ ಭದ್ರತೆ ಇಲ್ಲದೆ ಅಲ್ಲಿ ಭೂ ಅತಿಕ್ರಮಣ ಆಗುತ್ತಾ ಇತ್ತು. ಆಗ ಜಿಲ್ಲಾಧಿಕಾರಿಯಾಗಿದ್ದ ಭರತ್‌ಲಾಲ್ ಮೀನಾರಿಗೆ ಹೇಳಿ ಪಿಲಿಕುಳವನ್ನು ಅಭಿವೃದ್ಧಿಪಡಿಸಿದೆ. ಈಗಿನ ಶಾಸಕ ಜೆ.ಆರ್. ಲೋಬೋ ಆಗ ಅಧಿಕಾರಿಯಾಗಿದ್ದರು. ಇದರ ಅಭಿವೃದ್ಧಿಗೆ ಸರಕಾರದಿಂದಲೂ ಅನುದಾನ ಪಡೆದೆ. ಕೆಲವು ಖಾಸಗಿ ಕಂಪೆನಿಗಳ ಸಹಭಾಗಿತ್ವವೂ ಪಡೆದೆ. ಬಿಲ್ಡರ್

ಗಳಿಂದಲೂ ಹಣ ಸಂಗ್ರಹಿಸಿದೆವು. ಹೀಗೆ ಪಿಲಿಕುಳದ ಸ್ಥಾಪನೆಯ ಪ್ರಾರಂಭ ನನ್ನ ಕಾಲದಲ್ಲಿ ಆಗಿರುತ್ತದೆ.

**ಜಂಬೋ ಕ್ಯಾಬಿನೆಟ್**

ಜೆ.ಎಚ್. ಪಾಟೇಲರ ಸರಕಾರದ ಬಗ್ಗೆ ಒಂದು ವಿಷಯವನ್ನು ಇಲ್ಲಿ ನಾನು ನೆನಪಿಸಲೇಬೇಕು. ಪತ್ರಕರ್ತರು ಒಮ್ಮೆ ಜೆ.ಎಚ್. ಪಟೇಲರನ್ನು ನೇರವಾಗಿ ಕೇಳಿದ್ದರು. ನೀವು ಅತಿ ದೊಡ್ಡ ಜಂಬೋ ಕ್ಯಾಬಿನೆಟ್ ಮಾಡಿಕೊಂಡಿದ್ದೀರಿ, ಇಷ್ಟೊಂದು ಮಂತ್ರಿಗಳ ಅಗತ್ಯವಿದೆಯೇ? ಎಂದು.

ಅದಕ್ಕೆ ಉತ್ತರಿಸಿದ ಜೆ.ಎಚ್. ಪಟೇಲ್ "ಹೌದು, ನನ್ನದು ಅತಿ ದೊಡ್ಡ ಮಂತ್ರಿಮಂಡಲ. ಆದರೆ ಏನೂ ಮಾಡಲು ಸಾಧ್ಯವಿಲ್ಲ. ಒತ್ತಡ ಹಾಗಿದೆ ಮತ್ತು ಅದು ಅನಿವಾರ್ಯ. ಆದರೆ "ಓ ಅಲ್ಲೊಬ್ಬರು ಕೂತಿದ್ದಾರಲ್ಲ, ಅವರು ನನ್ನದೇ ಆಯ್ಕೆ" ಎಂದು ಅವರು ನನ್ನತ್ತ ಬೆರಳು ತೋರಿಸಿದರು. ಮರುದಿನ ಎಲ್ಲ ಪತ್ರಿಕೆಗಳಲ್ಲೂ ಈ ಸುದ್ದಿ ಪ್ರಕಟವಾಗಿತ್ತು.

**ತೃಪ್ತಿ**

ಅಧಿಕಾರ ಎನ್ನುವುದು ನ್ಯಾಯ ಪರಿಪಾಲನೆಗೆ ಇರುವ ಒಂದು ಅಸ್ತ್ರ. ನಮ್ಮ ಜನರಿಗೆ ನಾವು ಏನಾದರೂ ಮಾಡಬೇಕು ಎಂಬ ಧೋರಣೆ ಅಥವಾ ತುಡಿತವಿದ್ದರೆ ಇದರಷ್ಟು ಒಳ್ಳೆಯ ಅವಕಾಶ ಬೇರೆ ಇಲ್ಲ. ಪದವಿಗಳು ಎಂದರೆ ಆಯುಧವಿದ್ದಂತೆ. ಅದನ್ನು ಉಪಯೋಗಿಸಿದರೆ ಜನರ ಸೇವೆ ಮಾಡಬಹುದು. ಅದರ ದುರುಪಯೋಗ ವಾದರೆ ಅದರಷ್ಟು ದೊಡ್ಡ ದುರಂತ ಬೇರೊಂದಿಲ್ಲ. ನಾನು ಸದಾ ಅಧಿಕಾರವನ್ನು ಜನರ ಸೇವೆಗಾಗಿ ಬಳಸಬೇಕು ಎಂದು ಚಿಂತಿಸಿದವನು. ನನ್ನ ಹಿತ ಮುಖ್ಯವಲ್ಲ. ಜನರ ಹಿತ ಮುಖ್ಯ ಎನ್ನುವುದೇ ನನ್ನ ಧೋರಣೆ. ಆದರೆ ಇದನ್ನು ಕೆಲವರು ತಮ್ಮ ಹಿತಕ್ಕಾಗಿ ಉಪಯೋಗಿಸಿಕೊಳ್ಳುತ್ತಾರೆ. ಅಂತಹವರು ಜನರ ಮನಸ್ಸಿನಲ್ಲಿ ಬಹಳ ದಿನ ಉಳಿಯುವುದಿಲ್ಲ. ಮರೆತು ಹೋಗಿಬಿಡುತ್ತಾರೆ. ಯಾರಾದರೂ ಯಾವಾಗಲಾದರೂ ಒಮ್ಮೆ ಸಿಕ್ಕಿದಾಗ "ಮೊಹಿದೀನ್‌ರೇ ನೀವು ಒಳ್ಳೆಯ ಕೆಲಸ ಮಾಡಿದ್ದೀರಿ. ಸಮಾಜಕ್ಕೆ ಒಳಿತನ್ನು ಮಾಡಿದ್ದೀರಿ" ಎಂದು ಹೇಳಿದಾಗ ಮನಸ್ಸಿಗೆ ಖುಷಿಯಾಗುತ್ತದೆ. ಸಮಾಧಾನವಾಗುತ್ತದೆ. ತೃಪ್ತಿಯಾಗುತ್ತದೆ.

**ವಕ್ಫ್ : ನಾನು ಮಾಡಿದ ತಪ್ಪು**

ನನಗೆ ಪ್ರಥಮ ಬಾರಿಗೆ ಸಣ್ಣ ಕೈಗಾರಿಕಾ ಸಚಿವ ಹುದ್ದೆ ನೀಡುವಾಗ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಹೆಚ್ಚುವರಿಯಾಗಿ ವಕ್ಫ್ ಖಾತೆಯನ್ನೂ ನೀಡಿದ್ದರು. ಆ ಸಂದರ್ಭದಲ್ಲಿ ರೋಶನ್ ಬೇಗ್ ಅವರು ನನ್ನ ಬಳಿ ಕಾಡಿ–ಬೇಡಿಕೊಂಡಾಗ ಅವರ

ಒತ್ತಾಯಕ್ಕೆ ಮಣಿದು ನಾನು ವಕ್ಫ್ ಖಾತೆಯನ್ನು ರೋಶನ್ ಬೇಗ್ ಅವರಿಗೆ ಬಿಟ್ಟುಕೊಟ್ಟಿದ್ದೆ. ಇದು ನಾನು ಮಾಡಿದ ಬಹಳ ದೊಡ್ಡ ತಪ್ಪು ಎಂದು ಅನಂತರ ಹಾಗೂ ಈಗಲೂ ನನಗೆ ಅನಿಸುತ್ತಿದೆ.

ಕರ್ನಾಟಕ ರಾಜ್ಯ ದೇಶದಲ್ಲಿಯೇ ಅತಿ ಹೆಚ್ಚು ವಕ್ಫ್ ಆಸ್ತಿ ಹೊಂದಿರುವ ಮೂರನೇ ರಾಜ್ಯವಾಗಿದೆ. ಅಂದಾಜು 50 ಸಾವಿರ ಎಕರೆಗೂ ಹೆಚ್ಚು ಆಸ್ತಿ ಕರ್ನಾಟಕ ವಕ್ಫ್ ಮಂಡಳಿಯ ವಶದಲ್ಲಿದ್ದು ಇದರ ಮೌಲ್ಯ ಅಂದಾಜು ನಾಲ್ಕು ಲಕ್ಷ ಕೋಟಿ ರೂಪಾಯಿಗಳಾಗಬಹುದು.

ಕರ್ನಾಟಕದಲ್ಲಿ ವಕ್ಫ್ ಆಸ್ತಿಯನ್ನು ಅತ್ಯಂತ ಸುವ್ಯವಸ್ಥಿತವಾಗಿ ಕಬಳಿಸಲಾಗುತ್ತಿದೆ. ಕೋಟ್ಯಂತರ ರೂಪಾಯಿ ಬೆಲೆ ಬಾಳುವ ಆಸ್ತಿಗಳ ದುರುಪಯೋಗವಾಗಿದೆ ಮತ್ತು ಈ ಆಸ್ತಿ ಲೂಟಿಯ ಮುಂಚೂಣಿಯಲ್ಲಿರುವವರು ಸಮದಾಯದ ನಾಯಕತ್ವದ ಮುಂಚೂಣಿಯಲ್ಲಿರುವ ಮುಸ್ಲಿಮರೇ ಆಗಿದ್ದಾರೆ ಎಂಬುದು ಬಹಳ ನೋವಿನ ಸಂಗತಿ. ದೊಡ್ಡ ದೊಡ್ಡ ಆಸ್ತಿಗಳನ್ನು ಲೀಸ್ (ಭೋಗ್ಯ)ಗೆ ಕೊಡುವಲ್ಲಿ, ಕಾಂಪ್ಲೆಕ್ಸ್‌ಗಳನ್ನು ಕಟ್ಟಿ ಬಾಡಿಗೆಗೆ ನೀಡುವಲ್ಲಿ ವ್ಯವಸ್ಥಿತ ಮೋಸ ನಡೆದಿದ್ದು, ಸಾವಿರಾರು ಕೋಟಿ ರೂಪಾಯಿ ಆಸ್ತಿಗಳು ಯಾರ್ಯಾರ ಪಾಲಾಗಿವೆ. ಕರ್ನಾಟಕದ ವಕ್ಫ್ ಆಸ್ತಿ ಹಗರಣ ಬಹಳ ದೊಡ್ಡ ಒಂದು ವ್ಯವಸ್ಥಿತ ಹಗರಣವಾಗಿದೆ. ನಾನು ಅಂದು ವಕ್ಫ್ ಖಾತೆಯನ್ನು ರೋಶನ್ ಬೇಗ್ ಅವರಿಗೆ ಬಿಟ್ಟುಕೊಡದೇ ಇದ್ದಿದ್ದರೆ ಖಂಡಿತಾ ವಕ್ಫ್ ಆಸ್ತಿಯನ್ನು ನುಂಗಿ ನೀರು ಕುಡಿದವರನ್ನು ಜಾಲಾಡಿಸಿಬಿಡುತ್ತಿದ್ದೆ. ಆ ವ್ಯಕ್ತಿಗಳು ಯಾರೇ ಆಗಿರಲಿ, ಎಷ್ಟೇ ದೊಡ್ಡ ಪ್ರಭಾವಿ ವ್ಯಕ್ತಿಗಳಾಗಿರಲಿ ಅವರು ಮುಸ್ಲಿಂ ಸಮಾಜದ ಶತ್ರುಗಳು. ಮುಖಕ್ಕೆ ಉಗಿಸಿಕೊಳ್ಳುವಷ್ಟೂ ಅರ್ಹತೆ ಇಲ್ಲದವರು.

ಈಗಲೂ ಸರಕಾರ ಹಿಂಜರಿಯದೇ, ವಕ್ಫ್ ಆಸ್ತಿಗಳ ದುರುಪಯೋಗದ ಸಮಗ್ರ ತನಿಖೆ ನಡೆಸಬೇಕು. ಕೈತಪ್ಪಿರುವ ಆಸ್ತಿ ಮರಳಿ ವಕ್ಫ್ ಮಂಡಳಿಗೆ ಸಿಗಬೇಕು. ತಪ್ಪಿತಸ್ಥರಿಗೆ ಕಠಿಣ ಶಿಕ್ಷೆಯಾಗಲೇಬೇಕು ಎಂದು ನಾನು ಸರಕಾರವನ್ನು ಒತ್ತಾಯಿಸುತ್ತೇನೆ.

**ಜನತಾ ದಳ ಇಬ್ಭಾಗ ಮತ್ತು ನನ್ನ ನಿರ್ಗಮನ**

1999ರಲ್ಲಿ ರಾಜ್ಯದಲ್ಲಿ ಜನತಾ ದಳ ಇಬ್ಭಾಗವಾಯಿತು. ದೇವೇಗೌಡರು ಜನತಾ ದಳ ಜಾತ್ಯತೀತ ರಚಿಸಿಕೊಂಡರು. ಜೆ.ಎಚ್. ಪಟೇಲ್ ಗುಂಪು ಜನತಾ ದಳ (ಯು) ಎಂದು ಗುರುತಿಸಿಕೊಂಡಿತು. ಈ ಇಬ್ಭಾಗಕ್ಕೆ ಜಾರ್ಜ್ ಫೆರ್ನಾಂಡಿಸ್ ಮೂಲ ಕಾರಣರಾಗಿದ್ದರು. ರಮೇಶ್ ಕುಮಾರ್, ನಾಣಯ್ಯ, ಜಯಪ್ರಕಾಶ್ ಹೆಗ್ಡೆ ಹಾಗೂ ನನಗೆ ದೇವೇಗೌಡರ ಜೊತೆಗೆ ಹೋಗಲು ಮನಸ್ಸಿರಲಿಲ್ಲ. ಜೆ.ಎಚ್. ಪಟೇಲರು ಬಿಜೆಪಿಯೊಂದಿಗೆ ಕೈಜೋಡಿಸಿರುವುದರಿಂದ ಅವರ ಜೊತೆಗೆ ಹೋಗಲೂ ಮನಸ್ಸಾಗಲಿಲ್ಲ. ಹಾಗಾಗಿ ನಾವು ನಾಲ್ವರು ತಟಸ್ಥರಾಗಿ ಉಳಿದೆವು. ನಾನು ಮಂತ್ರಿ ಪದವಿಗೆ ರಾಜೀನಾಮೆ ಸಲ್ಲಿಸಿದೆ. ವಿಧಾನ ಪರಿಷತ್ ಸದಸ್ಯನಾಗಿ 2002ರವರೆಗೂ ಮುಂದುವರಿದೆ.

ಇದಾದ ಮೂರು ತಿಂಗಳ ನಂತರ ಕರ್ನಾಟಕ ವಿಧಾನ ಸಭೆ ಚುನಾವಣೆ ನಡೆಯಿತು. ಬಹುಮತದೊಂದಿಗೆ ಕಾಂಗ್ರೆಸ್ ಅಧಿಕಾರಕ್ಕೆ ಬಂತು. ಎಸ್.ಎಂ. ಕೃಷ್ಣ ಮುಖ್ಯಮಂತ್ರಿಯಾದರು.

ನನ್ನ ವಿಧಾನ ಪರಿಷತ್ ಸದಸ್ಯತ್ವ 2002ರಲ್ಲಿ ಮುಗಿದ ನಂತರ ನಾವೆಲ್ಲ ಕಾಂಗ್ರೆಸ್ ಪಕ್ಷ ಸೇರಿದೆವು. ಅಂದಿನಿಂದ ಇಂದಿನವರೆಗೂ ನಾನು ಕಾಂಗ್ರೆಸ್ ಪಕ್ಷದಲ್ಲೇ ಇದ್ದೇನೆ. ಕಾಂಗ್ರೆಸ್‌ನಲ್ಲಿ ಒಮ್ಮೆ ನನ್ನನ್ನು ಎಐಸಿಸಿ ಸದಸ್ಯನನ್ನಾಗಿ ನೇಮಿಸಿದ್ದರು.

**ಸಿದ್ದರಾಮಯ್ಯರ ಸೋಲು ಮತ್ತು ಕೋಮುವಾದದ ಅಪಾಯ**

ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನಗೆ ಪರಿಚಯವಾದದ್ದು 1983ರಲ್ಲಿ. 1983ರ ವಿಧಾನ ಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅನಿರೀಕ್ಷಿತವಾಗಿ ಸೋಲುಂಡಿತ್ತು. ಅದೇ ವರ್ಷ ಸಿದ್ದರಾಮಯ್ಯ ಮೈಸೂರಿನಿಂದ ಶಾಸಕರಾಗಿ ಆಯ್ಕೆಗೊಂಡು ರಾಜ್ಯ ರಾಜಕೀಯಕ್ಕೆ ಪ್ರವೇಶಿಸಿದ್ದರು. ಅದುವರೆಗೂ ನನಗ ಸಿದ್ದರಾಮಯ್ಯ ಅವರ ಪರಿಚಯವಿರಲಿಲ್ಲ. ಶಾಸಕರಾದ ನಂತರ, ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ಬಳಿಕ ಅವರೊಂದಿಗೆ ಒಡನಾಟ ಪ್ರಾರಂಭವಾಯಿತು. ನನ್ನ ಮತ್ತು ಅವರ ತತ್ವ ಸಿದ್ಧಾಂತಗಳು ಒಂದೇ ಆಗಿದ್ದವು. ಹೀಗೆ ನಮ್ಮಿಬ್ಬರ ತತ್ವಾದರ್ಶಗಳು ಹೊಂದಿಕೆಯಾದಾಗ ಪರಸ್ಪರ ಹತ್ತಿರವಾದೆವು.

1985ರಲ್ಲಿ ಅವರು ಪುನಃ ಶಾಸಕರಾಗಿ ಆಯ್ಕೆಯಾದಾಗ ಶ್ರೀ ರಾಮಕೃಷ್ಣ ಹೆಗಡೆ ಅವರು ಸಿದ್ದರಾಮಯ್ಯ ಅವರನ್ನು ಸಚಿವರನ್ನಾಗಿ ಮಾಡಿದರು. ಅವರಿಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜವಾಬ್ದಾರಿ ವಹಿಸಿದರು. 1994ರಲ್ಲಿ ದೇವೇಗೌಡರ ಸಂಪುಟದಲ್ಲಿ ಸಿದ್ದರಾಮಯ್ಯ ಹಣಕಾಸು ಸಚಿವರಾದರು. ಕರ್ನಾಟಕ ರಾಜ್ಯದ ಅತೀ ಹೆಚ್ಚು ಬಜೆಟ್ ಮಂಡಿಸಿದ ಕೀರ್ತಿ ಸಿದ್ದರಾಮಯ್ಯ ಅವರಿಗೆ ಸಲ್ಲುತ್ತದೆ. ಹಣಕಾಸು ಸಚಿವರಾಗಿ ಅವರು ಅನೇಕ ಒಳ್ಳೆಯ ಅಭಿವೃದ್ಧಿಯ ಕೆಲಸಗಳನ್ನು ಮಾಡಿದ್ದಾರೆ. ಎರಡು ರೂಪಾಯಿಗೆ ಒಂದು ಕಿಲೋ ಅಕ್ಕಿ ಕೊಟ್ಟ ಮೊದಲ ಹಣಕಾಸು ಸಚಿವರು ಇವರೇ.

ಇವರು ಮುಖ್ಯಮಂತ್ರಿ ಆದ ತಕ್ಷಣ ಮೊತ್ತಮೊದಲು ಮಾಡಿದ ಕೆಲಸ ಎಂದರೆ ಬಡವರಿಗೆ ಏಳು ಕಿಲೋ ಅಕ್ಕಿ ಉಚಿತವಾಗಿ ನೀಡಿದ್ದು. ಇದರ ಹಿಂದೆ ಅವರ ರಾಜಕೀಯ ಬದ್ಧತೆ ಇತ್ತು. ಏಕೆಂದರೆ ಸಿದ್ದರಾಮಯ್ಯ ಹುಟ್ಟಿದ್ದು ಒಂದು ಹಳ್ಳಿಯಲ್ಲಿ. ಚಾಮರಾಜನಗರ ಜಿಲ್ಲೆಯಲ್ಲಿ ಕಡು ಬಡತನದ ಮನೆಯಲ್ಲಿ. ಬಡವರ ಸಂಕಷ್ಟ ಕಣ್ಣಾರೆ ಕಂಡಿದ್ದ ಸಿದ್ದರಾಮಯ್ಯ ಅವರಿಗೆ ಹಸಿವು ಎಂದರೆ ಏನೆಂದು ತಿಳಿದಿತ್ತು. ಅದನ್ನು ಅವರು ಸ್ವತಃ ಅನುಭವಿಸಿದ್ದರು. ಈ ಹಿನ್ನೆಲೆಯಲ್ಲಿ ಅವರು ತಮ್ಮ ಅಧಿಕಾರಾವಧಿಯಲ್ಲಿ ಬಡವರ ಹಸಿವನ್ನು ನೀಗಿಸುವುದಕ್ಕೆ ಹೆಚ್ಚಿನ ಒತ್ತು ನೀಡಿದ್ದರು.

ಇತ್ತೀಚೆಗೆ ಸಿದ್ದರಾಮಯ್ಯ ಅವರು ಬಡವರ, ಮಧ್ಯಮ ವರ್ಗದವರ ಏಳಿಗೆಗಾಗಿ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದರು. 'ಅಹಿಂದ' ಎಂದರೆ ಅಲ್ಪಸಂಖ್ಯಾತರು,

ಹಿಂದುಳಿದವರು ಹಾಗೂ ದಲಿತರು ಇವರನ್ನೊಳಗೊಂಡ 'ಅಹಿಂದ ಚಳವಳಿ'ಯನ್ನು ರೂಪಿಸಿದವರೇ ಈ ಸಿದ್ದರಾಮಯ್ಯ. 'ಅಹಿಂದ' ವರ್ಗಕ್ಕೆ ಅನೇಕ ಸವಲತ್ತುಗಳನ್ನು ಕಲ್ಪಿಸಲು ಇವರು ಬಹಳಷ್ಟು ಶ್ರಮಿಸಿದ್ದಾರೆ. ಅದರಲ್ಲೂ ಶೈಕ್ಷಣಿಕ ಕ್ಷೇತ್ರದಲ್ಲಿ 'ಅಹಿಂದ' ವರ್ಗಕ್ಕೆ ಇವರ ಅವಧಿಯಲ್ಲಿ ಸಿಕ್ಕಿದ ಸವಲತ್ತುಗಳು ಅನೇಕ.

ಕರ್ನಾಟಕ 'ಅಹಿಂದ' ಹೊರತುಪಡಿಸಿ, ಮುಂದುವರಿದ ಜಾತಿ, ಧರ್ಮದವರು ಹೆಚ್ಚಾಗಿರುವ ರಾಜ್ಯವಾಗಿದೆ. ಪ್ರಭಾವಿ ರಾಜಕಾರಣಿಗಳಿಂದಾಗಿ ಎಲ್ಲ ಸವಲತ್ತುಗಳು, ಸೌಲಭ್ಯಗಳು ಹೆಚ್ಚಾಗಿ ಈ ಮುಂದುವರಿದ ವರ್ಗಕ್ಕೇ ಸಿಗುತ್ತಿತ್ತು. ಸಿದ್ದರಾಮಯ್ಯ ಅವರು ಅಧಿಕಾರಕ್ಕೆ ಬಂದ ಮೇಲೆ ಇದರಲ್ಲಿ ಬಹಳಷ್ಟು ಬದಲಾವಣೆಗಳನ್ನು ತಂದರು. ದೇವರಾಜ ಅರಸು ಅವರ ಧ್ಯೇಯ, ಧೋರಣೆಗಳನ್ನು ಅನುಸರಿಸಿದರು. ಇದರಿಂದ ಏನಾಯಿತು ಎಂದರೆ, ಕಾಲ ಕಾಲದಿಂದ ಸರಕಾರದ ಸವಲತ್ತು, ಸೌಲಭ್ಯ, ಅಧಿಕಾರಗಳನ್ನೆಲ್ಲ ಅನುಭವಿಸಿಕೊಂಡು ಬಂದಿದ್ದ ಈ ಮೇಲ್ವರ್ಗದ ಜನರಿಗೆ ಇದನ್ನು ಸಹಿಸಿಕೊಳ್ಳಲು ಸಾಧ್ಯವಾಗಲಿಲ್ಲ. ಇಂತಹ ಪ್ರತಿಕ್ರಿಯೆಗಳ ಬಗ್ಗೆ ದೇವರಾಜ ಅರಸು ಅವರಿಗೆ ಮೊದಲೇ ಗೊತ್ತಿತ್ತು. ಹಾಗಾಗಿ ಅರಸು ಅವರು ತಮ್ಮ ಆಡಳಿತಾವಧಿಯಲ್ಲಿ ಒಂದು ಸಮತೋಲನ ವನ್ನು ಕಾಯ್ದುಕೊಂಡಿದ್ದರು. ತಮ್ಮ ಹಿಂದೆ, ಮುಂದೆ ಕೆಲವು ಮುಂದುವರಿದ ವರ್ಗದವರನ್ನೂ ಇಟ್ಟುಕೊಂಡು ಅವರ ಆಗುಹೋಗುಗಳನ್ನು ನೋಡಿಕೊಳ್ಳುತ್ತಿದ್ದರು. ಬಡತನ ಹಾಗೂ ಬಡವರ ಬವಣೆಗಳನ್ನು ಅರಿತಿದ್ದ ಸಿದ್ದರಾಮಯ್ಯ ಅವರಿಗೆ ಈ ಸಾಮಾಜಿಕ ಅಸಮತೋಲನವನ್ನು ಸಹಿಸಿಕೊಳ್ಳಲು ಸಾಧ್ಯವಿರಲಿಲ್ಲ. ಹಾಗಾಗಿ ಬಡವರ ಪರ ಅನೇಕ ಕಾರ್ಯಕ್ರಮಗಳನ್ನು ಹಮ್ಮಿಕೊಂಡರು. ಇದನ್ನು ಮುಂದುರಿದ ವರ್ಗಕ್ಕೆ ಸಹಿಸಿಕೊಳ್ಳಲು ಆಗಲಿಲ್ಲ. ಸಿದ್ದರಾಮಯ್ಯ ಅವರನ್ನು ಸೋಲಿಸಲು, ಮುಗಿಸಲು ಆ ಶಕ್ತಿಗಳು ಹೊಂಚುಹಾಕಿ ಕಾಯುತ್ತಲೇ ಇದ್ದವು.

ಇದಾವುದನ್ನೂ ಅರಿಯದ ಸಿದ್ದರಾಮಯ್ಯ ಅವರು ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸಲು ಮುಂದಾದರು. ಇಲ್ಲಿ ಅವರು ಒಮ್ಮೆ ಸೋತಿದ್ದರು. ಮತ್ತೊಮ್ಮೆ ಸಣ್ಣ ಅಂತರದಲ್ಲಿ ಗೆದ್ದದ್ದು. ಆದರೂ ಏಕೋ ಏನೋ ಈ ಬಾರಿಯೂ (2018ರಲ್ಲಿ) ಚಾಮುಂಡೇಶ್ವರಿಯಲ್ಲಿ ಸ್ಪರ್ಧಿಸುವುದನ್ನೇ 'ಚಾಲೆಂಜ್' ಆಗಿ ತೆಗೆದುಕೊಂಡರು. ಈ 'ಚಾಲೆಂಜ್' ಆಗಿ ತೆಗೆದುಕೊಳ್ಳುವ ಧೋರಣೆ ಇದೆಯಲ್ಲ ಇದೇ ಸಿದ್ದರಾಮಯ್ಯ ಅವರ ದೌರ್ಬಲ್ಯ. ಅವರ ಮಗನನ್ನು ವರುಣಾದಲ್ಲಿ ನಿಲ್ಲಿಸಿ ತಾನು ಚಾಮುಂಡೇಶ್ವರಿಯಲ್ಲೇ ನಿಂತರು. ಬಹಳಷ್ಟು ಅಭಿವೃದ್ಧಿಯ ಕೆಲಸಗಳನ್ನು ಮಾಡಿದ್ದನ್ನು ಜನ ಸ್ವೀಕರಿಸದೇ, ಪುರಸ್ಕರಿಸದೇ ತಿರುಗಿಬಿದ್ದ ಪರಿಣಾಮ ಚಾಮುಂಡೇಶ್ವರಿ ಕ್ಷೇತ್ರದಲ್ಲಿ ಸಿದ್ದರಾಮಯ್ಯ ಭಾರೀ ಅಂತರದಿಂದ ಸೋತರು. ಮಾತ್ರವಲ್ಲ ಬಾದಾಮಿಯಲ್ಲೂ ಸ್ಪರ್ಧಿಸಿ ಬಹಳ ಕಡಿಮೆ ಅಂತರದಲ್ಲಿ ಗೆದ್ದರು.

ಮುಂದಿನ ದಿನಗಳಲ್ಲಿ ಸಿದ್ದರಾಮಯ್ಯ ಅವರು ಮಾಡಿದ ಒಳ್ಳೆಯ ಕೆಲಸಗಳು ಖಂಡಿತವಾಗಿಯೂ ಜನರಿಂದ ಗುರುತಿಸಲ್ಪಡುತ್ತದೆ. ಜನ ಸಿದ್ದರಾಮಯ್ಯ ಅವರನ್ನು

ನೆನಪಿಸಿಕೊಳ್ಳುತ್ತಾರೆ. ಅವರಿಗೆ ಈ ಮಣ್ಣಿನಲ್ಲಿ ಖಂಡಿತಾ ಮನ್ನಣೆ ದೊರೆಯಲಿದೆ. ದೇವರಾಜ ಅರಸು ಅವರದ್ದೂ ಇದೇ ಸ್ಥಿತಿಯಾಗಿತ್ತು. ಭೂಸುಧಾರಣೆ ಸಹಿತ ಹತ್ತಾರು ಒಳ್ಳೆಯ ಕಾರ್ಯಕ್ರಮಗಳ ಮೂಲಕ ಈ ರಾಜ್ಯದ ಹಿಂದುಳಿದವರ, ದೀನ ದಲಿತರ ಬದುಕನ್ನು ರೂಪಿಸಿದ್ದ ಅರಸು ಅವರು ಸಹ ರಾಜಕೀಯ ಸುಂಟರಗಾಳಿಗೆ ಬಲಿಯಾಗಿ ಹೀನಾಯವಾಗಿ ಸೋಲು ಕಂಡಿದ್ದರು. ಇದು ನಮಗೆಲ್ಲ ತಿಳಿದಿರುವ ಇತಿಹಾಸ. ಅಂತಹ ಒಂದು ಸ್ಥಿತಿಯನ್ನು ಸಿದ್ದರಾಮಯ್ಯ ಅವರು ಅನುಭವಿಸುತ್ತಿದ್ದಾರೆ.

ಸಿದ್ದರಾಮಯ್ಯ ಅವರು ತಮ್ಮ ಅಧಿಕಾರಾವಧಿಯಲ್ಲಿ ಐದು ವರ್ಷಗಳ ಕಾಲ ಮುಖ್ಯಮಂತ್ರಿಯಾಗಿ ಮಾಡಿದ ಒಳ್ಳೆಯ ಕೆಲಸಗಳು ಅನೇಕ. ಬಡವರು ಹಾಗೂ ಮಧ್ಯಮವರ್ಗದವರನ್ನು ಗಮನದಲ್ಲಿಟ್ಟುಕೊಂಡು ದೇಶದ ಯಾವುದೇ ರಾಜ್ಯದಲ್ಲಿ ಜಾರಿಯಲ್ಲಿಲ್ಲದ ವಿನೂತನ ಜನಪರ ಯೋಜನೆಗಳನ್ನು ಜಾರಿಗೆ ತಂದರು. ಅನ್ನಭಾಗ್ಯ, ಇಂದಿರಾ ಕ್ಯಾಂಟೀನ್, ಕ್ಷೀರಭಾಗ್ಯ, ರೈತರ ಸಾಲ ಮನ್ನಾ, ಉದ್ಯೋಗ ಸೃಷ್ಟಿ, ವಿದ್ಯಾರ್ಥಿ ಗಳಿಗೆ ಉಚಿತ ಲ್ಯಾಪ್‌ಟಾಪ್, ಕೃಷಿ ಭಾಗ್ಯ, ಆರೋಗ್ಯ ಭಾಗ್ಯ, ಮಾತೃಪೂರ್ಣ, ಜಲಸಿರಿ ಭಾಗ್ಯ, ಕಲ್ಯಾಣಪರ್ವ, ನಿರಂತರ ಜ್ಯೋತಿ, ಗ್ರಾಮ ಸ್ವರಾಜ್ಯ ಇಂತಹ ಹಲವಾರು ಕಾರ್ಯಕ್ರಮ ಗಳು, ಯೋಜನೆಗಳ ಮೂಲಕ ಕೋಟ್ಯಂತರ ದೀನ ದಲಿತರ, ಮಧ್ಯಮ ವರ್ಗದವರ ಬದುಕಿನಲ್ಲಿ ಸಂತಸದ, ತೃಪ್ತಿಯ ನಗು ಅರಳಿಸಿದ್ದ ಸಿದ್ದರಾಮಯ್ಯ ಅವರಿಗೆ ಚುನಾವಣೆ ಯಲ್ಲಿ ಅವರ ಬೆಂಬಲ ಗಳಿಸಲು ಸಾಧ್ಯವಾಗಲಿಲ್ಲ ಎಂದರೆ ಅದರ ಅರ್ಥವೇನು?

ಆದದ್ದು ಇಷ್ಟೇ. ಬೆಳದಿಂಗಳು ಚೆಲ್ಲುತ್ತಾ ಆಗಸದಲ್ಲಿ ಕಂಗೊಳಿಸುತ್ತಿದ್ದ ಚಂದಿರನಿಗೆ ದೊಡ್ಡ ಮೋಡ ಒಂದು ಅಡ್ಡ ಬಂದಂತೆ ಸಿದ್ದರಾಮಯ್ಯರ ವರ್ಚಸ್ಸಿಗೆ ಅಡ್ಡ ಬಂದ ಮೋಡ 'ಹಿಂದುತ್ವ'. ಆರೆಸ್ಸೆಸ್ ಮತ್ತು ಹಿಂದೂಪರ ಸಂಘಟನೆಗಳ ನಿರಂತರ ಅಪಪ್ರಚಾರ ಸಿದ್ದರಾಮಯ್ಯ ಅವರ ಪ್ರಗತಿ, ಅಭಿವೃದ್ಧಿಯ ಕಾರ್ಯಕ್ರಮಗಳನ್ನು ಮರೆ ಮಾಚುವಂತೆ ಮಾಡಿತು. ಇದೊಂದು ದೊಡ್ಡ ಷಡ್ಯಂತ್ರ, ಫ್ಯಾಶಿಸಂನ ಶಕ್ತಿ ಪ್ರದರ್ಶನ. ಜನರ ಧಾರ್ಮಿಕ ಭಾವನೆಗಳನ್ನು ಕೆರಳಿಸಿ, ಕೋಮುವಾದವನ್ನು ಬಿತ್ತಿ, ಆ ಮೂಲಕ ನೈಜ ಸಮಸ್ಯೆಗಳಿಂದ ಜನರ ಗಮನವನ್ನು ಬೇರೆಡೆಗೆ ಸೆಳೆದು, ತಮ್ಮ ಬೇಳೆ ಬೇಯಿಸಿಕೊಳ್ಳಲು ಬಂಡವಾಳಶಾಹಿ ಗಳು ಹೂಡುತ್ತಿರುವ ಕುತಂತ್ರ. ಇದೊಂದು ಅತ್ಯಂತ ಅಪಾಯಕಾರಿ ಬೆಳವಣಿಗೆ.

ಈ ಬಗ್ಗೆ ಜನಜಾಗೃತಿ ಮೂಡಬೇಕು. ಸೌಹಾರ್ದದ ವಾತಾವರಣ ಸೃಷ್ಟಿಯಾಗಬೇಕು. ಈ ನಿಟ್ಟಿನಲ್ಲಿ ಜಾತ್ಯತೀತ ತತ್ವ ಆದರ್ಶಗಳಿಗೆ ಬದ್ಧವಾಗಿರುವ ಕಾಂಗ್ರೆಸ್ ಪಕ್ಷ ದುಡಿಯಬೇಕು. ಈ ಕೆಲಸ ಸಮರೋಪಾದಿಯಲ್ಲಿ ನಡೆಯಬೇಕು. ಭಾರತದ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಕಾಂಗ್ರೆಸ್ ಯಾವ ಪಾತ್ರ ವಹಿಸಿತ್ತೋ ಅದೇ ಪರಿಸ್ಥಿತಿ ಈಗ ಮತ್ತೊಮ್ಮೆ ಬಂದಿದೆ. ಇದು ಎರಡನೇ ಸ್ವಾತಂತ್ರ್ಯ ಸಂಗ್ರಾಮ. ಇದರ ನೇತೃತ್ವವನ್ನು ಕಾಂಗ್ರೆಸ್ ಪಕ್ಷ ವಹಿಸಿ ದೇಶಾದ್ಯಂತ ಕೋಮುವಾದಿಗಳನ್ನು ಸೋಲಿಸಲು ಹೋರಾಟ ಪ್ರಾರಂಭವಾಗಬೇಕು. ಇದು ಈ ದೇಶದ ಹಾಗೂ ಕಾಲದ ಬೇಡಿಕೆ ಕೂಡಾ ಆಗಿದೆ.

# ಸುರತ್ಕಲ್ ಗಲಭೆ

ನನ್ನ ಅಧಿಕಾರಾವಧಿಯಲ್ಲಿ ಅಂದರೆ, ನಾನು ದಕ್ಷಿಣ ಕನ್ನಡ ಜಿಲ್ಲೆಯ ಉಸ್ತುವಾರಿ ಸಚಿವ ನಾಗಿದ್ದ ಸಂದರ್ಭದಲ್ಲಿ ನನಗೆ ಅತ್ಯಂತ ನೋವು ತರಿಸಿದ ಒಂದು ದುರ್ಘಟನೆ ಎಂದರೆ ದಿನಾಂಕ 29.12.1998ರಿಂದ 5.1.1999ರ ವರೆಗೆ ನಡೆದ ಸುರತ್ಕಲ್ ಕೋಮುಗಲಭೆ. ಈ ಗಲಭೆಯಲ್ಲಿ ಒಂಬತ್ತು ಜನ ಮುಗ್ಧ ನಾಗರಿಕರು ಮೃತಪಟ್ಟರು. ಇದರಲ್ಲಿ ಇಬ್ಬರು ಗೋಲಿಬಾರ್‌ನಿಂದ ಮೃತಪಟ್ಟರೆ ಏಳು ಮಂದಿ ಕೋಮವಾದಿಗಳ ರಕ್ತದಾಹಕ್ಕೆ ಬಲಿಯಾದರು. ಸುಮಾರು 130ಕ್ಕೂ ಹೆಚ್ಚು ಮಂದಿ ಗಂಭೀರ ಗಾಯಗೊಂಡರು. ಅಪಾರ ಪ್ರಮಾಣದ ಆಸ್ತಿ ಪಾಸ್ತಿಗಳಿಗೆ ಹಾನಿಯಾಯಿತು.

ಒಂದು ದೃಷ್ಟಿಯಲ್ಲಿ ನೋಡಿದರೆ ಇದು ಕೋಮುಗಲಭೆಯಲ್ಲ. ಇದು ಮುಸ್ಲಿಮರ ಮೇಲೆ ನಡೆದ ಒಂದು ವ್ಯವಸ್ಥಿತ ಹಿಂಸೆ ಎಂದೇ ಪರಿಗಣಿಸಬೇಕಾಗಿದೆ. ಯಾಕೆಂದರೆ, ಭಾರತದ ಇತರೆಡೆಗಳಲ್ಲಿ ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಿಂಸೆಗೂ ಸುರತ್ಕಲ್‌ನಲ್ಲಿ ನಡೆದ ಹಿಂಸಾಚಾರಕ್ಕೂ ಯಾವುದೇ ವ್ಯತ್ಯಾಸವಿರಲಿಲ್ಲ. ಸುರತ್ಕಲ್‌ನಲ್ಲಿ ಈ ಗಲಭೆಯಲ್ಲಿ ಸತ್ತವರು, ಪೆಟ್ಟು ತಿಂದವರು, ಗಾಯಗೊಂಡವರು ಮತ್ತು ಆಸ್ತಿ ಪಾಸ್ತಿಗಳನ್ನು ಕಳೆದುಕೊಂಡವರ ಅಂಕಿ ಅಂಶಗಳನ್ನು ನೋಡಿದರೆ ಇದು ಸ್ಪಷ್ಟವಾಗುತ್ತದೆ. ಇದು ಇದ್ದಕ್ಕಿದ್ದಂತೆ ಸ್ಫೋಟ ಗೊಂಡ ಗಲಭೆಯೇನಲ್ಲ. ಹಲವಾರು ತಿಂಗಳುಗಳಿಂದ ಯೋಜನೆ ಯನ್ನು ರೂಪಿಸಿ, ವ್ಯವಸ್ಥಿತವಾಗಿ ನಡೆಸಿದ ಷಡ್ಯಂತ್ರವಾಗಿದೆ ಎಂಬುದು ಮೇಲು ನೋಟಕ್ಕೆ ತಿಳಿದು ಬರುತ್ತದೆ. ದೇಶದ ಬೇರೆ ಎಲ್ಲಾ ಕಡೆಗಳಂತೆ ಸುರತ್ಕಲ್ ಗಲಭೆಯಲ್ಲಿಯೂ ಮುಖ್ಯ ಪಾತ್ರ ವಹಿಸಿದ್ದು ಸಂಘ ಪರಿವಾರದ ಅಂಗ ಸಂಸ್ಥೆಗಳೇ ಎಂಬುದು ಸತ್ಯ. ಈ ರೀತಿಯ ಗಲಭೆ, ಹಿಂಸಾಚಾರವನ್ನು ನಡೆಸುವುದಕ್ಕೆ ಸಂಘ ಪರಿವಾರ ಬಹಳ ಪರಿಣಾಮಕಾರಿಯಾದ ಸೂತ್ರವನ್ನೂ

ರೂಪಿಸಿಕೊಂಡಿತ್ತು. ಈ ರೀತಿಯ ಹಿಂಸಾಚಾರಗಳು ದೇಶಾದ್ಯಂತ ಈಗಲೂ ನಡೆಯುತ್ತಿವೆ. ಗೋ ಸಾಗಾಟ, ಲವ್ ಜಿಹಾದ್, ಭಯೋತ್ಪಾದನೆ, ಮಂದಿರ –ಮಸೀದಿ, ದೇಶದ್ರೋಹ ಮುಂತಾದ ಸುಳ್ಳು ಕಾರಣಗಳನ್ನು ಪ್ರಚಾರ ಮಾಡುವ ಜೊತೆಗೆ ಮುಸ್ಲಿಮರು ಮತಾಂಧರು, ಹಿಂದೂ ದ್ವೇಷಿಗಳು, ದೇಶ ದ್ರೋಹಿಗಳು, ಅವರಿಗೆ ಗಲ್ಫ್ ದೇಶಗಳಿಂದ ಹಣ ಹರಿದು ಬರುತ್ತದೆ. ಆ ಹಣದಿಂದ ನಮ್ಮ ಹೆಣ್ಣು ಮಕ್ಕಳನ್ನು ಆಕರ್ಷಿಸಿ ಮದುವೆಯಾಗುವ ನಾಟಕವಾಡಿ ಮತಾಂತರಿಸುತ್ತಾರೆ. ಭಾರತದ ಇತಿಹಾಸವನ್ನು ತಿರುಚಿ – ಮುಸ್ಲಿಮರು ದೇಶವನ್ನು ವಿಭಜಿಸಿದರು. ಅವರು ಈಗಲೂ ಪಾಕಿಸ್ತಾನಕ್ಕೆ ತಮ್ಮ ಒಲವು ತೋರಿಸುತ್ತಾರೆ. ಅವರು ದುಷ್ಟರು, ಕ್ರೂರಿಗಳು, ಸಂಸ್ಕೃತಿ ಇಲ್ಲದವರು ಮತ್ತು 'ನಮ್ಮವರಲ್ಲ' ಎಂಬ ಭಾವನೆಯನ್ನು ಕೆಲವು ಹಿಂದೂಗಳಲ್ಲಿ ಆಳವಾಗಿ ಬೇರೂರಲು ಈ ಸಂಘ ಪರಿವಾರ ಬಹಳಷ್ಟು ಪ್ರಯತ್ನಿಸುತ್ತಿದೆ. ಮಾತ್ರವಲ್ಲ, ಅದರಲ್ಲಿ ತಕ್ಕಮಟ್ಟಿನ ಯಶಸ್ಸನ್ನೂ ಸಾಧಿಸಿದೆ.

ಇದರ ಪರಿಣಾಮವಾಗಿ ಭಾರತ ಹಿಂದೂಗಳ ರಾಷ್ಟ್ರ. ಇದು ಮುಸ್ಲಿಮ್ ಅಥವಾ ಕ್ರಿಶ್ಚಿಯನ್ನರ ರಾಷ್ಟ್ರವಲ್ಲ. ಅವರಿಗೆ ಅವರದೇ ಆದ ರಾಷ್ಟ್ರಗಳಿವೆ. ಹಿಂದೂಗಳಿಗೆ ಇರುವುದು ಇದೊಂದೇ ರಾಷ್ಟ್ರ. ಇದನ್ನು ನಾವು ರಕ್ಷಿಸಬೇಕಾಗಿದೆ ಎಂಬ 'ಹಿಂದುತ್ವ'ದ ಭಾವನೆಯನ್ನು ಸುರತ್ಕಲ್ ಪರಿಸರದಲ್ಲಿ ಹರಡುವಲ್ಲಿ ಈ ಸಂಘ ಪರಿವಾರ ಬಹಳಷ್ಟು ಕೆಲಸ ಮಾಡಿ ಹಲವಾರು ತಿಂಗಳುಗಳಿಂದ ಒಂದು ಕೋಮು ಸಂಘರ್ಷವನ್ನು ನಡೆಸಲು ಚಾತಕ ಪಕ್ಷಿಯಂತೆ ಕಾಯುತ್ತಿತ್ತು. ಅದಕ್ಕೆ ಬೇಕಾದ ತಯಾರಿಯನ್ನೂ ನಡೆಸುತ್ತಿತ್ತು.

ಆಗ ಬಾಲಕೃಷ್ಣ ಭಟ್ ಎಂಬವರು ಬಿಜೆಪಿಯ ವಿಧಾನ ಪರಿಷತ್ ಸದಸ್ಯರಾಗಿದ್ದರು. ತಲೆ ಬುಡವಿಲ್ಲದ ಮತ್ತೊಬ್ಬ ಕುಂಬ್ಳೆ ಸುಂದರ ರಾವ್ ಎಂಬವರು ಸುರತ್ಕಲ್ ಕ್ಷೇತ್ರದ ಶಾಸಕರಾಗಿದ್ದರು. ಯಕ್ಷಗಾನದಲ್ಲಿ ದಿಗನೆ ತೆಗೆಯುವಂತೆ ವಾತಾವರಣಕ್ಕೆ ತಕ್ಕಂತೆ ದಿಗನೆ ತೆಗೆಯುವ ವ್ಯಕ್ತಿ ಈ ಕುಂಬ್ಳೆ ಸುಂದರ ರಾವ್. ಮುಸ್ಲಿಮರ ಸಭೆಗಳಲ್ಲಿ ಮುಸ್ಲಿಮರಿಗೆ ತಕ್ಕಂತೆ, ಹಿಂದೂಗಳ ಸಭೆಗಳಲ್ಲಿ ಮುಸ್ಲಿಮರ ವಿರುದ್ಧ ಪ್ರಚೋದನಕಾರಿ ಯಾಗಿ ಮಾತನಾಡುತ್ತಿದ್ದ ಇವರು ಇಲ್ಲಿನ ಕೋಮುಗಲಭೆಗಳಲ್ಲಿ ಪ್ರಮುಖ ಪಾತ್ರ ವಹಿಸಿದವರು.

ಇದೇ ಸಂದರ್ಭದಲ್ಲಿ ಸತ್ಯಜಿತ್ ಸುರತ್ಕಲ್, ಕಾರ್ಪೊರೇಟರ್‌ರ ಮಗ ಸತೀಶ್ ಇವರೆಲ್ಲ ಹಿಂದೂ ಜಾಗರಣಾ ವೇದಿಕೆಯ ಸದಸ್ಯರಾಗಿ ಹಿಂದೂಗಳನ್ನು ಸಂಘಟಿಸು ವುದಲ್ಲ, ಅವರನ್ನು ಪ್ರಚೋದಿಸುವ ಕೆಲಸದಲ್ಲಿ ಅಹೋರಾತ್ರಿ ತೊಡಗಿಕೊಂಡಿದ್ದರು. ಸಂಘಟನೆಗಳು ಬೇಕು. ಏಕೆಂದರೆ ಅದು ಸಮಾಜದ ಏಳಿಗೆಗೆ, ಅಭಿವೃದ್ಧಿಗೆ ದುಡಿಯಬೇಕು. ಆದರೆ ಇವರದು ಜನರನ್ನು ಪ್ರಚೋದನೆ ಮಾಡಿ ದೊಂಬಿ ಎಬ್ಬಿಸುವ ಸಂಘಟನೆಯಾಗಿತ್ತು. ಇದೇ ಸಂದರ್ಭದಲ್ಲಿ ಇವರ ವಿರುದ್ಧ ಕೃಷ್ಣಾಪುರ – ಕಾಟಿಪಳ್ಳದ ಕೆಲವು ಮುಸ್ಲಿಂ ಯುವಕರು ಕೆಲಸ ಮಾಡತೊಡಗಿದ್ದರು.

ಇದೆಲ್ಲ ನಡೆಯುತ್ತಿರುವಾಗಲೇ ಕೃಷ್ಣಾಪುರ – ಕಾಟಿಪಳ್ಳದ ಕೆಲವರು ನನ್ನ ಬಳಿ ಬಂದು ಪಣಂಬೂರು ಹಾರ್ಬರ್‌ನಲ್ಲಿ ಕೆಲಸ ಮಾಡುತ್ತಿರುವ ವ್ಯಕ್ತಿಯೊಬ್ಬರು ನನ್ನ

ಜಾಗವನ್ನು ಅಕ್ರಮವಾಗಿ ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ದೂರು ನೀಡಿದರು. ಹಾಗೆ ಬಂದವರ ತಂಡದಲ್ಲಿ ಒಂದಿಬ್ಬರು ಮುಸ್ಲಿಮರೂ ಇದ್ದರು. ಅನಂತರ ಅವರು ಈ ಬಗ್ಗೆ ಆಗಾಗ ನನ್ನ ಮನೆಗೆ ಬಂದು ಆತ ಕಬಳಿಸಿದ ನನ್ನ ಜಾಗವನ್ನು ಬಿಡಿಸಿ ಕೊಡಿ ಎಂದು ಒತ್ತಾಯಿಸತೊಡಗಿದರು.

ಒಮ್ಮೆ ಕೆಲವರು ಬಂದು ಆ ಜಾಗ ಕಬಳಿಸಿದ ವ್ಯಕ್ತಿ ಅದೇ ವಿವಾದಿತ ಜಾಗದಲ್ಲಿ ಒಂದು ಯಕ್ಷಗಾನ ಮಾಡಲು ತಯಾರಿ ನಡೆಸುತ್ತಿದ್ದಾನೆ. ಆ ಜಾಗ ತನ್ನದು ಎಂದು ದಾಖಲೆ ಸೃಷ್ಟಿಸುವುದಕ್ಕಾಗಿ ಈ ರೀತಿ ಮಾಡುತ್ತಿದ್ದಾನೆ. ಈ ಯಕ್ಷಗಾನ ನಡೆಯಲು ಬಿಡಬಾರದು ಎಂದು ಮನವಿ ಮಾಡಿದರು. ಆಗ ನಾನು ಸಂಬಂಧಪಟ್ಟ ಅಧಿಕಾರಿಗಳನ್ನು ಕರೆದು ಈ ವಿಚಾರವನ್ನು ಇತ್ಯರ್ಥ ಮಾಡಬೇಕು. ಪರಿಸರದ ಶಾಂತಿ, ಸೌಹಾರ್ದ ಹಾಳಾಗದಂತೆ ನೋಡಿಕೊಳ್ಳಬೇಕು ಎಂದು ಸೂಚಿಸಿದೆ. ಆದರೆ ಆ ಅಧಿಕಾರಿಗಳು ಯಕ್ಷಗಾನ ನಡೆಯುವುದನ್ನೇ ತಡೆದು ಬಿಟ್ಟರು. ಇದನ್ನು ಈ ಕೋಮುವಾದಿ ಸಂಘಟನೆಯವರು ಹೇಗೆ ಪ್ರಚಾರ ಮಾಡಿದರು ಎಂದರೆ 'ಕಾಟಿಪಳ್ಳದಲ್ಲಿ ಯೋಜಿತವಾಗಿದ್ದ ಯಕ್ಷಗಾನವೊಂದನ್ನು ಸಚಿವ ಬಿ.ಎ. ಮೊಹಿದೀನ್ ತಡೆದರು' ಎಂದು ಗುಲ್ಲೆಬ್ಬಿಸತೊಡಗಿದರು. ಈ ಎಲ್ಲ ಘಟನೆಗಳು ನನ್ನ ಗಮನಕ್ಕೆ ಬಾರದ ವಿಷಯಗಳಾಗಿತ್ತು.

ಇದರ ಮಧ್ಯೆ ಏನಾಯಿತು ಎಂದರೆ, ಸುರತ್ಕಲ್ ಗೋವಿಂದ ದಾಸ ಕಾಲೇಜಿನ ವಾರ್ಷಿಕೋತ್ಸವ ಸಂದರ್ಭದಲ್ಲಿ ಮುಸ್ಲಿಂ ಹುಡುಗನೊಬ್ಬ ಹಿಂದೂ ಹುಡುಗಿಯನ್ನು ಚುಡಾಯಿಸಿದ ಎಂದು ನೆಪವೊಡ್ಡಿ ಆ ಹುಡುಗನ ಮೇಲೆ ಮಾರಣಾಂತಿಕ ಹಲ್ಲೆ ನಡೆಸಲಾಯಿತು. ಪೊಲೀಸರು ಹಲ್ಲೆಕೋರರನ್ನು ಬಂಧಿಸಿ ಅವರ ಮೇಲೆ ಸೆ. 307 ಕೇಸು ಹಾಕಿದರು. ಆಗ ಬಿಜೆಪಿ ಶಾಸಕ ಕುಂಬ್ಳೆ ಸುಂದರ ರಾವ್ ಮತ್ತು ವಿಧಾನ ಪರಿಷತ್ ಸದಸ್ಯ ಬಾಲಕೃಷ್ಣ ಭಟ್ ನೇತೃತ್ವದಲ್ಲಿ ಸಂಘ ಪರಿವಾರದವರು ಮುಸ್ಲಿಂ ಹುಡುಗನ ಮೇಲೆ ಹಲ್ಲೆ ಮಾಡಿದ ಬಂಧಿತರನ್ನು ಖುಲಾಸೆ ಮಾಡಬೇಕೆಂದು ಸುರತ್ಕಲ್ ಪೊಲೀಸ್ ಠಾಣೆಗೆ ಮೆರವಣಿಗೆ ಹೊರಟರು. ಇಲ್ಲಿ ಏನಾಯಿತು ಎಂದರೆ, ಈ ಮೆರವಣಿಗೆ ಬಂದವರು ಸುಮಾರು 4–5 ಗಂಟೆಗಳ ಕಾಲ ರಾಷ್ಟ್ರೀಯ ಹೆದ್ದಾರಿಯನ್ನು ಬಂದ್ ಮಾಡಿ ಠಾಣೆಗೆ ಕಲ್ಲೆಸೆಯತೊಡಗಿದರು. ಸೆಕ್ಷನ್ 307 (ಮಾರಣಾಂತಿಕ ಹಲ್ಲೆ)ರ ಪ್ರಕಾರ ಬಂಧಿಸಿದ ಆರೋಪಿಗಳಿಗೆ ಜಾಮೀನು ಸಿಗುವುದಿಲ್ಲ. ಇವರ ಪ್ರತಿಭಟನೆ ಹಿಂಸಾರೂಪಕ್ಕೆ ತಿರುಗುವುದನ್ನು ಕಂಡ ಪೊಲೀಸರು ಜಾಮೀನು ದೊರಕುವ ಸೆಕ್ಷನ್ 324ಕ್ಕೆ ಕೇಸನ್ನು ಬದಲಾಯಿಸಿ ಆರೋಪಿಗಳನ್ನು ಬಿಡುಗಡೆ ಮಾಡಿದರು.

ಕುಂಬ್ಳೆ ಸುಂದರ ರಾವ್ ಮತ್ತು ಬಾಲಕೃಷ್ಣ ಭಟ್‌ರ ನಾಯಕತ್ವದಲ್ಲೇ ಆರೋಪಿಗಳಿಗೆ ಹೂವಿನ ಹಾರ ಹಾಕಿ ಮೆರವಣಿಗೆ ಮಾಡಿದರು. ಮೆರವಣಿಗೆಯ ಕೊನೆಯಲ್ಲಿ ಸುಂದರ ರಾವ್ ಮತ್ತು ಬಾಲಕೃಷ್ಣ ಭಟ್ ಪ್ರಚೋದನಾಕಾರಿ ಭಾಷಣ ಮಾಡಿದರು. ಹಿಂದೂ ಜಾಗರಣಾ ವೇದಿಕೆಯ ಸಂಚಾಲಕ ಜಗದೀಶ ಕಾರಂತ ಮುಸ್ಲಿಮರನ್ನು ಶಿಕ್ಷಿಸುವಂತೆ ಕರೆಕೊಟ್ಟರು. ಇವರ ಈ ಭಾಷಣಗಳಿಂದ ಪ್ರಚೋದಿತರಾದ ಜನ ಹೇಗಾದರೂ ಸರಿ

ಮುಸ್ಲಿಮರನ್ನು ಸದೆಬಡಿಯಬೇಕೆಂದು ಹೊಂಚು ಹಾಕತೊಡಗಿದರು. ಇವರ ಈ ಉಗ್ರ ಭಾಷಣಗಳಿಂದ ಸುತ್ತಮುತ್ತಲಿನ ಕುಳಾಯಿ. ಬೈಕಂಪಾಡಿ, ಹೊಸಬೆಟ್ಟು, ಇಡ್ಯಾ, ಚೊಕ್ಕಬೆಟ್ಟು, ಕೃಷ್ಣಾಪುರ, ಕಾಟಿಪಳ್ಳ, ಕಾನ, ಕೈಕಂಬ, ತಡಂಬೈಲ್, ಮುಂಚೂರು, ಮಧ್ಯ, ಚೇಳಾರು, ಸುರತ್ಕಲ್ ಮುಂತಾದ ಕಡೆ ಜನ ಉದ್ವಿಗ್ನಗೊಂಡು ವಾತಾವರಣ ಬೂದಿ ಮುಚ್ಚಿದ ಕೆಂಡದಂತಾಗಿತ್ತು.

ಈ ಮಧ್ಯೆ ಏನಾಯಿತು ಎಂದರೆ, ಚೊಕ್ಕಬೆಟ್ಟು ರೈಲು ಹಳಿಗಳ ಪಕ್ಕ ಇರುವ ಮನೆಯೊಂದಕ್ಕೆ ಕೆಲವು ಗುಜರಿ ಹೆಕ್ಕುವ ಮುಸ್ಲಿಂ ಮಕ್ಕಳು ನುಗ್ಗಿ ಸಣ್ಣಪುಟ್ಟ ವಸ್ತುಗಳನ್ನು ಕದಿಯಲು ಪ್ರಯತ್ನಿಸಿದರು ಎಂದು ಆರೋಪಿಸಿ ಆ ಮನೆಯವರು ಆ ಹುಡುಗರನ್ನು ಹಿಡಿದು ಎರಡು ಪೆಟ್ಟು ಕೊಟ್ಟು ಕಳುಹಿಸಿದರು. ಪೆಟ್ಟು ತಿಂದ ಹುಡುಗರು ಹೋಗಿ ಇದನ್ನು ತಮ್ಮ ಕೋಮಿನವರಿಗೆ ತಿಳಿಸಿದರು. ಇಲ್ಲಿಂದ ಸ್ಫೋಟಗೊಂಡ ಗಲಭೆ ಒಂದು ವಾರ ಕಾಲ ಊರಿಗೇ ಊರೇ ತಲ್ಲಣಗೊಳ್ಳುವಂತೆ ಮಾಡಿತು. ಈ ಗಲಭೆ ಎಷ್ಟೊಂದು ಪೂರ್ವಯೋಜಿತವಾಗಿತ್ತು ಎಂದರೆ ಹಲವಾರು ವರ್ಷಗಳಿಂದ ದಿನಾ ನೋಡುತ್ತಿದ್ದ, ಪರಿಚಿತರಾಗಿದ್ದ, ಹಿಂದಿನ ದಿನ ಆತ್ಮೀಯತೆಯಿಂದ ಮಾತನಾಡಿದ್ದವರೇ ಮರುದಿನ ಮನೆಗೆ ನುಗ್ಗಿ ಕೊಲೆ ಮಾಡುವಷ್ಟರ ಮಟ್ಟಿಗೆ ಜನ ಮತಾಂಧರಾಗಿ ಬಿಟ್ಟಿದ್ದರು. ಈ ಗಲಭೆ ಇಷ್ಟೊಂದು ಕ್ಷಿಪ್ರವಾಗಿ, ವ್ಯಾಪಕವಾಗಿ ಹರಡಲು ಮಾಧ್ಯಮದವರ ಪಾತ್ರವೂ ಬಹಳಷ್ಟಿತ್ತು. ಹಿಂದೂ ಜಾಗರಣಾ ವೇದಿಕೆಯ ಸಂಚಾಲಕ ನಡೆಸುವ 'ಶಕ್ತಿ ಕೇಬಲ್' ಸುರತ್ಕಲ್‌ನಲ್ಲಿ ನಡೆದ ಪ್ರತಿಭಟನೆ, ಮೆರವಣಿಗೆ, ಅಲ್ಲಿ ಮಾಡಿದ 'ನಾಯಕ'ರ ಉಗ್ರ ಭಾಷಣವನ್ನು ಪ್ರಸಾರ ಮಾಡುವ ಮೂಲಕ ಉರಿವ ಬೆಂಕಿಗೆ ತುಪ್ಪ ಸುರಿಯುತ್ತಿತ್ತು.

ಸುಮಾರು 40 ವರ್ಷಗಳಿಂದ ಚೇಳಾರ್‌ನಲ್ಲಿ ದಿನಸಿ ಅಂಗಡಿ ಇಟ್ಟುಕೊಂಡು ಅಂಗಡಿಯ ಹಿಂದೆಯೇ ಮನೆ ಮಾಡಿ ಹೆಂಡತಿ ಮಕ್ಕಳೊಂದಿಗೆ ವಾಸಿಸುತ್ತಿದ್ದ ಒಬ್ಬ ಮುಸ್ಲಿಮ್ ವ್ಯಕ್ತಿ ಅಂದು ಹೇಳಿದ್ದು ನನಗೆ ಈಗಲೂ ನೆನಪಿದೆ. ಗಲಭೆ ಪ್ರಾರಂಭವಾದ ನಂತರ ಒಂದು ಬೆಳಿಗ್ಗೆ ಬಹಳಷ್ಟು ವರ್ಷಗಳಿಂದ ಪರಿಚಯವಿದ್ದ ಹಿಂದೂ ವ್ಯಕ್ತಿಯೊಬ್ಬರು ಬಂದು 'ನೀವೆಲ್ಲ ಹೆದರಬೇಡಿ, ನಾವಿದ್ದೇವೆ' ಎಂದು ಹೇಳಿ ಹೋಗಿದ್ದನಂತೆ. ಅದೇ ದಿನ ಸಂಜೆ ಬಂದ ಅದೇ ವ್ಯಕ್ತಿ ಅಂಗಡಿಯ ಟೆಲಿಫೋನ್ ಲೈನ್ ಕತ್ತರಿಸಿದನಂತೆ. ಅಂಗಡಿಯವರು ಅದನ್ನು ಜೋಡಿಸಲು ಹೋದಾಗ "ಅದನ್ನು ಜೋಡಿಸಬೇಡಿ, ಹಾಗೇ ಬಿಡಿ. ನೀವು ಗಾಬರಿಯಾಗಿ ನಿಮ್ಮವರಿಗೆ ಫೋನ್ ಮಾಡಿ, ಅವರು ಇಲ್ಲಿಗೆ ಬಂದರೆ, ಇಲ್ಲಿ ಗಲಾಟೆಯಾಗುತ್ತದೆ. ನೀವೇನೂ ಹೆದರಬೇಡಿ ನಾವಿದ್ದೇವೆ" ಎಂದು ಮತ್ತೆ ಹೇಳಿದನಂತೆ. ಅಪಾಯದ ಸುಳಿವು ಸಿಕ್ಕ ಅಂಗಡಿಯವರು ಮನೆಯ ಹೆಂಗಸರು, ಮಕ್ಕಳನ್ನೆಲ್ಲ ಪಕ್ಕದ ಗುಡ್ಡಕ್ಕೆ ಕರೆದುಕೊಂಡು ಹೋಗಿ ಅಳುವ ಮಕ್ಕಳ ಬಾಯಿಯನ್ನು ಒತ್ತಿ ಹಿಡಿದು ಪೊದೆಯೊಂದರಲ್ಲಿ ರಾತ್ರಿ ಇಡೀ ಕಳೆದರಂತೆ.

ಅಂದು ಸಂಜೆ 6 ಗಂಟೆ ಹೊತ್ತಿಗೆ ಒಂದು ಗುಂಪು ಅಂಗಡಿಯ ಮುಂದೆ ಸೇರಿ ಡೋಲು ಬಾರಿಸುತ್ತಾ, ಪಟಾಕಿ ಸಿಡಿಸಲು ಪ್ರಾರಂಭಿಸಿತು. ಆ ಗುಂಪಿನಲ್ಲಿ ಟೆಲಿಫೋನ್

ಕೇಬಲ್ ಕತ್ತರಿಸಿ, ಧೈರ್ಯ ಹೇಳಿ ಹೋಗಿದ್ದ ವ್ಯಕ್ತಿಯೂ ಇದ್ದನಂತೆ. ಸುಮಾರು ಅರ್ಧ ಗಂಟೆ ಅಂಗಡಿಯ ಮುಂದೆ ಡೋಲು ಬಡಿಯುತ್ತಾ ಕೇಕೆ ಹಾಕುತ್ತಾ ನರ್ತಿಸುತ್ತಿದ್ದ ಗುಂಪು ಇದ್ದಕ್ಕಿದ್ದಂತೆ ಅಂಗಡಿ, ಮನೆಯ ಬಾಗಿಲು ಒಡೆದು ಒಳಗೆ ನುಗ್ಗಿ ಲೂಟಿ ಆರಂಭಿಸಿತು. ರಾತ್ರಿ ಇಡೀ ಅಂಗಡಿ – ಮನೆಯನ್ನು ಗುಡಿಸಿ ಹಾಕಿತು. ಅಲ್ಲೇ ಹತ್ತಿರದಲ್ಲಿದ್ದ ಮುಸ್ಲಿಮರ ಇನ್ನೊಂದರ ಅಂಗಡಿಯನ್ನೂ ದೋಚಲಾಯಿತು.

ಕುಳಾಯಿಯಲ್ಲಿ ರಸ್ತೆಯಲ್ಲಿ ಸ್ಕೂಟರ್‌ನಲ್ಲಿ ಹೋಗುತ್ತಿದ್ದ ಅಮಾಯಕ ಮುಸ್ಲಿಂ ವ್ಯಕ್ತಿಯೊಬ್ಬರನ್ನು ಗುಂಪೊಂದು ಸ್ಕೂಟರ್ ತಡೆದು ಅಟ್ಟಾಡಿಸಿಕೊಂಡು ಹೋಗಿ ಕೊಲೆ ಮಾಡಿತು. ಇವರನ್ನು ಆಸ್ಪತ್ರೆಗೆ ಸಾಗಿಸಿದವರು ಒಬ್ಬ ಹಿಂದೂವಾಗಿದ್ದರು.

ಹೊಸಬೆಟ್ಟು ಕಡಂಬೋಡಿಯಲ್ಲಿ ಬಹಳಷ್ಟು ಹಿಂದೂಗಳ ಮನೆಗಳಿದ್ದು, ಆ ಮನೆಗಳ ಮಧ್ಯೆ ಎರಡು ಮುಸ್ಲಿಮರ ಮನೆಗಳಿದ್ದವು. ಆ ಎರಡೂ ಮನೆಗೆ ನುಗ್ಗಿದ ಗುಂಪು ಮಕ್ಕಳು, ಮಹಿಳೆಯರು, ವೃದ್ಧರು ಎಂದು ನೋಡದೆ ಕಬ್ಬಿಣದ ರಾಡುಗಳಿಂದ ಮಾರಣಾಂತಿಕವಾಗಿ ಥಳಿಸಿ, ಇಡೀ ಮನೆಯನ್ನು ಹಾಳುಗೆಡವಿ 25 ಪವನ್ ಚಿನ್ನಾಭರಣ ದೋಚಿಕೊಂಡು ಹೋಯಿತು. ಇದೆಲ್ಲ 10–15 ನಿಮಿಷಗಳಲ್ಲಿ ನಡೆದಿತ್ತಂತೆ. ಹಲವಾರು ವರ್ಷಗಳಿಂದ ಅನ್ಯೋನ್ಯತೆಯಿಂದಿದ್ದ ನೆರೆಮನೆಯ ಯಾವ ಹಿಂದೂಗಳ ಮನೆಯವರೂ ಅವರ ರಕ್ಷಣೆಗೆ ಬರಲಿಲ್ಲ ಎಂದು ಆ ಮನೆಯವರು ಅಳಲು ತೋಡಿಕೊಂಡಿದ್ದರು.

ಸುರತ್ಕಲ್‌ನ ಕಾನ ಎಂಬಲ್ಲಿ ಮೂವರು ಮುಸ್ಲಿಮರನ್ನು ಹಾಡಹಗಲೇ ಮನೆಗೆ ನುಗ್ಗಿ ಕೊಚ್ಚಿ ಕೊಲ್ಲಲಾಯಿತು. ಅವರಲ್ಲಿ ಇಬ್ಬರು 85 ಮತ್ತು 65 ವರ್ಷ ಮೇಲ್ಪಟ್ಟ ವೃದ್ಧರು. ಸುಮಾರು 50 ಮಂದಿ ಇದ್ದ ಮುಸುಕುಧಾರಿ ಗುಂಪೊಂದು ಈ ಕೃತ್ಯ ಎಸಗಿದ್ದಂತೆ. ಅವರು ಕೊಲೆ ಮಾಡಿ, ದರೋಡೆ ನಡೆಸಿ ಹೋಗುವಾಗ ಒಬ್ಬನ ಮುಖದ ಮುಸುಕು ಜಾರಿತಂತೆ. ಆಗ ಅವನನ್ನು ಆ ಮನೆಯವರು ಗುರುತಿಸಿದರಂತೆ. ಆತ ಅಲ್ಲಿ ಕ್ರಿಕೆಟ್ ಆಡಲು ಬರುತ್ತಿದ್ದ ಯುವಕನಂತೆ. ಆತ ಅಂದು ಬೆಳಿಗ್ಗೆ ಅವರ ಮನೆಗೆ ಬಂದು "ಎಲ್ಲಾ ಕಡೆ ಗಲಭೆಯಾಗುತ್ತಿದೆ. ನೀವೆಲ್ಲೂ ಹೊರಗೆ ಹೋಗಬೇಡಿ, ಇಲ್ಲೇ ಇರಿ, ಹೆದರಬೇಡಿ ನಾವಿದ್ದೇವೆ" ಎಂದು ಹೇಳಿ ಹೋಗಿದ್ದನಂತೆ.

ಕೃಷ್ಣಾಪುರದ ಝೊಹರಾ ಎಂಬವರ ನೆರೆಕರೆಯವರೆಲ್ಲ ಹಿಂದೂಗಳು ಮತ್ತು ಕ್ರಿಶ್ಚಿಯನ್ನರು. ಅವರಿಗೆ ಮೂವರು ಗಂಡು ಹಾಗೂ ಒಬ್ಬಳು ಹೆಣ್ಣು ಮಗಳು. ಬೆಳಗಿನ ಹೊತ್ತು 50–60 ಮಂದಿಯ ತಂಡವೊಂದು ತಳವಾರು, ಕತ್ತಿ, ರಾಡ್ ಹಿಡಿದುಕೊಂಡು ಬಂದು ಅವರ ಮನೆಗೆ ನುಗ್ಗಿತು. ಆಗ ಮನೆಯಲ್ಲಿದ್ದವರು ಝೊಹರಾ, ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ವಿದ್ಯಾರ್ಥಿಯಾಗಿದ್ದ ಮಗ ಝಾಕಿರ್ ಹುಸೈನ್ ಮತ್ತು ಎಸ್ಸೆಸ್ಸೆಲ್ಸಿ ಓದುತ್ತಿದ್ದ ಮಗಳು ಮಾತ್ರ. 'ನಾವೇನೂ ತಪ್ಪು ಮಾಡಿಲ್ಲ. ಯಾರಿಗೂ ಕೆಟ್ಟದು ಬಯಸಿಲ್ಲ, ನಮ್ಮನ್ನು ಬಿಟ್ಟು ಬಿಡಿ' ಎಂದು ಎಷ್ಟು ಗೋಗರೆದರೂ ಬಿಡದೆ ಆ ತಂಡ ಇವರು ಮೂವರ ಮೇಲೆಯೂ ಮಾರಣಾಂತಿಕ ಹಲ್ಲೆ ನಡೆಸಿತು. ಮನೆಯನ್ನೆಲ್ಲ ದೋಚಿ ಪರಾರಿಯಾಯಿತು. ಹೀಗೆ ಹೋಗುವಾಗ ಅವರಲ್ಲೊಬ್ಬ

ತಿರುಗಿ ನೋಡಿ ಝೊಹರಾ ಅವರಲ್ಲಿ 'ಇಂತಹ ಸಂದರ್ಭದಲ್ಲಿ ಇದೆಲ್ಲ ಮಾಮೂಲಿ, ಬೇಜಾರು ಮಾಡಿಕೊಳ್ಳಬೇಡಿ' ಎಂದು ಹೇಳಿ ಹೋದನಂತೆ.

ಈ ರೀತಿಯ ಗುಂಪು ದಾಳಿಗಳು ಹಲವು ಕಡೆ ನಡೆದಿವೆ. ಎಳ್ಳಷ್ಟೂ ಕರುಣೆ ಇಲ್ಲದೆ ಕತ್ತಿ, ತಲವಾರು, ರಾಡ್ ಹಿಡಿದುಕೊಂಡು ಅನಿರೀಕ್ಷಿತವಾಗಿ 'ಗೆರಿಲ್ಲಾ' ರೀತಿಯ ದಾಳಿ ಮಾಡುತ್ತಿದ್ದ ಇವರಿಗೆ ನೆರೆಹೊರೆಯವರು, ದಿನಾ ಮುಖನೋಡುವವರು, ಗೆಳೆಯರು ಎಂಬ ಯಾವ ಮುಲಾಜು ಕೂಡಾ ಇರಲಿಲ್ಲ. ಯಾರು ಬೇಕಾದರಾಗಲಿ, ಮುಸ್ಲಿಮರಾದರೆ ಸಾಕು, ಆ ಮನೆಗೆ ನುಗ್ಗಿ ಬಿಡುತ್ತಿದ್ದರು. ಮಕ್ಕಳು, ಮಹಿಳೆಯರು. ವೃದ್ಧರು, ರೋಗಿಗಳು ಎಂಬುದನ್ನು ನೋಡದೆ ಅಟ್ಟಾಡಿಸಿಕೊಂಡು ಹೊಡೆಯುತ್ತಿದ್ದರು, ಕೊಲ್ಲುತ್ತಿದ್ದರು. ಕೆಲವು ಕಡೆ ಮುಸ್ಲಿಂ ಹುಡುಗರು ಕೂಡಾ ಪ್ರತೀಕಾರವಾಗಿ ಕೆಲವು ಮನೆಗಳಿಗೆ ಬೆಂಕಿ ಹಚ್ಚುವ, ದಾಳಿ ಮಾಡುವ ಕೆಲಸವನ್ನೂ ಮಾಡಿದ್ದರು.

ಕೋಮುವಾದಿಗಳ ಅಟ್ಟಹಾಸ ಇಷ್ಟು ಜೋರಾಗಿ ನಡೆಯುತ್ತಿದ್ದರೂ ಅದೆಷ್ಟೋ ಮುಸ್ಲಿಂ ಕುಟುಂಬವನ್ನು ಹಿಂದೂಗಳು ತಮ್ಮ ಮನೆಯಲ್ಲಿ ಬಚ್ಚಿಟ್ಟುಕೊಂಡು ರಕ್ಷಿಸಿದ್ದಾರೆ. ಅದೇ ರೀತಿ ಹಿಂದೂ ಕುಟುಂಬಗಳನ್ನೂ ಮುಸ್ಲಿಮರು ಕಾಪಾಡಿದ್ದಾರೆ. ಈ ರೀತಿಯ ಮಾನವೀಯ ನೆರವು, ರಕ್ಷಣೆ ಇಲ್ಲದಿರುತ್ತಿದ್ದರೆ ಸುರತ್ಕಲ್ ಸುತ್ತಮುತ್ತ ನೂರಾರು ಹೆಣಗಳು ಬೀಳುತ್ತಿತ್ತು. ಇಂತಹ ನೆರವು ನೀಡಿದ ಮನೆಗಳವರನ್ನು ಪತ್ತೆ ಹಚ್ಚಿದ ಈ ಕೋಮುವಾದಿ ಗುಂಪುಗಳ ನಾಯಕರು "ಮುಸ್ಲಿಮರಿಗೆ ರಕ್ಷಣೆ ನೀಡುತ್ತೀರಾ, ನಿಮ್ಮನ್ನು ನೋಡಿಕೊಳ್ಳುತ್ತೇವೆ" ಎಂದು ಬೆದರಿಸಿದ ಪ್ರಸಂಗಗಳೂ ನಡೆದಿವೆ. ಅಂತಹವರನ್ನು ಥಳಿಸಿದ್ದೂ ಇದೆ.

ಬಿಜೆಪಿ ನಮ್ಮ ದೇಶದ ರಾಜಕೀಯದಲ್ಲಿ ಚಲಾವಣೆಗೆ ತಂದ ಹಿಂದೂ ಮತ್ತು ಹಿಂದೂಯೇತರ ಎಂಬ ವಿಭಜನೆಯನ್ನು ಹೆಚ್ಚಿನ ಪಕ್ಷಗಳು ಒಪ್ಪಿಕೊಂಡಿವೆ. ನಮ್ಮ ಹೆಚ್ಚಿನ ಪತ್ರಿಕೆಗಳು, ಸರಕಾರಿ ಮತ್ತು ಸರಕಾರೇತರ ಸಂಸ್ಥೆಗಳೂ ಒಪ್ಪಿಕೊಂಡಿವೆ. ಹಾಗಾಗಿ ಕೋಮುವಾದವನ್ನು ಒಂದು ರಾಜಕೀಯ ಪಕ್ಷವಾದ ಬಿಜೆಪಿ ಹುಟ್ಟುಹಾಕಿದ ಸಮಸ್ಯೆ ಎಂದು ಗುರುತಿಸುವುದರ ಜೊತೆಗೆ, ಇದು ಬೇರೆ ಬೇರೆ ಪಕ್ಷಗಳಲ್ಲಿ, ಬೇರೆ ಬೇರೆ ಪ್ರಮಾಣಗಳಲ್ಲಿ ಕಾಣಿಸಿಕೊಳ್ಳುತ್ತಿರುವ ಒಂದು ರೋಗ ಎಂದು ಗುರುತಿಸುವುದು ಕೂಡಾ ಅತ್ಯಗತ್ಯವಾಗಿದೆ. ಇಲ್ಲಿನ ಪ್ರಜಾಪ್ರಭುತ್ವ ಮತ್ತು ಸಂವಿಧಾನ ಪ್ರೇಮಿಗಳು ಈ ರೋಗಕ್ಕೆ ಸೂಕ್ತ ಮದ್ದು ಎರೆಯದೆ ಹೋದರೆ ಈ ದೇಶ ಒಂದು 'ಜನತಂತ್ರ' ದೇಶವಾಗಿ ಖಂಡಿತ ಉಳಿಯುವುದಿಲ್ಲ ಎಂಬುದನ್ನು ಇಲ್ಲಿ ನಾನು ಹೇಳ ಬಯಸುತ್ತೇನೆ.

ಗಲಭೆಯಲ್ಲಿ ತಮ್ಮವರನ್ನು ಕಳೆದುಕೊಂಡವರ ನೋವು ಕೊನೆಯುಸಿರಿರುವ ತನಕ ಮಾಸುವಂತಹದ್ದಲ್ಲ. ಇಲ್ಲಿ ಹಿಂದೂಗಳು, ಮುಸ್ಲಿಮರು ಒಂದೇ ತರದ ನೋವನ್ನು ಅನುಭವಿಸುತ್ತಿದ್ದಾರೆ. ಇಲ್ಲಿ ಹಿಂದೂಗಳದ್ದು ಒಂದು ನೋವು, ಮುಸ್ಲಿಮರದ್ದು ಒಂದು ನೋವು ಎಂಬುದು ಬೇರೆ ಬೇರೆಯಿಲ್ಲ. ಎಲ್ಲಿಯವರೆಗೆ ನಾವು ಒಟ್ಟಾಗಿರುತ್ತೇವೋ, ಒಂದಾಗಿರುತ್ತೇವೋ ಅಲ್ಲಿಯವರೆಗೆ ನಮಗೆ ಯಾವ ನೋವು ಬಾಧಿಸಲಾರದು.

ಯಾವಾಗ ಹಿಂದೂ – ಮುಸ್ಲಿಂ ಎಂದು ಒಡೆದು ಹೋಗುತ್ತೇವೋ ಆಗಲೇ ಇಲ್ಲಿ ಎಲ್ಲಾ ರೀತಿಯ ಹಿಂಸೆ, ಕೊಲೆ, ಗಲಭೆ, ದರೋಡೆಯಂತಹ ಸಮಸ್ಯೆಗಳು ಹುಟ್ಟಿಕೊಳ್ಳುತ್ತವೆ. ಒಡೆಯುವ ಮೂಲಕ, ಹಿಂಸೆಯ ಮೂಲಕ, ಸಮಸ್ಯೆಗಳನ್ನು ಸೃಷ್ಟಿಸುವ ಮೂಲಕ ಸಂಘ ಪರಿವಾರ ಈ ದೇಶವನ್ನು ತನ್ನ ಕಪಿಮುಷ್ಟಿಗೆ ತೆಗೆದುಕೊಳ್ಳಲು ಭಗೀರಥ ಪ್ರಯತ್ನ ಮಾಡುತ್ತಿದೆ. ಇದಕ್ಕೆ ಹಿಂದೂಗಳು, ಮುಸ್ಲಿಮರು ಅವಕಾಶ ಕೊಡಬಾರದು. ಕೊಟ್ಟರೆ ನಾಶವಾಗುವುದು ನಾವು, ನಮ್ಮ ಹೆಂಡತಿ ಮಕ್ಕಳು, ನಮ್ಮ ತಲೆಮಾರು ಎಂಬುದನ್ನು ನೆನಪಿಟ್ಟುಕೊಳ್ಳಬೇಕು.

ಅಲ್ಪಸಂಖ್ಯಾತರ ಮೇಲೆ ನಡೆಯುತ್ತಿರುವ ಹಲ್ಲೆಗಳು, ದಲಿತರ ಮೇಲೆ ನಡೆಯುತ್ತಿರುವ ಹಿಂಸೆ, ದೌರ್ಜನ್ಯ, ಹೆಣ್ಣು ಮಕ್ಕಳ ಮೇಲಿನ ಅತ್ಯಾಚಾರ, ಬಡವರು ಮತ್ತಷ್ಟು ಬಡವರಾಗುತ್ತಿರುವುದು, ಶ್ರೀಮಂತರ ಸಂಪತ್ತು ಹೆಚ್ಚುತ್ತಿರುವ ಈ ಸಂದರ್ಭದಲ್ಲಿ ಬಡವರು ತಮ್ಮ ತುತ್ತನ್ನು ಕಳೆದುಕೊಳ್ಳುತ್ತಿರುವುದು, ಶಿಕ್ಷಣವಿಲ್ಲದೆ ಉದ್ಯೋಗವೂ ಇಲ್ಲದೆ ಭಿಕಾರಿಗಳಾಗುತ್ತಿರುವುದು ಈ ದೇಶ ಒಂದು ಅತಿ ದೊಡ್ಡ ದುರಂತದತ್ತ ಸಾಗುತ್ತಿದೆ ಎಂಬುದರ ಸಂಕೇತವಾಗಿದೆ. ನಮ್ಮ ದೇಶವನ್ನು, ನಮ್ಮ ಪ್ರಜಾಪ್ರಭುತ್ವವನ್ನು ಈ ದುರಂತದಿಂದ ರಕ್ಷಿಸುವುದು ನಮ್ಮೆಲ್ಲರ ಕರ್ತವ್ಯವಾಗಿದೆ.

ಈ ಸುರತ್ಕಲ್ ಗಲಭೆಯ ನಂತರ ಒಂದು ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಅವರು ಗಲಭೆಯ ಬಗ್ಗೆ ಪ್ರಸ್ತಾಪಿಸುತ್ತಾ "ಕೆಲವರು ನನ್ನನ್ನು ಸಂಪರ್ಕಿಸಿ ಈ ಕೋಮುಗಲಭೆಯು ಜಿಲ್ಲಾ ಉಸ್ತುವಾರಿ ಸಚಿವರ ವೈಫಲ್ಯದಿಂದ ಆಗಿದೆ. ಅವರನ್ನು ಉಸ್ತುವಾರಿ ಸ್ಥಾನದಿಂದ ಕಿತ್ತು ಹಾಕಬೇಕು ಎಂದು ಒತ್ತಾಯಿಸಿದ್ದಾರೆ. ಆದರೆ ನಾನು ಅಂತಹವರಿಗೆ ಖಡಾಖಂಡಿತವಾಗಿ ಹೇಳಿದ್ದೇನೆ. ಬಿ.ಎ. ಮೊಹಿದೀನ್ ಒಬ್ಬ ಜಾತ್ಯತೀತ ವ್ಯಕ್ತಿ. ಎಲ್ಲಿಯೂ ಕೂಡ ಪಕ್ಷಪಾತಿಯಾಗಿ ವರ್ತಿಸಿಲ್ಲ. ಎಲ್ಲರಿಗೂ ಸಮಾನ ನ್ಯಾಯ ದೊರಕಿಸಿಕೊಟ್ಟಿದ್ದಾರೆ. ಅವರನ್ನು ಬದಲಿಸುವ ಪ್ರಶ್ನೆಯೇ ಇಲ್ಲ" ಎಂದರು. ಈ ಸಂದರ್ಭದಲ್ಲಿ ಅಲ್ಲಿದ್ದ ಎಲ್ಲ ಇತರ ಸಚಿವರು ಕೂಡಾ ನನಗೆ ಧೈರ್ಯ ತುಂಬಿ "ನಿಮ್ಮ ಒಳ್ಳೆಯ ಕೆಲಸಗಳನ್ನು ಮುಂದುವರಿಸುತ್ತಾ ಹೋಗಿ" ಎಂದು ಹೇಳಿದರು. ಅನಂತರ ಗಲಭೆಯ ಸಂತ್ರಸ್ತರಿಗೆ ಅತ್ಯಧಿಕ ಪರಿಹಾರ ನೀಡಲಾಯಿತು. ಅವರ ಸೊತ್ತುಗಳಿಗೆ ಹಾನಿಯಾಗಿದ್ದಕ್ಕಿಂತ ಅಧಿಕ ಮೊತ್ತವನ್ನು ಜಾತಿ, ಮತ, ಭೇದವಿಲ್ಲದೆ ಕೊಡಿಸಿದ್ದೇನೆ. ಎಷ್ಟು ಕೊಟ್ಟರೂ ಕೊಲೆಯಾದವರ ಪ್ರಾಣಕ್ಕೆ ಪರಿಹಾರ, ಬೆಲೆ ಕಟ್ಟಲು ಸಾಧ್ಯವೇ? ಆ ನೋವು ಇನ್ನೂ ನನ್ನನ್ನು ಕಾಡುತ್ತಿದೆ.

# ಮುಸ್ಲಿಂ ಶೈಕ್ಷಣಿಕ ಕ್ರಾಂತಿ

ನಾನು ಶಿಕ್ಷಣಕ್ಕೆ ಒತ್ತು ಕೊಡಲಿಕ್ಕೆ ಕಾರಣ ನನ್ನ ಆಸುಪಾಸಿನವರು, ನನ್ನ ಸಂಬಂಧಿಕರು, ನನ್ನ ಮನೆಯಲ್ಲಿಯೇ ಇದ್ದ ಅಕ್ಕ, ತಂಗಿಯರು. ಇವರೆಲ್ಲರೂ ನಿರಕ್ಷರಸ್ಥರಾಗಿದ್ದರು. ಆ ಕಾಲದಲ್ಲಿ ಕೇರಳದಿಂದ ಬರುತ್ತಿದ್ದ ಮುಲ್ಲಾಗಳು ಹೆಣ್ಣುಮಕ್ಕಳಿಗೆ ಶಿಕ್ಷಣ ನೀಡುವುದನ್ನು 'ಸಂಪ್ರದಾಯ ವಿರುದ್ಧ' ಎಂಬಂತೆ ಬಿಂಬಿಸುತ್ತಿದ್ದರು. ನಾನು ಚಿಕ್ಕವನಿದ್ದಾಗ ನಮ್ಮ ಹೆಣ್ಣು ಮಕ್ಕಳು ಮದ್ರಸಾಗಳಿಗೆ ಮಾತ್ರ ಹೋಗುತ್ತಿದ್ದರು. ಕುರ್‌ಆನ್ ಓದಲು ಬಂದರೆ ಸಾಕು, ಧಾರ್ಮಿಕ ವಿದ್ಯಾಭ್ಯಾಸವೇ ನಿಜವಾದ ಶಿಕ್ಷಣ ಎಂದು ಅಂದಿನ ಧಾರ್ಮಿಕ ವಿದ್ವಾಂಸರು ಹೇಳುತ್ತಿದ್ದರು. ಅದನ್ನೇ ಮುಗ್ಧ ಜನ ನಂಬಿದ್ದರು ಕೂಡಾ.

ಅನಂತರ ನಾನು, ನನ್ನ ಸಮಕಾಲೀನರೆಲ್ಲ ವಿದ್ಯಾವಂತರಾದ ಮೇಲೆ ಈ ಹೆಣ್ಣು ಮಕ್ಕಳಿಗೆ ಹೇಗೆ ಶಿಕ್ಷಣ ಕೊಡುವುದು ಎಂದು ಯೋಚಿಸತೊಡಗಿದೆವು. ಹಾಗೆ ಒಂದು ಪ್ರಯತ್ನವನ್ನು ನಾನು ನನ್ನ ಊರಿನಲ್ಲಿಯೇ ಮಾಡಿದೆ. ಆಗ ನನಗೆ ನನ್ನ ಊರಿನ ಮೇಲೆ ಸ್ವಲ್ಪ ಹಿಡಿತ ಸಿಕ್ಕಿತ್ತು.

ಮೊದಲನೇ ಬಾರಿ ನಾನು ನಮ್ಮ ಬಜಪೆಯ ಮದ್ರಸಾದಲ್ಲಿ ನರ್ಸರಿ ಶಾಲೆ ಆರಂಭಿಸಿದೆ. ಆ ಶಾಲೆಗೆ ಹೆಸರೇ ಇಟ್ಟಿರಲಿಲ್ಲ. 'ನರ್ಸರಿ ಸ್ಕೂಲ್' ಎಂದು ಮಾತ್ರ ಕರೆಯುತ್ತಿದ್ದರು. ಈ ನರ್ಸರಿ ಪ್ರಾರಂಭಿಸುವಾಗ ನನ್ನ ವಾದ ಏನಿತ್ತು ಎಂದರೆ– ನೀವು ನಿಮ್ಮ ಮಕ್ಕಳನ್ನು ಐದು ವರ್ಷ ಹತ್ತು ತಿಂಗಳು ಆಗುವವರೆಗೆ ಶಾಲೆಗೆ ಕಳುಹಿಸುವಂತಿಲ್ಲ. ಯಾಕೆಂದರೆ ಅದು ಸರಕಾರದ ಕಾನೂನು. ಅಷ್ಟರವರೆಗೂ ಮಕ್ಕಳು ಮನೆಯಲ್ಲಿಯೇ ಇರುತ್ತಾರೆ. ಮನೆಯಲ್ಲಿ ಏನು ಮಾಡ್ತಾರೆ? ಉದಾಹರಣೆಗೆ ನಿಮ್ಮ ಮನೆಗೆ ನೆಂಟರು ಬರ್ತಾರೆ. ಆಗ ನಿಮ್ಮ ನೆಂಟರಿಗೆ ನೀವು ಸಿಹಿತಿಂಡಿಯೋ

ಇನ್ನೇನಾದರೂ ತಿಂಡಿಯನ್ನು ಇಡುತ್ತೀರಿ. ಆಗ ನಿಮ್ಮ ಮಕ್ಕಳು ಬಂದು ಅವರ ತಟ್ಟೆಗೆ ಕೈ ಹಾಕುತ್ತಾರೆ, ತಿನ್ನುತ್ತಾರೆ. ನೆಂಟರು ಏನೋ ಸಣ್ಣ ಮಕ್ಕಳೂಂತ ಸುಮ್ಮನಿರುತ್ತಾರೆ. ಇಂತಹ ಅಭ್ಯಾಸಗಳೆಲ್ಲ ಆ ಪ್ರಾಯದಲ್ಲಿ ಮಕ್ಕಳಿಗೆ ಶುರುವಾಗ್ತದೆ. ಮಕ್ಕಳು ಮನೆಯಲ್ಲಿ ಈ ರೀತಿಯ ಕಿರುಕುಳಗಳನ್ನೆಲ್ಲ ಕೊಡುತ್ತಿರುತ್ತಾರೆ. ಅವರಿಗೆ ಮನೆಯಲ್ಲಿ ಓದಲು, ಬರೆಯಲು ಅಥವಾ ಬೇರೇನೂ ಕೆಲಸ ಇರುವುದಿಲ್ಲ. ಯಾವಾಗ ನೋಡಿದರೂ ಹಠ ಹಿಡಿಯುವುದು, ತಾಯಂದಿರಿಗೆ ಕಿರುಕುಳ ಕೊಡುವುದು ಮಾಡುತ್ತಿರುತ್ತಾರೆ. ನೀವೇನು ಮಾಡುತ್ತೀರಿ. ಮಕ್ಕಳಿಗೆ ಐದು ವರ್ಷ ಹತ್ತು ತಿಂಗಳು ಆಗುವುದನ್ನು ಕಾದು ನಂತರ ಶಾಲೆಗೆ ಸೇರಿಸುತ್ತೀರಿ. ಅಲ್ಲೇನಾಗುತ್ತದೆ? ಟೀಚರ್ ಬೋರ್ಡ್‌ನಲ್ಲಿ 1, 2, 3 ಎಂದು ಬರೆಯುತ್ತಾರೆ. ಕ್ರಿಶ್ಚಿಯನ್ ಮಕ್ಕಳು, ಹಿಂದೂಗಳ ಮಕ್ಕಳು ಅದನ್ನು 1, 2, 3 ಎಂದು ಸಲೀಸಾಗಿ ಓದುತ್ತಾರೆ. ಟೀಚರ್ A B C D ಬರೆಯುತ್ತಾರೆ ಅದನ್ನೂ ಆ ಮಕ್ಕಳು ಓದುತ್ತಾರೆ ಮತ್ತು 'ಅದು ನಮಗೆ ಗೊತ್ತಿದೆ ಟೀಚರ್' ಎಂದು ಹೇಳುತ್ತಾರೆ. ನಮ್ಮ ಮುಸ್ಲಿಂ ಮಕ್ಕಳಿಗೆ ಏನೂ ಗೊತ್ತಿಲ್ಲ. ಕಣ್ಣು ಬಾಯಿ ಬಿಟ್ಟು ನೋಡುತ್ತಾರೆ. ಯಾಕೆಂದರೆ ನಮ್ಮ ಮಕ್ಕಳು ನರ್ಸರಿ ಶಾಲೆಗೆ ಹೋಗಿ ಕಲಿಯಲಿಲ್ಲ. ಮನೆಯಲ್ಲಿ ಕಲಿಸುವಷ್ಟು ವಿದ್ಯೆ ನಮಗಿಲ್ಲ. ವಿದ್ಯೆ ಇದ್ದರೂ ಕಲಿಸುವ ವ್ಯವಧಾನವಿಲ್ಲ. ಇಲ್ಲಿ ಏನಾಗುತ್ತದೆ. ನಮ್ಮ ಮಕ್ಕಳ ಮೇಲೆ ಇದರ ಪರಿಣಾಮ ಬೀರುತ್ತದೆ. 'ಅವರಿಗೆಲ್ಲ ಗೊತ್ತಿದೆ, ನಮಗೇನೂ ಗೊತ್ತಿಲ್ಲ' ಎಂಬ ಕೀಳರಿಮೆ ನಮ್ಮ ಮಕ್ಕಳಲ್ಲಿ ಉಂಟಾಗುತ್ತದೆ. ಅವರು ಕೊನೆಯ ಬೆಂಚಿಗೆ ಸೇರುತ್ತಾರೆ. ಹಾಗೆ ಹೀಗೆ ಮಾಡಿ 4ನೇ ತರಗತಿಗೆ ಹೋಗುವಾಗ ಶಾಲೆ ಬಿಡ್ತಾರೆ. ಹೀಗಾಗಬಾರದು.

ನಮ್ಮ ಮಕ್ಕಳು ಕಲಿಯಬೇಕಾದರೆ ಅವರನ್ನು ಮೊದಲು ನರ್ಸರಿ ಶಾಲೆಗೆ ಕಳುಹಿಸಿ ಎಂದು ನಾನು ಹೇಳಿದಾಗ ಕೆಲವು ಮಸೀದಿಗಳವರು ಮದ್ರಸಾಗಳಲ್ಲಿ ನರ್ಸರಿ ಶಾಲೆಗಳನ್ನು ಪ್ರಾರಂಭಿಸಲು ಮುಂದಾದರು. ಈ ವಿಷಯ ಮುಲ್ಲಾ, ಮೌಲ್ವಿಗಳಿಗೆ ಗೊತ್ತಾಯಿತು. ಅವರು "ಅದೆಲ್ಲ ಪಾಡ್‌ಲ್ಲಲ್ಲೊ" (ಅದು ಸಮ್ಮತಾರ್ಹ ಅಲ್ಲವಲ್ಲ) ಎಂದು ಹೇಳಿದರು. ನಮ್ಮ ಮದ್ರಸಾಗಳಲ್ಲಿ ಒಂದು ಹಿಂದೂ ಟೀಚರ್ ಬಂದು ಮಕ್ಕಳ ಬಾಯಲ್ಲಿ ಹಾಡು ಹೇಳಿಸುವುದು, ಕುಣಿಸುವುದು, ಆಟ ಆಡಿಸುವುದು ಮಾಡಿದರೆ ಮದ್ರಸಾದ ಪಾವಿತ್ರ್ಯ ಹಾಳಾಗುತ್ತದೆ. ಆದುದರಿಂದ ಅದು ಸರಿಯಲ್ಲ. ಮದ್ರಸಾ ಅಂತ ಹೇಳಿದರೆ ಅದು ಪವಿತ್ರ ಕುರ್‌ಆನ್ ಕಲಿಯಲಿಕ್ಕಿರುವ ಜಾಗ ಎಂಬುದು ಅವರ ಅಭಿಪ್ರಾಯವಾಗಿತ್ತು.

ಆದರೆ ನಮ್ಮೂರು ಬಜಪೆಯಲ್ಲಿ ಮಾತ್ರ, ನಮಗೆ ಮದ್ರಸಾದ ಮೇಲೆ ಸಂಪೂರ್ಣ ಹಿಡಿತವಿತ್ತು. ಹಾಗಾಗಿ ನರ್ಸರಿ ಶಾಲೆ ಸುಲಭವಾಗಿ ಪ್ರಾರಂಭವಾಯಿತು. ನರ್ಸರಿ ಶಾಲೆ ಆದ ಮೇಲೆ ಒಂದನೇ ತರಗತಿ ಆಗಬೇಕಲ್ಲ. ಅದೂ ಇಂಗ್ಲಿಷ್ ಮೀಡಿಯಂ ಆಗಬೇಕಲ್ಲ–ಇಲ್ಲದಿದ್ದರೆ ಮಕ್ಕಳು ಬರುವುದಿಲ್ಲ. ಇಲ್ಲಿ ಏನಾಗಿತ್ತು ಎಂದರೆ, ನಾನು ಇದಕ್ಕೂ ಮೊದಲು ಬಜಪೆಯಲ್ಲಿ ಒಂದು ಇಂಗ್ಲಿಷ್ ಮೀಡಿಯಂ ಶಾಲೆ ಪ್ರಾರಂಭಿಸಿದ್ದೆ.

ಈಗ ಈ ಶಾಲೆಯನ್ನು ಕ್ರಿಶ್ಚಿಯನ್‌ನವರು ತೆಗೆದುಕೊಂಡಿದ್ದಾರೆ. ಅವರೇ ನಡೆಸುತ್ತಿದ್ದಾರೆ.

ಬಜಪೆ ವಿಮಾನ ನಿಲ್ದಾಣದ ಸಿಬ್ಬಂದಿಯ ಮಕ್ಕಳಿಗಾಗಿ ಆ ಇಂಗ್ಲಿಷ್ ಮೀಡಿಯಂ ಶಾಲೆಯನ್ನು ಆ ಕಾಲದಲ್ಲಿ ನಾವು ಪ್ರಾರಂಭಿಸಿದ್ದು. ಆಮೇಲೆ ಪಣಂಬೂರಿನಲ್ಲಿ ಕೇಂದ್ರೀಯ ವಿದ್ಯಾಲಯ ಪ್ರಾರಂಭ ವಾಯಿತು. ಅಲ್ಲಿ ವಿಮಾನ ನಿಲ್ದಾಣದ ಸಿಬ್ಬಂದಿಯ ಮಕ್ಕಳಿಗೆ ಅವಕಾಶ ಇತ್ತು. ಶಿಕ್ಷಣದ ಗುಣಮಟ್ಟವೂ ಒಳ್ಳೆಯದಿದ್ದು, ಹೋಗಿ ಬರಲು ಶಾಲಾ ಬಸ್ಸುಗಳ ವ್ಯವಸ್ಥೆಯೂ ಇತ್ತು. ಆದುದರಿಂದ ಅವರೆಲ್ಲರೂ ತಮ್ಮ ಮಕ್ಕಳನ್ನು ಪಣಂಬೂರಿಗೆ ಕಳುಹಿಸತೊಡಗಿದರು. ಹಾಗಾಗಿ ನಾವು ಪ್ರಾರಂಭಿಸಿದ ಶಾಲೆಯನ್ನು ನಾವು ಕ್ರಿಶ್ಚಿಯನ್ ಸಂಸ್ಥೆಯವರಿಗೆ ಕೊಟ್ಟೆವು. ಅವರು ಈಗಲೂ ಅದನ್ನು ನಡೆಸುತ್ತಿದ್ದಾರೆ. ಆ ಶಾಲೆಯ ಹೆಸರು ಮೋರ್ನಿಂಗ್ ಸ್ಟಾರ್ ಎಂದು. ಹಾಗಾಗಿ ನಾವೊಂದು ಪ್ರತ್ಯೇಕ ಇಂಗ್ಲಿಷ್ ಮೀಡಿಯಂ ಶಾಲೆಯನ್ನು ಬಜಪೆಯಲ್ಲಿ ಪ್ರಾರಂಭಿಸಿದೆವು.

ಅನಂತರ ಕಾಟಿಪಳ್ಳ, ಕೃಷ್ಣಾಪುರ, ಸೂರಿಂಜೆ, ಜೋಕಟ್ಟೆ, ಬೈಕಂಪಾಡಿ ಮುಂತಾದ ಊರುಗಳಲ್ಲಿ ಮುಸ್ಲಿಂ ಆಡಳಿತದ ಇಂಗ್ಲಿಷ್ ಮೀಡಿಯಂ ಶಾಲೆಗಳು ಆರಂಭವಾಯಿತು. ಹಾಗೆ ಹೊಸದಾಗಿ ಪ್ರಾರಂಭವಾದ ಎಲ್ಲ ಶಾಲೆಗಳಿಗೆ ನಾನು ಅನುಮತಿಯನ್ನು ಕೊಡಿಸಿದೆ. ಈ ಕೆಲಸವನ್ನು ಒಂದು ಆಂದೋಲನ ರೀತಿಯಲ್ಲಿ ಮಾಡಿಸಿದೆ.

ಹೇಗೆ ಕ್ರಿಶ್ಚಿಯನ್ ಸಂಸ್ಥೆಗಳು ಅವರ ಚರ್ಚುಗಳಿರುವಲ್ಲೆಲ್ಲ ಶಾಲೆಗಳನ್ನು ಮಾಡಿದ್ದಾರೋ, ಹಾಗೆಯೇ ಮುಸ್ಲಿಂ ಸಂಸ್ಥೆಗಳೂ ಶಾಲೆಗಳನ್ನು ಪ್ರಾರಂಭಿಸಬೇಕು ಎಂದು ಒತ್ತಡ, ಪ್ರಚಾರ ಮಾಡತೊಡಗಿದೆ. ಇದು ಮುಸ್ಲಿಮರಿಗೆ ಬಹಳ ಸುಲಭ. ಯಾಕೆಂದರೆ, ಎಲ್ಲ ಮುಸ್ಲಿಂ ಜಮಾಅತ್‌ಗಳಲ್ಲಿ ಮದ್ರಸಾಗಳಿವೆ. ಆ ಮದ್ರಸಾಗಳು ಒಂದು ಶಾಲೆಯನ್ನು ಪ್ರಾರಂಭಿಸುವಷ್ಟು ಸುಸಜ್ಜಿತವಾಗಿವೆ. ಎಲ್ಲ ಸೌಲಭ್ಯಗಳಿರುವ ಈ ಕಟ್ಟಡಗಳಲ್ಲಿ ಬೆಳಿಗ್ಗೆ ಒಂದೆರಡು ಗಂಟೆ, ಸಂಜೆ ಒಂದೆರಡು ಗಂಟೆ ಮಾತ್ರ ಮದ್ರಸಾ ಪಾಠಗಳಿರುತ್ತವೆ. ಆ ಕಟ್ಟಡವನ್ನೇ ಬಳಸಿಕೊಂಡು ನಾವು ಶಾಲೆಗಳನ್ನು ಪ್ರಾರಂಭಿಸ ಬಹುದಾಗಿತ್ತು. ನಾನು ಯಾವುದೇ ಧಾರ್ಮಿಕ ಸಭೆ ಸಮಾರಂಭಗಳಿಗೆ, ಉರೂಸು, ನೇರ್ಚೆ ಕಾರ್ಯಕ್ರಮಗಳಿಗೆ ಹೋದಾಗಲೆಲ್ಲ ಧಾರ್ಮಿಕ ವಿಚಾರಗಳ ಬಗ್ಗೆ ಮಾತನಾಡುತ್ತಲೇ ಇರಲಿಲ್ಲ. ಅವಕಾಶ ಸಿಕ್ಕಿದಾಗಲೆಲ್ಲ ಮೇಲೆ ತಿಳಿಸಿದಂತೆ ಶಿಕ್ಷಣ, ಅದರ ಮಹತ್ವ, ಶಾಲೆಗಳನ್ನು ಪ್ರಾರಂಭಿಸುವುದರ ಅಗತ್ಯ, ಅದನ್ನು ಹೇಗೆ ಆರಂಭಿಸುವುದು ಎಂಬುದರ ಬಗ್ಗೆ ಮಾಹಿತಿ, ಪ್ರೋತ್ಸಾಹ ನೀಡುತ್ತಿದ್ದೆ. ನನ್ನ ಈ ವಿಚಾರಗಳನ್ನು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರು ಧನಾತ್ಮಕವಾಗಿ ಸ್ವೀಕರಿಸಿದರು. ಅಲ್ಲಲ್ಲಿ ಹಲವಾರು ಇಂಗ್ಲಿಷ್ ಮೀಡಿಯಂ ಶಾಲೆಗಳು ತೆರೆಯಲ್ಪಟ್ಟವು.

ಈ ಶಾಲೆಗಳನ್ನು ನಡೆಸಲು ಅನೇಕ ಆಡಳಿತಾತ್ಮಕವಾದ ಹಾಗೂ ಕಾನೂನಿಗೆ ಸಂಬಂಧಪಟ್ಟಂತೆ ಹತ್ತಾರು ಸಮಸ್ಯೆಗಳು ಎದುರಾಗಿತ್ತು. ಅಂತಹ ಸಮಸ್ಯೆಗಳನ್ನೆಲ್ಲ ಒಂದೊಂದೇ ಶಾಲೆಗಳು ಪ್ರತ್ಯೇಕವಾಗಿ ಪರಿಹರಿಸಿಕೊಳ್ಳಲು ಕಷ್ಟವಾಗುತ್ತವೆ. ಅದಕ್ಕಾಗಿ ನಾನು ಮುಸ್ಲಿಂ ಆಡಳಿತಕ್ಕೆ ಒಳಪಟ್ಟ ಎಲ್ಲ ಶಾಲೆಗಳನ್ನು ಸೇರಿಸಿ ಒಂದು ಸಂಘಟನೆಯನ್ನು

ಸ್ಥಾಪಿಸಿದೆ. ಅದೇ ಈಗಿರುವ 'ಮೀಫ್' (MEIF); ಅಂದರೆ ಮುಸ್ಲಿಂ ಎಜ್ಯುಕೇಶನಲ್ ಇನ್‌ಸ್ಟಿಟ್ಯೂಶನ್ಸ್ ಫೆಡರೇಶನ್.

ಫೆಡರೇಶನ್ ಅಂತ ಯಾಕೆ ಮಾಡಿದೆ ಎಂದರೆ, ಅದಕ್ಕೊಂದು ವ್ಯಾಖ್ಯಾನವಿದೆ. ಫೆಡರೇಶನ್ ಎಂದೂ ನಮ್ಮ ಶಾಲೆಯ ಆಡಳಿತದ ಒಳಗೆ ಕೈಹಾಕುವುದಿಲ್ಲ. ಆದರೆ ಸಾಮೂಹಿಕವಾಗಿ ಏನಾದರೂ ಸಮಸ್ಯೆಗಳು ಎದುರಾದಾಗ ಅದನ್ನು ಫೆಡರೇಶನ್ ಮೂಲಕ ಪರಿಹರಿಸಿಕೊಳ್ಳಬಹುದು. ಉದಾಹರಣೆಗೆ ಇಂಗ್ಲಿಷ್ ಮೀಡಿಯಂ ಸ್ಕೂಲ್‌ಗಳನ್ನು ನಡೆಸಬಾರದು ಎಂದು ಒಂದು ಕಾನೂನು ಇದೆ. ಅಂದರೆ ಮಾತೃಭಾಷೆಯಲ್ಲೇ ಕಲಿಸಬೇಕು ಎನ್ನುವ ನಿಯಮವಿದೆ. ನಾನೇನು ಮಾಡಿದೆ ಎಂದರೆ, ಸಂವಿಧಾನದ ಆರ್ಟಿಕಲ್ 29 ಮತ್ತು 30ರಲ್ಲಿ ಅಲ್ಪಸಂಖ್ಯಾತರಿಗೆ ತಮ್ಮದೇ ಆದ ಶಾಲೆಗಳನ್ನು ನಡೆಸಲು ಅವಕಾಶ ಇದೆ ಎಂಬುದನ್ನು ಕಂಡು ಹಿಡಿದೆ. ಇದರ ಪ್ರಕಾರ ಅಲ್ಪಸಂಖ್ಯಾತರು ಇಂಗ್ಲಿಷ್ ಮೀಡಿಯಂ ಶಾಲೆಗಳನ್ನು ನಡೆಸಬಹುದು. ಅದಕ್ಕೆ ಸರಕಾರ ತಡೆಮಾಡುವಂತಿಲ್ಲ ಎಂದು ವಾದಿಸಿದೆ. ಈ ವಾದ, ತಕರಾರು ಸರ್ವೋಚ್ಚ ನ್ಯಾಯಾಲಯದವರೆಗೂ ಹೋಯಿತು. ಅಲ್ಲಿಯೂ ನಾವು ವಾದಿಸಿದೆವು. ನಮ್ಮದು ಅಲ್ಪಸಂಖ್ಯಾತರು ನಡೆಸುತ್ತಿರುವಂತಹ ಶಾಲೆಗಳು. ಅಲ್ಲಿ ಮಕ್ಕಳಿಗೆ ಯಾವ ಭಾಷೆಯಲ್ಲಿ ಕಲಿಸಬೇಕು ಎಂಬ ನಿರ್ಧಾರ ಮಾಡುವುದು ಆ ಮಕ್ಕಳ ಹೆತ್ತವರಿಗಿರುವ ಹಕ್ಕು. ಸಂವಿಧಾನ ನಮಗೆ ಕೊಟ್ಟಿರುವ ಹಕ್ಕನ್ನು ಮೊಟಕುಗೊಳಿಸಬಾರದು. ನಮ್ಮ ಹಕ್ಕನ್ನು ನ್ಯಾಯಾಲಯ ರಕ್ಷಿಸಿ ಕೊಡಬೇಕು ಎಂದು ಕೇಳಿದೆವು.

ಭಾರತದ ಸರ್ವೋಚ್ಚ ನ್ಯಾಯಾಲಯ ನಮ್ಮ ವಾದವನ್ನು ಎತ್ತಿಹಿಡಿದು ನಮ್ಮ ಪರವಾಗಿ ತೀರ್ಪು ನೀಡಿತು. ಈಗ ಈ ಫೆಡರೇಶನ್‌ನಲ್ಲಿ 120ಕ್ಕೂ ಹೆಚ್ಚು ಶಾಲೆಗಳು ಸೇರ್ಪಡೆಗೊಂಡಿವೆ.

ಈ ಎಲ್ಲ ಬೆಳವಣಿಗೆಗಳಿಂದಾಗಿ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಮುಸ್ಲಿಮರಲ್ಲಿ ಶೈಕ್ಷಣಿಕ ಜಾಗೃತಿ ಉಂಟಾಯಿತು. ನಮ್ಮ ಗಂಡು ಮಕ್ಕಳು ಮಾತ್ರವಲ್ಲ, ಹೆಣ್ಣುಮಕ್ಕಳೂ ಕಲಿಯಬೇಕು ಎಂಬ ಪ್ರಜ್ಞೆ ಎಲ್ಲ ಕಡೆ ಮೂಡಿತು. ವಿದೇಶಗಳಲ್ಲಿ ದುಡಿಯುತ್ತಿರುವ ನಮ್ಮ ಯುವಕರಿಗೂ 'ವಿದ್ಯಾಭ್ಯಾಸವಿಲ್ಲದೆ ಇಲ್ಲಿ ಬಂದು ದುಡಿಯುತ್ತಿರುವ ನಾವು ಈಗಲೂ ಸಣ್ಣಪುಟ್ಟ ಕೆಲಸವನ್ನು ಮಾಡುತ್ತಿದ್ದೇವೆ. ಅದೇ ವಿದ್ಯಾಭ್ಯಾಸ ಹೊಂದಿ ಬಂದಿರುವ ಇತರ ಧರ್ಮೀಯರು ಉನ್ನತ ಹುದ್ದೆಗಳಲ್ಲಿ ದುಡಿಯುತ್ತಾ, ಕೈತುಂಬಾ ಸಂಬಳ ಪಡೆಯುತ್ತಿದ್ದಾರೆ' ಎಂಬುದು ಮನದಟ್ಟಾಯಿತು. ಹೀಗಾಗಿ ಊರಿನಲ್ಲಿ ಪ್ರಾರಂಭವಾಗುವ ಮುಸ್ಲಿಂ ಶಾಲೆಗಳಿಗೆ ವಿದೇಶಗಳಲ್ಲಿ ದುಡಿಯುತ್ತಿರುವವರಿಂದ ತುಂಬಾ ಪ್ರೋತ್ಸಾಹ, ಸಹಕಾರ, ನೆರವು ಹರಿದುಬಂತು.

ನಮ್ಮಲ್ಲಿರುವ ಒಂದು ಸಣ್ಣ ದೌರ್ಬಲ್ಯ ಎಂದರೆ ಪ್ರಾರಂಭದ ಅಂಜಿಕೆ. ಒಮ್ಮೆ ಪ್ರಾರಂಭವಾದರೆ ಮತ್ತೆ ಬ್ಯಾರಿಗಳು ತಿರುಗಿ ನೋಡುವುದಿಲ್ಲ. ಈ ಶೈಕ್ಷಣಿಕ ಆಂದೋಲನದಲ್ಲಿ ಆದದ್ದೂ ಅದೇ. ನಮ್ಮ ಸಮುದಾಯ ಅನುಕರಣಾ ಸಮುದಾಯ.

ಒಬ್ಬ ಒಂದನ್ನು ಮಾಡಿದರೆ ಮತ್ತು ಅದು ಯಶಸ್ವಿಯಾದರೆ ಇನ್ನೊಬ್ಬನೂ ಅದನ್ನೇ ಮಾಡುತ್ತಾನೆ. ಇದು ನಮ್ಮ ಬ್ಯಾರಿ ಸಮುದಾಯದ ದೌರ್ಬಲ್ಯ. ನಾನು ಅವರ ಈ ದೌರ್ಬಲ್ಯವನ್ನೇ ನನ್ನ ಈ ಆಂದೋಲನದ ಅಸ್ತ್ರವಾಗಿ ಬಳಸಿಕೊಂಡೆ. ಹಾಗಾಗಿ ನನ್ನ ಉದ್ದೇಶಿತ ಗುರಿ ಬಲು ಬೇಗ ಈಡೇರಿತು.

ಇದರ ಪರಿಣಾಮವಾಗಿ ಜಿಲ್ಲೆಯಲ್ಲಿ ಕೆಲವು ಮುಸ್ಲಿಂ ಆಡಳಿತದ ಇಂಜಿನಿಯರಿಂಗ್ ಕಾಲೇಜುಗಳು ಮತ್ತು ವೈದ್ಯಕೀಯ ಕಾಲೇಜುಗಳೂ ಪ್ರಾರಂಭವಾದವು. ಈ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಶಿಕ್ಷಣಕ್ಕೆ ಒತ್ತು ಕೊಡುವ ಜಿಲ್ಲೆ ಎಂದು ಗುರುತಿಸಲ್ಪಟ್ಟಿತು. ನಿಮಗೆ ಗೊತ್ತಿದೆಯೋ ಇಲ್ಲವೋ ಈ ದೇಶದಲ್ಲೇ ಶಿಕ್ಷಣ ಸಂಸ್ಥೆಗೆ ಡೊನೇಶನ್ ಪಡೆಯುವ ಪದ್ಧತಿಯನ್ನು ಪರಿಚಯಿಸಿದವರು ನಮ್ಮ ಮಣಿಪಾಲದವರು. ಈ ವಿಧಾನದಿಂದಾಗಿಯೇ ನಮ್ಮ ಜಿಲ್ಲೆಯಾದ್ಯಂತ ಅನೇಕ ಇಂಜಿನಿಯರಿಂಗ್ ಮತ್ತು ವೈದ್ಯಕೀಯ ಕಾಲೇಜುಗಳು ತಲೆ ಎತ್ತಲು ಸಾಧ್ಯವಾದದ್ದು. ಎಲ್ಲ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ವಿದ್ಯಾರ್ಥಿಗಳನ್ನು ಪೂರೈಸುವ ಶಾಲೆಗಳು ಈಗ ನಮ್ಮದಾಗಿವೆ. ನಮ್ಮ ಬ್ಯಾರಿ ಮಕ್ಕಳು ಪಿಯುಸಿಯಲ್ಲಿ ಸಹ ಒಳ್ಳೆಯ ಅಂಕ ಪಡೆದು ಡಿಸ್ಟಿಂಕ್ಷನ್‌ನಲ್ಲಿ ತೇರ್ಗಡೆಯಾಗಿ ಇಂಜಿನಿಯರ್‌ಗಳಾದರು. ಡಾಕ್ಟರ್‌ಗಳಾದರು. ಫಾರ್ಮಶಿಸ್ಟ್‌ಗಳಾದರು. ಒಂದು ರೀತಿಯಲ್ಲಿ ಬ್ಯಾರಿಗಳಿಗೆ ವಿದ್ಯಾಭ್ಯಾಸದ ರುಚಿ ಸಿಕ್ಕಿತು. ಹೆಣ್ಣು ಮಕ್ಕಳು ಸಹ ಕಲಿಯಬೇಕು ಎಂಬ ಜಾಗೃತಿ ಉಂಟಾಯಿತು. ಈ ಬೆಳವಣಿಗೆ ಎಷ್ಟಾಗಿದೆ ಎಂದರೆ ಹೆಣ್ಣು ಮಕ್ಕಳಿಗೆ ಶಿಕ್ಷಣ ಕಡ್ಡಾಯ, ಅವರಿಗೆ ವಿದ್ಯಾಭ್ಯಾಸ ಕೊಡಲೇಬೇಕು ಎನ್ನುವ ಮನೋಭಾವ ಇಂದು ಮೂಡಿದೆ. ಇಂದು ನಮ್ಮ ಹೆಣ್ಣು ಮಕ್ಕಳೂ ಪದವೀಧರರಾಗುತ್ತಿದ್ದಾರೆ, ಡಾಕ್ಟರ್‌ಗಳಾಗುತ್ತಿದ್ದಾರೆ, ಇಂಜಿನಿಯರ್‌ಗಳಾಗುತ್ತಿದ್ದಾರೆ. ಇವೆಲ್ಲವೂ 70–80ರ ದಶಕದಲ್ಲಿ ಪ್ರಾರಂಭವಾದ ಆಂದೋಲನದ ಫಲಿತಾಂಶವಾಗಿದೆ. ಇವೆಲ್ಲವನ್ನೂ ನಾನೊಬ್ಬನೇ ಮಾಡಿದ್ದು ಎಂದು ನಾನು ಹೇಳುವುದಿಲ್ಲ. ಇಂತಹ ಒಂದು ಮನೋಭಾವ ಸೃಷ್ಟಿಸುವಲ್ಲಿ, ಭೂಮಿಕೆಯನ್ನು ನಿರ್ಮಿಸುವಲ್ಲಿ ನನ್ನದೂ ಒಂದು ಅಳಿಲು ಸೇವೆ ಇದೆ ಎಂದು ಮಾತ್ರ ಹೇಳಬಲ್ಲೆ.

'ಮೊಫ್' ಸಂಘಟನೆಯ ಸ್ಥಾಪನೆಯ ಸಂದರ್ಭದಲ್ಲಿ ಜಿಲ್ಲೆಯ ಹಲವು ಮುಸ್ಲಿಂ ಶಾಲೆಗಳ ಆಡಳಿತ ಮಂಡಳಿಯ ಮುಖ್ಯಸ್ಥರು ಬಹಳ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಅವರಲ್ಲಿ ಕೆಲವರ ಹೆಸರನ್ನು ನಾನಿಲ್ಲಿ ಉಲ್ಲೇಖಿಸಲೇಬೇಕು. ಬೈಕಂಪಾಡಿಯ ಹಿರಿಯ ಶಿಕ್ಷಣತಜ್ಞ ಪಿ.ಎ. ಖಾದರ್ ಕುಕ್ಕಾಡಿ, ಎಡಪದವು ಮುಹಮ್ಮದ್ ಬ್ಯಾರಿ, ಕೃಷ್ಣಾಪುರದ ಹಾಜಿ ಬಿ.ಎಸ್. ಉಮರಬ್ಬ, ಹಾಜಿ ಬಿ.ಎಂ. ಮಮ್ತಾಝ್ ಅಲಿ, ಬಿ.ಎ. ನಝೀರ್, ಎನ್.ಎಂ.ಪಿ.ಟಿ.ಯ ಮೈಯದ್ದಿ, ಉಳ್ಳಾಲದ ಯು.ಎ. ಕಾಸೀಂ, ಅಲ್ ಫುರ್ಖಾನ್‌ನ ಯು. ಮೊೖದಿನ್, ಜೋಕಟ್ಟೆಯ ಪಿ. ಮೂಸಬ್ಬ ಬ್ಯಾರಿ, ಮುಕ್ಕದ ಇದಿನಬ್ಬ ಮುಂತಾದವರು 'ಮೊಫ್'ನ ಯಶಸ್ಸಿಗಾಗಿ ಬಹಳಷ್ಟು ದುಡಿದಿದ್ದಾರೆ.

ಅಂದಿನ ಸರಕಾರದಲ್ಲಿ ನಾನು ಅಧಿಕಾರದಲ್ಲಿದ್ದಾಗ 'ಅರಿವು' ಎನ್ನುವ ಒಂದು ಸ್ಕೀಮನ್ನು ಪ್ರಾರಂಭಿಸಿದ್ದೆ. ಆ ಅರಿವು ಎನ್ನುವ ಸ್ಕೀಮನ್ನು ತರುವುದರಲ್ಲಿ ನನ್ನ

ಮಹತ್ತರ ಪಾತ್ರವಿದೆ. ಒಬ್ಬ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಸಿಇಟಿಯಲ್ಲಿ ಪಾಸಾಗಿ ಮೆಡಿಕಲ್ ಅಥವಾ ಇಂಜಿನಿಯರಿಂಗ್ ಸೀಟು ಸಿಕ್ಕಿದರೆ ಅವರಿಗೆ 'ಅರಿವು' ಯೋಜನೆಯ ಮೂಲಕ ನೇರವಾಗಿ ಶುಲ್ಕವನ್ನು ಪಾವತಿಸುವ ಯೋಜನೆ ಇದಾಗಿದೆ. ಅಲ್ಪಸಂಖ್ಯಾತ, ಆರ್ಥಿಕವಾಗಿ ಹಿಂದುಳಿದಿರುವ ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾಭ್ಯಾಸವನ್ನು ಮುಂದುವರಿಸಲು ಇದು ಅತ್ಯಂತ ಸಹಕಾರಿಯಾಗಿದೆ.

ದುಬೈಯ ಕರ್ನಾಟಕ ಸಂಘದವರು ಒಮ್ಮೆ ನನ್ನನ್ನು ಅವರ ವಾರ್ಷಿಕೋತ್ಸವ ಸಮಾರಂಭಕ್ಕೆ ಅಲ್ಲಿಗೆ ಆಹ್ವಾನಿಸಿದ್ದರು. ನಾನು ಅಲ್ಲಿಗೆ ಹೋಗಿಯೂ ಇದೇ ಶಿಕ್ಷಣದ ಬಗ್ಗೆ ಮಾತನಾಡಿದ್ದೆ. ನೀವೆಲ್ಲ ದುಬೈಗೆ ಬಂದಿದ್ದೀರಿ. ನಿಮ್ಮಲ್ಲಿ ಕೆಲವರಾದರೂ ಚೆನ್ನಾಗಿ ದುಡಿಯುತ್ತಿದ್ದೀರಿ. ನಿಮ್ಮ ಕೈಯಲ್ಲಿ ದುಡ್ಡಿದೆ. ಆದರೆ ಅದು ಸದುಪಯೋಗವಾಗಬೇಕು. ನಿಮಗಿರುವ ಒಳ್ಳೆಯ ಅವಕಾಶವೆಂದರೆ ನೀವು ನಿಮ್ಮ ನಿಮ್ಮ ಊರುಗಳಲ್ಲಿ ವಿದ್ಯಾಸಂಸ್ಥೆಗಳನ್ನು ಸ್ಥಾಪಿಸಿ. ನಿಮಗೆ ಬೇಕಾದ ಅನುಕೂಲತೆಗಳು, ಅನುಮತಿಗಳು ಕಲ್ಪಿಸಿಕೊಡಲು ಕರ್ನಾಟಕ ಸರಕಾರ ಸದಾ ಸಿದ್ಧವಿದೆ ಎಂದು ಹೇಳಿದ್ದೆ.

ಅದೇ ದಿನ ರಾತ್ರಿ 11 ಗಂಟೆಯ ಹೊತ್ತಿಗೆ ಒಬ್ಬರು ನಾನು ತಂಗಿದ್ದ ಹೋಟೆಲ್‌ಗೆ ಬಂದಿದ್ದರು. ನನ್ನ ಬಳಿ ದುಡ್ಡಿದೆ. ನಾನೊಂದು ಇಂಜಿನಿಯರಿಂಗ್ ಕಾಲೇಜು ಪ್ರಾರಂಭಿಸಬೇಕೆಂದಿದ್ದೇನೆ. ನಿಮ್ಮ ಸಹಾಯ ಬೇಕು ಎಂದರು. ನೀವು ಬೆಂಗಳೂರಿಗೆ ಬನ್ನಿ. ಸರಕಾರದ ವತಿಯಿಂದ ನಿಮಗೆ ಬೇಕಾದ ಸವಲತ್ತುಗಳನ್ನು ಕೊಡಿಸುತ್ತೇನೆ ಎಂದು ಹೇಳಿದೆ. ಕೆಲವೇ ದಿನಗಳಲ್ಲಿ ಅವರು ಬೆಂಗಳೂರಿಗೆ ಬಂದು ನನ್ನನ್ನು ಭೇಟಿಯಾದರು. ತಕ್ಷಣ ನಾನು ಶಿಕ್ಷಣ ಇಲಾಖೆಯ ನಿರ್ದೇಶಕರನ್ನು ಕರೆದು ಇವರನ್ನು ಪರಿಚಯಿಸಿ, ಇವರು ಇಂಜಿನಿಯರಿಂಗ್ ಕಾಲೇಜನ್ನು ಸ್ಥಾಪಿಸಲು ಇಷ್ಟಪಡುತ್ತಾರೆ. ಇವರಿಗೆ ಬೇಕಾದ ಎಲ್ಲಾ ಸಹಾಯವನ್ನು ಮಾಡಬೇಕೆಂದು ಸೂಚಿಸಿದೆ. ಫೈಲನ್ನು ನನಗೆ ಕಳುಹಿಸಿ, ನಾನು ಅನುಮತಿಯನ್ನು ನೀಡುತ್ತೇನೆ ಎಂದು ಹೇಳಿದೆ. ಅಂದು ನನ್ನ ಬಳಿಗೆ ಬಂದಿದ್ದವರು ಕೇರಳದ ಪ್ರಖ್ಯಾತ ಉದ್ಯಮಿ ಪಿ.ಎ. ಇಬ್ರಾಹೀಂ ಹಾಜಿಯವರು. ಇಂದು ಅವರ 'ಪಿ.ಎ. ಕಾಲೇಜ್ ಆಫ್ ಇಂಜಿನಿಯರಿಂಗ್' ಮಂಗಳೂರಿನ ನಡುಪದವು ಎಂಬಲ್ಲಿ ಅತ್ಯಂತ ಯಶಸ್ವಿಯಾಗಿ ನಡೆಯುತ್ತಿರುವ ಪ್ರತಿಷ್ಠಿತ ಶಿಕ್ಷಣ ಸಂಸ್ಥೆಗಳಲ್ಲೊಂದಾಗಿದೆ.

ಶಾಲೆಗಳು ಜಾತ್ಯತೀತವಾಗಿರಬೇಕು, ನಮ್ಮ ಶಾಲೆಗಳು ಸೆಕ್ಯುಲರ್ ಶಾಲೆಗಳಾಗಬೇಕು. ಹಿಂದೂಗಳ ಶಾಲೆಗೆ ಹಿಂದೂಗಳು ಮಾತ್ರ ಹೋಗುವುದು, ಮುಸ್ಲಿಮರ ಶಾಲೆಗೆ ಮುಸ್ಲಿಮರು ಮಾತ್ರ ಹೋಗುವುದು ತಪ್ಪು. ಅದಕ್ಕೆ ನಾನು ಹೇಳಿದ್ದು ಕ್ರಿಶ್ಚಿಯನ್ ಶಾಲೆಗಳಂತೆ ಆಗಬೇಕು ಎಂದು. ಚರ್ಚ್ ಶಾಲೆಗಳಲ್ಲಿ ಧಾರ್ಮಿಕ ವಿದ್ಯಾಭ್ಯಾಸವೂ ಇದೆ. ಆದರೆ ಅದು ಕ್ರಿಶ್ಚಿಯನ್ನರಿಗೆ ಮಾತ್ರ. ಕ್ರಿಶ್ಚಿಯನ್ ಶಾಲೆಗಳಲ್ಲಿ ಕಲಿಯಲು ಎಲ್ಲಾ ಜಾತಿಗಳವರೂ ಬರುತ್ತಾರೆ. ನಮ್ಮ ಎಲ್ಲ ಶಾಲೆಗಳೂ ಹಾಗೆ ಆಗಬೇಕು. ಮಸೀದಿ ಮತ್ತು ಮದ್ರಸಾಗಳ ಆವರಣದೊಳಗೆ ಶಾಲೆ ಮಾಡಿದರೆ ಅನ್ಯಧರ್ಮದವರು ಆ ಶಾಲೆಗೆ ಹೇಗೆ ಬರುವುದು? ಅವರು ಬರುವುದಿಲ್ಲ. ಹಾಗೆಯೇ ಶಾಲೆಗಳಿಗೆ ಅಲ್‌ಬದ್ರಿಯಾ,

ಇಸ್ಲಾಮಿಯಾ ಎಂದು ಹೆಸರಿಟ್ಟರೆ ಆ ಶಾಲೆಗಳಿಗೆ ಹಿಂದೂಗಳು ಬರಲು ಸಾಧ್ಯವೇ ಇಲ್ಲ. ನೀವು ಮಸೀದಿ–ಮದ್ರಸಾಗಳ ಆವರಣದ ಹೊರಗೆ ಶಾಲೆ ಮಾಡಿ. ಹಾಗೆಯೇ ಧಾರ್ಮಿಕ ಹೆಸರುಗಳಿಂದ ಗುರುತಿಸಿ ಕೊಳ್ಳಬೇಡಿ. ಈಗ ನೋಡಿ ಎಡಪದವಿನ ಐಡಿಯಲ್ ಶಾಲೆ, ಕೃಷ್ಣಾಪುರದ ಚೈತನ್ಯ ಶಾಲೆ, ಬೈಕಂಪಾಡಿಯ ಬರ್ಟ್ರಂಡ್ ರೆಸಲ್ ಶಾಲೆ ಇವೆಲ್ಲ ಮುಸ್ಲಿಮರೇ ನಡೆಸುತ್ತಿರುವ ಶಾಲೆಗಳು. ಈ ಶಾಲೆಗಳೆಲ್ಲ ಮಸೀದಿಯ ಆವರಣದಿಂದ ಹೊರಗಿರುವುದರಿಂದ ಇಲ್ಲಿಗೆ ಎಲ್ಲ ಧರ್ಮಗಳ, ಜಾತಿಗಳ ಮಕ್ಕಳೂ ಬರುತ್ತಾರೆ. ಇದು ನಮ್ಮ ಶಿಕ್ಷಣ ಸಂಸ್ಥೆಗಳ ಒಂದು ದೊಡ್ಡ ಸಮಸ್ಯೆ. ಈ ಬಗ್ಗೆ 'ಮೀಫ್'ನ ಮೀಟಿಂಗ್‌ನಲ್ಲಿ ನಾನು ಹಲವು ಬಾರಿ ಹೇಳಿದ್ದೇನೆ. ಮುಸ್ಲಿಂ ಶಾಲೆ ಎಂದು ನೀವು ಸಪರೇಟ್ ಮಾಡಬೇಡಿ. ಹಿಂದೂ, ಮುಸ್ಲಿಂ, ಕ್ರಿಶ್ಚಿಯನ್ ಮಕ್ಕಳೆಲ್ಲ ಒಟ್ಟಿಗೆ ಕಲೆತು ಓದುವ ಶಾಲೆ ಮಾಡಿ. ಇದರಿಂದ ಇನ್ನೊಬ್ಬರ ಧರ್ಮವನ್ನು, ಸಂಸ್ಕೃತಿಯನ್ನು ಪರಸ್ಪರ ಅರಿತುಕೊಳ್ಳಲು, ಎಳೆಯದರಲ್ಲೇ ಸೌಹಾರ್ದದ ಬದುಕನ್ನು ರೂಢಿಸಿಕೊಳ್ಳಲು ಸಹಾಯಕವಾಗುತ್ತದೆ ಎಂದು ನಾನು ಪ್ರಚಾರ ಮಾಡುತ್ತಲೇ ಬಂದಿದ್ದೇನೆ. 'ಮೀಫ್' ಮಹಾಸಭೆಯಲ್ಲಿ ಈ ಬಗ್ಗೆ ವಿವರವಾಗಿ ಹೇಳಿದ್ದೇನೆ.

ಮಸೀದಿ–ಮದ್ರಸಾಗಳ ಆವರಣದೊಳಗಿರುವ ಶಾಲೆಗಳಲ್ಲಿ ಶಾಲಾ ವಾರ್ಷಿಕೋತ್ಸವ ಸಂದರ್ಭಗಳಲ್ಲಿ ಹಾಡು, ನಾಟಕ, ನೃತ್ಯ, ಸಂಗೀತ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಮಾಡಲು ವಿದ್ಯಾರ್ಥಿಗಳಿಗೆ ಅಲ್ಲಿಯ ವ್ಯವಸ್ಥಾಪಕರು, ಧಾರ್ಮಿಕ ನಾಯಕರು ಬಿಡುತ್ತಿಲ್ಲ ಎಂಬ ಆರೋಪ ಕೂಡಾ ಇದೆ. ಇದು ತಪ್ಪು. ಎಳೆಯ ಮಕ್ಕಳನ್ನು ಸಾಂಸ್ಕೃತಿಕವಾಗಿ ಶ್ರೀಮಂತಗೊಳಿಸುವುದು ಕೂಡಾ ನಮ್ಮ ಜವಾಬ್ದಾರಿಯಾಗಿದೆ. ಇದೂ ಶಿಕ್ಷಣದ ಒಂದು ಅಂಗವಾಗಿದೆ. ಇಂದಿನ ಕಾಲದ ಅಗತ್ಯವೂ ಆಗಿದೆ. ಇದರಿಂದ ಮಕ್ಕಳ ಪ್ರತಿಭೆ ಹೊರಹೊಮ್ಮಲು, ಅರಳಲು, ಬೆಳೆಯಲು ಸಹಕಾರಿಯಾಗುತ್ತದೆ ಮತ್ತು ಸೌಹಾರ್ದ ಬದುಕಿಗೆ ಇದು ತುಂಬಾ ಅಗತ್ಯವೂ ಆಗಿದೆ.

ಇಲ್ಲಿ ನಾನು ಇನ್ನೊಂದು ವಿಷಯ ಹೇಳಬಯಸುತ್ತೇನೆ. ಮುಸ್ಲಿಮರು ನಡೆಸುವ ಈ ಶಾಲೆಗಳಲ್ಲಾಗಲೀ, ಮಸೀದಿ–ಮದ್ರಸಾಗಳ ಆವರಣದೊಳಗೆ ನಡೆಯುವ ಶಾಲೆಗಳಲ್ಲಾಗಲೀ ಅಲ್ಲಿಯ ಅಧ್ಯಾಪಕರಲ್ಲಿ ಶೇಕಡಾ 80–90 ಹಿಂದೂಗಳಾಗಿರುತ್ತಾರೆ. ಅಥವಾ ಅನ್ಯ ಜಾತಿ–ಧರ್ಮಗಳವರಾಗಿರುತ್ತಾರೆ. ಇದು ತುಂಬಾ ಸಂತೋಷದ ವಿಚಾರ. ಇನ್ನೂ ಒಂದು ಸಂತೋಷದ ವಿಷಯ ಏನೂ ಎಂದರೆ, ಮುಸ್ಲಿಂ ಹೆಣ್ಣುಮಕ್ಕಳು ಈಗ ಹೆಚ್ಚು ಹೆಚ್ಚು ವಿದ್ಯಾವಂತರಾಗುತ್ತಿದ್ದಾರೆ. ಇತ್ತೀಚೆಗೆ ನಾನು ಹಳ್ಳಿಯ ಒಂದು ಶಾಲೆಗೆ ಭೇಟಿ ನೀಡಿದ್ದೆ. ಆ ಶಾಲೆಯ ಹೆಸರು, ಊರು ನೆನಪಿಲ್ಲ. ಅದೂ ಮುಸ್ಲಿಮರು ನಡೆಸುವ ಶಾಲೆ. ಆ ಶಾಲೆಯ 14 ಟೀಚರ್‌ಗಳಲ್ಲಿ 12 ಮುಸ್ಲಿಂ ಟೀಚರ್‌ಗಳು. ನನಗೆ ಆಶ್ಚರ್ಯವಾಯಿತು. ಒಬ್ಬಳು ಟೀಚರನ್ನು ಕರೆದು ಕೇಳಿದೆ. "ನೀನು ಏನು ಓದಿದ್ದಿಯಮ್ಮಾ?" ಎಂದು. "ಬಿ.ಎಡ್" ಎಂದಳು. ಇದರರ್ಥ ಇತ್ತೀಚೆಗೆ ನಮ್ಮ ಹೆಣ್ಣುಮಕ್ಕಳು ಕಲಿಯುತ್ತಿದ್ದಾರೆ. ಶಿಕ್ಷಿತರಾಗುತ್ತಿದ್ದಾರೆ. ಕೆಲಸಕ್ಕೆ ಹೋಗಲು ತೊಡಗಿದ್ದಾರೆ

ಎಂದು. ಇಲ್ಲಿ ದುರಂತವೆಂದರೆ ಮುಸ್ಲಿಂ ಟೀಚರ್‌ಗಳು ಹೆಚ್ಚಾಗಿ ಮುಸ್ಲಿಂ ಶಾಲೆಗಳಿಗೆ ಕಲಿಸಲು ಹೋಗುತ್ತಿರುವುದು. ಹಾಗಾಗಬಾರದು. ಇಲ್ಲಿ ನಾನು ಹೇಳುವುದೇನೆಂದರೆ, ವಿದ್ಯಾರ್ಥಿಗಳಾಗಲೀ, ಟೀಚರ್‌ಗಳಾಗಲೀ ನಾವೆಲ್ಲ ಬೆರೆತು ಕಲಿಯಬೇಕು, ಕಲಿಸಬೇಕು, ಬಾಳಬೇಕು, ಬೆಳೆಯಬೇಕು. ಆಗ ಮಾತ್ರ ನಾವು ಜಾತ್ಯತೀತರಾಗಿ ಸೌಹಾರ್ದದಿಂದ, ಅಣ್ಣ–ತಮ್ಮಂದಿರಂತೆ ಬದುಕಲು ಸಾಧ್ಯ.

ಆ ಶಾಲೆಯಲ್ಲಿ ಒಬ್ಬ ಮುಸ್ಲಿಮೇತರ ವಿದ್ಯಾರ್ಥಿ ಇದ್ದ. ಮೂಲ್ಯ ಜಾತಿಯ ಹುಡುಗ. ತುಂಬಾ ಬಡವ. ಒಳ್ಳೆಯ ಮಾರ್ಕ್ ತೆಗೆದು ಫಸ್ಟ್ ಕ್ಲಾಸ್ ಪಾಸಾಗಿದ್ದ. ನಾನು ಅವನ ಹೆತ್ತವರನ್ನು ಶಾಲೆಗೆ ಕರೆಸಿದೆ. ಅವರಲ್ಲಿ "ಅವನಿಗೆ ಕಲಿಯುವ ಆಸಕ್ತಿ ಇದೆ ಎಷ್ಟು ಕಷ್ಟವಾದರೂ ಸರಿ ಅವನಿಗೆ ಒಳ್ಳೆಯ ವಿದ್ಯೆ ಕೊಡಬೇಕು" ಎಂದು ಸೂಚಿಸಿದೆ. ಯಾಕೆಂದರೆ ನನಗೆ ಅಷ್ಟೊಂದು ಖುಷಿಯಾಗಿತ್ತು.

ಮುಸ್ಲಿಮರು ಆಡಳಿತ ನಡೆಸುವ ಶಾಲೆಗಳಲ್ಲಿ ಕ್ವಾಲಿಟಿ ಶಿಕ್ಷಣ ದೊರೆಯುವುದಿಲ್ಲ ಎಂಬ ತಪ್ಪು ಕಲ್ಪನೆ ಸಾರ್ವತ್ರಿಕವಾಗಿದೆ. ಇದನ್ನು ಹೋಗಲಾಡಿಸಬೇಕು. ಇಂದು ನಮ್ಮ ಬಗ್ಗೆ, ನಮ್ಮ ಧರ್ಮದ ಬಗ್ಗೆ, ನಮ್ಮ ಸಮುದಾಯದ ಬಗ್ಗೆ ಸಂಶಯ, ತಪ್ಪು ಕಲ್ಪನೆಗಳು ಹರಡಲು ಕಾರಣವೇ ನಾವು ಸಪರೇಟಾಗಿರುವುದು. ಪರಸ್ಪರ ಬೆರೆತು ಬದುಕಿದರೆ ಇಂತಹ ಸಮಸ್ಯೆಗಳು ಬರುವುದಿಲ್ಲ. ಬೆರೆತು ಬದುಕಲು ಬೇಕಾದ ಪೂರಕ ವಾತಾವರಣವನ್ನು ನಿರ್ಮಿಸಬೇಕಾದದ್ದು ನಾವೇ ತಾನೆ. ಈ ಬಗ್ಗೆ ನಾವೆಲ್ಲ ಸೇರಿ ಅವಿರತ ಶ್ರಮಿಸಬೇಕಿದೆ.

ಇಲ್ಲಿರುವ ಕೆಲವು ಕೋಮುವಾದಿ ಸಂಘಟನೆಗಳು ಕೂಡಾ ನಮ್ಮನ್ನು ಪ್ರತ್ಯೇಕಿಸಲು ಪ್ರಯತ್ನಿಸುತ್ತಿವೆ. ಒಬ್ಬ ಮುಸ್ಲಿಂ ವಿದ್ಯಾರ್ಥಿ ಹಿಂದೂ ವಿದ್ಯಾರ್ಥಿಯ ಜೊತೆ ಬೆರೆಯುವುದು ಬಿಡಿ, ಮಾತನಾಡುವುದನ್ನು ಕೂಡಾ ಇವರು ವಿರೋಧಿಸುತ್ತಾರೆ. 'ಬ್ಯಾರಿಗಳ ಜೊತೆ ಸೇರಿದರೆ ಹಾಳಾಗ್ತಾರೆ, ಕಲಿಯುವುದಿಲ್ಲ' ಎಂಬಂತಹ ಸುಳ್ಳುಗಳನ್ನು ಮುಗ್ಧ ಹಿಂದೂ ಮಹಿಳೆಯರ ತಲೆಗೆ ತುಂಬಿಸಿ ನಮ್ಮನ್ನು ಸಮಾಜದಿಂದ ಬೇರ್ಪಡಿಸುವ ಒಂದು ಷಡ್ಯಂತ್ರ ಕೂಡಾ ನಡೆಯುತ್ತಿದೆ. ನಮ್ಮನ್ನು ಒಂಟಿಯಾಗಿಸುವ, ದ್ವೀಪವಾಗಿಸುವ ಇಂತಹ ಷಡ್ಯಂತ್ರಗಳ ಬಗ್ಗೆ ನಾವು ಬಹಳ ಎಚ್ಚರದಿಂದಿರಬೇಕು.

# ಬ್ಯಾರಿ ಆಂದೋಲನ

ಈ ಬ್ಯಾರಿ ಆಂದೋಲನ ಎನ್ನುವ ಪದವನ್ನು ನಾವೇ ನಮ್ಮ ಚಟುವಟಿಕೆ ಹಾಗೂ ಬೆಳವಣಿಗೆಗಳನ್ನು ಗುರುತಿಸಿಕೊಳ್ಳಲು ಸೃಷ್ಟಿಸಿಕೊಂಡ ಪದ. ಹಂತ ಹಂತವಾಗಿ ಬ್ಯಾರಿ ಸಮುದಾಯದಲ್ಲಿ ಮೂಡಿದ ಜಾಗೃತಿ ಬೇರೆ ಬೇರೆ ರೂಪಗಳನ್ನು ಪಡೆಯುತ್ತಾ ಬೆಳೆದು ಬಂದು ಆಂದೋಲನದ ರೂಪವನ್ನು ತಾಳಿತು. 1987ರಲ್ಲಿ ಬೆಂಗಳೂರಿನಲ್ಲಿ ಸ್ಥಾಪನೆಗೊಂಡ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್‌ನ ಚಟುವಟಿಕೆಗಳಿಂದ ಹಿಡಿದು 2007ರಲ್ಲಿ ಘೋಷಣೆಯಾದ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯವರೆಗೆ ನಡೆದ ಎಲ್ಲ ಬೆಳವಣಿಗೆಗಳು ಈ ಬ್ಯಾರಿ ಆಂದೋಲನದ ಅವಧಿಯಾಗುತ್ತದೆ.

ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಬೆಂಗಳೂರಿನಲ್ಲಿ 1987ರಲ್ಲಿ ಸ್ಥಾಪನೆಯಾಗಿದ್ದರೂ ನಾನು ಅದರ ಸಂಪರ್ಕಕ್ಕೆ ಬಂದದ್ದು 1989ರಲ್ಲಿ. ನಾನು ತಿಳಿದಂತೆ 1987ರಲ್ಲಿ ನಡೆದ ಒಂದು ಘಟನೆಯ ಹಿನ್ನೆಲೆಯಲ್ಲಿ ಈ ಅಸೋಸಿಯೇಶನ್ ಸ್ಥಾಪನೆಯಾಯಿತು. ಉದ್ಯೋಗ, ವ್ಯಾಪಾರ ಇತ್ಯಾದಿ ಕಾರಣಗಳಿಗೆ ಬೆಂಗಳೂರಿನಲ್ಲಿ ಅನೇಕ ಬ್ಯಾರಿ ಕುಟುಂಬಗಳು ವಾಸವಾಗಿದ್ದರೂ ಸಹ ಅವರಿಗೆ ಪರಸ್ಪರ ಪರಿಚಯ, ಸಂಪರ್ಕದ ಬಹಳ ಕೊರತೆ ಇತ್ತು. ಒಮ್ಮೆ ಬ್ಯಾರಿ ಕುಟುಂಬದ ಓರ್ವ ವ್ಯಕ್ತಿಯ ಮರಣವಾದಾಗ ಅವರ ಮೃತಶರೀರವನ್ನು ಊರಿಗೆ ಕಳುಹಿಸಿಕೊಡುವವರೆಗೂ ಬೆಂಗಳೂರಿನಲ್ಲಿದ್ದ ಹೆಚ್ಚಿನ ಬ್ಯಾರಿಗಳಿಗೆ ಅವರು ಮರಣ ಹೊಂದಿದ ವಿಷಯವೇ ತಿಳಿದಿರಲಿಲ್ಲ. ಅನೇಕ ದಿನಗಳ ನಂತರ ಇದು ಎಲ್ಲರಿಗೂ ತಿಳಿದಾಗ ಎಲ್ಲರೂ ಪರಸ್ಪರ ಸಂಪರ್ಕದಲ್ಲಿರಬೇಕು. ಒಬ್ಬರು ಇನ್ನೊಬ್ಬರ ಸುಖ–ಕಷ್ಟಗಳಿಗೆ ಸ್ಪಂದಿಸಬೇಕು ಎನ್ನುವ ಸಣ್ಣ ಉದ್ದೇಶ ಇಟ್ಟುಕೊಂಡು ಕೆಲವರು ಒಂದು ಕಡೆ ಸೇರಿ ಚರ್ಚೆ ನಡೆಸಿದರು.

ಆಗ ಎಂ. ಬ್ಯಾರಿ (ಮುಹಮ್ಮದ್ ಬ್ಯಾರಿ)ಯವರು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಲಾಟರಿ ವಿಭಾಗದ ನಿರ್ದೇಶಕರಾಗಿದ್ದರು. ಅವರ ಸಮ್ಮುಖದಲ್ಲಿ ಎಂ.ಎಂ. ಕುರೈಶಿ, ನೂರಿ ಸಾಹೇಬ್, ಸೈಯದ್ ಮುಹಮ್ಮದ್ ಬ್ಯಾರಿ, ಅತ್ತೂರು ಚಾಯಬ್ಬ, ಹುಸೈನ್ ಬ್ಯಾರಿ, ಕೆ.ಎಂ. ಶೇಕಬ್ಬ, ಎ.ಬಿ. ಬಜಾಲ್, ಆಬಿದ್ ಬ್ಯಾರಿ ಇಂತಹವರೆಲ್ಲ ಸೇರಿ ಎಂ. ಬ್ಯಾರಿಯವರ ಮಾರ್ಗದರ್ಶನದಲ್ಲಿ ಎಂ.ಎಂ. ಕುರೈಶಿಯವರನ್ನು ಅಧ್ಯಕ್ಷರನ್ನಾಗಿ ಮಾಡಿಕೊಂಡು ಒಂದು ಸಂಘವನ್ನು ಸ್ಥಾಪಿಸಿದರು. ಅನಂತರ ಈ ಸಂಘಕ್ಕೆ ಅಗತ್ಯವಾದ ಬೈಲಾವನ್ನು ತಯಾರಿಸಿ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್ ಎಂದು ಆ ಸಂಘಕ್ಕೆ ಹೆಸರಿಟ್ಟು ವ್ಯವಸ್ಥಿತವಾಗಿ ಕಾರ್ಯಚಟುವಟಿಕೆಗಳನ್ನು ಪ್ರಾರಂಭಿಸಿದರು.

1989ರಲ್ಲಿ ಈ ಸಂಘದ ಒಂದು ಕಾರ್ಯಕ್ರಮಕ್ಕೆ ವೀರಪ್ಪ ಮೊಯ್ಲಿ ಅವರ ಜೊತೆಗೆ ನನ್ನನ್ನೂ ಸಹ ಓರ್ವ ಅತಿಥಿಯಾಗಿ ಆಹ್ವಾನಿಸಿದ್ದರು. ಆ ಸಂದರ್ಭದಲ್ಲಿ ನನಗೆ ಇವರೆಲ್ಲರ ಪರಿಚಯವಾಯಿತು. ಇವರ ಕಾರ್ಯಚಟುವಟಿಕೆಗಳು ತುಂಬಾ ಖುಷಿಕೊಟ್ಟಿತು. ಅನಂತರ ನಾನು ಸಂಪೂರ್ಣವಾಗಿ ಇವರೊಂದಿಗೆ ತೊಡಗಿಸಿಕೊಂಡೆ. ಇವರ ಯಾವುದೇ ಕಾರ್ಯಕ್ರಮಗಳಿದ್ದರೂ ಏನೇ ವಿಚಾರಗಳಿದ್ದರೂ ಈಗಲೂ ನನ್ನನ್ನು ಕರೆದು ಅಥವಾ ಭೇಟಿಯಾಗಿ ಚರ್ಚಿಸಿ, ನನ್ನ ಸಲಹೆ ಸೂಚನೆಗಳನ್ನು ಪಡೆದು ನನಗೆ ಬಹಳ ಗೌರವ ಕೊಡುತ್ತಾರೆ.

1994ರಲ್ಲಿ ಉಮರ್ ಟೀಕೆ ಸಂಘದ ಅಧ್ಯಕ್ಷರಾಗಿದ್ದರು. ಅದೇ ಸಂದರ್ಭದಲ್ಲಿ ವೀರಪ್ಪ ಮೊಯ್ಲಿ ಅವರು ಕರ್ನಾಟಕದ ಮುಖ್ಯಮಂತ್ರಿ ಆಗಿದ್ದರು. ಬೆಂಗಳೂರಿನ ಪ್ಯಾಲೇಸ್ ಗ್ರೌಂಡ್ ಮೈದಾನದಲ್ಲಿ ಒಂದು ಮದುವೆ ಕಾರ್ಯಕ್ರಮ ನಡೆದಾಗ ಅಲ್ಲಿ ಸೇರಿದ್ದ ಉಮರ್ ಟೀಕೆ, ಚಾಯಬ್ಬ, ಅಹ್ಮದ್ ಬಾವಾ, ಸೈಯದ್ ಮುಹಮ್ಮದ್ ಬ್ಯಾರಿ ಮತ್ತು ಮಂಗಳೂರಿನ ಮಾಜಿ ಮೇಯರ್ ಅಬ್ದುಲ್ ಖಾದರ್ ಹಾಜಿ ಇವರೆಲ್ಲ ಅಲ್ಲಿ ನನ್ನನ್ನು ಭೇಟಿಯಾಗಿ 'ಈಗ ವೀರಪ್ಪ ಮೊಯ್ಲಿ ಅವರು ಮುಖ್ಯಮಂತ್ರಿಯಾಗಿದ್ದಾರೆ. ನಾವು ಈಗ ಒಂದು ದೊಡ್ಡ ಮಟ್ಟದ ಸಭೆಯನ್ನು ಮಾಡಿ ಮೊಯ್ಲಿ ಅವರನ್ನು ಆಹ್ವಾನಿಸೋಣ ಮತ್ತು ಈ ಅವಕಾಶವನ್ನು ಉಪಯೋಗಿಸಿ ಸರಕಾರದಿಂದ ನಮ್ಮ ಸಂಘಕ್ಕೆ ಒಂದು ಬಿಡಿಎ ಸೈಟನ್ನು ಕೇಳೋಣ, ಖಂಡಿತ ನಮಗೆ ಸಿಗಬಹುದು' ಎಂದು ಹೇಳಿದರು. ಆದರೆ ಕಾರ್ಯಕ್ರಮ ಏನು ಇಡುವುದು ಎಂಬುದು ಪ್ರಶ್ನೆಯಾಗಿತ್ತು. ಆಗ ನಮಗೆ ಹೊಳೆದದ್ದು ಲಕ್ಷದ್ವೀಪದಿಂದ ಲೋಕಸಭಾ ಸದಸ್ಯರಾಗಿ ಕೇಂದ್ರ ಸರಕಾರದಲ್ಲಿ ಸಚಿವರಾಗಿದ್ದ ಮಂಗಳೂರು ಮೂಲದ ಪಿ.ಎಂ. ಸಯೀದ್ ಅವರಿಗೆ ಒಂದು ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಂಡರೆ ಅದಕ್ಕೆ ಮುಖ್ಯಮಂತ್ರಿ ವೀರಪ್ಪ ಮೊಯಿಲಿ ಅವರನ್ನು ಆಹ್ವಾನಿಸಲು ಸಾಧ್ಯವಾಗುತ್ತದೆ. ಅವರು ಖಂಡಿತಾ ಬಂದೇ ಬರುತ್ತಾರೆ ಎಂಬುದು. ಇದು ಎಲ್ಲರಿಗೂ ಇಷ್ಟವಾಯಿತು.

ಬೆಂಗಳೂರಿನ ಮಮ್ಮುಂಞಿ ಹಾಜಿ ಎಂಬವರು ಪಿ.ಎಂ. ಸಯೀದ್ ಅವರ ನಿಕಟವರ್ತಿಯಾಗಿದ್ದರು. ಅವರ ಮೂಲಕ ನಾವು ಪಿ.ಎಂ. ಸಯೀದ್ ಅವರನ್ನು

ಸಂಪರ್ಕಿಸಿದಾಗ ಅವರು ಬರಲು ಒಪ್ಪಿಕೊಂಡರು. ಅನಂತರ ವೀರಪ್ಪ ಮೊಯಿಲಿ ಅವರಿಗೆ ಆಪ್ತರಾಗಿದ್ದ ರಮಾನಾಥ ರೈ, ಅಬ್ದುಲ್ ಮಜೀದ್ ಸೂರಲ್ಪಾಡಿ, ಮೇಯರ್ ಖಾದರ್ ಹಾಜಿ ಇವರನ್ನೆಲ್ಲ ಕರೆದುಕೊಂಡು ವೀರಪ್ಪ ಮೊಯಿಲಿ ಅವರ ಬಳಿಗೆ ಹೋಗಿ ಆಹ್ವಾನಿಸಿದಾಗ ಅವರು ಸಹ ಅತಿಥಿಯಾಗಿ ಬರಲು ಒಪ್ಪಿದರು.

ಈ ಕಾರ್ಯಕ್ರಮ ಮಂಗಳೂರಿನ ಅನೇಕ ಬ್ಯಾರಿ ಮುಖಂಡರನ್ನು ಒಂದುಗೂಡಿಸಲು ಬಹಳ ಸಹಕಾರಿಯಾಯಿತು. ಮಂಗಳೂರಿನಿಂದ ಬಿ. ಅಹಮದ್ ಹಾಜಿ ತುಂಬೆ, ಹಸನ್ ಹಾಜಿ, ಉಳ್ಳಾಲ ದರ್ಗಾ ಅಧ್ಯಕ್ಷ ಇಬ್ರಾಹೀಂ ಹಾಜಿ ಇಂತಹ ಅನೇಕ ಹಿರಿಯ ಬ್ಯಾರಿ ಮುಖಂಡರು; ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಿಂದಲೂ ಅನೇಕರು ಬಂದರು. ದಿನಾಂಕ 28–8–1994ರಂದು ಬೆಂಗಳೂರಿನ ಕಬ್ಬನ್ ಪಾರ್ಕ್‌ನಲ್ಲಿರುವ ಎನ್‌ಜಿಓ ಸಭಾಂಗಣದಲ್ಲಿ ನೆರವೇರಿದ ಈ ಕಾರ್ಯಕ್ರಮದಿಂದಾಗಿ ಸಂಘಟನೆಗೆ ಒಂದು ಶಕ್ತಿ ಬಂತು. ಈ ಇಡೀ ಕಾರ್ಯಕ್ರಮವನ್ನು ನಾವು ಒಂದು ಸೌಹಾರ್ದ ಕೂಟದ ರೂಪದಲ್ಲಿ ಏರ್ಪಡಿಸಿದ್ದೆವು. ತುಳುಕೂಟ, ಜೈನ್ಸ್, ಬಂಟ್ಸ್, ಬಿಲ್ಲವ, ಮೊಗವೀರ ಇವರನ್ನೆಲ್ಲ ಆಹ್ವಾನಿಸಿದ್ದೆವು.

ಸೌಹಾರ್ದ ಭವನದ ಪ್ರಥಮ ಹೆಜ್ಜೆ ಇದಾಗಿತ್ತು. ಸೌಹಾರ್ದ ಭವನ ನಿರ್ಮಾಣಕ್ಕೆ ಸರಕಾರದ ನಿವೇಶನಕ್ಕಾಗಿ ನಮ್ಮ ಬೇಡಿಕೆಯನ್ನು ಮುಂದಿಟ್ಟೆವು. ಆದರೆ ವೀರಪ್ಪ ಮೊಯಿಲಿ ಅವರ ಕಾಲದಲ್ಲಿ ನಾವು ಎಷ್ಟೇ ಪ್ರಯತ್ನಪಟ್ಟರೂ ನಿವೇಶನವನ್ನು ಪಡೆಯಲು ಆಗಲೇ ಇಲ್ಲ.

ಈ ಸಮಾರಂಭದಲ್ಲಿ ಭಾಗವಹಿಸಿ ಸನ್ಮಾನವನ್ನು ಸ್ವೀಕರಿಸಿದ ಪಿ.ಎಂ. ಸಯೀದ್ ಅವರು ಬಹಳ ಸಂತೋಷಗೊಂಡಿದ್ದರು. ಅವರು ದೆಹಲಿಗೆ ಹಿಂದಿರುಗಿದ ನಂತರ ಸಂಘಕ್ಕೆ ಪತ್ರವೊಂದನ್ನು ಬರೆದು ನಾನು ನನಗೆ ಗೊತ್ತಿರುವ ಭಾಷೆಗಳ ಪಟ್ಟಿಯಲ್ಲಿ ಬ್ಯಾರಿ ಭಾಷೆಯನ್ನೂ ಬರೆಯುವುದರ ಮೂಲಕ 'ಬ್ಯಾರಿ' ಶಬ್ದವನ್ನು ಪ್ರಪ್ರಥಮ ಬಾರಿ ಪಾರ್ಲಿಮೆಂಟಿನ ದಾಖಲೆಗೆ ಸೇರಿಸಿದೆ ಎಂದು ತಿಳಿಸಿದರು.

ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮಂತ್ರಿ ಮಂಡಳದಲ್ಲಿ ನಾನು ಸಚಿವನಾಗಿದ್ದಾಗ 1997ರಲ್ಲಿ ದಿ ಬ್ಯಾರೀಸ್ ವೆಲ್‌ಫೇರ್ ಅಸೋಸಿಯೇಶನ್‌ಗೆ ಎಚ್.ಬಿ.ಆರ್. ಲೇಔಟ್ ಪಕ್ಕದಲ್ಲಿ ಒಂದು ಒಳ್ಳೆಯ 28,000 ಚದರ ಅಡಿ ವಿಶಾಲವಾದ ಸೈಟು ಮಂಜೂರಾಯಿತು. ಈ ಸಂದರ್ಭದಲ್ಲಿ ಈ ನಿವೇಶನ ಪಡೆಯಲು ಸೈಯದ್ ಮುಹಮ್ಮದ್ ಬ್ಯಾರಿ ಮತ್ತು ಪ್ರೆಸಿಡೆನ್ಸಿ ಸ್ಕೂಲಿನ ನಿಸಾರ್ ಅಹಮದ್ ಬಹಳ ಶ್ರಮ ವಹಿಸಿದ್ದರು.

1996ರಲ್ಲಿ ಡಾ. ಮಕ್ಸೂದ್ ಅಹಮದ್ ಅಧ್ಯಕ್ಷರಾಗಿದ್ದಾಗ ಸಂಘದ ದಶಮಾನೋತ್ಸವವನ್ನು ಆಚರಿಸುವ ಯೋಜನೆಯನ್ನು ಹಮ್ಮಿಕೊಳ್ಳಲಾಯಿತು. ಆಗ ಸಚಿವನಾಗಿದ್ದ ನಾನು ನನ್ನಿಂದ ಸಾಧ್ಯವಾದ ಎಲ್ಲ ಸಹಕಾರವನ್ನು ನೀಡಿದೆ. ನನ್ನನ್ನು ಸಮ್ಮೇಳನ ಸ್ವಾಗತ ಸಮಿತಿಯ ಚೇರ್‌ಮೆನ್ ಮಾಡಿದ್ದರು. ಸೈಯದ್ ಮುಹಮ್ಮದ್ ಬ್ಯಾರಿ, ಬಿ.ಎ. ಹಸನಬ್ಬ, ಜಿ.ಎ. ಬಾವ ವೈಸ್ ಚೇರ್‌ಮೆನ್ ಆಗಿದ್ದರು. ಉಮರ್ ಟೀಕೆ

ಸೆಕ್ರೆಟರಿ ಜನರಲ್ ಆಗಿದ್ದರು. ಇವರೆಲ್ಲರ ಜೊತೆಗೆ ಸಂಘದ ಪ್ರತಿಯೊಬ್ಬ ಸದಸ್ಯನೂ ಬಹಳ ಉತ್ಸಾಹದಿಂದ ದುಡಿದಿದ್ದರು. ಎರಡು ದಿನಗಳ ಪ್ರಪ್ರಥಮ ಬ್ಯಾರಿ ಸಮ್ಮೇಳನ ಬೆಂಗಳೂರಿನ ಅರಮನೆ ಮೈದಾನದಲ್ಲಿ 1997ರ ಡಿಸೆಂಬರ್ ತಿಂಗಳ ದಿನಾಂಕ 13–14ರಂದು ಅತ್ಯಂತ ಯಶಸ್ವಿಯಾಗಿ ನೆರವೇರಿತು.

ಸಮ್ಮೇಳನದ ಉದ್ಘಾಟನೆಯನ್ನು ಕರ್ನಾಟಕದ ಆಗಿನ ರಾಜ್ಯಪಾಲರಾದ ಖುರ್ಷಿದ್ ಆಲಂ ಖಾನ್ ನೆರವೇರಿಸಿದ್ದರು. ಸಮಾರೋಪ ಸಮಾರಂಭಕ್ಕೆ ಆಗಿನ ಮುಖ್ಯಮಂತ್ರಿ ಜೆ.ಎಚ್. ಪಟೇಲರು ಆಗಮಿಸಬೇಕಾಗಿತ್ತು. ಆದರೆ ಅನಿವಾರ್ಯ ಕಾರಣಗಳ ಹಿನ್ನೆಲೆಯಲ್ಲಿ ಅವರ ಬದಲಿಗೆ ಸ್ಪೀಕರ್ ರಮೇಶ್ ಕುಮಾರ್ ಅವರು ಭಾಗವಹಿಸಿದ್ದರು.

ಈ ಸಮ್ಮೇಳನ ಇಡೀ ಬ್ಯಾರಿ ಸಮುದಾಯದ ಯೋಚನಾ ದಿಕ್ಕನ್ನೇ ಬದಲಾಯಿಸಿತು. ಇಡೀ ಕರ್ನಾಟಕದ ಬ್ಯಾರಿಗಳನ್ನೇ ಇದು ಭಾವನಾತ್ಮಕವಾಗಿ ಒಂದುಗೂಡಿಸಿತು ಎಂದರೂ ತಪ್ಪಾಗಲಾರದು. ಸಮ್ಮೇಳನದ ಹಿನ್ನೆಲೆಯಲ್ಲಿ ದಕ್ಷಿಣ ಕನ್ನಡ, ಚಿಕ್ಕಮಗಳೂರು, ಕೊಡಗು ಜಿಲ್ಲೆಗಳಾದ್ಯಂತ ಪ್ರವಾಸ ಮಾಡಿದ್ದ ಸಂಘದ ಪದಾಧಿಕಾರಿಗಳು ಅಲ್ಲಲ್ಲಿ ಸಂಘದ ಘಟಕಗಳನ್ನು ಸ್ಥಾಪಿಸಿ ಜನಜಾಗೃತಿ ಮೂಡಿಸುವಲ್ಲಿ ಅತ್ಯಂತ ಯಶಸ್ವಿಯಾಗಿದ್ದರು.

ಒಂದು ಕಡೆ ಬ್ಯಾರಿ ಸಮುದಾಯದ ಹೆಸರಾಂತ ಉದ್ಯಮಿಗಳಾದ ಬಿ. ಅಹಮದ್ ಹಾಜಿ ತುಂಬೆ, ಯೇನೆಪೋಯ ಅಬ್ದುಲ್ಲಾ ಕುಂಞಿ, ಭಟ್ಕಳ ಇಬ್ರಾಹೀಮ್ ಹಾಜಿ, ಹಸನ್ ಹಾಜಿ, ಉಳ್ಳಾಲ ದರ್ಗಾದ ಅಧ್ಯಕ್ಷರಾದ ಇಬ್ರಾಹೀಮ್ ಹಾಜಿ, ಮೇಯರ್ ಅಬ್ದುಲ್ ಖಾದರ್ ಹಾಜಿ ಮುಂತಾದವರು ಸಮ್ಮೇಳನದಲ್ಲಿ ಭಾಗವಹಿಸಿದರೆ ಮತ್ತೊಂದು ಕಡೆ ಅನೇಕ ಬ್ಯಾರಿ ಬರಹಗಾರರು, ಸಾಹಿತಿಗಳು, ಕವಿಗಳು, ಕಲಾವಿದರು ಒಂದುಗೂಡಿ, ಈ ಸಮ್ಮೇಳನ ಒಂದು ಅಭೂತಪೂರ್ವ ಜನಾಂದೋಲನಕ್ಕೆ ನಾಂದಿಯಾಯಿತು.

ದೊಡ್ಡ ಬಿರುಗಾಳಿಯ ನಂತರ ಮೌನ ಆವರಿಸುವಂತೆ ಈ ಬೃಹತ್ ಸಮ್ಮೇಳನದ ನಂತರ ದಿ ಬ್ಯಾರೀಸ್ ವೆಲ್ಫೇರ್ ಅಸೋಸಿಯೇಶನ್ ಸ್ತಬ್ಧವಾಯಿತು. ಸಮ್ಮೇಳನದ ನಂತರ ಎರಡು ವರ್ಷಗಳ ಅವಧಿಗೆ ಸೈಯದ್ ಮುಹಮ್ಮದ್ ಬ್ಯಾರಿ ಅವರು ಅಧ್ಯಕ್ಷರಾಗಿದ್ದರೂ ಸಹ ಹೆಚ್ಚಿನ ಚಟುವಟಿಕೆಗಳೇನೂ ನಡೆಯಲಿಲ್ಲ. ಈ ಮಧ್ಯೆ ಸಂಘಕ್ಕೆ ಮಂಜೂರಾಗಿದ್ದ ನಿವೇಶನ ಅಲ್ಲಿನ ಕೆಲವು ಪ್ರಭಾವಿ ಸ್ಥಳೀಯರ ಪಾಲಾಯಿತು. ನಿವೇಶನ ಹೀಗೆ ನಮ್ಮ ಕೈತಪ್ಪಿ ಹೋಯಿತು.

ಬಿ.ಎಂ. ಫಾರೂಕ್ 2005ರಲ್ಲಿ ಅಧ್ಯಕ್ಷರಾದ ಬಳಿಕ ಮತ್ತೊಮ್ಮೆ ಸಂಘದ ಚಟುವಟಿಕೆಗಳು ಪುನರಾರಂಭವಾಯಿತು. ಆಗ ಬಿ.ಎಂ. ಫಾರೂಕ್ ಓರ್ವ ಉದ್ಯಮಿಯಾಗಿ ಮೇಲೆ ಬರುತ್ತಿದ್ದ ಸಮಯ. ಅಲ್ಲಿಯವರೆಗೂ ಸಂಘದ ಸಂಪರ್ಕದಲ್ಲಿ ಹೆಚ್ಚಾಗಿ ಕಾಣಿಸಿಕೊಂಡಿರದ ಫಾರೂಕ್, ಹೀಗೆ ಒಮ್ಮೆ ಒಂದು ಮಹಾಸಭೆಗೆ ಬಂದಿದ್ದಾಗ ಎಲ್ಲರೂ ಅವರನ್ನೇ ಹಿಡಿದು ಸಂಘದ ಅಧ್ಯಕ್ಷರನ್ನಾಗಿ ಮಾಡಿದ್ದರು. ಅನಂತರ ಸಂಘದ ಕಾರ್ಯಕ್ರಮಗಳೆಲ್ಲ ದೊಡ್ಡ ರೀತಿಯಲ್ಲಿ, ಸಂಭ್ರಮವಾಗಿ ನಡೆಯತೊಡಗಿತು. ಅವಾರ್ಡ್ ಕಾರ್ಯಕ್ರಮಗಳಿಗೆ ಹೊಸ ಕಳೆ ಬಂತು.

ಈ ಉತ್ಸಾಹದಲ್ಲಿರುವಾಗಲೇ ಕಳೆದುಕೊಂಡ ನಿವೇಶನವನ್ನು ಮರಳಿ ಪಡೆಯುವ ಪ್ರಕ್ರಿಯೆ ಪ್ರಾರಂಭವಾಯಿತು. ಅಹಮದ್ ಬಾವಾ ಬಜಾಲ್, ಜಿ.ಎ. ಬಾವಾ, ನ್ಯಾಯವಾದಿ ಉಸ್ಮಾನ್ ಇವರೆಲ್ಲ ಸೇರಿ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಬಹಳಷ್ಟು ಸಮಯ ನಡೆದ ನ್ಯಾಯ ಹೋರಾಟದಲ್ಲಿ ಕೊನೆಗೂ ಜಯ ಸಿಕ್ಕಿತು. ಕರ್ನಾಟಕ ಹೈಕೋರ್ಟ್ ತನ್ನ ತೀರ್ಪನ್ನು ಪ್ರಕಟಿಸಿ ಸಂಘಕ್ಕೆ ಬದಲಿ ನಿವೇಶನವನ್ನು ನೀಡಬೇಕು ಎಂದು ಆದೇಶ ನೀಡಿತು. ಆಗ ಜಿ.ಎ. ಬಾವಾ ಅವರು ಸಂಘದ ಅಧ್ಯಕ್ಷರಾಗಿದ್ದರು. ಆಗಲೂ ನಿವೇಶನದ ವಿಚಾರದಲ್ಲಿ, ಹಣ ಕಟ್ಟುವ ವಿಚಾರದಲ್ಲಿ ಅತಿ ಹೆಚ್ಚು ಮುತುವರ್ಜಿ ವಹಿಸಿದವರು ಸೈಯದ್ ಮುಹಮ್ಮದ್ ಬ್ಯಾರಿ ಅವರು. ಸಂಘದ ಪದಾಧಿಕಾರಿಗಳು ಏನೇ ವಿಷಯವಿದ್ದರೂ ಸಿದ್ದೀಕ್ ಬ್ಯಾರಿ ಅವರಿಗೆ ತಿಳಿಸುತ್ತಿದ್ದು, ಅವರು ಅವರ ಅಣ್ಣ ಸೈಯದ್ ಮುಹಮ್ಮದ್ ಬ್ಯಾರಿ ಅವರಿಗೆ ಹೇಳಿ ಸದ್ದಿಲ್ಲದೆ ಕೆಲಸ ಕಾರ್ಯಗಳು ಮುಂದುವರಿಯುತ್ತಿದ್ದವು. ಇದರಿಂದ ಕಳೆದುಕೊಂಡ ನಿವೇಶನದ ಹತ್ತಿರದಲ್ಲೇ ಬಹಳ ಬೆಲೆಬಾಳುವ 10,000 ಚದರ ಅಡಿಯ ನಿವೇಶನ 2010ರಲ್ಲಿ ಸಂಘಕ್ಕೆ ದೊರೆಯಿತು.

ಬೆಂಗಳೂರಿನ ಹೃದಯ ಭಾಗದಲ್ಲಿರುವ ಈ ಪ್ರತಿಷ್ಠಿತ ನಿವೇಶನದಲ್ಲಿ ಒಂದು ಸುಂದರ, ಸುಸಜ್ಜಿತ ಬ್ಯಾರಿ ಭವನದ ನಿರ್ಮಾಣ ನನ್ನ ಬದುಕಿನ ಒಂದು ಕನಸಾಗಿತ್ತು. ಆದರೆ ನಿವೇಶನ ಸಿಕ್ಕಿ ವರ್ಷಗಳು ಕಳೆದರೂ ಭವನ ನಿರ್ಮಾಣಕ್ಕೆ ಯಾರೂ ಮುಂದಾಗಲಿಲ್ಲ. ಅಧ್ಯಕ್ಷರಾಗಿದ್ದ ಬಿ.ಎಂ. ಫಾರೂಕ್ ಸೌಹಾರ್ದ ಭವನದ ಒಂದು ನಕ್ಷೆಯನ್ನು ಸಿದ್ಧಪಡಿಸಿ ಆಗಾಗ ಸಭೆಗಳಲ್ಲಿ ಪ್ರಸ್ತಾಪಿಸುತ್ತಿದ್ದರೂ ಸಹ ಯಾರೂ ಹೆಚ್ಚು ಮುತುವರ್ಜಿ ವಹಿಸಲಿಲ್ಲ. ನನಗೂ ಬಹಳ ನಿರಾಸೆಯಾಗಿತ್ತು.

ಬೆಂಗಳೂರಿನ ಒಂದು ಮದುವೆ ಕಾರ್ಯಕ್ರಮದಲ್ಲಿ ಸೇರಿದ್ದ ಸಂಘದ ಮುಖಂಡರೊಂದಿಗೆ ನನ್ನ ಮಗ ಮುಷ್ತಾಕ್ ಈ ವಿಚಾರವನ್ನು ತಿಳಿಸಿ ಅವರನ್ನೆಲ್ಲ ಒಂದು ಸಭೆ ಸೇರುವಂತೆ ಪ್ರೇರೇಪಿಸಿದ. ಅಂತೆಯೇ 2012ರಲ್ಲಿ ಬೆಂಗಳೂರಿನ ನನ್ನ ಮನೆಯಲ್ಲಿ ಸಭೆಯೊಂದು ನಡೆಯಿತು. ಅದರಲ್ಲಿ ಸೈಯದ್ ಮುಹಮ್ಮದ್ ಬ್ಯಾರಿ, ಉಮರ್ ಟೀಕೆ, ಬಿ.ಎಂ. ಫಾರೂಕ್ ಮುಂತಾದವರೆಲ್ಲ ಸೇರಿದ್ದರು. ಅಂದು ನಾನು ತುಸು ಕೋಪದಿಂದಲೇ ಮಾತನಾಡಿದ್ದೆ. "ನಿವೇಶನ ಸಿಕ್ಕಿದೆ. ಆದರೆ ನೀವು ಯಾರೂ ಸೌಹಾರ್ದ ಭವನ ನಿರ್ಮಾಣಕ್ಕೆ ಮುಂದಾಗುತ್ತಿಲ್ಲ. ನನಗೆ ತುಂಬಾ ನಿರಾಶೆಯಾಗಿದೆ. ನೀವು ಸೌಹಾರ್ದ ಭವನ ನಿರ್ಮಿಸುವುದಾದರೆ ನಾನು ನಿಮ್ಮ ಜೊತೆಗಿದ್ದೇನೆ. ಇಲ್ಲದಿದ್ದರೆ ನಾನು ನಾಳೆಯಿಂದ ನಿಮ್ಮ ಜೊತೆಗೆ ಇಲ್ಲ" ಎಂದು ಸ್ವಲ್ಪ ಖಡಕ್ಕಾಗಿ ಹೇಳಿದೆ.

ಬಹುಶಃ ನನ್ನ ಈ ಮಾತು ಅವರ ಮೇಲೆ ಪರಿಣಾಮ ಬೀರಿರಬೇಕು. ಅವರೆಲ್ಲ ಒಕ್ಕೊರಳಿನಿಂದ ಬ್ಯಾರಿ ಭವನ ನಿರ್ಮಾಣಕ್ಕೆ ಪಣ ತೊಟ್ಟರು. ಸೈಯದ್ ಮುಹಮ್ಮದ್ ಬ್ಯಾರಿ ಅವರನ್ನು ನಿರ್ಮಾಣ ಸಮಿತಿಯ ಚೇರ್‌ಮೆನ್ ಆಗಿ ಅಲ್ಲೇ ನೇಮಿಸಿದರು.

ಈ ಸೈಯದ್ ಮುಹಮ್ಮದ್ ಬ್ಯಾರಿ ಒಂದು ಕೆಲಸ ಕೈಗೆತ್ತಿಕೊಂಡರೆ ಅದನ್ನು ಅತ್ಯಂತ ಸಮರ್ಪಕವಾಗಿ ಅವರದೇ ಶೈಲಿಯಲ್ಲಿ ಮಾಡುವವರು. ಅವರ ಮೊದಲ

ಮಾತೇ ಈ ಬ್ಯಾರಿ ಸೌಹಾರ್ದಭವನ ನಮ್ಮ ಘನತೆ, ಗೌರವಕ್ಕೆ ತಕ್ಕುದಾದಂತಹ ಭವನವಾಗಿರಬೇಕು ಎಂದಾಗಿತ್ತು. ಸ್ಥಳದಲ್ಲೇ ಯಾರು ಯಾರು ಎಷ್ಟೆಷ್ಟು ಹಣ ಹಾಕಬೇಕು ಎಂದು ಸಹ ತೀರ್ಮಾನಿಸಲಾಯಿತು. ಒಂದು ರೀತಿಯ ನವೋಲ್ಲಾಸದೊಂದಿಗೆ ಸೌಹಾರ್ದ ಭವನದ ಕಾರ್ಯ ಪ್ರಾರಂಭವಾಯಿತು.

ಅಂದಾಜು 12 ಕೋಟಿ ರೂಪಾಯಿಯ ಈ ಯೋಜನೆಗೆ ಈಗಾಗಲೇ ಅರ್ಧದಷ್ಟು ಖರ್ಚಾಗಿದೆ. ಸರಕಾರ ನಮ್ಮ ಬೇಡಿಕೆಯನ್ನು ಮನ್ನಿಸಿ ಮೊದಲ ಕಂತಿನಲ್ಲಿ ಮೂರು ಕೋಟಿ ರೂಪಾಯಿ ಅನುದಾನ ನೀಡಿತ್ತು. ಅನಂತರ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಭೇಟಿಯಾದ ನಾನು ಮತ್ತೆ ಎರಡು ಕೋಟಿ ರೂಪಾಯಿಗೆ ಸಂಘದ ಮನವಿಯನ್ನು ಸಲ್ಲಿಸಿದ್ದೆ. ಆದರೆ ತಾಂತ್ರಿಕ ಕಾರಣಗಳಿಂದ ಅದು ಸ್ವೀಕರಿಸಲ್ಪಟ್ಟಿರಲಿಲ್ಲ ಎಂಬುದು ನನ್ನ ಗಮನಕ್ಕೆ ಬಂದಿತ್ತು. ಇತ್ತೀಚೆಗೆ ನಾನು ಅನಾರೋಗ್ಯದಿಂದ ಮಂಗಳೂರಿನ ಖಾಸಗಿ ಆಸ್ಪತ್ರೆಯೊಂದರಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಸಂದರ್ಭ ಜಿಲ್ಲೆಗೆ ಆಗಮಿಸಿದ್ದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ನನ್ನನ್ನು ಕಾಣಲು ಆಸ್ಪತ್ರೆಗೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ಮುಖ್ಯಮಂತ್ರಿಗಳೊಂದಿಗೆ ನಾನು, ಬ್ಯಾರಿ ಭವನಕ್ಕೆ ಎರಡು ಕೋಟಿ ರೂಪಾಯಿ ಕೊಡಬೇಕು ಎಂದು ವಿನಂತಿಸಿದೆ. ಬ್ಯಾರಿ ಭವನ ನನ್ನ ಸಮುದಾಯದ ಅನೇಕ ವರ್ಷಗಳ ಕನಸು. ನಿಮ್ಮ ಅಧಿಕಾರ ಅವಧಿಯಲ್ಲೇ ಆ ಕನಸು ನನಸಾಗಬೇಕೆಂಬುದು ನನ್ನ ಆಸೆ ಎಂದೂ ಹೇಳಿದೆ. ನನ್ನ ಈ ಮನವಿಗೆ ಸ್ಪಂದಿಸಿದ ಶ್ರೀ ಸಿದ್ದರಾಮಯ್ಯ ಅವರು ತಮ್ಮ 2018–19ರ ರಾಜ್ಯ ಬಜೆಟ್‌ನಲ್ಲಿ ಬ್ಯಾರಿ ಸೌಹಾರ್ದ ಭವನಕ್ಕೆ ಮತ್ತೆ ಎರಡು ಕೋಟಿ ರೂಪಾಯಿ ಅನುದಾನ ನೀಡಿದ್ದಾರೆ.

ಭವನದ ನಿರ್ಮಾಣ ಕಾರ್ಯ ಭರದಿಂದ ಸಾಗುತ್ತಿದ್ದು, 2018ರ ಕೊನೆಯಲ್ಲಿ ಪೂರ್ಣಗೊಳ್ಳುವ ನಿರೀಕ್ಷೆಯಲ್ಲಿ ನಾನಿದ್ದೇನೆ.

## ಬ್ಯಾರಿ ಸಾಹಿತ್ಯ ಆಂದೋಲನ

ಬೆಂಗಳೂರಿನಲ್ಲಿ ನಡೆದ ಬ್ಯಾರಿ ಸಮ್ಮೇಳನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನಡೆಸಿಕೊಡಲು ಮಂಗಳೂರಿನಿಂದ ಬ್ಯಾರಿ ಸಾಹಿತಿ, ಕವಿ, ಕಲಾವಿದರ ತಂಡವೊಂದನ್ನು ಆಹ್ವಾನಿಸಲಾಗಿತ್ತು. ಈ ತಂಡದವರು ನಡೆಸಿಕೊಟ್ಟ ಬ್ಯಾರಿ ಕವಿಗೋಷ್ಠಿ, ಬ್ಯಾರಿ ನಾಟಕ, ಬ್ಯಾರಿ ಹಾಡು ಈ ಎಲ್ಲ ಕಾರ್ಯಕ್ರಮಗಳು ಸಮ್ಮೇಳನದ ಸಂಭ್ರಮವನ್ನು ಹೆಚ್ಚಿಸಿತ್ತು. ಸಮ್ಮೇಳನದಲ್ಲಿ ಸೇರಿದ್ದ ಬ್ಯಾರಿ ಜನಸ್ತೋಮ ನೀಡಿದ ಪ್ರೋತ್ಸಾಹದಿಂದ ಪುಳಕಿತರಾದ ಆ ತಂಡದವರು ಮಂಗಳೂರಿಗೆ ಹಿಂದಿರುಗಿದ ತಕ್ಷಣ 'ಬ್ಯಾರಿ ಸಾಹಿತ್ಯ ಮತ್ತು ಸಾಂಸ್ಕೃತಿಕ ಸಂಘ' ಎಂಬ ಸಂಘಟನೆಯೊಂದನ್ನು ಕಟ್ಟಿಕೊಂಡು ತಮ್ಮ ಸಾಹಿತ್ಯಕ ಚಟುವಟಿಕೆಗಳನ್ನು ದಕ್ಷಿಣಕನ್ನಡ ಜಿಲ್ಲೆಯಾದ್ಯಂತ ಪ್ರಾರಂಭಿಸಿದರು. ಬ್ಯಾರಿ ಸಾಹಿತ್ಯ ಜಾಗೃತಿ ಮೂಡಿಸಲು ಇವರು ಬಳಸಿದ ಅಸ್ತ್ರ ಬ್ಯಾರಿ ಕವಿಗೋಷ್ಠಿ. ಜಿಲ್ಲೆಯ ಹಳ್ಳಿ ಹಳ್ಳಿಗಳಿಗೆ ಹೋಗಿ ಬ್ಯಾರಿ ಕವಿಗೋಷ್ಠಿಗಳನ್ನು ನಡೆಸಿ ಬಹಳಷ್ಟು ಜನಪ್ರಿಯರಾದರು.

ಬ್ಯಾರಿ ಜನಸಾಮಾನ್ಯರಲ್ಲಿ ಸಾಹಿತ್ಯಕ ಆಸಕ್ತಿಯನ್ನು ಹುಟ್ಟು ಹಾಕಿದ ಇವರು ಜಿಲ್ಲೆಯ 200ಕ್ಕೂ ಅಧಿಕ ಮುಖಂಡರನ್ನು ಸೇರಿಸಿಕೊಂಡು ಸ್ವಾಗತ ಸಮಿತಿಯೊಂದನ್ನು ರಚಿಸಿ ಇತಿಹಾಸದ ಪ್ರಪ್ರಥಮ 'ಬ್ಯಾರಿ ಸಾಹಿತ್ಯ ಸಮ್ಮೇಳನ'ವನ್ನು ಆಯೋಜಿಸಲು ಸಿದ್ಧರಾದರು. ಈ ಹಂತದಲ್ಲಿ ಕೆಲವು ಸಂಪ್ರದಾಯಸ್ಥರಿಂದ ಟೀಕೆ, ಅಡಚಣೆಗಳು ಉಂಟಾದಾಗ ನನ್ನನ್ನು ಸಂಪರ್ಕಿಸಿದ ಈ ಯುವಕರು ನನ್ನ ಬೆಂಬಲವನ್ನು ಅಪೇಕ್ಷಿಸಿದರು. ಇವರು ಮಾಡುತ್ತಿದ್ದ ಒಳ್ಳೆಯ ಕೆಲಸಗಳನ್ನು ಮನಗಂಡಿದ್ದ ನಾನು ಅವರ ಸ್ವಾಗತ ಸಮಿತಿಯ ಗೌರವಾಧ್ಯಕ್ಷನಾಗಲು ಒಪ್ಪಿಕೊಂಡೆ. ನಾನು ಆಗ ಮುಖ್ಯಮಂತ್ರಿ ಜೆ.ಎಚ್. ಪಟೇಲರ ಮಂತ್ರಿಮಂಡಳದಲ್ಲಿ ಸಣ್ಣ ಕೈಗಾರಿಕಾ ಸಚಿವನಾಗಿದ್ದೆ. ಮಂಗಳೂರಿನಲ್ಲಿ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ ಬ್ಯಾರಿ ಸಾಹಿತ್ಯ ಸಮ್ಮೇಳನಕ್ಕೆ ಸಂಪೂರ್ಣ ಬೆಂಬಲವನ್ನು ಘೋಷಿಸಿದೆ. ಇದರಿಂದ ಆ ಯುವಕರಿಗೆ ಶಕ್ತಿ ಬಂದು ಉತ್ಸಾಹದಿಂದ ಸಮ್ಮೇಳನ ನಡೆಸಿದರು.

ಮಂಗಳೂರಿನ ಪುರಭವನದಲ್ಲಿ ದಿನಾಂಕ 22–11–1998ರಂದು ಬಿ.ಎಂ. ಇದಿನಬ್ಬ ಅವರ ಸಮ್ಮೇಳನಾಧ್ಯಕ್ಷತೆಯಲ್ಲಿ ನೆರವೇರಿದ ಪ್ರಥಮ ಬ್ಯಾರಿ ಸಾಹಿತ್ಯ ಸಮ್ಮೇಳನ ಇತಿಹಾಸವನ್ನು ನಿರ್ಮಿಸಿತ್ತು. ಬೆಳಿಗ್ಗೆ 9 ಗಂಟೆಯಿಂದ ರಾತ್ರಿ 9 ಗಂಟೆವರೆಗೆ, ಉದ್ಘಾಟನಾ ಸಮಾರಂಭದಿಂದ ಮೊದಲ್ಗೊಂಡು ಸನ್ಮಾನ, ಬ್ಯಾರಿ ಪುಸ್ತಕಗಳು ಮತ್ತು ಬ್ಯಾರಿ ಧ್ವನಿ ಸುರುಳಿಗಳ ಬಿಡುಗಡೆ, ವಿಚಾರಗೋಷ್ಠಿ, ಕವಿಗೋಷ್ಠಿ, ನಾಟಕ, ವಸ್ತು ಪ್ರದರ್ಶನ, ಸಾಂಸ್ಕೃತಿಕ ಕಾರ್ಯಕ್ರಮಗಳು ಇವೆಲ್ಲವುಗಳೊಂದಿಗೆ ಅತ್ಯಂತ ಅಚ್ಚುಕಟ್ಟಾಗಿ ಶಿಸ್ತು ಬದ್ಧವಾಗಿ ನಡೆಯುವುದರ ಮೂಲಕ ಒಂದು ದಾಖಲೆಯನ್ನು ನಿರ್ಮಿಸಿತ್ತು. ಈ ಸಮ್ಮೇಳನದಲ್ಲಿ ಕೈಗೊಂಡ ನಿರ್ಣಯದಲ್ಲಿ ಪ್ರಮುಖ ಅಂಶ 'ಬ್ಯಾರಿ ಸಾಹಿತ್ಯ ಅಕಾಡೆಮಿ'ಯ ಬೇಡಿಕೆಯಾಗಿತ್ತು. ಮರುದಿನ ಎಲ್ಲ ಪತ್ರಿಕೆಗಳ ಮುಖಪುಟಗಳಲ್ಲಿ ವಿಶೇಷ ಸುದ್ದಿಯಾಗಿದ್ದ ಈ ಸಮ್ಮೇಳನ ಇಡೀ ರಾಜ್ಯದ ಗಮನ ಸೆಳೆದಿತ್ತು.

ಮುಂದಿನ ದಿನಗಳಲ್ಲಿ ಮೇಲಿನ ಸಮ್ಮೇಳನಕ್ಕೆ ರಚಿಸಲಾಗಿದ್ದ ಸ್ವಾಗತ ಸಮಿತಿಯನ್ನೇ 'ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್' ಎಂದು ಹೆಸರಿಟ್ಟುಕೊಂಡು ಸಂಘಟನೆಯನ್ನು ಶಾಸನ ಬದ್ಧವಾಗಿ ನೋಂದಾಯಿಸಿಕೊಂಡು ಸಾಹಿತ್ಯಕ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಯಿತು. 1999ರಲ್ಲಿ ಬಂಟ್ವಾಳದಲ್ಲಿ ಎರಡನೇ ಬ್ಯಾರಿ ಸಾಹಿತ್ಯ ಸಮ್ಮೇಳನ, 2000ದಲ್ಲಿ ಉಡುಪಿಯಲ್ಲಿ ಮೂರನೇ ಬ್ಯಾರಿ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ನಡೆಸಲಾಯಿತು.

ಈ ಎಲ್ಲ ಸಮ್ಮೇಳನಗಳಿಗೆ ರಾಜ್ಯದ ಸಚಿವರುಗಳನ್ನು ಶಾಸಕರುಗಳನ್ನು ಆಹ್ವಾನಿಸಿ ಅನೇಕ ಮನವಿಗಳನ್ನು ನೀಡಿದರೂ ಸಹ ಕರ್ನಾಟಕ ಸರಕಾರ 'ಬ್ಯಾರಿ ಸಾಹಿತ್ಯ ಅಕಾಡೆಮಿ'ಯನ್ನು ನೀಡಲು ಸಿದ್ಧವಾಗಲಿಲ್ಲ. ಆಗಿನ ಮುಖ್ಯಮಂತ್ರಿಯಾಗಿದ್ದ ಎಸ್.ಎಂ. ಕೃಷ್ಣ ಅವರ ಬಳಿ ನಾನು ನಿಯೋಗವೊಂದನ್ನು ತೆಗೆದುಕೊಂಡು ಹೋಗಿ ಮನವಿ ಮಾಡಿದರೂ ಅವರು ಸ್ಪಂದಿಸಲಿಲ್ಲ. ವೀರಪ್ಪ ಮೊಯಿಲಿ ಮುಖ್ಯಮಂತ್ರಿಯಾಗಿದ್ದ

ಸಂದರ್ಭದಲ್ಲಿ ಕೊಂಕಣಿ, ತುಳು, ಕೊಡವ ಭಾಷೆಗಳಿಗೆ ಸಾಹಿತ್ಯ ಅಕಾಡೆಮಿಗಳನ್ನು ಕೊಟ್ಟಿದ್ದರು. ವೀರಪ್ಪ ಮೊಯಿಲಿಯವರನ್ನು ನಾನು ಭೇಟಿಯಾಗಿದ್ದಾಗ, ನೀವು ನನ್ನ ಅವಧಿಯಲ್ಲಿ ಬಂದಿದ್ದರೆ ಖಂಡಿತ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನೂ ಅದರೊಟ್ಟಿಗೆ ಕೊಡುತ್ತಿದ್ದೆ ಎಂದು ಹೇಳಿ ಕೈಚೆಲ್ಲಿದ್ದರು.

2006ರಲ್ಲಿ ರಾಜ್ಯದಲ್ಲಿ ಬಿಜೆಪಿ ಮತ್ತು ಜೆಡಿಎಸ್ ಸಮ್ಮಿಶ್ರ ಸರಕಾರ ಆಡಳಿತಕ್ಕೆ ಬಂತು. ಎಚ್.ಡಿ. ಕುಮಾರ ಸ್ವಾಮಿಯವರು ಮುಖ್ಯಮಂತ್ರಿ ಆದರು. ಇದೇ ಸಂದರ್ಭದಲ್ಲಿ ಅಂದರೆ 2007ರಲ್ಲಿ ಕೇಂದ್ರ ಬ್ಯಾರಿ ಸಾಹಿತ್ಯ ಪರಿಷತ್ ಚಿಕ್ಕಮಗಳೂರಿನಲ್ಲಿ 4ನೇ ಬ್ಯಾರಿ ಸಾಹಿತ್ಯ ಸಮ್ಮೇಳನವನ್ನು ಆಯೋಜಿಸಿತು. ಈ ಸಮ್ಮೇಳನವು ಒಂದು ಐತಿಹಾಸಿಕ ಸಮ್ಮೇಳನವಾಗಿತ್ತು. ಹಿರಿಯ ಸಾಹಿತಿ ಫಕೀರ್ ಮುಹಮ್ಮದ್ ಕಟ್ಪಾಡಿ ಸಮ್ಮೇಳನಾಧ್ಯಕ್ಷರಾಗಿದ್ದರು. ಈ ಸಮ್ಮೇಳನವನ್ನು ಎಷ್ಟು ಪರಿಣಾಮಕಾರಿಯಾಗಿ ಆಯೋಜಿಸಲಾಗಿತ್ತೆಂದರೆ, ಇಡೀ ಚಿಕ್ಕಮಗಳೂರು ಜಿಲ್ಲೆಯ ಬಹುತೇಕ ಬ್ಯಾರಿಗಳು ಅಂಗಡಿ ಮುಂಗಟ್ಟುಗಳನ್ನೆಲ್ಲ ಬಂದ್ ಮಾಡಿ ಸಮ್ಮೇಳನಕ್ಕೆ ಬಂದು ಸೇರಿದ್ದರು. ಬ್ಯಾರಿಯೇತರರೂ ಸಹ ಬಹುದೊಡ್ಡ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಅತಿಥಿಯೋರ್ವರು ಭಾಷಣದಲ್ಲಿ 'ಇದು ಸಾಹಿತ್ಯ ಸಮ್ಮೇಳನವಲ್ಲ, ಚಿಕ್ಕಮಗಳೂರಿನಲ್ಲಿ ನಡೆಯುತ್ತಿರುವ ಸೌಹಾರ್ದ ಜಾತ್ರೆ' ಎಂದು ಬಣ್ಣಿಸಿದ್ದರು.

ಈ ಸಮ್ಮೇಳನದ ಸಮಾರೋಪ ಸಮಾರಂಭದಲ್ಲಿ ಆಗಿನ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವ ಮಹಾದೇವ ಪ್ರಸಾದ್ ಅವರು ಭಾಗವಹಿಸಿದ್ದರು. ವೇದಿಕೆಯಲ್ಲಿ ನಾನು ಅವರಿಗೆ ಬ್ಯಾರಿ ಸಾಹಿತ್ಯ ಅಕಾಡೆಮಿಯ ರಚನೆಯ ಬಗ್ಗೆ ಪ್ರಸ್ತಾಪಿಸಿದೆ. ಸಮ್ಮೇಳನಕ್ಕೆ ಸೇರಿದ್ದ ಜನಸ್ತೋಮ, ಅವರ ಉತ್ಸಾಹ, ಸಡಗರ, ಸಂಭ್ರಮಗಳನ್ನು ನೋಡಿದ ಸಚಿವರು, ಜೊತೆಗೆ ನನ್ನ ಮನವಿಯನ್ನು ಪರಿಗಣಿಸಿ ವೇದಿಕೆಯಿಂದಲೇ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ ಅವರೊಂದಿಗೆ ಮಾತನಾಡಿದರು. ಇಲ್ಲಿಯ ಎಲ್ಲ ವಿಚಾರಗಳನ್ನು ಅವರ ಗಮನಕ್ಕೆ ತಂದರು. ಬ್ಯಾರಿ ಸಾಹಿತ್ಯ ಅಕಾಡೆಮಿಯ ನಮ್ಮ ಬೇಡಿಕೆ ನ್ಯಾಯ ಸಮ್ಮತವಾಗಿದೆ ಎಂದು ಮುಖ್ಯಮಂತ್ರಿ ಅವರಿಗೆ ಮನಗಾಣಿಸಿ ಅವರ ಅನುಮತಿಯನ್ನು ಪಡೆದು ತಮ್ಮ ಭಾಷಣದಲ್ಲಿ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯನ್ನು ಅನೌಪಚಾರಿಕವಾಗಿ ಘೋಷಿಸಿದರು. ಮುಂದಿನ ದಿನಗಳಲ್ಲಿ ಕರ್ನಾಟಕ ರಾಜ್ಯ ಸರಕಾರ ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿಯ ಸ್ಥಾಪನೆಯನ್ನು ಅಧಿಕೃತವಾಗಿ ಮಾಡಿತು. ದಿನಾಂಕ 3–10–2007ರಂದು ಕರ್ನಾಟಕ ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪನೆಯಾಯಿತು. ಈಗಲೂ ಅಕಾಡೆಮಿಯ ನಿಕಟ ಸಂಪರ್ಕದಲ್ಲಿರುವ ನಾನು ಅಕಾಡೆಮಿಗೆ ಸಂಪೂರ್ಣ ಸಹಕಾರ, ಸಲಹೆ, ಸೂಚನೆಗಳನ್ನು ನೀಡುತ್ತಿದ್ದೇನೆ.

# ನನ್ನ ಕುಟುಂಬ

ಇನ್ನು ನನ್ನ ಕುಟುಂಬದ ಸದಸ್ಯರ ಬಗ್ಗೆ ಇಲ್ಲಿ ಸ್ವಲ್ಪ ನೆನಪಿಸುತ್ತೇನೆ. ನಮ್ಮದು ದೊಡ್ಡ ಕುಟುಂಬ. ತಂದೆಯ ಹೆಸರು ಅಬ್ದುಲ್ ಖಾದರ್. ತಾಯಿ ಹಲೀಮಮ್ಮ. ನನ್ನ ತಂದೆ ತಾಯಿಗೆ ನಾವು ಎಂಟು ಮಂದಿ ಮಕ್ಕಳು. ಆರು ಗಂಡು, ಎರಡು ಹೆಣ್ಣು. ನಾನು ಹಿರಿಯವ. ನನ್ನ ನಂತರದವ ಹುಸೈನ್ ಶರೀಫ್ ಈತ ತೀರಿಕೊಂಡಿದ್ದಾನೆ. ಇವನಿಗೆ ನಾಲ್ಕು ಮಕ್ಕಳು. ಮೂರು ಗಂಡು, ಒಂದು ಹೆಣ್ಣು. ಮೂರನೆಯವಳು ತಂಗಿ ಖತೀಜಾ. ಇವಳು ತೀರಿಕೊಂಡಿದ್ದಾಳೆ. ಇವಳಿಗೆ ಹದಿಮೂರು ಮಕ್ಕಳು. ಐದು ಹೆಣ್ಣು, ಎಂಟು ಗಂಡು. ನಾಲ್ಕನೆಯವನು ಮುಹಮ್ಮದ್ ತೀರಿಕೊಂಡಿದ್ದಾನೆ. ಇವನಿಗೆ ಐವರು ಮಕ್ಕಳು. ಎರಡು ಹೆಣ್ಣು, ಮೂರು ಗಂಡು. ವಿಶ್ವವಿಖ್ಯಾತ ಅಂತರ್‌ರಾಷ್ಟ್ರೀಯ ಲಾಜಿಸ್ಟಿಕ್ ಸಂಸ್ಥೆ 'ಕಂಪಾಸ್' ಇದರ ಸ್ಥಾಪಕ ಶಮೀರ್ ಈ ನನ್ನ ಸಹೋದರ ದಿವಂಗತ ಮುಹಮ್ಮದ್‌ನ ಮಗ. ವಿಶ್ವದಾದ್ಯಂತ 20ಕ್ಕೂ ಹೆಚ್ಚು ರಾಷ್ಟ್ರಗಳಲ್ಲಿ ವ್ಯವಹಾರ ನಡೆಸುತ್ತಿರುವ ಈ ಸಂಸ್ಥೆಯಲ್ಲಿ 2000ಕ್ಕೂ ಅಧಿಕ ಉದ್ಯೋಗಿಗಳಿದ್ದಾರೆ. ಈ ಶಮೀರ್ ನಮ್ಮ ಕುಟುಂಬದ ಒಂದು ಹೆಮ್ಮೆ. ಇವನ ಯಶಸ್ಸಿಗೆ ನಾನು ಕಂಡುಕೊಂಡ ಎರಡು ಕಾರಣಗಳು, ಪ್ರಾಮಾಣಿಕತೆ ಮತ್ತು ಬದ್ಧತೆ. ಐದನೆಯವಳು ಫಾತಿಮ ತೀರಿಕೊಂಡಿದ್ದಾಳೆ. ಇವಳಿಗೆ ಆರು ಮಕ್ಕಳು. ಮೂರು ಹೆಣ್ಣು, ಮೂರು ಗಂಡು. ಆರನೆಯವ ಹಮೀದ್ ತೀರಿಕೊಂಡಿದ್ದಾನೆ. ಇವನಿಗೆ ಐವರು ಮಕ್ಕಳು. ನಾಲ್ಕು ಗಂಡು, ಒಂದು ಹೆಣ್ಣು. ಏಳನೆಯವ ಉಮರ್. ಇವನಿಗೆ ಮೂವರು ಹೆಣ್ಣುಮಕ್ಕಳು. ಎಂಟನೆಯವ ಇಸ್ಮಾಯೀಲ್. ಇವನಿಗೆ ಒಂದು ಗಂಡು, ಒಂದು ಹೆಣ್ಣು.

ನನಗೆ ನಾಲ್ವರು ಮಕ್ಕಳು. ಎರಡು ಗಂಡು, ಎರಡು ಹೆಣ್ಣು.

ಹಿರಿಯವಳು ಹಲೀಮಾ ಶಾಹಿನ್. ಇವಳು ಪಿಯುಸಿ ಓದಿದ್ದಾಳೆ. ಇವಳನ್ನು ಬಜಪೆಯ ಅಹ್ಮದ್ ಶರೀಫ್‌ನಿಗೆ ಕೊಟ್ಟು ಮದುವೆ ಮಾಡಿದ್ದು, ಇವನು ಬಿಎಸ್‌ಸಿ ಪದವೀಧರ. ಇವಳಿಗೆ ಮೂವರು ಹೆಣ್ಣುಮಕ್ಕಳು. ಖತೀಜಾ ಸುಹಾನಾ, ಶೈಮಾ ಫಾತಿಮಾ ಮತ್ತು ಆಯಿಷಾ ಶಲೂಲಾ. ಮೂವರಿಗೂ ಮದುವೆಯಾಗಿದೆ.

ಎರಡನೆಯವ ಅಬ್ದುಲ್ ಖಾದರ್ ಮುಷ್ತಾಕ್. ಇವನು ಸುರತ್ಕಲ್ ಕೆಆರ್‌ಇಸಿ ಕಾಲೇಜಿನಲ್ಲಿ ಸಿವಿಲ್ ಇಂಜಿನಿಯರಿಂಗ್ (B.E.) ಮಾಡಿದ್ದಾನೆ. ಇವನ ಹೆಂಡತಿ ನಸ್ಮೀನ್ ಮಂಗಳೂರಿನವಳು. ಪದವೀಧರೆ. ಇವರಿಗೆ ಇಬ್ಬರು ಮಕ್ಕಳು. ಮಿಶಾ ಖತೀಜಾ ಮತ್ತು ಮೇಹುಲ್ ಮೊಹಿದೀನ್.

ಮೂರನೆಯವಳು ಫಾತಿಮಾ ಸಬೀನಾ. ಇವಳು ಎಸ್‌ಎಸ್‌ಎಲ್‌ಸಿ ಓದಿದ್ದು. ಇವಳನ್ನು ಮುಹಮ್ಮದ್ ನವಾಝ್ ಗುರುಪುರ ಇವನಿಗೆ ಮದುವೆ ಮಾಡಿಕೊಟ್ಟಿದ್ದು. ಇವನು ಮೆಕಾನಿಕಲ್ ಡಿಪ್ಲೊಮಾ ಇಂಜಿನಿಯರಿಂಗ್ ಮಾಡಿದ್ದಾನೆ. ಇವಳಿಗೆ ಮೂವರು ಮಕ್ಕಳು. ಮುಹಮ್ಮದ್ ನವೀದ್, ನಯೀಮಾ ಫಾತಿಮಾ ಮತ್ತು ಮುಹಮ್ಮದ್ ನುಹೈದ್.

ಕೊನೆಯವ ಆಸೀಫ್ ಮಸೂದ್. ಇವನು ಸುರತ್ಕಲ್ ಕೆಆರ್‌ಇಸಿ ಕಾಲೇಜಿನಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ (B.E.) ಮತ್ತು ಎಂಬಿಎ ಮಾಡಿದ್ದಾನೆ. ಇವನ ಹೆಂಡತಿ ನುಶೀನ್ ಮಂಗಳೂರಿನವಳು. ಇವಳೂ ಇಂಜಿನಿಯರಿಂಗ್ ಮಾಡಿದ್ದಾಳೆ. ಇವರಿಗೆ ಇಬ್ಬರು ಮಕ್ಕಳು. ನುಮಾನ್ ಮೊಹಿದೀನ್ ಮತ್ತು ಮಿದಾ ಖತೀಜಾ.

ಹಲೀಮಾ ಶಾಹಿನ್‌ಳ ಹಿರಿಯ ಮಗಳು ಖತೀಜಾ ಸುಹಾನಾ ಪದವಿ ಓದಿದ್ದಾಳೆ. ಇವಳನ್ನು ನಮ್ಮ ಕುಟುಂಬದಲ್ಲೇ ಬಜಪೆಯ ಅಹಮದ್ ಶಕೀರ್ ಎಂಬಾತನಿಗೆ ಮದುವೆ ಮಾಡಿಕೊಟ್ಟಿದ್ದು. ಇವನು ಬಿಬಿಎಂ ಮಾಡಿದ್ದಾನೆ. ಇವರಿಗೆ ನಾಲ್ವರು ಮಕ್ಕಳು. ಶಾನುಮ್ ಫಾತಿಮಾ, ಹಲೀಮಾ ಶರ್ಮಿನ್, ಮುಹಮ್ಮದ್ ಶಾರಿಕ್ ಮತ್ತು ಅಹಮದ್ ಶಾಹಿಲ್.

ಎರಡನೆಯವಳು ಶೈಮಾ ಫಾತಿಮಾ. ಇವಳು ಇಂಜಿನಿಯರ್. ಮಂಗಳೂರಿನ ಆಶ್ಫಿ ಹಮೀದ್ ಎಂಬವನಿಗೆ ಮದುವೆ ಮಾಡಿಕೊಟ್ಟಿದ್ದು. ಈತ ಬಿ.ಕಾಂ. ಪದವೀಧರ. ಇವರಿಗೆ ಇಬ್ಬರು ಮಕ್ಕಳು. ಆಯಿಷ ಝೋಯಾ ಮತ್ತು ಹಲೀಮಾ ಝೀವಾ.

ಮೂರನೆಯವಳು ಆಯಿಷಾ ಶಲೂಲಾ. ಈಕೆ ಬಿ.ಕಾಂ. ಪದವೀಧರೆ. ಇವಳನ್ನು ಮಂಗಳೂರಿನ ಸಯೀದ್ ಅನಸ್‌ಗೆ ಮದುವೆ ಮಾಡಿಕೊಟ್ಟಿದ್ದು. ಇವರಿಗೆ ಒಬ್ಬಳು ಮಗಳು, ಅರ್ಹಾ ಅನಸ್.

ನಾನೀಗ ಹೆಂಡತಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳ ದೊಡ್ಡ ಕುಟುಂಬದೊಂದಿಗೆ ಬದುಕುತ್ತಿದ್ದೇನೆ.

# ನನ್ನೊಳಗಿನ ನಾನು

ನನ್ನ ಈ ಆತ್ಮಕತೆಯಲ್ಲಿ ಇಂದಿರಾ ಗಾಂಧಿ, ದೇವರಾಜ ಅರಸು, ರಾಮಕೃಷ್ಣ ಹೆಗಡೆ, ಜೆ.ಎಚ್.ಪಟೇಲ್ ಅವರಂತಹ ಮಹಾನ್ ನಾಯಕರ ಬಗ್ಗೆ ಯಾಕೆ ಬರೆದಿದ್ದೇನೆ ಎಂದು ನಿಮಗೆ ಅನಿಸಬಹುದು. ನಾನು ಯಾಕೆ ಬರೆದಿದ್ದೇನೆ ಎಂದರೆ–ರಾಜಕೀಯ ಎಂದರೆ ಒಂದು ಪಗಡೆ ಆಟದ ಹಾಗೆ. ಇಲ್ಲಿ ತಿರುಕ ರಾಜನಾಗ ಬಹುದು, ರಾಜ ಭಿಕಾರಿಯಾಗಬಹುದು. ಇಲ್ಲಿ ಗೆಲ್ಲಲಿಕ್ಕಾಗಿ, ಅಧಿಕಾರಕ್ಕಾಗಿ ಒಬ್ಬರನ್ನೊಬ್ಬರು ಕಾಲೆಳೆಯುವುದು, ನಮಗಿಂತ ಮುಂಚೆ ಯಾರೂ ಹೆಜ್ಜೆ ಇಡದಂತೆ, ನಮಗಿಂತ ಮೇಲೆ ಯಾರೂ ಏರದಂತೆ, ನಮಗಿಂತ ಎತ್ತರಕ್ಕೆ ಯಾರೂ ಬೆಳೆಯದಂತೆ ನೋಡಿ ಕೊಳ್ಳುವುದು ಸ್ವತಂತ್ರ ಭಾರತದ ರಾಜಕೀಯದಲ್ಲಿ ನಡೆದುಕೊಂಡು ಬಂದಿರುವಂತಹುದು.

ನಮ್ಮ ದೇಶದ ರಾಜಕೀಯದಲ್ಲಿ ಯಾರೂ ಮಿತ್ರರಲ್ಲ, ಯಾರೂ ಶತ್ರುಗಳಲ್ಲ. ಇಂದು ಮಿತ್ರರಾಗಿದ್ದವರು ನಾಳೆ ಶತ್ರುಗಳಾಗಬಹುದು. ಇಂದು ಒಬ್ಬರ ಮುಖ ಒಬ್ಬರು ನೋಡದ ಶತ್ರುಗಳು ನಾಳೆ ಹೆಗಲ ಮೇಲೆ ಕೈಹಾಕಿ ನಗುವ ಗೆಳೆಯರಾಗಬಹುದು. ಇಲ್ಲಿ ಯಾರನ್ನೂ ಯಾರೂ ನಂಬುವುದಿಲ್ಲ. ಸಂಶಯ, ಅಪನಂಬಿಕೆ, ಗುಮಾನಿ, ತಂತ್ರಗಾರಿಕೆ ಇಲ್ಲಿ ಸಾಮಾನ್ಯ. ಇದಕ್ಕೆ ಇಂದಿರಾ ಗಾಂಧಿ, ದೇವರಾಜ ಅರಸು ಅವರಂತಹ ಮಹಾನ್ ನಾಯಕರೂ ಹೊರತಾಗಿರಲಿಲ್ಲ. ಅದಕ್ಕಾಗಿ ಅವರ ಬಗ್ಗೆಯೂ ಒಂದಿಷ್ಟು ಬರೆಯ ಬೇಕಾಯಿತು.

ರಾಜಕಾರಣಿಗಳ ರಾಜಕೀಯ ಜೀವನದಲ್ಲಿ ಆಗುವಂತಹ ಏರುಪೇರುಗಳು ಬಹುಶಃ ಬೇರೆ ಯಾವುದೇ ರಂಗದಲ್ಲಿ ಆಗಲಿಕ್ಕಿಲ್ಲ. ಇಲ್ಲಿ ಚಾಣಾಕ್ಷತೆ, ಧೈರ್ಯ, ಛಲ, ಸಂಘಟನಾ ಶಕ್ತಿ, ಗತ್ತು–ಗಾಂಭೀರ್ಯ, ಸಹನೆ, ನಟನೆ ಗೊತ್ತಿದ್ದವನು ಮಾತ್ರ ಉಳಿಯುತ್ತಾನೆ.

ಇಲ್ಲವಾದಲ್ಲಿ ಮೂಲೆ ಗುಂಪಾಗುತ್ತಾನೆ.

ನಾನೂ ನನ್ನ ರಾಜಕೀಯ ಜೀವನದಲ್ಲಿ ಬಹಳಷ್ಟು ಏರುಪೇರುಗಳನ್ನು ಕಂಡವನು. ಶಾಸಕನಾಗಿ, ಮುಖ್ಯ ಸಚೇತಕನಾಗಿ, ಸಚಿವನಾಗಿ, ಜಿಲ್ಲಾ ಉಸ್ತುವಾರಿ ಸಚಿವನಾಗಿದ್ದಾಗಲೂ ನಾನು ನನ್ನ ತತ್ವ ಸಿದ್ಧಾಂತ, ಆದರ್ಶ, ಸತ್ಯ, ಪ್ರಾಮಾಣಿಕತೆಯನ್ನು ಬಿಟ್ಟವನಲ್ಲ. ಯಾವುದೇ ಅಧಿಕಾರವಿಲ್ಲದೆ ಕೆಲವರಿಂದ ತುಳಿತಕ್ಕೊಳಗಾದಾಗಲೂ, ಮೂಲೆಗುಂಪಾದಾಗಲೂ ಇನ್ನೊಬ್ಬರ ಮುಂದೆ ಯಾವುದೇ ವಿಷಯಕ್ಕೆ ಕೈ ಚಾಚಿದವನಲ್ಲ, ಬೇಡಿಕೊಂಡವನಲ್ಲ, ತಲೆ ತಗ್ಗಿಸಿದವನಲ್ಲ. ಖರ್ಚಿಗೆ ದುಡ್ಡಿಲ್ಲದಾಗಲೂ ಅದನ್ನು ಯಾರಿಗೂ ತೋರಿಸಿಕೊಂಡವನಲ್ಲ, ಇನ್ನೊಬ್ಬರ ಜೊತೆ ಹೇಳಿಕೊಂಡವನಲ್ಲ.

ಇಲ್ಲಿ ಒಂದು ವಿಷಯವನ್ನು ನಾನು ಹೇಳಲೇ ಬೇಕು. ನಾನು ಯಾವತ್ತೂ ರಾಜಕಾರಣಿಯಾಗಬೇಕೆಂದು ಕನಸು ಕಂಡವನಲ್ಲ. ನನ್ನ ಕುಟುಂಬದಲ್ಲಿ ಯಾರೂ ರಾಜಕಾರಣಿಗಳಿಲ್ಲ. ನನಗೆ ಇಂಜಿನಿಯರ್ ಆಗಬೇಕೆಂದು ಆಸೆ ಇತ್ತು. ನನ್ನನ್ನು ಓದಿಸಿದ ನನ್ನ ತಂದೆಗೆ ನಾನೊಬ್ಬ ದೊಡ್ಡ ಆಫೀಸರ್ ಆಗಬೇಕೆಂಬ ಕನಸಿತ್ತು. ದೇವರಾಜ ಅರಸು, ರಾಮಕೃಷ್ಣ ಹೆಗಡೆ ಮತ್ತು ಜೆ.ಎಚ್.ಪಟೇಲ್ ಅವರಂತಹ ಮಹಾನ್ ನಾಯಕರು ನನ್ನನ್ನು ಗುರುತಿಸಿ ರಾಜಕೀಯ ಸ್ಥಾನಮಾನ, ಅಧಿಕಾರ ಕೊಡದೆ ಹೋಗಿದ್ದಿದ್ದರೆ ಇಂದು ಈ ಬಿ.ಎ. ಮೊಹಿದ್ದೀನ್ ಯಾರು ಎಂದು ಯಾರಿಗೂ ಗೊತ್ತಿರುತ್ತಿರಲಿಲ್ಲ. ನನ್ನ ಪರಿಚಯವೇ ಯಾರಿಗೂ ಇರುತ್ತಿರಲಿಲ್ಲ. ಒಬ್ಬ ಸಾಮಾನ್ಯನಲ್ಲಿ ಸಾಮಾನ್ಯನಾಗಿ ನಾನು ಮುಗಿದು ಹೋಗುತ್ತಿದ್ದೆ. ನಾನು ರಾಜಕೀಯವನ್ನು ಅರಸಿ ಹೋಗಿಲ್ಲ. ರಾಜಕಾರಣಿಗಳ ಬೆನ್ನು ಹಿಡಿದವನಲ್ಲ. ಅಧಿಕಾರ ಬೇಕು ಎಂದು ಯಾವತ್ತೂ ಹಂಬಲಿಸಿದವನಲ್ಲ. ಬದಲಾಗಿ ರಾಜಕೀಯವೇ ನನ್ನನ್ನು ನನಗೆ ಇಷ್ಟವಿಲ್ಲದಿದ್ದರೂ ಕೈ ಹಿಡಿದು ಎಳೆದುಕೊಂಡು ಹೋಗಿ ಈ ಸ್ಥಾನದಲ್ಲಿ ತಂದು ನಿಲ್ಲಿಸಿದೆ ಎಂಬುದು ಸತ್ಯ.

ನನ್ನ ರಾಜಕೀಯ ಬದುಕಿಗೆ ಆದರ್ಶವಾಗಿದ್ದವರು ಇಸ್ಲಾಮಿನ ನಾಲ್ಕು ಖಲೀಫರುಗಳಾದ ಅಬೂಬಕರ್ ಸಿದ್ದೀಕ್(ರ), ಉಮರ್ ಖತ್ತಾಬ್(ರ), ಉಸ್ಮಾನ್(ರ) ಮತ್ತು ಅಲಿ ಇಬ್ನು ಅಬೂ ತಾಲಿಬ್(ರ). ಇವರ ಚರಿತ್ರೆಯೇ ನನಗೆ ಸ್ಫೂರ್ತಿ. ಇವರಾರು ಸ್ಥಿತಿವಂತರಾಗಿರಲಿಲ್ಲ. ತಮ್ಮದೆಲ್ಲವನ್ನೂ ಸಮಾಜಕ್ಕೆ ಧಾರೆ ಎರೆದ ಮಹಾನ್ ವ್ಯಕ್ತಿಗಳಾಗಿದ್ದರು. ಇವರು ಪ್ರಾಮಾಣಿಕರಾಗಿದ್ದರು. ನ್ಯಾಯ ಪಾಲಿಸುವವರಾಗಿದ್ದರು. ಕೆಡುಕು, ಭ್ರಷ್ಟಾಚಾರಗಳನ್ನು ಕಂಡರೆ ಕೆಂಡವಾಗುತ್ತಿದ್ದರು. ಅಂತಹವರಿಗೆ ಗರಿಷ್ಠ ಶಿಕ್ಷೆ ವಿಧಿಸುತ್ತಿದ್ದರು. ಉಮರ್ ಖತ್ತಾಬ್ ಅವರ ಆಡಳಿತ ಕಾಲದಲ್ಲಿ ಒಬ್ಬ ಹಾಲು ಖರೀದಿಸುವವನು ಹಾಲು ಮಾರಾಟಗಾರನಲ್ಲಿ "ನೀನು ಹಾಲಿಗೆ ನೀರು ಬೆರಸದೆ ತುಂಬಾ ಒಳ್ಳೆಯ ಹಾಲನ್ನು ಕೊಡುತ್ತಿರುವೆ. ಇದಕ್ಕೆ ಕಾರಣವೇನು?" ಎಂದು ಕೇಳಿದನಂತೆ. ಆಗ ಹಾಲು ಮಾರುವವನು ಹೆದರಿ "ಅಯ್ಯೋ, ಹಾಗೇನಾದರೂ ನಾನು ಹಾಲಿಗೆ ನೀರು ಬೆರೆಸಿದರೆ, ಅದು ಖಲೀಫರಿಗೆ ಗೊತ್ತಾಗಿ ಬಿಟ್ಟರೆ ನನ್ನ ಕತೆ ಮುಗಿದಂತೆಯೇ. ಹಾಲಿಗೆ ನೀರು ಬೆರೆಸುವುದು ಬಿಡಿ; ಅಂತಹ ಯೋಚನೆ ಮಾಡುವುದು ಕೂಡಾ ಈ

ನಾಡಿನಲ್ಲಿ ಯಾರಿಗೂ ಸಾಧ್ಯವಿಲ್ಲ" ಎಂದನಂತೆ.

ಖಲೀಫಾ ಅವರುಗಳು ಸಾರ್ವಜನಿಕ ಹಣದಿಂದ ಸ್ವಂತಕ್ಕೆ ಎಂದು ಒಂದು ಪೈಸೆ ಕೂಡಾ ಉಪಯೋಗಿಸಿದವರಲ್ಲ. ಭ್ರಷ್ಟಾಚಾರ ಎಂಬ ಶಬ್ದವೇ ಅವರ ಆಡಳಿತದಲ್ಲಿ, ಬದುಕಲ್ಲಿ ಇರಲಿಲ್ಲ. ಅವರೆಲ್ಲ ಸರಳವಾದ ಆದರ್ಶ ಬದುಕನ್ನು ಬದುಕಿದವರು. ಯಾವೊಬ್ಬ ಪ್ರಜೆಗೂ ಅನ್ಯಾಯವಾಗದಂತೆ ನೋಡಿಕೊಂಡವರು. ಅವರೆಲ್ಲ ಮರಣ ಹೊಂದುವಾಗ ಅವರಲ್ಲಿ ಉಳಿತಾಯದ ಹಣ, ಆಸ್ತಿ ಎಂದು ಏನೂ ಇರಲಿಲ್ಲ.

ದುರಂತ ಎಂದರೆ ಈ ನಾಲ್ವರು ಖಲೀಫಾಗಳು ಆಡಳಿತ ನಡೆಸಿದ ಅರೇಬಿಯಾದಲ್ಲೂ ಇಂದು ಭ್ರಷ್ಟಾಚಾರ ತಾಂಡವವಾಡುತ್ತಿದೆ. ಜಗತ್ತಿಗೆ ಆದರ್ಶ, ಮಾದರಿಯಾಗಬೇಕಾಗಿದ್ದ ಅರಬ್ ರಾಷ್ಟ್ರಗಳು ಇಂದು ಪತನದತ್ತ ಸಾಗುತ್ತಿವೆ. ಮಕ್ಕಳು, ಮಹಿಳೆಯರು, ಅಮಾಯಕರ ಮೇಲೆ ಬಾಂಬುಗಳ ಸುರಿಮಳೆಯಾಗುತ್ತಿವೆ. ಒಂದು ರಾಷ್ಟ್ರವನ್ನು ಮುಗಿಸಲು ಇನ್ನೊಂದು ಅರಬ್ ರಾಷ್ಟ್ರ ಟೊಂಕಕಟ್ಟಿ ನಿಂತಿದೆ. ಪ್ರವಾದಿಗಳು ನಡೆದಾಡಿದ ನೆಲದಲ್ಲಿ ರಕ್ತದೋಕುಳಿ ಹರಿಯುತ್ತಿದೆ. ಈ ನಾಲ್ವರು ಖಲೀಫಾಗಳ ಮರಣಾನಂತರ ಈ ಜಗತ್ತಿನಲ್ಲಿ ಎಲ್ಲೂ ಅವರು ನಡೆಸಿದಂತಹ ಆಡಳಿತ ನೆಲೆ ನಿಲ್ಲಲೇ ಇಲ್ಲ.

ವಂಶಾಡಳಿತ ಇಸ್ಲಾಮಿಗೆ ಸಂಪೂರ್ಣ ವಿರುದ್ಧವಾದುದಾಗಿದೆ. ಅಂತಹ ಒಂದು ಕಲ್ಪನೆ ಕೂಡಾ ಇಸ್ಲಾಮಿನಲ್ಲಿಲ್ಲ. ವಂಶಾಡಳಿತದ ವಿರುದ್ಧ ಅಂದು ಕರ್ಬಲಾ ಯುದ್ಧವೇ ನಡೆದಿತ್ತು. ಆದರೆ ಇಂದು ಅರೇಬಿಯಾದಲ್ಲಿ ಇಸ್ಲಾಮಿಗೆ ವಿರುದ್ಧವಾದಂತಹ ವಂಶಾಡಳಿತವಿದೆ. ಅರಬ್ ಜಗತ್ತಿನ ಅರಾಜಕತೆಗೆ ಇದೂ ಒಂದು ಕಾರಣವಾಗಿದೆ. 'ಪ್ರಜಾಪ್ರಭುತ್ವ' ದೇಶವಾದ ಭಾರತದಲ್ಲೂ ಇಂದು ನಾನು, ನನ್ನ ಮಗ, ನನ್ನ ಅಳಿಯ, ನನ್ನ ಮಗಳು, ನನ್ನ ಮೊಮ್ಮಗ ಹೀಗೆ ಎಲ್ಲರೂ ಅಧಿಕಾರಕ್ಕೆ ಬರಬೇಕು ಎಂಬ ಪ್ರಜಾತಂತ್ರಕ್ಕೆ ವಿರೋಧವಾದಂತಹ ಅನೀತಿ ಜಾರಿಗೆ ಬರುತ್ತಿದೆ. ಇದು 'ಪ್ರಜಾಪ್ರಭುತ್ವ'ದ ಒಂದು ದೊಡ್ಡ ದುರಂತವಾಗಿದೆ.

ಇನ್ನು ನನ್ನ ಬಗ್ಗೆ ಹೇಳುವುದಾದರೆ, ಕೆಲವರು ನಾನು ತುಂಬಾ ಒರಟ, ನನಗೆ ಕೋಪ ಜಾಸ್ತಿ ಎಂದು ಹಿಂದಿನಿಂದ ಆಡಿಕೊಳ್ಳುತ್ತಿದ್ದಾರೆ ಎಂದು ಕೇಳಿದ್ದೇನೆ. ಇಂತಹ ಮಾತನ್ನು ನನ್ನ ಆತ್ಮೀಯ ಗೆಳೆಯ ಡಾ। ಟಿ.ಕೆ. ಮುಹಮ್ಮದ್ ಕೂಡಾ ನನ್ನೊಂದಿಗೆ ಒಮ್ಮೆ ಹೇಳಿದ್ದ. ಈ ಬಗ್ಗೆ ನನ್ನೊಡನೆ ಜಗಳವೂ ಆಡಿದ್ದ.

ಒಮ್ಮೆ ಏನಾಯಿತು ಎಂದರೆ, ಈ ಡಾ। ಟಿ.ಕೆ. ಅವನ ಯಾವುದೋ ಒಂದು ಕೆಲಸ ಆಗಬೇಕು ಎಂದು ನಾನು ಬೆಂಗಳೂರಿನಲ್ಲಿದ್ದಾಗ ಫೋನ್ ಮಾಡಿದ್ದ. ನಾನಾಗ ಸಚಿವನಾಗಿದ್ದೆ. ನಾನು ಅವನನ್ನು ಬೆಂಗಳೂರಿಗೆ ಬರಲು ಹೇಳಿದ್ದೆ. ಆತ ನನ್ನ ಬೆಂಗಳೂರಿನ ಕಛೇರಿಗೆ ಬಂದವನು ಚೇಂಬರ್‌ನೊಳಗಿದ್ದ ನನಗೆ ಕಾಣುವಂತೆ ಹೊರಗೆ ಕುರ್ಚಿಯಲ್ಲಿ ಕುಳಿತಿದ್ದ. ನಾನು ಅವನನ್ನು ಗಮನಿಸಿದ್ದೆ. ಕಛೇರಿ ತುಂಬಾ ಜನ ಇದ್ದರು. ಊರಿಂದ ಬಂದಿದ್ದಾನೆ. ಎಲ್ಲರೂ ಹೋದ ಮೇಲೆ ಇವನಲ್ಲಿ ಆರಾಮವಾಗಿ ಕುಳಿತು ಮಾತನಾಡುವ ಎಂದು ಸುಮ್ಮನಿದ್ದೆ. ಸ್ವಲ್ಪ ಹೊತ್ತು ಕಳೆದ ಮೇಲೆ ನೋಡುತ್ತೇನೆ,

ಈ ಡಾ. ಟಿ.ಕೆ. ನಾಪತ್ತೆಯಾಗಿದ್ದ. ಇವನಿಗೆ ಬೇಸರವಾಗಿರಬಹುದು ಎಂದು ನನಗೆ ಗೊತ್ತಾಯಿತು. ಮತ್ತೆ ಅವನನ್ನು ಹುಡುಕಿಸಿ ಕರೆಸಿದ್ದೆ. ಆತ ಕೋಪದಿಂದ ಕೆಂಡವಾಗಿದ್ದ. "ನೀನೀಗ ದೊಡ್ಡ ಜನ ಅಲ್ವಾ. ನಾನು ಬಂದು ನಿನ್ನ ಎದುರು ಕುಳಿತಿದ್ದೇನೆ, ನೀನು ನೋಡಿಯೂ ನೋಡದ ಹಾಗೆ ಮಾಡಿದಿಯಲ್ಲ, ಈ ರೀತಿ ಅವಮಾನ ಮಾಡಬಾರದು" ಎಂದು ಏನೇನೋ ಹೇಳತೊಡಗಿದ. ನಿಜವಾಗಲೂ ನನಗೆ ಅಂತಹ ಭಾವನೆಯೇ ಇರಲಿಲ್ಲ. ಕೆಲಸದ ಒತ್ತಡದಿಂದ ನಾನೇನಾದರೂ ಆ ರೀತಿ ವರ್ತಿಸಿರಬಹುದು. ಆದರೆ ಅದು ಉದ್ದೇಶಪೂರ್ವಕವಲ್ಲ. ಇದೆಲ್ಲ ಅವನಿಗೆ ವಿವರಿಸಿದ ಮೇಲೆ ಆತ ತಣ್ಣಗಾದ. ಅನಂತರ ಅವನ ಕೆಲಸ ಮಾಡಿಸಿಕೊಟ್ಟು ಕಳುಹಿಸಿದ್ದೆ.

ಇನ್ನು ಕೆಲವು ಸಂದರ್ಭಗಳಲ್ಲಿ ನಾನು ನಿಜವಾಗಲೂ ಒರಟನಾಗಿರುತ್ತಿದ್ದೆ. ಕಳ್ಳತನ ಮಾಡಿ, ಗಲಾಟೆ–ಗಲಭೆ ಎಬ್ಬಿಸಿ, ಕೋಮು ಗಲಭೆಯಲ್ಲಿ ಪಾಲ್ಗೊಂಡು ಸಾರ್ವಜನಿಕರಿಗೆ ತೊಂದರೆ ಮಾಡಿದಾಗ ಪೊಲೀಸರು ಬಂಧಿಸಿದರೆ ಅಂತಹವರ ಹೆತ್ತವರು "ನನ್ನ ಮಗನನ್ನು ಪೊಲೀಸರು ಸುಮ್ಮನೆ ಬಂಧಿಸಿದ್ದಾರೆ. ನೀವು ಪೊಲೀಸರಿಗೆ ಒಂದು ಫೋನ್ ಮಾಡಬೇಕು. ನನ್ನ ಮಗನನ್ನು ಬಿಡಿಸಿಕೊಡಬೇಕು. ಆತ ಯಾವ ತಪ್ಪೂ ಮಾಡಿಲ್ಲ. ಅಮಾಯಕ. ಆತನನ್ನು ಸುಮ್ಮನೆ ಈ ಹಗರಣದಲ್ಲಿ ಸಿಲುಕಿಸಲಾಗಿದೆ" ಎಂದು ನನಗೆ ಫೋನ್ ಮಾಡಿಯೋ, ಊರಲ್ಲಿದ್ದರೆ ಮನೆಗೆ ಬಂದು ಗೋಗರೆಯುತ್ತಿದ್ದರು. ಆಗ ನಾನು ಒರಟನಾಗುತ್ತಿದ್ದೆ.

ಯಾವುದೇ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದರೆ ಯಾರು ಹೇಳಿದರೂ, ಎಷ್ಟೇ ದೊಡ್ಡ ವ್ಯಕ್ತಿ ಶಿಫಾರಸು ಮಾಡಿದರೂ ನಾನು ಅವರನ್ನು ಬಿಡಿಸಲು ಠಾಣೆಗೆ ಫೋನ್ ಮಾಡುತ್ತಿರಲಿಲ್ಲ. ಅದೇ ರೀತಿ ಯಾರನ್ನಾದರೂ ಬಂಧಿಸಲು ಒತ್ತಡ ಹೇರುತ್ತಿರಲಿಲ್ಲ. ಪೊಲೀಸರ ಕರ್ತವ್ಯಕ್ಕೆ ಯಾವತ್ತೂ ಅಡ್ಡಿಪಡಿಸುತ್ತಿರಲಿಲ್ಲ. ಅವರ ಕೆಲಸದಲ್ಲಿ ಹಸ್ತಕ್ಷೇಪ ಮಾಡುತ್ತಿರಲಿಲ್ಲ. ಹೀಗೆ ಪೊಲೀಸರ ಮೇಲೆ ಒತ್ತಡ ಹೇರಿದರೆ ಆರೋಪಿಗಳನ್ನು ಬಿಡುವ, ಅಮಾಯಕರನ್ನು ಬಂಧಿಸುವ ಸಾಧ್ಯತೆಗಳಿರುತ್ತವೆ. ಇಂತಹ ಹಸ್ತಕ್ಷೇಪಗಳು ಸ್ವಸ್ಥ ಸಮಾಜಕ್ಕೆ ಮಾರಕ. ಇದು ಭ್ರಷ್ಟಾಚಾರಕ್ಕೆ ಅವಕಾಶ ಮಾಡಿಕೊಡುತ್ತದೆ ಎಂಬುದು ನನ್ನ ನಿಲುವು. ಆದ್ದರಿಂದ ಇಂತಹ ಸಂದರ್ಭಗಳಲ್ಲಿ ನಾನು ಬಹಳ ಒರಟನಾಗಿ ಬಿಡುತ್ತಿದ್ದೆ. ಇದು ಹಲವಾರು ಜನರಿಗೆ ನನ್ನ ಮೇಲೆ ಅಸಹನೆ, ಅಸಮಾಧಾನ ಮೂಡಲು ಕಾರಣವಾಗಿತ್ತು. ಇಂತಹವರು ನನ್ನನ್ನು ಒರಟ, ಯಾವುದೇ ಕೆಲಸ ಮಾಡದವನು, ಮುಂಗೋಪಿ ಎಂದೆಲ್ಲ ಹೇಳಿಕೊಂಡು ತಿರುಗಾಡುತ್ತಾರೆ. ಇದರಲ್ಲಿ ನನಗೆ ಎಳ್ಳಷ್ಟೂ ಬೇಸರವಿಲ್ಲ.

ಇನ್ನು ನನ್ನ ಮಕ್ಕಳ ಬಗ್ಗೆ ಹೇಳುವುದಾದರೆ, ಅವರ ಬಗ್ಗೆ ನನಗೆ ಹೆಮ್ಮೆ ಇದೆ. ನಾನು ಅಧಿಕಾರದ ತುತ್ತತುದಿಯಲ್ಲಿದ್ದಾಗಲೂ ಕೂಡಾ ಅವರು ಯಾವತ್ತೂ ನನ್ನ ಅಧಿಕಾರವನ್ನು ದುರುಪಯೋಗಪಡಿಸಿಕೊಂಡವರಲ್ಲ. ಹಸ್ತಕ್ಷೇಪ ಮಾಡಿದವರಲ್ಲ. ವಿಧಾನಸೌಧದ ಮೆಟ್ಟಿಲು ಕೂಡಾ ಏರಿದವರಲ್ಲ. ಇಂದಿನ ರಾಜಕೀಯದಲ್ಲಿ ನಡೆಯುತ್ತಿರುವ

ಸ್ವಜನ ಪಕ್ಷಪಾತ, ಕುಟುಂಬ ವ್ಯಾಮೋಹ ನೋಡಿದರೆ ನನಗೆ ಒಂದು ರೀತಿಯ ಜಿಗುಪ್ಸೆ ಉಂಟಾಗುತ್ತದೆ. ಈ ರಾಜಕೀಯದ ಕೊಳಚೆಗೆ ನನ್ನ ಮಕ್ಕಳು, ಕುಟುಂಬ ಬಲಿಯಾಗದೇ ಇರುವುದು ನನಗೆ ಬಹಳ ಸಮಾಧಾನ ತಂದಿದೆ.

ಇತ್ತೀಚೆಗೆ ನನ್ನ ಆರೋಗ್ಯ ತುಂಬಾ ಹದಗೆಟ್ಟಿತ್ತು. ಸುಮಾರು ಒಂದು ತಿಂಗಳಷ್ಟು ಕಾಲ ಚಿಕಿತ್ಸೆಗಾಗಿ ಆಸ್ಪತ್ರೆಗೆ ದಾಖಲಾಗಿದ್ದೆ. ನನ್ನ ಹೆಂಡತಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹೀಗೆ ನನ್ನ ಇಡೀ ಕುಟುಂಬವೇ ಆಸ್ಪತ್ರೆಯಲ್ಲಿ ನನ್ನ ಜೊತೆಗಿತ್ತು. ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ಗಾಬರಿ, ಆತಂಕ ನೋಡಿ ನನಗೇಕೋ ತೃಪ್ತಿ. ಧನ್ಯ ಭಾವನೆ. ಎಲ್ಲಿ ನಾನು ಇವರನ್ನೆಲ್ಲಾ ಬಿಟ್ಟು ಹೋಗುತ್ತೇನೋ ಎಂಬ ಭಯ ಇವರಿಗೆಲ್ಲ. ನನಗೀಗ 80 ವರ್ಷ ದಾಟುತ್ತಿದ್ದರೂ ನಾನಿನ್ನೂ ಬದುಕಬೇಕು. ಇವರ ಮಧ್ಯೆ ಬಾಳಬೇಕು ಎಂದು ಇವರೆಲ್ಲರ ಹಂಬಲ ನೋಡಿದರೆ ಯಾಕೋ ನನಗೂ ಇನ್ನೂ ಕೆಲವು ವರ್ಷಗಳಾದರೂ ಬದುಕಬೇಕು ಎಂಬ ಆಸೆ ಚಿಗುರುತ್ತಿದೆ. ಪುಟ್ಟ ಮಗುವಿನಂತೆ ಪ್ರೀತಿಯಿಂದ, ಮಮತೆಯಿಂದ ಇವರೆಲ್ಲರೂ ನನ್ನನ್ನು ನೋಡಿಕೊಳ್ಳುತ್ತಿದ್ದಾರೆ. ಇದನ್ನೆಲ್ಲಾ ಅನುಭವಿಸುವಾಗ ನಿಜವಾಗಿಯೂ ನಾನು ಅದೃಷ್ಟವಂತ ಅನಿಸುತ್ತದೆ. ಜೀವನದ ಇಳಿ ವಯಸ್ಸಿನಲ್ಲೂ ನಮ್ಮನ್ನು ಎಲ್ಲರೂ ಪ್ರೀತಿಸುತ್ತಾರೆ, ಗೌರವಿಸುತ್ತಾರೆ, ನಮಗಾಗಿ ತುಡಿಯುತ್ತಾರೆ, ಮಿಡಿಯುತ್ತಾರೆ ಎನ್ನುವುದಕ್ಕಿಂತ ಬದುಕಿನಲ್ಲಿ ಇನ್ನೇನು ಬೇಕು ಹೇಳಿ. ನಿಜವಾಗಿಯೂ ನಾನು ಪುಣ್ಯವಂತ, ಭಾಗ್ಯವಂತ ಅನ್ನಿಸುತ್ತದೆ.

ನಾನು ಆಸ್ಪತ್ರೆಯಲ್ಲಿರುವಾಗ ನನ್ನ ಕುಟುಂಬದ ಜೊತೆ ನನ್ನ ಗೆಳೆಯರು, ಕಾಲವಾದ ನನ್ನ ಗೆಳೆಯರ ಮಕ್ಕಳು, ಹಿತೈಷಿಗಳು, ನನ್ನ ಬಗ್ಗೆ ಅಭಿಮಾನ ಇಟ್ಟುಕೊಂಡವರು ಹೀಗೆ ಎಲ್ಲರೂ ಬಂದು ನನ್ನನ್ನು ಭೇಟಿಯಾಗಿದ್ದಾರೆ. ಅವರ ಮಾತು, ಪ್ರೀತಿ ಅವರು ತೋರಿದ ಗೌರವ, ಅಭಿಮಾನ; ಅವರ ಮುಖದಲ್ಲಿ ಎದ್ದು ಕಾಣುತ್ತಿದ್ದ ದುಗುಡ; ನಾನು ಬೇಗ ಗುಣಮುಖವಾಗಬೇಕೆಂದು ಅವರ ಕಣ್ಣುಗಳು ಹೇಳುತ್ತಿದ್ದ ಹಾರೈಕೆ... ಇನ್ನೇನು ಬೇಕು ಹೇಳಿ ಈ ಬದುಕಲ್ಲಿ? ಎಲ್ಲರೂ ನಮ್ಮನ್ನು ಪ್ರೀತಿಸುತ್ತಿರುವಾಗ, ಗೌರವಿಸುತ್ತಿರುವಾಗ ನಾವಿನ್ನೂ ಅವರ ಮಧ್ಯೆ ಬದುಕಬೇಕೆಂದು ಬಯಸುತ್ತಿರುವಾಗಲೇ ಎದ್ದು ಹೋಗಬೇಕು ಎಂದು ಅನಿಸುತ್ತಿದ್ದರೂ...ಯಾಕೋ ಇವರೆಲ್ಲರ ಪ್ರೀತಿಯನ್ನು ಇನ್ನೂ ಸ್ವಲ್ಪ ದಿನ ಸವಿಯಬೇಕು, ಅನುಭವಿಸಬೇಕು ಎಂದು ಆಸೆಯಾಗುತ್ತಿದೆ.

ಪ್ರತಿಯೊಬ್ಬ ಮನುಷ್ಯನ ಒಳಗೆ ಇರುವಂತೆ ನನ್ನೊಳಗೂ ಒಬ್ಬ 'ನಾನು' ಇದ್ದಾನೆ. ಈ 'ನಾನು' ಅನ್ನು ಈ ತನಕ ನಾನು ಯಾರಿಗೂ ಪರಿಚಯಿಸಿದವನಲ್ಲ. ಯಾರಿಗೂ ಬಿಟ್ಟು ಕೊಟ್ಟುವನಲ್ಲ. ಬೆಂಗಳೂರಿನಲ್ಲಿರುವ ನನ್ನ ಇಬ್ಬರು ಆತ್ಮೀಯ ಲೇಖಕರು, ಪತ್ರಕರ್ತರು ನನ್ನ ಬಗ್ಗೆ ಪುಸ್ತಕ ಬರೆಯಬೇಕೆಂದು ಅನೇಕ ಬಾರಿ ನನ್ನ ಬಳಿ ಬಂದಿದ್ದರು. ನನ್ನೆದುರು ಲ್ಯಾಪ್‌ಟಾಪ್, ಪುಸ್ತಕ, ಪೆನ್ನು ಹಿಡಿದು ಕುಳಿತಿದ್ದರು. ನನ್ನೊಳಗಿನ 'ನಾನು' ಅನ್ನು ಹೊರಗೆಳೆಯಲು ಪ್ರಯತ್ನಿಸಿದ್ದರು. ಆದರೆ ಅವರು ಅದರಲ್ಲಿ

ವಿಫಲರಾಗಿದ್ದರು ಎನ್ನುವುದಕ್ಕಿಂತ, ನನ್ನೊಳಗನ್ನು ಅವರ ಮುಂದೆ ಬಿಚ್ಚಿಡಲು ನನಗೆ ಮನಸ್ಸಾಗಲಿಲ್ಲ, ಸಾಧ್ಯವಾಗಲಿಲ್ಲ. ಆಗೆಲ್ಲ ನಾನು "ಈಗ ಬೇಡ, ಇನ್ನೊಮ್ಮೆ ನೋಡುವ" ಎಂದು ಅವರನ್ನು ಅನೇಕ ಬಾರಿ ಹಿಂದೆ ಕಳುಹಿಸಿದ್ದೆ. ಅವರನ್ನು ನಿರಾಸೆಗೊಳಿಸಿದ್ದೆ.

ಈ ಕೃತಿಯ ಇಬ್ಬರು ಲೇಖಕರಾದ ಮುಹಮ್ಮದ್ ಕುಳಾಯಿ ಮತ್ತು ಬಿ.ಎ. ಮುಹಮ್ಮದ್ ಅಲಿ ಕೂಡಾ ನನ್ನ ಬಗ್ಗೆ ಒಂದು ಪುಸ್ತಕ ಬರೆಯಬೇಕೆಂದು ಕಳೆದ ಎರಡು ವರ್ಷಗಳಿಂದ ನನ್ನ ಬೆನ್ನು ಬಿದ್ದಿದ್ದರು. ನಾನು ಒಪ್ಪಿರಲಿಲ್ಲ. "ನಿಮಗಾಗಿ ಅಲ್ಲ ಸಾರ್, ಮುಂದಿನ ಪೀಳಿಗೆಗೆ ನಿಮ್ಮ ಬದುಕು, ಅನುಭವ ಖಂಡಿತ ಬೇಕು. ನೀವು ಒಪ್ಪಿಕೊಳ್ಳಬೇಕು. ನೀವು ಎಲ್ಲಿದ್ದೀರೋ ಅಲ್ಲಿಗೆ ಬಂದು ನಾವು ನಿಮ್ಮೆದುರು ಕುಳಿತುಕೊಳ್ಳುತ್ತೇವೆ. ನೀವು ಹೇಳುತ್ತಾ ಹೋಗಿ ನಾವು ಬರೆದುಕೊಳ್ಳುತ್ತೇವೆ." ಎಂದು ಒತ್ತಾಯಿಸುತ್ತಲೇ ಇದ್ದರು. ಪಾಪ ಇವರಿಗೂ ನನ್ನ ಮೇಲೆ ಪ್ರೀತಿ, ಅಭಿಮಾನ. ಕೊನೆಗೂ ನಾನು ಯೋಚಿಸಿದೆ. ನನ್ನ ಬದುಕು, ನನ್ನ ಆದರ್ಶ, ನಾನು ನಡೆದು ಬಂದ ದಾರಿಯಿಂದ ಯಾರಿಗಾದರೂ ಪ್ರಯೋಜನವಾಗುವುದಾದರೆ, ಒಳ್ಳೆಯದಾಗುವುದಾದರೆ ಯಾಕೆ ನಾನು ನನ್ನೊಳಗಿನ 'ನಾನು' ಅನ್ನು ಈ ಸಮಾಜಕ್ಕೆ ಪರಿಚಯಿಸಬಾರದು ಎಂದು. ಹೌದು, ಬಹಳ ಯೋಚಿಸಿ ನಾನು ಒಂದು ತೀರ್ಮಾನಕ್ಕೆ ಬಂದೆ. ಈ ಇಬ್ಬರೂ ಲೇಖಕರನ್ನು ಕರೆಯಿಸಿ ನನ್ನೊಳಗೆ ಅವಿತುಕೊಂಡಿರುವವನನ್ನು ಯಾವ ಮುಜುಗರವೂ ಇಲ್ಲದೆ, ಯಾವ ಸಂಕೋಚವೂ ಇಲ್ಲದೆ ಇವರ ಮೂಲಕ ಪರಿಚಯಿಸಿದ್ದೇನೆ. ಯಾವುದನ್ನೂ ಬಚ್ಚಿಡದೇ ನೆನಪಿನಲ್ಲಿರುವುದನ್ನೆಲ್ಲ ಬಿಚ್ಚಿಟ್ಟಿದ್ದೇನೆ. ಹಲವಾರು ದಿನ ಈ ಇಬ್ಬರು ಲೇಖಕರು ನನ್ನ ಮನೆಗೆ ಬಂದು ಬೆಳಗಿನಿಂದ ರಾತ್ರಿಯವರೆಗೆ ನನ್ನೆದುರು ಕುಳಿತು ನನ್ನೊಳಗನ್ನು ಕೆದಕುತ್ತಾ, ಪ್ರಶ್ನೆಗಳ ಮೇಲೆ ಪ್ರಶ್ನೆಗಳನ್ನು ಎಸೆಯುತ್ತಾ, ನನ್ನ ಆಳವನ್ನು ಜಾಲಾಡಿ ಈ ಕೃತಿಯನ್ನು ರಚಿಸಿದ್ದಾರೆ. ನನ್ನೊಳಗಿನ 'ನಾನು' ಅನ್ನು ನಿಮ್ಮೊಡನೆ ಹಂಚಿಕೊಂಡ ಮೇಲೆ ಯಾಕೋ ಒಂಥರಾ ಸಮಾಧಾನ. ತೃಪ್ತಿ. ದೇಹದಲ್ಲೆಲ್ಲ ಖುಷಿಯ, ಸಂತೋಷದ ತಂಪು ಗಾಳಿಯ ಸುಳಿಯೊಂದು ಹರಿದಾಡಿದಂತಹ ಪುಳಕ. ಮನಸ್ಸೆಲ್ಲ ಖಾಲಿಯಾದಂತೆ, ದೇಹವೆಲ್ಲ ಹಗುರವಾದಂತೆ ಹಿತವಾದ ಭಾವ.

ಇಷ್ಟೆಲ್ಲ ಹೇಳಿದ ಮೇಲೂ ನಾನು ಒಂದು ವಿಷಯವನ್ನು ನಿಮ್ಮಿಂದ ಮುಚ್ಚಿಟ್ಟಿದ್ದೇನೆ. ಇದು ನನ್ನ ಜೀವನದಲ್ಲಿ ನಡೆದ ಒಂದು ಬಹುದೊಡ್ಡ ಘಟನೆ. ಈ ಘಟನೆಯನ್ನು ನಾನು ಈ ತನಕ ಯಾರಲ್ಲೂ ಹೇಳಿಕೊಂಡಿಲ್ಲ. ನಿನ್ನೆ–ಮೊನ್ನೆಯವರೆಗೂ ನಿಮ್ಮಲ್ಲಿ ಇದನ್ನು ಹೇಳುವುದೋ ಬೇಡವೋ ಎಂಬ ತೊಯ್ದಾಟದಲ್ಲಿದ್ದೆ. ಹೇಳಲು ನಾಚಿಕೆಯಾಗುತ್ತಿತ್ತು. ಹೇಳದೇ ಇದ್ದರೆ ಅದು ನನ್ನೊಳಗೆ ಇದ್ದು, ನನ್ನ ಜೊತೆಗೆ ಸತ್ತು ಹೋಗುತ್ತದೆ. ಇಂದು ಆ ಘಟನೆಯನ್ನು ನಿಮ್ಮ ಜೊತೆ ಹೇಳುವುದು ಎಂದು ದೃಢ ನಿರ್ಧಾರ ಮಾಡಿದ್ದೇನೆ. ಈ ಘಟನೆಯಿಂದ ಸಮಾಜ ನನ್ನನ್ನು ಯಾವ ದೃಷ್ಟಿಕೋನದಿಂದ ಬೇಕಾದರೂ ನೋಡಲಿ, ಸತ್ಯವನ್ನು ಹೇಳಿಯೇ ಬಿಡುವುದು ಎಂದು ತೀರ್ಮಾನಿಸಿದ್ದೇನೆ.

ಪ್ರತಿದಿನವೂ ನನ್ನನ್ನು ಕಾಡುತ್ತಿರುವ ಈ ಒಂದು ವಿಷಯವನ್ನು ನಿಮ್ಮಲ್ಲಿ ಹೇಳಿಕೊಳ್ಳದೇ ಹೋದರೆ ಅದೊಂದು ಆತ್ಮವಂಚನೆಯಾದೀತು. ಮಾತ್ರವಲ್ಲ, ಆ ವಂಚನೆಯನ್ನು ಸಹಿಸಿಕೊಳ್ಳಲೂ ನನ್ನಿಂದಾಗದು.

ವಿಷಯ ಏನೂ ಎಂದರೆ, ನಾನೊಮ್ಮೆ ನನ್ನ ಪತ್ನಿ ಖತೀಜಾಳಿಗೆ ಹೊಡೆದುಬಿಟ್ಟೆ. ಇದು ನಾನು ನನ್ನ ಜೀವನದಲ್ಲಿ ಮಾಡಿದ ಒಂದು ಬಹಳ ದೊಡ್ಡ ತಪ್ಪು. ಈ ತಪ್ಪು ಇಂದಿಗೂ ನನ್ನನ್ನು ಕೊರೆಯುತ್ತಿದೆ. ಆ ಘಟನೆಯನ್ನು ನೆನೆದಾಗಲೆಲ್ಲ ನನಗೆ ನಾಚಿಕೆಯಾಗುತ್ತದೆ.

ಅದು ನನ್ನ ಚಿಕ್ಕ ಮಗಳ ಮದುವೆಯ ಸಂದರ್ಭ. ಮನೆಯ ಹೆಂಗಸರು, ನೆಂಟರು ಎಲ್ಲ ಅಂದು ಮದುಮಗಳನ್ನು ಕರೆತರಲು ಮದುಮಗನ ಮನೆಗೆ ಹೊರಟು ನಿಂತಿದ್ದರು. ಅವರ ಜೊತೆ ನನ್ನ ಪತ್ನಿ ಖತೀಜಾಳು ಹೊರಟಿದ್ದಳು. ಎಲ್ಲರೂ ತಯಾರಾಗಿ ನಿಂತು ಇವಳಿಗಾಗಿ ಹೊರಗೆ ಕಾಯುತ್ತಿದ್ದರು. ಎಷ್ಟು ಹೊತ್ತಾದರೂ ಇವಳು ಕೋಣೆಯಿಂದ ಹೊರಬರುವುದು ಕಾಣಲಿಲ್ಲ. ನಾನು ಒಳಗೆ ಹೋಗಿ ನೋಡಿದರೆ, ಮನೆಯ ಇಬ್ಬರು ಕೆಲಸದ ಬಾಲಕಿಯರಿಗೆ ಅವಳು ಅಲಂಕಾರ ಮಾಡುತ್ತಿದ್ದಳು. ಆ ಬಾಲಕಿಯರು ನಮ್ಮ ದೂರದ ಬಂಧುವೊಬ್ಬರ ಮಕ್ಕಳು. ಅವರು ತುಂಬಾ ಬಡತನದಲ್ಲಿದ್ದುದರಿಂದ ನಮ್ಮ ಮನೆಯಲ್ಲಿ ಕೆಲಸಕ್ಕೆ ಇಟ್ಟುಕೊಂಡಿದ್ದೆ. ಇವಳು ಅವರಿಬ್ಬರಿಗೆ ಹೊಸ ಬಟ್ಟೆ ಹಾಕಿಸಿ, ತಲೆ ಬಾಚಿ, ನಾನು ಕೋಣೆಗೆ ಹೋಗುವಾಗ ಹೂ ಮುಡಿಸುತ್ತಿದ್ದಳು. ಇದನ್ನು ಕಂಡ ನನಗೆ ಎಲ್ಲಿಲ್ಲದ ಕೋಪ ಬಂತು.

"ಅವರಿಗೆ ಯಾಕೆ ಅಲಂಕಾರ ಮಾಡ್ತಿಯಾ, ಎಲ್ಲಿಗೆ ಕರೆದುಕೊಂಡು ಹೋಗ್ತಿಯಾ?" ಕೇಳಿದೆ.

ಆ ಬಾಲಕಿಯರ ಅಲಂಕಾರದ ಸಂಭ್ರಮದಲ್ಲೇ ಮುಳುಗಿದ್ದ ಅವಳು "ಬಡವರ ಮಕ್ಕಳು ಪಾಪ. ನಮ್ಮ ಜೊತೆ ಬರಲಿ" ಎಂದಳು. ಅವಳು ಅಷ್ಟು ಹೇಳಿದ್ದೇ ತಡ, ನಾನು ಕೋಪ ತಡೆಯಲಾರದೆ ಅವಳ ಕೆನ್ನೆಗೊಂದು ಬಾರಿಸಿಬಿಟ್ಟೆ. ಅವಳು ಒಮ್ಮೆಲೇ ನಡುಗಿಬಿಟ್ಟಳು. ಅವಳಿಗೆ ಇದು ಅನಿರೀಕ್ಷಿತವಾಗಿತ್ತು. ಅರ್ಥವಾಗದೆ ನನ್ನನ್ನೇ ದಿಟ್ಟಿಸುತ್ತಿದ್ದ ಅವಳ ಕಣ್ಣುಗಳಲ್ಲಿ ನೀರಧಾರೆ ಹರಿಯತೊಡಗಿತು. ಇದು ಮನೆಯಲ್ಲಿ ದೊಡ್ಡ ವಿಷಯವಾಯಿತು. ಮನೆಯಲ್ಲಿದ್ದವರ ಸಂಭ್ರಮವೆಲ್ಲ ಕರಗಿಹೋಯಿತು. ಆಮೇಲೆ ಅವಳು ಮಗಳನ್ನು ಕರೆತರಲು ಹೋಗಲಿಲ್ಲ. ಪಾಪ, ಅಳುತ್ತಾ ಅವಳು ಕೋಣೆ ಸೇರಿದಳು. ಸಂಭ್ರಮದಲ್ಲಿದ್ದ ಆ ಕೆಲಸದ ಮಕ್ಕಳೂ ಮೂಲೆ ಸೇರಿದವು. ಇಡೀ ಕಾರ್ಯಕ್ರಮವೇ ಹಾಳಾಗಿಬಿಟ್ಟಿತು.

ಅನಂತರ ಅವಳು ಬಹಳ ದಿನ ನನ್ನೊಡನೆ ಮಾತನಾಡಲಿಲ್ಲ. ನನಗೂ ಅವಳ ಮುಖ ನೋಡಲು ಧೈರ್ಯವಿರಲಿಲ್ಲ. ಆಮೇಲೆ ಈ ಘಟನೆಯನ್ನು ನಾನು ಮರೆತುಬಿಟ್ಟಿದ್ದೆ. ಅವಳು ಸಹಜವಾಗಿಯೇ ಇದ್ದಳು. ಒಂದು ದಿನ ಅವಳು ನನ್ನಲ್ಲಿ ಕೇಳಿದಳು "ನೀವು ಅಂದು ನನ್ನನ್ನು ಯಾಕೆ ಹೊಡೆದಿರಿ? ನಾನೇನು ತಪ್ಪು ಮಾಡಿದ್ದೆ" ಎಂದು.

"ಮತ್ತೆ ನೀನು ಆ ಕೆಲಸದ ಮಕ್ಕಳನ್ನು ಕರೆದುಕೊಂಡು ಮದುಮಗಳನ್ನು ಕರೆತರಲು ಬೀಗರ ಮನೆಗೆ ಹೊರಟಿದ್ದಿಯಲ್ಲಾ, ಇದು ಸರಿಯಾ? ಅಷ್ಟೂ ನಿನಗೆ ಗೊತ್ತಾಗುವುದಿಲ್ಲವಾ?" ಕೇಳಿದೆ.

"ಅವರನ್ನು ನಾನು ಎಂದೂ ಕೆಲಸದ ಮಕ್ಕಳಂತೆ ನೋಡಿಲ್ಲ. ನನ್ನ ಹೊಟ್ಟೆಯಲ್ಲಿ ಹುಟ್ಟಿದ ಸ್ವಂತ ಮಕ್ಕಳಂತೆ ಸಮಾನವಾಗಿ ಕಂಡಿದ್ದೇನೆ. ಪಾಪ ಬಡವರ ಮಕ್ಕಳು. ಮನೆ, ತಂದೆ-ತಾಯಿ ಎಲ್ಲರನ್ನೂ ಬಿಟ್ಟು ಹೊಟ್ಟೆಯ ಹಸಿವಿಗಾಗಿ ಇಲ್ಲಿಗೆ ಕೆಲಸಕ್ಕೆ ಬಂದಿದ್ದಾರೆ. ಇವರಿಗೆ ಎಲ್ಲಿಗಾದರೂ ಹೋಗಲಿಕ್ಕಿದೆಯಾ ಹೇಳಿ. ನಮ್ಮ ಮಕ್ಕಳ ಹಾಗೆಯೇ ಅವರಿಗೂ ಆಸೆಗಳಿರುವುದಿಲ್ಲವಾ? ಮದುವೆ, ಸಭೆ ಸಮಾರಂಭಗಳಿಗೆ ಹೊಸ ಬಟ್ಟೆ ಧರಿಸಿಕೊಂಡು ಹೋಗಬೇಕೂಂತ ಅವರಿಗೂ ಕನಸುಗಳಿರುವುದಿಲ್ಲವಾ ಹೇಳಿ. ಆ ಮಕ್ಕಳು ಅಂದು ಎಷ್ಟೊಂದು ಸಂಭ್ರಮದಲ್ಲಿದ್ದರು. ಎಲ್ಲ ಹಾಳು ಮಾಡಿಬಿಟ್ಟಿರಿ ನೀವು. ಬಡವರು, ಶ್ರೀಮಂತರು, ನಮ್ಮ ಮಕ್ಕಳು, ಬೇರೆಯವರ ಮಕ್ಕಳು, ಕೆಲಸದ ಮಕ್ಕಳು ಎಂದು ಯಾವತ್ತೂ ಅಸಮಾನತೆಯಿಂದ ನೋಡಬಾರದು. ಭೇದ- ತಾರತಮ್ಯ ಮಾಡಬಾರದು. ಬಡವರಾಗಿ ಹುಟ್ಟಿದ್ದು ಅವರ ತಪ್ಪಲ್ಲ. ಅವರನ್ನು ಬಡವರಾಗಿ ಕಾಣುವುದು, ಕೆಲಸದವರೆಂದು ಕೀಳಾಗಿ ನಡೆಸಿಕೊಳ್ಳುವುದು ತಪ್ಪು. ನನಗಂತೂ ಅದು ಸಾಧ್ಯವೇ ಇಲ್ಲ. ನಾನು ಎಲ್ಲರನ್ನೂ ಸಮಾನವಾಗಿ ಕಾಣುವವಳು. ಅದು ಮಾತ್ರ ನನ್ನಿಂದ ಸಾಧ್ಯ. ಅದರಾಚೆ ಯೋಚಿಸಲೂ ನನ್ನಿಂದಾಗಲ್ಲ" ಎಂದಳು.

ಅಂದು ಅವಳು ಹೇಳಿದ ಆ ಮಾತು ನನ್ನ ಕಣ್ಣು ತೆರೆಸಿತು. ನನ್ನ ಬದುಕಿನ ದಾರಿಯನ್ನೇ ಬದಲಿಸಿತು. ನನ್ನಲ್ಲಿ ಹೊಸ ಚಿಂತನೆಯನ್ನು ಹುಟ್ಟುಹಾಕಿತು. ಅಂದಿನಿಂದ ಬದುಕಿನಲ್ಲಿ ನಾನು ಯಾರನ್ನೂ ಭೇದ-ಭಾವದಿಂದ ನೋಡಿಲ್ಲ. ಅಸಮಾನತೆಯಿಂದ ಕಂಡಿಲ್ಲ. ಸಮಾನತೆ, ಜಾತ್ಯತೀತತೆ, ಸಹೋದರತೆಯನ್ನು ನಾನು ನನ್ನ ಪ್ರೀತಿಯ ಪತ್ನಿ ಖತೀಜಾಳಿಂದ ಕಲಿತೆ. ಅವಳು ಕಲಿಸಿದ ಈ ಸಿದ್ಧಾಂತವನ್ನು ಬದುಕಿನುದ್ದಕ್ಕೂ ಪಾಲಿಸಿಕೊಂಡು ಬಂದಿದ್ದೇನೆ. ಈಗಲೂ ಒಮ್ಮೊಮ್ಮೆ ಅವಳು ಅಂದಿನ ಘಟನೆಯನ್ನು ನೆನಪಿಸುತ್ತಾಳೆ. ಆಗೆಲ್ಲ ಅವಳ ಮುಗ್ಧ ಮುಖ ನೋಡಲಾಗದೇ ನಾನು ಮುಖ ತಿರುಗಿಸುತ್ತೇನೆ. ಮೌನವಾಗುತ್ತೇನೆ. ನನಗೆ ನಾಚಿಕೆಯಾಗುತ್ತದೆ, ಪಶ್ಚಾತ್ತಾಪದಿಂದ ತಲೆತಗ್ಗಿಸುತ್ತೇನೆ.

ನಾನು ಹಿಂದೆಯೇ ಹೇಳಿದ್ದೇನೆ. ನನ್ನ ಖತೀಜಾಳಿಗೆ ಮಾತು ಬಹಳ ಕಡಿಮೆ ಎಂದು. ಮನೆಗೆ ಯಾರು ಬಂದರೂ ಅವರೊಡನೆ ಹೆಚ್ಚು ಮಾತನಾಡುವುದಿಲ್ಲ, ಬೆರೆಯುವುದಿಲ್ಲ. ಯಾವುದೇ ವಿಷಯದಲ್ಲಿ ಚರ್ಚೆ, ತಕರಾರು ಇಲ್ಲ. ಅವಳದೇ ಲೋಕ. ಅವಳಷ್ಟಕ್ಕೇ ಅವಳು. ಮನೆಯೊಳಗೆ ಅವಳ ಧ್ವನಿಯೂ ಯಾರಿಗೂ ಕೇಳಿಸುವುದಿಲ್ಲ. ಅವಳಿದ್ದಾಳೆಂದೇ ಗೊತ್ತಾಗುವುದಿಲ್ಲ. ಇಂತಹ ಮುಗ್ಧೆ, ಅವಿದ್ಯಾವಂತೆಯಿಂದ ನಾನು ಬದುಕಿನಲ್ಲಿ ಬಹಳ ದೊಡ್ಡ ಪಾಠ ಕಲಿತೆ. ಈಗಲೂ ನನ್ನ ಮುಂದೆ ಬಂದು ನಿಂತಾಗ ಅವಳ ಮುಗ್ಧ ಮುಖ, ನಿಷ್ಕಳಂಕ ಕಣ್ಣುಗಳನ್ನು ದಿಟ್ಟಿಸುತ್ತಾ ನಾನು

ಮೌನವಾಗಿ ಬಿಡುತ್ತೇನೆ. ಅವಳನ್ನು, ಅವಳ ಸುಂದರ ಮುಖವನ್ನು, ಅವಳ ಪವಿತ್ರವಾದ ಪ್ರೀತಿಯನ್ನು ಹೃದಯದಲ್ಲಿ ತುಂಬಿಕೊಳ್ಳುತ್ತಾ, ನೆನಪಿಸಿಕೊಳ್ಳುತ್ತಾ ಕಣ್ಣು ಮುಚ್ಚುತ್ತೇನೆ. ಬದುಕಿನುದ್ದಕ್ಕೂ ಇಂತಹ ಒಂದು ಹೆಣ್ಣು ನನಗೆ ಸಿಕ್ಕಿದ್ದು ನನ್ನ ಪುಣ್ಯ, ಸೌಭಾಗ್ಯ, ದೇವರು ನನಗೆ ಕರುಣಿಸಿದ ಒಂದು ವರ ಎಂದು ಭಾವಿಸಿದ್ದೇನೆ. ಅವಳ ಬಗ್ಗೆ ನೆನೆಯುವಾಗಲೆಲ್ಲ ಹೃದಯಾಂತರಾಳದಿಂದ ಪ್ರೀತಿ, ಹೆಮ್ಮೆ ಉಕ್ಕಿ ಬರುತ್ತದೆ. ಆಗೆಲ್ಲ ಕಣ್ಣುಗಳು ಒದ್ದೆಯಾಗುತ್ತವೆ. ದೇವರು ನನ್ನ ಖತೀಜಾಳಿಗೆ ಒಳ್ಳೆಯದನ್ನು ಮಾಡಲಿ.

ಬದುಕಿನ ಎಲ್ಲ ಆಟಗಳು ಮುಗಿಯುತ್ತಾ ಬಂತು. ಉಳಿದಿರುವುದು ಎಷ್ಟು ದಿನವೋ ಗೊತ್ತಿಲ್ಲ. ನನ್ನ ಬದುಕಿನ ರಂಗದ ಪರದೆ ಎಳೆಯಲು 'ಪರದೆ ಎಳೆಯುವವ' ಕಾಯುತ್ತಿದ್ದಾನೆ. ಯಾವುದೇ ಕ್ಷಣದಲ್ಲಿ ಯಾವ ಸುಳಿವೂ ಇಲ್ಲದಂತೆ ಆತ ಎಳೆದು ಬಿಡಬಹುದು. ಅದಕ್ಕಾಗಿ ನಾನು ತಯಾರಾಗುತ್ತಿದ್ದೇನೆ. ಈ ಜಗತ್ತಿನಲ್ಲಿ ಒಂದು ಸುಂದರ ವಾದ ತುಂಬು ಬದುಕನ್ನು ಬದುಕಿದೆ ಎಂಬ ತೃಪ್ತಿ ನನಗಿದೆ. ಬದುಕಿನುದ್ದಕ್ಕೂ ನಡೆದ ಘಟನೆಗಳು, ಕಷ್ಟ–ನಷ್ಟ, ಸ್ಥಾನಮಾನ, ಗೆಳೆಯರು, ಬಂಧುಗಳು ಎಲ್ಲರನ್ನೂ ನೆನಪಿಸಿಕೊಳ್ಳುತ್ತಿದ್ದೇನೆ. ಎಲ್ಲವೂ ನಿನ್ನೆ ಮೊನ್ನೆ ನಡೆದಂತೆ, ಕತೆಯಂತೆ. ನಾಟಕ–ಸಿನೆಮಾ ನೋಡಿದಂತೆ ಅನ್ನಿಸುತ್ತಿದೆ. ನಗು ಬರುತ್ತದೆ. ಜೊತೆಗೆ ಆಶ್ಚರ್ಯವೂ ಆಗುತ್ತದೆ. ಏನಿದು? ಇದೆಲ್ಲ ಏನು? ಉತ್ತರ ಸಿಗುತ್ತಿಲ್ಲ. ಎಷ್ಟು ಯೋಚಿಸಿದರೂ ಅರ್ಥವೇ ಆಗುತ್ತಿಲ್ಲ.

★★★